ಪ್ರಬುದ್ಧ ಕರ್ಣಾಟಕ

ಸಂಪುಟ ೬೮ ಸಂಚಿಕೆ ೧

೨೬೮

ದೇವೇಂದ್ರಕುಮಾರ. ಪಿ. ಪತ್ತಾರ
ಕಡಾಪುರ
585223 : pincode.
3ನೇಮ ಫೇಬ್ರುವರಿ ೧೯೮೭.

ಅಕ್ಷಯ ಸಂವತ್ಸರ

ಆಷಾಢ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೬

3-2-87 (by post)

PRABUDDHA KARNATAKA, Kannada Quarterly of the *University of Mysore.* Volume 68, Number 2, July 1986. Edited by Rame Gowda and Pradhan Gurudatta

ಪ್ರಧಾನ ಸಂಪಾದಕರು

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ರಾಮೇಗೌಡ

ಪ್ರಧಾನ್‌ಗುರುದತ್ತ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮೈಸೂರು ೫೭೦೦೦೬

ಶಿಹಾಮರ.

ವಿಷಯಸೂಚಿಕೆ

ಲೇಖಕರ ಪರಿಚಯ

೧.	ಜಿ. ಆರ್. ನಂಜುಂಡೇಗೌಡ	ಉಪಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೨.	ಸಿ.ಪಿ.ಕೆ.	ಡಾ. ಸಿ.ಪಿ. ಕೃಷ್ಣಕುಮಾರ್, ಕನ್ನಡ ಪ್ರಾಧ್ಯಾಪಕರು ಮಾನಸಗಂಗೋತ್ರಿ, ಮೈಸೂರು
೩.	ಮನಜ	ಮ. ನ. ಜವರಯ್ಯ, ಅಧ್ಯಾಪಕರು, ಭಾರತೀಯ ಭಾಷಾ ಸಂಸ್ಥಾನ, ಮಾನಸಗಂಗೋತ್ರಿ, ಮೈಸೂರು
೪.	ಡಾ. ಎಂ. ವಿ. ಜಂಬುನಾಥನ್	೩ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–೯
೫.	ಮೊಗಳ್ಳಿ ಗಣೇಶ್	ದ್ವಿತೀಯ ಎಂ.ಎ. ಅರ್ಥಶಾಸ್ತ್ರ, ಮಾನಸ ಗಂಗೋತ್ರಿ, ಮೈಸೂರು–೬
೬.	ಡಾ. ಬಸವರಾಜ ಸಬರದ	ಕನ್ನಡ ಪ್ರಾಧ್ಯಾಪಕ, ಕರ್ನಾಟಕ ಕಾಲೇಜು, ಬೀದರ್
೭.	ಕೆ. ಎಸ್. ಕೃಷ್ಣಮೂರ್ತಿ	೩೧, ೪ನೇ ಮುಖ್ಯ ರಸ್ತೆ, ಪರಮಹಂಸ ರಸ್ತೆ ಯಾದವಗಿರಿ, ಮೈಸೂರು–೨೦
೮.	ಬಿ. ಜಿ. ಕನಕೇಶಮೂರ್ತಿ	ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
೯.	ತಾಳ್ತಜೆ ವಸಂತಕುಮಾರ	ಕನ್ನಡ ಅಧ್ಯಾಪಕ, ವಿವೇಕಾನಂದ ಕಾಲೇಜು ಪುತ್ತೂರು (ದ.ಕ.)
೧೦.	ನಗುವನಹಳ್ಳಿ ಪಿ. ರತ್ನ	ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೧೧.	ಎಸ್. ಅನಂತನಾರಾಯಣ	ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು 'ಗಂಗಾ ತರಂಗ', ೫ನೇ ಮುಖ್ಯರಸ್ತೆ ಸರಸ್ವತಿಪುರಂ, ಮೈಸೂರು
೧೨.	ಗೊರೂರು ರಾಮಸ್ವಾಮಿ ಅಯ್ಯಂಗಾರ್	೪೦೦, ೧ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು–೧೦
೧೩.	ಬಂಜಗೆರೆ ಜಯಪ್ರಕಾಶ	ದ್ವಿತೀಯ ಎಂ.ಎ. ಸಮಾಜಶಾಸ್ತ್ರ, ಮಾನಸ ಗಂಗೋತ್ರಿ, ಮೈಸೂರು–೬
೧೪.	ಎಸ್. ಎನ್. ಶ್ರೀನಾಥ್	೮, ೭ನೇ ಅಡ್ಡರಸ್ತೆ, ೬ನೇ ಮುಖ್ಯ ರಸ್ತೆ ವಿನಾಯಕನಗರ, ಮೈಸೂರು–೧೨

೧೫.	ತೇಸಿ. ವಿಶ್ವೇಶ್ವರಯ್ಯ	ಕನ್ನಡ ಪಂಡಿತ ವಿಭಾಗ, ಸರ್ಕಾರಿ ಪ್ರಶಿಕ್ಷಣ ಸಂಸ್ಥೆ ವಸಂತಮಹಲ್, ಮೈಸೂರು-೧೦
೧೬.	ಡಾ. ಎಂ. ಚಿದಾನಂದಮೂರ್ತಿ	ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು
೧೭.	ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ	ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು

ಸಂಪಾದಕೀಯ

ಶ್ರದ್ಧಾಂಜಲಿ

ಜಯತೀರ್ಥ ರಾಜಪುರೋಹಿತ

ಆಡಳಿತ ಕ್ಷೇತ್ರದಲ್ಲಿದ್ದು ಸಾಹಿತ್ಯಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡಿರುವಂಥ ಕನ್ನಡದ ಅನೇಕ ಚೇತನಗಳಲ್ಲಿ ಶ್ರೀ ಜಯತೀರ್ಥ ರಾಜಪುರೋಹಿತರದ್ದು ಒಂದು ಗಮನಾರ್ಹವಾದ ಹೆಸರು. ಅವರ 'ಸುಳಿಗಾಳಿ' ಕಾದಂಬರಿಗೆ 'ಸುಧಾ' ವಾರಪತ್ರಿಕೆಯ ಬಹುಮಾನ ಹಾಗೂ ರಾಜ್ಯಸಾಹಿತ್ಯ ಅಕಾದೆಮಿಯ ಪುರಸ್ಕಾರಗಳು ದೊರೆತಿದ್ದುವು. 'ಹಾಲುಜೇನು' ಮತ್ತು 'ಜೋಹರಾ' ಅವರ ಇತರ ಸ್ವತಂತ್ರ ಕಾದಂಬರಿಗಳು. 'ಕಡಲ ತೋಳ' ಅವರ ಅನುವಾದಿತ ಕಾದಂಬರಿ. 'ಪಾರವ್ವನ ಪಂಚಾಯಿತಿ', 'ರೋಹಿಣಿ', 'ಮೌಲ್ಯಗಳು' ಮತ್ತು 'ಶಿಥಿಲಶಿಲೆ' ಅವರ ಕಥಾಸಂಕಲನಗಳು. 'ತುಂಗೆಯಂಗಳದಲ್ಲಿ', 'ಕುಮಾರವ್ಯಾಸ' ಮತ್ತು 'ಜಯ ಬಂಗ್ಲಾ' ಎಂಬ ನಾಟಕಗಳನ್ನೂ, ಐದು ಜೀವನ ಚರಿತ್ರೆಗಳನ್ನೂ ಬರೆದಿದ್ದುದರ ಜೊತೆಗೆ ಅವರು ಅನೇಕ ಕೃತಿಗಳನ್ನು ಸಂಪಾದಿಸಿದ್ದರು. ಅವರ ಮಹತ್ವದ ಸಾಹಿತ್ಯೇತರ ಕೃತಿ 'ಕನ್ನಡ ತೀರ್ಪುಗಳು' ರಾಜ್ಯಸರ್ಕಾರದ ವಿಶೇಷ ಪ್ರಶಸ್ತಿಯನ್ನೂ ಗಳಿಸಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಂತ್ರಣಾಧಿಕಾರಿಗಳಾಗಿ, ಚಿತ್ರದುರ್ಗ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಥಮ ನಿರ್ದೇಶಕರಾಗಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರಥಮ ಕುಲಸಚಿವರಾಗಿ ಅವರು ಕನ್ನಡ ನಾಡು ನುಡಿಗಳಿಗೆ ವಿಶಿಷ್ಟ ಸೇವೆಯನ್ನು ಸಲ್ಲಿಸಿದ್ದರು. ಅವರ ಬಹುಮುಖವಾದ ಈ ಸೇವೆಯನ್ನು ಸ್ಮರಿಸಿ ಅವರ ಮಿತ್ರರೂ, ಅಭಿಮಾನಿಗಳೂ 'ಜಯತೀರ್ಥ' ಎಂಬ ಹೆಸರಿನಲ್ಲಿ ಅಭಿನಂದನ ಗ್ರಂಥವೊಂದನ್ನು ಸಮರ್ಪಿಸಿದ್ದರು.

ನಾಡು–ನುಡಿಗಳ ಇಂಥ ಅಭಿಮಾನಿಗಳು 25–4–1986 ರಂದು ಅನಿರೀಕ್ಷಿತವಾಗಿ ನಮ್ಮನ್ನು ಅಗಲಿಹೋದರು. ಅವರ ಬಹುಮುಖ ಸೇವೆಯನ್ನು ಕೃತಜ್ಞತೆಯಿಂದ ನೆನೆಯುತ್ತ, 'ಪ್ರಬುದ್ಧ ಕರ್ಣಾಟಕ' ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಉ. ಕಾ. ಸುಬ್ಬರಾಯಾಚಾರ್

'ಪ್ರಬುದ್ಧ ಕರ್ಣಾಟಕ'ದ ಮಾಜಿ ಸಂಪಾದಕರಲ್ಲಿ ಒಬ್ಬರೂ, ನಿವೃತ್ತ ಕನ್ನಡ ಅಧ್ಯಾಪಕರೂ ಆಗಿದ್ದ ಶ್ರೀ ಉ. ಕಾ. ಸುಬ್ಬರಾಯಾಚಾರ್ ಅವರ ನಿಧನಕ್ಕೆ (ಜುಲೈ 14, 1986) 'ಪ್ರಬುದ್ಧ ಕರ್ಣಾಟಕ' ಅಶ್ರುತರ್ಪಣಗಳನ್ನು ಸಲ್ಲಿಸುತ್ತದೆ.

ಆದರ್ಶ ಕನ್ನಡ ಅಧ್ಯಾಪಕರಾಗಿದ್ದುದು ಮಾತ್ರವಲ್ಲದೆ, ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ನಿಲಯಪಾಲರಾಗಿ, ವಿದ್ಯಾರ್ಥಿ ಕ್ಷೇಮಪಾಲರಾಗಿ ಶ್ರೀ ಸುಬ್ಬರಾಯಾಚಾರ್ ಅವರು ಸ್ಮರಣೀಯ ಸೇವೆಯನ್ನು ಸಲ್ಲಿಸಿದ್ದರು. ಸ್ವತಃ ಅನೇಕ ಗ್ರಂಥಗಳ ಲೇಖಕರಾಗಿದ್ದ ಅವರು, ಅರವಿಂದರ ಸಾಹಿತ್ಯವನ್ನು ತಂದು ಕೊಡುವ ಪ್ರಯತ್ನವನ್ನೂ ಮಾಡಿದ್ದರು. ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ ಸೋವಿಯೆಟ್ ರಷ್ಯಾಕ್ಕೂ ಹೋಗಿಬಂದಿದ್ದರು. ಅನೇಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನಿರಿಸಿಕೊಂಡಿದ್ದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಹಿರಿಯ ಸಾಹಿತಿಗಳಲ್ಲಿ ಒಬ್ಬರಾದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಬಗ್ಗೆ 'ಮಾಸ್ತಿಯವರು ಮತ್ತು ಚಿಕವೀರರಾಜೇಂದ್ರ' ಎಂಬ ಹೆಸರಿನಲ್ಲಿ ಇತ್ತೀಚೆಗಷ್ಟೇ ವಿಶೇಷ ಸಂಚಿಕೆಯನ್ನು ಹೊರತಂದಿದ್ದ, 'ಪ್ರಬುದ್ಧ ಕರ್ಣಾಟಕ' ಅವರ ನಿಧನಕ್ಕೆ (6-6-86) ಸಂತಾಪ ಸೂಚಿಸುವ ಕಾರ್ಯವನ್ನೂ ಮಾಡಬೇಕಾಗಿ ಬಂದಿದೆ.

ಮಾಸ್ತಿಯವರು ಕನ್ನಡದಲ್ಲಿ ಅನೇಕ ವಿಕ್ರಮಗಳನ್ನು ಮೆರೆದಿದ್ದಾರೆ. ಸಣ್ಣ ಕಥೆಗೆ ಅವರು ನೀಡಿದ ಆಯಾಮ ಅವರ ಹೆಸರನ್ನು ಚರಿತ್ರಾರ್ಹವಾಗಿಸಿದೆ. ಅವರು ಕನ್ನಡ ಸಾಹಿತ್ಯದ ಎಲ್ಲ ಕ್ಷೇತ್ರಗಳಿಗೂ ಅನುಪಮ ಕೊಡುಗೆಗಳನ್ನು ನೀಡಿದ್ದಾರೆ. 'ಶ್ರೀರಾಮ ಪಟ್ಟಾಭಿಷೇಕ'ದಂಥ ಮಹಾಕಾವ್ಯ, 'ಚಿಕವೀರರಾಜೇಂದ್ರ' ಮತ್ತು 'ಚೆನ್ನಬಸವ ನಾಯಕ'ದಂಥ ಐತಿಹಾಸಿಕ ಕಾದಂಬರಿಗಳು, 'ಭಾರತ ತೀರ್ಥ' ದಂಥ ವಿಮರ್ಶಾತ್ಮಕ ಕೃತಿ, 'ಸುಬ್ಬಣ್ಣ'ದಂಥ ನೀಳ್ಗತೆ, 'ಭಾವ'ದಂಥ ಆತ್ಮಕಥೆ, ಅವರ ಕೆಲವು ಅನುವಾದಗಳು, 'ಜೀವನ' ಪತ್ರಿಕೆಯ ಸಂಪಾದಕೀಯಗಳು ಅವರು ನಾಡು-ನುಡಿಗಳಿಗೆ ಸಲ್ಲಿಸಿರುವ ವಿಶಿಷ್ಟ ಹಾಗೂ ಬಹುಮುಖ ಸೇವೆಯ ಹೆಜ್ಜೆಗುರುತುಗಳಂತಿವೆ. ಇವೆಲ್ಲಕ್ಕಿಂತ ಮಿಗಿಲಾಗಿ, ಮಾಸ್ತಿಯವರು ಕನ್ನಡಿಗರಿಗೆಲ್ಲ 'ಅಣ್ಣ'ನೇ ಆಗಿದ್ದರು. ಈ ಆಸ್ತಿಯನ್ನು ಕಳೆದುಕೊಂಡು ಕನ್ನಡನಾಡು ಹಾಗೂ ಕನ್ನಡ ಸಾಹಿತ್ಯ ಎರಡೂ ನಿಜಕ್ಕೂ ಬಡವಾಗಿವೆ.

ಅವರ ಆತ್ಮಕ್ಕೆ 'ಪ್ರಬುದ್ಧ ಕರ್ಣಾಟಕ' ಶಾಂತಿಯನ್ನು ಕೋರುತ್ತದೆ.

ಗೀತಾ ಕುಲಕರ್ಣಿ

ಅರವತ್ತರ ಹತ್ತಿರದಲ್ಲಿದ್ದ ಗೀತಾ ಕುಲಕರ್ಣಿಯವರು ಇದೇ ಮೇ 25 ರಂದು ತೀರಿಕೊಂಡುದಕ್ಕೆ 'ಪ್ರಬುದ್ಧ ಕರ್ಣಾಟಕ' ತನ್ನ ಸಂತಾಪವನ್ನು ಸೂಚಿಸುತ್ತದೆ. ಅವರ ನಿಧನದಿಂದ ಕನ್ನಡ ಸಾಹಿತ್ಯಕ್ಕೆ ತುಂಬಲಾರದ ನಷ್ಟವುಂಟಾಗಿದೆ.

ಗೀತಾ ಕುಲಕರ್ಣಿಯವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾಗಿ, ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. ಅವರಿಗೆ 1979 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತ್ತು.

ಗೀತಾ ಕುಲಕರ್ಣಿಯವರು ನಮ್ಮ ಪ್ರಸಿದ್ಧ ಲೇಖಕಿಯರಲ್ಲಿ ಒಬ್ಬರು; ಕಾದಂಬರಿಕಾರರೆಂದೇ ಪರಿಚಿತರು. ಕತೆ, ಕಾದಂಬರಿ, ನಾಟಕ, ಪ್ರಬಂಧ, ಅನುವಾದ, ಮಕ್ಕಳ ಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕಂಬನಿ ಒರೆಸಿದ ಕೈ, ಚಿಪ್ಪಿನೊಳಗಿದ್ದ ಮುತ್ತು, ತುಳು ಜಾನಪದ ಕಥೆಗಳು, ತೇಲಿಹೋದ ಮೋಡ, ದೀಪ ಮಿಂಚಿತು, ಮಹರ್ಷಿ ಕರ್ವೆ, ನೂಲ ಏಣಿ, ಹೂಮಳೆ, ಮೌನಸಂಧಾನ, ಶೋಭನಾ, ಸ್ವಪ್ನಮಂದಿರ—ಇವು ಅವರ ಕೆಲವು ಕೃತಿಗಳು. ಗೀತಾ ಕುಲಕರ್ಣಿಯವರು ಹೃದಯಸ್ಪರ್ಶಿಯಾಗಿ ಬರೆಯುತ್ತಿದ್ದರು. ಭಾವುಕತೆ ಮತ್ತು ಸಂಕೀರ್ಣತೆಗಳೆರಡೂ ಅವರ ಕೃತಿಗಳಲ್ಲಿ ಕಾಣಸಿಗುತ್ತವೆ. ಅವರು ಜನಪ್ರಿಯ ಲೇಖಕಿಯಾಗಿದ್ದರು.

ಜಯದೇವಿ ತಾಯಿ ಲಿಗಾಡೆ

ಗಡಿನಾಡಿನ ಜನಪ್ರಿಯ ಕವಯಿತ್ರಿ ಜಯದೇವಿ ತಾಯಿ ಲಿಗಾಡೆಯವರು ಇದೇ ಜುಲೈ 25 ರಂದು ತೀರಿಕೊಂಡುದಕ್ಕೆ 'ಪ್ರಬುದ್ಧ ಕರ್ಣಾಟಕ' ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ಕನ್ನಡ ನಾಡು ನುಡಿಗೆ ಅವರು ಸಲ್ಲಿಸಿದ ಅಪಾರ ಸೇವೆಯನ್ನು ನೆನೆಸಿಕೊಂಡಾಗ, ಅವರ ಈ ಅಗಲಿಕೆ ತುಂಬಲಾರದ ನಷ್ಟವೆನಿಸುತ್ತದೆ.

ಕರ್ನಾಟಕದ ಏಕೀಕರಣಕ್ಕೆ ದುಡಿದ ಮಹಾ ಮಹಿಳೆ ಅವರು. ಸೊಲ್ಲಾಪುರದಲ್ಲಿ ನೆಲೆಸಿ ಕನ್ನಡ ಕಟ್ಟುವ ಕೆಲಸವನ್ನು ಅವರು ನಿರಂತರವಾಗಿ ಮಾಡಿದರು. ಹೊರನಾಡ ಕನ್ನಡಿಗರ ಸಮಸ್ಯೆಗಳ ಪರಿಹಾರಕ್ಕೆ ಸದಾ ಶ್ರಮಿಸಿದರು. ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಶಿಕ್ಷಣ—ಹೀಗೆ ಅನೇಕ ಕ್ಷೇತ್ರಗಳಲ್ಲಿ ಅವರು ಕೆಲಸ ಮಾಡಿದ್ದಾರೆ.

ಜಯದೇವಿ ತಾಯಿಯವರು ಕರ್ನಾಟಕ—ಮಹಾರಾಷ್ಟ್ರ ಬಾಂಧವ್ಯಕ್ಕೆ ಸಾಂಸ್ಕೃತಿಕ ಸೇತುವೆಯಾಗಿದ್ದರು ಕನ್ನಡಿಗರ ಪ್ರೀತ್ಯಾದರಗಳನ್ನು ಗಳಿಸಿದಂತೆಯೇ

ಅವರು ಮರಾಠಿಗರ ಗೌರವಕ್ಕೂ ಪಾತ್ರರಾಗಿದ್ದರು. ಅನೇಕ ಕನ್ನಡ ಕೃತಿಗಳನ್ನು ಅವರು ಮರಾಠಿಗೆ ಅನುವಾದಿಸಿದ್ದಾರೆ. ಮರಾಠಿ ವಿದ್ವಾಂಸರು ಈ ಕೃತಿಗಳನ್ನು ಮೆಚ್ಚಿದ್ದಾರೆ. ಕನ್ನಡದ ಪ್ರಸಿದ್ಧ ಕೃತಿ 'ಶೂನ್ಯಸಂಪಾದನೆ'ಯನ್ನು ಮರಾಠಿಗೆ ಕೊಟ್ಟಿದ್ದಾರೆ.

ತಾಯಿಯವರು ಗೌರವ ಡಾಕ್ಟರೇಟ್ ಪದವಿ ಪಡೆದಿದ್ದರು. ಮಂಡ್ಯದಲ್ಲಿ ನಡೆದ 48ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿದ್ದರು. ತಾಯಿಯವರು ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಜಯಗೀತ, ತಾರಕತಂಬೂರಿ, ತಾಯಿಯ ಪದಗಳು, ಸಿದ್ಧರಾಮೇಶ್ವರ ಪುರಾಣ ಇವು ಮುಖ್ಯವಾದವು. ಆಧುನಿಕ ಕಾಲದಲ್ಲಿ ತ್ರಿಪದಿಯನ್ನು ದುಡಿಸಿಕೊಂಡವರಲ್ಲಿ ತಾಯಿಯವರು ಅಗ್ರಗಣ್ಯರು. ತ್ರಿಪದಿಯಲ್ಲಿ ಒಂದು ಮಹಾಕಾವ್ಯವನ್ನೇ ಬರೆದರು. ಸಿದ್ಧರಾಮನನ್ನು ಕುರಿತ ಈ ಕಾವ್ಯ ಕನ್ನಡದ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ.

ಜಿ. ಆರ್. ನಂಜುಂಡೇಗೌಡ

ಕೆರೇಬಿಯನ್ ದ್ವೀಪಗಳಲ್ಲಿ

ಹೋಗುವ ಹಾದಿಯಲ್ಲಿ

ವಿದೇಶ ಪ್ರವಾಸದ ಬಗ್ಗೆ ಬರೆಯುವಾಗ ವಿಮಾನಯಾನ ಅನಿವಾರ್ಯವಾಗಿ ಬರಬೇಕಲ್ಲವೆ? ಆದರೆ ನಾನು ನನ್ನ ವಿದೇಶ ಪ್ರವಾಸದ ಅನುಭವಗಳನ್ನು ಬರೆಯಲು ವಿಮಾನದ ಮೇಲೆಯೇ ಪ್ರಾರಂಭಿಸುತ್ತಿದ್ದೇನೆ. ಈಗ ಭಾರತೀಯ ಕಾಲಮಾನ ಬೆಳಗಿನ 7 ಘಂಟೆ (ಫೆಬ್ರುವರಿ 4,82). ಬೊಂಬಾಯಿನಿಂದ ಲಂಡನ್‌ಗೆ ಪ್ರಯಾಣ ಮಾಡುತ್ತಿರುವ ಏರ್ ಇಂಡಿಯಾ ವಿಮಾನ ಅರಬ್ಬೀ ಸಮುದ್ರದ ಮೇಲೆ ಆಗಸದಲ್ಲಿ ಈಜುತ್ತಿದೆ. ನಿತ್ಯಕರ್ಮಗಳೆಲ್ಲ ವಿಮಾನ ಹತ್ತುವ ಮೊದಲೇ ಮುಗಿದದ್ದರಿಂದ, ಕಿಟಕಿಯಿಂದಾಚೆಗೆ ನೋಡುವುದನ್ನು ಬಿಟ್ಟರೆ ಬೇರೆ ಕೆಲಸವಿಲ್ಲ. ಬರೆಯಲು ಬೇಕಾದ ಸಮಯ, ಸಾಧನಸಲಕರಣೆಗಳೆಲ್ಲ ಇವೆ. ಬೆಳಗಿನ ತಿಂಡಿಯೂ ಮುಗಿದಿದೆ.

ಬೊಂಬಾಯಿನಿಂದ ಬೆಳಗ್ಗೆ 5–30ಕ್ಕೆ ಹೊರಡುವ ವಿಮಾನಕ್ಕೆ ರಾತ್ರಿ ಒಂದು ಘಂಟೆಯಿಂದಲೇ ತಯಾರಿ ನಡೆಸಿದ್ದೆ. ನೆನ್ನೆಯ ದಿನ ಬೆಂಗಳೂರಿನಿಂದ ಬಂದು ಏರ್ ಇಂಡಿಯಾದವರ ಖರ್ಚಿನಲ್ಲಿ ಪಂಚತಾರಾ ಹೋಟೆಲಿನಲ್ಲಿ ಇಳಿದುಕೊಂಡಿದ್ದೆ. ಊಟ ವಗೈರೆಗೇನೂ ಕೊರತೆ ಇರಲಿಲ್ಲವಾದರೂ ನಿದ್ರೆಯನ್ನು ಮಾತ್ರ ನಿರೀಕ್ಷಿಸುವಂತಿರಲಿಲ್ಲ. ಎರಡು ದಿನಗಳಿಂದ ನಿದ್ದೆಯಿಲ್ಲದ ಆಯಾಸವನ್ನು ಬಿಸಿನೀರಿನ ಸ್ನಾನದಿಂದ ತೀರಿಸಿಕೊಳ್ಳಲು ಸ್ನಾನದ ಮನೆಯಲ್ಲಿರುವಾಗ ದೂರವಾಣಿ ಬಡಿದುಕೊಳ್ಳಲಾರಂಭಿಸಿತು. ಸ್ನಾನದ ತೊಟ್ಟಿಯಿಂದಲೇ ರಿಸೀವರ್ ಅನ್ನು ಕೈಗೆತ್ತಿಕೊಂಡು ಕಿವಿಗಿಟ್ಟರೆ ಹೋಟೆಲಿನ ಸ್ವಾಗತಕಾರ್ತಿಯ "ಬೇಗ ಹೊರಡಿ, ಬೇಗ ಹೊರಡಿ" ತರಾತುರಿ! 5.30ರ ವಿಮಾನಕ್ಕೆ 1 ಘಂಟೆಯಿಂದಲೇ ಮೇಲೆಬ್ಬಿಸುವ ಕೆಲಸ ಮಾಡುತ್ತಿದ್ದಾಳೆ ಈ ಮಹಾರಾಯಿತ್ತಿ! ಅಥವಾ ಇವಳಿಗೆ ಹೋಟೆಲು ಕೊಠಡಿ ಖಾಲಿ ಮಾಡಿಸುವುದರಲ್ಲಿ ಆಸಕ್ತಿಯೊ?

ನೆನ್ನೆಯ ದಿನ ಬೆಂಗಳೂರಿಂದ ಹೊರಡುವಾಗ ನನ್ನನ್ನು ಕಳುಹಿಸಲು ವಿಮಾನ ನಿಲ್ದಾಣದವರೆಗೂ ಬಂದಿದ್ದ ಮುಳಲಿ ವಸಂತಕುಮಾರ್ ಮೊದಲಾದ ಗೆಳೆಯರು, ಬಂಧುಗಳು ನಾನೇನೊ ಅದ್ಭುತ ಸಾಧನೆ ಮಾಡುವುದಕ್ಕೆ ಹೊರಟಿದ್ದೇನೆ ಎಂದು

ಭಾವಿಸಿದರು? ಈ ನನ್ನ ವಿದೇಶ ಪ್ರವಾಸಕ್ಕಿಂತ ಅವರೆಲ್ಲರ ಪ್ರೀತಿಯೇ ದೊಡ್ಡದು ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. ನೆನ್ನೆ ಸಂಜೆ ಕಾಲಕಳೆಯಲು ಬೊಂಬಾಯಿಯ ಜುಹೂ ಸಮುದ್ರ ದಂಡೆಯಲ್ಲಿ ನಡೆದಾಡುತ್ತಿದ್ದಾಗ ಮರಳಿನಲ್ಲಿ ಒಬ್ಬ ತನ್ನನ್ನು ತಾನೇ ಹೂತುಕೊಂಡು ಹೊಟ್ಟೆಯ ಪಾಡಿಗಾಗಿ ಜನರನ್ನು ಆಕರ್ಷಿಸುತ್ತಿದ್ದ. ಇದನ್ನೆಲ್ಲಾ ಕಂಡಾಗ ನಮ್ಮದೆಲ್ಲ ಇಂಥದೇ ಆಟ, ವೇಷ ಅನ್ನಿಸುತ್ತದೆ.

ಬೊಂಬಾಯಿನಿಂದ ಕುವೈತ್‌ಗೆ 2,080 ಮೈಲಿ ದೂರ, ಸುಮಾರು 4 ಘಂಟೆ ಸಮಯ ಪ್ರಯಾಣ. ಕುವೈತ್ ನಿಲ್ದಾಣದಲ್ಲಿ ವಿಮಾನ ಯಾಂತ್ರಿಕ ದೋಷದಿಂದ ಸುಮಾರು 2 ಘಂಟೆಗಳಷ್ಟು ಕಾಲ ನಿಲ್ಲಬೇಕಾಯಿತು. ಈ ಎಣ್ಣೆ ದೇಶದಲ್ಲಿ ಹಸಿರು ಗಿಡಮರಗಳು ವಿರಳ. ಬಟ್ಟಬಯಲಿನಂತೆ ಕಾಣುವ ಈ ಪ್ರದೇಶದಲ್ಲಿ ಎಣ್ಣೆಬಾವಿಗಳು ಮಾತ್ರ ಎಲ್ಲೆಂದರಲ್ಲಿ ಕಣ್ಣಿಗೆ ಬೀಳುತ್ತವೆ. ಕುವೈತ್‌ನಿಂದ ಲಂಡನ್‌ಗೆ ಸುಮಾರು 5,000 ಮೈಲಿ ದೂರ.

ಲಂಡನ್ ತಲಪಿದಾಗ ಸ್ಥಳೀಯ ಕಾಲಮಾನ ಸುಮಾರು ಮಧ್ಯಾಹ್ನ 2 ಘಂಟೆ. ಎಲ್ಲ ವಿಧಿಗಳನ್ನು ಮುಗಿಸಿ ವಿಮಾನ ನಿಲ್ದಾಣದಿಂದ ಹೊರಬಂದಾಗ ನಿರೀಕ್ಷಿಸಿದಷ್ಟು ಚಳಿಯಿರಲಿಲ್ಲ. ಚಳಿಯ ಭಯದಿಂದ ತಂದಿದ್ದ ಯಾವ ಶೈತ್ಯ ನಿರೋಧಕಗಳನ್ನೂ ಬಳಸಲಿಲ್ಲ. ವಿಮಾನ ನಿಲ್ದಾಣದಿಂದ ಲಂಡನ್ ನಗರಕ್ಕೆ ಸರ್ಕಾರಿ ಬಸ್‌ನಲ್ಲೇ ಪ್ರಯಾಣಮಾಡಿ ದುಡ್ಡು ಉಳಿಸಲು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು. ಭಾಷೆಯ ತೊಡಕಿಲ್ಲದಿದ್ದರೂ ಅಪರಿಚಿತ ಬಿಳಿಯರ ನಡುವೆ ಇರುವಾಗ ಮೂಗರ ನಡುವೆ ಇರುವ ಅನುಭವವಾಗುತ್ತದೆ. ಮಾತನಾಡುವುದಿರಲಿ, ಆಕಸ್ಮಿಕವಾಗಿ ತಲೆಯೆತ್ತಿಯೂ ಹೊಸಬರ ಮುಖ ನೋಡುವುದಿಲ್ಲ. ಏನಾದರೂ ಕೇಳಿದರೆ 'ಕ್ಷಮಿಸಿ, ತಿಳಿಯದು ' ಎಂದು ಮುಂದೆ ಹೋಗುತ್ತಾರೆ.

ದುಡ್ಡು ಖರ್ಚುಮಾಡಲು ತಯಾರಿದ್ದರೆ ಎಲ್ಲವೂ ಸಾಧ್ಯ ಎಂದು ನನಗೆ ಗೊತ್ತಿದ್ದರಿಂದ, ಟ್ಯಾಕ್ಸಿ ಹತ್ತಿ ಹೀಥ್ರೂ ವಿಮಾನ ನಿಲ್ದಾಣದಿಂದ ಲಂಡನ್‌ಗೆ ಬಂದೆ. ಇಲ್ಲಿಯ ಟ್ಯಾಕ್ಸಿಚಾಲಕರಿಗೂ ನಮ್ಮ ಆಟೊಚಾಲಕರಿಗೂ ಏನೂ ವ್ಯತ್ಯಾಸ ಕಾಣಲಿಲ್ಲ. ನಾನು ಹೋಗಬೇಕಿದ್ದ ಸ್ಥಳದ ವಿಳಾಸವನ್ನು ತನ್ನ ಹತ್ತಿರ ಇಟ್ಟುಕೊಂಡೇ ಈ ಟ್ಯಾಕ್ಸಿಚಾಲಕ ಬೇರೊಂದು ಸ್ಥಳಕ್ಕೆ ಕರೆದೊಯ್ದ. ಅಲ್ಲಿಂದ ಮತ್ತೆ ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘದ ಕಛೇರಿಗೆ ತಲಪಲು ಬೇರೆ ಚಾರ್ಜು ಕೊಡಬೇಕಾಯಿತು.

ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘದ ಸಹಕಾರ್ಯದರ್ಶಿ ಹೀದರಿಂಗ್ ಟನ್ ಅವರನ್ನು ಭೇಟಿಮಾಡುವ ಸಲುವಾಗಿ ಸ್ವಾಗತಕಾರ್ತಿಯ ಹತ್ತಿರ ಹೋದಾಗ, ಆಕೆ ಎರಡು ನಿಮಿಷ ಕೂರುವಂತೆ ಹೇಳಿದಳು. ನನ್ನನ್ನು ಅವರಲ್ಲಿಗೆ ಕರೆದೊಯ್ಯಬಹುದೆಂಬುದಾಗಿ ಆಲೋಚಿಸುತ್ತಿರುವಷ್ಟರಲ್ಲಿಯೇ ನನ್ನ ಎದುರಿನಲ್ಲಿ ಅಜಾನುಬಾಹು ವ್ಯಕ್ತಿ ಹೀದರಿಂಗ್ ಟನ್ ಪ್ರತ್ಯಕ್ಷರಾದರು. 'ಕ್ಷಮಿಸಿ,

ತಡವಾಯಿತು' ಎಂಬ ವಿನಯಪೂರ್ವಕ ಮಾತುಗಳಿಂದ ನನ್ನನ್ನು ಅವರ ಕೊಠಡಿಗೆ ಕರೆದೊಯ್ದರು. ಪತ್ರಗಳ ಮೂಲಕ ಪರಿಚಯವಾಗಿದ್ದ ಈ ಸಹಕಾರ್ಯದರ್ಶಿ ಎದುರಿನಲ್ಲಿದ್ದಾಗ ಬೇರೆಯಾಗಿಯೇ ಕಂಡರು. ನಿಯಮಾವಳಿಗಳನ್ನು ಪತ್ರಗಳಲ್ಲಿ ಸದಾ ಉದ್ಧರಿಸುತ್ತಿದ್ದ ಸಹಕಾರ್ಯದರ್ಶಿ ಈಗ ಮಾತಿನಲ್ಲಿ ಅತಿ ಸಹಜವಾದ ರೀತಿಯಲ್ಲಿ, ಹೆಚ್ಚುಕಡಿಮೆಗಳನ್ನು ಸರಿಹೊಂದಿಸಿಕೊಳ್ಳುವ ರೀತಿಯಲ್ಲಿ ತೋರಿದರು. ಹೀದರಿಂಗ್ ಟನ್ ಅವರ ಮಾತುಕತೆ ಆತ್ಮೀಯತೆಯನ್ನುಂಟು ಮಾಡಿತು. ನಾನು ಇಲ್ಲಿ ಮಾತನಾಡುತ್ತಿರುವ ವೇಳೆಗೆ ಸರಿಯಾಗಿ ಆಕ್ಸ್‌ಫರ್ಡ್‌ನಿಂದ ಯದುರಾಜ್ ಅವರ (ಮೈಸೂರು ವಿಶ್ವವಿದ್ಯಾನಿಲಯದ ಉಪಪ್ರಾಧ್ಯಾಪಕರಾಗಿದ್ದ ದೇವೇಗೌಡರ ಅಳಿಯ) ದೂರವಾಣಿ ಕರೆ ಬಂತು. ಹೀದರಿಂಗ್ ಟನ್ ಅವರೇ ಒಳಗೆಹೋಗಿ ಕಾಫೀ ತೆಗೆದುಕೊಂಡು ಬಂದರು. ನನಗೆ ಸಂಬಂಧಿಸಿದ ಕಡತಗಳನ್ನು ತರುವುದಕ್ಕಾಗಲಿ, ಕಾಫೀ ತರುವುದಕ್ಕಾಗಲಿ ಅವರು ಜವಾನರನ್ನು ಕರೆಯಲಿಲ್ಲ. ಎಲ್ಲಾ ತಾವೇ ಎದ್ದು ಓಡಾಡಿ ಮಾಡಿದರು. ನನಗಾಗಿ ಸಹಕಾರ್ಯದರ್ಶಿಯವರಿಂದ ಇಂಡಿಯನ್ ವೈ. ಎಂ. ಸಿ ಎ. ಹಾಸ್ಟೆಲ್‌ನಲ್ಲಿ ಕೊಠಡಿಯನ್ನು ಕಾದಿರಿಸಿದ್ದ ಪತ್ರವನ್ನು ತೆಗೆದುಕೊಂಡು ಮತ್ತೆ ಟ್ಯಾಕ್ಸಿ ಹತ್ತಿ ವೈ.ಎಂ.ಸಿ.ಎ.ಗೆ ಬಂದೆ.

ನಮ್ಮನ್ನಾಳಿದವರ ನಾಡಿನಲ್ಲಿ

ಭಾರತೀಯರಾದ ನಮಗೆ ಇಲ್ಲಿ ಬೆಳಗಿನ ನಿತ್ಯಕರ್ಮ ಮುಗಿಸುವುದೆಂದರೆ ಕರ್ಮವೇ ಸರಿ! ಕಕ್ಕಸ್ಸಿಗೆ ಹೋಗಿ ನೀರಿನಿಂದ ತೊಳೆಯದೆ ಕಾಗದದಲ್ಲಿ ಸೀಟಿಕೊಳ್ಳುವುದರಿಂದ ಆಗುವ ಜುಗುಪ್ಸೆ ಬೇರೆ ಯಾವುದರಿಂದ ಆದೀತು? ಸಾಮಾನ್ಯವಾಗಿ ಇಲ್ಲಿ ತೊಳೆಯುವುದಕ್ಕೆ ಅನುಕೂಲತೆಗಳಿರುವುದಿಲ್ಲ; ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾದರೆ ದೀರ್ಘ ಚಿಂತನೆಯನ್ನೇ ಮಾಡಬೇಕು.

ಹೀದರಿಂಗ್ ಟನ್ ಅವರನ್ನು ಭೇಟಿಮಾಡಿ, ನನ್ನ ಪ್ರವಾಸದ ಬಗ್ಗೆ ಚರ್ಚೆ ಮಾಡಿದೆ. ಪ್ರವಾಸದ ಖರ್ಚಿಗಾಗಿ ಹಣದ ಭರವಸೆ ದೊರೆತನಂತರ ಅವರಿಂದ ಬೀಳ್ಕೊಂಡೆ. ನನ್ನ ಕಾರ್ಯಕ್ರಮದ ಪ್ರಕಾರ ಇಂಗ್ಲೆಂಡಿನಲ್ಲಿ ಕೆಲವು ಮುಖ್ಯವಾದ ವಿಶ್ವವಿದ್ಯಾನಿಲಯಗಳಿಗೆ ಭೇಟಿಕೊಟ್ಟು, ಅವುಗಳಲ್ಲಿ ಉನ್ನತ ಶಿಕ್ಷಣದ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾಗಿತ್ತು. ಆ ಪ್ರಕಾರ ಲಂಡನ್ ವಿಶ್ವವಿದ್ಯಾನಿಲಯದ ಕಛೇರಿ ಹುಡುಕಿಕೊಂಡು ಹೊರಟೆ. ವಿಶ್ವವಿದ್ಯಾನಿಲಯದ ಪ್ರಾಚ್ಯಶಾಸ್ತ್ರ ವಿಭಾಗದ ವಾಚನಾಲಯದಲ್ಲಿ ವಿದ್ಯಾರ್ಥಿಗಳು ಪತ್ರಿಕೆಗಳನ್ನು ಓದುತ್ತಿದ್ದರು. ಅಲ್ಲಿಗೆ ಹೋಗಿ ಕುತೂಹಲದಿಂದ ಪತ್ರಿಕೆಗಳನ್ನು ತೆರೆದು ಪುಟಗಳನ್ನು ತಿರುವಿಹಾಕಿದೆ, ಏನಾದರೂ ನಮ್ಮ ದೇಶದ ವಿಷಯ ಇರಬಹುದೆ ಎಂದು. ಒಂದು ಪತ್ರಿಕೆಯಲ್ಲೂ ಕರ್ನಾಟಕದ

ಹೆಸರಿರಲಿ, ಭಾರತದ ಹೆಸರೂ ಇರಲಿಲ್ಲ! ದೊಡ್ಡ ದೇಶ, ದೊಡ್ಡ ಸಂಸ್ಕೃತಿಗಳೆಂದು ಭಾವಿಸಿದ್ದ ನನ್ನ ನಂಬಿಕೆಗೆ ಮೊದಲ ಏಟು ಇದು. ಪತ್ರಿಕೆಗಳಲ್ಲಿ ಮಗ್ನನಾದ ನನ್ನನ್ನು ಕಂಡು ಈ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿರುವ ಭಾರತೀಯರೊಬ್ಬರು ಬಂದು ನನ್ನನ್ನು ಮಾತನಾಡಿಸಿದರು. ಇವರು ಹೈದರಾಬಾದ್‌ನ ಸಾಲಾರ್‌ಜಂಗ್ ಮ್ಯೂಸಿಯಂನಲ್ಲಿ ಉದ್ಯೋಗಿಯಾಗಿದ್ದು ಉನ್ನತ ವ್ಯಾಸಂಗಕ್ಕೆ ಇಲ್ಲಿಗೆ ಬಂದಿದ್ದಾರಂತೆ. ಪತ್ರಿಕೆಗಳಲ್ಲಿ ನಮ್ಮ ದೇಶದ ವಿಚಾರ ಹುಡುಕುತ್ತಿದ್ದ ವಿಷಯ ಅವರಿಗೆ ಹೇಳಿದಾಗ ಅವರು ನಕ್ಕರು. ಪ್ರಾರಂಭದಲ್ಲಿ ಹಾಗಾಗುತ್ತದೆ, ಮುಂದೆ ನೀವು ಹೋದಂತೆ ಇದೆಲ್ಲ ಸರಿಹೋಗುತ್ತದೆ ಎಂದು ಅವರು ನನಗೆ ಸಾಂತ್ವನ ನೀಡಿದರು.

ಲಂಡನ್ ವಿಶ್ವವಿದ್ಯಾನಿಲಯದ ಸಂಪರ್ಕಾಧಿಕಾರಿ, ಸಿನ ಅವರನ್ನು ಭೇಟಿ ಮಾಡಿ ಶಿಕ್ಷಣ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದಾಯಿತು. ಈ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ದೇಶಗಳಲ್ಲಿರುವಂತೆ, ಅಧಿಕಾರ ಕೇಂದ್ರೀಕೃತವಾಗಿರುವುದಿಲ್ಲ. ಶಿಕ್ಷಣ ವಿಭಾಗಗಳು ಹೆಚ್ಚು ಸ್ವತಂತ್ರವಾಗಿರುತ್ತವೆ. ಈ ಸಂಪರ್ಕಾಧಿಕಾರಿಯ ಸಮಯ ಪ್ರಜ್ಞೆಯನ್ನು ಕಂಡು ನನಗೆ ಆಶ್ಚರ್ಯ ಉಂಟಾಯಿತು. ಬೆಳಗ್ಗೆ 11 ಘಂಟೆಗೆ ಸರಿಯಾಗಿ ಸಂದರ್ಶಕರ ಕೊಠಡಿಗೆ ಬಂದು ನನ್ನನ್ನು ಕರೆದುಕೊಂಡು ತಮ್ಮ ಕಛೇರಿಗೆ ಬಂದರು. ಅರ್ಧ ಘಂಟೆ ಸಮಯ ಎಂದು ಮೊದಲೇ ಹೇಳಿ, 11–30ಕ್ಕೆ ಸರಿಯಾಗಿ ಮಾತು ನಿಲ್ಲಿಸಿ ವಂದನೆ ಹೇಳಿ ಕೈಕುಲುಕಿ ಬೀಳ್ಕೊಟ್ಟರು.

ಇಂಗ್ಲೆಂಡಿನ ಹಳೆಯ ಮತ್ತು ಪ್ರಸಿದ್ಧವಾದ ವಿಶ್ವವಿದ್ಯಾನಿಲಯಗಳಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವೂ ಒಂದು. ಆಕ್ಸ್‌ಫರ್ಡ್ ಒಂದು ಸಣ್ಣ ಪ್ರಶಾಂತವಾದ ನಗರ, ಲಂಡನ್‌ನಿಂದ ಸುಮಾರು 70 ಮೈಲಿ ದೂರದಲ್ಲಿದೆ. ಆಕ್ಸ್‌ಫರ್ಡ್‌ಗೆ ಸರ್ಕಾರಿ ಬಸ್‌ನಲ್ಲಿ ಹೋಗುವಾಗ ಒಬ್ಬ ಮಹಿಳೆ, ಟಿಕೆಟ್ ತೆಗೆದುಕೊಂಡು ಉಳಿದ ನೋಟುಗಳನ್ನು ಉಂಡೆ ಮಾಡಿ ತನ್ನ ಚೀಲದಲ್ಲಿ ತುರುಕುತ್ತಿದ್ದಳು. ಅದೇನು ಹಳೆಯ ಕಾಗದದ ಚೂರೇ ಹಾಗೆ ತುರುಕುವುದಕ್ಕೆ ಎಂದು ನಾನು ಆಕೆಯನ್ನು ಕೇಳಿದಾಗ, ಅಲ್ಲದೆ ಮತ್ತೇನು, ಅದರ ಕ್ರಯದ ಸಾಮರ್ಥ್ಯವನ್ನು ಬಿಟ್ಟರೆ ಎಂದಳು. ಲಕ್ಷ್ಮಿ ಎಂದು ನಾಣ್ಯಗಳನ್ನು, ನೋಟುಗಳನ್ನು ಪೂಜಿಸುವ ನಾವೆಲ್ಲಿ, ಅವಳನ್ನು ಕೇವಲ ಕಾಗದದ ತುಂಡೆಂದು ಭಾವಿಸುವ ಈ ಬಿಳಿಯರೆಲ್ಲಿ? ಇಷ್ಟು ನಿರ್ಲಕ್ಷ್ಯದಿಂದಿದ್ದರೂ ಇವರಿಗೇಕೆ ಅವಳು ಒಲಿದಿದ್ದಾಳೆ? ಪೂಜಿಸುವ ನಮ್ಮನ್ನೇಕೆ ಅವಳು ತುಳಿದಿದ್ದಾಳೆ?

ಬಸ್‌ನಲ್ಲಿ ನನ್ನ ಪಕ್ಕದಲ್ಲಿಯೇ ಒಬ್ಬಳು ಹುಡುಗಿ ಕುಳಿತಿದ್ದಳು. ಅವಳು ಮೆಕ್ಸಿಕೊ ದೇಶದವಳಂತೆ, ಇಲ್ಲಿ ಲಂಡನ್‌ನಲ್ಲಿ ಹಲ್ಲಿಗೆ ಸಂಬಂಧಪಟ್ಟಂತೆ ವ್ಯಾಸಂಗ ಮಾಡುತ್ತಿದ್ದೇನೆಂದಳು. ಮೆಕ್ಸಿಕೊ ಉತ್ತರ ಅಮೆರಿಕದ ದಕ್ಷಿಣ ಭಾಗದಲ್ಲಿ ಕೆರೇಬಿಯನ್ ಸಮುದ್ರಕ್ಕೆ ಸಮೀಪದಲ್ಲಿದೆ ಎಂದು ಆಕೆ ಹೇಳಿದಾಗ, ನಾನು ನಿಮ್ಮ

ದೇಶದ ಹತ್ತಿರದ ಕೆರೇಬಿಯನ್ ದ್ವೀಪಗಳಿಗೆ ಹೋಗುವವನಿದ್ದೇನೆ ಎಂದೆ. ಅವಳು ಬಹುಸಂತಸದಿಂದ, ಹೌದೆ, ನಮ್ಮ ದೇಶಕ್ಕೆ ತೀರ ಹತ್ತಿರ, ಬಹು ಸುಂದರ ದ್ವೀಪಗಳು ಮತ್ತು ಸಮುದ್ರ ಎಂದು ಸಂತೋಷ ವ್ಯಕ್ತಪಡಿಸಿದಳು. ನಾನು ಫೆಬ್ರವರಿ 11ಕ್ಕೆ (82) ಅಲ್ಲಿಗೆ ಹೋಗುತ್ತೇನೆ ಎಂದಾಗ, ನಾನು 15ಕ್ಕೆ ಹೊರಡುತ್ತೇನೆ ಪರೀಕ್ಷೆ ಮುಗಿಸಿ, ನೀವು ನನಗಿಂತ ಮುಂಚೆ ಹೋಗುತ್ತೀರಲ್ಲ! ಎಂದು ಹೇಳುವಾಗ ಅವಳ ಮಾತಿನಲ್ಲಿ ತಾಯ್ನಾಡನ್ನು ಸೇರುವ ತವಕ ಕಾಣುತ್ತಿತ್ತು.

ನಿಲುಗಡೆರಹಿತ ಬಸ್ಸು ಸುಮಾರು ಒಂದೂಕಾಲು ಘಂಟೆಯಲ್ಲಿ ಆಕ್ಸ್‌ಫರ್ಡ್ ನಗರವನ್ನು ತಲುಪಿತು. ಜನನಿಬಿಡವಲ್ಲದ, ಹಳೆಯ ಕಾಲದ, ವಿರಳವಾದ ಮನೆಗಳ ಪಟ್ಟಣ ಇದು. ಗೊಂದಲ, ಗಲಿಬಿಲಿ ಇಲ್ಲ. ವಿಶ್ವವಿದ್ಯಾನಿಲಯದ ವಿಭಾಗಗಳು ಊರಿನಲ್ಲೆಲ್ಲ ಚದುರಿವೆ. ಇಲ್ಲೆಲ್ಲೂ ನಮ್ಮ ಕಡೆಯಂತೆ ಶಿಕ್ಷಣ ಸಂಸ್ಥೆಗಳು ಒಂದೇ ಕಡೆ ಕೇಂದ್ರೀಕೃತವಾಗಿರುವುದಿಲ್ಲ. ಪ್ರತಿಯೊಂದು ವಿಭಾಗವೂ ಒಂದು ರೀತಿಯ ಸ್ವಾಯತ್ತತೆಯನ್ನು ಅನುಭವಿಸುತ್ತದೆಯಂತೆ. ಬೋಧನೆ ಮತ್ತು ಕಲಿಕೆಗಳನ್ನಷ್ಟೇ ಪರಮಗುರಿಯಾಗುಳ್ಳ ಈ ವಿಶ್ವವಿದ್ಯಾನಿಲಯಗಳು ಆ ಕೆಲಸಗಳನ್ನು ಸದ್ದುಗದ್ದಲವಿಲ್ಲದೆ ಮಾಡಿಕೊಂಡು ಹೋಗುತ್ತಿರುವಂತೆ ಕಾಣಿಸುತ್ತವೆ.

ಆಕ್ಸ್‌ಫರ್ಡ್‌ನಿಂದ ಲಂಡನ್‌ಗೆ ವಾಪಸ್ಸಾಗುವಾಗ ನಡೆದ ಒಂದು ಘಟನೆಯನ್ನು ಇಲ್ಲಿ ಹೇಳಬೇಕು. ವಿಕ್ಟೋರಿಯಾ ಬಸ್ ನಿಲ್ದಾಣದಲ್ಲಿ ಬಸ್‌ನಿಂದ ಇಳಿದು ನಾನು ಇಳಿದುಕೊಂಡಿದ್ದ ಇಂಡಿಯನ್ ವೈ.ಎಂ.ಸಿ.ಎ.ಗೆ ಬರುವುದಕ್ಕಾಗಿ ಟ್ಯಾಕ್ಸಿ ಹುಡುಕುತ್ತಿದ್ದೆ. ಸಾಲಾಗಿ ನಿಂತ ಟ್ಯಾಕ್ಸಿಗಳಲ್ಲಿ ಮೊದಲನೆಯದರ ಚಾಲಕ ಇರಲಿಲ್ಲವಾದ್ದರಿಂದ ಅದರ ಹಿಂದಿನ ಟ್ಯಾಕ್ಸಿಗೆ ಹೋಗುತ್ತಿದ್ದೆ. ತಕ್ಷಣ ಓಡಿ ಬಂದ ಒಬ್ಬ ಕರಿಯ ಭುಜದ ಮೇಲೆ ಕೈಹಾಕಿ,"ನಿಮಗೆ ಟ್ಯಾಕ್ಸಿ ಬೇಕೆ?" ಎಂದ. "ಹೌದು" ಎಂದೆ. ಅವನು ಸುಮ್ಮನೆ ನಗುತ್ತ ಸಂಭ್ರಮದಿಂದ ಬಾಗಿಲು ತೆಗೆದು ಒಳಗೆ ಹತ್ತಿಸಿದ! ''ಏಕೆ ನಗುತ್ತೀರಿ?'' ಎಂದು ನಾನು ಕೇಳಿದೆ. "ಏನಿಲ್ಲ, ಕರಿಯನೊಬ್ಬ ಇನ್ನೊಬ್ಬ ಕರಿಯನಿಗೆ ಸಹಾಯ ಮಾಡುವುದು ತಪ್ಪಿಹೋಗುತ್ತಿತ್ತಲ್ಲ!" ಎಂದ. ನಾನು "ದುಡ್ಡು ತೆಗೆದುಕೊಂಡು ಮಾಡುವ ಕೆಲಸ ಸಹಾಯ ಹೇಗಾಗುತ್ತದೆ?" ಎಂದು ಕೇಳಿದಾಗ, "ದುಡ್ಡು ತೆಗೆದುಕೊಂಡರೂ ಸರಿಯಾದ ಸೇವೆ ಸಲ್ಲಿಸುವುದು ಸಹಾಯವಲ್ಲವೆ? ಹಾಗೇ ನೀವೂ ನನಗೆ ಸಹಾಯ ಮಾಡುತ್ತಿದ್ದೀರಿ. ನೀವು ಬಾರದಿದ್ದರೆ ನಾನು ಸುಮ್ಮನೆ ನಿಲ್ಲಬೇಕಿತ್ತಲ್ಲ!" ಎಂದ. ಯಾವ ನೇರ ರಸ್ತೆಗಳಲ್ಲೂ ಹೋಗದೆ, ಸಣ್ಣ ಸಣ್ಣ ಓಣಿಗಳಲ್ಲಿ ಕಾರನ್ನು ಓಡಿಸಿಕೊಂಡು ವೈ.ಎಂ.ಸಿ.ಎ. ಕಟ್ಟಡದ ಮುಂದೆ ತಂದು ನಿಲ್ಲಿಸಿದ. ಇಲ್ಲಿಯ ಟ್ಯಾಕ್ಸಿಗಳಿಗೆ ಕೇವಲ ದೂರಕ್ಕೆ ಮಾತ್ರ ದುಡ್ಡು ಕೊಡುವಂತಿಲ್ಲ. ಸಮಯಕ್ಕೂ ದುಡ್ಡು ಕೊಡಬೇಕು, ಕಾರು ನಿಂತರೂ ಮೀಟರು ಓಡುತ್ತಿರುತ್ತದೆ. ತರಾತುರಿಯಿಂದ ಅವನು ಬಂದದ್ದನ್ನು ಕಂಡಾಗ ಕಾಲ ಮತ್ತು ದೂರ ಎರಡನ್ನು ಉಳಿತಾಯ ಮಾಡಿದ ಎನ್ನಿಸಿತು. ಮೀಟರು ತೋರುವಷ್ಟು ಹಣ ತೆಗೆದುಕೊಂಡು ಚಿಲ್ಲರೆ ವಾಪಸ್ಸು

ಕೊಡುತ್ತಾ ಚಾಲಕ "ಏನಾದರೂ ಟಿಪ್ಸ್ ಕೊಡಿ" ಎಂದ. ನಾನು "ಕರಿಯನೊಬ್ಬ ಇನ್ನೊಬ್ಬ ಕರಿಯನಿಂದ ಟಿಪ್ಸ್ ನಿರೀಕ್ಷಿಸಬಾರದು" ಎಂದೆ. "ಕರಿಯ ಕರಿಯನಿಂದ ನಿರೀಕ್ಷಿಸದೆ ಮತ್ತಾರಿಂದ ಮಾಡಬೇಕು?" ಎಂದ. ಅವನ ವಾದಕ್ಕೆ ಮರು ಮಾತಾಡದೆ ಹತ್ತು ಪೆನ್ಸ್ ಟಿಪ್ಸ್ ಕೊಟ್ಟೆ. ಅವನು ಬಹು ಸಂತೋಷದಿಂದ ಮೂರು ಬಾರಿ ವಂದಿಸಿ ಹೊರಟುಹೋದ. ಅವನ ಮಾತು, ನಡತೆ ನನಗೆ ಆತ್ಮೀಯತೆಯನ್ನುಂಟುಮಾಡಿತ್ತು. ಈ ವರ್ಣಬಾಂಧವ್ಯಕ್ಕೆ ಕಾರಣವೇನು? ಈ ಕರಿಯನ ಈ ಸೌಹಾರ್ದತೆಗೆ ಇಲ್ಲಿಯ ಬಿಳಿಯರ ವರ್ತನೆ ಕಾರಣವೋ? ನನಗೆ ತಿಳಿಯದು. ಒಂದುಪಕ್ಷ ಬಿಳಿಯ ಕರಿಯನನ್ನು ದ್ವೇಷಿಸುವುದಾದರೆ, ಕರಿಯ ಕರಿಯನನ್ನು ಪ್ರೀತಿಸುವುದರಲ್ಲಿ ಸ್ವಾಭಾವಿಕತೆ ಇದೆಯಲ್ಲವೆ? ಆ ದಿನ ರಾತ್ರಿ ನನ್ನ ಸೋದರನೊಬ್ಬನನ್ನು ಬೇರೆ ಯಾರೋ ಹಿಂಸೆ ಮಾಡುತ್ತಿರುವಂತೆ ನನಗೆ ಕನಸು ಬಿದ್ದಿತ್ತು!

ಬ್ರಿಟಿಷ್ ವಸ್ತುಸಂಗ್ರಹಾಲಯಕ್ಕೆ ಹೋಗಿದ್ದೆ. ಪುಸ್ತಕಗಳ, ಹಸ್ತಪ್ರತಿಗಳ ದೈತ್ಯಾಕಾರವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇಂಗ್ಲಿಷ್ ಕವಿಗಳ ಹಸ್ತಪ್ರತಿಗಳು, ಪ್ರಾಚೀನ ಮುದ್ರಣ ಪ್ರತಿಗಳು, ಕಲಾಕೃತಿಗಳು, ವೈವಿಧ್ಯಮಯ ಗಡಿಯಾರಗಳು, ಶವಪೆಟ್ಟಿಗೆಗಳು ಇತ್ಯಾದಿ ಇತ್ಯಾದಿಗಳನ್ನು ನೋಡಲು ಅನೇಕ ದಿನಗಳೇ ಬೇಕು; ಅವನ್ನೆಲ್ಲ ತಿಳಿಯಬೇಕಾದರೆ ವರ್ಷಗಳೇ ಬೇಕು.

ಭಾರತೀಯ ಸೀರೆ ಅಂಗಡಿಯೊಂದಕ್ಕೆ ಹೋಗಿದ್ದೆ. ಈ ಸೀರೆ ಅಂಗಡಿಯಲ್ಲಿ ಇದ್ದ ಗಿರಾಕಿಗಳೆಲ್ಲ ಭಾರತೀಯರಂತೆಯೇ ಇದ್ದರು. ಭಾರತೀಯ ಸೀರೆಗಳನ್ನು ಕೊಳ್ಳಲು ಭಾರತೀಯರು ಲಂಡನ್ನಿಗೇಕೆ ಬರಬೇಕು? ಭಾರತದ ಸೀರೆಗಳಿಗೆ ಸಾಗಾಣಿಕೆ ಖರ್ಚು, ತೆರಿಗೆ ಇತ್ಯಾದಿಗಳನ್ನು ಸೇರಿಸಿ ಮಾರುವುದರಿಂದ ಬೆಲೆಯೇನು ಕಡಿಮೆ ಇಲ್ಲ.

'ಕೆಂಟಕಿ ಚಿಕನ್' ಎಂಬ ಕೋಳಿಮಾಂಸದ ಅಂಗಡಿಗಳು ಇಲ್ಲೆಲ್ಲ ಪ್ರಸಿದ್ಧ. ಮಸಾಲೆಪ್ರಿಯರಾದ ಭಾರತೀಯರಿಗೆ ಇಲ್ಲಿ ಕರಿದು ಮಾರುವ ಕೋಳಿಮಾಂಸದ ತುಂಡುಗಳು ಸ್ವಲ್ಪ ಹಿಡಿಸುತ್ತವೆ. ವಿಮಾನಗಳಲ್ಲಿ, ಹೋಟೆಲುಗಳಲ್ಲಿ ಕೊಡುವ ಮಾಂಸಕ್ಕೂ ಬ್ರೆಡ್ಡಿಗೂ ಏನೂ ವ್ಯತ್ಯಾಸವಿರುವಂತೆ ನನಗೆ ಕಾಣಲಿಲ್ಲ. ಕೆಂಟುಕಿ ಚಿಕನ್ ಅಂಗಡಿಗಳಲ್ಲಿ ಕುಳಿತು ತಿಂದರೆ ಬೆಲೆ ಹೆಚ್ಚು, ಪೊಟ್ಟಣ ಕಟ್ಟಿಸಿ ತಂದರೆ ಬೆಲೆ ಕಡಿಮೆ!

ವಿಶಿಷ್ಟ ವಿಶ್ವವಿದ್ಯಾನಿಲಯವಾದ ಬಯಲು ವಿಶ್ವವಿದ್ಯಾನಿಲಯವನ್ನು ನೋಡಲು ಮಿಲ್ಟನ್ ಕೇನ್ಸ್ ಎಂಬ ಸ್ಥಳಕ್ಕೆ ಹೋಗಿದ್ದೆ. ಲಂಡನ್‌ನಿಂದ ಬ್ಲೆಚ್‌ಲಿ ಎಂಬ ನಗರಕ್ಕೆ ರೈಲಿನಲ್ಲಿ ಸುಮಾರು 30 ನಿಮಿಷಗಳ ಪ್ರಯಾಣ. ಅಲ್ಲಿಂದ ಬಸ್‌ನಲ್ಲಿ 15 ನಿಮಿಷಗಳ ಪ್ರಯಾಣ. ಈ ಬಯಲು ವಿಶ್ವವಿದ್ಯಾನಿಲಯ (Open University) ವಾಸ್ತವಿಕವಾಗಿ ಬಯಲಿನಲ್ಲಿಯೇ ಇದೆ. ಈ ವಿಶ್ವವಿದ್ಯಾನಿಲಯಕ್ಕೆ ನೇರವಾಗಿ

ಬರುವ ಬಸ್‌ಗಳಿರುವಂತೆ ಕಾಣಲಿಲ್ಲ. ಮುಖ್ಯರಸ್ತೆಯಲ್ಲಿ ಇಳಿದು ಸುಮಾರು ದೂರ ನಡೆಯಬೇಕಾಗುತ್ತದೆ. ಈ ವಿಶ್ವವಿದ್ಯಾನಿಲಯಕ್ಕೆ ಸೇರಿದ ಆಡಳಿತ ಕಛೇರಿ, ಪುಸ್ತಕ ಭಂಡಾರ, ಬಿಬಿಸಿ ರೇಡಿಯೋ ಶಾಖೆ ಮೊದಲಾದುವುಗಳೆಲ್ಲ ಬೇರೆ ಬೇರೆ ಕಟ್ಟಡಗಳಲ್ಲಿ ಇವೆ. ನಿಜವಾಗಿ ಇವುಗಳೆಲ್ಲ ಸುಂದರವಾದ ಗುಡ್ಡಗಾಡುಗಳ ನಡುವೆ ಅಡಕವಾಗಿವೆ.

ಬಯಲು ವಿಶ್ವವಿದ್ಯಾನಿಲಯಕ್ಕೆ ನಾನು ಭೇಟಿ ನೀಡುವ ವಿಷಯ ಮೊದಲೇ ತಿಳಿಸಿದ್ದರಿಂದ, ನಾನು ಹೋಗಿ ಪರಿಚಯ ಮಾಡಿಕೊಳ್ಳುವ ಮೊದಲೇ ಸ್ವಾಗತಕಾರ್ತಿ ನನ್ನ ಹೆಸರು ಕರೆದು ಸ್ವಾಗತಿಸಿದಳು. ಇಲ್ಲಿಯ ಸಂಪರ್ಕಾಧಿಕಾರಿ ಜಾನ್ ಡೇಲಿ ಅವರು ಬಂದು ನಿಗದಿತ ವೇಳೆಗೆ ಸರಿಯಾಗಿ ತಮ್ಮ ಕಛೇರಿಗೆ ಕರೆದುಕೊಂಡು ಹೋಗಿ, ಬಯಲು ವಿಶ್ವವಿದ್ಯಾನಿಲಯದ ಸ್ಥೂಲ ಪರಿಚಯ ಮಾಡಿದರು. ಸಂದರ್ಶಕರ ಸಂಖ್ಯೆ ಹೆಚ್ಚಾಗಿರುವುದರಿಂದ ನಾನು ಹೆಚ್ಚುಕಾಲ ನಿಮ್ಮ ಜೊತೆ ಇರಲಾರೆನೆಂದರು. ಕೆಲವು ವಿಭಾಗಗಳಿಗೆ ಕರೆದುಕೊಂಡು ಹೋಗಿ ಪರಿಚಯಿಸಿ, ಅಲ್ಲಿಯ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಕೆಲವರು ಶಿಕ್ಷಣತಜ್ಞರ ಜೊತೆ ಚರ್ಚಿಸಲು ಅವಕಾಶ ಮಾಡಿಕೊಟ್ಟು ಡೇಲಿ ತಮ್ಮ ಕೆಲಸಕ್ಕೆ ಹೊರಟುಹೋಗುತ್ತಿದ್ದರು. ಚರ್ಚೆ ಮುಗಿಯುವ ವೇಳೆಗೆ ಸರಿಯಾಗಿ ಬಂದು ಬೇರೊಬ್ಬರ ಹತ್ತಿರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಥವಾ ಸ್ವಯಂಚಾಲಿತ ಮಾಹಿತಿ ಯಂತ್ರಗಳ ಮುಂದೆ ಕೂರಿಸಿ, ಬಯಲು ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳ ಬಗ್ಗೆ ದೃಶ್ಯ–ಶ್ರವ್ಯ ಮಾಹಿತಿಗಳನ್ನು ನೀಡುವ ಏರ್ಪಾಡು ಮಾಡುತ್ತಿದ್ದರು. ಈ ರೀತಿ ನನ್ನ ಸಂದರ್ಶನ ಒಂದು ನಿಮಿಷವೂ ವ್ಯರ್ಥವಾಗದಂತೆ, ಹಾಗೂ ಡೇಲಿಯವರ ಸಮಯವೂ ಹಾಳಾಗದಂತೆ ಜಾಣತನದಿಂದ ಕೆಲಸ ನಿರ್ವಹಿಸುತ್ತಿದ್ದರು. ಅವರ ಚಾಕಚಕ್ಯತೆಗೆ ನಾನು ಬೆರಗಾದೆ.

ಬಯಲು ವಿಶ್ವವಿದ್ಯಾನಿಲಯ ಸಂಪೂರ್ಣವಾಗಿ ತಾಂತ್ರಿಕತೆಯನ್ನು ಶಿಕ್ಷಣಕ್ಕಾಗಿ ಪರಮಾವಧಿ ರೀತಿಯಲ್ಲಿ ಬಳಸಿಕೊಂಡಿದೆ. ಅವರು ಅಲ್ಲಿ ನಡೆಸುವ ಕಾರ್ಯಚಟುವಟಿಕೆಗಳನ್ನು ಹೊರಗಿನವರಿಗೆ ಸ್ಪಷ್ಟವಾಗಿ ತಿಳಿಸುವ ಏರ್ಪಾಡು ಇದೆ. ಸ್ವಯಂಚಾಲಿತ ಧ್ವನಿವರ್ಧಕದಿಂದ ಕೂಡಿದ ಸ್ಲೈಡ್ ದರ್ಶನಯಂತ್ರ, ವಿವಿಧ ಮಾಹಿತಿ ಪುಸ್ತಿಕೆ, ಪಟ್ಟಿಕೆಗಳು ಮೊದಲಾದುವುಗಳಿಂದ ಈ ಕೆಲಸ ಸಮರ್ಪಕವಾಗಿ ನಡೆಯುತ್ತದೆ. ಈ ಬಯಲು ವಿಶ್ವವಿದ್ಯಾನಿಲಯದಲ್ಲಿ ಒಂದು ವಾರದಲ್ಲಿ 35 ಟನ್ ಅಚ್ಚಾದ ಪಾಠಗಳನ್ನು ತನ್ನ ವಿದ್ಯಾರ್ಥಿಗಳಿಗೆ ರವಾನಿಸಲಾಗುತ್ತದೆಯಂತೆ! ರೇಡಿಯೋ, ದೂರದರ್ಶನ, ಸಂಪರ್ಕಶಿಬಿರ ಮೊದಲಾದ ಇತರೆ ಬೋಧನಾ ಮಾಧ್ಯಮಗಳೂ ಯಶಸ್ವಿಯಾಗಿ ಬಳಕೆಯಾಗುತ್ತವೆ.

ಬಯಲಿನಲ್ಲಿ ಒಂಟಿಯಾಗಿ ಹರಡಿರುವ ವಿಶ್ವವಿದ್ಯಾನಿಲಯ ತನ್ನ ಸಂದರ್ಶಕರ ಕ್ಷೇಮವನ್ನೂ ನೋಡಿಕೊಳ್ಳುತ್ತದೆ. ಡೇಲಿಯವರೇ ನನ್ನ ಮಧ್ಯಾಹ್ನದ ಊಟಕ್ಕೆ ಏರ್ಪಾಡು ಮಾಡಿದ್ದರು. ನಾನು ವಾಪಸ್ಸಾಗುವುದಕ್ಕೆ ಟ್ಯಾಕ್ಸಿ ಕರೆಸಿ, ಬ್ಲೆಚ್‌ಲಿಯ ರೈಲು ನಿಲ್ದಾಣಕ್ಕೆ ಕಳುಹಿಸುವ ಏರ್ಪಾಡು ಮಾಡಿದ್ದರು. ಅದಕ್ಕಿಂತ

ಹೆಚ್ಚಾಗಿ, ನಾನು ಟ್ಯಾಕ್ಸಿಯಲ್ಲಿ ಪ್ರಯಾಣಿಸುತ್ತಿದ್ದಾಗ, ಡೇಲಿಯವರು ಫೋನ್ ಮಾಡಿ ಯಾವ ರಸ್ತೆಯಲ್ಲಿ ಹೋಗುತ್ತಿದೆ, ರೈಲ್ವೆ ನಿಲ್ದಾಣ ತಲಪಿತೆ ಮುಂತಾಗಿ ಚಾಲಕನ ಜೊತೆ ಮಾತನಾಡಿ ವಿಚಾರಿಸುತ್ತಿದ್ದರು. ಕಾರಿನ ಟೆಲಿಫೋನ್‌ನಲ್ಲಿ ಚಾಲಕ ಉತ್ತರಿಸುತ್ತಿದ್ದಾಗ ನನಗೆ ಇದು ತಿಳಿಯಿತು.

ಲಂಡನ್ ನಗರ ವೀಕ್ಷಣೆಗಾಗಿ ಸರ್ಕಾರಿ ಬಸ್ ಟಿಕೆಟ್ ಕೊಂಡುಕೊಂಡಿದ್ದೆ. ಮಧ್ಯಾಹ್ನ 1-15ಕ್ಕೆ ಹೊರಡಬೇಕಾಗಿದ್ದ ಬಸ್ಸು ಅನಿವಾರ್ಯ ಕಾರಣಗಳಿಂದ 1-30 ಆದರೂ ಹೊರಡಲಿಲ್ಲ. ನಾನು ಸಂಬಂಧಪಟ್ಟ ಟಿಕೆಟ್ ಗುಮಾಸ್ತನಿಗೆ ದೂರುನೀಡಿದ ತಕ್ಷಣ, ಬೇರೆ ಏನೂ ಸಬೂಬು ಹೇಳದೆ ಹಣ ವಾಪಸ್ ತೆಗೆದುಕೊಳ್ಳ ಬಹುದೆಂದ. ಅವನು ತಡವಾದುದಕ್ಕೆ ಏನೂ ಕಾರಣಗಳನ್ನು ಹೇಳದೆ ಇದ್ದುದರಿಂದ, ಬಸ್ ಬರುವುದು ಇನ್ನೂ ತಡವಾಗಬಹುದೆಂದು ಟಿಕೆಟ್ ಹಿಂದಕ್ಕೆ ಕೊಟ್ಟು ಹಣ ವಾಪಸ್ ಪಡೆಯುವುದರೊಳಗೆ ಬಸ್ ಬಂದು ನಿಂತಿತ್ತು. ಆದರೂ ಅವನು ಏನೂ ಮಾತನಾಡಲಿಲ್ಲ. ನಾನು ಬಸ್ಸು ಹತ್ತಿ ಅದರಲ್ಲಿಯೇ ಟಿಕೆಟ್ ಪಡೆದೆ. ಈ ಬಸ್ಸಿನಲ್ಲಿ ಟಿಕೆಟ್ ಕೊಡುವವನೇ ಕಂಡಕ್ಟರ್ ಕೆಲಸ ಮಾಡುವವನೂ ಮಾರ್ಗದರ್ಶಕನೂ ಆಗಿದ್ದ. ಕೈನಲ್ಲಿ ಹಿಡಿದ ಮೈಕ್ ಮೂಲಕ ಬಸ್ ಮುಂದೆ ಹೋದಂತೆ ಆಯಾ ಪ್ರದೇಶದ ಕಟ್ಟಡಗಳ, ಉದ್ಯಾನವನಗಳ ವಿವರಣೆ ನೀಡುತ್ತಿದ್ದ. ಲಂಡನ್ ನಗರದ ಇತಿಹಾಸಕ್ಕೆ ಸಂಬಂಧಿಸಿದಂತೆ ಅವನು ನೀಡುತ್ತಿದ್ದ ವಿವರಣೆಯನ್ನು ಕೇಳಿ ಇತಿಹಾಸ ಅಧ್ಯಾಪಕರೋ ಎನ್ನುವ ಭ್ರಮೆಯನ್ನು ಹುಟ್ಟಿಸಿತು. ಲಂಡನ್ ನಗರದ ನಡುವೆ ಹರಿಯುವ ಥೇಮ್ಸ್ ನದಿಯಮೇಲೆ ಎರಡು ಮೂರು ಕಡೆ ದಾಟಿ ಆ ಕಡೆ ಈ ಕಡೆ ಬರುವಾಗ ಹೋಗುವಾಗ ಸೇತುವೆಯ ಮೇಲೆ ವಾಹನ ನಿಲ್ಲಿಸಿ ಅವನು ನೀಡುತ್ತಿದ್ದ ವಿವರಣೆ ನಿಜವಾಗಿ ಮೋಹಕವಾಗಿತ್ತು.

ಲಂಡನ್‌ನಲ್ಲಿ ನಾನು ಇಳಿದುಕೊಂಡಿದ್ದ ಇಂಡಿಯನ್ ವೈ.ಎಂ.ಸಿ.ಎ. ಹಾಸ್ಟೆಲ್‌ನಲ್ಲಿ ಇದ್ದವರೆಲ್ಲ ಭಾರತೀಯರೇ–ಹೆಸರಿನಲ್ಲಿ ಮತ್ತು ಬಣ್ಣದಲ್ಲಿ. ಇವರ ನಡವಳಿಕೆ, ಊಟ, ತಿಂಡಿ, ಇತರೆ ವ್ಯವಸ್ಥೆಗಳೆಲ್ಲ ಪಾಶ್ಚಾತ್ಯಮಯವಾಗಿತ್ತು. ಹಾಸ್ಟೆಲಿನಲ್ಲಿ ಖರ್ಚು ಕಡಿಮೆ ಮಾಡುವುದಕ್ಕಾಗಿ ಊಟದ ಜೊತೆ ಸ್ವಲ್ಪ ಅನ್ನ ಕೊಡು ತ್ತಿದ್ದರು. ಇದಷ್ಟೇ ಭಾರತೀಯ ಸಂಪ್ರದಾಯ. ಈ ಹಾಸ್ಟೆಲಿನ ಕಾರ್ಯದರ್ಶಿ ಗಳಲ್ಲೊಬ್ಬನಾದ ಮಂಗಳೂರಿನ ಕ್ರೈಸ್ತಯುವಕನ ಪರಿಚಯವಾಯಿತು. ಆತ ಮೈಸೂರು ವಿಶ್ವವಿದ್ಯಾನಿಲಯದ ಪದವೀಧರನಂತೆ. ನಾನು ಕನ್ನಡದಲ್ಲಿ ಮಾತನಾಡಿಸಿ ದಾಗೆಲ್ಲ ತನಗೆ ಕನ್ನಡ ಸರಿಯಾಗಿ ಬಾರದೆಂದು ಇಂಗ್ಲಿಷ್‌ನಲ್ಲಿ ಉತ್ತರಿಸುತ್ತಿದ್ದ.

ಇದೇ ಹಾಸ್ಟೆಲಿನಲ್ಲಿ ಬೆಂಗಳೂರಿನ ಕ್ರೈಸ್ತ ವೈದ್ಯರೊಬ್ಬರಿದ್ದರು. ಅವರು ತಮ್ಮ ಸರಳವಾದ ಮತ್ತು ನಿರಾಡಂಬರ ವ್ಯಕ್ತಿತ್ವದಿಂದ ಒಂದೆರಡು ದಿನಗಳಲ್ಲೇ ನನಗೆ ತೀರ ಹತ್ತಿರವಾದರು. ಅವರ ಹೆಸರು ಜಾನ್ ಸುಮಿತ್ರ ಎಂದು. ಜಾನ್ ಅವರು ಬೆಂಗಳೂರಿನಲ್ಲಿ ವೈದ್ಯ ಪದವಿಯನ್ನು ಮುಗಿಸಿ ಸೇಂಟ್ ಜಾನ್ ಮೆಡಿಕಲ್

ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರಂತೆ. ವೈದ್ಯರಲ್ಲದ ಆಡಳಿತ ಸಮಿತಿಯವರು ತನ್ನ ವೈದ್ಯವೃತ್ತಿಗೆ ಸಂಬಂಧಿಸಿದ ಕೆಲಸಗಳಿಗೆ ಸಲಹೆ, ಆದೇಶ ನೀಡಲು ಪ್ರಯತ್ನಿಸಿದಾಗ ಕೆಲಸಕ್ಕೆ ರಾಜಿನಾಮೆ ಕೊಟ್ಟರಂತೆ. ಈಗ ಅವರು ಇಂಗ್ಲೆಂಡಿನಲ್ಲಿ ತೋರ್ಪೆ ಎಂಬ ನಗರದಲ್ಲಿ ವೈದ್ಯವೃತ್ತಿಯಲ್ಲಿದ್ದಾರೆ. ಅವರ ಹೆಂಡತಿ ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿಯಂತೆ. ಜಾನ್ ಸುಮಿತ್ರರು ಅಲ್ಪ ಸಮಯದ ತರಪೇತಿಗಾಗಿ ಲಂಡನ್‌ಗೆ ಬಂದು ಈ ಹಾಸ್ಟೆಲಿನಲ್ಲಿ ತಂಗಿದ್ದರು.

ಜಾನ್ ಅವರು ಕೆಲವೊಮ್ಮೆ ಮಾತನಾಡುತ್ತಿದ್ದಾಗ ಹೇಳಿದ ಕೆಲವು ವಿಷಯಗಳು ಮನನೀಯವಾದುವು—ಪಾಶ್ಚಿಮಾತ್ಯ ದೇಶಗಳಲ್ಲಿ ದೂರದರ್ಶನಗಳ ಹಾವಳಿಯಿಂದ ಕುಟುಂಬಜೀವನ ಮುರಿದುಬಿದ್ದಿದೆಯಂತೆ. ಗಂಡಹೆಂಡಿರ ನಡುವೆ, ಮಕ್ಕಳು ತಂದೆತಾಯಿಗಳ ನಡುವೆ ಇರಬೇಕಾದ ನಿಕಟತೆ ಕಡಿದುಹೋಗಿದೆಯಂತೆ. ಸದಾ ದೂರದರ್ಶನ ವೀಕ್ಷಣೆಯಲ್ಲಿ ತೊಡಗುವುದು–ಕಛೇರಿ ಕೆಲಸ, ದೂರದರ್ಶನ ನೋಡುವುದು, ಮಲಗುವುದು–ಇವಿಷ್ಟೇ ಹಿರಿಯರ ದೈನಂದಿನ ಕೆಲಸ. ಮಕ್ಕಳಿಗೆ ಶಾಲೆ, ದೂರದರ್ಶನ ನೋಡುವುದಷ್ಟೇ ಕೆಲಸ–ಇದಕ್ಕೆ ಕಾರಣವಂತೆ. ಕುಟುಂಬದಲ್ಲಿ ಇರಬೇಕಾದ ಪರಸ್ಪರ ವಿಚಾರವಿನಿಮಯ ಈ ದೂರದರ್ಶನದ ಹಾವಳಿಯಿಂದ ತಪ್ಪಿಹೋಗಿ ತಪ್ಪು ತಿಳುವಳಿಕೆಗಳು ಕುಟುಂಬದಲ್ಲಿ ಹೆಚ್ಚುತ್ತಿವೆಯಂತೆ. ಇದರ ಜೊತೆಗೆ ದೂರದರ್ಶನದಲ್ಲಿ ಹಗಲು ರಾತ್ರಿ ಎನ್ನದೆ ಪ್ರಸಾರವಾಗುವ ಕೆಲವು ಕಾರ್ಯಕ್ರಮಗಳು ಕುಟುಂಬಜೀವನದ ಒಡಕಿಗೆ ಕಾರಣವಂತೆ.

ಲಂಡನ್‌ನಂಥ ದೊಡ್ಡ ನಗರಗಳಲ್ಲಿ ಕೆಲವು ಕಡೆ ಅಸಹ್ಯವಾದ ಚಟುವಟಿಕೆಗಳು ನಡೆಯುತ್ತವೆಯಂತೆ. ಕತ್ತಲೆಯಾದ ಮೇಲೆ ಕೆಲವು ರಸ್ತೆಗಳಲ್ಲಿ ಮರ್ಯಾದೆಯಿರುವವರು ತಿರುಗಾಡುವುದು ಸಾಧ್ಯವಿಲ್ಲವಂತೆ. ಮನುಷ್ಯನ ಕಾಮೋದ್ದೀಪನೆಗೆ ಏನೇನು ಸಾಧನಗಳು ಬೇಕೋ ಅವೆಲ್ಲವನ್ನೂ ಅಲ್ಲಿ ಪ್ರದರ್ಶಿಸುತ್ತಾರಂತೆ–ಕೃತಕ ಹೆಣ್ಣು ಗಂಡುಗಳೂ ಸೇರಿದಂತೆ.

ಈ ದೇಶಗಳಲ್ಲಿ ಹೊರಬರುವ ಪತ್ರಿಕೆಗಳು ಮತ್ತು ಪುಸ್ತಕಗಳು ನೈತಿಕ ಅಧಃಪತನಕ್ಕೆ ಬಹಳಷ್ಟುಮಟ್ಟಿಗೆ ಕಾರಣವಾಗಿದೆಯಂತೆ. ಇಂತಹ ಪರಿಸ್ಥಿತಿಯಲ್ಲಿ ಜಾನ್ ಅವರು ತಮ್ಮ ಕುಟುಂಬದವರಿಗೆ ಓದಲು ಕೊಡುವ ಪತ್ರಿಕೆಗಳು, ಪುಸ್ತಕಗಳನ್ನು ಮೊದಲು ತಾವು ನೋಡಿ ಸರಿಕಂಡರೆ ಆಮೇಲೆ ಮನೆಯವರಿಗೆ ಕೊಡುತ್ತಾರಂತೆ. ಲಂಡನ್‌ಗೆ ಬಂದಾಗ ಕೆಲವು ರಸ್ತೆಗಳಿಗೆ ಮನೆಯವರನ್ನು ಕರೆದೊಯ್ಯುವುದೇ ಇಲ್ಲವಂತೆ. ಮನೆಯಲ್ಲಿ ದೂರದರ್ಶನ ನೋಡಲೂ ವೇಳಾಪಟ್ಟಿಯನ್ನು ಹಾಕಿಕೊಂಡು ಆ ವೇಳೆಯಲ್ಲಿ ಮಾತ್ರ ಅದರ ದರ್ಶನ ಮಾಡುತ್ತಾರಂತೆ. ಇಷ್ಟೆಲ್ಲ ಮಾಡಿದರೂ ಅವರು ಕುಟುಂಬದವರು ಎಷ್ಟರಮಟ್ಟಿಗೆ ಆಧುನಿಕ ಮೋಹಕ ಜಗತ್ತಿನ ಆಕರ್ಷಣೆಯಿಂದ ದೂರವಿದ್ದಾರೊ ನನಗೆ ತಿಳಿಯದು.

ನಾನು ಲಂಡನ್ ಬಿಟ್ಟು ವೆಸ್ಟ್ಇಂಡೀಸ್ ದ್ವೀಪಗಳಿಗೆ ಹೊರಡುವ ಹಿಂದಿನ ರಾತ್ರಿ ನಾನಿದ್ದ ಹಾಸ್ಟೆಲಿನಲ್ಲಿ ನಾನು ಮತ್ತು ಜಾನ್ ಸುಮಿತ್ರ ಊಟ ಮಾಡುತ್ತಿದ್ದೆವು. ಈಗಾಗಲೇ ಮುಖ ಪರಿಚಯವಾಗಿದ್ದ ಇಬ್ಬರು ಮಹಿಳೆಯರು ನಾವು ಕುಳಿತಿದ್ದ ಮೇಜಿಗೆ ಬಂದು ಊಟ ಮಾಡಲಾರಂಭಿಸಿದರು. ಅವರಿಬ್ಬರು ಜೈಪುರದವರಂತೆ. ಒಬ್ಬಾಕೆ ಸ್ವಲ್ಪ ವಯಸ್ಸಾದವರು, ಎರಡು ತೋಳಿಗೂ ಊರೆಗೋಲು ಹಾಕಿಕೊಂಡು ಕುಂಟುತ್ತಾ ನಡೆಯುತ್ತಿದ್ದರು. ಇನ್ನೊಬ್ಬ ತರುಣಿ ಅವರಿಗೆ ಸಹಾಯಕಳಾಗಿ ಅವರ ಜೊತೆಯಲ್ಲಿರುತ್ತಿದ್ದಳು. ಈ ವಯಸ್ಸಾದ ಮಹಿಳೆ ನೈಜೀರಿಯಾದಲ್ಲಿ ಮೊದಲು ಕೆಲಸ ಮಾಡುತ್ತಿದ್ದರಂತೆ. ಕಾರಿನ ಅಪಘಾತದಲ್ಲಿ ತೊಡೆಯ ಮೂಳೆ ಮುರಿದು ಸುಮಾರು ಆರು ತಿಂಗಳಾದರೂ ಇನ್ನೂ ಸರಿಯಾಗಿಲ್ಲ. ಚಿಕಿತ್ಸೆಗಾಗಿ ಇವರು ಜೈಪುರದಿಂದ ಲಂಡನ್ನಿಗೆ ಬಂದಿದ್ದಾರೆ. ಇವರ ಜೊತೆ ಇರುವ ಇನ್ನೊಬ್ಬ ತರುಣಿ, ತನ್ನ ಗಂಡನ ತಂಗಿ, ಜೈಪುರ ವಿಶ್ವವಿದ್ಯಾನಿಲಯದಲ್ಲಿ M.B.A. ವಿಭಾಗದಲ್ಲಿ ಅಧ್ಯಾಪಕಿಯಾಗಿದ್ದಾಳೆ. ತನ್ನ ಅತ್ತಿಗೆಯ ಸಹಾಯಕ್ಕಾಗಿ ರಜೆ ಹಾಕಿ ಲಂಡನ್ನಿಗೆ ಬಂದಿದ್ದಳು.

ಈ ಇಬ್ಬರೂ ನಮ್ಮ ಪರಿಚಯ ಮಾಡಿಕೊಂಡು ತಮ್ಮ ಸಂಕಟ ಹೇಳಲಾರಂಭಿಸಿದರು. ಹಿರಿಯ ಮಹಿಳೆ ಮಾತನಾಡುವಾಗ ಧ್ವನಿಯಲ್ಲಿ ನೋವಿತ್ತು; ಕಣ್ಣು ತೇವವಾಗಿದ್ದವು. ದೇವರು ನೊಂದವರಿಗೇ ಏಕೆ ಮೇಲಿಂದಮೇಲೆ ಕಷ್ಟ ಕೊಡುತ್ತಾನೆ ಎಂದು ಆಕೆ ದುಗುಡದ ಧ್ವನಿಯಲ್ಲಿ ಕೇಳುತ್ತಿದ್ದರು. ಆಕೆಯ ಜೀವನದಲ್ಲಿ ಏನೇನು ದುಃಖಗಳು ಅಡಗಿದ್ದುವೋ ತಿಳಿಯದು. ನನ್ನ ಕ್ರೈಸ್ತ ಮಿತ್ರ ಡಾ. ಜಾನ್ ಹೇಳುತ್ತಿದ್ದರು. ದೇವರು ಶಿಕ್ಷೆ ಮಾಡುವುದು ನಮ್ಮ ಒಳ್ಳೆಯದಕ್ಕಾಗಿ, ನಾವು ನಮ್ಮ ಮಕ್ಕಳಿಗೆ ಶಿಕ್ಷೆ ಮಾಡುವುದು ಅವರು ಒಳ್ಳೆಯವರಾಗಲೆಂದು. ಮನೆಯ ಕೆಲಸದವಳಿಗೆ ಶಿಕ್ಷೆ ಕೊಟ್ಟು ನಾವು ಬುದ್ಧಿ ಕಲಿಸುವುದಿಲ್ಲ ಎಂದು ಮುಂತಾಗಿ. ಆಮೇಲೆ ನಾನು ಅನುಭವಿಸಿದ ಅಪಘಾತದ ವಿಷಯ ಹೇಳಿದೆ. ಯಾವುದನ್ನು ನಾವು ಸಂಭವಿಸದಂತೆ ನಿವಾರಿಸಲಾರೆವೊ, ಸರಿಪಡಿಸಲಾರೆವೊ ಅದಕ್ಕಾಗಿ ಏಕೆ ಚಿಂತಿಸಬೇಕು. ಬಂದದ್ದನ್ನು ಬಂದ ಹಾಗೆ ಏಕೆ ತೆಗೆದುಕೊಳ್ಳಬಾರದು ಎಂದು ಸಮಾಧಾನ ಹೇಳಿದೆ. ಆಮೇಲೆ ಆಕೆಯ ಮುಖದಲ್ಲಿ ಸ್ವಲ್ಪ ಉಲ್ಲಾಸ ಕಂಡಿತು. ನೊಂದವರಿಗೆ ಸಾಂತ್ವನದ ಮಾತನ್ನಾದರೂ ಆಡದವನು ಮತ್ತೇನನ್ನು ಕೊಡಬಲ್ಲ? ಈಕೆ ಕಷ್ಟದಿಂದ ಊರೆಗೋಲುಗಳ ಆಧಾರದಿಂದ ಮಹಡಿ ಮೆಟ್ಟಲು ಹತ್ತಿ ತನ್ನ ಕೊಠಡಿಗೆ ಹೋಗುತ್ತಿದ್ದುದನ್ನು ನೋಡಿದಾಗೆಲ್ಲ ನನ್ನ ಕಣ್ಣು ತೇವವಾಗುತ್ತಿದ್ದುವು. ನಾನೂ ಹಾಗೆಯೇ ಊರೆಗೋಲು ಹಿಡಿದುಕೊಂಡು ಕೆಲಕಾಲ ನಡೆದಾಡುತ್ತಿದ್ದ ನೆನಪಾಗುತ್ತಿತ್ತು.

ಗಗನದಲ್ಲೊಂದು ಲೋಕ

ಲಂಡನ್ ಬಿಡುವ ದಿನ (11-2-82) ನನಗೆ ಸಂತೋಷವಾಗಿತ್ತು. ಸ್ನೇಹ ಪರರಲ್ಲದ, ಬಿಗಿದ ಮುಖಗಳ ಈ ಬಿಳಿಯರ ನಾಡನ್ನು ಬಿಟ್ಟು ಹೊಸ ಜನರ ಸಂಪರ್ಕಕ್ಕೆ ಹೋಗುತ್ತಿದ್ದುದು ಅದಕ್ಕೆ ಕಾರಣವಾಗಿತ್ತು. ಮಧ್ಯಾಹ್ನ 2 ಘಂಟೆಗೆ ಹೀಥ್ರೂ ವಿಮಾನ ನಿಲ್ದಾಣಕ್ಕೆ ಬಂದೆ. ಕೃಷ್ಣದೇವರಾಯ ಎಂಬ ಹೆಸರಿನ ಏರ್ ಇಂಡಿಯಾ ವಿಮಾನ ನ್ಯೂಯಾರ್ಕ್‌ಗೆ ಹೊರಡಲು ಸಿದ್ಧವಾಗಿತ್ತು. ಲಂಡನ್‌ನಿಂದ ನ್ಯೂಯಾರ್ಕಿಗೆ ಸುಮಾರು 5,500 ಮೈಲಿ. ಈ ದೂರವನ್ನು ಕ್ರಮಿಸಲು ಸುಮಾರು 7 ಘಂಟೆ ಬೇಕಾಗುತ್ತದೆಯಂತೆ. ಕೃಷ್ಣದೇವರಾಯ ವಿಮಾನವನ್ನು ಕಂಡೇ ವಿಶೇಶವಲ್ಲಿರುವ ಪರಕೀಯತೆ ಮಾಯವಾಗಿತ್ತು. ವಿಮಾನ ಪ್ರವೇಶಿಸಿದಾಗ ಭಾರತೀಯ ಮುಖಗಳು, ಗಗನಸಖಿಯರ ಭಾರತೀಯ ನಮನಗಳನ್ನು ಕಂಡು ನನ್ನ ದೇಶದೊಳಕ್ಕೆ ಕಾಲಿಟ್ಟ ಅನುಭವವಾಯಿತು.

ವಿಮಾನ ಅಟ್ಲಾಂಟಿಕ್ ಸಾಗರದ ಮೇಲೆ ಸಾಗುತ್ತಿದೆ. ಈಗ ವಿಮಾನ 600 ಮೈಲಿಗಳ ವೇಗದಲ್ಲಿ ಹೋಗುತ್ತಿದೆ ಎಂದು ಚಾಲಕ ಹೇಳುತ್ತಿದ್ದಾನೆ. ಸುತ್ತಮುತ್ತ ತಳಗೆ ನೋಡಿದರೆ ಮೋಡ, ನೀರು. ತಳಗೊಂದು ಆಕಾಶದಂತೆ ಕಾಣುತ್ತಿದೆ. ಈಗ ತಾನೆ ಮಧ್ಯಾಹ್ನದ ಊಟ ಮುಗಿದಿದೆ. ಏನೆಲ್ಲ ಸೌಲಭ್ಯವಿದೆ ಗಗನಯಾನದಲ್ಲಿಯೂ ! ನನಗೆ ಯಾವುದನ್ನು ಹೇಗೆ ಬಳಕೆ ಮಾಡಬೇಕೆಂದುದೇ ಸಮಸ್ಯೆ. ಗಗನಸಖಿ ದೊಡ್ಡ ತಟ್ಟೆಯಲ್ಲಿ ಊಟ ತರುತ್ತಾಳೆ. ಕೋಳಿಮಾಂಸ, ಅನ್ನ, ತರಕಾರಿ ಪಲ್ಯ, ಹಸಿ ತರಕಾರಿ, ಬೆಣ್ಣೆ, ಬ್ರೆಡ್ಡು, ಐಸ್‌ಕ್ರೀಂ, ಉಪ್ಪಿನಕಾಯಿ, ಸಕ್ಕರೆ, ಹಾಲು, ಉಪ್ಪು, ಮೆಣಸಿನಪುಡಿ ಇತ್ಯಾದಿ ಇತ್ಯಾದಿ. ಮುಂದಿನ ಸೀಟಿಗೆ ಅಳವಡಿಸಿದ ಮಡಿಕೆ ಮಾಡುವ ಮೇಜಿನ ಮೇಲೆ ಎಲ್ಲವನ್ನು ಇಟ್ಟುಕೊಂಡು ನಿಧಾನವಾಗಿ ಭಕ್ಷಿಸಬಹುದು. ಅವಸರ ವಿಲ್ಲ, ಚೆಲ್ಲಿಹೋಗುತ್ತದೆ ಎಂಬ ಭಯವಿಲ್ಲ. ಹೋಟೆಲಿನ ಸಡಗರ ಇಲ್ಲಿಲ್ಲ. ಊಟ ವಾದ ಮೇಲೆ ಕುಳಿತಲ್ಲಿಂದಲೇ ಸಿನಿಮಾ ನೋಡಬಹುದು. ಬೇರೊಂದು ಲೋಕ ದಲ್ಲಿದ್ದೇವೆ ಎನ್ನಿಸುತ್ತದೆ. ಆದರೆ ನಮ್ಮ ಭೂತ, ಭವಿಷ್ಯತ್‌ಗಳು ನಮ್ಮನ್ನು ಮತ್ತೆ ಭೂಮಿಗೆ ಬಂಧಿಸುತ್ತವೆ.

ನನ್ನ ಪಕ್ಕದಲ್ಲಿ ಒಬ್ಬ ಹುಡುಗ ಕುಳಿತಿದ್ದಾನೆ. ಅವನೂ ಭಾರತೀಯನೇ. ಅವನು ಆಕಸ್ಮಿಕವಾಗಿಯೂ ನನ್ನನ್ನು ನೋಡುವುದಿಲ್ಲ; ನನ್ನ ಜೊತೆ ಮಾತನಾಡು ವುದಿಲ್ಲ. ಬಿಳಿಯರಂತೆ ಮುಖ ಬಿಗಿದು ಕುಳಿತಿದ್ದಾನೆ. ಈ ಅನುಕರಣೆ ಏಕೆ ? ನಾನು ಇಂಗ್ಲೆಂಡಿನಲ್ಲಿ ನೋಡಿದ್ದೇನೆ. ಬಸ್‌ಗಳಲ್ಲಿ, ನೆಲಮಾಳಿಗೆ ರೈಲಿನಲ್ಲಿ ಆಕಸ್ಮಿಕ ವಾಗಿಯೂ ಒಬ್ಬರನ್ನೊಬ್ಬರು ನೋಡುವುದಿಲ್ಲ. ನಾವೇ ಮಾತನಾಡಿಸಿದರೂ ಒಂದೇ ಮಾತಿನಲ್ಲಿ ಉತ್ತರಿಸಿ ಮುಖ ತಿರುಗಿಸುತ್ತಾರೆ. ಕೆಲವರು ಮುಖನೋಡದೆ ' ಕ್ಷಮಿಸಿ, ತಿಳಿಯದು ' ಎಂದು ಬಿಡುತ್ತಾರೆ. ಮುದುಕರು ಪರವಾಯಿಲ್ಲ. ಕೇಳಿದರೆ ನಿಂತು ಮಾತನಾಡುತ್ತಾರೆ. ಪಾಪ ! ಅವರಿಗೆ ಮಾತಾಡುವವರು ಯಾರೂ ಸಿಕ್ಕುವುದಿಲ್ಲ

ವೆಂದು ಕಾಣಿಸುತ್ತದೆ. ಮಕ್ಕಳೆಲ್ಲ ಬೇರೆ ಸ್ವತಂತ್ರವಾಗಿ ಬದುಕುತ್ತಿರಬಹುದು. ಹೆಂಡತಿ ವಿಚ್ಛೇದನ ಪಡೆದಿರಬಹುದು. ಲಂಡನ್‌ಗೆ ಹೋದ ಪ್ರಾರಂಭದಲ್ಲಿ ಗೋರ್ಡನ್ ಚೌಕ ಎಲ್ಲಿದೆ ಎಂದು ತರುಣ ತರುಣಿಯರನ್ನು ಕೇಳಿ ಉತ್ತರ ಸಿಕ್ಕದೆ ಒಬ್ಬ ಮುದುಕನನ್ನು ಕೇಳಿದೆ. ಆತ ತನಗೆ ಅದು ತಿಳಿಯದಿದ್ದರೂ ಅಲ್ಲಿಯೇ ಹೋಗುತ್ತಿದ್ದ ಒಂದಿಬ್ಬರು ಮುದುಕರನ್ನು ನನಗಾಗಿ ವಿಚಾರಿಸಿದ. ಯಾರಿಗೂ ತಿಳಿಯದಿದ್ದಾಗ ಆ ಮುದುಕ "ಇಲ್ಲಿ ಸುಮ್ಮನೆ ನಿಲ್ಲುವುದರಿಂದ ಉದ್ದೇಶ ನೆರವೇರದು" ಎಂದು ಉಪದೇಶಮಾಡಿ ಹೋದ. ನಾನು ಅದಕ್ಕಾಗಿಯೇ ಅವನಿಗೆ ವಂದನೆ ಹೇಳಬೇಕಾಯಿತು!

ಈ ದಿನ ಲಂಡನ್ ಬಿಟ್ಟು ಹೀಥ್ರೂ ವಿಮಾನ ನಿಲ್ದಾಣಕ್ಕೆ ಹೊರಟಾಗ ಡಾ. ಜಾನ್ ಸುಮಿತ್ರ ನನ್ನನ್ನು ಕಳುಹಿಸುವುದಕ್ಕಾಗಿ ಬಂದಿದ್ದರು. ನನಗೆ ದಾರಿ ತೋರಿಸುವುದಕ್ಕಾಗಿಯೇ ಅವರು ನನ್ನ ಜೊತೆ ಹೊರಟರು. ನನ್ನ ಸೂಟ್‌ಕೇಸನ್ನು ಬೇಡವೆಂದರೂ ಬಿಡದೆ ಅವರು ಹಿಡಿದುಕೊಂಡರು. ಕ್ರೈಸ್ತ ಮತಸ್ಥರಾದ ಅವರಿಗೂ ನನಗೂ ಏನು ಸಂಬಂಧ? ಈ ಮೊದಲು ನಾವಿಬ್ಬರು ಪರಸ್ಪರ ನೋಡಿರಲಿಲ್ಲ, ಕೇಳಿರಲಿಲ್ಲ. ದೂರದ ನಾಡಿನಲ್ಲಿ ಅಲ್ಪಕಾಲದಲ್ಲಿಯೇ ಆತ್ಮೀಯರಾಗಿದ್ದೆವು. ನಮಗಿಬ್ಬರಿಗೂ ದೂರದಲ್ಲಿ ಬೆಸುಗೆ ಹಾಕಿದ್ದುದು ನಮ್ಮ ಕರ್ನಾಟಕ ಮತ್ತು ಕನ್ನಡ!

ಈಗ ಸಂಜೆ 7-30. ವಿಮಾನ ಸಾಗುತ್ತಿದೆ. ಬಿಸಿಲು ಇನ್ನೂ ಸ್ಪಷ್ಟವಾಗಿದೆ. ಪೂರ್ವಕ್ಕೆ ಕತ್ತಲಾದಂತೆ ಕಾಣುತ್ತದೆ. ಪಶ್ಚಿಮಕ್ಕೆ ಹೋದಂತೆ ಇನ್ನೂ ಸೂರ್ಯನ ಬೆಳಕು ಚೆನ್ನಾಗಿವೆ. ಬಿಸಿಲಿನ ಕಿರಣಗಳು ಕಿಟಕಿಯಿಂದ ವಿಮಾನದೊಳಕ್ಕೆ ಪ್ರವೇಶಿಸುತ್ತಿವೆ. ತಳಗೆ ಹತ್ತಿಯ ರಾಶಿಯಂತೆ ಮೋಡಗಳು ಹರಡಿಕೊಂಡಿರುವುದು ಕಣ್‌ದೃಷ್ಟಿ ಹಾಯುವ ತನಕ ಕಾಣುತ್ತಿದೆ. ಕೆಲವು ಕಡೆ ಹಾಲಿನ ಕೆನೆಯಂತೆ ಮಂಜಿನಗೆಡ್ಡೆ ಹಾಸಿದೆ. ಕೃಷ್ಣದೇವರಾಯ ಸೂರ್ಯನನ್ನು ಬೆನ್ನಟ್ಟಿದ್ದಾನೆ. ಕತ್ತಲೆಯಾಗುವ ಸೂಚನೆಯಿಲ್ಲ! ನನ್ನ ಗಡಿಯಾರದಲ್ಲಿ 9-30 ಆಗಿದೆ. ಇನ್ನೂ 4-30ರ ಸಮಯದಂತೆ ಕಾಣುತ್ತಿದೆ. ನ್ಯೂಯಾರ್ಕ್ ನಗರದ ಕೆನಡಿ ವಿಮಾನ ನಿಲ್ದಾಣದಲ್ಲಿ ಇಳಿದಾಗ ಸ್ಥಳೀಯ ಕಾಲಮಾನ 4-30. ಅಂತೂ ಈ ದಿನ ನಾನು 14-15 ಗಂಟೆಯ ಹಗಲನ್ನು ಕಂಡಂತಾಯಿತು!

ಏರ್ ಇಂಡಿಯಾದವರ ಕೃಪೆಯಿಂದ ಪಂಚತಾರಾ ಹೋಟೆಲಿನಲ್ಲಿ ಇಳಿದುಕೊಳ್ಳುವುದು ಸಾಧ್ಯವಾಗಿದೆ. ಸ್ವಂತ ಖರ್ಚಿನಲ್ಲಿ ಸಾಧ್ಯವಾಗುತ್ತಿತ್ತೆ? ನಾಳೆ ಬೆಳಗ್ಗೆ ಜಮೈಕಾಗೆ ತೆರಳಲು ಮತ್ತೆ ವಿಮಾನ ಹಿಡಿಯಬೇಕು. ಕಣ್ಣಿಗೆ ನಿದ್ದೆ ಬಾರದು ದೀಪ ಆರಿಸಿದರೂ. ಟಿ. ವಿ. ನೋಡುತ್ತಾ ರಾತ್ರಿ ಕಳೆದೆ. 10-12 ಕೇಂದ್ರಗಳಿಂದ ಇಡೀ ರಾತ್ರಿಯೆಲ್ಲ ಟಿ. ವಿ. ಇಲ್ಲಿ ಪ್ರಸಾರವಾಗುತ್ತದೆ. ಇಷ್ಟಬಂದ ಕಾರ್ಯಕ್ರಮ ವೀಕ್ಷಿಸಬಹುದು.

ಕಾರು, ಬೀರು, ನೀರು, ನೀರೆಯರ ನಾಡಿನಲ್ಲಿ

12-2-82ರ ಬೆಳಗ್ಗೆ ಏರ್ ಜಮೈಕ ವಿಮಾನದಲ್ಲಿ ಜಮೈಕಾ ದ್ವೀಪಕ್ಕೆ ಪ್ರಯಾಣಿಸಿದೆ. ಏರ್ ಇಂಡಿಯಾ ವಿಮಾನಕ್ಕೆ ಹೋಲಿಸಿದರೆ ಈ ವಿಮಾನದಲ್ಲಿ ವ್ಯವಸ್ಥೆ ಸಾಲದು, ಆಕಾರದಲ್ಲಿಯೂ ಸಣ್ಣದು. ಏರ್ ಇಂಡಿಯಾದವರ ಆತಿಥ್ಯ ಇಲ್ಲಿ ಇಲ್ಲ. 'ಅತಿಥಿ ದೇವೋಭವ' ಎಂದವರಲ್ಲವೇ ಭಾರತೀಯರು! ಇಲ್ಲಿಯ ಗಗನ ಸಖಿಯರೆಲ್ಲ ನೀಗ್ರೋ ಹುಡುಗಿಯರು. ಬಿಳಿಯ ಗಗನಸಖಿಯರು ಇಲ್ಲಿ ಕಾಣಲಿಲ್ಲ. ಗಗನಸಖಿ ಎಂದರೆ ಸೇವಕಿ ತಾನೆ. ಆದರಿಂದ ನೀಗ್ರೋಗಳನ್ನೇ ನೇಮಿಸಿರಬೇಕು.

ಸಂಜೆ ಸುಮಾರು 4-30 ಕ್ಕೆ ವಿಮಾನ ಜಮೈಕಾದ ಕಿಂಗ್‌ಸ್ಟನ್‌ನಲ್ಲಿ ಇಳಿಯಿತು. ವೆಸ್ಟ್ ಇಂಡೀಸ್ ವಿಶ್ವವಿದ್ಯಾನಿಲಯದ ಪರವಾಗಿ ಅಲ್ಲಿಯ ಸಹಾಯಕ ಕುಲಸಚಿವರಾದ ಶ್ರೀಮತಿ ಪಾಲಿನ್ ಮಾರಿಸನ್ ನನ್ನನ್ನು ಆಹ್ವಾನಿಸಿ ಕರೆದೊಯ್ಯಲು ಬಂದಿದ್ದರು. ಅವರೇ ಮುಂದೆ ನಿಂತದ್ದರಿಂದ ವಿಮಾನ ನಿಲ್ದಾಣದ ವಿಧಿಗಳು ಬೇಗ ಮುಗಿದವು. ನಿಲ್ದಾಣದ ಅಧಿಕಾರಿಗಳು ಅವರಿಗೆ ಪರಿಚಯವಿದ್ದವ ರಾದ್ದರಿಂದ ತಡವಾಗಲಿಲ್ಲ. ಅವರ ಜೊತೆ ಅವರ ವಾಹನದಲ್ಲೇ 25 ಮೈಲಿ ದೂರ ದಲ್ಲಿರುವ ಒಲಂಪಿಯಾ ಹೋಟಲಿಗೆ ಬಂದು ಮೊದಲೇ ಕಾಯ್ದಿರಿಸಿದ್ದ ಕೊಠಡಿಯಲ್ಲಿ ಇಳಿದುಕೊಂಡೆ. ಇಲ್ಲಿನ ನನ್ನ ಕಾರ್ಯಕ್ರಮಗಳ ಒಂದು ಪಟ್ಟಿ ಆಗಲೆ ತಯಾರಾಗಿ, ಕುಲಸಚಿವರಿಂದ ನನ್ನ ಹೋಟಲ್ ವಿಳಾಸಕ್ಕೆ ನನಗಿಂತ ಮೊದಲೇ ಬಂದಿತ್ತು. ಇಲ್ಲಿಗೆ ಬಂದ ಮೊದಲ ದಿನ ನನ್ನನ್ನು ಕಾಡಿದ ವಿಷಯಗಳು ಎರಡು; ಹೋಟೆಲು ಬಾಡಿಗೆ, ಊಟ, ತಿಂಡಿಗಳ ದುಬಾರಿ ಖರ್ಚು ಮತ್ತು ಮನೆಗೀಳು, ಏಕಾಂಗಿತನ.

ಇಲ್ಲಿ ಅನೇಕ ಭಾರತೀಯರು, ಅವರಲ್ಲೂ ಕನ್ನಡದವರು, ಇದ್ದಾರೆಂದು ತಿಳಿದ ಮೇಲೆ ಮನಸ್ಸಿಗೆ ನೆಮ್ಮದಿಯಾಯಿತು. ನಾನಿದ್ದ ಹೋಟೆಲಿನಲ್ಲಿಯೇ ಕರ್ನಾಟಕ ದವರಾದ ನಾರಾಯಣರಾಯರು ಇದ್ದರು. ಅವರು ವಿಶ್ವವಿದ್ಯಾನಿಲಯದ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದಾರೆ. ನಾರಾಯಣರಾಯರೇ ನಾನು ಮೊದಲು ಕೆರೇಬಿಯನ್ ದ್ವೀಪಗಳಲ್ಲಿ ಭೇಟಿಯಾದ ಕನ್ನಡಿಗರು. ಅವರನ್ನು ಭೇಟಿಮಾಡುವ ಹೊತ್ತಿಗೆ ತುಂಬಾ ಬೇಸರದ ಎರಡು ದಿನಗಳನ್ನು ಕಳೆದಿದ್ದೆ. ನಾರಾಯಣರಾಯರು ಹೈದರಾಬಾದ್ ಕನ್ನಡದಲ್ಲಿ ವಿಶ್ವಾಸದಿಂದ ಮಾತನಾಡಿದರು. ಅವರಿಂದ ಮತ್ತೆ 5-6 ಜನ ಕನ್ನಡಿಗರಾದ ವೈದ್ಯರ ಪರಿಚಯವಾಯಿತು. ಸುಮಾರು 50 ಜನ ಕರ್ನಾಟಕದ ವೈದ್ಯ ಪದವೀಧರರು ಇಲ್ಲಿದ್ದಾರಂತೆ. ಕರ್ನಾಟಕದಲ್ಲಿ ಕೆಲಸ ದೊರೆಯದೇ ಇವರೆಲ್ಲ ಇಲ್ಲಿಗೆ ಬಂದವರು. ಇಲ್ಲಿಯ ಆಸ್ಪತ್ರೆಗಳಲ್ಲಿ ಸುಲಭವಾಗಿ ಕೆಲಸ ದೊರೆಯುತ್ತಿದೆಯಂತೆ! ಇಲ್ಲಿ ಕೆಲವು ಪರೀಕ್ಷೆಗಳನ್ನು ಪಾಸುಮಾಡಿಕೊಂಡು ಅಮೆರಿಕಾಕ್ಕೆ ಜಾರಿಕೊಳ್ಳುವ ಆಲೋಚನೆಯುಳ್ಳವರು ಇವರು.

ಜಮೈಕಾಕ್ಕೆ ಬಂದ ಪ್ರಾರಂಭದಲ್ಲಿ ನಾನು ಸ್ವೇಚ್ಛೆಯಾಗಿ ರಸ್ತೆಗಳಲ್ಲಿ ಓಡಾಡುತ್ತಿದ್ದೆ. ಸಾಮಾನ್ಯವಾಗಿ ಜನರು ರಸ್ತೆಯಲ್ಲಿ ನಡೆದಾಡುತ್ತಿರಲಿಲ್ಲ.

ವಾಹನಗಳ ಸೌಲಭ್ಯ ಇದಕ್ಕೆ ಕಾರಣವಿರಬಹುದೆಂದು ಮೊದಲು ಭಾವಿಸಿದ್ದೆ. ಒಂಟಿಯಾಗಿಯೇ ರಸ್ತೆಗಳಲ್ಲಿ, ನೀಲಿಬಿಟ್ಟದ ತಪ್ಪಲುಗಳಲ್ಲಿ ಓಡಾಡುವಾಗ ಜನ ಸುಮ್ಮನೆ ನನ್ನ ಕಡೆಗೆ ನೋಡುತ್ತಿದ್ದರು. ಕನ್ನಡಿಗ ವೈದ್ಯರ ಪರಿಚಯವಾದ ಮೇಲೆ ಅವರು ನನ್ನನ್ನು ಎಚ್ಚರಿಸಿ, ಬಂದೂಕುಧಾರಿಗಳ ಬಗ್ಗೆ ಹೇಳಿದರು.

ವೆಸ್ಟ್ ಇಂಡೀಸ್ ವಿಶ್ವವಿದ್ಯಾನಿಲಯ ನಮ್ಮ ವಿಶ್ವವಿದ್ಯಾನಿಲಯಗಳ ಗಾತ್ರಕ್ಕೆ ಹೋಲಿಸಿಕೊಂಡರೆ ಅತ್ಯಂತ ಸಣ್ಣದು. ಸುಮಾರು 8,000 ವಿದ್ಯಾರ್ಥಿಗಳಿದ್ದಾರೆ. ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಂಖ್ಯೆಯನ್ನು ಕೇಳಿಯೇ ಅವರು ಹೌಹಾರಿದರು. ನಮ್ಮ ಶಿಕ್ಷಣಕ್ಷೇತ್ರದ ಸಮಸ್ಯೆಗಳನ್ನು ಕೇಳಿ ಇವರು ದಿಙ್ಮೂಢರಾಗುತ್ತಾರೆ.

ವೆಸ್ಟ್ ಇಂಡೀಸ್ ವಿಶ್ವವಿದ್ಯಾನಿಲಯ ಹದಿನಾಲ್ಕು ಸ್ವತಂತ್ರ ದೇಶಗಳ ಸಹಾಯದಿಂದ ನಡೆಯುತ್ತಿದೆ. ಕೆರೇಬಿಯನ್ ಸಮುದ್ರದಲ್ಲಿರುವ ಈ 14 ಸಣ್ಣ ದ್ವೀಪಗಳ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಮೂರು ಕೇಂದ್ರಗಳಲ್ಲಿ ಅಭ್ಯಾಸ ಮಾಡುತ್ತಾರೆ. ಜಮೈಕ, ಬಾರ್ಬಡಾಸ್ ಮತ್ತು ಟ್ರಿನಿಡಾಡ್ ದ್ವೀಪಗಳಲ್ಲಿ ಈ ಮೂರು ಕ್ಯಾಂಪಸ್‌ಗಳಿವೆ. ವಿಶ್ವವಿದ್ಯಾನಿಲಯಕ್ಕೆ ಸಹಾಯಧನ ನೀಡುವ ದ್ವೀಪಗಳಿವು: ಆಂಟಿಗುಹ, ಬಹಾಮಾಸ್, ಬಾರ್ಬಡಾಸ್, ಬೆಲೀಜ್, ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್, ಕೇಮ್ಯಾನ್ ಐಲ್ಯಾಂಡ್ಸ್, ಡೊಮಿನಿಕ, ಗ್ರೆನೆಡಾ, ಜಮೈಕಾ, ಮಾಂಟ್‌ಸೆರಾಟ್, ಸೇಂಟ್‌ಕಿಟ್ಸ್, ಸೇಂಟ್‌ಲೂಸಿಯಾ, ಸೇಂಟ್ ವಿನ್ಸೆಂಟ್, ಟ್ರಿನಿಡಾಡ್ ಮತ್ತು ಟೊಬೇಗೊ. ಇವುಗಳಲ್ಲೆಲ್ಲ ಜಮೈಕಾ ದ್ವೀಪವೇ ದೊಡ್ಡದು. ಸುಮಾರು 150 ಮೈಲಿ ಉದ್ದ, 50 ಮೈಲಿ ಅಗಲವಿದೆ. ಇಲ್ಲಿಯೇ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ ಇದೆ.

ಮೊದಲೇ ನಿರ್ಧಾರವಾಗಿದ್ದ ಕಾರ್ಯಕ್ರಮದಂತೆ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು, ಅಧ್ಯಾಪಕರನ್ನು ಭೇಟಿಮಾಡಿ ವಿಶ್ವವಿದ್ಯಾನಿಲಯದ ಕಾರ್ಯ ಚಟುವಟಿಕೆ, ಅಲ್ಲಿ ಎದುರಿಸುತ್ತಿರುವ ಶಿಕ್ಷಣ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾಗಿತ್ತು. ಪ್ರಾರಂಭದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿ ಎ.ಜಡ್. ಪ್ರೆಸ್ಟನ್ ಅವರನ್ನು ಕುಲಸಚಿವರಾದ ಜ್ಯಾಕ್‌ಮನ್ ಮತ್ತು ಪ್ರೊ ವೈಸ್‌ಚಾನ್ಸಲರ್ ಎಲ್.ಆರ್. ಬಿ. ರಾಬಿನ್‌ಸನ್ ಅವರ ಜೊತೆ ಭೇಟಿಮಾಡಿದೆ. ಭೇಟಿಯ ಸಮಯದಲ್ಲಿ ಅವರನ್ನು ನಾನು ಕೇಳಿದ ಪ್ರಶ್ನೆಗಳಿಗಿಂತ ಹೆಚ್ಚಾಗಿ ಅವರೇ ನನ್ನನ್ನು ಕೇಳಿದರು. ನಮ್ಮ ವಿಶ್ವವಿದ್ಯಾನಿಲಯಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದೆ. ಇಲ್ಲಿಯ ಅಧಿಕಾರಿಗಳು ವರ್ತನೆಯಲ್ಲಿ ಸ್ಥಾನದ ಹಿರಿಮೆ ಗರಿಮೆಗಳನ್ನು ಪ್ರದರ್ಶಿಸುವುದಿಲ್ಲ. ಸರಳತೆ ಮತ್ತು ವಿಶ್ವಾಸದ ಬಿಚ್ಚುಮನಸ್ಸು ಅವರ ಮಾತುಕತೆಗಳಲ್ಲಿ ಎದ್ದುಕಾಣುತ್ತದೆ.

ಇಲ್ಲಿ ವಿಶ್ವವಿದ್ಯಾನಿಲಯಕ್ಕೆ ಬರುವ ಅತಿಥಿಗಳನ್ನು ಆದರಿಸುವ ರೀತಿ ವಿಚಿತ್ರವಾಗಿದೆ. ಕುಲಪತಿಯನ್ನು ಬಿಟ್ಟರೆ ಬೇರೆ ಯಾವ ಅಧಿಕಾರಿಗೂ ವಿಶ್ವವಿದ್ಯಾನಿಲಯ ವಾಹನಗಳನ್ನು ಕೊಡುವುದಿಲ್ಲ. ಇವರೆಲ್ಲ, ತಾವೇ ತಮ್ಮ ವಾಹನಗಳಲ್ಲಿ ಓಡಾಡುತ್ತಾರೆ. ವಿಶ್ವವಿದ್ಯಾನಿಲಯದ ಅಧಿಕಾರಿಗಳೇ ತಮ್ಮ ವಾಹನದಲ್ಲಿ ಬಂದು ಅತಿಥಿಗಳನ್ನು ಕರೆದುಕೊಂಡು ಹೋಗುತ್ತಾರೆ. ಮತ್ತು ಕೆಲಸ ಆದ ಮೇಲೆ ಅತಿಥಿಯನ್ನು ಅವರ ವಾಸದ ಸ್ಥಳಕ್ಕೆ ಕರೆನು ತಂದುಬಿಡುತ್ತಾರೆ. ಈ ಕ್ರಮ ನನಗೆ ಹಿಡಿಸಲಿಲ್ಲ. ಅಧಿಕಾರಿಗಳ ಸಮಯ ಹಾಳಾಗುವುದರ ಜೊತೆಗೆ ಅತಿಥಿಗಳಿಗೂ ಅವರ ಜೊತೆ ಓಡಾಡುವುದಕ್ಕೆ ಮುಜಗರವಾಗುತ್ತದೆ.

ಇಲ್ಲಿಯವರ ಸಮಯಪ್ರಜ್ಞೆಯಂತೂ ಅಸಾಧಾರಣವಾದುದು. ನಿಗದಿತ ವೇಳೆಗೆ ಸರಿಯಾಗಿ ಅತಿಥಿಗಳನ್ನು ಕಾಯುವ ಕೊಠಡಿಯಿಂದ ಸ್ವಾಗತಿಸಿ ಕರೆದೊಯ್ಯುತ್ತಾರೆ. ಅತಿಥಿ ಯಾರೇ ಇರಲಿ, ಕುಲಪತಿಯೂ ತಾವೇ ಎದ್ದು ಬಂದು ಅತಿಥಿಯನ್ನು ಸ್ವಾಗತಿಸಿ ತಮ್ಮ ಕೊಠಡಿಗೆ ಕರೆದೊಯ್ಯುತ್ತಾರೆ.

ಕಿಂಗ್‌ಸ್ಟನ್ ನಗರದ 'ಮೋನ' ಎಂಬ ಬಡಾವಣೆಯಲ್ಲಿ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಇದೆ. ಇಲ್ಲಿಯೇ ಎಲ್ಲಾ ವಿಭಾಗಗಳು ಪ್ರತ್ಯೇಕ ಕಟ್ಟಡಗಳಲ್ಲಿ ಅಡಕವಾಗಿವೆ. ಸ್ನಾತಕೋತ್ತರ ಮತ್ತು ಸ್ನಾತಕಪೂರ್ವ ತರಗತಿಗಳೆಲ್ಲ ಒಂದೇ ವಿಭಾಗದಲ್ಲಿ ನಡೆಯುತ್ತವೆ ಅವುಗಳ ವಿಭಾಗಮುಖ್ಯರೂ ಒಬ್ಬರೇ ಆಗಿರುತ್ತಾರೆ. ವಿಶ್ವವಿದ್ಯಾನಿಲಯದ ಒಂದೇ ಕ್ಷೇತ್ರದಲ್ಲಿ ಆಸ್ಪತ್ರೆಗಳು, ಈಜುಕೊಳ, ಆಟದ ಮೈದಾನ, ವಿದ್ಯಾರ್ಥಿನಿಲಯಗಳು, ಕ್ಯಾಂಟೀನ್‌ಗಳು (ಬಾರ್ ಸಹಿತ), ವಯಸ್ಕರ ಶಿಕ್ಷಣ ವಿಭಾಗ, ಮುದ್ರಣ ವಿಭಾಗ ಇತ್ಯಾದಿಗಳೆಲ್ಲ ಅಡಕವಾಗಿವೆ. ಬ್ಯಾಂಕು, ಅಂಚೆ ಕಛೇರಿ, ಪುಸ್ತಕದ ಅಂಗಡಿಗಳೂ ಅಲ್ಲಿ ಸೇರಿವೆ. ವಿದ್ಯಾರ್ಥಿಗಳಿಗೆ ಆವಶ್ಯಕವಾದ ಎಲ್ಲ ಸೌಲಭ್ಯಗಳೂ ಅಲ್ಲಿ ದೊರೆಯುತ್ತವೆ.

ನನ್ನ ಕಾರ್ಯಕ್ರಮದ ಪ್ರಕಾರ ಶನಿವಾರ ಕಿಂಗ್‌ಸ್ಟನ್ ನಗರದ ಸಮೀಪದಲ್ಲಿಯೇ ಇರುವ ನೀಲಿ ಬೆಟ್ಟದ ಮೇಲಿನ ವಿಶ್ವವಿದ್ಯಾನಿಲಯದ ಅತಿಥಿಗೃಹಕ್ಕೆ ಹೋಗಿದ್ದೆ. ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿರುವ ಮಾನ್‌ಸಿಂಗ್ ಅವರ ಮುಂದಾಳತ್ವದಲ್ಲಿ ಈ ಪ್ರವಾಸ ಏರ್ಪಾಡಾಗಿತ್ತು. ನಮ್ಮ ಜೊತೆಗೆ ಸಹಾಯಕ ಕುಲಸಚಿವೆ ಶ್ರೀಮತಿ ಮೇರಿ ಮೋರ್ಗಾನ್, ಶ್ರೀ ಮತ್ತು ಶ್ರೀಮತಿ ಟೆರ್ರಿ ಮತ್ತು ಕೆಲವರು ಅಧ್ಯಾಪಕರಿದ್ದರು. ಇಲ್ಲೆಲ್ಲ ಶನಿವಾರ, ಭಾನುವಾರ ಎರಡು ದಿನಗಳೂ ರಜೆಯಾದ್ದರಿಂದ ವಾರದ ಕೊನೆಯನ್ನು ಅತಿ ಆನಂದದಿಂದ ಇವರೆಲ್ಲ ಸ್ವಾಗತಿಸುತ್ತಾರೆ. ಸ್ವಂತ ವಾಹನಗಳಲ್ಲಿ ದೂರದ ಸಮುದ್ರದಂಡೆಗೋ, ಬೆಟ್ಟಗಳ ಮೇಲಿನ ರಮಣೀಯ ಸ್ಥಳಕ್ಕೋ ಹೋಗಿ ಕಾಲ ಕಳೆಯುವುದು ಇವರ ರೂಢಿ. ವಿಶ್ವವಿದ್ಯಾನಿಲಯ ತನ್ನ ಉದ್ಯೋಗಿಗಳ ವಿಹಾರಕ್ಕಾಗಿಯೇ ಇಂತಹ ಕಡೆ ಅತಿಥಿಗೃಹಗಳನ್ನು ಏರ್ಪಾಡು ಮಾಡಿದೆ. ನೀಲಿ ಬೆಟ್ಟದ ಮೇಲಿರುವ ಈ ಅತಿಥಿ

ಗೃಹಕ್ಕೆ ಹೋಗುವಾಗ ಬೆಟ್ಟವನ್ನು ಬಳಸಿ, ಸುತ್ತಿ ಹೋಗಬೇಕು. ದಾರಿಯುದ್ದಕ್ಕೂ ಮನೋಹರವಾದ ಕಣಿವೆಗಳು ಕಣ್ಣಿಗೆ ಬೀಳುತ್ತವೆ. ನಮ್ಮ ಚಾರ್ಮಾಡಿ ಘಾಟಿನಂತೆ ಕಾಣುತ್ತದೆ. ಎತ್ತ ನೋಡಿದರೂ ಹಸಿರು, ಸಮುದ್ರದ ನೀರೂ ಹಸಿರು. ಬೆಟ್ಟದ ತುದಿಯಲ್ಲಿ ಆಗಾಗ ಮಳೆಯಾಗುತ್ತದೆ. ಕಿಂಗ್‌ಸ್ಟನ್ ನಗರದಲ್ಲಿ ಉರಿ ಬೇಸಗೆಯಂತಿದ್ದರೆ, ಇಲ್ಲಿ ಮಲೆನಾಡಿನಂತೆ ಹವೆ ತಂಪಾಗಿರುತ್ತದೆ. ಬೆಟ್ಟದ ಇಳಿಜಾರುಗಳಲ್ಲಿ ಮನೆ ಮಾಡಿಕೊಂಡಿರುವುದು ಇಲ್ಲಿ ಸಾಮಾನ್ಯ. ಆದ್ದರಿಂದ ಬೆಟ್ಟದ ಮೇಲೆಲ್ಲ ಸದಾ ಕಾರುಗಳು ಹರಿದಾಡುತ್ತಿರುತ್ತವೆ.

ಮನೆಯನ್ನು ಬಿಟ್ಟು ಸುಮಾರು ಹದಿನೈದು ದಿನಗಳಾಗಿದ್ದುವು. ವಿದೇಶದ ಕುತೂಹಲವನ್ನು ಮೀರಿ ಮನೆಗೀಳು ಕಾಡುತ್ತಿತ್ತು. ಅಲ್ಲಿಂದ ಪತ್ರಗಳು ಬರಬೇಕಾದರೆ ಎಷ್ಟು ವಾರಗಳು ಬೇಕೊ ತಿಳಿಯದು. ಮನೆಗೆ ದೂರವಾಣಿಯಲ್ಲಿ ಏಕೆ ಮಾತನಾಡಬಾರದೆಂದು ರೂಮಿನಲ್ಲಿದ್ದ ಫೋನ್ ರಿಸೀವರನ್ನು ಕೈಗೆತ್ತಿಕೊಂಡೆ. ದೂರವಾಣಿ ಕೇಂದ್ರಕ್ಕೆ ಮಾತನಾಡಿ ಮನೆಯ ವಿಳಾಸ ಹೇಳಿ ಮನೆಯ ಫೋನ್ ನಂಬರ್ ಹೇಳಿದೆ. ನಾನು ಈ ಕ್ಷಣವೇ ಮನೆಯವರ ಜೊತೆ ಮಾತನಾಡುವೆನೆಂಬ ಕಲ್ಪನೆಯೂ ಇರಲಿಲ್ಲ. ಏಕೆಂದರೆ ನಾನು ಮೈಸೂರಿನಿಂದ ಲಂಡನ್‌ಗೆ ಫೋನ್ ಮಾಡಬೇಕೆಂದು ಪ್ರಯತ್ನಿಸಿದಾಗ ಕನೆಕ್ಷನ್ ಸಿಕ್ಕಲು ನಮ್ಮ ಎಕ್ಸ್‌ಚೇಂಜ್‌ನವರು ಸುಮಾರು 2–3 ದಿನಗಳಾಗಬಹುದೆಂದಿದ್ದರು. ಆದ್ದರಿಂದ ಫೋನಿನಲ್ಲಿ ಈ ಸಣ್ಣ ದ್ವೀಪ, ಜಮೈಕಾದಿಂದ ಹತ್ತಾರು ಸಾವಿರ ಮೈಲಿಯಾಚೆಯ ನನ್ನ ಮನೆಗೆ ಮಾತನಾಡುವ ದೂರದಾಸೆಯಿಂದಲೇ ಸಾಹಸ ಮಾಡಿದ್ದೆ. ಆದರೆ ದೂರವಾಣಿ ಕೇಂದ್ರದ ಹೆಣ್ಣು ಧ್ವನಿ "ಒಂದು ನಿಮಿಷ ಹಾಗೇ ಇರಿ" ಎಂದು ಹೇಳಿದ್ದನ್ನು ಕೇಳಿ ಆಶ್ಚರ್ಯವಾಯಿತು. ನನ್ನ ರಿಸೀವರ್‌ಗೂ ಮೈಸೂರಿನ ನಮ್ಮ ಮನೆಯ ಫೋನ್‌ಗೂ ಸಂಬಂಧ 'ಟಿಕ್' ಎಂಬ ಶಬ್ದದಿಂದ ಕೂಡಿತ್ತು. ಫೋನ್ ಗಂಟೆ ಬಾರಿಸುತ್ತಿತ್ತು. ಇಲ್ಲಿ ರಿಸೀವರ್ ಹಿಡಿದ ನನ್ನ ಕೈ ನಡುಗುತ್ತಿತ್ತು. ಭಾವೋದ್ರೇಕದಿಂದ ನನಗೂ ಎಲ್ಲಿದ್ದೇನೆಂದೇ ಒಂದು ಕ್ಷಣ ಮರೆತು ಹೋಯಿತು. ಮನೆಯವರ ಧ್ವನಿಯನ್ನು ಕೇಳಿ ರೋಮಾಂಚನವಾಯಿತು. ನಮ್ಮಿಬ್ಬರ ಧ್ವನಿಯೂ ನಡುಗುತ್ತಿತ್ತು. ಆರು ನಿಮಿಷ ಏನು ಮಾತನಾಡಿದೆವೋ ತಿಳಿಯದು, ಒಂದೇ ನಿಮಿಷದಂತೆ ಕಳೆದು ಹೋಯಿತು. ರಿಸೀವರನ್ನು ತಳಗೆ ಇಟ್ಟಾಗ ಸಾವಿರಾರು ಮೈಲಿಗಳಾಚೆಗೆ ಬೀಸಿ ಎಸೆದಂತಾದೆ. ನಾನು ಮಾತನಾಡುತ್ತಿದ್ದಾಗ ಜಮೈಕಾ ವೇಳೆ ಸಂಜೆ 6–30 ಆಗಿತ್ತು. ಮೈಸೂರಿನಲ್ಲಿ ಬೆಳಗಿನ ಜಾವ 4–30 ಆಗಿತ್ತಂತೆ.

ಭಾವುಕರಾದ ವೈದ್ಯರು

ನಾನು ಜಮೈಕಾಗೆ ಬಂದ ಮೇಲೆ ಭಾರತೀಯರನ್ನು ಪರಿಚಯ ಮಾಡಿಕೊಳ್ಳುವ, ಕರ್ನಾಟಕದವರ ಸ್ನೇಹ ಮಾಡಿಕೊಳ್ಳುವ ಕಾರ್ಯ ತ್ವರಿತಗತಿಯಿಂದ

ನಡೆಯುತ್ತಿತ್ತು. ವಿಶ್ವವಿದ್ಯಾನಿಲಯದ ವಲಯದಲ್ಲಿ ಭಾರತೀಯರೆಲ್ಲರಿಗೂ ನಾನು ಬರುವ ವಿಷಯ ಬರುವ ಮೊದಲೇ ತಿಳಿದಿತ್ತು. ಇಲ್ಲಿಯ ನನ್ನ ಕಾರ್ಯಕ್ರಮಗಳ ಪಟ್ಟಿಯಲ್ಲಿ ಅನೇಕ ಭಾರತೀಯರು ಭೋಜನ ಕೂಟಗಳಿಗೆ ಆಹ್ವಾನಿಸಿದ ವಿಷಯ ನಮೂದಾಗಿತ್ತು. ಕರ್ನಾಟಕದ ಅನೇಕ ಜನ ವೈದ್ಯರ ಪರಿಚಯವಾಗ ತೊಡಗಿತು. ಬಸವರಾಜು ಅವರ ಪರಿಚಯವಾದ ತಕ್ಷಣ ಅವರೇ ನೇರವಾಗಿ ನಾನಿದ್ದ ಹೋಟೆಲಿಗೆ ಸಂಸಾರಸಮೇತ ಬಂದು ಮನೆಗೆ ಆಹ್ವಾನಿಸಿದರು. ಬಸವರಾಜು ಕರ್ನಾಟಕದ ಕೃಷ್ಣರಾಜಪೇಟೆ ಕಡೆಯವರು. ಅವರ ಹೆಂಡತಿ ನಮ್ಮ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿಯಾಗಿದ್ದರು. ಬಸವರಾಜು ಅವರ ನೆರವಿನಿಂದ ನನ್ನ ವಾಸ್ತವ್ಯ ಡಾ. ಅಶೋಕ್ ಮತ್ತು ಡಾ. ರಮೇಶ್ ಅವರ ಮನೆಗೆ ಬದಲಾಯಿತು. ಈ ಇಬ್ಬರೂ ಕರ್ನಾಟಕದವರೇ. ಅಶೋಕ್ ಮದುವೆಯಾಗಿದ್ದರೂ ಇಲ್ಲಿ ಒಂಟಿಯಾಗಿದ್ದಾರೆ. ರಮೇಶ್ ಇನ್ನೂ ಬ್ರಹ್ಮಚಾರಿ. ನಾನು ಇವರ ಮನೆಗೆ ಬಂದ ದಿನ ಬೆಂಗಳೂರಿನಿಂದ ಯಾರೋ ಒಬ್ಬರು ಅಶೋಕ್ ಅವರಿಗೆ ಕೆಲವು ಸಾಮಾನು, ತಿಂಡಿ, ಕಾಗದ, ಬಟ್ಟೆ ಮೊದಲಾದವುಗಳನ್ನು ಬೆಂಗಳೂರಿನ ಅವರ ಮನೆಯಿಂದ ತಂದುಕೊಟ್ಟರು. (ಕರ್ನಾಟಕದಿಂದ ಬಹಳ ಜನ ವೈದ್ಯ ಪದವೀಧರರು ಕೆಲಸ ಹುಡುಕಿಕೊಂಡು ಇಲ್ಲಿಗೆ ಬರುತ್ತಾರೆ.) ಆ ಸಾಮಾನುಗಳಲ್ಲಿ ಅಶೋಕ್ ಅವರ ಹೆಂಡತಿ ಮತ್ತು ಮಗು ಮಾತನಾಡಿದ ಟೇಪೂ ಇತ್ತು. ಅದನ್ನು ಅವರು ಹಾಕಿಕೊಂಡು ಯಾವಾಗಲೂ ಭಾವಪೂರಿತರಾಗುತ್ತಿದ್ದರು. ಅವರ ಮಗು ಒಂದೊಂದೇ ಪದವನ್ನು ತೊದಲುತ್ತಾ ಹೇಳುವಾಗ ಇವರು ರೋಮಾಂಚನಗೊಂಡಂತೆ ಕಾಣುತ್ತಿದ್ದರು. ಅವರ ಹೆಂಡತಿಯ ಧ್ವನಿ ವಿರಹದಿಂದ ಕೂಡಿದ್ದಾಗಿತ್ತು. ಇದೆಲ್ಲವನ್ನು ಕೇಳಿ ಅಶೋಕ್ ತಾವಿರುವ ಸ್ಥಳವನ್ನೇ ಮರೆತು ಭಾವುಕರಾಗುತ್ತಿದ್ದರು. ಮನೆಗೀಳು ಹಿಡಿದವರ ಪರಿಸ್ಥಿತಿ ನನಗೆ ಚೆನ್ನಾಗಿ ಅರಿವಾಗಿದ್ದುದರಿಂದ, ಇದನ್ನೆಲ್ಲ ನೋಡಿದಾಗ ಸಹೃದಯಭಾವದಿಂದ ಅವರ ಜೊತೆ ಮಾತನಾಡುತ್ತಿದ್ದೆ. ಅಶೋಕ್ ಅವರೂ ರೂಮಿನ ಬಾಗಿಲು ಹಾಕಿಕೊಂಡು ತಮ್ಮ ಹೆಂಡತಿಗೆ ಕಳುಹಿಸಲು ಇಂಥದೇ ಒಂದು ಟೇಪು ರೆಕಾರ್ಡು ಮಾಡಿದರು. ಅದರಲ್ಲಿ ಇವರು ಜಮೈಕಾದ ಸೌಂದರ್ಯವನ್ನು ಕವಿಯಂತೆ ವಿವರಿಸಿದ್ದರು. ತಮ್ಮ ಪರಿಸ್ಥಿತಿಯನ್ನು ವಿವರಿಸುವಾಗ ನಮ್ಮ ವಿಷಯವನ್ನೆಲ್ಲ ಹೇಳಿದ್ದರು.

ರಮೇಶ್ ಅವರಿಗೆ ಹೆಂಡತಿ ಮಕ್ಕಳಿಲ್ಲದ್ದರಿಂದ ತಂದೆತಾಯಿಗಳನ್ನು ನೆನೆಸಿಕೊಂಡು, ಮೌನಿಯಾಗುತ್ತಿದ್ದರು. ಇವರ ತಂದೆ ಶಿವಮೊಗ್ಗ ಜಿಲ್ಲೆಯಲ್ಲಿ ದೊಡ್ಡ ಜಮೀನ್ದಾರರಂತೆ. ಅಣ್ಣಂದಿರೆಲ್ಲ ದೊಡ್ಡ ದೊಡ್ಡ ಸರ್ಕಾರಿ ಹುದ್ದೆಗಳಲ್ಲಿದ್ದಾರೆ. ಒಬ್ಬ ಅಣ್ಣ ಅಮೆರಿಕದಲ್ಲಿ ವೈದ್ಯರಾಗಿದ್ದಾರೆ. ಪ್ರತಿದಿನ ಎರಡು ಸಾವಿರದಷ್ಟು ಡಾಲರುಗಳನ್ನು ಸಂಪಾದಿಸುತ್ತಾರಂತೆ. ರಮೇಶ ಕೆಲವು ಸಾರಿ ಹುಚ್ಚನಂತೆ, ಈ ಹಾಳು ದೇಶಕ್ಕೆ ಏಕೆ ಬಂದೆ, ಈ ಹಾಳು ಜೀವನ ಸಾಕು, ಊರಿಗೆ ಹೊರಟುಹೋಗುತ್ತೇನೆ

ಎಂದು ಹೇಳುತ್ತಿದ್ದರು. ಸದಾ ಏನಾದರೂ ಊರಿನ ಸಂಗತಿಯನ್ನು ನಮ್ಮ ಜೊತೆ ಹೇಳುತ್ತಾ ಇರುತ್ತಿದ್ದರು. ಇವರು ಭಾವಗೀತೆ, ಸಿನಿಮಾ ಹಾಡುಗಳನ್ನು ಸೊಗಸಾಗಿ ಹಾಡುತ್ತಾರೆ. ಬೇಸರವಾದಾಗಲ್ಲ ಇವರು ಕನ್ನಡ ಗೀತೆಗಳನ್ನು ಹಾಡುತ್ತಿದ್ದರು; ಹಾಡಿ ಟೇಪ್ ಮಾಡುತ್ತಿದ್ದರು. ರಮೇಶನನ್ನು ಅಮೆರಿಕೆಗೆ ಕರೆಸಿಕೊಳ್ಳಬೇಕೆಂಬುದು ಅವರ ಅಣ್ಣನ ಆಸೆ. ತಮ್ಮ ಹುಚ್ಚನಂತಾಡುವುದನ್ನು ತಿಳಿದಿದ್ದ ಅವರ ಅಣ್ಣ ಪ್ರತಿದಿನ ತಮ್ಮನಿಗೆ ಫೋನ್ ಮಾಡಿ ವಿಚಾರಿಸುತ್ತಿದ್ದರು. ತಿಂಗಳಿಗೊಮ್ಮೆ ಅಮೇರಿಕೆಯಿಂದ ಹೆಂಡತಿ ಜೊತೆ ಬಂದು ತಮ್ಮನನ್ನು ನೋಡಿಕೊಂಡು, ಬೇಕಾದ ಸಾಮಾನುಗಳನ್ನು ಕೊಟ್ಟು ಹೋಗುತ್ತಾರೆ. ತಮ್ಮನನ್ನು ಪ್ರೋತ್ಸಾಹಿಸುವುದಕ್ಕಾಗಿ ತಮ್ಮಲ್ಲಿರುವ ಮೂರು ಕಾರುಗಳಲ್ಲಿ ಒಂದನ್ನು ಇವರಿಗೆ ಕಳುಹಿಸಿಕೊಡುವುದಾಗಿ ಹೇಳಿದ್ದಾರೆ. ಒಂದು ಮನೆಯನ್ನೂ ಇವರಿಗಾಗಿ ಮಾಡಿದ್ದಾರೆ. ಇಷ್ಟೆಲ್ಲಾ ಸಂಪತ್ತುಗಳ ಆಕರ್ಷಣೆಯೂ ರಮೇಶನನ್ನು ಪಾಶ್ಚಿಮಾತ್ಯ ಸಂಸ್ಕೃತಿಗೆ ಕಟ್ಟಿಹಾಕಲು ಅಸಮರ್ಥವಾಗಿತ್ತು. ಹಳ್ಳಿಯಲ್ಲಿ ತಮ್ಮ ತಾಯಿ ಮಾಡುವ ಕೋಳಿ ಸಾರು, ರಾಗಿ ಮುದ್ದೆಯ ಮುಂದೆ ಇವೆಲ್ಲ ಕ್ಷುಲ್ಲಕವಾದವುಗಳು ಎಂದು ಹೇಳುತ್ತಿದ್ದರು. ನಾವೇ ಕೆಲವು ಸಾರಿ ಅವರಿಗೆ ಸಮಾಧಾನ ಹೇಳಬೇಕಾಗುತ್ತಿತ್ತು.

ಅಶೋಕ ಮತ್ತು ರಮೇಶರುಗಳ ಸ್ನೇಹ ನನಗೆ ಪರದೇಶದಲ್ಲಿ ಒಂಟಿ ಬದುಕಿನ ಬಂಜರುತನವನ್ನು ನೀಗಿತ್ತು. ಕೆಲವೊಮ್ಮೆ ಇವರು ವೈದ್ಯರೋ, ಭಾವುಕರಾದ ವಿರಾಗಿಗಳೋ ಎನ್ನುವ ಸಂಶಯ ಮೂಡುತ್ತಿತ್ತು. ಇವರು ಸಂಗ್ರಹಿಸಿ ಇಟ್ಟುಕೊಂಡಿದ್ದ ಕನ್ನಡ ಸಿನಿಮಾ ಹಾಡುಗಳ ಮತ್ತು ಭಾವಗೀತೆಗಳ ಟೇಪುಗಳನ್ನು ಹಾಕಿಕೊಂಡು, ಹರಟೆಹೊಡೆಯುತ್ತಾ ಜಮೈಕಾದ ಕಿಂಗ್‌ಸ್ಟನ್‌ನಲ್ಲಿ ಪುಟ್ಟ ಕರ್ನಾಟಕವನ್ನು ಸೃಷ್ಟಿಸಿಕೊಂಡಿದ್ದೆವು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿದ್ದ ಮಲ್ಲಿಕಾರ್ಜುನಪ್ಪನವರ ಮಗ, ಸತ್ಯಪ್ರಕಾಶ ಎಂಬುವರೂ ಇಲ್ಲಿ ವೈದ್ಯರಾಗಿದ್ದಾರೆ. ಇವರೂ ನನ್ನನ್ನು ಒಂದು ದಿನ ಔತಣಕೂಟಕ್ಕೆ ಆಹ್ವಾನಿಸಿದ್ದರು. ಕುಟುಂಬಸಮೇತರಾಗಿ ಸ್ವಂತ ಕಾರಿನಲ್ಲಿ ಬಂದು ಮನೆಗೆ ಕರೆದುಕೊಂಡು ಹೋದರು. 7–8 ಜನ ವೈದ್ಯ ಮಿತ್ರರು ಅಲ್ಲಿಗೆ ಬಂದಿದ್ದರು; ಎಲ್ಲರೂ ಕನ್ನಡಿಗರು. ಅಚ್ಚಕನ್ನಡದ ವಾತಾವರಣ ಸೃಷ್ಟಿಯಾಗಿತ್ತು. ಕನ್ನಡ ಸಾಹಿತ್ಯ, ಕರ್ನಾಟಕದ ರಾಜಕೀಯ, ಭ್ರಷ್ಟಾಚಾರಗಳಿಂದ ಮೊದಲಾಗಿ ಮಾತುಕತೆ ರಾತ್ರಿ ಸುಮಾರು 12 ಘಂಟೆಯ ವರೆಗೆ ಸಾಗಿತು. ಸತ್ಯಪ್ರಕಾಶ್ ಒಳ್ಳೆಯ ವಿನೋದಶೀಲರು. ಅವರಿಗೆ ಕನ್ನಡದಲ್ಲಿ ಬರೆಯಲು, ಹಾಡಲು ಬರುತ್ತದೆ. ಒಂದು ವಿರಹದ ಸಮಯದಲ್ಲಿ (ಹೆಂಡತಿ ಇನ್ನೂ ಇಲ್ಲಿಗೆ ಬಾರದಿದ್ದಾಗ) ಬರೆದ ಒಂದು ಗದ್ಯರೂಪದ ಕವಿತೆ ಓದಿದರು. ರಮೇಶ ಭಾವಗೀತೆ, ಸಿನಿಮಾ ಹಾಡು ಹಾಡಿದರು. ದೂರದ ನಾಡಿನಲ್ಲಿ ಏರ್ಪಟ್ಟ ಕನ್ನಡ ಸಮಾರಂಭ ಇದು ಎಂಬ ಭಾವನೆ ನಮಗೆಲ್ಲರಿಗೂ ಮೂಡಿತ್ತು.

ಕರಿಯರ ಔತಣಕೂಟಗಳಲ್ಲಿ

ನನ್ನ ಕಾರ್ಯಕ್ರಮದ ಪಟ್ಟಿಯಲ್ಲಿ ಮೊದಲೇ ಸೇರಿಹೋಗಿದ್ದ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ, ಅಧಿಕಾರಿಗಳ ಮನೆಗಳ ಔತಣಕೂಟಗಳಲ್ಲಿ ಕುತೂಹಲಕ್ಕಾಗಿ ಭಾಗವಹಿಸಿದೆ. ಇವರೆಲ್ಲ ಸಾಮಾನ್ಯವಾಗಿ ಕರಿಯರು. ಇವರು ಅತಿಥಿಗಳನ್ನು ಸತ್ಕರಿಸುವ ಸಂಪ್ರದಾಯ ಮತ್ತು ಇವರು ಚಿರಪರಿಚಿತರಲ್ಲದವರಲ್ಲಿಯೂ ತೋರುವ ವಿಶ್ವಾಸ ನನ್ನನ್ನು ಆಕರ್ಷಿಸಿದುವು.

ವಿಶ್ವವಿದ್ಯಾನಿಲಯದ ಭಾಷಾಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿರುವ ಅಲೆಯ್ನ್ ಅವರು ನಿಗದಿಯಾದ ದಿನ ಸಂಜೆ ನಾನಿದ್ದ ಮನೆಗೆ ಬಂದು ತಮ್ಮ ಮನೆಗೆ ಕರೆದುಕೊಂಡು ಹೋದರು. ಆ ದಿನ ಮಧ್ಯಾಹ್ನವೇ ದೂರವಾಣಿಯ ಮೂಲಕ ಸಂಜೆ ಬಂದು ಕರೆದುಕೊಂಡು ಹೋಗುವುದಾಗಿ ತಿಳಿಸಿದ್ದರು. ಅವರಿಗೆ ಅವರ ಮುಖ ಪರಿಚಯವೇ ನನಗಿರಲಿಲ್ಲ. ಮನೆಯ ಮುಂದೆ ಕಾರು ಬಂದು ನಿಂತಾಗ, ಭಾರತೀಯರಂತೆ ಜುಬ್ಬಧಾರಿಯಾದ ನಡುವಯಸ್ಕರನ್ನು ಕಂಡು ನನಗೆ ತಕ್ಷಣ ಇವರೇ ಅಲೆಯ್ನ್ ಎಂದು ತಿಳಿಯಲಿಲ್ಲ. ಅವರೇ ಪರಿಚಯಿಸಿಕೊಂಡನೇಲೆ ಕರಿಯರ ಬಗ್ಗೆ ಇದ್ದ ನನ್ನ ರೂಪಕಲ್ಪನೆ ಬದಲಾಯಿತು.

ಶ್ರೀ ಮತ್ತು ಶ್ರೀಮತಿ ಅಲೆಯ್ನ್ ಮತ್ತು ಅವರ ಸೋದರಿ ಅತ್ಯಂತ ವಿಶ್ವಾಸದಿಂದ ನನ್ನನ್ನು ತಮ್ಮ ಮನೆಗೆ ಸ್ವಾಗತಿಸಿದರು. ಅಲೆಯ್ನ್ ಅವರ ಸೋದರಿ ಮೈಸೂರಿನಲ್ಲಿ ಕೇಂದ್ರ ಆಹಾರ ಸಂಶೋಧನ ಸಂಸ್ಥೆಯಲ್ಲಿ ನಡೆದ ಯಾವುದೋ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕಾಗಿ ಒಂದು ಸಾರಿ ಭಾರತಕ್ಕೆ ಬಂದಿದ್ದರಂತೆ. ಅಲೆಯ್ನ್ ಅವರು ಟ್ರಿನಿಡಾಡ್ ದ್ವೀಪದವರು. ಹಿಂದೂಗಳ ಸಂಪ್ರದಾಯ, ರೀತಿನೀತಿ ತೀರ ಪರಿಚಿತವಿದ್ದವರು. ಔತಣಕ್ಕೆ ಬ್ರಿಟಿಷ್ ಡೆಪ್ಯೂಟಿ ಹೈಕಮೀಷನರ್ ಅವರನ್ನೂ ಅವರ ಪತ್ನಿಯನ್ನೂ ಆಹ್ವಾನಿಸಿದ್ದರು. ಡೆಪ್ಯೂಟಿ ಹೈಕಮೀಷನರ್ ಅವರ ಪತ್ನಿ ಭಾರತೀಯರು. ಭಾರತದ ಯಾವ ಭಾಗದವರೆಂದು ನಾನು ಕೇಳಿದರೂ ಆಕೆ ಸ್ಪಷ್ಟವಾಗಿ ತಿಳಿಸಲಿಲ್ಲ. ಭಾರತದ ಬಗ್ಗೆ ಆಕೆಗೆ ಅಷ್ಟಾಗಿ ಅಭಿಮಾನ ಇದ್ದಂತಿರಲಿಲ್ಲ. ಬಿಳಿಯನನ್ನು ಮದುವೆಯಾದ ಹೆಂಗಸಿಗೆ ಹೇಗೆ ತಾನೆ ಭಾರತದ ಬಗ್ಗೆ ಅಭಿಮಾನವಿದ್ದೀತು ? ಆದರೆ ಆಕೆಯ ವೇಷ ಭಾರತೀಯವಾಗಿತ್ತು.

ಅಲೆಯ್ನ್ ಅವರ ಮನೆ ಒಂದು ಭವ್ಯ ಬಂಗಲೆಯಂತೆಯೇ ಇದೆ. ಇದು ನೀಲಿ ಬೆಟ್ಟದ ಇಳಿಜಾರಿನಲ್ಲಿದೆ. ಇಲ್ಲಿಂದ ಕಿಂಗ್ಸ್‌ಟನ್ ನಗರ ಸಂಪೂರ್ಣವಾಗಿ ಕಾಣುತ್ತದೆ. ಅಲೆಯ್ನ್ ಅವರ ಮನೆಯ ಹೊರಾಂಗಣ ತುಂಬಾ ಮನೋಹರವಾಗಿದೆ. ಮನೆಯ ಒಳಗಣ ಒಪ್ಪಓರಣ, ಕಲೆಗಾರಿಕೆಗಳನ್ನು ನೋಡಿ ಆಶ್ಚರ್ಯವೇ ಆಯಿತು. ಕರಿಯರ ಬಗ್ಗೆ ಇದ್ದ ನನ್ನ ಕಲ್ಪನೆಗಳೆಲ್ಲ ಹಾರಿಹೋದುವು. ಬಿಳಿಯರಿಗಾಗಲಿ, ಜಗತ್ತಿನ ಯಾವ ನಾಗರಿಕ ಜನಾಂಗದವರಿಗೇ ಆಗಲಿ ಇವರು ಕಡಿಮೆಯಿಲ್ಲ

ಎನ್ನಿಸಿತು. ಇವರು ಟ್ರಿನಿಡಾಡ್‌ನಲ್ಲಿ ಹಿಂದೂಗಳ ನಡುವೆಯೇ ವಾಸಿಸುತ್ತಿದ್ದುದರಿಂದ ಅನೇಕ ಹಿಂದೂ ಹೆಸರುಗಳು, ಚಟುವಟಿಕೆಗಳು ಇವರಿಗೆ ತಿಳಿದಿದೆ.

ಅತಿಥಿಗಳ ಪರಸ್ಪರ ಪರಿಚಯದೊಂದಿಗೆ ಪ್ರಾರಂಭವಾಗುವ ಔತಣಕೂಟದಲ್ಲಿ ಪಾನೀಯ ಸಾಮಾನ್ಯವಾದ ಭಾಗ. ಅವರವರಿಗೆ ಬೇಕಾದ ಪಾನೀಯಗಳನ್ನು ಅಭ್ಯಾಗತರು ಒದಗಿಸಿದ ಮೇಲೆ, ಪಾನೀಯದ ಜೊತೆ ಮಾತುಕತೆಗಳು ಸಾಗುತ್ತವೆ. ಭಾರತೀಯ ಸಾಮಾಜಿಕ ಪದ್ಧತಿ, ಸಂಸ್ಕೃತಿಗಳ ಬಗ್ಗೆ ಆಸಕ್ತಿಯಿಂದಲೇ ಅಲೆಯ್ನ್ ದಂಪತಿಗಳು ಕೇಳಿದರು. ಡೆಪ್ಯೂಟಿ ಹೈಕಮೀಷನರ್ ಅವರ ಪತ್ನಿ ನನ್ನ ಜೊತೆ ವಿಶ್ವಾಸದಿಂದಲೇ ಮಾತಾಡಿದರು. ಸಾಮಾನ್ಯವಾಗಿ ಇಂತಹ ಸಮಾರಂಭಗಳಲ್ಲಿ ಕುಳಿತುಕೊಳ್ಳುವ ಕುರ್ಚಿಗಳಿಗೆ ಅತಿಥಿಗಳ ಹೆಸರನ್ನು ಬರೆದಿಡುತ್ತಾರೆ. ಹೀಗೆ ಬರೆಯುವಾಗ ಗಂಡಸರ ಪಕ್ಕದಲ್ಲಿ ಹೆಂಗಸರು ಇರುವಂತೆ ಮತ್ತು ಬೇರೆ ಬೇರೆಯವರು ಒಟ್ಟಿಗೆ ಕೂರುವಂತೆ ಏರ್ಪಡಿಸಿರುತ್ತಾರೆ. ಮಾತುಕತೆಗಳಲ್ಲಿ ಅತಿಥಿಗಳ ವಿಶೇಷ ಅನುಭವಗಳು, ಸಂಪ್ರದಾಯಗಳು ಬರುತ್ತವೆ. ಗಂಭೀರವಾದ ವಿಷಯಗಳೇನೂ ಇಲ್ಲಿ ಇರುವುದಿಲ್ಲ. ಒಟ್ಟಿನಲ್ಲಿ ಔತಣಕ್ಕೆ ಸಹಾಯಕವಾಗಿ ಲಘುವಾದ, ತಮಾಷೆಯ ವಿಷಯಗಳೇ ಹೆಚ್ಚು. ಭೋಜನ ವಿವಿಧ ಮಾಂಸದ ಭಕ್ಷ್ಯಗಳು, ತರಕಾರಿ ಪಲ್ಯಗಳು ಹಣ್ಣುಗಳಿಂದ ನಿಧಾನವಾಗಿ ಸಾಗುತ್ತದೆ. ರಾತ್ರಿ ಸುಮಾರು 10.30ಕ್ಕೆ ಭೋಜನ ಮುಗಿಸಿ ಮನೆಗೆ ಹೊರಟೆವು. ಅಲೆಯ್ನ್ ಅವರು ನನ್ನನ್ನು ಕರೆದುಕೊಂಡು ಮನೆಗೆ ಬಿಡುವುದಕ್ಕೆ ಹೊರಟಾಗ ಡೆಪ್ಯೂಟಿ ಹೈಕಮೀಷನರ್ ತಾವೇ ಬಿಡುವುದಾಗಿ ಹೇಳಿ, ಕರೆದುಕೊಂಡು ಬಂದು ಮನೆಗೆ ತಲಪಿಸಿ ಹೋದರು. ಈ ದಂಪತಿಗಳು ಎಲ್ಲಿಯೂ ತಮ್ಮ ಹುದ್ದೆಯ ಉನ್ನತಿಕೆಯನ್ನು ತೋರಿಸಿಕೊಳ್ಳಲು ಪ್ರಯತ್ನಿಸಲಿಲ್ಲ.

ವಿಶ್ವವಿದ್ಯಾನಿಲಯದಲ್ಲಿ ಪ್ರೊ ವೈಸ್ ಚಾನ್ಸಲರ್ ಆಗಿರುವ ಎಲ್.ಆರ್. ಬಿ. ರಾಬಿನ್‌ಸನ್ ಅವರೂ ಒಂದು ದಿನ ಭೋಜನಕೂಟಕ್ಕೆ ಆಹ್ವಾನಿಸಿದ್ದರು. ರಾಬಿನ್‌ಸನ್ ಅವರು ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಮತ್ತು ಈಗ ಅವರು ಯೋಜನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯರಾಗಿ ಕೆಲಸ ಮಾಡುತ್ತಿದ್ದಾರೆ. ನಾನು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಯೋಜನೆ ಮತ್ತು ಅಭಿವೃದ್ಧಿ ವಿಭಾಗಕ್ಕೆ ಸೇರಿದವನಾದ್ದರಿಂದ ನನ್ನ ಯೋಗಕ್ಷೇಮ ಮತ್ತು ಕಾರ್ಯಕ್ರಮಗಳ ಏರ್ಪಾಡುಗಳನ್ನು ರಾಬಿನ್‌ಸನ್ ಅವರು ವಹಿಸಿಕೊಂಡಿದ್ದರು. ಅವರ ವಿಭಾಗದಲ್ಲೇ ನನಗೊಂದು ಸುಸಜ್ಜಿತ ಕೊಠಡಿ ಕೊಟ್ಟಿದ್ದರು.

ರಾಬಿನ್‌ಸನ್ ತುಂಬಾ ಸರಳಸ್ವಭಾವದ ಮತ್ತು ವಿಶ್ವಾಸದ ವ್ಯಕ್ತಿ. ನನ್ನ ಬಗ್ಗೆ ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದರು. ಜಮೈಕಾದಲ್ಲಿ ಇದ್ದಷ್ಟು ಕಾಲ ಅವರ ಕಾರು, ಮನೆಗಳಿಗೆ ನಾನು ಒಗ್ಗಿಹೋಗಿದ್ದೆ. ಬಿಡುವಾದಾಗಲೆಲ್ಲ ನಾನಿದ್ದ ಮನೆಗೆ ಬಂದು ತಮ್ಮ ವಾಹನದಲ್ಲಿ ಊರು ಸುತ್ತುವುದಕ್ಕಾಗಿ ಕರೆದುಕೊಂಡು ಹೋಗುತ್ತಿದ್ದರು.

ಆ ದಿನ ರಾಬಿನ್‌ಸನ್ ಅವರು ಇನ್ನೂ ಕತ್ತಲೆಯಾಗುವ ಮೊದಲೇ ಬಂದು ನನ್ನನ್ನು ನೀಲಿ ಬೆಟ್ಟದ ಮೇಲಕ್ಕೆ ಕರೆದುಕೊಂಡುಹೋಗಿ ಕಿಂಗ್‌ಸ್ಟನ್ ನಗರದ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ ನೀಡಿ ವಿವರಿಸಿದರು. ಅವರು ವಿವರಣೆ ನೀಡುವಾಗ ಅನ್ಯಮನಸ್ಕತೆ ತೋರಿದರೆ ಹೆಗಲ ಮೇಲೆ ಕೈ ಹಾಕಿಯೋ, ತೋಳನ್ನು ಅಲುಗಿಸುತ್ತಲೋ ನಮ್ಮ ಗಮನವನ್ನು ತಮ್ಮ ಮಾತಿನ ಕಡೆಗೆ ಸೆಳೆದು ಕೊಳ್ಳುವುದು ಅವರ ಅಭ್ಯಾಸ. ಮಾತನಾಡುವಾಗ, ನುರಿತ ಉಪಾಧ್ಯಾಯರಾಗಿದ್ದ ರಿಂದ ಧ್ವನಿಗಳ ಏರಿಳಿತದಿಂದ ಏಕತಾನತೆಯನ್ನು ಪರಿಹರಿಸಿ, ಮನದಟ್ಟಾಗುವಂತೆ ಪುನರುಕ್ತಿಗಳಿಂದ ಒತ್ತು ಕೊಡುತ್ತಾರೆ. ಅವರ ವರ್ತನೆ ಮತ್ತು ನಡವಳಿಕೆಗಳು ಅವರು ನನ್ನ ಹಿತೈಷಿ ಎಂಬ ಭಾವನೆ ಮೂಡಿಸುತ್ತಿದ್ದವು.

ಬೆಟ್ಟದ ತಪ್ಪಲಿನಲ್ಲಿರುವ ರಾಬಿನ್‌ಸನ್ ಅವರ ಮನೆ ಭವ್ಯವಾಗಿ ಇದೆ. ಮನೆಯ ಒಳಗೆ ಮೆತ್ತನೆಯ ಜಮಖಾನೆ ಹಾಕಿ, ಕಲಾಕೃತಿಗಳಿಂದ ಅಲಂಕಾರ ಮಾಡಿ ಸುಂದರಗೊಳಿಸಿದ್ದಾರೆ. ಶ್ರೀಮತಿ ರಾಬಿನ್‌ಸನ್ ಅವರು ಪುಸ್ತಕ ಭಂಡಾರದ ಅಧಿಕಾರಿಯಾಗಿದ್ದಾರೆ. ಅವರು ಕರಿಯರಾದರೂ ಅವರ ಮುಖಚರ್ಯೆ ಭಾರತೀಯ ಸ್ತ್ರೀಯಂತೆಯೇ ಇತ್ತು. ಭೋಜನಕ್ಕೆ ಬೇರೆ ಇಬ್ಬರನ್ನು ಆಹ್ವಾನಿಸಿ ದ್ದರು. ಭೋಜನ ಚೆನ್ನಾಗಿತ್ತು. ನಾವೆಲ್ಲ ಮನೆಗೆ ಹೋಟಾಗ ರಾಬಿನ್‌ಸನ್ ಅವರು ಭೋಜನಕ್ಕೆ ಬಂದಿದ್ದ ಮತ್ತೊಬ್ಬ ಹೆಂಗಸನ್ನು ಹಣೆಗೆ ಮುತ್ತಿಟ್ಟು ಬೀಳ್ಕೊಟ್ಟರು. ಅಪರೂಪಕ್ಕೆ ಭೇಟಿಯಾಗುವ ಸ್ತ್ರೀಯರಿಗೆಲ್ಲ ಇವರು ಹಣೆಗೆ ಮುತ್ತಿಟ್ಟೇ ಸ್ವಾಗತಿಸುತ್ತಿದ್ದರು ಮತ್ತು ಬೀಳ್ಕೊಡುತ್ತಿದ್ದರು.

ಜಮೈಕಾದಲ್ಲಿರುವ ಇಂಡಿಯನ್ ಹೈಕಮೀಷನರ್ ಅವರು ನನ್ನನ್ನು ಒಂದು ದಿನ ಪಾನಗೋಷ್ಠಿಗೆ (ಕಾಕ್‌ಟೈಲ್ ಪಾರ್ಟಿ) ಆಹ್ವಾನಿಸಿದ್ದರು. ಇವರ ಹೆಸರು ಮ್ಯಾನರ್ಸ್ ಎಂದು ತಿಳಿಯಿತು. ಇವರು ಉತ್ತರ ಭಾರತದವರು. ಈ ಪಾನಗೋಷ್ಠಿಗೆ ಸುಮಾರು 50 ಜನ ಗಣ್ಯ ವ್ಯಕ್ತಿಗಳು, ಅಧಿಕಾರಿಗಳು ಆಹ್ವಾನಿತರಾಗಿದ್ದರು. ವಿಶ್ವವಿದ್ಯಾನಿಲಯದ ಕುಲಸಚಿವರಾದ ಜಾಕ್‌ಮನ್ ಕೂಡ ಬಂದಿದ್ದರು. ರಾಬಿನ್‌ಸನ್ ಮತ್ತು ನಾನು ಜೊತೆಯಲ್ಲಿ ಹೋಗಿದ್ದೆವು. ಹೋದಾಗ ಪಾನಗೋಷ್ಠಿ ಪ್ರಾರಂಭವಾಗಿತ್ತು. ಮ್ಯಾನರ್ಸ್ ಅವರು ಸ್ವಾಗತಿಸಿ ಪರಿಚಯ ಮಾಡಿಕೊಂಡದ್ದಷ್ಟೇ; ಆ ಮೇಲೆ ಅವರು ಮತ್ತೆ ಮಾತನಾಡಲೇ ಇಲ್ಲ. ಅವರು ಭಾರತೀಯರಿಗಿಂತ ಹೆಚ್ಚಾಗಿ ಸ್ಥಳೀಯ ಜನರ ಜೊತೆಯೇ ಮಾತುಕತೆಯಾಡು ತ್ತಿದ್ದರು. ಭಾರತೀಯ ಡೆಪ್ಯೂಟಿ ಹೈಕಮೀಷನರ್ ಆಗಿರುವ ಒಬ್ಬ ವೃದ್ಧ ಮಹಿಳೆ ನನ್ನ ಜೊತೆ ಬಹು ವಿಶ್ವಾಸದಿಂದ ಮಾತನಾಡಿದರು. ಜಮೈಕಾದ ಬಗ್ಗೆ ನನ್ನ ಅಭಿಪ್ರಾಯ ಕೇಳಿದಾಗ ನಾನು ಜಮೈಕನರ ಬಗ್ಗೆ ಸ್ವಲ್ಪ ಹೊಗಳಿಕೆಯ ಮಾತನಾಡಿದೆ. ಆಗ ಈಕೆ ಕಿವಿಯ ಹತ್ತಿರ ಪಿಸುಗುಟ್ಟುತ್ತಾ, ಈ ಜನ ಹೇಳಿ ಕೊಳ್ಳುವಂಥ ಬುದ್ಧಿವಂತರೂ ಅಲ್ಲ, ನಿಷ್ಠಾವಂತರೂ ಅಲ್ಲ ಎಂದು ಹೇಳಿದರು.

ವಿಶ್ವವಿದ್ಯಾನಿಲಯದ ಕುಲಸಚಿವರಾದ ಜಾಕ್ಸನ್ ಅವರ ಮನೆಯಲ್ಲೂ ಒಂದು ದಿನ ಭೋಜನಕೂಟ ಏರ್ಪಾಟಾಗಿತ್ತು. ವಿಶ್ವವಿದ್ಯಾನಿಲಯದ ಕೆಲವು ಅಧಿಕಾರಿಗಳು ಬಂದಿದ್ದರು. ಇಂಡಿಯನ್ ಹೈಕಮೀಷನರ್, ಶ್ರೀ ಮತ್ತು ಶ್ರೀಮತಿ ಪ್ಯಾನರ್ಸ್ ಕೂಡ ಬಂದಿದ್ದರು. ಪ್ಯಾನರ್ಸ್ ಅವರ ಎರಡು ದಿನಗಳ ಮಾತುಕತೆ, ನಡವಳಿಕೆಯಿಂದ ಅವರು ಭಾರತೀಯ ಪ್ರತಿನಿಧಿಯಂತೆ ನನಗೆ ಕಾಣಲಿಲ್ಲ. ಭಾರತದ ಸಂಸ್ಕೃತಿ, ಹಿರಿಮೆಗಳು ಈತನಿಗೆ ಗೊತ್ತಿದ್ದಂತೆ ಕಾಣಲಿಲ್ಲ. ಇಲ್ಲಿಯ ಜನರ ಮನ ಒಲಿಸುವ ಏಕೋದ್ದೇಶದವರಂತೆ ಆತ ನನಗೆ ಕಂಡರು. ಭಾರತದ ಬಗ್ಗೆಯಾಗಲಿ, ಹಿಂದೂ ಸಂಪ್ರದಾಯಗಳ ಬಗ್ಗೆ ಯಾಗಲಿ ಇವರು ಒಂದು ಮಾತೂ ಆಡಿದುದನ್ನು ನಾನು ಕೇಳಲಿಲ್ಲ.

ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಉದ್ಯೋಗಿಗಳು ನನಗಾಗಿ ಒಂದು ದಿನ ಭೋಜನಕೂಟ ಏರ್ಪಡಿಸಿದ್ದರು. ಸುಮಾರು 15–20 ಜನ ಈ ಭೋಜನಕೂಟಕ್ಕೆ ಸೇರಿದ್ದರು. ಕರ್ನಾಟಕದ ಒಂದಿಬ್ಬರು ಇಲ್ಲಿ ಇದ್ದರು. ಡಾ. ನಾರಾಯಣರಾವ್, ಯುನೆಸ್ಕೊ ಸಂಸ್ಥೆಯ ಪರವಾಗಿ ಇಲ್ಲಿ ಇಂಜನಿಯರ್ ಆಗಿರುವ ಕೆ. ಕೆ. ಮೂರ್ತಿ, ಡಾ. ಚಾರ್ ಮೊದಲಾದವರು ಕನ್ನಡದವರು. ಭಾರತ ಸರ್ಕಾರದ ಎನರ್ಜಿ ಕಮಿಷನ್‌ನಿಂದ ಬಂದಿದ್ದ ಡಾ. ಶಂಕರ್ ಮತ್ತು ಭಿಡೆ ಅವರೂ ಆಹ್ವಾನಿತರಾಗಿದ್ದರು. ಭಾರತೀಯವಾದ ರೀತಿಯಲ್ಲಿ ಊಟದ ಶುಚಿ, ರುಚಿ ಇತ್ತು. ಮಾಂಸಾಹಾರಗಳೂ ಸೇರಿದ್ದುವು. ಬ್ರಾಹ್ಮಣರೂ ಕೆಲವರು ಮಾಂಸಾಹಾರ ಸ್ವೀಕರಿಸಿದರು. ಆದರೆ ಮತ್ತಿನ ಪಾನೀಯಗಳೇನೂ ಇರಲಿಲ್ಲ.

ಕೆ. ಕೆ. ಮೂರ್ತಿಯವರು ಹೊಳೆನರಸೀಪುರದ ಹಳ್ಳಿಮೈಸೂರಿನವರು. ಅವರ ಹೆಂಡತಿ ಮೈಸೂರಿನಲ್ಲಿ ಎಂ.ಎಸ್‌ಸಿ. ಮಾಡಿದರಂತೆ. ಅವರನ್ನು ಎಲ್ಲಿಯೋ ನೋಡಿದ ಹಾಗಿತ್ತು. ವಿಚಾರಿಸಲಾಗಿ ಅವರೂ ನಾನಿದ್ದ ಸಮಯದಲ್ಲೇ ಮಾಸ್ಟರ್ ಪದವಿಗೆ ಅಭ್ಯಾಸ ಮಾಡುತ್ತಿದ್ದರೆಂದು ತಿಳಿಯಿತು. ಮೂರ್ತಿ ಇಂಗ್ಲೆಂಡಿನಲ್ಲಿದ್ದಾಗ ಡಾ. ಯು. ಆರ್. ಅನಂತಮೂರ್ತಿಯವರೂ ಅಲ್ಲಿದ್ದರಂತೆ. ಅವರು ಅಲ್ಲಿ 'ಸಂಸ್ಕಾರ' ಕಾದಂಬರಿ ಬರೆಯುತ್ತಿದ್ದರು ಎಂದು ಹೇಳಿ, ಅದರಲ್ಲಿ ಅವರು ಬ್ರಾಹ್ಮಣರನ್ನು ಹೀಯಾಳಿಸಿದ್ದಾರೆ ಎಂದರು. ನನ್ನ ಅಭಿಪ್ರಾಯವನ್ನು ಅವರು ಕೇಳಿದಾಗ, ಬ್ರಾಹ್ಮಣರನ್ನು ಪರೋಕ್ಷವಾಗಿ ಉನ್ನತೀಕರಿಸುವುದಕ್ಕಾಗಿ ಶೂದ್ರ ಸಂಸ್ಕೃತಿಯನ್ನು ಹೀಯಾಳಿಸಿದ್ದಾರೆ ಎಂಬ ಅಭಿಪ್ರಾಯವಿದೆ ಎಂದು ಹೇಳಿದೆ. ಆಮೇಲೆ ಅವರು ಆ ಬಗ್ಗೆ ಮಾತನಾಡಲಿಲ್ಲ; ತಮ್ಮ ಹಳ್ಳಿ ಅಲ್ಲಿಯ ಬದುಕುಗಳ ಬಗ್ಗೆ ಮಾತನಾಡಿದರು. ಇವರೂ ಒಂದು ದಿನ ಊಟಕ್ಕೆ ಆಹ್ವಾನಿಸಿದ್ದರು.

ವಿಶ್ವವಿದ್ಯಾನಿಲಯದ ಯೋಜನೆ ಮತ್ತು ಅಭಿವೃದ್ಧಿ ವಿಭಾಗದಲ್ಲಿ ಯೋಜನಾಧಿಕಾರಿಣಿಯಾಗಿ ಕೆಲಸ ಮಾಡುತ್ತಿರುವ ಶ್ರೀಮತಿ ಮೆರ್ಲೆ ಹೆನ್ರಿಯವರ ಮನೆಯಲ್ಲಿ ಒಂದು ದಿನ ಭೋಜನ ಏರ್ಪಾಡಾಗಿತ್ತು. ಈಕೆ ನನ್ನ ದಿನನಿತ್ಯದ

ಕಾರ್ಯಕ್ರಮಗಳ ಬಗ್ಗೆ ಸಹಕಾರ ನೀಡುತ್ತಾರೆ. ಇವರ ಪತಿ ಹೆನ್ರಿ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರಂತೆ. ಈತ ತುಂಬಾ ಸರಸಿ, ಹಾಸ್ಯಪ್ರಿಯ. ಶ್ರೀಮತಿ ಹೆನ್ರಿ ಕಛೇರಿ ಮುಗಿದಮೇಲೆ ನನ್ನನ್ನು ಕರೆದುಕೊಂಡೇ ಮನೆಗೆ ಹೊರಟರು. ದಾರಿಯಲ್ಲಿ ಅವರ ಹಿರಿಯ ಮಗಳನ್ನು ಶಾಲೆಯಿಂದ ಕರೆದುಕೊಂಡು ಬರುವುದಕ್ಕಾಗಿ ಶಾಲೆಗೂ ಹೋಗಿದ್ದೆವು. ಕಾರಿನಲ್ಲಿ ಬರುವಾಗ ಅವರು ತಮ್ಮ ಬಿಡುವಿಲ್ಲದ ದೈನಂದಿನ ಕಾರ್ಯಕ್ರಮಗಳ ಬಗ್ಗೆ ಹೇಳಿದರು. ಮನೆಯಲ್ಲಿ ಗಂಡನಿಗೊಂದು, ಹೆಂಡತಿಗೊಂದು ಕಾರುಗಳಿವೆ. ಬೆಳಗ್ಗೆ ಬೇಗ ಎದ್ದು ಊಟ, ತಿಂಡಿಗಳನ್ನು ಮಾಡಿ ಮುಗಿಸಿ, ಮನೆಕೆಲಸಗಳನ್ನು ಮಾಡಿ, ಮಕ್ಕಳನ್ನು ಶಾಲೆಗೆ ಬಿಟ್ಟು, ಕಛೇರಿ ಕೆಲಸಕ್ಕೆ ಬರಬೇಕು. ಮತ್ತೆ ಕಛೇರಿಯಿಂದ ಹಿಂದಿರುಗುವಾಗ ಮಕ್ಕಳನ್ನು ವಾಪಸ್ಸು ಕರೆದುಕೊಂಡು ಬರಬೇಕು. ಮಾಮೂಲಿ ಮನೆಕೆಲಸ ಕಾದಿರುತ್ತದೆ. ಈಕೆ ಭಾರತೀಯ ಮಹಿಳೆಯರಂತೆ ಸಂಸಾರ ಚಿಂತೆ ಅಂಟಿಸಿಕೊಂಡ ಗೃಹಿಣಿ. ಗಂಡ ಕುಟುಂಬದ ಜವಾಬ್ದಾರಿಗಳನ್ನು ಹೆಚ್ಚು ತೆಗೆದುಕೊಂಡಂತೆ ಕಾಣಲಿಲ್ಲ. ಇಲ್ಲೆಲ್ಲ ಸಾಮಾನ್ಯವಾಗಿ ಸ್ತ್ರೀಯರದೇ ಜವಾಬ್ದಾರಿ ಹೆಚ್ಚು. ಗಂಡಸರು ಸಾಮಾನ್ಯವಾಗಿ ಸೋಮಾರಿಗಳು.

ಶ್ರೀಮತಿ ಹೆನ್ರಿಯವರ ಮನೆ ನೀಲಿ ಬೆಟ್ಟದ ಮೇಲೆ ಸುಂದರವಾದ ಜಾಗದಲ್ಲಿದೆ. ಮನೆಯೂ ಚೆನ್ನಾಗಿದೆ. ನಾವು ಮನೆಗೆ ಹೋದಾಗ ಅವರ ಗಂಡ ಇನ್ನೂ ಬಂದಿರಲಿಲ್ಲ ವಾದ್ದರಿಂದ ಶ್ರೀಮತಿ ಹೆನ್ರಿ ಅವರ ಮಕ್ಕಳನ್ನು ನನ್ನ ಜೊತೆಮಾತನಾಡಲು ಬಿಟ್ಟು ಮನೆಕೆಲಸಕ್ಕೆ ತೊಡಗಿದರು. ಅವರು ನನ್ನನ್ನು ಬಿಟ್ಟು ಹೋಗಲು ಹಿಂಜರಿಯುತ್ತಿದ್ದರೂ, ನಾನೇ ಅವರನ್ನು ಕಳುಹಿಸಿಕೊಟ್ಟೆ. ಇವರ ಕಿರಿಯ ಹುಡುಗ 5ನೇ ತರಗತಿಯಲ್ಲಿದ್ದಾನಂತೆ. ಅವರ ಮನೆಯಲ್ಲಿ ದೂರದ ಹಳ್ಳಿಯ ಹುಡುಗಿಯೊಬ್ಬಳು ಶಾಲೆಗೆ ಹೋಗುವುದಕ್ಕಾಗಿ ಇದ್ದಾಳಂತೆ. ಈ ಇಬ್ಬರೂ ನನಗೆ ಈಗ ಸಂಗಾತಿಗಳಾದರು. ಈ ಇಬ್ಬರೂ ಬೇರೆಬೇರೆ ಶಾಲೆಗೆ ಹೋಗುತ್ತಾರೆ. ಹುಡುಗರಿಗೆ ಹುಡುಗಿಯರಿಗೆ ಬೇರೆ ಬೇರೆ ಶಾಲೆಗಳು ಇರುತ್ತವೆ. ಆದರೂ ಶಾಲಾ ಮಕ್ಕಳಲ್ಲಿಯೂ ಲೈಂಗಿಕ ವ್ಯಾಧಿ ಇರುತ್ತದೆಯಂತೆ. ಇಂಡಿಯಾ ದೇಶದ ಯಾರ ಹೆಸರನ್ನು ಕೇಳಿದ್ದೀರಿ ಎಂದು ಅವರನ್ನು ಕೇಳಿದೆ. ಹುಡುಗಿ 'ಇಂಡಿಯಾ ಗಾಂಡಿ' ಗೊತ್ತಿದೆ ಎಂದಳು. ಆಮೇಲೆ ಅವಳೇ ಆಕೆ ಎಷ್ಟು ವರ್ಷದಿಂದ ಪ್ರಧಾನಮಂತ್ರಿಯಾಗಿದ್ದಾರೆ ಎಂದೂ ಕೇಳಿದಳು. ನೀನು ಎಷ್ಟು ಜನ ಪ್ರಧಾನಿಗಳನ್ನು ನಿಮ್ಮ ದೇಶದಲ್ಲಿ ಕಂಡಿದ್ದೀಯೆ ಎಂದೆ. ಇಬ್ಬರನ್ನು ಕಂಡಿದ್ದೇನೆ ಎಂದಳು. ನಿನ್ನ ವಯಸ್ಸಿನ ಮಕ್ಕಳು ಇಂದಿರಾ ಗಾಂಧಿಯನ್ನು ಬಿಟ್ಟು ಬೇರೆ ಪ್ರಧಾನಮಂತ್ರಿಯನ್ನು ಕಂಡೇ ಇಲ್ಲ ನಮ್ಮ ದೇಶದಲ್ಲಿ, ಆಕೆಯ ತಂದೆಯೂ ಪ್ರಧಾನಿ ಆಗಿದ್ದರು, ಅವರ ಹೆಸರು ಗೊತ್ತಾ ಎಂದು ಕೇಳಿದೆ. ಇಲ್ಲ, ನಾನಾಗ ಹುಟ್ಟಿರಲಿಲ್ಲ ಎಂದಳು. ಮತ್ತೆ ಇಂದಿರಾಗಾಂಧಿಗೆ ಮಕ್ಕಳಿದ್ದಾರೆಯೇ ಎಂದು ಕೇಳಿದಳು. ಹೌದು ಎಂದೆ. ಹಾಗಿದ್ದರೆ ಮಗನೂ ಪ್ರಧಾನಿ ಆಗುತ್ತಾನೇನು ?

ನಿಮ್ಮಲ್ಲಿ ಪ್ರಧಾನಿ ಅಧಿಕಾರ ವಂಶಪಾರಂಪರ್ಯವೇ ? ಎಂದು ಕೇಳಿದಳು. ಅವಳ ಮಾತಿಗೆ ಉತ್ತರ ಹೇಳಲು ಕಷ್ಟವಾಯಿತು. ಹಾಗೇನಿಲ್ಲ, ನಮ್ಮ ಜನ ಇವರಲ್ಲಿ ವಿಶ್ವಾಸ ಇಟ್ಟಿರುವುದರಿಂದ ಹೀಗೆ ವಾಂಶಿಕವಾಗಿ ಅಧಿಕಾರ ಮುಂದುವರಿಯುತ್ತಿದೆ, ಅಷ್ಟೆ ಎಂದೆ. ಹೆನ್ರಿಯವರು ಬಂದು ನನ್ನ ಪರಿಚಯ ಮಾಡಿಕೊಂಡರು. ಅವರಿಗೆ ನನ್ನ ವಿಷಯ ಹೆಚ್ಚು ತಿಳಿದಂತಿರಲಿಲ್ಲ. ಹೆಂಡತಿ ತನ್ನ ಸ್ನೇಹಿತರ ವಿಷಯ ಗಂಡನಿಗೆ ವಿವರವಾಗಿ ಹೇಳುವ ಅಭ್ಯಾಸ ಇಲ್ಲಿಲ್ಲವೆಂದು ಕಾಣುತ್ತದೆ.

ಶ್ರೀ ಮತ್ತು ಶ್ರೀಮತಿ ಹೆನ್ರಿ ಹೊರದೇಶಗಳಿಂದ ಬಂದ ಅತಿಥಿಗಳನ್ನು ಮಾತ್ರ ಭೋಜನಕ್ಕೆ ಆಹ್ವಾನಿಸಿದ್ದರು. ಬಂದಿದ್ದವರೆಲ್ಲ ಹೆಚ್ಚಾಗಿ ಬಿಳಿಯರು. ಹೆನ್ರಿ ದಂಪತಿಗಳು, ನಾನು ಮತ್ತು ಬಾರ್ಬೊಡಾಸನ ಒಬ್ಬರು ಮಾತ್ರ ಕರಿಯರು. ವಿಶೇಷ ಸಜ್ಜಾದ ದೊಡ್ಡ ಹಾಲ್‌ನಲ್ಲಿ ಪಾನಗೋಷ್ಠಿ ಪ್ರಾರಂಭವಾಯಿತು. ಹೆನ್ರಿಯವರದೇ ಈಗ ಹೆಚ್ಚು ಕೆಲಸ. ಶ್ರೀಮತಿ ಹೆನ್ರಿ ಒಂದು ಕಡೆ ಅತಿಥಿಗಳ ಜೊತೆ ಕುಳಿತರು. ಹೆನ್ರಿ ಎಲ್ಲರ ಹತ್ತಿರ ಹೋಗಿ ಕಿವಿಯಲ್ಲಿ "ಕುಡಿಯಲು ಏನು ಕೊಡಲಿ" ಎಂದು ಕೇಳುತ್ತಿದ್ದರು. ಹೀಗೆ ಕೇಳುವುದು ಮತ್ತೊಬ್ಬರಿಗೆ ಕೇಳದಿರಲೆಂಬಂತೆ ಪಿಸುಗುಡುತ್ತಿದ್ದರು. ಅವರವರು ಕೇಳಿದ ಪಾನೀಯಗಳನ್ನು ತಂದು ಕೊಟ್ಟರು. ಈ ಕುಡಿಯುವ ಕೆಲಸ ನಿಧಾನವಾಗಿ ಸಾಗುತ್ತ ಅತಿಥಿಗಳಿಂದ ಮಾತು ಕತೆಯಾಗುತ್ತದೆ. ಅತಿಥಿಗಳನ್ನು ಮಾತುಕತೆಯಲ್ಲಿ ತೊಡಗಿಸುವುದು ಅಥವಾ ಅವರನ್ನೆಲ್ಲ ಮಾತಿನಲ್ಲೋ ಕೃತಿಯಲ್ಲೋ ತೊಡಗಿಸುವುದು ಅಭ್ಯಾಗತನ ಹೊಣೆಯೆಂಬಂತೆ ಇಲ್ಲಿ ಕಾಣುತ್ತಿತ್ತು. ಮಧ್ಯೆ ಮಧ್ಯೆ ಹೆನ್ರಿ ಮಾತಾಡಿ ವಿಷಯ ಪ್ರಾರಂಭಿಸಿ ಪಾನೀಯ ತರಲು ಒಳಗೆ ಹೋಗುತ್ತಿದ್ದರು. ಹೆನ್ರಿ ಹೆಂಡತಿಯ ಹತ್ತಿರವೂ ನಿಂತು, "ದಯವಿಟ್ಟು ನಿಮಗೇನು ಬೇಕು ?" ಎಂದು ಕೇಳುತ್ತಿದ್ದರು. ಪಾನೀಯಗಳು ಮುಗಿದಮೇಲೆ ಭೋಜನ ಪ್ರಾರಂಭವಾಯಿತು. ಎಲ್ಲರೂ ಸ್ವಾನುಭವಗಳನ್ನು ವಿವರಿಸಲು ತೊಡಗಿದರು. ಯಾರೂ ಮಾತನಾಡದೆ ಸ್ವಲ್ಪ ಮೌನವಾದರೆ ಹೆನ್ರಿಯವರೇ ತಮ್ಮ ಅನುಭವಗಳನ್ನು ಹೇಳಲು ಪ್ರಾರಂಭಿಸುತ್ತಿದ್ದರು. ಹೀಗೆ ತಿನ್ನುತ್ತಾ ಕುಡಿಯುತ್ತಾ ಕೊನೆಯಿಲ್ಲದ ಮಾತುಗಾರಿಕೆ ಸಾಗಿತು. 'ಸಾಕು ಹೋಗೋಣ' ಎಂದು ಯಾರೂ ಹೇಳುವಂತೆ ಕಾಣಲಿಲ್ಲ. 'ಹೋಗೋಣ ಇನ್ನು' ಎಂದು ಅತಿಥಿಗಳು ಹೇಳಿದರೆ, ಅದು ಅಭ್ಯಾಗತರಿಗೆ ಅಪಮಾನ ಮಾಡಿದಂತೆ ಎಂದು ಕಾಣುತ್ತದೆ. 11–30ರ ಸಮಯವಾಯಿತು. ಎಲ್ಲರ ಅನುಭವಗಳೂ ಮುಗಿದು, ಮಾತು ಬೇಡವಾಗಿ ನಿದ್ದೆ ಎಳೆದಾಡುತ್ತಿರುವಾಗ ಎಲ್ಲರ ಮಾತೂ ತಣ್ಣಗಾಯಿತು. ಮೌನ ಆವರಿಸಿತು. ಆಗ ಯಾರೋ ಅಭ್ಯಾಗತರಿಗೆ ತುಂಬಾ ವಂದನೆಗಳು ಎಂದರು. ಸರಿ, ಎಲ್ಲರೂ ವಂದನೆ ಹೇಳಿ ಮೇಲಕ್ಕೆ ಎದ್ದರು.

ಹೆನ್ರಿಯವರು ಭೋಜನದ ಸಮಯದಲ್ಲಿ ಹೇಳಿದ ಹಾಸ್ಯದ ಅನುಭವಗಳು ಕೆಲವು ಇವು: ಹೆನ್ರಿಯವರು ಕಾರ್ಯನಿಮಿತ್ತ ಲಂಡನ್‌ಗೆ ಹೋಗಿದ್ದರಂತೆ.

ಮೊದಲಬಾರಿಗೆ ಹೋಗಿದ್ದರಿಂದ ತಿಳಿಯದೆ ಯಾವುದೋ ಹೋಟೆಲಿನಲ್ಲಿ ಬಾಡಿಗೆ ರೂಮು ಹಿಡಿದರು. ಹೋಟೆಲು ಮಾಲೀಕ ಎರಡು ಬೀಗದಕೈಗಳನ್ನು ಕೊಟ್ಟ. ಒಂದು ರೂಮಿನ ಬಾಗಿಲಿನದು. ಇನ್ನೊಂದು ಏತಕ್ಕೆ ಎಂದು ತಿಳಿಯದೆ ಇವರು ರೂಮಿನೊಳಕ್ಕೆ ಹೋದ ಮೇಲೆ ಅಲ್ಲಿದ್ದ ತಪಾಜಿನ ಮೇಲೆ ಕಣ್ಣು ಬಿದ್ದು ಆ ಇನ್ನೊಂದು ಬೀಗದಕೈನಿಂದ ಅದರ ಬೀಗ ತೆಗೆದರು. ಅದರ ಬಾಗಿಲು ತೆರೆದಾಗ ಒಳಗೆ ವಿವಿಧ ಬಣ್ಣಗಳ, ಆಕಾರಗಳ, ಕುಡಿತಗಳ ಸೀಸೆಗಳು ಸಾಲಾಗಿದ್ದುವು. ಹಿಂದು ಮುಂದು ಯೋಚಿಸದೆ ಬಾಟಲಿಗಳನ್ನು ಖಾಲಿಮಾಡಿಬಿಟ್ಟರು. ಎರಡು ದಿನಗಳ ಮೇಲೆ ರೂಮು ಬಿಡುವಾಗ ಕೈಗೆ ಬಂದ ಬಿಲ್ಲನ್ನು ನೋಡಿ ಹೆನ್ರಿ ಹೌಹಾರಿದರು. ಅದರಲ್ಲಿ ರೂಮಿನ ಬಾಡಿಗೆ—ಪೌಂಡು, ಇತರೆ—ಪೌಂಡು ಎಂದೂ, ರೂಮಿನ ಬಾಡಿಗೆ ಗಿಂತ ಇತರೆಗಾಗಿ ಹಾಕಿದ್ದ ಹಣವೇ ಹೆಚ್ಚಾಗಿತ್ತು. ಈ ಇತರೆಗಳು ಏನು ಎಂದು ಇವರು ಮಾಲೀಕನನ್ನು ಕೇಳಿದಾಗ ತಪಾಜಿನ ಸೀಸೆಗಳ ಬಳಕೆಯದು ಎಂದು ಆತ ಹೇಳಿದ. ಮರುಮಾತಾಡದೆ, ಹಿಂದಿರುಗಿ ನೋಡದೆ ಹೊರಟು ಬಂದರು.

ಇನ್ನೊಮ್ಮೆ ಹೆನ್ರಿಯವರು ಭಾರತಕ್ಕೆ ಬಂದಿದ್ದರಂತೆ ಆಗ ಬೊಂಬಾಯಿಯ ಒಂದು ಹೋಟೆಲಿನಲ್ಲಿ ಇಳಿದುಕೊಂಡಿದ್ದರು. ಒಂದು ದಿನ ರೂಮಿನಿಂದ ಹೊರಗೆ ಬಂದಾಗ ಒಬ್ಬ ಹುಡುಗ ಬಂದು ನಮಸ್ಕರಿಸಿದ. ಹೆನ್ರಿ ಯವರು 'ಏನು ಬೇಕು ನಿನಗೆ ?' ಎಂದು ಕೇಳಿದಾಗ ಆತ 'ನಿಮಗೇನು ಬೇಕು. ಎಂದು ಕೇಳಲು ಬಂದಿದ್ದೇನೆ. ಏನು ಬೇಕು ಹೇಳಿ' ಎಂದ. ಹೆನ್ರಿ ಆಶ್ಚರ್ಯದಿಂದ 'ನಿನ್ನ ಕೆಲಸವೇನು ?' ಎಂದು ಕೇಳಿದಾಗ ಆ ಹುಡುಗ 'ನಿಮ್ಮಂಥವರಿಗೆ ಬೇಕಾದು ದನ್ನು ತೋರಿಸುವುದೇ ಮತ್ತು ಅದು ಎಲ್ಲಿ ಸಿಗುತ್ತದೆ ಎಂದು ಹೇಳುವುದೇ ನನ್ನ ಕೆಲಸ' ಎಂದನಂತೆ ಹೆನ್ರಿಗೆ ಹುಡುಗನ ಕಸುಬಿನ ಬಗ್ಗೆ ಅರ್ಥವಾಗಿ, ಈಗ ನನಗೇನೂ ಬೇಡ ಎಂದು ಹೇಳಿ ಒಳಗೆ ಬಂದು ಬಾಗಿಲು ಹಾಕಿಕೊಂಡರಂತೆ. ಇಂಥ ಲಘು ಅನುಭವಗಳ ಮಾಲೆ ಭೋಜನದ ಸಮಯದಲ್ಲಿ ನಿರಂತರವಾಗಿ ಬರುತ್ತಿರುತ್ತವೆ. ಆಗ ಉಳಿದವರು ಕೃತಕನೇನೋ ಅನ್ನುವಷ್ಟರ ಮಟ್ಟಿಗೆ ಗಹಗಹಿಸಿ ನಗುತ್ತಾರೆ. ನಗದಿದ್ದರೆ ಹೇಳಿದವರಿಗೆ ಅವಮಾನ ಎಂಬಂತೆ! ಎಲ್ಲ ಮುಗಿದು ವಂದಿಸಿ ಮನೆಗೆ ಹೊರಟರು. ಹೆನ್ರಿಯವರು ನನ್ನನ್ನು ಮನೆಗೆ ಬಿಡಲು ವಾಪಸ್ಸು ಕರೆದುಕೊಂಡು ಬಂದು ಮನೆಯ ಮುಂದೆ ಕಾರು ನಿಲ್ಲಿಸಿದಾಗ ನನ್ನ ಕೆಲಸ ಇತ್ಯಾದಿ ವಿವರಗಳನ್ನು ಕೇಳಿದರು.

ಒಂದು ರಜೆಯ ದಿನ ನಾನು ಮನೆಯಲ್ಲೇ ಇದ್ದೆ. ಇದ್ದಕ್ಕಿದ್ದ ಹಾಗೆ ರಾಬಿನ್‌ಸನ್ ಅವರು ನಮ್ಮ ಮನೆಗೆ ಬಂದು, ಈ ದಿನ ಸಂಜೆ ಒಂದು ಸಮಾರಂಭಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಿದರು. ಅದು ಏನು ಸಮಾರಂಭ ಎಂದು ನನಗೆ ಅವರು ಹೇಳಲಿಲ್ಲ. ಅವರು ಕರೆದ ಕಡೆ ಇಲ್ಲ ಎನ್ನದೆ ಹೋಗುವುದು ರೂಢಿ ಯಾಗಿತ್ತು. ಅರವತ್ತು ವರ್ಷಗಳ ರಾಬಿನ್‌ಸನ್ ಸುಮಾರು 35 ವರ್ಷಗಳಷ್ಟು

ಕಾಲ ಗಣಿತಶಾಸ್ತ್ರದ ಪಾಠ ಹೇಳಿದ್ದಾರಂತೆ. ಅವರಿಗೆ ನನ್ನ ಬಗ್ಗೆ ತನ್ನ ಒಬ್ಬ ವಿದ್ಯಾರ್ಥಿ ಎಂಬ ಭಾವನೆ ಇದ್ದಿರಬೇಕು. ನನ್ನನ್ನು ಆದಷ್ಟು ಜನರಿಗೆ ಪರಿಚಯಿಸುವ ಮತ್ತು ತಮ್ಮ ದೇಶದ ಜೀವನದ ಬಗ್ಗೆ ಪರಿಚಯಿಸುವ ಆಸಕ್ತಿ ಅವರಿಗಿತ್ತು. ಅಲ್ಲದೆ ಅವರಿಗೂ ಭಾರತದ ಜೀವನಕ್ರಮದ ಬಗ್ಗೆ ತಿಳಿಯುವ ಕುತೂಹಲವಿದ್ದಿತು. ಬಿಡುವು ಸಿಕ್ಕಾಗೆಲ್ಲ ಏನಾದರೂ ವಿಷಯ ಕೇಳುತ್ತಿದ್ದರು.

ರಾಬಿನ್‌ಸನ್ ಸಂಜೆ ಏಳು ಗಂಟೆಗೆ ಬಂದು ನನ್ನನ್ನು ಕಾರಿನಲ್ಲಿ ಕೂರಿಸಿ ಕೊಂಡು CAST ಕಡೆಗೆ ಹೊರಟರು (ಇಲ್ಲಿ ಸಾಮಾನ್ಯವಾಗಿ ಎಲ್ಲ ಸಂಸ್ಥೆ, ಹುದ್ದೆ ಇತ್ಯಾದಿಗಳನ್ನು ಹೆಸರಿನ ಮೊದಲಕ್ಷರಗಳಿಂದ ಕರೆಯುವುದೇ ರೂಢಿ. ಹೊಸಬರ ಜೊತೆಯೂ ಅವರು ಮೊದಲಕ್ಷರಗಳಿಂದಲೇ ಮಾತನಾಡುತ್ತಾರೆ. ' ನಮ್ಮ CAST ನಿಮಗೆ ಗೊತ್ತೆ ? ' ಎಂದು ಯಾರೋ ಮೊದಲು ಕೇಳಿದಾಗ ನಾನು ತಬ್ಬಿಬ್ಬಾಗಿದ್ದೆ. CAST ಎಂದರೆ College of Arts, Science and Technology). ಈ ಕಾಲೇಜು ಜಮೈಕಾಕ್ಕೆ ಮಾತ್ರವಲ್ಲ, ಕೆರೇಬಿಯನ್ ದ್ವೀಪಗಳಲ್ಲಿಯೇ ಒಂದು ಪ್ರತಿಷ್ಠಿತ ಕಾಲೇಜು. ಇದು ಜಮೈಕ ಸರ್ಕಾರ ನಡೆಸುತ್ತಿರುವ ಸಂಸ್ಥೆ. ಕಲೆ, ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳಲ್ಲಿ ಡಿಪ್ಲೊಮಾ ಮತ್ತು ಪದವಿ ಶಿಕ್ಷಣಗಳನ್ನು ಇಲ್ಲಿ ಕೊಡಲಾಗುತ್ತಿದೆಯಂತೆ. ರಾಬಿನ್‌ಸನ್ ಈ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು

ಈ ಕಾಲೇಜು ತನ್ನ ವಿದ್ಯಾರ್ಥಿಗಳ ಚಟುವಟಿಕೆಗಳೇ ಮೊದಲಾದ ಆಂತರಿಕ ಕಾರ್ಯಗಳಿಗಾಗಿ ಹಣವನ್ನು ಸಾರ್ವಜನಿಕರಿಂದ ಪಡೆಯಲು ಅನೇಕ ಕಾರ್ಯಕ್ರಮ ಹಾಕಿಕೊಳ್ಳುತ್ತದಂತೆ. ಅಂಥ ಒಂದು ಸಮಾರಂಭ ಇಲ್ಲಿ ಈ ದಿನ ಏರ್ಪಟ್ಟಿರುವ Barbecue Supper ಕಾರ್ಯಕ್ರಮ.

ಈ ಬಾರ್ಬೆಕ್ಯು ಸಪ್ಪರ್ ಸಮಾರಂಭದ ಮುಖ್ಯ ಆಕರ್ಷಣೆ ಎಂದರೆ ವಿಶೇಷ ವಾದ ರೀತಿಯಲ್ಲಿ ಅಟ್ಟ ಮಾಂಸದ ಭಕ್ಷ್ಯಗಳು. ಬಯಲಿನಲ್ಲಿ ದೊಡ್ಡದಾಗಿ ಸೌದೆ ಒಲೆಗಳ ಮೇಲೆ ಕಬ್ಬಿಣದ ಜರಡಿಗಳನ್ನು ಇಟ್ಟು ಅದರ ಮೇಲೆ ಕೋಳಿ ಮಾಂಸದ, ಹಂದಿ ಮಾಂಸದ ಉಂಡೆಗಳನ್ನು ಸುಡುತ್ತಾರೆ. ಸುಟ್ಟು ಕರಿಕಾದ ಮಾಂಸದ ಮುದ್ದೆಗಳಿಗೆ ಕಾರ ಮತ್ತು ಸಿಹಿ ರಸಗಳನ್ನು ಸುರಿದು, ತರಕಾರಿ ಪಲ್ಯಗಳನ್ನು ನೆಂಜಿಕೊಳ್ಳಲು ಕೊಡುತ್ತಾರೆ ಇದರ ಜೊತೆಗೆ ಕುಡಿಯುವುದಕ್ಕೂ ಇರುತ್ತದೆ. ಇಂಥ ಒಂದು ಊಟದ ಬೆಲೆ 10 ಜಮೈಕ ಡಾಲರುಗಳು. ಈ ಬಾರ್ಬೆಕ್ಯು ಭೋಜನಕ್ಕೆ ಬೇಕಾದ ಸಾಮಾನುಗಳನ್ನು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ದೊಡ್ಡ ದೊಡ್ಡ ವ್ಯಾಪಾರಿಗಳಿಂದ ದಾನರೂಪದಲ್ಲಿ ಪಡೆಯುತ್ತಾರೆ. ವ್ಯಾಪಾರಿಗಳಿಂದ ಸ್ವೀಕರಿಸುವ ಎಲ್ಲ ವಸ್ತುಗಳನ್ನು ಇಲ್ಲಿ ಅತಿಥಿಗಳಿಗೆ ಸ್ವಲ್ಪ ಹೆಚ್ಚು ಬೆಲೆಗೆ ಮಾರುತ್ತಾರೆ. ವಿವಿಧ ರೀತಿಯ ಗಿಡಗಳು, ಹೂವುಗಳು ಮೊದಲಾದವನ್ನು ಸೀಸೆಗಳಲ್ಲಿ ಅಲಂಕಾರಿಕವಾಗಿ ಜೋಡಿಸಿ ಮಾರುತ್ತಾರೆ. ಒಟ್ಟಿನಲ್ಲಿ ಇದೊಂದು ಜಾತ್ರೆಯ ರೀತಿಯಲ್ಲಿ ಇರುತ್ತದೆ.

ಆದರೆ ಇಲ್ಲಿಗೆ ಬರುವವರು ಶಿಕ್ಷಣ ಸಂಸ್ಥೆಗೆ ಸಹಾಯಮಾಡುವ ದೃಷ್ಟಿಯಿಂದ ಮಾತ್ರ ಬರುತ್ತಾರೆ. ಭೋಜನ ಮತ್ತು ಇತರೆ ವಸ್ತುಗಳಿಂದ ಬರುವ ಹಣವನ್ನು ಕಾಲೇಜಿನ ಕಾರ್ಯಕ್ರಮಗಳಿಗೆ ಉಪಯೋಗಿಸುತ್ತಾರಂತೆ.

ಈ ಸಮಾರಂಭದ ಮತ್ತೊಂದು ಆಕರ್ಷಣೆ ಎಂದರೆ ಜನಪದ ಸಂಗೀತ ಮತ್ತು ನೃತ್ಯ. ಜಾತ್ರೆಯ ನಡುವೆ ಹಾಕಿದ ಸ್ಟೇಜಿನ ಮೇಲೆ ಕಿವಿಗಡಚಿಕ್ಕುವ ಸಂಗೀತ ವಾದ್ಯಗಳ ಸಮೇತ ಈ ಕಾರ್ಯಕ್ರಮ ನಡೆಯುತ್ತಿರುತ್ತದೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಪ್ರೇಕ್ಷಕರು ಸುತ್ತ ಹಾಕಿದ ಆಸನಗಳಲ್ಲಿ ಕುಳಿತು ಮಾಂಸದ ಭಕ್ಷ್ಯಗಳನ್ನು ಸವಿಯುತ್ತಾ ಕಾರ್ಯಕ್ರಮ ಗಳನ್ನು ವೀಕ್ಷಿಸುತ್ತಾರೆ. ಈ ಸಂಗೀತಕ್ಕೆ ಬಳಸುವ ಒಂದು ರೀತಿಯ ಬ್ಯಾಂಡುಗಳಿಗೆ Out Caste Band ಎನ್ನುತ್ತಾರಂತೆ. Out caste ಜನರಿಲ್ಲದ ಈ ನಾಡಿನಲ್ಲಿ ತಮ್ಮಟೆ ವಾದ್ಯಗಳಿಗೆ ಆ ಹೆಸರು ಕೊಡಲು ಏನು ಕಾರಣವೋ ತಿಳಿಯದು. ನಮ್ಮ ದೇಶದಲ್ಲಿ out caste ಜನರೆಂದು ಕರೆಸಿಕೊಳ್ಳುವವರು ಕೆಲವರು ತಮ್ಮಟೆವಾದ್ಯ ಗಳನ್ನು ಬಾರಿಸುತ್ತಾರೆ, ಅಷ್ಟೆ!

ಈ ಬಾರ್ಬೆಕ್ಯು ಭೋಜನದ ಟಿಕೇಟುಗಳಿಗೆ ಕೆಲವು ಬಹುಮಾನಗಳನ್ನು ಇಡುತ್ತಾರಂತೆ. ಈ ರೀತಿಯ ಬಹುಮಾನಗಳೆಂದರೆ ಸುಂದರವಾದ ಸ್ಥಳಗಳಿಗೆ ಹೋಗಿ ವಿಹಾರ ಮಾಡುವ ಖರ್ಚು ಮತ್ತು ಕಾರುಗಳಿಗೆ ಬೇಕಾದ ಬ್ಯಾಟರಿ ಮೊದಲಾದ ಸಾಮಾನುಗಳು.

ರಾಬಿನ್‌ಸನ್ ಅವರು ಈ ಕಾಲೇಜಿನ ಆಡಳಿತ ಸಮಿತಿಯ ಅಧ್ಯಕ್ಷರಾದರೂ ಅವರನ್ನು ಬಂದು ವಿಶೇಷವಾಗಿ ಯಾರು ಸ್ವಾಗತಿಸಲಿಲ್ಲ. ಅವರೂ, ನಾನು ಎಲ್ಲರಂತೆ ಸಾಲಿನಲ್ಲಿ ನಿಂತು ಟಿಕೇಟು ಪಡೆದೆವು. ಊಟದ ತಟ್ಟೆಗಳನ್ನು ತೆಗೆದು ಕೊಂಡು ಕೋಳಿಮಾಂಸದ ಸುಟ್ಟತುಂಡುಗಳನ್ನು ಪಡೆದು ಜಾತ್ರೆಮೈದಾನದಲ್ಲಿ ಬಂದು ಮೇಜಿನಲ್ಲಿ ಕುಳಿತು ತಿನ್ನಲಾರಂಭಿಸಿದೆವು. Cast ಕಾಲೇಜಿನ ಪ್ರಿನ್ಸಿಪಾಲರು ಮತ್ತು ಅವರ ಹೆಂಡತಿ ನಮ್ಮ ಜೊತೆ ಸೇರಿಕೊಂಡರು. ಪ್ರಿನ್ಸಿಪಾಲರ ಪತ್ನಿ ಹಿಂದೂ ಸ್ತ್ರೀಯಂತೆ ಕಾಣುತ್ತಿದ್ದರು. ಅವರು ಟ್ರಿನಿಡಾಡ್ ದ್ವೀಪದವರು. ಅವರ ಅಣ್ಣ ಭಾರತೀಯ ಮುಸ್ಲಿಂ ಸ್ತ್ರೀಯನ್ನು ಮದುವೆಯಾಗಿದ್ದಾರಂತೆ. ಇವರಿಗೆಲ್ಲ ಹಿಂದೂಗಳ ಸಂಪ್ರದಾಯ, ಜೀವನಕ್ರಮದ ಪರಿಚಯವಿದೆಯಂತೆ. ಪ್ರಿನ್ಸಿಪಾಲರ ಹೆಂಡತಿ ಹೇಳಿದ ಒಂದು ಘಟನೆ ಸ್ವಾರಸ್ಯವಾಗಿದೆ. ಈಕೆ ಒಂದು ಸಾರಿ ತನ್ನ ಅಣ್ಣನ ಮನೆಗೆ ಭೋಜನಕ್ಕೆ ಹೋಗಿದ್ದರು. ಅಲ್ಲಿಗೆ ಹಿಂದೂಗಳೇ ಹೆಚ್ಚು ಸಂಖ್ಯೆಯಲ್ಲಿ ಬಂದಿದ್ದರು. ಎಲ್ಲರೂ ಚಮಚೆ ಇತ್ಯಾದಿಗಳಿಲ್ಲದೆ ಬರಿಕೈಲೇ ಊಟಮಾಡು ತ್ತಿದ್ದುದನ್ನು ಕಂಡು ಈಕೆಯೂ ಹಾಗೆಯೇ ಮಾಡಲು ಪ್ರಯತ್ನಿಸಿದರು. ಭಕ್ಷ್ಯ ಗಳೊಂದೂ ಬಾಯಿಗೆ ಹೋಗದೆ ತಟ್ಟೆಗೇ ವಾಪಸ್ಸು ಬಿದ್ದು ಹೋಗುತ್ತಿದ್ದುದನ್ನು ಕಂಡು ಬಾಯಿಗೆ ನೀರು ಬಂದುದಿರಲಿ, ಊಟಕ್ಕೆ ಕುಳಿತವರೆಲ್ಲ ಈಕೆಯ ಪರಿಸ್ಥಿತಿ

ಕಂಡು ಗೋಳ್ ಎಂದು ನಕ್ಕರು. ಈಕೆಗೆ ತುಂಬಾ ಅವಮಾನ ಆಯಿತಂತೆ. ಭಿನ್ನಧರ್ಮೀಯರು ಒಟ್ಟಿಗೆ ಸೇರುವುದರ ಫಲ ಇದು ಎಂದು ಆಕೆ ನಕ್ಕರು.

ಊಟದ ತಟ್ಟೆಯಲ್ಲಿ ಇದ್ದ ಪ್ಲಾಸ್ಟಿಕ್ ಚಮಚೆ ಮತ್ತು ಫೋರ್ಕುಗಳು ಈ ಸುಟ್ಟಮಾಂಸದ ಮುದ್ದೆಯನ್ನು ಕತ್ತರಿಸಲು ಪ್ರಯೋಜನಕ್ಕೆ ಬಾರವೆಂದು ನಿಶ್ಚಯಿಸಿ ನಾನು "ದಯವಿಟ್ಟು ಕ್ಷಮಿಸಿ, ನಾನು ನನ್ನ ಹಿಂದೂ ಧರ್ಮಕ್ಕೇ ಮರಳುತ್ತೇನೆ" ಎಂದು ಮಾಂಸದ ತುಂಡನ್ನು ಕೈಯಿಂದ ಹಿಡಿದು ಹಲ್ಲುಗಳಿಂದ ಕಿತ್ತು ತಿನ್ನಲಾರಂಭಿಸಿದೆ. ವಾಸ್ತವಿಕವಾಗಿ ನಾನು ಕಾಡುಮಾನವನ ಧರ್ಮಕ್ಕೇ ಬಂದಿದ್ದೆ! ಈ ಕೋಳಿಮಾಂಸಕ್ಕೆ ಬ್ರೆಡ್ಡಿಗಿಂತ ಹೆಚ್ಚು ರುಚಿಯಿರದಿದ್ದರೂ ಕೈನಿಂದ ತಿನ್ನುವ ಸ್ವಾತಂತ್ರ್ಯದಿಂದಾಗಿ ಒಂದು ರೀತಿಯ ರುಚಿ ಮಾನಸಿಕ ತೃಪ್ತಿಯಾಯಿತು. ಆಮೇಲೆ ಕ್ಷಮಿಸಿ ಎಂದು ಎಲ್ಲರೂ ನನ್ನ ಧರ್ಮಕ್ಕೇ ಪರಿವರ್ತನೆ ಹೊಂದಿದರು. ಈಗ ಯಾರೂ ಯಾರನ್ನು ಕ್ಷಮಿಸುವ ಅಗತ್ಯವಿರಲಿಲ್ಲ. ಆದರೆ ತಿನ್ನುವಾಗ ಇದ್ದ ಸಂತೋಷ, ಅದು ಮುಗಿದ ಮೇಲೆ ಇರಲಿಲ್ಲ. ಅಲ್ಲಿ ಕೈತೊಳೆಯಲು ನೀರು ಮಾತ್ರ ಇರಲಿಲ್ಲ. ಕೈನ ಜಿಡ್ಡು ಎಷ್ಟು ಕಾಗದದಿಂದ ಒರೆಸಿದರೂ ಅಂಟುತಿತ್ತು.

ಮನರಂಜನೆಯ ಕಾರ್ಯಕ್ರಮವಾಗಿ ವಿವಿಧ ಉಡುಪಿನ ಪ್ರದರ್ಶನವಿತ್ತು. ಹುಡುಗಿಯರು ವಿವಿಧ ವೇಷ ಹಾಕಿಕೊಂಡು ಬಂದು ಹಿಂದೆ, ಮುಂದೆ, ಅಕ್ಕ ಪಕ್ಕಗಳನ್ನು ಬಳಕುತ್ತಾ ಪ್ರದರ್ಶಿಸುತ್ತಿದ್ದರು. ಇವರನ್ನೆಲ್ಲಾ ಧ್ವನಿವರ್ಧಕ ಹಿಡಿದು ಪರಿಚಯಿಸುತ್ತಿದ್ದ ಹುಡುಗ, "ಈಕೆಯ ಮುಂಭಾಗ ಚೆನ್ನಾಗಿದೆ, ಆಕೆಗೆ ಹಿಂಭಾಗ ಮನೋಹರವಾಗಿದೆ" ಎಂದು ವರ್ಣಿಸುತ್ತಿದ್ದ. ಅವನ ವರ್ಣನೆಗೆ ಅನುಗುಣವಾಗಿ ಹುಡುಗಿಯರು ಹಿಂಭಾಗ ಮುಂಭಾಗಗಳನ್ನು ಅಳುಕಿಲ್ಲದೆ ಪ್ರದರ್ಶಿಸುತ್ತಿದ್ದರು. ಆದರೆ ಇದು ನನಗೆ ವಿಶೇಷವಾಗಿ ಕಾಣಲಿಲ್ಲ ಏಕೆಂದರೆ, ಇಲ್ಲಿ ಮನೆಯಲ್ಲಿರುವಾಗ, ಬೀದಿಯಲ್ಲಿ ಓಡಾಡುವಾಗ ಕೇವಲ ಅಂಗುಲದಷ್ಟು ಬಟ್ಟೆತೊಟ್ಟು ಮೆರೆಯುವ ಈ ಸ್ತ್ರೀಯರು ಸ್ಟೇಜಿನ ಮೇಲೆ ಮೈತುಂಬಾ ಬಟ್ಟೆಸುತ್ತಿದ್ದರು. ಆದರೂ ಇಲ್ಲಿಯ ಜನ ಪ್ರದರ್ಶನಕ್ಕೆ ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡುತ್ತಿದ್ದರು. ಈ ಹೆಣ್ಣುಗಳ ಪ್ರದರ್ಶನ ಉಂಟುಮಾಡುತ್ತಿದ್ದ ಕಾವಿಗಿಂತ ಬೆಟ್ಟದ ಬುಡದಲ್ಲಿದ್ದುದರಿಂದ ಚಳಿ ಮಿಗಿಲಾಯಿತು. ಮನೆಗೆ ಹೊರಟು ಬಂದೆವು. ಮಾರನೆಯ ದಿನ ಬೆಳಗ್ಗೆ ರಾಬಿನ್‌ಸನ್ ಅವರು ಎರಡು Star apple ಹಣ್ಣುಗಳನ್ನು ತಂದು ಕೊಟ್ಟು ಹೋದರು

ಹಸಿರು ನೆಲ ಹಸಿರು ಜಲ

ವಾರದಲ್ಲಿ ಎರಡು ದಿನಗಳ ರಜೆಯಿರುವ ಈ ನಾಡಿನಲ್ಲಿ ವಾರಾಂತ್ಯವನ್ನು ಮನೆಯ ಒಳಗಡೆ ಕಳೆಯುವುದು ಸಾಧ್ಯವಿಲ್ಲ. ಶನಿವಾರ ಭಾನುವಾರಗಳಿಗೆ ಹೊಂದಿಕೆಯಾಗಿ ಬೇರೆ ರಜೆ ಇದ್ದರೆ ಮನೆ ಸೆರೆಮನೆಯಾಗುತ್ತದೆ. ಮೂರು ದಿನಗಳ ರಜೆ

ಬಂದ ಒಂದು ವಾರ ಕಾಲಕಳೆಯುವುದು ಹೇಗೆ ಎಂದು ನಾನು ಮತ್ತು ನನ್ನ ವೈದ್ಯ ಮಿತ್ರರು ಯೋಚಿಸುತ್ತಿದ್ದಾಗ, ರಾಬಿನ್‌ಸನ್ ನಮ್ಮ ಮನೆಗೆ ಬಂದು ರಜೆಯ ಸದುಪಯೋಗಕ್ಕೆ ದಾರಿತೋರಿದರು. ವಿಶ್ವವಿದ್ಯಾನಿಲಯದ ಒಂದು ಕಾರನ್ನು ನಮಗೆ ಕೊಟ್ಟು ದ್ವೀಪದ ಕೆಲವು ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿಬರಬಹುದೆಂದರು. ಕಾರು ಸಾಕಷ್ಟು ದೊಡ್ಡದಾಗಿದ್ದುದರಿಂದ ನನ್ನ ವೈದ್ಯಮಿತ್ರರಾದ ರಮೇಶ, ಅಶೋಕ ಮತ್ತು ಆಂಧ್ರದವರಾದ ವಿವೇಕಾನಂದ ಅವರನ್ನು ಕರೆದುಕೊಂಡು ಹೋಗಬಹುದೆಂದು ರಾಬಿನ್‌ಸನ್ ಅನುಮತಿ ನೀಡಿದರು. ನಾವು ಪ್ರವಾಸ ಹೊರಡಬೇಕೆಂದಿದ್ದ ಶನಿವಾರ ನಾವಿದ್ದ ಬಡಾವಣೆ 'ಮೋನ ಹೈಟ್ಸ್'ನ ಮನೆಗಳ ನಲ್ಲಿಯಲ್ಲಿ ನೀರು ಬಾರದೆ ಮುಖ ತೊಳೆಯಲೂ ಸಾಧ್ಯವಾಗಲಿಲ್ಲ. ನಾವೆಲ್ಲ ಒಟ್ಟಿಗೆ ರಾಬಿನ್‌ಸನ್ ಅವರ ಮನೆಗೆ ಹೋಗಿ ಸ್ನಾನ, ತಿಂಡಿಗಳನ್ನು ಅಲ್ಲೇ ಮುಗಿಸಿ ಪ್ರವಾಸ ಹೊರಟೆವು. ನಮ್ಮ ಪ್ರವಾಸಕ್ಕೆ ಅಣಿಮಾಡಿಕೊಡುವುದರಲ್ಲಿ ರಾಬಿನ್‌ಸನ್ ನಮಗಿಂತ ಹೆಚ್ಚು ಉತ್ಸುಕರಾಗಿದ್ದರು.

ದ್ವೀಪದ ಪೂರ್ವಭಾಗದಲ್ಲಿ ಸಮುದ್ರತೀರದಲ್ಲಿಯ ಕೆಲವು ಸ್ಥಳಗಳಿಗೆ ಹೋಗುವ ನಿರ್ಧಾರ ಮಾಡಿಕೊಂಡು ಹೊರಟೆವು. ದ್ವೀಪದ ಮುಖ್ಯ ಪಟ್ಟಣಗಳು, ಪ್ರೇಕ್ಷಣೀಯ ಸ್ಥಳಗಳೆಲ್ಲ ಸಮುದ್ರ ತೀರದಲ್ಲೇ ಇವೆ. ತೀರ ಪ್ರದೇಶದ ಒಂದು ಪಟ್ಟಣದಿಂದ ಇನ್ನೊಂದಕ್ಕೆ ಹೋಗಬೇಕಾದರೆ ದ್ವೀಪದ ಪರ್ವತಗಳ, ಕಣಿವೆಗಳ ನಡುವೆ ಕೆಲವೇ ರಸ್ತೆಗಳನ್ನು ಮಾಡಿದ್ದಾರೆ. ಇವುಗಳ ಮಧ್ಯೆ ಹತ್ತಿ ಇಳಿದು, ಸುತ್ತಿ ಬಳಸಿ ಹೋಗಬೇಕು. ಸಮುದ್ರ ತೀರದಲ್ಲಿ ದ್ವೀಪದ ಸುತ್ತಲೂ ಸುಂದರವಾದ ರಸ್ತೆಯನ್ನು ನಿರ್ಮಿಸಿದ್ದಾರೆ ಈ ರಸ್ತೆಗಳಲ್ಲಿ ಹೋಗುವಾಗ ನಿಮಿಷಕ್ಕೊಂದು ಹೊಸ ದೃಶ್ಯ ಕಣ್ಣಿಗೆ ಬೀಳುತ್ತದೆ. ಹಸಿರು ಗಿಡ ಮರಗಳಿಂದ ಬೆಟ್ಟಗುಡ್ಡಗಳು, ಹಸಿರುಮಯವಾದ ಕಣಿವೆಗಳು, ಹಸಿರು ನೀರಿನ ಹಳ್ಳ, ತೊರೆಗಳು ಉದ್ದಕ್ಕೂ ಮನಸೂರೆಗೊಳ್ಳುತ್ತವೆ. ಬೆಟ್ಟದ ತಪ್ಪಲಿನಲ್ಲಿ, ಕಣಿವೆಗಳಲ್ಲಿ ತನಗೆ ತಾನೇ ಬೆಳೆದ ತೆಂಗು, ಬಾಳೆಗಳನ್ನು ಕಾಣಬಹುದು. ಇವುಗಳ ಫಲವನ್ನು ಯಾರು ತಿನ್ನುತ್ತಾರೊ ತಿಳಿಯದು. ತೆಂಗಿನಕಾಯಿಯ ಉಪಯೋಗ ಇಲ್ಲಿ ಮಾಡುವಂತೆ ಕಾಣುವುದಿಲ್ಲ. ಸಮುದ್ರ ತೀರದಲ್ಲಿ ಉದ್ದಕ್ಕೂ ಕೆಂಪುತೆಂಗಿನ ಮರಗಳ ತೋಟಗಳು ಕಾಣುತ್ತವೆ. ತೆಂಗಿನ ಕಾಯಿಗಳನ್ನು ಹೊರದೇಶಗಳಿಗೆ ರಫ್ತು ಮಾಡುತ್ತಾರೆಂದು ಕೇಳಿದೆ. ಇಲ್ಲಿ ನೈಸರ್ಗಿಕವಾದ ವಸ್ತುಗಳಿಗೆ ಬೆಲೆ ಎಂದರೆ, ಅವುಗಳ ರವಾನೆ ಮತ್ತು ರವಾನಿಸುವವನ ಕೂಲಿಗಳನ್ನು ಅವಲಂಬಿಸಿರುತ್ತದೆ. ಕಾಡಿನಿಂದ ಬಾಳೆಹಣ್ಣು ತಂದರೂ ಅದರ ಬೆಲೆ ಪಟ್ಟಣದಲ್ಲಿ ಒಂದು ಡಜನ್‌ಗೆ ಸುಮಾರು 10 ರೂ. ಆಗಿರುತ್ತದೆ.

ದ್ವೀಪದ ನಡುವೆ ಒಂದು ಬೆಟ್ಟದ ತಪ್ಪಲಿನಲ್ಲಿ ಒಂದು Castleton Botanic Garden ಎಂಬ ಉದ್ಯಾನವನ ಮಾಡಿದ್ದಾರೆ. ಇದೇನು ಕೃತಕವಾಗಿ ಬೆಳೆದ ಗಿಡ ಬಳ್ಳಿಗಳದಲ್ಲ. ನೈಸರ್ಗಿಕವಾಗಿ ಬೆಳೆದ ಕೆಲವು ಮರಗಳು, ಬಳ್ಳಿಗಳು, ಗಿಡಗಳು

ಇಲ್ಲಿವೆ. ಇವೆಲ್ಲ ವಿವಿಧ ಬಣ್ಣಗಳನ್ನು ಹೊಂದಿವೆ ಹೂವುಗಳು, ಎಲೆಗಳು ಹಾಗೂ ಕಾಯಿಗಳ ಬಣ್ಣ ವೈವಿಧ್ಯಮಯವಾಗಿರುವುದರಿಂದ ಆಕರ್ಷಕವಾಗಿವೆ. ಈ ಗಿಡ ಮರಗಳ ನಡುವೆ ಪ್ರೇಕ್ಷಕರು ತಿರುಗಾಡುವುದಕ್ಕೆ ದಾರಿಮಾಡಿದ್ದಾರೆ. ಇಲ್ಲಿ ಅಡಿಕೆ ಮರಗಳು ಬಹುಸೊಂಪಾಗಿ ಬೆಳೆದಿವೆ. ಅಡಿಕೆ ಕಾಯಿಗಳು ಬಿದ್ದು ಒಣಗಿ ಚೆಲ್ಲಾಡುತ್ತಿದ್ದುವು. ಅಲ್ಲಿ ಯಾರೂ ಅವುಗಳನ್ನು ಮೂಸಿನೋಡುವುದಿಲ್ಲ. ಅವುಗಳ ಉಪಯೋಗವೇ ಅವರಿಗೆ ತಿಳಿಯದು. ಕೆಲವು ಅಡಿಕೆಕಾಯಿಗಳನ್ನು ತೆಗೆದುಕೊಂಡು ನಾನು ಪ್ಯಾಂಟಿನಜೇಬು ತುಂಬ ತುರುಕಿಕೊಂಡೆ. ಈ ಉದ್ಯಾನವನದ ರಸ್ತೆಯ ಬದಿಯಲ್ಲಿ ಕೆಲವರು ಕಾಡಿನ ಬಿದಿರು ಮತ್ತು ವಿವಿಧರೀತಿಯ ಮರದ ತುಂಡುಗಳಿಂದ ಕಲಾತ್ಮಕವಾದ ವಸ್ತುಗಳನ್ನು ಮಾಡಿ ಮಾರುತ್ತಾರೆ. ಇವುಗಳ ಬೆಲೆ ಭಾರಿ ಹೆಚ್ಚು. ಇವರೇ ಉದ್ಯಾನವನಗಳಲ್ಲಿ ಕರೆದುಕೊಂಡು ಹೋಗಿ ಕೆಲವು ಮರಗಿಡಗಳ ಪರಿಚಯ ಮಾಡಿ ಹಣ ಪಡೆಯುತ್ತಾರೆ.

ದ್ವೀಪದ ಪೂರ್ವ ಭಾಗದಲ್ಲಿ ಪೋರ್ಟ ಆಂಟೋನಿಯೊ ಮುಖ್ಯವಾದ ಊರು, ಪ್ರೇಕ್ಷಣೀಯ ಸ್ಥಳ. ಈ ಊರು ಸಮುದ್ರದೊಳಕ್ಕೆ ಚಾಚಿಕೊಂಡಿದೆ. ಸಮುದ್ರದ ದಂಡೆಯಲ್ಲಿಯೇ ಎತ್ತರವಾದ ಗುಡ್ಡಗಳಿದ್ದು ಅವುಗಳ ಮೇಲೆ ಹೋಟೆಲುಗಳನ್ನು ಪ್ರವಾಸಿಗರಿಗಾಗಿ ನಿರ್ಮಿಸಿದ್ದಾರೆ. ಈ ಗುಡ್ಡಗಳ ಮೇಲೆ ನಿಂತು ನೋಡಿದರೆ ಹಸಿರು ಹಸಿರಾದ ಗುಡ್ಡಗಾಡುಗಳು ಅಲೆ ಅಲೆಯಾಗಿ ಕಾಣುತ್ತವೆ. ಸಮುದ್ರದ ಕಡೆಗೆ ತಿರುಗಿದರೆ ಹಸಿರು ನೀರ. ಜಮಖಾನೆ ಹಾಸಿದಂತೆ ಕಂಗೊಳಿಸುತ್ತದೆ. ಹಸಿರು ನೀರಿನಾಚೆಗೆ ಶಾಯಿಸೀಲಿಯ ನೀರೂ ಕಾಣುತ್ತದೆ. ಪೋರ್ಟ ಆಂಟೋನಿಯೊ ಪಟ್ಟಣದ ಸಮೀಪದಲ್ಲಿಯೇ ಒಂದು ಸಣ್ಣ ದ್ವೀಪವಿದೆ ಸುಮಾರು ಒಂದು ಮೈಲು ಸುತ್ತಳತೆ ಇರಬಹುದು. ಇಲ್ಲಿ ಹಸಿರಾದ ಮರಗಳ ಗುಂಪು ಸಮುದ್ರದ ನಡುವೆ ಸೊಂಪಾಗಿ ಕಾಣುತ್ತದೆ. ಈ ದ್ವೀಪದ ಒಡೆತನ ಒಬ್ಬ ಬಿಳಿಯನಿಗೆ ಸೇರಿದೆಯಂತೆ.

ಸಮುದ್ರ ತೀರದಲ್ಲಿ ಚಲಿಸಿದಂತೆ, ಉದ್ದಕ್ಕೂ ಸಣ್ಣ ಸಣ್ಣ ಪಟ್ಟಣಗಳು ಕಣ್ಣಿಗೆ ಬೀಳುತ್ತವೆ. ಪಟ್ಟಣಕ್ಕೆ ಸಮೀಪದಲ್ಲಿ ಸಮುದ್ರ ತೀರದಲ್ಲಿ ಹೋಟೆಲುಗಳು, ಹೋಟೆಲಿಗೆ ಹೊಂದಿಕೊಂಡು ಮನೋಹರವಾದ ಬೀಚುಗಳು ಕಂಗೊಳಿಸುತ್ತವೆ. ಇವೆಲ್ಲ ಪ್ರವಾಸಿಗರನ್ನು ಆಕರ್ಷಿಸುವ ದೃಷ್ಟಿಯಿಂದ ಸೃಷ್ಟಿಯಾದವುಗಳು. ಸಮತಟ್ಟಾದ ಪ್ರದೇಶಗಳಲ್ಲಿ ಕಬ್ಬಿನ ಗದ್ದೆಗಳೂ, ತೆಂಗಿನ ತೋಟಗಳೂ ಹರಡಿವೆ.

ಪೂರ್ವದ ಕಡೆಯಿಂದ ದ್ವೀಪವನ್ನು ಸುತ್ತಿಕೊಂಡು ಬರುವಾಗ ಮತ್ತೊಂದು ಮುಖ್ಯ ಪಟ್ಟಣ–ಪ್ರವಾಸಿಗರ ದೃಷ್ಟಿಯಿಂದ–ಸಿಗುತ್ತದೆ. ಇಲ್ಲಿ ಪ್ರಸಿದ್ಧ ಬೀಚು ಇದೆ. ಇಲ್ಲಿ ವಿಶ್ವವಿದ್ಯಾನಿಲಯಕ್ಕೆ ಸೇರಿದ ಒಂದು ಈಜು ಘಟ್ಟವೂ ಇದೆ. ವಿಶ್ವವಿದ್ಯಾನಿಲಯ ತನ್ನ ಉದ್ಯೋಗಿಗಳಿಗಾಗಿ ಒಂದು ಅತಿಥಿಗೃಹದಂತೆ ಮಾಡಿ, ಬೀಚನ್ನು ಅಭಿವೃದ್ಧಿ ಪಡಿಸಿದೆ. ರಜಾ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಉದ್ಯೋಗಿಗಳು ಇಲ್ಲಿ ಬಂದು ವಿಹರಿಸುತ್ತಾರೆ. ನನಗೆ ಇವನ್ನೆಲ್ಲ ನೋಡಿ

ವಿಶ್ವವಿದ್ಯಾನಿಲಯ ತನ್ನ ಉದ್ಯೋಗಿಗಳ ಮಾನಸಿಕ ಆರೋಗ್ಯಕ್ಕೆ ಎಷ್ಟೊಂದು ಗಮನ ಕೊಡುತ್ತಿದೆ ಎನ್ನಿಸಿತು. ಇಲ್ಲಿಯ ಬೀಚಿನಲ್ಲಿ ನಾವೂ ಒಂದೆರಡು ಗಂಟೆ ಈಜಿದೆವು. ಮರಳದಂಡೆಯ ಮೇಲೆ ಮೊಸಳೆಗಳಂತೆ ಬಿದ್ದುಕೊಂಡಿರುವ ಕರಿ, ಬಿಳಿ ಮೈ ಹೆಣ್ಣುಗಂಡುಗಳ ದೃಶ್ಯ ಇಲ್ಲಿಯ ಇನ್ನೊಂದು ಆಕರ್ಷಣೆ. ಸಮುದ್ರದಿಂದ ಎದ್ದು ಬಂದು ಅತಿಥಿ ಗೃಹದ ನಲ್ಲಿಯ ತಳಗೆ ಒಳ್ಳೆಯ ನೀರಿನಲ್ಲಿ ಮತ್ತೆ ಸ್ನಾನಮಾಡಿ ಕಿಂಗ್ಸಟನ್ ನಗರಕ್ಕೆ ವಾಪಸ್ಸಾದೆವು.

ಚೀನೀ ಬಂಧುಗಳು

ಇನ್ನೊಂದು ವಾರಾಂತ್ಯದಲ್ಲಿ ಮತ್ತೆ ಮಾಮೂಲಿ ಕೆಲಸವಿಲ್ಲದೆ ಕುಳಿತಿದ್ದಾಗ, ಡಾ. ಬಸವರಾಜು ಫೋನ್‌ಮಾಡಿ, ಒಂಟಿಯಾಗಿ ಏನು ಮಾಡುತ್ತೀರಿ, ಬನ್ನಿ ಸ್ನೇಹಿತರ ಊರಿಗೆ ಪ್ರವಾಸ ಹೋಗಿ ಬರೋಣ ಎಂದು ಆಹ್ವಾನಿಸಿದರು. ಇಂಥ ಆಹ್ವಾನಕ್ಕಿಂತ ಸಂತಸದ ಸುದ್ದಿ ಬೇರೆ ಏನಿದೆ. ಸರಿ, ಬಟ್ಟೆ ಹಾಕಿಕೊಂಡು ಸಿದ್ಧವಾಗುವ ಸಮಯಕ್ಕೆ ಸರಿಯಾಗಿ ಡಾ. ಬಸವರಾಜು ಸಂಸಾರಸಮೇತ ಬಂದು ನನ್ನನ್ನು ಕಾರಿನಲ್ಲಿ ಕೂರಿಸಿಕೊಂಡು ಹೊರಟರು. ಕಿಂಗ್ಸಟನ್ ನಗರದಿಂದ ಸುಮಾರು 40 ಮೈಲಿ ದ್ವೀಪದ ಮಧ್ಯೆ ಬೆಟ್ಟ ಗುಡ್ಡಗಳನ್ನು ಸೀಳಿಕೊಂಡು ಹೋಗುವ ರಸ್ತೆಯಲ್ಲಿ ಉತ್ತರಕ್ಕೆ ಪಯಣಿಸಿದರೆ ಮತ್ತೆ ಸಮುದ್ರ ತೀರ ಪ್ರಾರಂಭವಾಗುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ಸುಮಾರು 60 ಮೈಲಿ ಕಡಲ ತೀರದಲ್ಲಿ ಪಯಣ. ಮೊದಲ ಬಾರಿಗೆ ಪ್ರಯಾಣ ಮಾಡುವವರಿಗೆ ಕಣ್ಣು ಮುಚ್ಚಲು ಸಾಧ್ಯವಾಗದಂಥ ಕ್ಷಣಕ್ಷಣಕ್ಕೆ ಬದಲಾಗುವ ಮನೋಹರ ದೃಶ್ಯ ಗೋಚರಿಸುತ್ತವೆ. ಜಮೈಕಾದ ಪಶ್ಚಿಮ ತೀರದಲ್ಲಿರುವ ಫಾಲ್‌ಮೌತ್ (Falmouth) ಎಂಬ ಪಟ್ಟಣದಲ್ಲಿ ಡಾ. ಬಸವರಾಜು ಅವರ ಸ್ನೇಹಿತರಾದ ಡಾ. ವಿಶ್ವನಾಥ್ ವೈದ್ಯರಾಗಿ ಕೆಲಸಮಾಡುತ್ತಿದ್ದಾರೆ. ಫಾಲ್‌ಮೌತ್‌ಗೆ ಕಿಂಗ್ಸಟನ್ ನಗರದಿಂದ ಸುಮಾರು ನೂರು ಮೈಲಿ ದೂರ. ದ್ವೀಪದ ಬೆಟ್ಟ, ಕಣಿವೆಗಳ ಪ್ರದೇಶದಲ್ಲಿ ರಸ್ತೆ ಬದಿಯಲ್ಲಿ ಅಲ್ಲಲ್ಲಿ ಹಣ್ಣಿನ ಅಂಗಡಿಗಳಿರುತ್ತವೆ. ಕಿತ್ತಲೆ ಹಣ್ಣುಗಳನ್ನು ಮರದ ರೆಂಬೆಗಳಿಗೆ ಕಟ್ಟಿ ಮಣಿಗಳಂತೆ ಜೋಡಿಸಿ ನೇತು ಹಾಕಿರುತ್ತಾರೆ. ಬಾಳೆಹಣ್ಣುಗಳು, ಸುಟ್ಟ ಹಲ್ಲು ಜೋಳದ ತೆನೆಗಳು, ಸುಟ್ಟ ಒಂದು ತರಹದ ಗೆಡ್ಡೆಗಳು ಈ ಅಂಗಡಿಗಳಲ್ಲಿ ಸಿಗುತ್ತವೆ. ಅಲ್ಲಲ್ಲಿ ಕಾರು ನಿಲ್ಲಿಸಿ ಅವುಗಳನ್ನೆಲ್ಲ ತುಂಬಿಕೊಂಡು ತಿನ್ನುತ್ತಾ ಪ್ರಯಾಣ ಮುಂದುವರಿಯಿತು. ನೂರು ಮೈಲಿ ವಿಶ್ರಾಂತಿಯಿಲ್ಲದೆ ಪ್ರಯಾಣಿಸಿದರೂ ಒಂದು ಸ್ವಲ್ಪವೂ ಆಯಾಸವಾಗಲಿಲ್ಲ.

ಈ ಬೆಟ್ಟ ಗುಡ್ಡಗಳ ಪ್ರದೇಶದಲ್ಲಿ ಒಂದು ಕಣಿವೆ ಇದೆ. ಈ ಕಣಿವೆಯ ನಡುವೆ ರಸ್ತೆ ಮಾಡಿದ್ದಾರೆ. ಬಹು ಕಿರಿದಾದ ಓಣಿಯಂತಿದೆ. ಸುಮಾರು ಒಂದೂವರೆ ಮೈಲಿ ದೂರವಿರುವ ಈ ಓಣಿಗೆ ಫರ್ನ್‌ಗಲ್ಲಿ (Ferngully) ಎಂದು ಹೆಸರು. ಎರಡು ಬದಿಯ ಮರಗಳು ಮೇಲೆ ಕೂಡಿಕೊಂಡು ವಾಸ್ತವಿಕವಾಗಿ ಒಂದು ಸುರಂಗದಂತಿದೆ.

ರಸ್ತೆಯೆಲ್ಲ ಮುಚ್ಚುಗತ್ತಲೆ. ರಸ್ತೆಯಲ್ಲಿ ಬೆಟ್ಟಗಳಿಂದ ಇಳಿಯುವ ನೀರು ಹರಿಯುತ್ತಿರುತ್ತದೆ. ರಸ್ತೆ ಹಾವಿನಂತೆ ಮುಂದುವರಿಯುತ್ತದೆ. 25 ಗಜಗಳ ದೂರದಲ್ಲಿ ಬರುವ ವಾಹನ ಕಾಣುವುದಿಲ್ಲ. ವಾಹನಗಳಿಗೆ ದೀಪಗಳನ್ನು ಹಾಕಿಕೊಂಡು, ಹಾರ್ನ್ ಮಾಡುತ್ತಾ ಚಲಿಸಬೇಕು. ಇಲ್ಲದಿದ್ದರೆ ಅಪಾಯ ಖಂಡಿತ. ಜೋರಾಗಿ ಮಳೆ ಬಂದರೆ ಈ ಓಣಿ ದೊಡ್ಡ ಕಾಲುವೆಯೇ ಆಗುತ್ತದೇನೋ! ಇಲ್ಲೂ ತಿರುವು ಮುರುವಿನ ರಸ್ತೆಯ ಪಕ್ಕದಲ್ಲಿ ಅಂಗಡಿಗಳು, ಗುಡಿಸಲುಗಳಿವೆ.

ಬೆಟ್ಟ ಗುಡ್ಡಗಳನ್ನು ದಾಟಿ ಸಮುದ್ರ ತೀರಕ್ಕೆ ಬಂದರೆ ಉದ್ದಕ್ಕೂ ಹೋಟೆಲುಗಳು, ಬೀಚುಗಳು; ಪ್ರವಾಸಿಗರಿಂದ ಹಣ ಸುಲಿಯುವ ಉಪಾಯಗಳು ಇವು. ಈ ತೀರದಲ್ಲೇ ಪ್ರಸಿದ್ಧವಾದ ಒಚೋರಿಯೋಸ್ (Ochorios), ಡಿಸ್ಕವರಿ (Discovery) ಮತ್ತು ರನ್ನವೇ (Runaway) ಕೊಲ್ಲಿಗಳಿವೆ. ಇಲ್ಲೆಲ್ಲ ಹೆಸರುವಾಸಿಯಾದ ಹೋಟೆಲುಗಳು, ಬೀಚುಗಳೂ ಇವೆ. ಡಿಸ್ಕವರಿ ಬೇ ಎಂಬಲ್ಲಿ ವಿಶ್ವವಿದ್ಯಾನಿಲಯದ ಒಂದು ಸಂಶೋಧನಾ ಕೇಂದ್ರವಿದೆ. ಸಂಬಂಧಪಟ್ಟ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಒಂದು ತಮ್ಮ ಸಂಶೋಧನಾ ಕಾರ್ಯದ ಜೊತೆಗೆ ವಿಹರಿಸಲೂ ಬಹುದು. ಈ ಎಲ್ಲಾ ವಿಹಾರ ಕೇಂದ್ರಗಳನ್ನು ಹಾಯ್ದು ಸಂಜೆ 5 ಗಂಟೆಗೆ ಫಾಲ್‌ಮೌತ್ ತಲಪಿದೆವು

ಡಾ. ವಿಶ್ವನಾಥ್ ನೀಲಗಿರಿ ಕನ್ನಡಿಗರು. ಅವರ ಕ್ವಾರ್ಟರ್ಸ್ ಸಮುದ್ರಕ್ಕೆ ಎದುರಾಗಿರುವ ಒಂದು ದೊಡ್ಡ ಬಂಗಲೆ. ಆಸ್ಪತ್ರೆಗೆ ಹೊಂದಿಕೊಂಡೇ ಇವೆ. ಅವರ ಪತ್ನಿ ಇನ್ನೂ ಊರಿಂದ ಬಂದಿರಲಿಲ್ಲವಾದ್ದರಿಂದ ವಿಶ್ವನಾಥರು ಬ್ರಹ್ಮಚಾರಿಯಾಗಿದ್ದರು. ನಾವು ಬರುವ ವಿಷಯ ಮೊದಲೇ ದೂರವಾಣಿಯ ಮೂಲಕ ತಿಳಿಸಿದ್ದರಿಂದ ಭೋಜನ ಸಿದ್ಧವಾಗಿತ್ತು. ಊಟವೆಲ್ಲ ಕೋಳಿಮಯವಾಗಿತ್ತು. ನಮಗಾಗಿ ಎಷ್ಟು ಕೋಳಿಗಳು ಪ್ರಾಣ ತೆತ್ತವೋ ತಿಳಿಯದು. ಇಲ್ಲಿ ಕೋಳಿ ಮಾಂಸ ತರಕಾರಿಗಿಂತ ಅಗ್ಗವಂತೆ. ಎಂದರೆ ತರಕಾರಿ ಅಷ್ಟು ದುಬಾರಿ! ಆದರೆ ಇಲ್ಲಿಯೂ ಕೋಳಿ ಮಾಂಸ ನಮ್ಮ ಮನೆಯಲ್ಲಿರುವಂತಿರಲಿಲ್ಲ. ಇಲ್ಲಿ ಅಡುಗೆ ಮಾಡಿದ್ದವರೂ ಜಮೈಕಾದ ಹೆಂಗಸೇ!

ಮೂರನೆ ದಿನ ಬೆಳಗ್ಗೆ ಡಾ. ವಿಶ್ವನಾಥರ ಸ್ನೇಹಿತರಾದ ಒಬ್ಬ ಚೀನೀ ಅಂಗಡಿ ಮಾಲೀಕರ ನೆರವಿನಿಂದ ಒಂದು ಖಾಸಗಿ ಬೀಚಿಗೆ ಹೋದೆವು. ಸಮುದ್ರ ದಂಡೆಯ ಖಾಸಗಿ ತೋಟದ ಪಕ್ಕದಲ್ಲಿ ಬೀಚು ಮಾಡಿದ್ದಾರೆ. ಅಲ್ಲಿಯೇ ಒಂದೆರಡು ಮನೆಗಳಿವೆ. ಅಲ್ಲಿ ಯಾರೂ ವಾಸಿಸುತ್ತಿರಲಿಲ್ಲ ನಾವೆಲ್ಲ ಈ ಬೀಚಿಗೆ ಇಳಿದವರು ಮೆಲ್ಲಗೆ ನಡೆಯುತ್ತಾ ಒಂದು ಫರ್ಲಾಂಗ್ ದೂರದಲ್ಲಿದ್ದ ಒಂದು ದೊಡ್ಡ ಹೋಟೆಲು ಬೀಚಿಗೆ ಬಂದೆವು ಇಲ್ಲೆಲ್ಲ ವಿದೇಶೀ ಪ್ರವಾಸಿಗರು ಹೆಚ್ಚು ಬಿಳಿ ಹೆಣ್ಣು ಗಂಡುಗಳು ಬೀಚಿನಲ್ಲಿ ವಿಹರಿಸುತ್ತಿದ್ದವು. ನಾವು ಇಲ್ಲಿಯೂ ಬಿದ್ದು, ಏಳೆದ್ದು ಪಕ್ಕದ ಹೋಟೆಲಿನಲ್ಲಿ ಬೀರು ಕುಡಿದು ಮತ್ತೆ ಸಮುದ್ರಕ್ಕೆ ಬಿದ್ದು ಮೇಲೆದ್ದು ನಲ್ಲಿ ನೀರಿನಲ್ಲಿ

ಮೈ ತೊಳೆದೆವು. ಸಮುದ್ರಕ್ಕೆ ಬಿದ್ದ ಮೇಲೆ ಉಪ್ಪಿನಿಂದ ಉರಿಯುವ ಮೈಯನ್ನು ನಲ್ಲಿ ನೀರಿನಿಂದ ತೊಳೆಯಬೇಕು. ಮಾನಗೆಟ್ಟ ಸಮುದ್ರ ಸ್ನಾನವಾದ ಮೇಲೆ ಮರ್ಯಾದೆಯ ಕೋಣೆಯ ಸ್ನಾನ ಬೇಕೇ ಬೇಕು.

ಸಂಜೆ ಡಾ. ವಿಶ್ವನಾಥ್ ತಮ್ಮ ಚೀನೀ ಸ್ನೇಹಿತರ ಅಂಗಡಿ ಕಡೆಗೆ ಕರೆದುಕೊಂಡು ಹೋದರು. ಇಲ್ಲೆಲ್ಲ ಚೀನಿಯರು ಒಳ್ಳೆಯ ವ್ಯಾಪಾರಗಾರರು. ಅವರ ಸರ್ವವಸ್ತುಗಳ ಅಂಗಡಿಗಳು ಬಹಳ ಪ್ರಸಿದ್ಧ. ಡಾ. ವಿಶ್ವನಾಥರ ಚೀನೀ ಸ್ನೇಹಿತ ಮತ್ತು ಅವರ ಹೆಂಡತಿ ನಮ್ಮೆಲ್ಲರಿಗೂ ಒಂದೇ ದಿನದಲ್ಲಿ ಆತ್ಮೀಯರಾಗಿದ್ದರು. ಈ ಗಂಡ ಹೆಂಡತಿಯರು ಬೇರೆ ಬೇರೆ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಗಂಡ ಸಾಮಾನ್ಯ ಪದಾರ್ಥಗಳ ಅಂಗಡಿ ಇಟ್ಟಿದ್ದಾರೆ. ಅದರ ಪಕ್ಕದಲ್ಲಿಯೇ ಹೆಂಡತಿ ಸಿದ್ಧ ಉಡುಪಿನ ಅಂಗಡಿ ಇಟ್ಟಿದ್ದಾರೆ. ಇಬ್ಬರದೂ ಬೇರೆ ಬೇರೆ ಬ್ಯಾಂಕ್ ಲೆಕ್ಕವಿದೆಯಂತೆ. ಮನೆಯ ಖರ್ಚಿಗೂ ಇಬ್ಬರೂ ತಮ್ಮ ತಮ್ಮ ಲೆಕ್ಕದಲ್ಲಿ ಕೊಡುತ್ತಾರೆ. ಈ ಚೀನೀ ಸ್ನೇಹಿತ ಭಾರತಕ್ಕೆ ಒಮ್ಮೆ ಬಂದಿದ್ದರಂತೆ. ಅಲ್ಲಿ ಭಾರತದ ಹಿಂದಿ ಸಿನಿಮಾ ತಾರೆಯೊಬ್ಬಳ ಸ್ನೇಹವಾಯಿತಂತೆ. ಜೀನತ್ಅಮಾನ್‌ಳು ಬರೆದ ಒಂದು ಪತ್ರವನ್ನು ನಮಗೆ ತೋರಿಸಿದರು. ಅದರಲ್ಲಿ ಆಕೆಯ ಚಿತ್ರವೂ ಇತ್ತು. ಈ ವಿಷಯವನ್ನು ತನ್ನ ಹೆಂಡತಿಯ ಎದುರಿನಲ್ಲಿಯೇ ಹೇಳಿದರು. ಆಕೆ ಇದಕ್ಕೆ ಏನೂ ಮಹತ್ವ ಕೊಡದೆ ಸಾಮಾನ್ಯ ವಿಷಯವೆಂಬಂತೆ ಮಾತನಾಡುತ್ತಿದ್ದರು.

ಈ ದ್ವೀಪದಲ್ಲಿ ಅಂಗಡಿ ವ್ಯಾಪಾರ ಸಂಜೆ 5.30ಕ್ಕೆ ಮುಕ್ತಾಯವಾಗುತ್ತದೆ. ಚೀನೀ ಬಂಧುಗಳು ಬಾಗಿಲು ಹಾಕುವುದಕ್ಕೆ ಅಣಿಯಾಗುತ್ತಿದ್ದರು. ನಮ್ಮ ದೇಶದಲ್ಲಿ ಇದು ಅಂಗಡಿ ವ್ಯಾಪಾರ ಪ್ರಾರಂಭವಾಗುವ ಸಮಯ ಎಂದು ನಾನು ಹೇಳಿದಾಗ ಚೀನೀ ಬಂಧುಗಳು ಆಶ್ಚರ್ಯಪಟ್ಟರು. ರಾತ್ರಿ ಸಮಯದಲ್ಲಿ ಇಲ್ಲಿ ವ್ಯಾಪಾರ ಸಾಧ್ಯವೇ ಇಲ್ಲವಂತೆ !

ಫಾಲ್‌ಮೌತ್‌ನಲ್ಲಿ ಒಂದು ಮೊಸಳೆಗಳ ಉದ್ಯಾನವಿದೆ. ಹೇಳಿಕೊಳ್ಳುವಂಥ ಮೊಸಳೆಗಳ ಸಂಗ್ರಹವೂ ಇಲ್ಲಿಲ್ಲ. ನಮ್ಮ ಮದ್ರಾಸ್‌ನ ಮಹಾಬಲಿಪುರಂ ಹತ್ತಿರವಿರುವ ಮೊಸಳೆ ಉದ್ಯಾನ ಇದಕ್ಕಿಂತ ಎಷ್ಟೋ ಮೇಲು. ಆದರೆ ಇಲ್ಲಿ ಪ್ರವೇಶ ಶುಲ್ಕವಷ್ಟೇ ಜಾಸ್ತಿ, ಮೂರು ಡಾಲರು (15 ರೂ.).

ಮಧ್ಯಾಹ್ನದ ಊಟಕ್ಕೆ ಚೀನೀ ಬಂಧುಗಳ ಮನೆಗೆ ಹೋಗಿದ್ದೆವು. ಹಿಂದಿನ ರಾತ್ರಿ ದೂರದರ್ಶನ ಕಾರ್ಯಕ್ರಮ ವೀಕ್ಷಿಸಲು ಹೋಗಿದ್ದಾಗ ಅವರು ಮರುದಿನದ ಊಟಕ್ಕೆ ಆಹ್ವಾನವಿತ್ತಿದ್ದರು. ಚೀನೀ ಬಂಧುಗಳು ನಿಜವಾದ ಬಂಧುಗಳಾಗಿದ್ದರು. ಅವರ ಮನೆಯಲ್ಲಿ ಎಲ್ಲೆಂದರಲ್ಲಿ ಓಡಾಡಿ ನೋಡುವಷ್ಟು ಸ್ವಾತಂತ್ರ್ಯ ಬಂದಿತ್ತು. ಅವರ ಮನೆಯ ಒಂದು ದೊಡ್ಡ ಕೊಠಡಿಗೆ ಪ್ರವೇಶಿಸಿದಾಗ ನಮಗೆ ಅಲ್ಲಿದ್ದ ಡಾ. ದಾಸ್ ದಂಪತಿಗಳ ಪರಿಚಯವಾಯಿತು. ಡಾ. ದಾಸ್ ದಂಪತಿಗಳು ಕಲ್ಕತ್ತಾದವರು. ಈಗ ಈ ಚೀನೀ ಬಂಧುಗಳ ಮನೆಯಲ್ಲೇ ವಾಸವಾಗಿದ್ದಾರೆ,

ಖಾಯಂ ಅತಿಥಿಗಳಾಗಿ. ಡಾ. ದಾಸ್ ಅವರ ಕಥೆಯನ್ನು ಕೇಳಿ ಚೀನೀ ಬಂಧುಗಳ ಬಗ್ಗೆ ಅಭಿಮಾನ ಮೂಡಿತು.

ಡಾ. ದಾಸ್ ಅವರದು ಒಂದು ದುರಂತ ಕಥೆ. ಇವರು ಆಫ್ರಿಕಾದಲ್ಲಿ ಸುಮಾರು ವರ್ಷ ಸೇವೆಯಲ್ಲಿದ್ದು 10 ವರ್ಷಗಳ ಹಿಂದೆ ಇಲ್ಲಿಗೆ ಸರ್ಕಾರಿ ಸೇವೆಯ ಮೇಲೆ ಬಂದರು. 1979ರಲ್ಲಿ ಇಲ್ಲಿ ಚುನಾವಣೆಯ ಕಾಲದಲ್ಲಿ ಎರಡು ಪಕ್ಷಗಳ ಮಾರಾಮಾರಿ ಸೆಣಸಾಟ ನಡೆಯಿತು. ಡಾ. ದಾಸ್ ವೈದ್ಯರಾಗಿದ್ದುದರಿಂದ ಆ ಮಾರಾಮಾರಿಯ ಪರಿಣಾಮವನ್ನು ಪ್ರತ್ಯಕ್ಷವಾಗಿ ನೋಡಿದರು. ನಮ್ಮ ದೇಶದ ಚುನಾವಣೆಯಲ್ಲಿ ನಡೆಯುವುದು ಕೇವಲ ಜಗಳ. ಇಲ್ಲಿ ಚುನಾವಣೆ ಜಗಳದಲ್ಲಿ ತೋಳು ಕತ್ತರಿಸಿಕೊಂಡವರು, ಕಾಲುತುಂಡಾದವರು, ಕಣ್ಣು ಕಳೆದುಕೊಂಡವರು, ನೇತಾಡುವ ಅಂಗಾಂಗಗಳನ್ನು ಹೊತ್ತುಕೊಂಡವರು ದಂಡುದಂಡಾಗಿ ಆಸ್ಪತ್ರೆಗೆ ಬರುತ್ತಿದ್ದರಂತೆ. ಯಾವ ಪಕ್ಷದವರೇ ಆಗಲಿ ಪಕ್ಷಪಾತವಿಲ್ಲದೆ ಡಾ. ದಾಸ್ ಸಾಧ್ಯವಾದ ಸೇವೆ ಮಾಡುತ್ತಿದ್ದರು. ಅಮೆರಿಕದ ಬೆಂಬಲವುಳ್ಳ ಪಕ್ಷ ರಷ್ಯದವರ ಬೆಂಬಲವುಳ್ಳ ಪಕ್ಷಗಳು, ಡಾ. ದಾಸ್ ಅವರು ತಮ್ಮ ತಮ್ಮ ಪಕ್ಷದವರಿಗೆ ಮಾತ್ರ ಶುಶ್ರೂಷೆ ಮಾಡಬೇಕೆಂದು ಬಯಸಿದ್ದುವು. ಡಾ. ದಾಸ್ ಅವರ ನಿಷ್ಪಕ್ಷಪಾತವಾದ ಸೇವೆಯನ್ನು ಸಹಿಸದೆ ಎರಡೂ ಪಕ್ಷಗಳವರು ಅವರ ಮೇಲೆ ಬೆದರಿಕೆ ಹಾಕಲು ಪ್ರಾರಂಭಿಸಿದರು. ಕೆಲವು ಭಾರತೀಯ ವೈದ್ಯರು ಹೆದರಿ ಇಲ್ಲಿಂದ ಕಾಲು ಕಿತ್ತರು. ಸ್ಥಳೀಯ ಮುಖಂಡರ ಸಹಾಯದಿಂದ ಡಾ. ದಾಸ್ ದಂಪತಿಗಳು ಹೆದರಿ ಓಡಿ ಹೋಗದೆ ಸೇವಾ ಮನೋಭಾವದಿಂದ ಇಲ್ಲೇ ಉಳಿದರು. ಡಾ. ದಾಸ್ ಅವರ ಪ್ರಭಾವ ಮತ್ತು ಪ್ರಾಬಲ್ಯಗಳನ್ನು ಸಹಿಸದ ಕೆಲವರು ಭಾರತೀಯ ವೈದ್ಯರು ಬೇನಾಮಿ ಪತ್ರಗಳನ್ನು ಬರೆದು ಬೆದರಿಕೆ ಹಾಕಿದರು. ಸಹಸ್ರಾರು ಮೈಲಿಗಳಿಂದ ಜೀವನೋಪಾಯಕ್ಕಾಗಿ ಬಂದು ದುಡಿಯುವ ಈ ಜನ ಈರ್ಷ್ಯೆ, ದ್ವೇಷಗಳಿಂದ ಕುದಿಯುವುದು ನನ್ನ ಗಮನಕ್ಕೂ ಬಂದಿತ್ತು. ಡಾ. ಬಸವರಾಜು ಅವರ ಹೆಂಡತಿ ಹೇಳುತ್ತಿದ್ದರು, ಸುಮಾರು ಜನ ಕನ್ನಡಿಗರ ಸಂಸಾರಗಳಿದ್ದರೂ ಅನ್ಯೋನ್ಯತೆ ಮಾತ್ರ ಇಲ್ಲ ಎಂದು. ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಅಸೂಯೆ! ದೇಶ, ಕೋಶ, ಆಪ್ತರನ್ನೆಲ್ಲಾ ಬಿಟ್ಟು ಬಂದ ಈ ಜನ ಅಸೂಯೆಯನ್ನು ಮಾತ್ರ ಬಿಟ್ಟಿಲ್ಲವಲ್ಲ!

ನಾನೊಮ್ಮೆ ಒಬ್ಬ ಡಾಕ್ಟರ್ ಮಿತ್ರರಿಗೆ, ಇಷ್ಟೊಂದು ಜನ ಕನ್ನಡಿಗರಿದ್ದೀರಿ, ಒಂದು ಕನ್ನಡ ಸಂಘ ಸ್ಥಾಪಿಸೋಣ ಬನ್ನಿ ಎಂದು ಹೇಳಿದೆ. ಅದಕ್ಕೆ ಅವರು ಬೆಚ್ಚಿ ತಕ್ಷಣ ಹೇಳಿದರು "ಸ್ವಾಮಿ, ನಾವು ಕನ್ನಡಿಗರೆಂದು ಮಾತ್ರವಲ್ಲ, ಭಾರತೀಯರೆಂದು ಗೊತ್ತಾಗುವುದು ಬೇಡ. ಹಾಗಾದರೆ ನಮಗೇ ಅಪಾಯ." ಅದಕ್ಕೆ ಕಾರಣವೇನೆಂದು ಆಮೇಲೆ ತಿಳಿಯಿತು. ಈ ವೈದ್ಯರು ಮೂವರನ್ನು ಇಲ್ಲಿಯ ಬಂದೂಕುಧಾರಿಗಳು (Gunmen) ಮುತ್ತಿ ಬೆದರಿಸಿ, ಗಡಿಯಾರ, ರೇಡಿಯೋ ಮೊದಲಾದವುಗಳನ್ನು

ಕಿತ್ತುಕೊಂಡ. ಹೋದರಂತೆ. ಅವರು ಹೊರಟು ಹೋದ ಮೇಲೆ ಇವರು ಇಲ್ಲಿಯ ಇಂಡಿಯನ್ ಹೈಕಮೀಷನರಿಗೆ ಫೋನ್ ಮಾಡಿ ಸಹಾಯ ಕೋರಿದಾಗ ಅವರು, ತಮಗೂ ಅದಕ್ಕೂ ಸಂಬಂಧವಿಲ್ಲ, ನೀವು ನಮ್ಮ ಅನುಮತಿ ಪಡೆದು ಇಲ್ಲಿಗೆ ಬಂದಿಲ್ಲ ಎಂದರಂತೆ! ದೇಶ, ಜನ, ಸಂಸ್ಕೃತಿಗಳ ಅಭಿಮಾನವಿಲ್ಲದವರನ್ನು ದೇಶದ ಪ್ರತಿನಿಧಿಯಾಗಿ ಕಳಿಸುವುದರಿಂದ ಏನು ಪ್ರಯೋಜನವೋ ನನಗೆ ತಿಳಿಯದು.

ಡಾ. ದಾಸ್ ಅವರ ಕಥೆ ಇಲ್ಲಿಗೆ ಮುಗಿಯಲಿಲ್ಲ. ಪಕ್ಷಗಳ ಮುಖಂಡರು ತಮ್ಮ ವಿರೋಧ ಪಕ್ಷದ ಜನರಿಗೆ ಚಿಕಿತ್ಸೆ ಮಾಡುವುದನ್ನು ತಡೆಯಲು ದಾಸ್ ಅವರ ಮನೆ ಮುಂದೆ ರಾತ್ರಿ ಸಮಯದಲ್ಲಿ ಬಂದು ಗುಂಡು ಹಾರಿಸುತ್ತಿದ್ದರಂತೆ. ಅದರಿಂದ ತಪ್ಪಿಸಿಕೊಳ್ಳಲು ಇವರು ನೆಲಮಾಳಿಗೆ ಮಾಡಿಸಿಕೊಂಡು ವಾಸಿಸುತ್ತಿದ್ದರಂತೆ. ಯಾವ ಪಕ್ಷಕ್ಕೂ ಸೇರದೆ, ಎರಡು ಪಕ್ಷಕ್ಕೂ ದೂರಾದವರ ಕಥೆ ಇದು! ಕೊನೆಗೂ ಸಾಹಸದಿಂದ ಇಲ್ಲಿ ಉಳಿಯಲು ಮಾಡಿದರು ದಾಸ್ ದಂಪತಿಗಳು.

1981ನೇ ಡಿಸೆಂಬರ್‌ನಲ್ಲಿ ಕಾರಿನಲ್ಲಿ ಹೋಗುತ್ತಿರುವಾಗ ಅಪಘಾತವಾಗಿ ಡಾ. ದಾಸ್ ಅವರ ಎರಡು ಕಾಲುಗಳೂ ಮುರಿದು ಹೋಗಿ ಈಗ ಚೀನೀ ಸ್ನೇಹಿತರ ಮನೆಯಲ್ಲಿ ಅತಿಥಿಗಳಾಗಿ ಇದ್ದಾರೆ. ಇವರಿಗೆ ಒಂದು ದೊಡ್ಡ ಕೋಣೆ ಕೊಟ್ಟಿದ್ದಾರೆ ಈ ಚೀನೀ ಬಂಧುಗಳು. ಇವರ ಮನೆಯಲ್ಲೇ ಊಟ, ತಿಂಡಿಗಳ ವ್ಯವಸ್ಥೆಯೆಲ್ಲ.

ಡಾ. ದಾಸ್ ಅವರ ಹೆಂಡತಿ ಈಗಲೂ ಶುದ್ಧ ಬೆಂಗಾಲಿ ಸ್ತ್ರೀಯಾಗಿ ಉಳಿದಿದ್ದಾರೆ. ಉದ್ದನೆಯ ಇಳಿಬಿಟ್ಟ ಕೂದಲು, ದೊಡ್ಡ ಹಣೆಯ ತಿಲಕ. ಅವರ ಹತ್ತಿರ ಕುಳಿತು ವಿಶ್ವಾಸದಿಂದ ಅವರ ಕಥೆ ಕೇಳುತ್ತಿದ್ದ ನಮ್ಮನ್ನು ಕಂಡು ಅವರಿಗೆ ಸಂತೋಷವಾಯಿತು. ಈ ದೇಶದಲ್ಲಿಯೇ ಬದುಕಲು ಬಂದಿದ್ದ ನಮ್ಮ ವೈದ್ಯಮಿತ್ರರಿಗೆ ಡಾ. ದಾಸ್ ದಂಪತಿಗಳು ಹಿತನುಡಿದರು.

ಇಲ್ಲಿಯ ಜನಕ್ಕೆ ಸಂಸ್ಕೃತಿ ಇಲ್ಲದಿರುವುದರ ಬಗ್ಗೆ, ಹರಕು ಮುರುಕು ವ್ಯಾಕರಣ ರಹಿತ ಇಂಗ್ಲಿಷ್ ಬಗ್ಗೆ ತೀರ ಅಭಿಮಾನವಂತೆ. ಎಲ್ಲ ಜನಾಂಗದ ಮಿಶ್ರಣವಾದ ಈ ಜನಕ್ಕೆ ಒಂದು ಶುದ್ಧ ಸಂಸ್ಕೃತಿಯಿಲ್ಲ. ತಮ್ಮೆಲ್ಲ ಮಾತೃಭಾಷೆಗಳನ್ನು ಮರೆತು ಪರಭಾಷೆ ಇಂಗ್ಲಿಷನ್ನೇ ಮಾತೃಭಾಷೆ ಮಾಡಿಕೊಂಡ ಇವರಿಗೆ ಕ್ರಿಯಾಪದರಹಿತ ವಾಗಿ ಇಂಗ್ಲಿಷ್ ಮಾತನಾಡುವುದೇ ಪ್ರಿಯವಾದುದು. ಬಿಳಿಯರ ವೇಷ ಭೂಷಣ, ಆಚಾರವ್ಯವಹಾರಗಳ ಅನುಕರಣೆ ಮಾತ್ರ ನೂರಕ್ಕೆ ನೂರರಷ್ಟಿದೆ. ಇಲ್ಲಿಯ ಹಿಂದೂಗಳು ಕೈಯಲ್ಲಿ ಊಟಮಾಡುವುದನ್ನು ಕಂಡರೆ ಜಮೈಕನರು ಅಸಹ್ಯ ಪಟ್ಟು ಕೊಳ್ಳುತ್ತಾರೆ. ಚಮಚ, ಫೋರ್ಕುಗಳಿಲ್ಲದೆ ಊಟ, ತಿಂಡಿ ಮಾಡುವುದಿಲ್ಲ ಇವರು. ಶೀತ, ಚಳಿಗಳಿಗೆ ಹಿಂಜರಿದು ನೀರು ಮುಟ್ಟದೆ ಬಿಳಿಯರು ಕಾಗದದಲ್ಲಿ ಅಂಡು ಒರಸಿದರೆ, ಉಷ್ಣದೇಶದ ಇವರೂ ಕಾಗದದಲ್ಲಿ ಅಂಡು ಒರಸುತ್ತಾರೆ. ಅಂಧಾನು ಕರಣೆಗಳು ಜಾಸ್ತಿ. ಇವುಗಳಿಗೆ ಹೊಂದಿಕೊಂಡಂತೆ ನಟಿಸಬೇಕು. ಜನರನ್ನು ಅರಿತು ಕೊಳ್ಳಬೇಕು ಎಂದು ಡಾ. ದಾಸ್ ಹಿತವಚನ ಹೇಳಿದರು. ನೀವು ಯಾವಾಗ

ಭಾರತಕ್ಕೆ ಹಿಂದಿರುಗುತ್ತೀರಿ ಎಂದು ನಾನು ಅವರನ್ನು ಕೇಳಿದೆ. ಹಿಂದಕ್ಕೆ ಹೋಗಲು ತುಂಬಾ ಇಷ್ಟ ಇದೆ. ಆದರೆ ಹಿಂದಿರುಗಲಾರದಂಥ ಏನಾದರೂ ಪರಿಸ್ಥಿತಿ ಒದಗುತ್ತಲೇ ಇರುತ್ತದೆ ಎಂದರು. ದಾಸ್ ಅವರ ಹೆಂಡತಿ ಭಾರತಕ್ಕೆ ಹಿಂದಿರುಗೋಣ ಎಂದು ಒತ್ತಾಯ ಮಾಡುತ್ತಿದ್ದ ಸಮಯದಲ್ಲೇ ಇನ್ನೊಂದು ಉದ್ಯೋಗದ ಕರಾರಿಗೆ ಸಹಿ ಹಾಕುವ ಸಂದರ್ಭ ಒದಗಿತಂತೆ. ಸಹಿ ಹಾಕಿದ ಕೆಲವೇ ದಿನಗಳಲ್ಲಿ ಇವರಿಗೆ ಅಪಘಾತ ವಾಯಿತಂತೆ. ಈಗ ಇವರಿಗೆ ಸರ್ಕಾರಿ ಸಂಬಳ ಸಿಕ್ಕುತ್ತಿದೆಯಂತೆ. ಇಲ್ಲದಿದ್ದರೆ ಅನ್ನವಿಲ್ಲದೆ ಸಾಯಬೇಕಾಗುತ್ತಿತ್ತು ಎಂದರು. ದೇವರಿಚ್ಛೆ ಹೇಗಿದೆಯೋ ನೋಡ ಬೇಕು ; ನಾವೆಲ್ಲ ಅವನ ಆಜ್ಞಾ ಪಾಲಕರು ತಾನೆ ಎಂದರು.

ಚೀನೀ ಬಂಧುಗಳ ಮನೆಯಲ್ಲಿ ಭೋಜನ ಭರ್ಜರಿಯಾಗಿತ್ತು. ಇಲ್ಲಿಯ ನೀಗ್ರೊ ಮನೆಗಳಿಗಿಂತ ಚೀನೀಯರು ಮಾಡುವ ಊಟ ಭಾರತೀಯರಿಗೆ ಹಿಡಿಸುತ್ತದೆ. ಹಿಂದೂಗಳಿಗೆ ಚೀನೀಯರ ಬಗ್ಗೆ ವಿಶ್ವಾಸವಿರುತ್ತದೆ. ಜಮೈಕಾ ದ್ವೀಪದಲ್ಲಿ ಸುಮಾರು 50,000 ಜನ ಚೀನೀಯರು ಇದ್ದಾರಂತೆ. ಇವರ ಮುಖ್ಯ ಕಸಬು ವ್ಯಾಪಾರ. ಚೀನೀಯರು ಸ್ನೇಹಪರರು. ವಿಶ್ವವಿದ್ಯಾನಿಲಯದಲ್ಲಿ ಪಠ್ಯೇತರ ಶಿಕ್ಷಣ ವಿಭಾಗದಲ್ಲಿ ಒಬ್ಬ ಚೀನೀ ಮಹಿಳೆ ಟೆರ್ರಿ ಎಂಬುವರು ಇದ್ದಾರೆ. ಇವರ ಪತಿ ವೈದ್ಯಕೀಯ ವಿಭಾಗದಲ್ಲಿ ಅಧ್ಯಾಪಕರು. ಟೆರ್ರಿ ಕೂಡ ತುಂಬಾ ಸ್ನೇಹಪರರು. ನೀಲಿಬೆಟ್ಟದ ಮೇಲಿನ ವಿಶ್ವವಿದ್ಯಾನಿಲಯದ ಅತಿಥಿಗೃಹಕ್ಕೆ ಪ್ರವಾಸ ಹೋಗಿದ್ದಾಗ ಈ ದಂಪತಿಗಳೂ, ಅವರ ಇಬ್ಬರು ಹೆಣ್ಣು ಮಕ್ಕಳೂ ನನ್ನ ಜೊತೆ ಬಂದಿದ್ದರು. ನಾನು ಆಗಾಗ ಮೌನವಾಗಿರುತ್ತಿದ್ದುದನ್ನು ಕಂಡು ಟೆರ್ರಿ 'Are you enjoying Sir ?' ಎಂದು ಪದೇ ಪದೇ ಕೇಳಿ ನನ್ನ ಬಗ್ಗೆ ಕಾಳಜಿ ವಹಿಸುತ್ತಿದ್ದರು. ನನ್ನ ಆಗಮನಕ್ಕೆ ಮುಂಚೆಯೇ ಈ ದಂಪತಿಗಳು ನನ್ನನ್ನು ಅವರ ಮನೆಗೆ ಭೋಜನಕ್ಕೆ ಆಹ್ವಾನ ನೀಡಿದ್ದರು. ಟೆರ್ರಿ ಭಾರತದಲ್ಲಿ ಬೆಳೆದವರಂತೆ. ಅವರ ತಂದೆ ಭಾರತದಲ್ಲಿ ಏನೋ ಅಧಿಕಾರದಲ್ಲಿದ್ದರಂತೆ. ಸುಮಾರು 10ನೇ ವಯಸ್ಸಿನಲ್ಲಿ ಈಕೆ ಭಾರತ ಬಿಟ್ಟು ಬಂದರಂತೆ. ಈಗ ಬಿಳಿಯನನ್ನು ಮದುವೆಯಾಗಿ ಕ್ರೈಸ್ತಮತಸ್ಥೆಯಾಗಿದ್ದಾರೆ. ಟೆರ್ರಿಗೆ ಭಾರತದ ಸಮೋಸ, ಪಕೋಡ ಮೊದಲಾದ ತಿಂಡಿಗಳು ಇಷ್ಟವಂತೆ. ಈಕೆ ನನ್ನ ಬಿಡುವಿನ ದಿನವನ್ನು ಮೊದಲೇ ತಿಳಿದುಕೊಂಡು, ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಕೆಲವು ವಿಶೇಷ ಶಿಕ್ಷಣ ವಿಭಾಗಗಳಿಗೆ ಕರೆದುಕೊಂಡು ಹೋಗಿ ಪರಿಚಯಿಸಿದ್ದರು.

ಚೀನೀ ಬಂಧುಗಳನ್ನು ಬೀಳ್ಕೊಟ್ಟು ಡಾ. ವಿಶ್ವನಾಥರ ಮನೆಗೆ ಬಂದೆವು. ಅಲ್ಲಿ ಸಣ್ಣದೊಂದು ಪಾನಗೋಷ್ಠಿ ನಡೆಯಿತು. ಚೀನೀ ಬಂಧುಗಳ ಮಗನೂ ಅಲ್ಲಿಗೆ ಬಂದು ನಮ್ಮ ಜೊತೆ ಸೇರಿದ್ದ. ಇವನು ಆಗಾಗ ಬಂದು ಡಾ. ವಿಶ್ವನಾಥರ ಮನೆಯ ಮೇಲ್ವಿಚಾರಣೆ ಮಾಡುತ್ತಿದ್ದ. ಮಧ್ಯಾಹ್ನ 2 ಗಂಟೆಗೆ ಡಾ. ವಿಶ್ವನಾಥರನ್ನು ಬೀಳ್ಕೊಟ್ಟು ಕಿಂಗ್ಸಟನ್‌ಗೆ ಹೊರಟು ಸಂಜೆ ಸುಮಾರು 7–30ಕ್ಕೆ ತಲಪಿದೆವು.

ಜನೋಪಯೋಗಿ ಸಂಶೋಧನೆ

ನಿರ್ಧಾರಿತ ಕಾರ್ಯಕ್ರಮದ ಪ್ರಕಾರ ಪೋರ್ಟ್ ರಾಯಲ್ ಎಂಬ ಒಂದು ಪರ್ಯಾಯ ದ್ವೀಪಕ್ಕೆ ಹೋಗಿದ್ದೆ. ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ಅಧ್ಯಾಪಕರು ನನ್ನನ್ನು ಕರೆದುಕೊಂಡು ಹೋಗುವ ಏರ್ಪಾಡು ಮಾಡಿದ್ದರು. ಈ ಪೋರ್ಟ್ ರಾಯಲ್ ಕಿಂಗ್ಸ್‌ಟನ್ ನಗರದಿಂದ ಸುಮಾರು 20 ಮೈಲಿಗಳ ದೂರದಲ್ಲಿದೆ. ಇದು ಜಮೈಕಾದ್ವೀಪಕ್ಕೆ ಸೇರಿಕೊಂಡ ಇನ್ನೊಂದು ದ್ವೀಪದಂತೆಯೇ ಇದೆ. ಜಮೈಕ ದ್ವೀಪಕ್ಕೆ ಸುಮಾರು 100 ಅಡಿ ಸೇತುವೆ ಆಕಾರದ ಭೂಮಿಯಿಂದ ಅಂಟಿಕೊಂಡಿದೆ.

ಈ ಪೋರ್ಟ್ ರಾಯಲ್ ಸುಮಾರು 8–10 ಚದರ ಮೈಲಿ ವಿಸ್ತೀರ್ಣವಿದೆ. ಇಲ್ಲಿಯೇ ನಾರ್ಮನ್ ಮ್ಯಾನ್ಲಿ ಎಂಬ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಈ ಪೋರ್ಟ್ ರಾಯಲ್ ಐತಿಹಾಸಿಕ ಸ್ಥಳ. ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಇದನ್ನು ತಮ್ಮ ಸೇನಾ ತುಕಡಿಗಳು ಮತ್ತು ಮದ್ದುಗುಂಡುಗಳನ್ನು ಇಡಲು ಬಳಸುತ್ತಿದ್ದರು. ಈಗಲೂ ಇಲ್ಲಿ ಪೋಲಿಸ್ ತರಪೇತಿ ಶಾಲೆಯಿದೆ. ಇಲ್ಲಿ ವಿಶ್ವವಿದ್ಯಾನಿಲಯದ ಒಂದು ಆಸ್ತಿ ಇದೆ. ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ ಸಂಶೋಧನ ಕೇಂದ್ರ ಇಲ್ಲಿದೆ. ಅದಕ್ಕೆ ಸೇರಿಕೊಂಡ ಅತಿಥಿ ಗೃಹವೂ ಇದೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇಲ್ಲಿದ್ದುಕೊಂಡು ಸಂಶೋಧನೆ ನಡೆಸಬಹುದು. ಇವರೆಲ್ಲರಿಗೆ ಅನುಕೂಲಕರವಾದ ವಸತಿ ಗೃಹಗಳು, ಅಡಿಗೆ ಮನೆಗಳು ಇವೆ. ಇಂಥ ವ್ಯವಸ್ಥೆಗಳು ಈ ವಿಶ್ವವಿದ್ಯಾನಿಲಯದ ವೈಶಿಷ್ಟ್ಯ. ಇಲ್ಲಿರುವ ಮತ್ಸ್ಯ ಸಂಶೋಧನ ಕೇಂದ್ರಕ್ಕೆ ಬ್ರಿಟಿಷ್ ಸರ್ಕಾರ ಪೂರ್ಣ ನೆರವು ನೀಡುತ್ತಿದೆ. ಸಂಶೋಧನ ಕಾರ್ಯಕ್ಕಾಗಿ ಒಂದು ಸಣ್ಣ ಹಡಗನ್ನೂ ದತ್ತಿಯಾಗಿ ಕೊಟ್ಟಿದೆ. ಇದರಲ್ಲಿ ಸುಮಾರು 50 ಜನ ಅಧ್ಯಾಪಕರು, ವಿದ್ಯಾರ್ಥಿಗಳು ಸಮುದ್ರದಲ್ಲಿ ಹೋಗಿ 8–10 ದಿನಗಳ ವರೆಗೆ ಸಮುದ್ರದ ಮೇಲೆ ವಾಸಿಸಿ ಸಂಶೋಧನೆ ನಡೆಸುತ್ತಾರಂತೆ. ಅವರಿಗೆ ಬೇಕಾದ ಎಲ್ಲ ವ್ಯವಸ್ಥೆ ಇದೆ. ಊಟ, ವಸತಿಗಳಿಗೆ ಏರ್ಪಾಡುಮಾಡಿದೆ. ಹಡಗಿನ ತಳ ಅಂತಸ್ತಿನಲ್ಲಿ ಚಾಲಕನ ಮಲಗುಕೋಣೆ ಇದೆ. ಅಲ್ಲಿಯೇ ಫ್ರಿಜ್ ಮೊದಲಾದ ಸಲಕರಣೆಗಳಿವೆ.

ಈ ಸಂಶೋಧನ ಕೇಂದ್ರಕ್ಕೆ ಹೊಂದಿಕೊಂಡು ಕಪ್ಪೆಚಿಪ್ಪು ಸಂಶೋಧನ ವಿಭಾಗವಿದೆ. ಇದು ನಮ್ಮ ಕಪ್ಪೆಚಿಪ್ಪಿನಂತಿರುವ ಒಂದು ಸೆಲ್. ಅದರ ಒಳಗೆ ಆಯಿಸ್ಟರ್ ಎಂಬ ಮೀನಿನಂತೆ ಇರುವ ಪ್ರಾಣಿಯನ್ನು ಆಹಾರಕ್ಕೆ ಉಪಯೋಗಿಸುತ್ತಾರೆ. ಇವುಗಳು ಸಮುದ್ರದ ಒಳಗೆ ಬೆಳೆಯುತ್ತವೆ ಈ ಆಯಿಸ್ಟರ್‌ಗಳನ್ನು ಕೃತಕವಾಗಿ ಸಾಕುವ ಒಂದು ಸಂಶೋಧನೆ ಇಲ್ಲಿ ನಡೆಯುತ್ತಿದೆ. ರಬ್ಬರ್‌ನಿಂದ ಮಾಡಿದ ಗೂಡುಗಳ ಮಾಲೆಯನ್ನು ಸಮುದ್ರದಲ್ಲಿಟ್ಟು, ಆ ಗೂಡುಗಳಲ್ಲಿ ಆಯಿಸ್ಟರ್‌ಗಳು ಸೇರಿ ಬೆಳೆದ ಮೇಲೆ, ಅವುಗಳನ್ನು ಹಿಂದಕ್ಕೆ ಪಡೆದು ಆಹಾರವಾಗಿ

ಬಳಸುತ್ತಾರೆ. ಇದನ್ನು ಇನ್ನೂ ವ್ಯಾಪಾರಕ್ಕಾಗಿ ಬಳಸುತ್ತಿಲ್ಲ ಎಂದು ಅಧ್ಯಾಪಕ ಮಿತ್ರರು ಹೇಳಿದರು. ಇಂಥ ಒಂದು ಸಣ್ಣ ವಿಶ್ವವಿದ್ಯಾನಿಲಯದಲ್ಲಿ ಇಷ್ಟೊಂದು ಜನೋಪಯೋಗಿ ಸಂಶೋಧನೆಗಳು ನಡೆಯುವುದನ್ನು ಕಂಡು ಆಶ್ಚರ್ಯವಾಯಿತು. ಆದರೆ, ಇವೆಲ್ಲ ಬೇರೆ ರಾಷ್ಟ್ರಗಳ ಕೃಪೆಯಿಂದ! ಈ ವಿಶ್ವವಿದ್ಯಾನಿಲಯಕ್ಕೆ ತನ್ನ ದೇಶದ ಸಹಾಯಕ್ಕಿಂತ ಪರರಾಷ್ಟ್ರಗಳ ನೆರವೇ ಅಧಿಕವಾಗಿದೆ.

ಈ ಪೋರ್ಟ್ ರಾಯಲ್‌ನಲ್ಲಿ ಒಂದು ಪುರಾತತ್ವ ವಸ್ತುಸಂಗ್ರಹಾಲಯವಿದೆ. ನನ್ನ ಜೊತೆ ಬಂದಿದ್ದ ವಿಶ್ವವಿದ್ಯಾನಿಲಯದ ಅಧ್ಯಾಪಕರ ಪರಿಚಯದವರೊಬ್ಬರು ನನಗೆ ವಸ್ತುಸಂಗ್ರಹಾಲಯವನ್ನು ತೋರಿಸಿ ವಿವರಿಸಿದರು. ಆಫ್ರಿಕ, ಚೀನ, ಅಮೆರಿಕ ದೇಶಗಳ ಜನರ ಪ್ರಾಚೀನ ಸಂಸ್ಕೃತಿ ಮತ್ತು ಜೀವನಗಳಿಗೆ ಸಂಬಂಧಿಸಿದ ಅನೇಕ ವಸ್ತುಗಳು ಅಲ್ಲಿದ್ದವು. ಗುಲಾಮ ಪದ್ಧತಿಗೆ ಸಂಬಂಧಿಸಿದ ವಸ್ತುಗಳೂ ಇದ್ದವು. ಅವನ್ನೆಲ್ಲ ಕುತೂಹಲದಿಂದ ನೋಡುತ್ತಿದ್ದ ನನಗೆ "ನಿಮ್ಮ ಭಾರತದ ವಸ್ತುಗಳು ನಮಗೇನೂ ಸಿಕ್ಕಿಲ್ಲ" ಎಂದ ಸಂಶೋಧಕನ ಮಾತು ಕೇಳಿ ನಿರಾಶೆಯಾಯಿತು. ಗುಲಾಮರನ್ನು ಹಿಂಸಿಸುವ, ಅವರನ್ನು ಪಶುಗಳಂತೆ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ಅನೇಕ ಸಾಧನಗಳನ್ನು ನೋಡಿ ಮನುಷ್ಯನ ಕ್ರೌರ್ಯದ ಬಗ್ಗೆ ಜುಗುಪ್ಸೆಯಾಯಿತು. ಗುಲಾಮರನ್ನು ಹರಾಜುಮಾಡುವ ಒಂದು ಹಳೆಯ ನೋಟಿಸಿನ ಮಾದರಿಯನ್ನು ಇಲ್ಲಿ ಇಟ್ಟಿದ್ದಾರೆ. ಅದರಲ್ಲಿ ಮಾರಾಟಕ್ಕಿರುವ ಗುಲಾಮರ ಹೆಸರ , ವಯಸ್ಸು, ಕೆಲಸದ ತರಪೇತು, ದೇಹದಾರ್ಢ್ಯ ಮೊದಲಾದ ವಿವರಗಳಿವೆ. ಈ ಗುಲಾಮರ ಜೊತೆಗೆ ಹರಾಜಿಗೆ ಇಟ್ಟಿದ್ದ ಇತರೆ ಪ್ರಾಣಿಗಳು, ಪೀಠೋಪಕರಣಗಳು ಮೊದಲಾದುವುಗಳ ವಿವರವೂ ಇತ್ತು. ಈ ಗುಲಾಮರ ಕ್ರಯ ಈ ಪ್ರಾಣಿಗಳ ಮತ್ತು ವಸ್ತುಗಳ ಬೆಲೆಗಿಂತ ಹೆಚ್ಚಿರಲಾರದು ಎನ್ನಿಸಿತು ಆ ವಿವರಣೆ ನೋಡಿ.

ಗುಲಾಮರನ್ನು ಮಾಲೀಕರು ಶಿಕ್ಷಿಸುವ ವೈವಿಧ್ಯಮಯವಾದ ಆಯುಧಗಳನ್ನು ಕಂಡು ಮೈಜುಮ್ಮೆಂದಿತು. ಈ ಆಯುಧಗಳನ್ನು ನೋಡಿದಾಗ ನಾನು ಕಿಂಗ್‌ಸ್ಟನ್ ನಗರದಲ್ಲಿ ಪ್ರಾರಂಭದಲ್ಲಿ ಇಳಿದುಕೊಂಡಿದ್ದ ಒಲಂಪಿಯಾ ಹೋಟೆಲಿನ ನೀಗ್ರೋ ಚಿತ್ರಗಳು ಕಣ್ಣ ಮುಂದೆ ಬಂದವು. ಅಲ್ಲಿ ಗೋಡೆಗಳ ಮೇಲೆ ನೀಗ್ರೋ ಜನರಿಗೆ ಕೊಡುತ್ತಿದ್ದ ಚಿತ್ರಹಿಂಸೆಗಳನ್ನು ಚಿತ್ರಿಸಿದ್ದಾರೆ; ಸಿಮೆಂಟು ವಿಗ್ರಹಗಳನ್ನು ಮಾಡಿದ್ದಾರೆ. ಆ ಚಿತ್ರಗಳಲ್ಲಿ ಈ ಆಯುಧಗಳನ್ನು ಹೇಗೆ ಬಳಸಿ ಗುಲಾಮರಿಗೆ ಹಿಂಸೆ ಮಾಡುತ್ತಿದ್ದರೆಂದು ತೋರಿಸಿದ್ದಾರೆ. ಕಲ್ಲುಗಳು ಮತ್ತು ಕಬ್ಬಿಣಗಳಿಂದ ಮಾಡಿದ ಆಯುಧಗಳಿವು. ಗುಲಾಮರು ಒಡೆಯನ ಅಪ್ಪಣೆಯಿಲ್ಲದೆ ಮಾತನಾಡದಂತೆ, ತಿನ್ನದಂತೆ ಕಬ್ಬಿಣದ ಮುಖವಾಡಗಳನ್ನು ಹಾಕುತ್ತಿದ್ದರಂತೆ. ಈ ಮುಖವಾಡಗಳು ಇಲ್ಲಿವೆ. ಇದರಲ್ಲಿ ನಾಲಗೆಯ ಆಕಾರದ ಒಂದು ಹಲಗೆ ಇದೆ. ಇದನ್ನು ಬಾಯೊಳಗೆ

ಹಾಕಿ ತಲೆಯ ಹಿಂದಕ್ಕೆ ಕಟ್ಟಿದರೆ ಗುಲಾಮನ ಬಾಯಿಯ ಕೆಲಸ ನಿಂತಂತೆ! ವೈವಿಧ್ಯಮವಾದ ಕೈಬಳೆ, ಕಾಲುಬಳೆಗಳಿವೆ.

ಈ ಪೋರ್ಟ್‌ರಾಯಲ್ ತುಂಬಾ ವಿಸ್ತಾರವಾಗಿದ್ದು 1692ರ ಭಯಂಕರ ಭೂಕಂಪದಲ್ಲಿ ಅನೇಕ ಭಾಗಗಳು ಸಮುದ್ರದಲ್ಲಿ ಮುಳುಗಿ ಹೋದುವಂತೆ. ಈ ಮುಳುಗಿ ಹೋಗಿರುವ ಊಹಾ ಭೂಪಟವನ್ನೂ ಇಲ್ಲಿ ಇಟ್ಟಿದ್ದಾರೆ. ಈ ಕೆರೇಬಿಯನ್ ದ್ವೀಪಗಳ ಭಾರಿ ಶತ್ರುಗಳು ಭೂಕಂಪ ಮತ್ತು ಹರಿಕೇನ್ ಬಿರುಗಾಳಿ. ಈ ಎರಡು ಪ್ರಕೃತಿ ವಿಕೋಪಗಳಿಗೆ ಸಿಕ್ಕಿ ಜನ ಜೀವನ, ಸಂಸ್ಕೃತಿ, ನಾಗರಿಕತೆಗಳು ನಾಶವಾಗುತ್ತವೆ.

ಭೂಕಂಪದಿಂದ ಸಮುದ್ರದಲ್ಲಿ ಮುಳುಗಿ ಹೋದ ಅನೇಕವಸ್ತುಗಳನ್ನು ಸಂಶೋಧಕರು ಹೊರತೆಗೆದಿದ್ದಾರೆ. ಅವುಗಳಲ್ಲಿ ಒಂದು ಗಡಿಯಾರವೂ ಇದೆ. ಈ ಗಡಿಯಾರ 12–05 ನಿಮಿಷ ತೋರಿಸುತ್ತಿದೆ. ಭೂಕಂಪವಾದಾಗ ಗಡಿಯಾರದಲ್ಲಿ ಅಷ್ಟು ಸಮಯವಾಗಿತ್ತೆಂದು ಈ ಸಂಶೋಧಕರ ಅಭಿಪ್ರಾಯ. ಭೂಕಂಪದ ಸಮಯವನ್ನು ತಿಳಿಸಲು ಇರುವುದು ಇದೊಂದೇ ಆಧಾರವಂತೆ. 1907ರಲ್ಲಿ ಆದ ಭೂಕಂಪವೇ ಇತ್ತೀಚಿನದೆಂದು ಅವರು ಹೇಳಿದರು.

ಬ್ರಿಟಿಷರು ಆಯುಧಗಳನ್ನಿಡುತ್ತಿದ್ದ ಒಂದು ಮನೆ ಪೂರ್ಣ ಓರೆಯಾಗಿ ಇಲ್ಲಿ ನಿಂತಿದೆ. ಒಂದು ಭಾಗ ನೆಲದಲ್ಲಿ ಹೂತು ಹೋಗಿ ಇನ್ನೊಂದು ಭಾಗ ಮೇಲೆದ್ದು ನಿಂತಿದೆ. "ಭೂಕಂಪದಿಂದ ಹೀಗಾಗಿದೆ" ಎಂದು ಅದರ ಮೇಲೆ ಇತ್ತೀಚೆಗೆ ಬರೆಯಲಾಗಿದೆ.

ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ನನಗೆ ವಿವರಿಸಿ ಹೇಳುತ್ತಿರುವವರು ಒಬ್ಬ ಕಪ್ಪು ಜನಾಂಗಕ್ಕೆ ಸೇರಿದವರು ಎಂದರೆ ಗುಲಾಮರ ವಂಶದವರು. ಈತ ವಸ್ತು ಸಂಗ್ರಹಾಲಯದ ಆಯುಧಗಳ ಪಳೆಯುಳಿಕೆಗಳನ್ನು ಹಿಂಸೆಯ ವಿವಿಧ ಆಯುಧಗಳನ್ನು ತೋರಿಸಿ ವಿವರಿಸುವಾಗ ನಿರ್ಭಾವ ಸ್ಥಿತಿಯಲ್ಲಿರುತ್ತಿದ್ದ. ಮಾನವನ ಪರಮಾವಧಿ ಕ್ರೌರ್ಯಕ್ಕೆ ಮೂಕ ಸಾಕ್ಷಿಗಳಾಗಿ ಬಿದ್ದ ಆ ವಸ್ತುಗಳನ್ನೆಲ್ಲ ನೋಡಿ ಹೊರಬರುವಾಗ ಆ ಕಪ್ಪು ಜನಾಂಗದ ಸಂಶೋಧಕನನ್ನು ಕೇಳಿದೆ: "ಈ ಮೂಕ ಸಾಕ್ಷಿಗಳು ಹೇಳುವ ಕ್ರೌರ್ಯಕ್ಕೆ ಒಳಗಾದ ಜನಾಂಗದವನು ನಾನಲ್ಲದಿದ್ದರೂ ಇದನ್ನೆಲ್ಲ ಕಂಡಾಗ ನನಗೂ ನೆತ್ತರು ಬಿಸಿಯಾಗುತ್ತದೆ. ಇವನ್ನೆಲ್ಲಾ ನೋಡಿದಾಗ, ನೆನೆದಾಗ ನಿಮಗೆ ಏನೆನ್ನಿಸುತ್ತದೆ?" ಅವನು ಮಾಮೂಲಿ ವಿವರಣೆ ಹೇಳುವಂತೆ, "ಅದೆಲ್ಲ ನಡೆದು ಹೋದ ಕಥೆ. ಕ್ರೌರ್ಯಕ್ಕೆ ಒಳಗಾದವರೂ ಕ್ರೂರವಾಗಿ ವರ್ತಿಸಿದವರೂ ಈಗಿಲ್ಲ. ಆದ್ದರಿಂದ ಅದಕ್ಕಾಗಿ ತಲೆಕೆಡಿಸಿಕೊಳ್ಳುವುದು ಈಗ ಪ್ರಯೋಜನವಿಲ್ಲದ ಕೆಲಸ" ಎಂದು ತಣ್ಣಗೆ ಹೇಳಿದ. ಬೇರೆ ಮಾತನಾಡದೆ ವಸ್ತು ಸಂಗ್ರಹಾಲಯದಿಂದ ಹೊರಟು ಬಂದೆ.

ಮನೆಗೆ ಬಂದಾಗ ನನ್ನ ವೈದ್ಯಮಿತ್ರರು ಆಗತಾನೆ ಕೆಲಸ ಮುಗಿಸಿ ಬಂದಿದ್ದರು. ಅವರು ಆಯಾಸದಿಂದ ಬಳಲಿದ್ದರು. ವೈದ್ಯರೇ ಇಷ್ಟು ಬಳಲಿದರೆ ರೋಗಿಗಳ ಕಥೆಯೇನು ಎಂದು ನಾನು ತಮಾಷೆಮಾಡಿದಾಗ ಅವರು ತಮ್ಮ ವೃತ್ತಿಯ ಸಮಸ್ಯೆಗಳನ್ನು ಹೇಳಿದರು. ಇಲ್ಲಿಯ ರೋಗಿಗಳು ತಮ್ಮ ಕಾಯಿಲೆಗಳ ವಿಷಯದಲ್ಲಿ ವೈದ್ಯರಿಗಿಂತ ಚೆನ್ನಾಗಿ ತಿಳಿದುಕೊಂಡಿರುತ್ತಾರೆ; ಆಸ್ಪತ್ರೆಯಲ್ಲಿ ವೈದ್ಯರನ್ನು ಇಂಥದೇ ಔಷಧ ಕೊಡಿ ಎಂದು ಕೇಳುತ್ತಾರೆ; ರೋಗಿಗಳ ಸಲಹೆಯಂತೆಯೇ ವೈದ್ಯರು ಔಷಧಿ ಕೊಡದಿದ್ದರೆ ಅವರು ಮೇಲಧಿಕಾರಿಗಳಿಗೆ ದೂರು ನೀಡುತ್ತಾರಂತೆ. ಇಷ್ಟೆಲ್ಲ ಪರಿಜ್ಞಾನ ಅವರಿಗೆ ಹೇಗೆ ಸಾಧ್ಯವಾಯಿತು ಎಂದು ನಾನು ಕೇಳಿದೆ. ಇಲ್ಲೆಲ್ಲ ವಿವಿಧ ರೋಗಿಗಳ ಸಂಘಗಳಿವೆಯಂತೆ. ಹೃದಯ ರೋಗಿಗಳ ಸಂಘ, ರಕ್ತ ಒತ್ತಡ ರೋಗಿಗಳ ಸಂಘ, ಕ್ಷಯರೋಗಿಗಳ ಸಂಘ ಇತ್ಯಾದಿ ಸಂಘಗಳು ಇಲ್ಲಿವೆಯಂತೆ! ಆಯಾ ರೋಗಿಗಳು ಆಯಾ ಸಂಘದ ಸದಸ್ಯರಾಗಿ ರೋಗದ ವಿವರ ಪಡೆಯುತ್ತಾರೆ. ರೋಗಗಳಮೇಲೆ ಚರ್ಚೆ, ಸಲಹೆ, ರೋಗಕ್ಕೆ ಸಂಬಂಧಿಸಿದ ಸಾಹಿತ್ಯವೆಲ್ಲ ಸಂಘಗಳಿಂದ ದೊರೆಯುತ್ತವೆ. ಹೀಗೆ ರೋಗಕ್ಕೆ ತಕ್ಕ ಔಷಧಿ ರೋಗಿಗೆ ಗೊತ್ತಿದ್ದರೂ, ಪುಕ್ಕಟೆ ಔಷಧಿ ಮತ್ತು ಸೇವೆಗಾಗಿ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಾರೆ ಈ ಕಾರಣಕ್ಕಾಗಿಯೇ ಇಲ್ಲಿ ಖಾಸಗಿ ವೈದ್ಯರಿಗೆ ವ್ಯಾಪಾರ ಇಲ್ಲ. ಇದನ್ನೆಲ್ಲ ನನ್ನ ಮಿತ್ರರಿಂದ ಕೇಳಿ, ಯಾವುದೋ ಕಾಯಿಲೆಗೆ ಯಾವುದೋ ಮಾತ್ರೆ ನುಂಗುವ ನಮ್ಮ ದೇಶದ ರೋಗಿಗಳ ಚಿತ್ರ ಮನಸ್ಸಿನಲ್ಲಿ ಮೂಡಿತು.

ಕಛೇರಿಗಳ ನಾರಿನಿಷ್ಠೆ

ಜಮೈಕಾ ದ್ವೀಪಕ್ಕೆ ಭೇಟಿನೀಡಲು ಭಾರತೀಯರಿಗೆ ವೀಸ ಅನಗತ್ಯ. ಆದರೆ ಅಲ್ಲಿ ಇರಬೇಕಾದರೆ ಸರ್ಕಾರದ ಅನುಮತಿ ಬೇಕು. ಇಲ್ಲಿ ನಾನಿರುವ ತಾರೀಖನ್ನು ಮುಂದೂಡಿದ್ದರಿಂದ ಮಿನಿಸ್ಟ್ರಿ ಆಫ್ ನ್ಯಾಷನಲ್ ಸೆಕ್ಯೂರಿಟಿ ಕಛೇರಿಗೆ ಹೋಗಿ ಅನುಮತಿ ಪಡೆಯಬೇಕಿತ್ತು. ಈ ಕಛೇರಿ ಕಿಂಗ್‌ಸ್ಟನ್ ನಗರದ ಸಮುದ್ರದ ದಂಡೆಯಲ್ಲಿರುವ 13 ಅಂತಸ್ತುಗಳ ದೊಡ್ಡ ಕಟ್ಟಡದಲ್ಲಿದೆ. ಇಷ್ಟು ದೊಡ್ಡ ಕಟ್ಟಡಗಳು ಇಲ್ಲಿ ಹೆಚ್ಚಿಲ್ಲ. ಈ ಕಛೇರಿಗೆ ಬಿಗಿಯಾದ ಬಂದೋಬಸ್ತು ಇದೆ. ಸರಿಯಾದ ಕಾರಣವಿಲ್ಲದೆ ಒಳಗೆ ಪ್ರವೇಶಿಸುವಂತಿಲ್ಲ.

ಇಲ್ಲಿ ಕಪ್ಪು ಸ್ತ್ರೀಯರು ಸಾಮಾನ್ಯವಾಗಿ ಎಲ್ಲ ಕಛೇರಿಗಳಲ್ಲೂ ಇರುತ್ತಾರೆ. ಅಟೆಂಡರುಗಳಿಂದ ಹಿಡಿದು ಮೇಲಧಿಕಾರಿಯವರೆಗೆ ನಾರಿಯರೇ ವಿಜೃಂಭಿಸುತ್ತಾರೆ. ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿ ಕುಲಪತಿ, ಕುಲಸಚಿವರನ್ನು ಬಿಟ್ಟರೆ ಉಳಿದ ಎಲ್ಲ ಅಧಿಕಾರಿಗಳೂ ಹೆಂಗಸರೇ. ಈ ಅಧಿಕಾರಿಣಿಯರು ನಮ್ಮ ದೇಶದ ಹೆಂಗಸರಂತೆಯೇ ಸಂಕುಚಿತ ಮನೋಭಾವದವರು. ಇಲ್ಲಿಯ ಒಬ್ಬ

ಬೆರಳಚ್ಚುಗಾರ್ತಿಯನ್ನು ಕೇಳಿದಾಗ, ಹೆಣ್ಣು ನೌಕರರು ಸಾಮಾನ್ಯವಾಗಿ ಗಂಡು ಅಧಿಕಾರಿಗಳನ್ನೇ ಇಷ್ಟಪಡುತ್ತಾರೆ ಎಂದು ಹೇಳಿದರು.

ಈಗಾಗಲೇ ನಾನು ಒಂದೆರಡು ಸಾರಿ ಈ ಕಛೇರಿಗೆ ಬಂದು ಹೋಗಿದ್ದುದರಿಂದ, ಸಂಬಂಧಪಟ್ಟ ಗುಮಾಸ್ತೆಯ ಹತ್ತಿರಕ್ಕೆ ನೇರವಾಗಿ ಹೋದೆ. ಪರಿಚಯದ ಅವಳು ನನ್ನ ಅರ್ಜಿಯನ್ನು ಸ್ವೀಕರಿಸಿ, ಮಾರ್ಚ್ 16ರವರೆಗೆ ಮಾತ್ರ ಅನುಮತಿ ಕೊಟ್ಟರೆ ಸಾಕೆ, ಹೆಚ್ಚು ದಿನಗಳ ಅನುಮತಿ ಬೇಕಿದ್ದರೆ ಹೇಳಿ, ಪದೇ ಪದೇ ನೀವು ಬರುವುದು ಬೇಡ ಎಂದು ಕೇಳಿದಳು. ನಾನು ಈ ಗುಮಾಸ್ತೆಳ ಔದಾರ್ಯಕ್ಕೆ ಮತ್ತು ಸೇವಾಮನೋಭಾವಕ್ಕೆ ಸಂತೋಷಪಟ್ಟೆ. ಇಂಥ ನಾರಿ ನೌಕರರೇ ನಮ್ಮ ದೇಶದ ಎಲ್ಲ ಕಛೇರಿಗಳಲ್ಲೂ ಇದ್ದರೆ ಎಷ್ಟು ಒಳ್ಳೆಯದು ಎಂದುಕೊಂಡೆ. ಅದಕ್ಕಿಂತ ಹೆಚ್ಚು ದಿನಗಳು ಇಲ್ಲಿರಲಾರೆ, ಸಾಕು ಎಂದು ನಾನು ಹೇಳಿದಾಗ ಆಕೆ ತಕ್ಷಣ, ಬೇರೆ ಯಾರ ಅನುಮತಿಯನ್ನು ಕೇಳದೆ, ಕೆಂಪು ಪಟ್ಟಿಯ ಕಡತದಲ್ಲಿಟ್ಟು ಮೇಜಿನಿಂದ ಮೇಜಿಗೆ ರವಾನಿಸದೆ ತಾನೇ ಒಂದು ಅನುಮತಿ ಕಾಗದವನ್ನು ಟೈಪುಮಾಡಿ, ಸಹಿಮಾಡಿ ಮುದ್ರೆ ಹಾಕಿಕೊಟ್ಟಳು. ಇದೆಲ್ಲ ಐದು ನಿಮಿಷದಲ್ಲಿ ಆಗಿ ಹೋದ ಕಾರ್ಯ. ಪಾಸ್‌ಪೋರ್ಟ್ ಕಛೇರಿಯಲ್ಲೂ ಅಷ್ಟೆ, ಅನುಮತಿ ಪತ್ರ ಪಾಸ್‌ಪೋರ್ಟ್‌ಗಳನ್ನು ಪರಿಶೀಲಿಸಿ, ತಾರೀಖನ್ನು ನಮೂದಿಸಿ ಮುದ್ರೆಹಾಕಿಕೊಟ್ಟರು.

ಈ ಕೆರೇಬಿಯನ್ ದ್ವೀಪಗಳಿಗೆ ಹೋಗಲು ಭಾರತೀಯರಿಗೆ ವೀಸಾಬೇಕಿಲ್ಲ ದಿದ್ದರೂ, ಬಾರ್ಬಡಾಸ್ ದ್ವೀಪಕ್ಕೆ ಹೋಗಬೇಕಾದರೆ ವೀಸಾಬೇಕೆಂದು ವಿಮಾನ ಯಾನ ಏಜಂಟ್‌ರಿಂದ ನನಗೆ ದೂರವಾಣಿಯ ಮೂಲಕ ತಿಳಿಯಿತು. ಈ ಅಲ್ಪ ಕಾಲದಲ್ಲಿ ಬಾರ್ಬಡಾಸ್ ದ್ವೀಪದ ಸರ್ಕಾರದ ಜೊತೆ ಪತ್ರವ್ಯವಹಾರ ನಡೆಸಿ, ವೀಸಾ ಪಡೆಯುವುದು ಸಾಧ್ಯವಿಲ್ಲವೆಂದು ತೀರ್ಮಾನಿಸಿ, ನನ್ನ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ತಿಳಿಸಿ, ವೀಸಾ ನೀಡುವಂತೆ ಬಾರ್ಬಡಾಸ್ ಸರ್ಕಾರದ ವಿದೇಶಿ ವ್ಯವಹಾರಗಳ ಸಚಿವಾಲಯಕ್ಕೆ ತಂತಿ ಕಳುಹಿಸಿದೆ. ಬಾರ್ಬಡಾಸ್ ದ್ವೀಪಕ್ಕೆ ನೀವು ಪ್ರವೇಶಿಸ ಬಹುದು. ಆಮೇಲೆ ನೀವು ವೀಸಾ ಪಡೆಯಬಹುದೆಂದು ನಾಲ್ಕುದಿನಗಳಲ್ಲಿಯೇ ಅಲ್ಲಿಂದ ತಂತಿ ಅನುಮತಿ ಬಂದಿತು.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಲಹೆಗಾರರೂ (students councellor) ಒಬ್ಬ ನಾರಿಯೇ. ಈಕೆಯ ಹೆಸರು ಕುಮಾರಿ ಗೋರ್ಡನ್ ಎಂದು. ಈಕೆ ಅಮೆರಿಕೆ ಯಲ್ಲಿ ಮನಃಶಾಸ್ತ್ರದಲ್ಲಿ ಎಂ.ಎ. ಮಾಡಿದ್ದಾರೆ. ಈ ಹುದ್ದೆಯಲ್ಲಿ ಅವರಿಗೆ ಎರಡು ವರ್ಷಗಳ ಅನುಭವವಿದೆ. ನಾನು ಆಕೆಯನ್ನು ಭೇಟಿಮಾಡಿ ವಿದ್ಯಾರ್ಥಿಗಳ ಚಟುವಟಿಕೆಗಳು ಮತ್ತು ಅವರ ಸಮಸ್ಯೆಗಳ ಬಗ್ಗೆ ವಿಚಾರಿಸಿದಾಗ ಕುಮಾರಿ ಗೋರ್ಡನ್ ಅವರು ತಮ್ಮ ಕಾರ್ಯವ್ಯಾಪ್ತಿಯ ಬಗ್ಗೆ ಹೇಳಿದರು. ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳಿಗೆ ಸಲಹೆ ನೀಡುವುದು ಈಕೆಯ ಕೆಲಸ. ವಿದ್ಯಾರ್ಥಿಗಳಿಗೆ ದೈಹಿಕವಾದ ಸಮಸ್ಯೆಗಳಿಗಿಂತ ಮಾನಸಿಕ ಸಮಸ್ಯೆಗಳೇ

ಹೆಚ್ಚು ; ವಿದ್ಯಾರ್ಥಿಗಳ ಸಮಸ್ಯೆಗಳು ಸಾಮಾನ್ಯವಾಗಿ ಅವರ ಅಧ್ಯಯನಕ್ಕೆ ಸಂಬಂಧಿಸಿರುತ್ತವೆ; ಕಡಿಮೆ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು, ನಪಾಸಾದ ವಿದ್ಯಾರ್ಥಿಗಳು ಮಾನಸಿಕವಾದ ಒತ್ತಡಗಳಿಗೆ ಗುರಿಯಾಗಿ ನರಳುತ್ತಾರೆ. ವಿದ್ಯಾರ್ಥಿಗಳ ದೊಡ್ಡ ಸಮಸ್ಯೆ ಎಂದರೆ ಭವಿಷ್ಯದ ಬಗೆಗಿನ ಚಿಂತೆ. ಈ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಾರೆ. ಆರ್ಥಿಕವಾದ ಸಮಸ್ಯೆಗಳಿಂದಲೂ ಇವರು ತಲೆಕೆಡಿಸಿಕೊಳ್ಳುವುದು ಹೆಚ್ಚು. ಯಾವುದೇ ಸಮಸ್ಯೆಯನ್ನು ಮುಚ್ಚಿಡದೆ ಸಲಹೆಗಾರ್ತಿಯ ಮುಂದೆ ಹೇಳಿಕೊಂಡು ಏನಾದರೂ ಪರಿಹಾರ ಪಡೆಯುತ್ತಾರೆ; ಲೈಂಗಿಕ ಸಂಬಂಧವಾದ ಸಮಸ್ಯೆಗಳು ವಿದ್ಯಾರ್ಥಿಗಳಲ್ಲಿ ಹೆಚ್ಚಿಲ್ಲ ; ಆದರೆ ಲೈಂಗಿಕರೋಗಗಳು ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಎಂದು ಅವರು ಹೇಳಿದರು.

ವಿದ್ಯಾರ್ಥಿನಿಯರ ಹಾಸ್ಟೆಲಿನ ವಾರ್ಡನ್ ಅವರನ್ನು ಭೇಟಿಮಾಡಿದ್ದೆ. ಇವರು ಸಮಾಜಶಾಸ್ತ್ರದ ಅಧ್ಯಾಪಕಿಯಾಗಿದ್ದಾರೆ. ವಿದ್ಯಾರ್ಥಿನಿಯರ ಪಾಲಕಿಯಾಗಿ ಅವರ ಅನುಭವಗಳೇನೆಂದು ಕೇಳಿದೆ ; ವಿದ್ಯಾರ್ಥಿನಿಯರ ಸಮಸ್ಯೆಗಳೇನೆಂದು ಕೇಳಿದೆ. ವಿದ್ಯಾರ್ಥಿನಿಯರು ಅಧ್ಯಯನ ಮತ್ತು ಭವಿಷ್ಯದ ವಿಷಯಗಳಲ್ಲಿ ತುಂಬಾ ತಲೆ ಕೆಡಿಸಿಕೊಳ್ಳುತ್ತಾರಂತೆ. ಉಳಿದ ಯಾವ ಸಮಸ್ಯೆಗಳೂ ಅವರನ್ನು ಕಾಡುವುದಿಲ್ಲವೆಂದರು. ವಿದ್ಯಾರ್ಥಿನಿಯರ ಕೊಠಡಿಗಳಿಗೆ ಅವರ ಸಹಪಾಠಿಗಳಾದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಪ್ರವೇಶಿಸುವುದಕ್ಕೆ ಯಾವ ನಿರ್ಬಂಧವೂ ಇಲ್ಲ ; ಸಹ ಅಧ್ಯಯನಕ್ಕಾಗಿ ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿಗಳು ಕೊಠಡಿಗಳಲ್ಲಿ ಸೇರುವುದಕ್ಕೆ ಅನುಮತಿಯಿದೆ. “ಈ ರೀತಿಯ ಸಹ ಅಧ್ಯಯನದಿಂದ ಹುಡುಗಿಯರ ನೀತಿ, ನಡತೆ ಹಾಳಾಗುವುದಿಲ್ಲವೆ ?” ಎಂದು ಕೇಳಿದೆ. “ಅದನ್ನು ಕಾಪಾಡುವುದಕ್ಕಲ್ಲ ನಾವಿರುವುದು. ಅದು ಹೆತ್ತ ತಂದೆ ತಾಯಿಯರ ಕೆಲಸ. ಜೀವನದ ಹೆಚ್ಚು ಸಮಯ ಪೋಷಕರ ಸಂಗಡ ಇರುವ ಮಕ್ಕಳ ನಡತೆಯನ್ನು ರೂಪಿಸುವುದು ಅವರದೇ ಕರ್ತವ್ಯ. ಇಲ್ಲಿ ಅವರ ವಿದ್ಯಾಭ್ಯಾಸಕ್ಕೆ ಮತ್ತು ಪೌರತ್ವದ ಬೆಳವಣಿಗೆಗೆ ಸೂಕ್ತ ವಾತಾವರಣ ಕಲ್ಪಿಸುವುದು ನಮ್ಮ ಕರ್ತವ್ಯ” ಎಂದು ಆಕೆ ಕಡ್ಡಿ ತುಂಡಾದಂತೆ ಹೇಳಿದರು.

ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದ ನಿರ್ದೇಶಕಿ ಶ್ರೀಮತಿ ಡಿಕ್ಸನ್ ಅವರನ್ನು ಭೇಟಿಮಾಡಿದ್ದೆ. ಈಕೆಯನ್ನು ನೋಡಿದ ಕೂಡಲೆ ಹಿಂದೂಸ್ತ್ರೀಯಿರಬೇಕೆಂದು ಊಹಿಸಿದೆ. ಮಾತಿನ ನಡುವೆ ಎಲ್ಲಿಯೂ ತಾನು ಹಿಂದೂ ಎಂಬ ವಿಷಯ ತಿಳಿಸಲಿಲ್ಲ. ಅವರ ಕಾರ್ಯಕ್ಷೇತ್ರದ ಬಗ್ಗೆ ವಿವರ ಕೇಳಿದೆ. ವಿಶ್ವವಿದ್ಯಾನಿಲಯದಲ್ಲಿ ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದ ಆಸ್ಪತ್ರೆಗಳಿದ್ದರೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಉದ್ಯೋಗಿಗಳು ಈ ಆರೋಗ್ಯಕೇಂದ್ರಕ್ಕೇ ಬರುತ್ತಾರೆ. ಔಷಧಿಗಾಗಿ ಉದ್ಯೋಗಿಗಳಿಂದ ಮತ್ತು ವಿದ್ಯಾರ್ಥಿಗಳಿಂದ ಸ್ವಲ್ಪ ವಂತಿಗೆಯನ್ನು ಸಂಗ್ರಹಿಸಲಾಗುವುದು. ಆದರೂ ಸಾಕಷ್ಟು ಸೌಲಭ್ಯಗಳು ಆರೋಗ್ಯಕೇಂದ್ರದಲ್ಲಿ ದೊರಕುವುದಿಲ್ಲವೆಂದರು. ಈಕೆ ಹಿಂದೂ ಇರಬಹುದೆ ಎಂದು ಊಹಿಸಿದ್ದು

ತಪ್ಪಾಗಲಿಲ್ಲ. ಗಯಾನದಲ್ಲಿ ಹಿಂದುವಾಗಿ ಹುಟ್ಟಿ ಬೆಳೆದ ಈಕೆ ಈಗ ಕ್ರೈಸ್ತ ಮತಸ್ಥೆ. ಈಕೆಯ ಹೆಸರು ಕಮಲಾ. ಈಕೆಯ ಮಗಳು ಭರತ ನಾಟ್ಯದಲ್ಲಿ ಸ್ವಲ್ಪ ತರಪೇತು ಪಡೆದಿದ್ದಾಳೆ. ಅವಕಾಶ ಸಿಕ್ಕರೆ ದಕ್ಷಿಣ ಭಾರತದಲ್ಲಿ ನೃತ್ಯದಲ್ಲಿ ಹೆಚ್ಚಿನ ತರಪೇತು ಕೊಡಿಸುವುದಾಗಿ ಹೇಳಿದರು. ಈಗ ಇವರು ಕ್ರೈಸ್ತ ಮತಾನುಯಾಯಿಯಾದರೂ, ಹಿಂದಿನ ಸಂಸ್ಕಾರಗಳು ಇನ್ನೂ ಬಿಟ್ಟಿರುವಂತೆ ಕಾಣುತ್ತಿಲ್ಲ. ಹಿಂದೂ ಸಂಸ್ಕೃತಿಯ ಬಗ್ಗೆ ಆಸಕ್ತಿ, ಗೌರವಗಳಿರುವುದಾಗಿ ಆಕೆ ಹೇಳಿದರು.

ಕಾಡು ನೀರಿನ ನಾಡು

'ಜಮೈಕ' ಎಂದರೆ ಮರ ಮತ್ತು ನೀರುಗಳ ಭೂಮಿ ಎಂದು ಅರ್ಥವಂತೆ. ಈ ದ್ವೀಪಕ್ಕೆ ಈ ಪದ ಸಾರ್ಥಕವಾಗಿದೆ. ಜಮೈಕ ದ್ವೀಪ ನೈಸರ್ಗಿಕ ಸೌಂದರ್ಯದ ನೆಲೆವೀಡು. ಈ ದ್ವೀಪವನ್ನು ಹಸಿರು ಹೊದೆದ ಬೆಟ್ಟಗುಡ್ಡಗಳು ಹೇಗೆ ಸುತ್ತುವರಿದಿವೆಯೋ ಹಾಗೇ ಈ ದ್ವೀಪದ ಮುಖ್ಯ ನಗರವಾದ ಕಿಂಗ್‌ಸ್ಟನ್ ಪಟ್ಟಣಕ್ಕೆ ನೀಲಿ ಬೆಟ್ಟಗಳು ಕೋಟೆಕಟ್ಟಿವೆ. ಎತ್ತ ನೋಡಿದರೂ ಬೆಟ್ಟಗಳ ಸಾಲು ಸಾಲು. ಪಟ್ಟಣ ಸಂಪೂರ್ಣವಾಗಿ ಕಣಿವೆಯೊಳಗಿದೆ. ಈ ಬೆಟ್ಟಗಳ ಮೇಲೂ ಈ ನಗರ ಬೆಳೆದಿದೆ. ಬೆಟ್ಟಗಳ ಇಳಿಜಾರುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಾರೆ ಬೆಟ್ಟಗಳ ಮೇಲೂ ಊರು ಇರುವುದರಿಂದ ಅಲ್ಲೆಲ್ಲ ಟಾರುರಸ್ತೆ, ನಲ್ಲಿ, ದೀಪ ಮೊದಲಾದ ಪೌರ ಸೌಲಭ್ಯಗಳನ್ನು ಒದಗಿಸಿದ್ದಾರೆ. ಸಮತಟ್ಟಾದ ಭೂಮಿಯ ಮೇಲೇ ನಮ್ಮ ದೇಶದಲ್ಲಿ ಈ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವುದು ಕಷ್ಟವಿರುವಾಗ, ಇಲ್ಲಿ ಇವೆಲ್ಲವನ್ನು ಹೇಗೆ ನಿರ್ವಹಿಸುತ್ತಾರೊ ತಿಳಿಯದು. ನಾವಿನ್ನು ಭೂಮಿಯ ಮೇಲೆ ತೆವಳುತ್ತಿರುವಾಗ, ಇವರು ಆಕಾಶದ ಕಡೆಗೆ ಹೋಗಿ ಭೂಮಿಯ ಸೌಲಭ್ಯಗಳನ್ನೆಲ್ಲ ಪಡೆಯುತ್ತಿದ್ದಾರೆ. ಬೆಟ್ಟದ ಇಳಿಜಾರುಗಳಲ್ಲಿ ಮನೆ ಮಾಡಿ ವಾಸಿಸುವುದು ಹೆಚ್ಚು ಖರ್ಚಿನ ಕೆಲಸವಂತೆ. ಆದರೆ ಇಲ್ಲಿ ಜನರು ಖರ್ಚುಮಾಡುವುದಕ್ಕೆ ಹಣವಿದೆ; ಆದರಿಂದ ಸುಖ ಪಡೆಯುತ್ತಾರೆ. ಈ ಬೆಟ್ಟದ ಇಳಿಜಾರುಗಳಲ್ಲಿ ವಿಶ್ವವಿದ್ಯಾನಿಲಯದ ಅನೇಕ ಪ್ರಾಧ್ಯಾಪಕರು, ಅಧಿಕಾರಿಗಳು ಭವ್ಯವಾದ ಬಂಗಲೆಗಳನ್ನು ಮಾಡಿಕೊಂಡು ವಾಸಿಸುತ್ತಿದ್ದಾರೆ. ರಾತ್ರಿ ಸಮಯದಲ್ಲಿ ಬೆಟ್ಟದ ಕಡೆ ಕಣ್ಣು ಹಾಯಿಸಿದರೆ ಬೆಟ್ಟದ ತುಂಬೆಲ್ಲ ದೀಪಗಳು ನಕ್ಷತ್ರಗಳಂತೆ ಮಿನುಗುತ್ತಿರುತ್ತವೆ. ಆಗಾಗ ಬೆಟ್ಟದ ಮೇಲೆ ಹರಿದಾಡುವ ಕಾರುಗಳ ದೀಪಗಳ ಬೆಳಕು ಆಕಾಶದಿಂದ ಬೀಳುವ ಉಲ್ಕಾಪಾತಗಳಂತೆ ಕಾಣುತ್ತವೆ. ಒಂದೊಂದು ದಿನ ಬೆಟ್ಟದ ಮೇಲೆ ಕಾಡಿಗೆ ಬೆಂಕಿ ಬಿದ್ದು ಧಗ ಧಗ ಉರಿಯುತ್ತಿರುತ್ತದೆ. ಇಲ್ಲಿ ವಾಸಿಸುವವರ ಪರಿಸ್ಥಿತಿ ಆಗ ಏನಾಗುತ್ತದೊ ತಿಳಿಯದು.

ಈ ದ್ವೀಪದ ಭೂಮಿ ವನ್ಯ ಸಂಪತ್ತುಗಳಿಂದ, ಸುಂದರ ತರುಲತೆಗಳಿಂದ, ಫಲವತ್ತಾದ ಮಣ್ಣಿನಿಂದ ಕೂಡಿದ್ದರೂ ಆ ಬಗ್ಗೆ ಈ ಜನಕ್ಕೆ ಹೆಚ್ಚಿನ ಆಸಕ್ತಿ ಇದೆ

ಎನ್ನಿಸುವುದಿಲ್ಲ. ಕಪ್ಪುಮಣ್ಣಿನ ಭೂಮಿ ಫಲವತ್ತಾಗಿದೆ. ತನಗೆ ತಾನೇ ಬಾಳೆ, ಮಾವು, ಕಬ್ಬು, ತೆಂಗು, ಮತ್ತು ಇತರೆ ಉಪಯುಕ್ತ ಗಿಡ ಮರಗಳು ಬೆಳೆಯುತ್ತವೆ. ಇಲ್ಲಿಯವರು ಸುಲಭವಾಗಿ ಸಿಕ್ಕುವ ಕೆಲವು ವನ್ಯ ಸಂಪತ್ತನ್ನು ಮಾರಾಟ ಮಾಡಿ ದುಡ್ಡು ಸಂಪಾದಿಸಿಕೊಂಡು, ಕುಡಿದು ಕುಣಿಯುತ್ತಾರೆ, ತಿಂದು ತೇಗುತ್ತಾರೆ. ಆದರೆ ಭೂಮಿಯಿಂದ ಶ್ರಮ ಪಟ್ಟು ಪ್ರಯೋಜನ ಪಡೆಯಲು ಇವರು ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ.

ವಿಶ್ವವಿದ್ಯಾನಿಲಯದ ಕ್ಯಾಂಪಸ್ ಇರುವ 'ಮೋನಾ' ಬಡಾವಣೆಯಲ್ಲಿ ಉದ್ಯೋಗಿಗಳ ವಾಸದ ಮನೆಗಳಿವೆ. ದೊಡ್ಡ ದೊಡ್ಡ ಕಾಂಪೌಂಡುಗಳಲ್ಲಿ ಅಚ್ಚುಕಟ್ಟಾಗಿ ಮನೆ ಮಾಡಿದ್ದಾರೆ. ಕಾಂಪೌಂಡಿನ ಖಾಲಿ ಜಾಗದಲ್ಲಿ ಮಾವಿನ ಮರಗಳು, ಬಾಳೆಗಿಡಗಳು, ಸೀಬೆಗಿಡಗಳು, ಕಬ್ಬು ತನಗೆ ತಾನೆ ಬೆಳೆದಿರುತ್ತವೆ. ಅವಕ್ಕೆ ಬೇಸಾಯವಾಗಲಿ, ಗೊಬ್ಬರ ನೀರಾಗಲಿ ಇಲ್ಲ. ನಾನಿರುವ ನನ್ನ ವೈದ್ಯಮಿತ್ರರ ಮನೆಯ ಕಾಂಪೌಂಡಿನಲ್ಲೂ 4 ಮಾವಿನ ಮರಗಳಿವೆ. 7–8 ಬಾಳೆಯ ಬುಡಗಳಿವೆ. ಅಲ್ಲಲ್ಲಿ ಕಬ್ಬು ಬೆಳೆದಿದೆ. ತಾನಾಗಿಯೇ ಬೀಳುವ ಕಳಿತ ಮಾವಿನ ಹಣ್ಣುಗಳನ್ನು ತಿನ್ನುವವರಿಲ್ಲ. ಉದುರಿದ ಹಣ್ಣುಗಳನ್ನು ಫ್ರಿಜ್‌ನಲ್ಲಿ ಇಟ್ಟು ನಾವು ಆಗಾಗ ತಿನ್ನುತ್ತೇವೆ. ಇಲ್ಲಿ ಎಲ್ಲರ ಮನೆಯ ಕಾಂಪೌಂಡಿನಲ್ಲಿಯೂ ಮಾವಿನ ಮರಗಳಿವೆ. ಈ ಮರಗಳು ವರ್ಷದಲ್ಲಿ 3–4 ಬಾರಿ ಕಾಯಿ ಬಿಡುತ್ತವಂತೆ. ರಸ್ತೆಗೆ ಚಾಚಿಕೊಂಡಿರುವ ಮಾವಿನ ಮರದ ಕೊಂಬೆಗಳಲ್ಲಿ ಕೆಂಪಾದ ಕಾಯಿಗಳು ಜೋತಾಡುತ್ತವೆ. ಕೈಗೆ ಎಟುಕುವಂತಿದ್ದರೂ ಯಾರೂ ಅವನ್ನು ತಿರುಗಿಯೂ ನೋಡುವುದಿಲ್ಲ. ಮಾವಿನ ಹಣ್ಣನ್ನು ಹಕ್ಕಿಗಳೂ ತಿನ್ನುವುದಿಲ್ಲ. ನಾನು ಇಷ್ಟು ದಿನ ನೋಡಿದ್ದೇನೆ, ಹಕ್ಕಿ ತಿಂದ ಒಂದು ಹಣ್ಣೂ ನನಗೆ ಕಾಣಿಸಲಿಲ್ಲ. ಮರದ ಮೇಲೆ ಕೆಂಪಾದ ಹಣ್ಣಿಗೆ ಬಂದ ಕಾಯಿಗಳು ಹಕ್ಕಿಗಳ ಕೊಕ್ಕಿನಿಂದ ಕುಳಿಬಿದ್ದಿರುವುದಿಲ್ಲ. ಮಾವಿನ ಹಣ್ಣಿನ ರುಚಿ ಹಕ್ಕಿಗಳಿಗೆ ಗೊತ್ತಿಲ್ಲವೇನೊ. ಕಾಗೆಗಳು ಇಲ್ಲಿಲ್ಲವಂತೆ. ನಾನಿರುವ ಈ ಸಮಯದಲ್ಲೇ 4–5 ಬಾಳೆಯ ಗೊನೆಗಳು ನಮ್ಮ ಮಿತ್ರರ ಮನೆಯ ಕಾಂಪೌಂಡಿನಲ್ಲಿ ಜೋತು ಬಿದ್ದಿವೆ. ಬಿತ್ತದೆ, ಬೆಳೆಯದೆ ತಿನ್ನುವ ಭಾಗ್ಯ ಇವರದು. ಕಾಂಪೌಂಡಿನಲ್ಲಿ ಹುಲುಸಾಗಿ ಬೆಳೆಯುವ ಹುಲ್ಲನ್ನು ಕತ್ತರಿಸಲೂ ಮನೆಗಳವರು ಸುಮಾರು ಹಣ ಖರ್ಚು ಮಾಡಬೇಕಾಗುತ್ತದೆ.

ಮನೆಯ ಕಸ, ಹಳೆಯ ಕಾಗದಗಳನ್ನೆಲ್ಲ ಹೊರ ಹಾಕುವುದೇ ಇಲ್ಲಿ ದೊಡ್ಡ ಸಮಸ್ಯೆ. ಈ ಕಸವನ್ನೆಲ್ಲ ದೊಡ್ಡ ದೊಡ್ಡ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಮನೆಯ ಮುಂದಿನ ಕಾಂಪೌಂಡಿನ ಮೇಲೆ ಕಲಶಗಳಂತೆ ಇಲ್ಲೆಲ್ಲ ಇಡುತ್ತಾರೆ. ರಸ್ತೆಯಲ್ಲಿ ಹೋಗುವವರಿಗೆ ಇಂಥ ಕಲಶಗಳ ದೃಶ್ಯ ಕಾಣುತ್ತದೆ. ವಾರಕ್ಕೆ ಒಂದೆರಡು ಬಾರಿ ನಗರ ಸಭೆಯ ಲಾರಿಗಳು ಬಂದು ಈ ಚೀಲಗಳನ್ನು ತುಂಬಿಕೊಂಡು ಹೋಗುತ್ತವೆ. ಪ್ಲಾಸ್ಟಿಕ್ ಚೀಲಗಳನ್ನು ಹೊರಗಿಟ್ಟು ಯಾರಾದರೂ ತೆಗೆದುಕೊಂಡು ಹೋದರೆ

ಸಾಕು ಎಂದು ಕಾಯುತ್ತಾರೆ. ಹಳೆಯ ಕಾರುಗಳು ರಸ್ತೆಯ ಬದಿಯಲ್ಲಿ ಕೆಟ್ಟು ನಿಂತಿರುತ್ತವೆ. ಅವು ಅಲ್ಲಿಯೇ ಮಣ್ಣು ತಿಂದು ಹೋಗುತ್ತವೆ. ಹಳೇ ಪೇಪರು, ಖಾಲಿಸೀಸೆಗಳನ್ನು ನಮ್ಮಲ್ಲಿ ದುಡ್ಡು ಕೊಟ್ಟು ಕೊಂಡರೆ ಅವನ್ನು ಇಲ್ಲಿ ಕೇಳುವವರಿಲ್ಲ.

ಇಲ್ಲಿಯ ರಸ್ತೆಗಳು ಚೊಕ್ಕಟವಾಗಿರುತ್ತವೆ ಮತ್ತು ಸಮತಟ್ಟಾಗಿ ಮನೆಯ ನೆಲದಂತಿರುತ್ತವೆ. ಸಾಮಾನ್ಯವಾಗಿ ಎಲ್ಲ ಕಡೆಯೂ ಜೋಡಿರಸ್ತೆಗಳಿರುತ್ತವೆ. ಕಾರುಗಳು, ಮಿನಿಬಸ್‌ಗಳು ವೇಗವಾಗಿ ಓಡುತ್ತವೆ. ರಸ್ತೆಗಳಲ್ಲಿ ಸದಾ ವಾಹನಗಳು ಓಡಾಡುತ್ತವೆ. ಜನರಿಗೆ ರಸ್ತೆ ನಿಯಮಗಳು ಚೆನ್ನಾಗಿ ತಿಳಿದಿರುವುದರಿಂದ ಅಪಘಾತಗಳು ಹೆಚ್ಚಿಲ್ಲ. ವಾಹನಗಳು ಒಂದನ್ನೊಂದು ಹಿಂದೆ ಹಾಕಿ ಹೋಗುವಾಗ ಯಾವ ಪಕ್ಕದಲ್ಲಿಯಾದರೂ ಹೋಗಬಹುದು. ಸೂಚನೆ ಕೊಡುವುದರ ಮೂಲಕ ಯಾವ ಪಕ್ಕದಲ್ಲಿಯಾದರೂ ಮುಂದಕ್ಕೆ ಹೋಗಬಹುದು. ಕಾರುಗಳಲ್ಲಿ ಮತ್ತು ಜನರು ಸಂಚರಿಸುವ ಇತರೆ ವಾಹನಗಳಲ್ಲಿ ಸಾಮಾನ್ಯವಾಗಿ ರೇಡಿಯೋಗಳಿರುತ್ತವೆ. ಪ್ರಯಾಣಿಸುವಾಗ ಯಾವಾಗಲೂ ಸಂಗೀತವನ್ನೋ ಸಮಾಚಾರವನ್ನೋ ಕೇಳುತ್ತಾರೆ. ರಸ್ತೆಯ ಬದಿಗಳಲ್ಲಿ ಹೋಗುವ ಸಾಮಾನ್ಯ ಹಾದಿ ಹೋಕರು ಏನಾದರೂ ಹಾಡುಗಳನ್ನು ಗುನುಗುತ್ತಾ ಹೋಗುತ್ತಾರೆ. ಕೈಯಲ್ಲಿ ಹಿಡಿದ ಟ್ರಾನ್ಸಿಸ್ಟರ್‌ಗಳ ಹಾಡುಗಳಿಗೆ ಕುಣಿಯುತ್ತ ಹಾಡುತ್ತಿರುತ್ತಾರೆ.

ಹಣ್ಣು ತರಕಾರಿ ಅಂಗಡಿಗಳಲ್ಲಿ, ಮಾರುಕಟ್ಟೆಗಳಲ್ಲಿ ನಮ್ಮ ಹಾಗೇ ಎಲ್ಲ ಹಣ್ಣು ತರಕಾರಿಗಳು ಸಿಗುತ್ತವೆ. ಮೊದಲು ಬೆಲೆ ಹೆಚ್ಚು ಹೇಳುತ್ತಾರೆ. ಚೌಕಾಸಿ ಮಾಡಿದರೆ ಕ್ರಯಕಡಿಮೆ ಮಾಡುತ್ತಾರೆ. ಮೊನ್ನೆ ನಾನು ಡಾ. ರಮೇಶ್‌ರ ಜೊತೆ ತರಕಾರಿ ಮಾರುಕಟ್ಟೆಗೆ ಹೋಗಿದ್ದೆ. ಬಾಳೆಹಣ್ಣು ಮತ್ತು ಟೊಮೆಟೊ ಹಣ್ಣುಗಳನ್ನು ಕೊಳ್ಳಲು ಒಬ್ಬ ಮುದುಕಿಯ ಹತ್ತಿರ ಹೋದೆವು. ಬೆಲೆಯನ್ನು ಕಡಿಮೆ ಮಾಡಿಕೊಡುವಂತೆ ಕೇಳಿದರೂ ಆಕೆ ಒಪ್ಪದಿದ್ದಾಗ ಡಾ. ರಮೇಶ ಮುದುಕಿಯ ಹೆಗಲ ಮೇಲೆ ಕೈಹಾಕಿ ಪಾಲಿಷ್ ಮಾಡುತ್ತಾ ಹೊಗಳಿ ಮಾತನಾಡಿ ದಾಗ ಮುದುಕಿ ನಮ್ಮ ಬೆಲೆಗೆ ಕೊಡುವುದಾಗಿ ಒಪ್ಪಿದಳು. ಮುದುಕಿ ನಾವು ಕೊಟ್ಟ ಹಣವನ್ನು ಸುಮ್ಮನೆ ತೆಗೆದುಕೊಂಡಿತು. ಹೊರಗೆ ಬಂದ ಮೇಲೆ ರಮೇಶರ ಮುಖ ನೋಡಿ ನಾನು ನಕ್ಕೆ. ಡಾ. ರಮೇಶ್ ತಮ್ಮ ಅನುಭವ ಹೇಳಿದರು. ಆಸ್ಪತ್ರೆಯ ನರ್ಸುಗಳ ಹೆಗಲ ಮೇಲೆ ಕೈಹಾಕಿ, ಆಗಾಗ ತೋಳುಗಳನ್ನು ಮುಟ್ಟಿ ಸವರುತ್ತಾ ಹೊಗಳಿಕೆಯಿಂದ, ವಿಶ್ವಾಸದಿಂದ ಏನೂ ಕೆಲಸಗಳನ್ನೂ ಮಾಡಿಸಬಹುದಂತೆ. ವೈದ್ಯರು ದಾದಿಯರಿಗೆ ಅಧಿಕಾರದ ಸಿಡುಕಿನಿಂದ ಹೇಳಿ ಕೆಲಸಮಾಡಿಸುವುದು ಸಾಧ್ಯವಿಲ್ಲವಂತೆ. ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ರಾಬಿನ್‌ಸನ್ ಅವರು ಕೂಡ ಬೆರಳಚ್ಚುಗಾರ್ತಿಯರಿಗೆ, ಗುಮಾಸ್ತೆಯರಿಗೆ ಕೆಲಸ ಹೇಳುವಾಗ ಈ ಕ್ರಮವನ್ನು

ಅನುಸರಿಸುತ್ತಿದ್ದುದನ್ನು ನಾನೂ ನೋಡಿದ್ದೆ. ಇಲ್ಲಿಯ ನಾರಿಯರು ಪುರುಷರ ವಿಶ್ವಾಸಕ್ಕೆ ತುಂಬಾ ಬೆಲೆ ಕೊಡುತ್ತಾರೆ, ತಪ್ಪು ತಿಳಿಯುವುದಿಲ್ಲ.

ಡಾ. ರಮೇಶ್ ಹೇಳಿದ ವಿಷಯ ಕುತೂಹಲಕರವಾದುದು. ಇಲ್ಲಿಯ ಆಸ್ಪತ್ರೆಗಳಿಗೆ ಬರುವ ರೋಗಿಗಳಲ್ಲಿ ಸಾಮಾನ್ಯವಾಗಿ ಲೈಂಗಿಕ ಕ್ರಿಯೆಯಿಂದ ಹರಡುವ ಕಾಯಿಲೆಗಳಿಂದ (STD = Sexually Transmitted Diseases) ನರಳುವವರೇ ಹೆಚ್ಚಂತೆ. ಕೆಲವರು ಗರ್ಭಿಣಿಯರು ಗರ್ಭಕೋಶ ಒಳಗೆ ಒಡೆದು ಹೋಗಿ ರಕ್ತಸ್ರಾವದಿಂದ ಅಪಾಯದ ಸ್ಥಿತಿಯಲ್ಲಿರುವಾಗ ಆಸ್ಪತ್ರೆಗೆ ಬರುತ್ತಾರಂತೆ. ಲೈಂಗಿಕ ರೋಗಗಳಿಂದ ನರಳುವ ಸ್ತ್ರೀಯರ ಗರ್ಭಕೋಶದ ನಾಳಗಳು ಕೀವುಗಳಿಂದ ಮುಚ್ಚಿಕೊಂಡಾಗ ವೀರ್ಯಾಣು ಗರ್ಭಕೋಶಕ್ಕೆ ಹೋಗದೆ ನಾಳಗಳಲ್ಲಿಯೇ ಬೆಳೆಯಲಾರಂಭಿಸುತ್ತದೆ. ಭ್ರೂಣ ಬೆಳೆದು ದೊಡ್ಡದಾದಾಗ ಚಿಕ್ಕನಾಳಗಳು ಬೆಳೆದ ಭ್ರೂಣದ ಗಾತ್ರವನ್ನು ತಾಳಲಾರದೆ ಒಡೆದು ಹೋಗಿ ರಕ್ತಸ್ರಾವವಾಗುತ್ತದೆ. ಇದು ಗರ್ಭಿಣಿಯರಿಗೆ ಅಪಾಯದ ಸ್ಥಿತಿ. ಇಂತಹ ರೋಗಿಗಳು ಇಲ್ಲಿ ಹೆಚ್ಚು ಎಂದು ಭಾರತದಲ್ಲಿಯೂ ವೈದ್ಯರಾಗಿ ಕೆಲಸಮಾಡಿರುವ ರಮೇಶ್ ಹೇಳಿದರು.

ವಿಶ್ವವಿದ್ಯಾನಿಲಯದ ಆವರಣದಲ್ಲಿ ಹುಡುಗ ಹುಡುಗಿಯರು ಸಾಮಾನ್ಯವಾಗಿ ಜೊತೆಜೊತೆಯಾಗಿ ತಿರುಗಾಡುತ್ತಾರೆ. ಬಾಯ್ ಫ್ರೆಂಡ್ ಅಥವಾ ಗರ್ಲ್ ಫ್ರೆಂಡ್‌ಗಳಿಲ್ಲದ ಹುಡುಗ ಹುಡುಗಿಯರನ್ನು ಕಾಣುವುದು ತೀರ ವಿರಳ. ಆದರೆ ಇಲ್ಲಿ ಹುಡುಗ ಹುಡುಗಿಯರ ಜೊತೆಗಳು ಹೋಗುವಾಗ ನಮ್ಮ ವಿಶ್ವವಿದ್ಯಾನಿಲಯದ ಆವರಣಗಳಲ್ಲಿಯಂತೆ ಕಿರಿಚುವ, ಕೂಗುವ, ವಿಕಾರವಾಗಿ ವರ್ತಿಸುವ ಹುಚ್ಚರನ್ನು ಕಾಣುವುದು ಸಾಧ್ಯವಿಲ್ಲ. ಹುಡುಗಿಯರು ಹೋಗುತ್ತಿದ್ದರೆ ಪಕ್ಕದಲ್ಲಿರುವ ಹುಡುಗರು ತಲೆಯೆತ್ತಿಯೂ ನೋಡುವುದಿಲ್ಲ. ಕೈಕೈ ಹಿಡಿದೊ, ಹೆಗಲ ಮೇಲೆ ಕೈಹಾಕಿಯೋ ಹೋಗುವ ಮಿಥುನವನ್ನು ಬೆರಗುಗಣ್ಣುಗಳಿಂದ ನೋಡುವ, ಸಿಳ್ಳೆ ಹಾಕುವ ನಿದರ್ಶನಗಳನ್ನು ನಾನು ಕಾಣಲಿಲ್ಲ. ಹುಡುಗಿಯರ ಗುಂಪಿನಲ್ಲಿ ಕುಳಿತು ಮಾತನಾಡುವ ಹುಡುಗ ಮತ್ತು ಹುಡುಗರ ಗುಂಪಿನಲ್ಲಿ ಕುಳಿತ ಹುಡುಗಿಯರನ್ನು ಯಾವುದೇ ಅಸಹಜವಾದ ರೀತಿಯಲ್ಲಿ ಕಾಣುವುದಿಲ್ಲ. ಅವರನ್ನು ಬೇರೆಯವರು ಮಿಕ ಮಿಕ ನೋಡುವುದಿಲ್ಲ. ಅಧ್ಯಾಪಕರು ಬಂದರೆ ವಿದ್ಯಾರ್ಥಿಗಳು ಹೆದರಿ ದಾರಿ ಬಿಡುವುದಾಗಲಿ, ಕುಳಿತವರು ಎದ್ದು ನಿಲ್ಲುವುದಾಗಲಿ, ಅಂಜಿಕೆಯ ನಟನೆಯಾಗಲಿ ಇಲ್ಲಿ ಇಲ್ಲ. ಹೆಣ್ಣು ಗಂಡಿನ ಸಂಬಂಧವಾಗಲಿ, ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಬಂಧವಾಗಲಿ ಕೃತಕವಾಗಿರದೆ ನೈಸರ್ಗಿಕವಾಗಿರುವಂತೆ ಕಾಣುತ್ತದೆ.

ಇಲ್ಲಿಯ ಸಾಮಾಜಿಕ ಮತ್ತು ಕೌಟುಂಬಿಕ ಜೀವನದ ಬಗ್ಗೆ ಇನ್ನು ಕೆಲವು ವಿವರಗಳನ್ನು ಹೇಳಬೇಕೆಂದು ಬಯಸುತ್ತೇನೆ. ಎಲ್ಲ ಪಾಶ್ಚಿಮಾತ್ಯ ದೇಶಗಳಂತೆ ಇಲ್ಲೂ ಗಂಡು ಹೆಣ್ಣುಗಳು ಸ್ವತಂತ್ರಪ್ರವೃತ್ತಿಯವರು. ಇಬ್ಬರಿಗೂ ಸರ್ವಕ್ಷೇತ್ರಗಳಲ್ಲೂ ಸಮಾನ ಹಕ್ಕುಬಾಧ್ಯತೆಗಳಿವೆ. ಸ್ತ್ರೀಯರ ಸಂಖ್ಯೆ ಗಂಡಸರ ಸಂಖ್ಯೆಗಿಂತ ಈ

ಕೆರೇಬಿಯನ್ ದ್ವೀಪಗಳಲ್ಲಿ ಅಧಿಕವಾಗಿರುವುದರಿಂದ, ಹೆಂಗಸರು ಗಂಡಸರಿಗಿಂತ ಚುರುಕಾಗಿರುತ್ತಾರೆ. ಕುಟುಂಬದ ಜವಾಬ್ದಾರಿಯೂ ಹೆಂಗಸರಿಗೇ ಹೆಚ್ಚಿರುವಂತೆ ಕಾಣುತ್ತದೆ. ಎಲ್ಲ ಕಛೇರಿಗಳಲ್ಲೂ ಸ್ತ್ರೀಯರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಮಾರು ಕಟ್ಟೆಗಳಲ್ಲಿ, ಅಂಗಡಿಗಳಲ್ಲಿ ಮತ್ತು ಇತರೆ ವ್ಯಾಪಾರ ಕಾರ್ಯಗಳಲ್ಲಿ ಸ್ತ್ರೀಯರದೇ ಮುಖ್ಯಪಾತ್ರ.

ಸ್ತ್ರೀಪ್ರಧಾನವಾದ ಸಮಾಜ ಇದಿರಬಹುದು. ಹೆಂಗಸಿಗೆ ಮದುವೆಯಾಗದೆ ಮಕ್ಕಳಾಗಬಹುದು. ಮಕ್ಕಳಾದ ಮೇಲೂ ಹೆಂಗಸು ಮದುವೆಯಾಗಬಹುದು. ನನಗೆ ಗೊತ್ತಿರುವಂತೆ ವಿಶ್ವವಿದ್ಯಾನಿಲಯದಲ್ಲಿ ಮದುವೆಯಾಗದ ಮಾತೆಯರು ಅನೇಕರಿದ್ದಾರೆ. ಈ ಬಗ್ಗೆ ಇವರು ಮರೆಮಾಚದೆ ಹೇಳುತ್ತಾರೆ. ಇದಕ್ಕೆ ಸಂಬಂಧ ಪಟ್ಟಂತೆ ನನ್ನ ಸ್ನೇಹಿತರು ಒಂದು ಸ್ವಾರಸ್ಯದ ನಿದರ್ಶನ ಹೇಳಿದರು : ಅವರು ತಮ್ಮ ಗರ್ಭಿಣಿ ಹೆಂಡತಿಯನ್ನು ಹೆರಿಗೆಗಾಗಿ ಆಸ್ಪತ್ರೆಗೆ ಸೇರಿಸುವುದಕ್ಕಾಗಿ ಕರೆದುಕೊಂಡು ಹೋದಾಗ ಅಲ್ಲಿಯ ವೈದ್ಯರು ಆಕೆಯನ್ನು ಪರಿಶೀಲಿಸಿ, "Are you married ?" ಎಂದು ಕೇಳಿಬಿಟ್ಟರಂತೆ. ಈ ಗರ್ಭಿಣಿ ಹೆಂಗಸು ಕಕ್ಕಾಬಿಕ್ಕಿಯಾಗಿ ಏನು ಹೇಳುವುದು ಎಂದು ತಿಳಿಯದಿದ್ದಾಗ ನನ್ನ ಮಿತ್ರರೇ "I am her husband" ಎಂದು ಹೇಳಿ, ತಮ್ಮ ಪತ್ನಿಗೆ ಅಲ್ಲಿಯ ಸಾಮಾಜಿಕ ಪರಿಸ್ಥಿತಿಯನ್ನು ವಿವರಿಸಿದರಂತೆ! ಗಂಡಸರ ಸಂಖ್ಯೆ ಇಲ್ಲಿ ಕಡಿಮೆಯಿರುವುದರಿಂದ ಒಬ್ಬ ಗಂಡಸು 5–6 ಹೆಂಗಸರ ಜೊತೆಗಾರ ನಾಗಿರುತ್ತಾನಂತೆ. ಈ ವಿಷಯದಲ್ಲಿ ನನಗೆ ಸಂಶಯವಿದೆ. ಇತ್ತೀಚೆಗೆ ಒಂದು ಪತ್ರಿಕೆಯಲ್ಲಿ ಗಂಡಸರಲ್ಲಿ ಶೇಕಡ 60 ಜನ ಸಲಿಂಗಕಾಮಿಗಳೆಂದು ಪ್ರಕಟವಾಗಿತ್ತು. ಅಂತೂ ಇಲ್ಲಿ ಲೈಂಗಿಕ ಸಂಬಂಧ ತೀರ ಸ್ವತಂತ್ರವೂ, ಸಾಮಾನ್ಯವೂ ಆಗಿರ ಬಹುದೆಂದು ಭಾವಿಸುತ್ತೇನೆ. ಇಲ್ಲಿಯ ಹುಡುಗ ಹುಡುಗಿಯರ ತೀರ ಸಂಯಮದ ವರ್ತನೆ ಮತ್ತು ಪತ್ರಿಕೆಗಳಲ್ಲಿ ಲೈಂಗಿಕಾಸಕ್ತಿ ಕೆರಳಿಸುವ ಚಿತ್ರಗಳು ಇಲ್ಲದಿರುವುದು ಮೊದಲಾದವುಗಳು ಇದನ್ನು ಸಮರ್ಥಿಸುತ್ತವೆ. ಲೈಂಗಿಕ ಸಂಬಂಧವಾದ ವಿಷಯಗಳೂ ಇಲ್ಲಿಯ ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ನಾನು ಕಾಣಲಿಲ್ಲ.

ನಾನು ಒಂದು ದಿನ ರಾಬಿನ್‌ಸನ್ ಅವರ ಜೊತೆ ಅವರ ಕಾರಿನಲ್ಲಿ ನಗರದಿಂದ ಹೊರಗೆ ಸಂಚಾರ ಹೋಗುತ್ತಿದ್ದಾಗ, ಎದುರುಗಡೆಯಿಂದ ಬಂದ ಒಂದು ಕಾರು ಸ್ವಲ್ಪ ದೂರ ಮುಂದೆ ಹೋಗಿ ನಿಂತಿತು. ರಾಬಿನ್‌ಸನ್ ಅವರೂ ವಾಹನ ನಿಲ್ಲಿಸಿದರು. ಹಿಂದೆ ನಿಂತ ಕಾರಿನಿಂದ ಒಬ್ಬ ಹುಡುಗ ಬಂದು ರಾಬಿನ್‌ಸನ್ ಅವರ ಕೈಹಿಡಿದು ಮಾತನಾಡುತ್ತಿದ್ದ. ಆಮೇಲೆ ರಾಬಿನ್‌ಸನ್ ಆ ಹುಡುಗನನ್ನು ನನಗೆ ಪರಿಚಯಿಸುತ್ತಾ: ನನ್ನ ಮಗ, ಕಂಪ್ಯೂಟರ್ ಕಂಪೆನಿಯಲ್ಲಿ ಕೆಲಸದಲ್ಲಿದ್ದಾನೆ ಎಂದು ಹೇಳಿದರು. ನಾನು ಯಾಂತ್ರಿಕವಾಗಿ ಕೈ ಕುಲುಕಿದರೂ, ತಂದೆ ಮಕ್ಕಳ ಸಂಬಂಧವನ್ನು ಕಂಡು ನನಗೆ ಆಶ್ಚರ್ಯವಾಗಿತ್ತು. ಆ ಹುಡುಗ ಹೊರಟುಹೋದ ಮೇಲೆ ರಾಬಿನ್‌ಸನ್ ಮಾತನಾಡುತ್ತಾ, ತಮ್ಮ

ಮಗಳು ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡುತ್ತಿರುವುದಾಗಿ ತಿಳಿಸಿದರು. ಅವಳನ್ನು ನಾನು ಒಂದು ದಿನವೂ ನಿಮ್ಮ ಮನೆಯಲ್ಲಿ ಕಾಣಲಿಲ್ಲವಲ್ಲ ಎಂದು ಕೇಳಿದ್ದಕ್ಕೆ ಅವಳು ಬಾರ್ಬೆಡಾಸ್ ದ್ವೀಪದಲ್ಲಿ ವೈದ್ಯಶಾಸ್ತ್ರ ಅಭ್ಯಾಸ ಮಾಡುತ್ತಿದ್ದಾಳೆ ಎಂದರು. ಜಮೈಕಾದಲ್ಲೇ ವೈದ್ಯಶಾಸ್ತ್ರ ಅಭ್ಯಾಸಕ್ಕೆ ಅವಕಾಶವಿರುವಾಗ ಅಲ್ಲಿಗೇಕೆ ಕಳುಹಿಸಿದಿರಿ ಎಂದು ನಾನು ಕೇಳಿದ್ದಕ್ಕೆ ಅವರು ಹೇಳಿದ ಉತ್ತರವನ್ನು ಕೇಳಿ ಇನ್ನೊಮ್ಮೆ ಸ್ತಂಭೀಭೂತನಾದೆ. ತನ್ನ ಮಗಳ ಬಾಯ್‌ಫ್ರೆಂಡ್ ಅವಳನ್ನು ಬಾರ್ಬಡಾಸ್ ದ್ವೀಪಕ್ಕೆ ಅಧ್ಯಯನಕ್ಕೆ ಕರೆದುಕೊಂಡು ಹೋಗುತ್ತೇನೆಂದ, ನಾನೇಕೆ ಬೇಡವೆನ್ನಲಿ ಎಂದರು. ಈ ಎಲ್ಲವೂ ಅಲ್ಲಿಯ ಸಾಮಾಜಿಕ ಪರಿಸರದ ಚಿತ್ರವನ್ನು ನೀಡುತ್ತವೆ ಅಷ್ಟೆ.

ಇಲ್ಲಿಯ ದಿನಪತ್ರಿಕೆಗಳಲ್ಲಿ ಬರುವ ಜನಸಾಮಾನ್ಯರ ಪ್ರತಿಕ್ರಿಯೆಗಳನ್ನು ನೋಡಿದರೆ ಈ ಸಮಾಜದ ಬಗ್ಗೆ ಸ್ಪಷ್ಟ ಚಿತ್ರ ಮೂಡುತ್ತದೆ. ಕುಟುಂಬ ಜೀವನಕ್ಕೆ ಮತ್ತು ಲೈಂಗಿಕ ರೋಗಗಳಿಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಅಂಕಣಗಳಿರುತ್ತವೆ. ಇಲ್ಲಿಯ ಪ್ರಮುಖ ಪತ್ರಿಕೆ 'Gleaner'ನಲ್ಲಿ "Something Bugging you?" ಎಂಬ ಅಂಕಣದಲ್ಲಿ ಪ್ರಕಟಿಸುವ ಕೆಲವು ಪ್ರಶ್ನೆ + ಉತ್ತರಗಳನ್ನು ಕುತೂಹಲಕ್ಕಾಗಿ ಇಲ್ಲಿ ಕೊಡುತ್ತೇನೆ [ಇಲ್ಲಿಯ ಪತ್ರಿಕೆಗಳ ಬಗ್ಗೆ ಎರಡು ಮಾತು: ಇಂಥ ಸಣ್ಣ ದೇಶಗಳಲ್ಲಿ ಪತ್ರಿಕೆಗಳ ಗಾತ್ರ ಆಶ್ಚರ್ಯ ಉಂಟು ಮಾಡುತ್ತದೆ. ಗಾತ್ರದ ಬಗ್ಗೆ ಇವರಿಗೊಂದು ಹುಚ್ಚಿದ್ದಂತೆ ಕಾಣಿಸುತ್ತದೆ. ಈ ಗ್ಲೀನರ್ ಪತ್ರಿಕೆ ನಮ್ಮ ಪತ್ರಿಕೆಗಳ ಸೈಜಿನಲ್ಲಿಯೇ 32 ಪುಟಗಳಿರುತ್ತದೆ. 4—5 ಇಂಥ ಪ್ರಸಿದ್ಧ ಪತ್ರಿಕೆಗಳು ಇಲ್ಲಿವೆ. ಭಾನುವಾರದ ವಿಶೇಷ ಪುರವಣಿ ಸುಮಾರು 30 ಪುಟದಷ್ಟಿರುತ್ತದೆ. ಇವುಗಳ ಒಟ್ಟು ಬೆಲೆ 50 ರಿಂದ 75 ಸೆಂಟ್ (ಸುಮಾರು ಎರಡುವರೆ ರೂ). ಒಂದು ವರ್ಷ ಈ ಪತ್ರಿಕೆಯನ್ನು ಕೊಂಡು ಇಡಲು ಅದಕ್ಕಾಗಿಯೇ ಒಂದು ಪ್ರತ್ಯೇಕ ಕೋಣೆ ಬೇಕಾಗುತ್ತದೆ. ಇಲ್ಲಿಯ ಪತ್ರಿಕೆಗಳಲ್ಲಿ ಮುಕ್ಕಾಲು ಭಾಗಕ್ಕಿಂತ ಹೆಚ್ಚು ಜಾಹೀರಾತುಗಳಿರುತ್ತವೆ. ಹಳೆಯ ಪತ್ರಿಕೆಗಳನ್ನು ಇಲ್ಲಿ ಯಾರೂ ಕೊಳ್ಳುವುದಿಲ್ಲ. ಅಂಗಡಿಗಳವರು ಕೇವಲ ಪ್ಲಾಸ್ಟಿಕ್ ಚೀಲಗಳನ್ನು ಬಳಸುತ್ತಾರೆ. ಹಳೆಯ ಪೇಪರ್ ಇಲ್ಲಿ ಕಸಕ್ಕೆ ಸೇರಿ ಹೋಗುತ್ತದೆ.]

ಪತ್ರಿಕೆಯಲ್ಲಿ ಬರುವ ಪ್ರಶ್ನೋತ್ತರಗಳು ಹೀಗಿವೆ:

ಪ್ರಶ್ನೆ : ಸರ್ಕಾರದಿಂದ ವಿಧವಾ ಸವಲತ್ತುಗಳನ್ನು ಪಡೆಯಲು ಹೆಂಗಸು ಎಷ್ಟು ವರ್ಷ ಗಂಡಸಿನ ಜೊತೆ ವೈವಾಹಿಕ ಜೀವನ ನಡೆಸಿರಬೇಕು?

ಉತ್ತರ : ವಿಧವೆಯು ಈ ಸೌಲಭ್ಯ ಪಡೆಯಬೇಕಾದರೆ ಗಂಡನ ಜೊತೆ ಕೊನೆಯ ಪಕ್ಷ ಮೂರು ವರ್ಷ ವೈವಾಹಿಕ ಜೀವನ ನಡೆಸಿರಬೇಕು.

ಪ್ರಶ್ನೆ : 30 ವರ್ಷದ ನನ್ನ ಮಗಳು ಈಗಿನ ನನ್ನ ಗಂಡನಿಗೆ ಮದುವೆಗಿಂತ ಮುಂಚೆಯೇ ಹುಟ್ಟಿದ್ದಳು. ಅವಳನ್ನು ನಮ್ಮಿಬ್ಬರ ಮಗಳೆಂದು ದಾಖಲೆ ಮಾಡಿಸಬಹುದೆ?

ಉತ್ತರ : ಹೌದು, ತಂದೆ ತಾಯಿ ಇಬ್ಬರೂ ಬದುಕಿರುವಾಗ ಮಗಳ ಹೆಸರನ್ನು ತಂದೆಯು ಹೆಸರಿನಲ್ಲಿ ದಾಖಲಿಸಬಹುದು.

ಪ್ರಶ್ನೆ : ನನ್ನ ಒಂದು ಹೆಣ್ಣು ಮಗುವನ್ನು ನನ್ನ ಹೆಸರಿನಲ್ಲಿ ದಾಖಲಿಸಿದ್ದೇನೆ. ಈಗ ಈ ಮಗುವಿನ ತಂದೆ (ಗಂಡನಲ್ಲ) ತನ್ನ ಹೆಸರಿನಲ್ಲಿ ಮಗುವನ್ನು ದಾಖಲಿಸಲು ಇಷ್ಟ ಪಡುತ್ತಾನೆ. ಇದನ್ನು ಹೇಗೆ ಬದಲಿಸಬಹುದು?

ಉತ್ತರ : 1976 ರ ಮಕ್ಕಳ ಕಾನೂನು ನಿಯಮದ ಪ್ರಕಾರ ಮಗುವಿನ ತಂದೆ ಬಾಂಡ್ ಮೂಲಕ ತನ್ನ ವಿವರಗಳನ್ನು ಮಗುವಿನ ಹೆಸರಿಗೆ ದಾಖಲಿಸಬಹುದು. ಇದರಿಂದ ಮಗುವು ತಂದೆ ತಾಯಿ ಇಬ್ಬರ ಹೆಸರುಗಳನ್ನೂ ಬಳಸಿಕೊಳ್ಳಬಹುದಾಗಿದೆ.

ಪ್ರಶ್ನೆ : ನನಗೆ ಈಗ ಕೆಲಸವಿಲ್ಲದೆ ಇರುವುದರಿಂದ ನನ್ನ ಮಗುವನ್ನು ಸಾಕಲಾರದಾಗಿದ್ದೇನೆ. ನಾನು ಹಿಂದಕ್ಕೆ ಪಡೆಯುವ ತನಕ ನನ್ನ ಮಗುವನ್ನು ದತ್ತು ತೆಗೆದುಕೊಂಡು ಸಾಕುವ ವ್ಯಕ್ತಿಯನ್ನು ದೊರಕಿಸಿಕೊಳ್ಳಲು ನೀವು ಸಹಾಯ ಮಾಡುವಿರಾ?

ಉತ್ತರ : ಮಕ್ಕಳನ್ನು ದತ್ತು ಕೊಟ್ಟ ಮೇಲೆ ಹೆತ್ತ ತಾಯಿ ಮಕ್ಕಳ ಮೇಲೆ ಹಕ್ಕನ್ನು ಕಳೆದುಕೊಳ್ಳುತ್ತಾಳೆ. ಮಕ್ಕಳ ಸಂಪೂರ್ಣ ಜವಾಬ್ದಾರಿ ದತ್ತು ತೆಗೆದುಕೊಂಡ ತಂದೆ ತಾಯಿಗಳಿಗೆ ವರ್ಗವಾಗುತ್ತದೆ. ಈ ನಿಬಂಧನೆ ನಿಮಗೆ ಒಪ್ಪಿಗೆಯಾದಲ್ಲಿ ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಿ: Adoption Board, 26 Beechwood Avenue, Kingston-5 Jamaika.

ಪ್ರಶ್ನೆ : ನಾನು ಮತ್ತು ನನ್ನ ಗಂಡ ಬೇರೆಯಾಗಿದ್ದೇವೆ. ನಮ್ಮಿಬ್ಬರ ಒಂದಾಗುವಿಕೆ ಸಾಧ್ಯವಿಲ್ಲ. ನನ್ನ ಗಂಡ ಕಾನೂನುಬದ್ಧವಾದ ಅಗಲಿಕೆ ಪಡೆಯಬಲ್ಲನೆ?

ಉತ್ತರ : ಕಾನೂನುಬದ್ಧವಾದ ಅಗಲಿಕೆಯನ್ನು ವಿವಾಹ ವಿಚ್ಛೇದನದಂತಹ ಆಧಾರಗಳ ಮೇಲೆ (ವ್ಯಭಿಚಾರ, ಕ್ರೌರ್ಯ, ದೂರವಿರುವುದು–ಮೂರು ಅಥವಾ ಹೆಚ್ಚು ವರ್ಷಗಳು ಬೇರೆಯಾಗಿ ವಾಸಿಸುವುದು.) ಪಡೆಯಬಹುದು. ಆದರೆ ಯಾರೊಬ್ಬರೂ ಪುನರ್ವಿವಾಹವಾಗುವಂತಿಲ್ಲ. ಇವರು ಮತ್ತೆ ವೈವಾಹಿಕ ಜೀವನ ನಡೆಸಬಹುದು.

ಪ್ರಶ್ನೆ : ತನಗೆ ಹುಟ್ಟಿದ ಮಗುವನ್ನು ತನ್ನ ಹೆಸರಿನಲ್ಲಿ ದಾಖಲಿಸಲು ಗಂಡನೊಬ್ಬನು ಮಗುವಿನ ತಾಯಿಯ ಮೇಲೆ ಕೋರ್ಟಿನಲ್ಲಿ ಕಟ್ಟಲೆ ಹೂಡಬಹುದೆ? ರಕ್ತಪರೀಕ್ಷೆಯಿಂದ ಮಗುವು ತನಗೆ ಹುಟ್ಟಿದೆ ಎಂಬುದನ್ನು ತಿಳಿಯಲು ಸಾಧ್ಯವೆ?

ಉತ್ತರ : ತಂದೆಯ ಅನುಮತಿಯಿಲ್ಲದೆ ಅವನ ಹೆಸರಿನಲ್ಲಿ ಮಗುವನ್ನು ದಾಖಲಿಸಲು ಸಾಧ್ಯವಿಲ್ಲ. ಆದರೆ ನಿಮಗೆ ಹುಟ್ಟಿದ ಮಗು ಎಂದು ದಾಖಲಿಸುವ ಮೂಲಕ ನಿಮ್ಮ ಗೌರವವನ್ನು ಹಾಳು ಮಾಡಲು ಪ್ರಯತ್ನಿಸುತ್ತಿರುವುದನ್ನು ನೀವು ಸಮರ್ಥಿಸಬಲ್ಲಿರಾದರೆ ನೀವು ಕೋರ್ಟಿಗೆ ಹೋಗಲು ಅವಕಾಶವಿದೆ. ರಕ್ತಪರೀಕ್ಷೆಯಿಂದ ಒಬ್ಬನು ಒಂದು ಮಗುವಿನ ತಂದೆಯಲ್ಲವೆಂದು ಕೆಲವು ಸಾರಿ ನಿರ್ಧರಿಸಬಹುದೇ ಹೊರತು, ಇವನೇ ಈ ಮಗುವಿನ ತಂದೆಯೆಂದು ನಿರ್ಧರಿಸಲು ಸಾಧ್ಯವಿಲ್ಲ–ರಕ್ತದ ಗುಂಪು ಒಂದೇ ಆದರೂ ಕೂಡ.

ಪ್ರಶ್ನೆ : ನಾನು ಕ್ರೈಸ್ತಮತಸ್ಥೆಯಾಗುವ ಮೊದಲು ನನ್ನ ಸ್ನೇಹಿತೆಯ ಗಂಡನ ಜೊತೆ ಲೈಂಗಿಕ ಸಂಬಂಧವಿರಿಸಿಕೊಂಡಿದ್ದೆ. ಅವಳು ಕ್ರೈಸ್ತಮತಸ್ಥೆಯಾಗಿದ್ದು ಅವಳ ಗಂಡ ಕ್ರೈಸ್ತಮತಸ್ಥನಾಗಿರಲಿಲ್ಲ. ನಾನು ಈಗ ಕ್ರೈಸ್ತಮತಸ್ಥೆಯಾಗಿದ್ದೇನೆ ಮತ್ತು ನನ್ನ ಸ್ನೇಹಿತೆ ಹೋಗುವ ಚರ್ಚ್‌ಗೇ ಹೋಗುತ್ತಿದ್ದೇನೆ. ನಾನೀಗ ನನ್ನ ಹಿಂದಿನ ಕೃತ್ಯಕ್ಕಾಗಿ ನನ್ನ ಸ್ನೇಹಿತೆಯ ಕ್ಷಮೆ ಕೇಳಲೆ? ಬೈಬಲ್‌ನಲ್ಲಿ ವ್ಯಭಿಚಾರ ಮಾಡಿದವರು ಸ್ವರ್ಗ ಸೇರುವುದಿಲ್ಲವೆಂದು ಹೇಳಿದೆ. ನಡೆದುಹೋದ ತಪ್ಪನ್ನು ಸ್ನೇಹಿತೆಗೆ ಹೇಳಿ ಕ್ಷಮೆ ಕೇಳಲೆ?

ಉತ್ತರ : ನೀವು ನಿಮ್ಮ ಸ್ನೇಹಿತೆಗೆ ನಿಜವನ್ನು ಹೇಳುವುದರಿಂದ ಒಳ್ಳೆಯದೇನನ್ನೂ ಮಾಡಿದಂತಾಗುವುದಿಲ್ಲ. ಅದರಿಂದ ಅವರಿಗೆ ನೋವಾಗುತ್ತದೆ ಮತ್ತು ಗಂಡಹೆಂಡಿರ ಅಗಲಿಕೆಗೆ ಕಾರಣವಾಗಲೂಬಹುದು. ನೀವು ನಿಮ್ಮ ಪಾಪವನ್ನು ದೇವರಲ್ಲಿ ಒಪ್ಪಿಕೊಂಡಿದ್ದ ಪಕ್ಷದಲ್ಲಿ ಚಿಂತಿಸಬೇಕಾದುದಿಲ್ಲ.

ಪ್ರಶ್ನೆ : ನಾನು ನನ್ನ ಮೊದಲ ಬಾಯ್ ಫ್ರೆಂಡನ್ನು ಬಿಟ್ಟು ಬೇರೆ ಬಾಯ್ ಫ್ರೆಂಡ್ ಜೊತೆ ಮಲಗುತ್ತಿದ್ದೇನೆ. ಈಗಿನವನು ತುಂಬಾ ಒಳ್ಳೆಯವನು. ಇವನನ್ನು ಬಿಡುವುದು ಸಾಧ್ಯವಿಲ್ಲ. ನಮ್ಮಿಬ್ಬರ ಸ್ನೇಹವನ್ನು ಕಂಡು ಮೊದಲನೆಯವನು ಕರುಬುತ್ತಾನೆ. ನನ್ನ ಬಗ್ಗೆ ಅಸಹ್ಯವಾಗಿ ನಡೆದುಕೊಳ್ಳುತ್ತಾನೆ. ಇವನಿಗೆ ಬರೀ ಲೈಂಗಿಕ ಸಂಬಂಧವಷ್ಟೇ ಬೇಕು. ನನ್ನ ಜೊತೆ ಜಗಳವಾಡುತ್ತಾನೆ. ನಾನು ಶಾಲೆಗೆ ಹೋಗಬೇಕಾಗಿರುವುದರಿಂದ ಇದು ನನ್ನ ಮನಸ್ಸನ್ನು ಕದಡುತ್ತಿದೆ.

ಉತ್ತರ : ನೀನು ಹುಡುಗರ ಜೊತೆ ಮಲಗುವುದು ತಪ್ಪು. ಹುಡುಗರು ನಿನ್ನನ್ನು ಬೊಂಬೆ ಮಾಡಿಕೊಂಡು ಆಟವಾಡುವುದಕ್ಕೆ ನೀನು ಅವಕಾಶಕೊಡಬಾರದು. ಅದಕ್ಕಾಗಿ ವಯಸ್ಸಾದ ಮೇಲೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಮದುವೆಯಾಗುವ ಮೊದಲು ಯಾರ ಜೊತೆಯೂ ಮಲಗದಂತೆ

ಎಚ್ಚರವಹಿಸು. 20 ವರ್ಷದ ನಿನಗೆ ಇಂಥ ಸಣ್ಣ ಸಮಸ್ಯೆಯನ್ನು ಎದುರಿಸುವುದು ಹೇಗೆಂದು ತಿಳಿಯಬೇಕು.

* * *

ಜಮೈಕ ದ್ವೀಪವು ಕೆರೇಬಿಯನ್ ದ್ವೀಪಗಳಲ್ಲಿ ಒಂದು ದೊಡ್ಡ ದ್ವೀಪ. ಮೊದಲು ಜ್ವಾಲಾಮುಖಿಯಿಂದಾದ ಪರ್ವತಗಳು ಕ್ರಮೇಣ ಮಾಗಿ ಅದರ ಮೇಲೆ ಸುಣ್ಣದ ಕಲ್ಲುಗಳ ಬಂಡೆಗಳಾಗಿ ಮಾರ್ಪಟ್ಟವು. ಪೂರ್ವದಲ್ಲಿ ಎತ್ತರವಾದ ಪರ್ವತ ಗಳಿವೆ. ಈ ನೀಲಿ ಬೆಟ್ಟಗಳು ಸುಮಾರು 7500 ಅಡಿಗಳಷ್ಟು ಎತ್ತರವಿವೆ. ಈ ದ್ವೀಪ 146 ಮೈಲಿ ಉದ್ದ ಮತ್ತು 51 ಮೈಲಿ ಅಗಲವಿದೆ. 4411 ಚದರ ಮೈಲಿ ವಿಸ್ತಾರವಿದೆ. ಇಲ್ಲಿ ಋತುಮಾಸಗಳು ಸಾಮಾನ್ಯವಾಗಿ ಬದಲಾಗುವುದಿಲ್ಲ ವಂತೆ. ಎಲ್ಲ ಕಾಲದಲ್ಲೂ ಎಲ್ಲ ಋತುಗಳ ಹವೆಯನ್ನೂ ಕಾಣಬಹುದು. ಕಾಲವೆಂದರೆ ಇಲ್ಲಿ ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ಪ್ರವಾಸಿಗರ ಕಾಲ.

ಈ ದ್ವೀಪಕ್ಕೆ ಮೊದಲು ಬಂದವನು ಕೊಲಂಬಸ್. ಅವನು 1492ರಲ್ಲಿ ಇಲ್ಲಿಗೆ ಬಂದು ದಿಸ್ಕವರಿ ಬೇ ಎಂಬಲ್ಲಿ ಪದಾರ್ಪಣ ಮಾಡಿದ. ಈ ಊರಲ್ಲಿ ಈಗಲೂ ಅವನ ಹೆಸರಿನ ಅಂಗಡಿ, ಪಾರ್ಕು, ಹೋಟಲುಗಳಿವೆ. ನೆಗ್ರಿಲ್ ಎಂಬ ಊರಿನ ಹತ್ತಿರ ಸುಂದರ ಬೀಚುಗಳಿವೆ. ಹಿಪ್ಪಿಗಳು ಸಾಮಾನ್ಯವಾಗಿ ಈ ಪ್ರದೇಶವನ್ನು ಇಷ್ಟಪಡುತ್ತಾರೆ. ಎಲ್ಲ ರೀತಿಯ ಸಮುದ್ರ ಆಟಗಳ ಜೊತೆಗೆ ಬೆತ್ತಲೆಸ್ನಾನ ಇಲ್ಲಿಯ ವಿಶೇಷ.

ಜಮೈಕಾದಿಂದ ಬಾರ್ಬಡಾಸ್‌ಗೆ

ಕಿಂಗ್ಸ್ಟನ್‌ನಿಂದ ಬಾರ್ಬಡಾಸ್ ದ್ವೀಪಕ್ಕೆ ಹೊರಡುವ ಸಡಗರದಲ್ಲಿದ್ದೆ. ಒಂದು ತಿಂಗಳಿಗೂ ಹೆಚ್ಚುಕಾಲವನ್ನು ಕಳೆದ ಈ ನಾಡನ್ನು ನಿರ್ಭಾವಸ್ಥಿತಿಯಲ್ಲಿ ನಾನು ಬಿಟ್ಟುಹೋಗುವಂತಿರಲಿಲ್ಲ. ಇಲ್ಲಿಯ ವಿವಿಧ ಇಲಾಖೆಯ ಜನರ ಜೊತೆ, ಇಲ್ಲಿ ನೆಲೆಸಿದ ಸ್ವದೇಶೀ ಜನರ ಜೊತೆ ವಿಶ್ವಾಸ ನಿಕಟವಾಗಿತ್ತು. ಅಗಲಿಕೆ ನೋವನ್ನುಂಟುಮಾಡುವ ಮಟ್ಟಕ್ಕೆ ಬೆಳೆದಿತ್ತು. ವಿಶ್ವವಿದ್ಯಾನಿಲಯದ ಎಲ್ಲ ಅಧಿಕಾರಿಗಳನ್ನು ಹಿಂದಿನದಿನವೇ ಭೇಟಿಮಾಡಿದ್ದೆ. ಆದರೆ ಮುಖ್ಯವಾಗಿ ನೋಡ ಬೇಕಾಗಿದ್ದ, ನನ್ನ ಎಲ್ಲ ಕೆಲಸಗಳಿಗೆ ನೆರವಾಗಿದ್ದ ರಾಬಿನ್‌ಸನ್ ಅವರನ್ನೇ ಭೇಟಿ ಯಾಗಿರಲಿಲ್ಲ. ಅವರಿಗೆ ದೈಹಿಕ ಸ್ವಾಸ್ಥ್ಯವಿಲ್ಲದ್ದರಿಂದ ಕಛೇರಿಗೆ ಬಂದಿರಲಿಲ್ಲ. ಬೆಳಗ್ಗೆ ಅವರ ಮನೆಗೆ ಹೋಗಬೇಕು ಎನ್ನುವಷ್ಟರಲ್ಲಿ ಅವರೇ ಕಛೇರಿಗೆ ಬಂದ ವಿಷಯ ತಿಳಿಯಿತು. ಕಛೇರಿಯಲ್ಲಿ ಅವರನ್ನು ಭೇಟಿಮಾಡಿ ಅವರಿಂದ ಆತ್ಮೀಯ ವಾಗಿ ಬೀಳ್ಕೊಂಡು ವಿಮಾನ ನಿಲ್ದಾಣಕ್ಕೆ ವಿಶ್ವವಿದ್ಯಾನಿಲಯದ ಕಾರಿನಲ್ಲಿ ಹೊರಟೆ.

ವಿಮಾನಕ್ಕೆ ಹತ್ತುವ ಮೊದಲು ಜಮೈಕಾದ ಹಣವನ್ನು ವಾಪಸ್ಸುಮಾಡಿ ಬೇರೆ ಹಣ ಪಡೆಯಬೇಕು ಇಲ್ಲವೆ ವಿಮಾನ ನಿಲ್ದಾಣದಲ್ಲೇ ಎಲ್ಲ ಹಣವನ್ನೂ ಖರ್ಚು

ಮಾಡಬೇಕು. ಅಲ್ಲಿಂದ ಮುಂದಕ್ಕೆ ಅದಕ್ಕೆ ಬೆಲೆಯಿಲ್ಲ. ನನ್ನ ಹತ್ತಿರವಿದ್ದ 50–60 ಡಾಲರು ಹಣವನ್ನು ನೀರಿನಂತೆ ಖರ್ಚುಮಾಡಿದೆ. ಕಛೇರಿಯ ಕೆಳದರ್ಜೆ ಸಿಬ್ಬಂದಿಗೆ ಮತ್ತು ಕಾರಿನ ಚಾಲಕನಿಗೆ ಕಾಣಿಕೆಕೊಟ್ಟರೂ ಇನ್ನೂ ಹಣ ಉಳಿದಿತ್ತು. ಇವರ್ಯಾರೂ ನಾನು ಹಣ ಕೊಟ್ಟಾಗ ಬೇಡವೆನ್ನಲಿಲ್ಲ; ಸಂತೋಷದಿಂದ ಸ್ವೀಕರಿಸಿದರು. ವಿಮಾನ ನಿಲ್ದಾಣದ ಅಂಗಡಿಗೆ ನುಗ್ಗಿ ಒಂದೆರಡು ಜಮೈಕ ದೃಶ್ಯಾವಳಿಗಳ ಚಿತ್ರಗಳ ಪುಸ್ತಕ ಕೊಂಡೆ. ಜಮೈಕ ಹಾಡುಗಳ ಒಂದು ಟೇಪು ಕೊಂಡೆ. ಉಳಿದು ಕುಡಿದು ಖರ್ಚುಮಾಡುವುದಕ್ಕೆ ಮನಸ್ಸು ಬಾರದ್ದರಿಂದ ಏನೇನೊ ಸಣ್ಣಪುಟ್ಟದನ್ನು ಕೊಂಡೆ.

ವಿಮಾನ ಹತ್ತಿ ಕಿಟಕಿಯ ಪಕ್ಕದಲ್ಲಿ ಕುಳಿತು ಸುತ್ತಮುತ್ತ ನೋಡಿದೆ. ಒಂದು ತಿಂಗಳಿಗಿಂತ ಹೆಚ್ಚುಕಾಲ ಓಡಾಡಿ, ಸಂಪೂರ್ಣ ಭಿನ್ನವಾದ ಜನಾಂಗದವರ ಜೊತೆ ವಿಶ್ವಾಸವನ್ನು ಅನುಭವಿಸಿ, ವಿದೇಶದ ಸ್ವದೇಶೀಯರಲ್ಲಿ ಮಿಳಿತವಾಗಿ, ನಿಸರ್ಗದ ಮಡಿಲಿನಲ್ಲಿ ಒಡನಾಡಿದ ಈ ಪುಟ್ಟನಾಡನ್ನು ಬಿಟ್ಟು ವಿಮಾನ ಗಗನಕ್ಕೆ ಏರುತ್ತಿತ್ತು. ಜಮೈಕ ದ್ವೀಪದ ಒಟ್ಟಾರೆ ನೆನಪುಗಳು ಮನಸ್ಸಿನಲ್ಲಿ, ಒಟ್ಟಾರೆ ದೃಶ್ಯಗಳು ಕಣ್ಣಿನಲ್ಲಿ ಮೂಡುತ್ತಿದ್ದುವು. ಒಂದು ಸಾರಿ ಕೃತಜ್ಞತೆಯಿಂದ ಮನಸ್ಸು ಭಾರವಾಯಿತು. ಒಂದು ತಿಂಗಳು ನನಗೆ ಅನ್ನ ಕೊಟ್ಟ ನಾಡು, ಕರ್ನಾಟಕದ ನನ್ನ ಅನೇಕ ಮಿತ್ರರಿಗೆ ಅನ್ನಕೊಡುತ್ತಿರುವ ನಾಡು ಇದು. ಅಭಿಮಾನ ಅನ್ನದಿಂದ ಮೂಡುತ್ತದೆಯೇನೊ! ಅನ್ನ ಹಾಕಿದವರನ್ನು ಕೃತಜ್ಞತೆಯಿಂದ ನೆನೆಯಬೇಕು. ಇಲ್ಲಿಯ ಬಂದೂಕುಧಾರಿಗಳು (Gunmen) ಸದಾ ಭಯವನ್ನು ಹುಟ್ಟಿಸಿದರೂ, ಕರಿಯರ ಅನುಕರಣಶೀಲತೆ ಅಸಹ್ಯ ಹುಟ್ಟಿಸಿದರೂ ಬಿಟ್ಟು ಹೊರಡುವ ಸಮಯದಲ್ಲಿ ಇವೆಲ್ಲ ಮರೆತುಹೋಗುತ್ತವೆ.

ಹಿಂದಿನ ದಿನ ವಿಶ್ವವಿದ್ಯಾನಿಲಯದ ಯೋಜನೆ ಮತ್ತು ಅಭಿವೃದ್ಧಿ ವಿಭಾಗದ ಅಧಿಕಾರಿಗಳು ನನಗಾಗಿ ಏರ್ಪಡಿಸಿದ ಭೋಜನಕೂಟದಲ್ಲಿ ತೋರಿದ ಪ್ರೀತಿ, ವಿಶ್ವಾಸಗಳನ್ನು ಮರೆಯಲು ಸಾಧ್ಯವೆ? ಅವರೆಲ್ಲ ನನ್ನ ನಾಡಿನವರಲ್ಲ, ನನ್ನ ಜನಾಂಗದವರಲ್ಲ, ಈ ಮೊದಲು ಪರಿಚಿತರೂ ಅಲ್ಲ. ಮನುಷ್ಯನ ಸ್ವಭಾವ ವಿಚಿತ್ರವಾದುದು; ಇಲ್ಲದ ಕಡೆಯೂ ಅದು ಸಂಬಂಧವನ್ನು ಸೃಷ್ಟಿ ಮಾಡಬಲ್ಲುದು. ನಾವು ನಮ್ಮ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಮಾಡುತ್ತಿರುವ ಕೆಲಸದ ಸಾಮ್ಯ ಒಂದು ನೆಪ. ಆ ಬೀಜದಿಂದ ಬೆಳೆದ ವಿಶ್ವಾಸ ಎಷ್ಟು ದೊಡ್ಡದು? ರಾಬಿನ್‌ಸನ್ ಆಶ್ವಾಸನೆ ಕೊಟ್ಟೇಬಿಟ್ಟಿದ್ದರು, ನಿಮಗೆ ಏನು ಸಹಾಯ, ಸಹಕಾರಗಳು ಬೇಕಿದ್ದರೂ ಹಿಂಜರಿಯದೆ ಕೇಳಿ ಎಂದು. ಅಗತ್ಯವಾದ ಎಲ್ಲ ಸಹಾಯ ಸಹಕಾರಗಳನ್ನೂ ನಾನು ಅವರಿಂದ ಪಡೆದುಕೊಂಡಿದ್ದೆ. ಇನ್ನೇನಾದರೂ ಅಗತ್ಯವಾದರೆ ಬರೆಯಿರಿ, ತಕ್ಷಣ ತಿಳಿಸುತ್ತೇನೆ ಎಂದು ಹಿಂದಿನ ದಿನವೂ ಹೇಳಿದ್ದರು. ನಾನು ಅಲ್ಲಿ ಸಂಗ್ರಹಿಸಿದ್ದ ಆಡಳಿತಕ್ಕೆ ಸಂಬಂಧಿಸಿದ ಸಾಹಿತ್ಯದ ಹೊರೆಯನ್ನು ನಾನು

ಹೊತ್ತುಕೊಂಡು ಬರಲು ಅವರು ಒಪ್ಪಲಿಲ್ಲ. ಅವೆಲ್ಲವನ್ನು ನಿಮ್ಮ ವಿಳಾಸಕ್ಕೆ ಕಳುಹಿಸುತ್ತೇವೆ ಎಂದು ನನ್ನ ಭಾರ ಕಡಿಮೆ ಮಾಡಿದರು.

ಅನುಭವಗಳ ನೆನಪನ್ನು ಮನಸ್ಸಿನಿಂದ ಕೀಳುವುದು ಸುಲಭವೆ? ವಿಮಾನ ಮೇಲಕ್ಕೆ ಹಾರಿದಂತೆ, ದೂರಕ್ಕೆ ಸಾಗಿದಂತೆ ಜಮೈಕ ಚಿತ್ರ ಕಣ್ಣಿನಿಂದ ಮನಸ್ಸಿನಿಂದ ಮರೆಯಾಗುತ್ತಾ ದೂರವಾಯಿತು. ಹೊಸ ಚಿತ್ರಗಳು ಮೂಡಲಾರಂಭಿಸಿದವು.

ವಿಮಾನ ನಡುಹಗಲಿನ ಗಗನದಲ್ಲಿ ಹಾರುತ್ತಿತ್ತು. ದಾರಿಯುದ್ದಕ್ಕೂ ಸಣ್ಣ ಸಣ್ಣ ದ್ವೀಪಗಳು ಭೂಪಟದಲ್ಲಿಯಂತೆ ಕಾಣುತ್ತಿದ್ದುವು. ಈ ದ್ವೀಪಗಳ ಆಕಾರವೆಲ್ಲ ಒಂದೊಂದೇ ನೋಟಕ್ಕೆ ಕಾಣಸಿಗುತ್ತಿತ್ತು. ಕೆಲವು ದ್ವೀಪಗಳು ಸ್ವಲ್ಪ ದೊಡ್ಡವಾದ್ದರಿಂದ ಒಂದೇ ನೋಟದಲ್ಲಿ ನೋಡಲು ಸಾಧ್ಯವಾಗದೆ, 4–5 ನಿಮಿಷದ ಅವಧಿಯಲ್ಲಿ ನೋಡುವಂತಿದ್ದುವು. ಒಂದು ನಿಮಿಷದಲ್ಲಿ, ಒಂದೇ ನೋಟದಲ್ಲಿ ಕಾಣಬಹುದಾದ ದ್ವೀಪಗಳು ಸಮುದ್ರದಲ್ಲಿ ಮೆರೆಯುತ್ತಿದ್ದುವು. ಉತ್ತರದಿಂದ ದಕ್ಷಿಣಕ್ಕೆ ಪ್ರಯಾಣಿಸಿದಂತೆ ಈ ದ್ವೀಪಗಳ ಮಾಲೆ ಕಂಗೊಳಿಸುತ್ತದೆ.

ಈ ದ್ವೀಪಗಳ ಸುತ್ತ ಹಸುರು ನೀರಿನ, ನೀಲಿನೀರಿನ ಉಂಗುರಗಳನ್ನು ಕಾಣುವುದೇ ಒಂದು ಸೊಗಸು. ಈ ದ್ವೀಪಗಳು ಸುಣ್ಣದಕಲ್ಲಿನಿಂದ ಆಗಿರುವುದರಿಂದ ದ್ವೀಪಗಳ ಸುತ್ತ ಹಸುರು ನೀರಿನ ವರ್ತುಳವಿರುತ್ತದೆ. ಆ ಹಸುರುನೀರಿನಿಂದಾಚೆಗೆ ನೀಲಿನೀರಿನ ವರ್ತುಳವಿರುತ್ತದೆ. ಭೂಮಿಯ ಕೆಲವು ಭಾಗಗಳು ಕೆಂಪಗೆ ರಕ್ತ ಚೆಲ್ಲಿದಂತೆ ಕಾಣುತ್ತವೆ. ಇಲ್ಲಿಯ ನೆಲದಲ್ಲಿ ಬಾಕ್ಸೈಟ್ ಅದುರು (ಅಲ್ಯುಮಿನಿಯಂ) ಇರುವುದರಿಂದ ಹೀಗೆ ನೆಲವೆಲ್ಲ ಕೆಂಪುಬಣ್ಣಕ್ಕೆ ತಿರುಗುತ್ತದಂತೆ.

ಈ ವಿಮಾನ ಮಧ್ಯೆ ಕೆಲವು ದ್ವೀಪಗಳಲ್ಲಿ ಇಳಿಯುತ್ತದೆ ನಮ್ಮ ಪ್ಯಾಸೆಂಜರ್ ಬಸ್‌ನಂತೆ ದ್ವೀಪಗಳಲ್ಲಿ ಇಳಿದು ಪ್ರಯಾಣಿಕರನ್ನು ಇಳಿಸಿ ಹತ್ತಿಸಿಕೊಂಡು ಮುಂದೆ ಹೋಗುತ್ತದೆ. ಸಣ್ಣ ಸಣ್ಣ ದ್ವೀಪಗಳಲ್ಲೂ ಪ್ರವಾಸಿಗರಿಗಾಗಿಯೇ ಏನೊ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಆಂಟಿಗುಹ ಎಂಬ ಸಣ್ಣ ದ್ವೀಪದಲ್ಲಿ ಸುಮಾರು ಮುಕ್ಕಾಲು ಗಂಟೆ ವಿಮಾನ ನಿಂತಿತ್ತು. ಇಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ನಮ್ಮ ದೇಶದಲ್ಲಿ ಒಂದು ನಗರದಿಂದ ಇನ್ನೊಂದು ನಗರಕ್ಕೆ ಹೋಗಲು ಗಂಟೆಗಟ್ಟಲೆ ತೆಗೆದುಕೊಂಡರೆ ಇಲ್ಲಿ ಕೆಲವೇ ನಿಮಿಷಗಳಲ್ಲಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಪ್ರಯಾಣಿಸಬಹುದು. ಆಂಟಿಗುಹದಿಂದ ಸುಮಾರು 15 ನಿಮಿಷಗಳಲ್ಲಿ ಬಾರ್ಬಡಾಸ್ ದ್ವೀಪ ತಲುಪಿತು. ಇಡೀ ದ್ವೀಪ ಮನುಷ್ಯನ ಪಾದದ ಆಕಾರದಲ್ಲಿ ಗೋಚರಿಸಿತು. ವಿಮಾನದಿಂದ ಇಳಿದು ಗ್ರ್ಯಾಂಟ್ಲೆ ಆಡಮ್ಸ್ ಅಂತರರಾಷ್ಟ್ರೀಯ ನಿಲ್ದಾಣ ಕಾರ್ಯಾಲಯದೊಳಕ್ಕೆ ಪ್ರವೇಶಿಸುತ್ತಿದ್ದಂತೆಯೇ ಧ್ವನಿವರ್ಧಕದಲ್ಲಿ ನನ್ನ ಹೆಸರನ್ನು ಕರೆಯಲಾಗುತ್ತಿತ್ತು. ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಅಲ್ಲಿಯ ಸಹಾಯಕ ಕುಲಸಚಿವರಾದ ಲೂಯಿಸ್ ನನ್ನನ್ನು ಆಹ್ವಾನಿಸಲು ಅಲ್ಲಿಗೆ ಬಂದಿದ್ದರು.

ವಿಮಾನ ನಿಲ್ದಾಣದ ವಿಧಿಗಳನ್ನು ನಿರಾತಂಕವಾಗಿ ಮುಗಿಸಿ, ಲೂಯಿಸ್ ಅವರ ಕಾರಿನಲ್ಲಿ ಕಬ್ಬಿನ ಗದ್ದೆಗಳ ನಡುವೆ ಹಾವಿನಂತೆ ಹರಿಯುವ ರಸ್ತೆಗಳಲ್ಲಿ, ಬ್ರಿಡ್ಜ ಟೌನ್‌ನ ಮರದ ಮನೆಗಳ ಓಣಿಯಲ್ಲಿ ಸುತ್ತಿಕೊಂಡು, ವಿಶ್ವವಿದ್ಯಾನಿಲಯದ ಕ್ಯಾಂಪಸ್ ಇರುವ ಕೇವ್ ಹಿಲ್ (Cave Hill) ಬಡಾವಣೆಗೆ ಬಂದೆವು. ಕ್ಯಾಂಪಸ್ ಒಳಕ್ಕೆ ಕರೆದುಕೊಂಡುಹೋಗಿ ಅಲ್ಲಿಯ ವಿವಿಧ ವಿಭಾಗಗಳ, ಕಛೇರಿಗಳ ಪರಿಚಯ ಮಾಡಿದರು ಲೂಯಿಸ್. ಕಛೇರಿಗಳು ಮುಚ್ಚಿದ್ದುದ್ದರಿಂದ ಕಾರಿನಲ್ಲಿ ಸುತ್ತಾಡುತ್ತಲೇ ಪರಿಚಯ ಮಾಡಬೇಕಾಯಿತು. ಅಲ್ಲಿಂದ ತೀರ ಸಮೀಪದಲ್ಲಿಯೇ ಇರುವ ಟವರ್ ಹೋಟೆಲಿಗೆ ನನ್ನನ್ನು ಕರೆದುಕೊಂಡು ಬಂದು ಇಳಿಸಿ ಹೊರಟುಹೋದರು. ನನಗಾಗಿ ಇಲ್ಲಿ ಮೊದಲೇ ರೂಮನ್ನು ಕಾಯ್ದಿರಿಸಲಾಗಿತ್ತು.

ಇಲ್ಲಿಯ ಹೋಟೆಲುಗಳು ವಿದೇಶಿ ಪ್ರವಾಸಿಗರ ದೃಷ್ಟಿಯನ್ನಿಟ್ಟುಕೊಂಡು ನಡೆಯುತ್ತಿರುವುದರಿಂದ ಬಾಡಿಗೆ ಬಹಳ ಹೆಚ್ಚು. ಸಾಧಾರಣವಾದ ಕೊಠಡಿಯೊಂದಕ್ಕೆ 75 ಡಾಲರುಗಳು (ಸುಮಾರು 700 ರೂ). ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿಯೇ ಅವಕಾಶ ಮಾಡಿಕೊಡಬೇಕೆಂದು ವಿಮಾನ ನಿಲ್ದಾಣದಿಂದ ಬರುವಾಗ ಲೂಯಿಸ್ ಅವರಿಗೆ ಹೇಳಿದ್ದೆ. ಅತಿಥಿಗೃಹದಲ್ಲಿ ರೂಮು ಬೇರೆಯವರಿಗೆ ಮೊದಲೇ ಕಾದಿರಿಸಲಾಗಿರುವುದರಿಂದ ಅವಕಾಶ ಮಾಡುವುದು ಕಷ್ಟವೆಂದು ಅವರು ತಿಳಿಸಿದ್ದರು. ಮಾರನೆಯ ದಿನ ಕ್ಯಾಂಪಸ್‌ಗೆ ಹೋದಮೇಲೆ ಮತ್ತೆ ಒಂದೆರಡು ಸಲ ಆ ವಿಷಯ ಜ್ಞಾಪಕ ಮಾಡಿದಾಗ, ಅತಿಥಿಗೃಹದಲ್ಲಿ ರೂಮು ಕೊಡಲು ಒಪ್ಪಿದರು.

ಟವರ್ ಹೋಟೆಲು ಗುಡ್ಡದ ಕಡೆಯಿಂದ ಸಮುದ್ರದ ಕಡೆಗೆ ಇಳಿಜಾರು ಪ್ರದೇಶದಲ್ಲಿದೆ. ಅಲ್ಲಿ ಹೋಗಿ ತಂಗಿದ ದಿನ ನಡೆದ ಒಂದು ಘಟನೆ ಸ್ವಾರಸ್ಯವಾಗಿದೆ ಮಹಡಿ ಮೇಲಿನ ನನ್ನ ರೂಮಿನಿಂದ ನಾನು ತಂದಿದ್ದ ಒಂದೆರಡು ವಿಳಾಸಗಳಿಗೆ ಫೋನ್ ಮಾಡುವುದಕ್ಕಾಗಿ ಹೋಟೆಲು ಕಛೇರಿಗೆ ಬಂದೆ. ಅಲ್ಲಿ ನಿಂತಿದ್ದ ಒಬ್ಬ ನಡು ವಯಸ್ಸಿನ ಬಿಳಿ ಹೆಂಗಸು ನನ್ನ ಹೆಸರು ಕರೆದು "ಮಿಸ್ಟರ್ ಗೌಡ, ಇಲ್ಲಿ ನಿಮಗೆ ಎಲ್ಲ ಸರಿಯಾಗಿದೆಯೇ ?" ಎಂದು ಕೇಳಿದಳು. ನನ್ನ ಹೆಸರು ಗೊತ್ತಿರಬೇಕಾದರೆ ಈಕೆ ವಿಶ್ವವಿದ್ಯಾನಿಲಯದ ಕಡೆಯವರೇ ಇರಬೇಕು, ನನ್ನ ಯೋಗಕ್ಷೇಮದ ಬಗ್ಗೆ ವಿಚಾರಿಸಿಕೊಳ್ಳಲು ಬಂದಿರಬೇಕು ಎಂದು ಊಹಿಸಿ, ವಿಶ್ವಾಸದಿಂದ ಏನೇನೊ ಮಾತನಾಡಿದೆ. ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡಿದೆ. ಅವಳಿಗೆ ಅದೊಂದೂ ತಿಳಿಯಲಿಲ್ಲವೋ ಏನೊ! ಸುಮ್ಮನೆ ಮುಖ ನೋಡುತ್ತಿದ್ದಳು. ನಾನು ಯೂನಿವರ್ಸಿಟಿ ಎಂದರೆ ಅವಳು ಯಾವ ಸಿಟಿ ಎನ್ನುತ್ತಿದ್ದಳು. ನನ್ನ ಒಂದು ಮಾತಿಗೂ ಅವಳು ಸರಿಯಾಗಿ ಪ್ರತಿಕ್ರಿಯೆ ತೋರದಿದ್ದಾಗ, ನೇರವಾಗಿ ಅವಳನ್ನು ಕೇಳಿದೆ—"ನೀವು ಯಾರು ?" ಎಂದು. ಇಷ್ಟೂ ತಿಳಿಯದೆ ಎಂಬಂತೆ ಅವಳು "ನಾನು ನಿಮ್ಮ ಅಭ್ಯಾಗತಳು, ಈ ಹೋಟೇಲಿನ ಒಡತಿ" ಎಂದಾಗ ತಕ್ಷಣ ಪೆಚ್ಚಾದರೂ, ಅವಳ ಮೇಲೆ ಒಂದು ರೀತಿಯ ಕೋಪ ಬಂತು. ದುಡ್ಡು ತೆಗೆದು

ಕೊಂಡು ಮಾಡುವ ಕೆಲಸಕ್ಕೆ "ಆತಿಥ್ಯ" ಎನ್ನುವ ಈಕೆಯ ಸ್ವಭಾವದ ಬಗ್ಗೆ, ಅದನ್ನು ಹೇಳಿಕೊಳ್ಳುವ ಅಹಂಭಾವದ ರೀತಿಗೆ ಉದ್ರೇಕಗೊಂಡರೂ ತೋರದೆ ಒಣ ನಗೆ ನಕ್ಕೆ. "ತುಂಬಾ ವಂದನೆಗಳು, ನಿಮ್ಮ ಆತಿಥ್ಯಕ್ಕೆ" ಎಂದು ಹೇಳಬೇಕಾಯಿತು, ಸೌಜನ್ಯಕ್ಕಾಗಿ. ಈ ಒಂದು ದಿನದ ಆತಿಥ್ಯಕ್ಕೆ (ಬರೀ ರೂಮಿಗೆ) ನಾನು ತೆತ್ತ ಬೆಲೆ 700 ರೂಪಾಯಿಗಳು!

ಹೋಟೆಲಿನಿಂದ ವಿಶ್ವವಿದ್ಯಾನಿಲಯದ ಅತಿಥಿಗೃಹಕ್ಕೆ (ಇಲ್ಲೆಲ್ಲ ಇದನ್ನು ಸೀನಿಯರ್ ಕಾಮನ್‌ರೂಮ್ ಎನ್ನುತ್ತಾರೆ) ಇಲ್ಲಿಯ ಸಹಾಯಕ ಕುಲಸಚಿವೆ ಶ್ರೀಮತಿ ರೋಜರ್ಸ್ ಅವರ ಕಾರಿನಲ್ಲಿ ನನ್ನ ಎಲ್ಲ ಸಾಮಾನುಗಳ ಸಮೇತ ಬಂದು ಇಳಿದಮೇಲೆ ಇಲ್ಲಿಯ ಜನರ ಬಗ್ಗೆ ನನಗೆ ಸಂಶಯ ಮೂಡಿತು. ಇಲ್ಲಿ ಎಲ್ಲ ರೂಮುಗಳು ಖಾಲಿ ಇದ್ದರೂ ಬೇರೆಯವರಿಗೆ ಕಾಯ್ದಿರಿಸಲಾಗಿದೆ ಎಂದು ಇವರು ಏಕೆ ಹೇಳುತ್ತಿದ್ದರು ಎಂಬ ವಿಷಯದಲ್ಲಿ ಆಲೋಚಿಸಲಾರಂಭಿಸಿದೆ. ಇವರ ಮನೋಭಾವನೆಯನ್ನು ಸಿಧಾನವಾಗಿ ಅರ್ಥಮಾಡಿಕೊಳ್ಳಬೇಕಾಯಿತು. ಹೊರ ದೇಶದಿಂದ ಬಂದವರೆಲ್ಲ ದುಡ್ಡು ಹೊತ್ತುಕೊಂಡು ಬಂದವರು, ಖರ್ಚುಮಾಡಲಿ ಎಂಬ ಅಭಿಪ್ರಾಯ ಇವರದು. ಈ ಹೊರದೇಶದ ಪ್ರವಾಸಿಗರ ಹಣವೇ ಈ ದೇಶಗಳ ಮುಖ್ಯ ಆದಾಯ. ಪ್ರವಾಸಿಗಳಿಗೆ ವಿವಿಧ ಆಕರ್ಷಣೆಗಳನ್ನು ಒಡ್ಡಿ ಹಣವನ್ನು ಸೆಳೆಯುತ್ತಾರೆ. ವಿಶ್ವವಿದ್ಯಾನಿಲಯದ ಅತಿಥಿಗೃಹಗಳಲ್ಲೂ ನಮ್ಮ ಹೋಟೆಲುಗಳಿಗಿಂತ ಹೆಚ್ಚು ಬಾಡಿಗೆ. ನಮ್ಮ ವಿಶ್ವವಿದ್ಯಾನಿಲಯದ ಅತಿಥಿಗಳಾಗಿ ಬಂದವರಿಗೆ ಬಹು ಎಚ್ಚರಿಕೆಯಿಂದ ಅವರಿಗೆ ಹೊರೆಯಾಗದಂತೆ ಆತಿಥ್ಯ ನೀಡಿದರೆ, ಇಲ್ಲಿ ಇವರೆಲ್ಲ ಹೊರಗಿನಿಂದ ಬಂದವರಿಂದ ಹಣ ಕೀಳಲು ಪ್ರಯತ್ನಿಸುತ್ತಿರುವಂತೆ ಕಾಣಿಸಿತು. ಅತಿಥಿಗಳನ್ನು ದೇವರೆಂದು ಭಾವಿಸುವ ನಾವೆಲ್ಲಿ, ಬಂದವರಿಂದ ಹಣ ವಸೂಲಿ ಮಾಡುವ ವ್ಯಾಪಾರಿ ವೃತ್ತಿಯ ಈ ಜನವೆಲ್ಲಿ?

ಬಾರ್ಬಡಾಸ್ ಸುಂದರವಾದ ಸಣ್ಣ ದ್ವೀಪ. ಕೇವಲ 21 ಮೈಲಿ ಉದ್ದ, 14 ಮೈಲಿ ಅಗಲ. ಇಲ್ಲಿಯ ಜನ ಹೊರಗಿನವರ ಜೊತೆ ವರ್ತಿಸುವುದರಲ್ಲಿ, ದುಡ್ಡು ಮಾಡುವುದರಲ್ಲಿ ಜಾಣರು. ಪ್ರವಾಸಿಗರಿಂದ ಹಣ ಸಂಪಾದಿಸಲು ಎಷ್ಟು ರೀತಿಯಲ್ಲಿ ಪ್ರಚಾರ ಮಾಡುತ್ತಾರೆಂದರೆ, ವಿದೇಶೀ ಪತ್ರಿಕೆಗಳಲ್ಲಿ ತಮ್ಮ ದೇಶದ ಸೌಂದರ್ಯ, ಸಂಸ್ಕೃತಿಗಳ ಬಗ್ಗೆ ಜಾಹೀರಾತು ನೀಡುತ್ತಾರೆ! ಈ ದೇಶದ ಪ್ರವಾಸೋದ್ಯಮ ಇಲಾಖೆ ಹೊರಡಿಸಿದ ಒಂದು ಪ್ರಚಾರ ಪುಸ್ತಿಕೆಯಲ್ಲಿ ಹಾಳುಬಿದ್ದ ಅಲೆಮನೆಯ ಹೊಗೆಗೂಡಿನ ಮೇಲೆ ಎಂಥದೋ ಬಳ್ಳಿ ಹರಡಿರುವುದನ್ನು ಫೋಟೋ ತೆಗೆದು ಮುಖ ಪುಟದಲ್ಲಿ ಬಣ್ಣಬಣ್ಣದಲ್ಲಿ ಅಚ್ಚು ಮಾಡಿದೆ. ಅದರ ವಿವರಣೆಯನ್ನು ಒಳಪುಟದಲ್ಲಿ ನೋಡದ ಹೊರತು, ಇದು ಏನೋ ಅದ್ಭುತವಾದುದು ಎನ್ನುವಂತೆ ಕಾಣುತ್ತದೆ. ನಮ್ಮ ಜಗತ್‌ಪ್ರಸಿದ್ಧವಾದ ಬೇಲೂರು, ಹಳೇಬೀಡು, ಶ್ರವಣಬೆಳಗೊಳದ ಕಲಾಶ್ರೀಯನ್ನು ಇಷ್ಟು ಸುಂದರವಾಗಿ ಮುದ್ರಿಸಿ ವಿದೇಶೀಯರಿಗೆ ತೋರಿಸುವ ಕೆಲಸ ನಡೆದಿಲ್ಲ. ಈ ದ್ವೀಪಗಳಿಗೆ ಜಾಹೀರಾತು ಅನ್ನ ಕೊಡುವ ಮಾರ್ಗ!

ವಿಶ್ವವಿದ್ಯಾನಿಲಯದ ಅತಿಥಿಗೃಹ ಹೋಟೆಲಿನಷ್ಟೇ ಚೆನ್ನಾಗಿದೆ. ನಾನಿರುವ ದೊಡ್ಡ ರೂಮಿನ ದೊಡ್ಡ ಗಾಜಿನ ಕಿಟಕಿಯಿಂದ ಪಶ್ಚಿಮಕ್ಕೆ ನೋಡಿದರೆ ಸಮುದ್ರದ ಮೂರು ಕಡೆಯ ದೃಶ್ಯ ಕಾಣುತ್ತದೆ. ಎಂದರೆ ವಾಸ್ತವಿಕವಾಗಿ ಈ ಕ್ಯಾಂಪಸ್ ಇರುವ ಭಾಗ ಸಮುದ್ರದ ಒಳಕ್ಕೆ ಚಾಚಿಕೊಂಡಿದೆ. ರೂಮಿನ ಒಳಗೆ ಕುಳಿತೇ ಸಮುದ್ರದ ಪೂರ್ಣ ದೃಶ್ಯ ಕಾಣಬಹುದು. ಪ್ರತಿದಿನ ಸಂಜೆ ಸೂರ್ಯಾಸ್ತವಾಗು ವುದನ್ನು ನೋಡುತ್ತಿದ್ದೆ. ಸೂರ್ಯ ಸಮುದ್ರದ ಮೇಲೆ ಕಿತ್ತಲೆ ಹಣ್ಣಿನಂತೆ ತಳತಳಿಸು ವಾಗ, ಸೂರ್ಯಬಿಂಬದಿಂದ ನನ್ನ ರೂಮಿನವರೆಗೆ ಚಿನ್ನದ ರಸ್ತೆ ಏರ್ಪಡುತ್ತದೆ; ಗಗನವೆಲ್ಲ ಕೆಂಪಾಗುತ್ತದೆ; ನೀರಿಗೆ ರಂಗೇರುತ್ತದೆ. ಸೂರ್ಯಾಸ್ತದ ಕಲ್ಪನೆಯ ಚಿತ್ರಕ್ಕಿಂತ ನೂರು ಮಡಿ ನೈಜವಾಗಿ ಕಾಣುತ್ತದೆ. ಸೂರ್ಯಬಿಂಬ ಅರ್ಧ ಸಮುದ್ರ ದಲ್ಲಿ ಮುಳುಗಿರುವಾಗ ತಟ್ಟೆಯಲ್ಲಿ ಕತ್ತರಿಸಿ ಇಟ್ಟ ಹಣ್ಣಿನ ಅರ್ಧ ಹೋಳಿನಂತೆ ಕಾಣುತ್ತದೆ. ಸಮುದ್ರದ ಮೇಲೆ ಮೀನು ಹಿಡಿಯುವ ದೋಣಿಗಳವರು, ನೆಲದ ಮೇಲೆ ಹರಿದಾಡುವ ಕಾರಿನವರು, ಕ್ಯಾಂಪಸ್ ಮೈದಾನದಲ್ಲಿ ಆಟವಾಡುವ ವಿದ್ಯಾರ್ಥಿಗಳು ಯಾರೂ ಅತ್ತ ಕಡೆ ನೋಡುವುದನ್ನು ನಾನು ಕಾಣೆ. ಇವರಿಗೆ ಇದು ಅತಿ ಸಾಮಾನ್ಯ. ನಾವು ಆಗುಂಬೆ ಮೊದಲಾದ ಸ್ಥಳಗಳಿಗೆ ಹೋಗಿ ನೋಡುವ ಸೂರ್ಯಾಸ್ತದ ದೃಶ್ಯದ ಸಾವಿರಾರು ಕೋನಗಳ ದೃಶ್ಯವನ್ನು ಇಲ್ಲಿ ಕಾಣಬಹುದು.

ಬಾರ್ಬಡಾಸ್ ದ್ವೀಪದ ಪ್ರದಕ್ಷಿಣೆ

ಜಮೈಕ ದ್ವೀಪದಲ್ಲಿ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳನ್ನು ನೋಡಿದಮೇಲೆ ಬಾರ್ಬಡಾಸ್ ದ್ವೀಪದಲ್ಲಿ ಆ ಬಗ್ಗೆ ಮತ್ತೇನನ್ನೂ ನೋಡುವುದು ಬೇಡ ಎನ್ನಿಸಿತ್ತು. ಇಲ್ಲಿಯ ಕ್ಯಾಂಪಸ್ ತುಂಬಾ ಚಿಕ್ಕದು ಮತ್ತು ಇತ್ತೀಚಿನದು. ಆದರೆ ಇರುವಷ್ಟನ್ನು ಚೆನ್ನಾಗಿ ಇಟ್ಟುಕೊಂಡಿದ್ದಾರೆ ಮತ್ತು ಅವುಗಳೆಲ್ಲ ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕ್ಯಾಂಪಸ್‌ನಲ್ಲಿರುವ ವಿಶೇಷ ವಿಭಾಗವೊಂದರ ಬಗ್ಗೆ ಸ್ವಲ್ಪ ಹೇಳಬೇಕು. ಕಲಿಕೆ ಆಕರ ಕೇಂದ್ರ (Learning Resources Center) ಇಲ್ಲಿಯ ಒಂದು ವಿಶಿಷ್ಟ ಸಂಸ್ಥೆ. ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಸಂಶೋಧಕರಿಗೆ ಸಹಾಯಕವಾಗುವ ಸಾಧನಗಳು ಇಲ್ಲಿವೆ. ವೀಡಿಯೋ ಸಾಧನ, ಟೇಪ್‌ರೆಕಾರ್ಡಿಂಗ್ ವ್ಯವಸ್ಥೆ, ಫಿಲ್ಮ್‌ಗಳು ಮೊದಲಾದುವುಗಳನ್ನು ಇಲ್ಲಿ ಅಧ್ಯಯನಕ್ಕೆ, ಬೋಧನೆಗೆ ಮತ್ತು ಸಂಶೋಧನೆಗೆ ಬಳಸಿಕೊಳ್ಳಬಹುದು. ವಿದ್ವಾಂಸರ ಭಾಷಣ ಗಳನ್ನು ರೆಕಾರ್ಡ್ ಮಾಡಿಕೊಂಡು ಬೇಕಾದಾಗ ಬೇಕಾದವರು ಕೇಳಲು ಇಲ್ಲಿ ಅವಕಾಶವಿದೆ. ವಿಶೇಷ ವಸ್ತು, ಪ್ರಯೋಗ ಮತ್ತು ದೃಶ್ಯಗಳನ್ನು ವೀಡಿಯೋ ಮೂಲಕ ಚಿತ್ರಿಸಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಬಹುದು. ಸಂಶೋಧಕರಿಗೆ ಬೇಕಾಗುವ ಇನ್ನಿತರೇ ಸಾಧನಗಳು ಇಲ್ಲಿವೆ. ನಾನು ಈ ಕೇಂದ್ರಕ್ಕೆ ಭೇಟಿಕೊಟ್ಟಾಗ ಆಫ್ರಿಕಾದ ಒಬ್ಬ ಪ್ರಾಧ್ಯಾಪಕರು ಅಲ್ಲಿಯ ಭಾಷೆಗಳ ಬಗ್ಗೆ ನಿದರ್ಶನಸಹಿತ ಭಾಷಣ

ಮಾಡಿದ್ದ ವೀಡಿಯೋ ಚಿತ್ರವನ್ನು ತೋರಿಸಿದರು. ಈ ಚಿತ್ರದಲ್ಲಿ ಆ ಪ್ರಾಧ್ಯಾಪಕರ ಧ್ವನಿ ಮತ್ತು ಚಿತ್ರವನ್ನು ಮಾತ್ರ ತೋರಿಸದೆ, ಅವರು ಮಾತನಾಡುವಾಗ ಹತ್ತಿರದಿಂದ ಅವರ ತುಟಿ, ನಾಲಗೆಗಳ ಚಲನೆಯನ್ನೂ ತೋರಿಸಿದರು ಮತ್ತು ಕಾಗದದಲ್ಲಿ ಹಾಕಿದ ನಕ್ಷೆ, ಚಿತ್ರಗಳನ್ನು ಚಿತ್ರೀಕರಿಸಲಾಗಿತ್ತು. ಪ್ರಾಧ್ಯಾಪಕರ ಉಚ್ಚಾರಣೆಯಲ್ಲಿನ ಧ್ವನಿಗಳ ಏರಿಳಿತವನ್ನು ಸ್ಪಷ್ಟವಾಗಿ ಧ್ವನಿಮುದ್ರಿಸಿಕೊಳ್ಳಲಾಗಿತ್ತು.

ಕಂಪ್ಯೂಟರ್ ಕೇಂದ್ರ ಕೂಡ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗೆ ಅತ್ಯಂತ ಆವಶ್ಯಕವಾದ ವಿಭಾಗ. ವಿಶ್ವವಿದ್ಯಾನಿಲಯದ ಮುಕ್ಕಾಲು ಭಾಗ ಕೆಲಸವೆಲ್ಲ ಇಲ್ಲಿ ನಡೆಯುತ್ತದೆ. ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟ ದಾಖಲೆಗಳು, ಪರೀಕ್ಷಾ ಫಲಿತಾಂಶ ಪ್ರಕಟಣೆ, ಅಂಕಪಟ್ಟಿ ಪ್ರಕಟಣೆ ಮೊದಲಾದ ಕೆಲಸಗಳ ಜೊತೆಗೆ ವಿಶ್ವವಿದ್ಯಾನಿಲಯದ ಎಲ್ಲ ಅಂಕಿಅಂಶಗಳ ದಾಖಲಾತಿಯೂ ಇಲ್ಲಿ ನಡೆಯುತ್ತದೆ. ಅಧ್ಯಾಪಕರ ಸಂಶೋಧನ ಕಾರ್ಯಕ್ಕೂ ಈ ಕೇಂದ್ರ ನೆರವು ನೀಡುತ್ತದಂತೆ.

ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲೇ ಇರುವ ವಿದ್ಯಾರ್ಥಿನಿಲಯಕ್ಕೆ ಭೇಟಿ ಕೊಟ್ಟಿದ್ದೆ. ಹಾಸ್ಟೆಲಿನ ವಾರ್ಡನ್ ಬ್ರೌನ್ ಜೊತೆ ವಿವರವಾಗಿ ಮಾತನಾಡಿದೆ. ಇಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಂದೇ ಹಾಸ್ಟೆಲಿನ ಬೇರೆಬೇರೆ ಭಾಗಗಳಲ್ಲಿ ವಾಸಿಸುತ್ತಾರೆ. ಹಾಸ್ಟೆಲಿನಲ್ಲಿ ಕೇವಲ ವಾಸ ಮಾತ್ರ. ಊಟತಿಂಡಿಗಳಿಗಾಗಿ ಖಾಸಗಿಯವರಿಂದ ನಡೆಯುವ ಕ್ಯಾಂಟೀನುಗಳಿವೆ. ಇವು ವಿದ್ಯಾರ್ಥಿನಿಲಯದ ಪಕ್ಕದಲ್ಲಿಯೇ ಇವೆ. ವಿದ್ಯಾರ್ಥಿನಿಲಯದಲ್ಲಿ ಒಂದು ಹಾಸಿಗೆಯ ಮತ್ತು ಎರಡು ಹಾಸಿಗೆಗಳ ರೂಮುಗಳಿವೆ. ಎರಡು ಹಾಸಿಗೆಗಳ ರೂಮುಗಳನ್ನು ಪ್ರಾರಂಭ ವರ್ಷದ ವಿದ್ಯಾರ್ಥಿಗಳಿಗೆ ಕೊಡಲಾಗುವುದಂತೆ. ಹಿರಿಯ ವಿದ್ಯಾರ್ಥಿಗಳಿಗೆ ಒಂದು ಹಾಸಿಗೆ ರೂಮನ್ನು ಕೊಡಲಾಗುವುದು. ವಿದ್ಯಾರ್ಥಿಗಳು ಕೊಡುವ ಹಣದಿಂದಲೇ ವಿದ್ಯಾರ್ಥಿನಿಲಯದ ಖರ್ಚು ವೆಚ್ಚ ಸರಿದೂಗಿಸಲಾಗುತ್ತಿದೆ.

ವಿದ್ಯಾರ್ಥಿಗಳ ಶಿಸ್ತಿನ ಬಗ್ಗೆ ವಿಚಾರಿಸಿದೆ. ವಿದ್ಯಾರ್ಥಿಗಳು ತಮ್ಮ ಪಾಡಿಗೆ ತಾವು ಅಧ್ಯಯನದಲ್ಲಿ ತೊಡಗುತ್ತಾರೆ; ಬೇರೆ ವಿಷಯಗಳಲ್ಲಿ ಅವರು ತಲೆ ಹಾಕುವುದಿಲ್ಲ; ವಿದ್ಯಾರ್ಥಿ ಪ್ರತಿನಿಧಿಗಳ ಒಂದು ಶಿಸ್ತಿನ ಸಮಿತಿಯಿದೆ; ಈ ಸಮಿತಿ ಅಶಿಸ್ತಿನಿಂದ ವರ್ತಿಸುವ ವಿದ್ಯಾರ್ಥಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಎಂಬುದಾಗಿ ಹೇಳಿದರು.

ಹೆಣ್ಣುಗಂಡಿನ ಸಂಬಂಧದಲ್ಲಿ ಕೇಳಿದೆ. ಬ್ರೌನ್ ಅವರು ಮುಚ್ಚುಮರೆಯಿಲ್ಲದೆ ಹೇಳಿದರು. ಹುಡುಗಹುಡುಗಿಯರು ಒಂದೇ ಸ್ಥಳದಲ್ಲಿ ವಾಸಿಸುವ ವಿಷಯದಲ್ಲಿ ಸಾರ್ವಜನಿಕರಿಂದ ಪ್ರಾರಂಭದಲ್ಲಿ (ಸುಮಾರು 1965--66ರಲ್ಲಿ) ಟೀಕೆಗಳು ಬಂದು, ಅವೆಲ್ಲ ಕಾಲಕ್ರಮೇಣ ನಿಂತುಹೋದುವೆಂದರು. ಈಗ ಆ ವಿಷಯದಲ್ಲಿ ಏನೂ

ಸಮಸ್ಯೆ ಇಲ್ಲ. ನಮ್ಮ ದೇಶದ ಪರಿಸ್ಥಿತಿಯನ್ನು ವಿವರಿಸಿ ಹೇಳಿದೆ. ಬ್ರೌನ್ ನಕ್ಕು "ಹೆಣ್ಣು ಗಂಡಿನ ನಡುವೆ ಗೋಡೆ ಹಾಕುವುದರಿಂದ ಇಬ್ಬರಿಗೂ ಕುತೂಹಲ ಕೆರಳುತ್ತದೆ. ಅದರಿಂದ ಅನಾವಶ್ಯಕ ಸಮಸ್ಯೆಗಳೇಳುತ್ತವೆ. ಆದ್ದರಿಂದಲೇ ನಾವು ಗೋಡೆ ಹಾಕಿಲ್ಲ" ಎಂದರು. ಬೇರೆ ಮಾತಾಡಲು ನನಗೆ ಏನೂ ಇರಲಿಲ್ಲ.

ಈ ಗೋಡೆ ಹಾಕದಿರುವ ರೀತಿ ವಿಶ್ವವಿದ್ಯಾನಿಲಯದ ಹುಡುಗಹುಡುಗಿಯರ ವಿಷಯದಲ್ಲಿ ಮಾತ್ರವಲ್ಲ, ಸಮಾಜದ ಎಲ್ಲ ವಿಷಯಗಳಲ್ಲೂ ಅದು ನಿಜವಿರುವಂತೆ ಕಾಣುತ್ತದೆ. ಈ ಕೆರೇಬಿಯನ್ ದ್ವೀಪಗಳ ಸಂಸ್ಕೃತಿ, ನಾಗರಿಕತೆ ಪಾಶ್ಚಿಮಾತ್ಯ ದೇಶಗಳಿಂದ ಎರವಲು ಪಡೆದದ್ದು. ಇವರದೇ ಆದ ಅವುಗಳ ಇತಿಹಾಸ ಇವರಿಗಿದ್ದಂತಿಲ್ಲ. ಆದರೆ ಇವರದೇ ಆದ ಆರ್ಥಿಕ ಪರಿಸ್ಥಿತಿ, ರಾಜಕೀಯ ಸನ್ನಿವೇಶ ಇವರಿಗಿರುವಂತೆ ಕಾಣುತ್ತದೆ. ಸಂಸ್ಕೃತಿ ಇಲ್ಲದಿರುವುದರ ಬಗ್ಗೆ, ಯಾವುದಾದರೂ ಒಂದು ಜೀವನತತ್ವಕ್ಕೆ ಗಂಟುಹಾಕಿಕೊಳ್ಳದಿರುವುದರ ಬಗ್ಗೆ ಇಲ್ಲಿ ಯಾರೂ ಚಿಂತಿಸುವುದಿಲ್ಲ. ವಿಶ್ವವಿದ್ಯಾನಿಲಯದ ಅಧ್ಯಾಪಕ, ಪ್ರಾಧ್ಯಾಪಕ, ಅಧಿಕಾರಿಗಳಂಥ ಬುದ್ಧಿಜೀವಿಗಳು ಕೂಡ ಈ ಬಗ್ಗೆ ತಲೆಕೆಡಿಸಿಕೊಂಡ ಹಾಗಿಲ್ಲ. ವಿಶ್ವವಿದ್ಯಾನಿಲಯದ ಆವರಣದಲ್ಲೇ ಇರುವ ಕುಡಿತದ ಗಡಂಗುಗಳಲ್ಲಿ ಇವರು ಹೆಂಗಸರ ಜೊತೆ ಹರಟೆ ಹೊಡೆಯುತ್ತಾ ಕುಡಿಯುತ್ತಾ ಬಿಡುವಿನ ಕಾಲ ಕಳೆಯುತ್ತಾರೆ. ಕಾಲಕ್ಕೆ, ಸನ್ನಿವೇಶಕ್ಕೆ ಸಂಪೂರ್ಣ ಒಳಗಾಗಿ ಬದುಕುವ ಪ್ರವೃತ್ತಿಯವರಂತೆ ಇವರು ಕಾಣುತ್ತಾರೆ.

ಬ್ರಿಡ್ಜ್‌ಟೌನ್ ಪೇಟೆ ಪ್ರದೇಶಕ್ಕೆ ನಾನೊಬ್ಬನೆ ಹೋಗಿದ್ದೆ. ಕೆಲವು ಅಂಗಡಿಗಳ ಹೆಸರುಗಳನ್ನು ಪತ್ರಿಕೆಯಲ್ಲಿ ನೋಡಿ ಗುರುತು ಹಾಕಿಕೊಂಡಿದ್ದೆ. ಈ ದ್ವೀಪದ ಸರ್ಕಾರ ಹೊರಗಿನಿಂದ ಬಂದವರಿಗಾಗಿ ಇಲ್ಲಿಯ ಎಲ್ಲ ಮಾಹಿತಿಯನ್ನು ಕೊಟ್ಟು, ಹುಡುಕುವ ಸಮಸ್ಯೆಯನ್ನು ಪರಿಹರಿಸಿದೆ ಪ್ರವಾಸೋದ್ಯಮ ಇಲಾಖೆ ಹೊರಡಿಸಿರುವ ಒಂದು ಸಣ್ಣ ಪುಸ್ತಿಕೆಯಲ್ಲಿ ಈ ದ್ವೀಪದ ಇತಿಹಾಸ, ಲಕ್ಷಣಗಳು, ಪ್ರೇಕ್ಷಣೀಯ ಸ್ಥಳಗಳು, ದ್ವೀಪಕ್ಕೆ ಪ್ರವೇಶಿಸುವ ನಿಯಮಾವಳಿ, ರಫ್ತು, ನಿವಾಸಾವಕಾಶಗಳು, ಹೋಟೆಲುಗಳು, ವಿಚಾರವಿನಿಮಯ ಸಾಧನಗಳು, ವೈವಿಧ್ಯಮಯ ಅಂಗಡಿಗಳು, ತೆರಿಗೆರಹಿತ ಸಾಮಗ್ರಿಗಳು, ಊಟ ಮತ್ತು ಮನರಂಜನೆ, ಕ್ರೀಡಾಚಟುವಟಿಕೆಗಳು, ತೆರಿಗೆಗಳು, ವಿವಿಧ ದೇಶಗಳ ರಾಯಭಾರಿ ಕಛೇರಿಗಳು, ಪ್ರವಾಸೋದ್ಯಮ ವಿಷಯ ಇತ್ಯಾದಿ ಇತ್ಯಾದಿಗಳನ್ನು ತುರುಕಿದ್ದಾರೆ.

ನಾನು ಹುಡುಕಿಕೊಂಡು ಹೋಗಿದ್ದ ಅಂಗಡಿಗಳೆಲ್ಲ ಬ್ರಾಡ್‌ಸ್ಟ್ರೀಟ್ (ವಿಶಾಲವೀಥಿ) ಎಂಬ ರಸ್ತೆಯಲ್ಲೇ ಇವೆ. ಇದೊಂದೆ ಈ ನಗರದ ದೊಡ್ಡ ವ್ಯಾಪಾರದ ಅಂಗಡಿಗಳಿರುವ ರಸ್ತೆ. ಇದರ ಪಕ್ಕದಲ್ಲಿ ಸ್ವಾನ್‌ಸ್ಟ್ರೀಟ್ (ಹಂಸವೀಥಿ) ಎಂಬ ರಸ್ತೆ ಇದೆ. ಇಲ್ಲೆಲ್ಲ ಹಿಂದೂಗಳ ಅಂಗಡಿ ಮಳಿಗೆಗಳು ಇನೆಯುಂತೆ. ಬ್ರಾಡ್‌ಸ್ಟ್ರೀಟ್‌ನಲ್ಲೂ ಹಿಂದೂಗಳ ಅಂಗಡಿಗಳಿವೆ. ತೆರಿಗೆರಹಿತ ಸಾಮಾನುಗಳ ಅಂಗಡಿಗಳು ಇಲ್ಲಿ ಹೆಚ್ಚು.

ಅಂಗಡಿಗಳ ಮುಂದೆ ತೆರಿಗೆರಹಿತ ಸಾಮಾನುಗಳ ಮಾರಾಟ ಎಂದೇ ಬೋರ್ಡು ಹಾಕಿರುತ್ತಾರೆ. ಇಂಥ ಒಂದು ಅಂಗಡಿಗೆ ನಾನು ಪ್ರವೇಶಿಸಿದೆ. ಅದರಲ್ಲಿ ರೇಡಿಯೋ, ಗಡಿಯಾರ, ಪಿಂಗಾಣಿ ಸಾಮಾನು, ಕಲಾಕೃತಿಗಳು, ಬಟ್ಟೆ ಮೊದಲಾದುವುಗಳನ್ನು ಗಿರಾಕಿಗಳನ್ನು ಆಕರ್ಷಿಸಲು ಬೇಕಾದ ರೀತಿಯಲ್ಲಿ ಜೋಡಿಸಿದ್ದರು. ರೇಡಿಯೋ ವಿಭಾಗಕ್ಕೆ ಹೋಗಿ ನಾನು ಅಲ್ಲಿದ್ದ ಕರಿಯ ಹೆಂಗಸರನ್ನು ವಿಚಾರಿಸುತ್ತಿದ್ದೆ. ಈ ಸಾಮಾನುಗಳಿಗೆ ಭಾರತದಲ್ಲಿ ತೆರಿಗೆ ಹಾಕುವುದಿಲ್ಲವೇ ಮುಂತಾಗಿ ಕೇಳುತ್ತಿದ್ದೆ. ಆ ಹೆಂಗಸರಿಗೆ ಅದೆಲ್ಲ ವಿಷಯ ತಿಳಿದಂತಿರಲಿಲ್ಲ. ಅವರು ಸುಮ್ಮನೆ ಮುಖ ನೋಡುತ್ತಿದ್ದರು. ಅಲ್ಲಿಗೆ ಬಂದ ಒಬ್ಬಳು ಹಿಂದೂ ಹುಡುಗಿ ನನ್ನ ಜೊತೆ ನೇರವಾಗಿ ಮಾತಿಗೆ ತೊಡಗಿದಳು. ಇವಳು ಅಂಗಡಿಯ ಮಾಲೀಕಳು. ಈ ಹಿಂದೂ ಹುಡುಗಿ ಬಂದ ತಕ್ಷಣ ಕರಿಯ ಹೆಂಗಸರು ದೂರ ಸರಿದು ನಿಂತರು. ನಾನು ರೇಡಿಯೋ ಮತ್ತು ಟೇಪ್ ರೆಕಾರ್ಡರ್ ಒಂದನ್ನು (ಒಂದರೊಳಗೆರಡು) ಸುಲಭ ಬೆಲೆಗೆ ಕೊಳ್ಳುವುದಕ್ಕಾಗಿ, ನಾನು ಅವಳೂ ಒಂದೇ ದೇಶಕ್ಕೆ ಸೇರಿದವರೆಂಬುದನ್ನು ಸಾಬೀತು ಮಾಡಿ ಏನೇನೊ ಮಾತನಾಡಿದೆ. ಆಕೆಯೂ ನನಗಾಗಿ ವಿಶೇಷ ರಿಯಾಯತಿ ತೋರುವವಳಂತೆ ಮಾತನಾಡಿ ತನ್ನ ವ್ಯಾಪಾರ ಮನೋವೃತ್ತಿಯನ್ನು ಪ್ರದರ್ಶಿಸಿದಳು. ನನ್ನಲ್ಲಿ ಇವರು ನಮ್ಮವರು ಎಂಬ ಅಭಿಮಾನ ಮೂಡಿದ್ದರೆ, ಮಾರಾಟಮಾಡಲು ಒಂದು ಒಳ್ಳೆಯ ಗಿರಾಕಿ ಸಿಕ್ಕಿತು ಎಂಬಷ್ಟೇ ಭಾವನೆ ಅವಳಲ್ಲಿದ್ದಂತೆ ತೋರಿತು. ನಮ್ಮ ದೇಶದಲ್ಲಿ ತೆರಿಗೆ ಹಾಕುತ್ತಾರೆ, ಹೇಗೆ ತಪ್ಪಿಸಿಕೊಳ್ಳುವುದು ಎಂದು ಆಕೆಯನ್ನು ಕೇಳಿದಾಗ, ಆಕೆ ಸಾಧ್ಯವಾದ ಎಲ್ಲ ಉಪಾಯಗಳನ್ನೂ ಹೇಳಿದಳು. ಇವಳ ಸೋದರಿಯನ್ನು ಬೊಂಬಾಯಿಗೆ ಕೊಟ್ಟು ಮದುವೆಯಾಗಿದೆಯಂತೆ. ಅವಳು ಪ್ರತಿವರ್ಷ ಇಲ್ಲಿಗೆ ಬಂದು, ಹೋಗುವಾಗ, ರೇಡಿಯೋ, ಗಡಿಯಾರ ಮೊದಲಾದುವನ್ನು ತೆಗೆದುಕೊಂಡು ಹೋಗುತ್ತಾಳಂತೆ. ತನ್ನ ಸ್ವಂತ ಉಪಯೋಗಕ್ಕೆ ಎಂದರೆ ತೆರಿಗೆ ಹಾಕುವುದಿಲ್ಲ ಎಂದು ನನಗೆ ಈಕೆ ಸುಳ್ಳು ಹೇಳಿದಳು. ಇಷ್ಟೆಲ್ಲ ಆದ ಮೇಲೆ ಆಕೆ ನನಗೆ ಪುಕ್ಕಟೆಯಾಗಿ ಒಂದು ಕ್ಯಾಸೆಟ್ ಟೇಪನ್ನು ಕೊಟ್ಟಳು. ಆದರೆ ಅದರ ಬೆಲೆಯನ್ನು ಯಾವ ಲೆಕ್ಕಕ್ಕೆ ಸೇರಿಸಿದ್ದಳೊ ಕಾಣೆ. ನಮ್ಮ ವ್ಯಾಪಾರದ ನಡುವೆ ಇನ್ನೊಬ್ಬ ಹುಡುಗ ಬಂದ. ಈತ ಈ ಹುಡುಗಿಯ ಗಂಡನಂತೆ ನಾನೂ ಹಿಂದು, ನನ್ನ ಹಿರಿಯರದು ಹೈದರಾಬಾದ್ ಎಂದು ಆತನೇ ಪರಿಚಯ ಮಾಡಿಕೊಂಡಾಗ, ಹಾಗಿದ್ದರೆ ನಾವಿಬ್ಬರು ನೆರೆಹೊರೆಯ ರಾಜ್ಯದವರು ಎಂದು ನಾನು ಹೇಳಿದೆ. ಅದರಿಂದ ಅವನಿಗೆ ಯಾವ ಭಾವವೂ ಉಂಟಾಗಲಿಲ್ಲ. ಇವನ ಹೆಂಡತಿ ಮಾತಿನಲ್ಲಾದರೂ ತೋರುತ್ತಿದ್ದ ಆಸಕ್ತಿ ಇವನಲ್ಲಿ ಇರಲಿಲ್ಲ. ಭಾರತದ ಬಗ್ಗೆಯಾಗಲಿ, ಹಿಂದೂತನದ ಬಗ್ಗೆಯಾಗಲಿ ಸ್ವಲ್ಪವೂ ಅಭಿಮಾನವಿದ್ದಂತಿರಲಿಲ್ಲ, ಹೈದರಾಬಾದ್‌ನಲ್ಲಿ ತನಗೆ ಈಗ ಯಾರೂ ಗೊತ್ತಿಲ್ಲವೆಂದ. ತೆಲುಗುಭಾಷೆ ಇವನಿಗಾಗಲಿ, ಇವನ ತಂದೆ ತಾಯಿಗಳಿಗಾಗಲಿ ಗೊತ್ತಿಲ್ಲವಂತೆ. ಇಲ್ಲಿ ಎಲ್ಲಿಯಾದರೂ ಸೀರೆ ಅಂಗಡಿಗಳಿವೆಯೋ

ಎಂದು ಹುಡುಗಿಯನ್ನು ಕೇಳಿದೆ. ಆಕೆ ಸೀರೆ ಎಂದರೆ ಏನು? ಎಂದು ಕೇಳಿ, ಆಮೇಲೆ ನನ್ನ ವಿವರ ಕೇಳಿ, ಇಲ್ಲಿ ಸೀರೆ ಅಂಗಡಿ ಇಲ್ಲ ಎಂದಳು. ನಿಮ್ಮ ಮನೆಯಲ್ಲಿ ಹಿರಿಯರು ಉಡುವುದಿಲ್ಲವೆ ಎಂದಾಗ, ಯಾವುದೋ ಕಾಲದಲ್ಲಿ ಉಡುತ್ತಿದ್ದರಂತೆ, ಈಗ ಯಾರೂ ಉಡುವುದಿಲ್ಲ ಎಂದಳು. ಈಕೆಯ ಹೆಸರು 'ಸೀತಾ'. ಇವರೆಲ್ಲ ಹೆಸರಿನಲ್ಲಿ, ಬಣ್ಣದಲ್ಲಿ ಹಿಂದೂತನವನ್ನು ಉಳಿಸಿಕೊಂಡಿದ್ದಾರೆ. ಮನೆಗಳಲ್ಲಿ ಆಚರಣೆಗಳಲ್ಲಿ ಹೇಗೊ, ದೇವರಿಗೇ ಗೊತ್ತು. ಹಿಂದೂಧರ್ಮದ ತವರೂರಿನಲ್ಲಿ ಇರುವ ನಮಗೇ ಅದರ ಗಂಧವಿಲ್ಲದಿರುವಾಗ, ನೂರಾರು ವರ್ಷಗಳ ಹಿಂದೆ ಜೀವನಕ್ಕಾಗಿ ತಾಯ್ನಾಡನ್ನೆ ತೊರೆದು ಹತ್ತಾರು ಸಾವಿರ ಮೈಲಿಗಳಾಚೆ ನೆಲೆಸಿದ ಇವರಲ್ಲಿ ಅದನ್ನು ನಿರೀಕ್ಷಿಸುವುದು ಸರಿಯಲ್ಲ ಎನ್ನಿಸಿತು.

ವಿಶ್ವವಿದ್ಯಾನಿಲಯದ ನ್ಯಾಯಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿರುವ ಚೌಧರಿಯವರನ್ನು ನೋಡಲು ಅವರ ವಿಭಾಗಕ್ಕೆ ಹೋಗಿದ್ದೆ. ಅವರ ಕೊಠಡಿಯಲ್ಲಿ ಅವರಿರಲಿಲ್ಲ. ಅಲ್ಲೊಬ್ಬ ಹಿಂದೂವಿನಂತೆ ಕಾಣುತ್ತಿದ್ದ ವಿದ್ಯಾರ್ಥಿಯನ್ನು ಮಾತನಾಡಿಸಿದೆ. ನನ್ನ ಪರಿಚಯ ಮಾಡಿಕೊಂಡು ಅವನ ಹೆಸರು ಕೇಳಿದೆ. ಅವನು ತನ್ನ 'ಕಿಶೋರ್' ಎಂಬ ಹೆಸರನ್ನು 'ಕೀಷೊ' ಎಂದು ಇಂಗ್ಲಿಷ್‌ಮಯವಾಗಿ ಹೇಳಿದ. ನನ್ನ ಪರಿಚಯವಾದರೂ ಅವನಲ್ಲಿ ಲವಲೇಶ ಆಸಕ್ತಿ ಮೂಡಲಿಲ್ಲ. ಚೌಧರಿ ಬಂದಾಗ ಹೇಳುತ್ತೇನೆ ಎಂದು ಹೇಳಿ ಹೊರಟೇಹೋದ. ಇಲ್ಲೆಲ್ಲ ಹಿಂದೂ ವಿದ್ಯಾರ್ಥಿಗಳು ಹೆಚ್ಚು ಇರುವಂತೆ ಕಾಣುತ್ತಾರೆ. ಆದರೆ ಇವರೆಲ್ಲ ಕೇವಲ ಹೆಸರಿನ, ಬಣ್ಣದ ಹಿಂದೂಗಳಾಗಿರಬೇಕು ಎನ್ನಿಸಿತು.

ಬಾರ್ಬಡಾಸ್ ದ್ವೀಪದಲ್ಲಿ ಕೇವಲ ಒಂದು ವಾರದ ಕಾರ್ಯಕ್ರಮವನ್ನು ನಾನು ಹಾಕಿಕೊಂಡದ್ದರಿಂದ, ದ್ವೀಪದ ಒಳಗೆಲ್ಲ ಓಡಾಡಲು ಸಾಕಷ್ಟು ಅವಕಾಶವಿರಲಿಲ್ಲ. ಆದ್ದರಿಂದ ಒಂದು ದಿನ ದ್ವೀಪವನ್ನೆಲ್ಲ ಸುತ್ತಿಬಿಡಬೇಕು ಎಂಬ ನನ್ನ ಆಸೆಯನ್ನು ಲೂಯಿಸ್ ಅವರಿಗೆ ಹೇಳಿದ್ದೆ. ನಾನು ಈ ದ್ವೀಪವನ್ನು ಬಿಡುವ ಹಿಂದಿನ ದಿನ ಇದನ್ನೊಂದು ಪ್ರದಕ್ಷಿಣೆ ಹಾಕುವ ಅವಕಾಶ ದೊರೆಯಿತು. ವಿಲಿಯಮ್ ಟೂರ್ಸ್ ಎಂಬ ಪ್ರವಾಸಿ ಏಜೆಂಟರಲ್ಲಿ ನನ್ನ ಹೆಸರನ್ನು ದಾಖಲಿಸಿ, ಪ್ರವಾಸಕ್ಕೆ ಏರ್ಪಾಡು ಮಾಡಿದರು. ವಿದೇಶೀ ಬಿಳಿಯರೇ ತುಂಬಿದ್ದ ಒಂದು ಚಿಕ್ಕ ವ್ಯಾನು ನಾನಿದ್ದಲ್ಲಿಗೆ ಬಂದು, ನನ್ನನ್ನು ತುಂಬಿಕೊಂಡು ದ್ವೀಪ ಪ್ರದಕ್ಷಿಣೆ ಪ್ರಾರಂಭಿಸಿತು. ದ್ವೀಪದ ಪಶ್ಚಿಮ ಭಾಗದಿಂದ ಪ್ರಾರಂಭಿಸಿ ಕಡಲ ತೀರದಲ್ಲೇ ದ್ವೀಪವನ್ನು ಒಂದು ಸುತ್ತು ಹಾಕಿತು ನಮ್ಮ ವಾಹನ.

ಸುಮಾರು 10-12 ಜನರಿದ್ದ ನಮ್ಮ ವ್ಯಾನು ಸ್ವಯಂಪರಿಪೂರ್ಣವಾಗಿತ್ತು. ವ್ಯಾನಿನ ಚಾಲಕ ಬಾರ್ಬಡಾಸ್ ರಮ್‌ನ ಪೀಪಾಯಿಯನ್ನೇ ವ್ಯಾನಿನಲ್ಲಿ ತಂದಿದ್ದ. ವ್ಯಾನಿನಲ್ಲಿ ಸಣ್ಣ ಧ್ವನಿವರ್ಧಕವನ್ನು ಅಳವಡಿಸಲಾಗಿತ್ತು. ಚಾಲಕನೇ ದಾರಿಯ

ಉದ್ದಕ್ಕೂ ಸ್ಥಳದ ಇತಿಹಾಸವನ್ನು ವಿವರಿಸಿ ಹೇಳುತ್ತಿದ್ದ. ಊಟ, ಉಪಾಹಾರಗಳ ವ್ಯವಸ್ಥೆಯನ್ನೂ ಚಾಲಕನೇ ಮಧ್ಯೆ ಮಧ್ಯೆ ಏರ್ಪಡಿಸಿದ್ದ.

ಸಮುದ್ರದ ದಂಡೆಯಲ್ಲಿ ಉದ್ದಕ್ಕೂ ಹೋಟೆಲುಗಳು, ಬೀಚುಗಳು ಕಂಗೊಳಿಸುತ್ತವೆ; ಅವುಗಳಿಲ್ಲದ ಕಡೆ ಚರ್ಚುಗಳು ಎದ್ದು ನಿಂತಿವೆ. ನನ್ನನ್ನು ಬಿಟ್ಟು ಉಳಿದವರೆಲ್ಲ ಕ್ರೈಸ್ತರಾದ್ದರಿಂದ, ಚಾಲಕ ಚರ್ಚುಗಳು ಸಿಕ್ಕಿದಾಗ ಅವುಗಳ ಇತಿಹಾಸವನ್ನು ವಿವರವಾಗಿ ತಿಳಿಸುತ್ತಿದ್ದ. ಎಲ್ಲಿ ಗುಡ್ಡಗಳು, ಮರಗಳ ತೋಪು ಇರುತ್ತವೊ ಅಲ್ಲೆಲ್ಲ ಚರ್ಚುಗಳನ್ನು ಕಟ್ಟಿದ್ದಾರೆ ಈ ಜನ. ಸುಂದರವಾದ, ಭವ್ಯವಾದ, ನಿರ್ಮಲವಾದ ಸ್ಥಳಗಳಲ್ಲಿ ದೇವಸ್ಥಾನಗಳನ್ನು ನಿರ್ಮಿಸುವುದು ಎಲ್ಲ ಜನಾಂಗದ ಒಂದು ಸಾಮಾನ್ಯ ಸಂಪ್ರದಾಯವೆಂದು ಕಾಣುತ್ತದೆ. ನದಿ, ಸಮುದ್ರಗಳ ಸುಂದರವಾದ ತಾಣಗಳೂ ದೇವಾಲಯಗಳಿಗೆ ಪ್ರಶಸ್ತವಾದ ಸ್ಥಳಗಳು. ಇಂತಹ ಕಡೆ ದೇವರಿಲ್ಲದಿದ್ದರೂ ಚಿಂತೆಯಿಲ್ಲ, ಆ ಸ್ಥಳಗಳ ಸನ್ನಿವೇಶವೇ ಮನಸ್ಸಿನಲ್ಲಿ ದೈವಿಕ ಭಾವನೆಗಳನ್ನು ತುಂಬುತ್ತದೆ. ಇದೇನು ಸಾಮಾನ್ಯ ಕೆಲಸವೇ ?

ಸಮುದ್ರದ ದಂಡೆಯಲ್ಲಿ ಎತ್ತರವಾದ ಗುಡ್ಡಗಳಿವೆ. ಅವುಗಳ ಮೇಲೆ ನಿಂತು ನೋಡಿದರೆ ಹಸಿರಾದ ಇಳಿಜಾರು ಪ್ರದೇಶ, ಅದರಾಚೆಗಿನ ಹಸಿರು ನೀಲಿಯ ಸಮುದ್ರ ಬಣ್ಣದ ಚಿತ್ರದಲ್ಲಿ ಕಂಡಂತಾಗುತ್ತದೆ. ಒಂದೊಂದು ದಿಕ್ಕಿಗೆ ತಿರುಗಿದರೆ, ಒಂದಿಷ್ಟು ದೂರ ನಡೆದು ನೋಡಿದರೆ ಬೇರೆ ಬೇರೆ ದೃಶ್ಯಗಳು ಗೋಚರಿಸುತ್ತವೆ. ಈ ವೈವಿಧ್ಯಮಯವಾದ ದೃಶ್ಯಗಳನ್ನು ನೋಡುವುದಕ್ಕಾಗಿಯೇ ಇಲ್ಲಿಗೆ ಪ್ರವಾಸಿಗರು ಕಾರುಗಳಲ್ಲಿ, ವ್ಯಾನುಗಳಲ್ಲಿ ಬರುತ್ತಾರೆ. ಅಲ್ಲಲ್ಲಿ ವಾಹನಗಳನ್ನು ನಿಲ್ಲಿಸಿ, ಇಳಿದು ಸಮುದ್ರದ ದಂಡೆಯಲ್ಲಿ ಸಂಚರಿಸುತ್ತಾರೆ. ಸಮುದ್ರದ ಸ್ನಾನ ಅಪಾಯವೆಂದು ಕೆಲವು ಕಡೆ ಬೋರ್ಡು ಹಾಕಿದ್ದರೂ ಅವನ್ನು ಲೆಕ್ಕಿಸದೆ, ಪ್ರಾಣಕ್ಕಿಂತ ಸುಂದರ ಸ್ಥಳಗಳಲ್ಲಿ ಸುಖ ಅನುಭವಿಸುವುದು ಮೇಲು ಎಂಬ ತೀರ್ಮಾನದಿಂದ ಹೆಣ್ಣು ಗಂಡುಗಳು ಏಕಾಂತ ವಾಗಿ ನಗ್ನವಾಗಿ ಈಜಿ ದಣಿದು ಮರಳಿನ ಮೇಲೆ ಬಿದ್ದಿರುತ್ತವೆ.

ಇಲ್ಲೆಲ್ಲ ಸುಣ್ಣಕಲ್ಲಿನ ಬೆಟ್ಟಗಳು ಹೇರಳವಾಗಿವೆ. ಈ ಬೆಟ್ಟಗಳನ್ನು ಸಮುದ್ರ ಕೊರೆದು ವಿವಿಧ ವಿನ್ಯಾಸಗಳನ್ನು ಸೃಷ್ಟಿಸಿದೆ. ಸಮುದ್ರದ ದಂಡೆಯಲ್ಲಿ ಅಲ್ಲಲ್ಲಿ ನಿಂತಿರುವ ಈ ಬಂಡೆಗಳ ವಿನ್ಯಾಸಗಳು ಕುಶಲಶಿಲ್ಪಿಯ ಕೆತ್ತನೆಯನ್ನು ಮೀರಿಸುತ್ತವೆ. ನೀರಿನ ಹೊಡೆತಕ್ಕೆ ಬುಡವೆಲ್ಲ ಸಣ್ಣಗಾಗಿ, ತುದಿಮಾತ್ರ ಅಗಲವಾಗಿ ಕೊಡೆಯಂತಿರುವ, ಮರದ ಆಕಾರದಲ್ಲಿರುವ, ಮನುಷ್ಯನ ಆಕಾರದಲ್ಲಿರುವ, ಒಂಟಿಕಾಲಿನ ತಪಸ್ವಿ ಯಂತಿರುವ ಬಂಡೆಗಳ ಸಮೂಹ ಕಡಲತೀರದ ವಸ್ತು ಸಂಗ್ರಹಾಲಯದಂತಿದೆ. ಅಲ್ಲಲ್ಲಿ ಸಮುದ್ರದ ನೀರು ಬೆಟ್ಟಗಳನ್ನು ಕೊರೆದು ಗುಹೆಗಳನ್ನು ಮಾಡಿದೆ. ಇಂತಹ ಗುಹೆಗಳಿಗೆ ಹೊರಗಿನಿಂದ ಹೋಗುವುದಕ್ಕಾಗಿ ಸಣ್ಣ ರಂಧ್ರಗಳನ್ನು ಕೊರೆದು ಮೆಟ್ಟಿಲು ಗಳನ್ನು ಏರ್ಪಡಿಸಿದ್ದಾರೆ. ಇಂತಹ ಕಡೆ ಈ ಸ್ಥಳಗಳ ಪರಿಚಯವಿರುವವರು ಒಳಗೆ ಕರೆದುಕೊಂಡು ಹೋಗಿ ಗುಹೆಗಳ ಪರಿಚಯ ಮಾಡುತ್ತಾರೆ. ಈ ಗುಹೆಗಳು

ಸಮುದ್ರ ಮಟ್ಟದಿಂದ ಮೇಲಿರುವುದರಿಂದ ನೋಡಲು ಸಾಧ್ಯವಾಗಿದೆ. ಸಮುದ್ರ ಉಕ್ಕೇರಿ ಬಂದಾಗ ಅಲೆಗಳ ಹೊಡೆತಕ್ಕೆ ಸಿಕ್ಕಿದ ಸುಣ್ಣಕಲ್ಲು ಬೆಟ್ಟಗಳು ಲಕ್ಷಾಂತರ ವರ್ಷಗಳ ಅಂತರದಲ್ಲಿ ಈ ಗುಹೆಗಳಾಗಿ ಮಾರ್ಪಟ್ಟಿವೆ. ಒಳಗಡೆ ಒಂದು ಗುಹೆಯಿಂದ ಮತ್ತೊಂದಕ್ಕೆ ಪ್ರವೇಶಿಸಲು ಸಣ್ಣಸಣ್ಣ ಪ್ರವೇಶದ್ವಾರಗಳಿವೆ. ಗುಹೆಗಳ ಮೇಲ್ಛಾವಣಿ ವಿವಿಧ ಆಕಾರದಲ್ಲಿದ್ದು, ದೇವಾಲಯದ ಕೆತ್ತನೆಯನ್ನು ಹೋಲುತ್ತದೆ. ಅಲ್ಲಲ್ಲಿ ನೀರು ಹನಿಯುತ್ತಿರುತ್ತದೆ. ತಳಗೆ ನೀರು ನಿಂತು ವಿವಿಧ ಬಣ್ಣದ ಪಾಚಿಗಟ್ಟಿರುತ್ತದೆ. ಕೆಲವು ಕಡೆ ಇದು ಬಣ್ಣಬಣ್ಣದ ರತ್ನಗಂಬಳಿ ಹಾಸಿದಂತಿರುತ್ತದೆ. ನಾವು ನೋಡಿದ ಒಂದೆರಡು ಕಡೆ ಪಿಂಕ್ ಬಣ್ಣದ, ನಡುನಡುವೆ ಹಸಿರು, ಹಳದಿ ಬಣ್ಣಗಳ ಹೂವುಗಳಾಕಾರಗಳಿದ್ದುವು. ತಿಳಿಯಾದ ನೀರಿನಲ್ಲಿ ಕೈ ಹಾಕಿ ಅವನ್ನು ಹಿಡಿಯಲು ಹೋದಾಗ ಅವು ಮಾಯವಾಗಿ ಕೈಗೆ ಬಂಡೆ ಮಾತ್ರ ಸಿಕ್ಕುತ್ತಿತ್ತು. ಈ ಹೂವುಗಳು ಮುಟ್ಟಿದರೆ ಮುನಿಗಿಡದಂತೆ ಸ್ಪರ್ಶದಿಂದ ಮುಚ್ಚಿಕೊಳ್ಳುತ್ತವಂತೆ, ಇದೊಂದು ಅದ್ಭುತ ದೃಶ್ಯ! ಈ ಗುಹೆಗಳನ್ನು ಪ್ರಾಣಿಪುಷ್ಪಗುಹೆ (Animal flower caves) ಎಂದು ಕರೆಯುತ್ತಾರೆ.

ಈ ಗುಹೆಗಳ ಒಳಗೆ ಕಲ್ಲುಗಳು ನೀರಿನ ಹೊಡೆತದಿಂದ ಸವೆದು ವಿವಿಧ ಆಕಾರಗಳಾಗಿ ಬಿದ್ದಿವೆ. ಅವುಗಳನ್ನೆಲ್ಲ ನಮ್ಮ ಆಧುನಿಕ ತಂತ್ರಜ್ಞರು ಗೃಹನಿರ್ಮಾಣಕ್ಕೆ ಬಳಸಿ ವಿವಿಧ ನೂತನ ವಿನ್ಯಾಸಗಳನ್ನು ಸೃಷ್ಟಿಸಬಹುದು.

ಸಮುದ್ರದ ಮೇಲ್ಮಟ್ಟದಲ್ಲಿಯೇ ಇಂತಹ ಗುಹೆಗಳಿರಬೇಕಾದರೆ, ಸಮುದ್ರ ಮಟ್ಟದಿಂದ ತಳಗೆ ಕೊರೆತದಿಂದ ಇನ್ನೆಂಥ ಸುಂದರ ಗುಹೆಗಳಿರಬಹುದೊ! 'ಹವಳದ ದ್ವೀಪ' (Coral island) ಎಂಬ ಪುಸ್ತಕದಲ್ಲಿ ವರ್ಣಿತವಾಗಿರುವ ಗುಹೆಗಳು ಇಂತಹವೇ ಇರಬೇಕೆನ್ನಿಸುತ್ತದೆ. ಅಂತೂ ಇದೊಂದು ಪ್ರಕೃತಿಯ ಅದ್ಭುತ ಪವಾಡ. ಇದೇ ರೀತಿ ದ್ವೀಪದ ಮಧ್ಯ ಭಾಗದಲ್ಲಿ ಸಣ್ಣಸಣ್ಣ ನದಿಗಳು ಕೊರೆದು ಮಾಡಿದ ಗುಹೆಗಳಿವೆಯಂತೆ!

ದ್ವೀಪದ ಪೂರ್ವಕ್ಕೆ ಬಂದರೆ ಸಮುದ್ರದಂಡೆಯ ಗುಡ್ಡದ ಮೇಲೆ ಸೇಂಟ್ ಜಾನ್ ಚರ್ಚ್ ಕಾಣುತ್ತದೆ. ಹಸಿರು ಮರಗಳ ತೋಪಿನ ನಡುವೆ ಇದು ಎತ್ತರವಾಗಿ ನಿಂತಿದೆ. ಈಗಿರುವ ಚರ್ಚ್ ಕಟ್ಟಡ 1836ರಲ್ಲಿ ಕಟ್ಟಲಾಗಿದೆಯಂತೆ. ಮರದ ಸಾಮಾನುಗಳನ್ನು ಹಾಕಿ ತುಂಬಾ ಚೆನ್ನಾಗಿ ಕಟ್ಟಿದ್ದಾರೆ. ಇದಕ್ಕಿಂತ ಹಿಂದೆ ಇದ್ದ ಕಟ್ಟಡವನ್ನು 1831ರಲ್ಲಿ ದೊಡ್ಡ ಹರಿಕೇನ್ ಬಿರುಗಾಳಿ ಬುಡಮೇಲು ಮಾಡಿತ್ತಂತೆ. ಇಲ್ಲೊಂದು ಸೂರ್ಯನ ಬೆಳಕಿನಿಂದ ಕಾಲವನ್ನು ಅಳೆಯುವ ಕಲ್ಲಿನ ಗಡಿಯಾರವಿದೆ.

ಸೇಂಟ್ ಜಾನ್ ಚರ್ಚಿನಿಂದ ಸ್ವಲ್ಪದೂರದಲ್ಲಿ Ashford Bird Park ಎಂಬ ಪಕ್ಷಿಧಾಮವಿದೆ. ಇಲ್ಲಿ ಹಲವಾರು ಜಾತಿಯ ಪಕ್ಷಿ ಮತ್ತು ಕೋತಿಗಳನ್ನು ಸಾಕಿದ್ದಾರೆ ಪಕ್ಷಿಗಳಲ್ಲಿ ಮುಖ್ಯವಾದವುಗಳೆಂದರೆ ವೈವಿಧ್ಯಮಯ ವರ್ಣದ ಗಿಳಿಗಳು. ಇಲ್ಲೊಂದು ಕಡೆ ಭಾರತದ ಮೈನಾ ಪಕ್ಷಿಯನ್ನು ಇಟ್ಟಿದ್ದಾರೆ.

ಈ ಪಕ್ಷಿಧಾಮದ ಮೇಲ್ವಿಚಾರಕ ಒಬ್ಬ ಬಿಳಿಯ. ಅವನು ಇಲ್ಲೆಲ್ಲ ಕೆಂಪು ಜಾತಿಯ ತೆಂಗಿನ ಮರಗಳನ್ನು ಬೆಳೆಸಿದ್ದಾನೆ. ಮರದಲ್ಲಿ ಕೆಂಪುಕಾಯಿಗಳು ತುಂಬಿದ್ದುವು. ಮರದ ತಳಗೆ ತೊಳ್ಳಾಗಿ ಉದುರಿದ್ದುವು. ಈ ಕಾಯಿಗಳನ್ನು ಏನು ಮಾಡುತ್ತೀರಿ ಎಂದು ಅವನನ್ನು ಕೇಳಿದೆ. ಅವುಗಳನ್ನು ಪಕ್ಷಿಗಳಿಗೆ ಮತ್ತು ಕೋತಿಗಳಿಗೆ ಹಾಕುತ್ತಾರಂತೆ. ತಳಗೆ ಬಿದ್ದಿದ್ದ ತೊಳ್ಳುಗಳು ಕೆಲವು ಮೊಳಕೆ ಬಂದಿದ್ದುವು. ಅವುಗಳನ್ನು ಭೂಮಿಯಲ್ಲಿ ನೆಟ್ಟು ಬೆಳೆಸುತ್ತೇವೆ ಎಂದು ಆತ ಹೇಳಿದ ತೆಂಗಿನ ಹಣ್ಣುಗಳನ್ನು ಭೂಮಿಯಲ್ಲಿ ಹೂತು ಮೊಳಕೆಮಾಡುವ ವಿಧಾನವನ್ನು ನಾನು ಅವನಿಗೆ ಹೇಳಿದಾಗ ಅವನು ನಗತೊಡಗಿದ. ಅದು ಬೇಡವಾದ ಕೆಲಸ, ಮರದಿಂದ ಬಿದ್ದ ತೊಳ್ಳು ಸ್ವಾಭಾವಿಕವಾಗಿಯೇ ಮೊಳೆಯುತ್ತದೆ. ನಿಮ್ಮ ಪೋಷಣೆಯನ್ನು ಅದು ನಿರೀಕ್ಷಿಸುವುದಿಲ್ಲ. ಕಾಯಿಗಳನ್ನು ನೇರವಾಗಿ ನಿಲ್ಲಿಸಿ ನೆಡುವುದು ಸರಿಯಲ್ಲ. ಬಿದ್ದಕಾಯಿ ಓರೆಯಾಗಿರುವಂತೆಯೇ ಬಿಟ್ಟರೆ ನೈಸರ್ಗಿಕವಾಗಿ ಮೊಳೆಯುತ್ತದೆ. ಆಮೇಲೆ ಭೂಮಿಯಲ್ಲಿ ನೆಡಬಹುದು ಎಂದು ತೆಂಗುಬೆಳೆಯುವ ವಿಧಾನವನ್ನು ನನಗೆ ವಿವರಿಸಿದ.

ಎಲ್ಲ ದ್ವೀಪಗಳಿಗಿಂತ ಇಲ್ಲಿ ಹೆಚ್ಚಾಗಿ ಕಬ್ಬನ್ನು ಬೆಳೆಯುತ್ತಾರೆ. ಈ ಕೆರೇಬಿಯನ್ ದ್ವೀಪಗಳಲ್ಲಿ ಈ ದ್ವೀಪವೇ ಮೊದಲು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಿತಂತೆ. ರಸ್ತೆಯ ಉದ್ದಕ್ಕೂ ಕಬ್ಬಿನ ಗದ್ದೆಗಳು ಹಸಿರುಹಸಿರಾಗಿ ಕಾಣುತ್ತವೆ. ಅಲ್ಲಲ್ಲಿ ಕಬ್ಬನ್ನು ಕತ್ತರಿಸುವ, ಲಾರಿಗಳಿಗೆ ತುಂಬುವ ಯಂತ್ರಗಳು ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಕಬ್ಬಿನ ಹಸಿರು ಗರಿಗಳನ್ನು ಕತ್ತರಿಸಿ ಎಸೆದು, ಕಬ್ಬಿನ ಭಾಗವನ್ನು ತುಂಡುಮಾಡಿ ಲಾರಿಯ ಒಳಕ್ಕೆ ಸುರಿದುಕೊಂಡು ಕಬ್ಬಿನ ಗದ್ದೆಯಲ್ಲಿ ಓಡಾಡುವ ದೈತ್ಯಯಂತ್ರವನ್ನು ನೋಡುವುದೇ ಒಂದು ಸುಂದರ ದೃಶ್ಯ. ಇಲ್ಲಿಂದ ಇದು ಸಕ್ಕರೆ ಕಾರ್ಖಾನೆಗೆ ತೆರಳಿ, ಕಂದು ಬಣ್ಣದ ಸಕ್ಕರೆ ಮತ್ತು ರಮ್‌ಪಂಚ್ ಎನ್ನುವ ವಿಶೇಷ ಪಾನೀಯದ ತಯಾರಿಕೆಗೆ ಕಾರಣವಾಗುತ್ತದೆ.

ನಮ್ಮ ಪ್ರವಾಸೀ ತಂಡ ಮಧ್ಯಾಹ್ನದ ಊಟಕ್ಕೆ ಕಡಲ ತಡಿಯ ಒಂದು ಮರದ ಹೋಟೆಲಿಗೆ ಬಂತು. ಮರದ ಹಲಗೆಗಳಿಂದ ಬಸ್ಸಿನ ಆಕಾರದಲ್ಲಿ ನಿರ್ಮಿಸಿ ಎತ್ತರವಾದ ಒಂದು ಗುಡ್ಡದ ಮೇಲೆ ನಿಲ್ಲಿಸಿದ್ದಾರೆ. ದೂರದಲ್ಲಿ ನೋಡಿದರೆ ಪೆಟ್ಟಿಗೆಯಂತೆ ಕಾಣುವ ಈ ಹೋಟೆಲು ಮನೆಯು ಎಲ್ಲ ಸೌಲಭ್ಯಗಳನ್ನು ಹೊಂದಿದೆ. ನಮ್ಮ ವ್ಯಾನಿನ ಚಾಲಕನಿಗೂ ಈ ಹೋಟೆಲಿನ ಮಾಲೀಕ, ಒಬ್ಬ ಹುಡುಗನಿಗೂ ಸ್ನೇಹ. ಪ್ರವಾಸ ಬಂದಾಗೆಲ್ಲ ಮಧ್ಯಾಹ್ನದ ಊಟಕ್ಕೆ ಇಲ್ಲಿಗೆ ಬರುತ್ತಾನಂತೆ. ಊಟಕ್ಕೆ ಸಿದ್ಧತೆ ನಡೆಯಿತು. ಈ ಹೋಟೆಲಿನ ಒಳಗಿಂದ ಸಮುದ್ರದ ಸುಂದರ ದೃಶ್ಯಗಳನ್ನು ನೋಡುತ್ತಾ ಭೋಜನ ಸವಿಯಬಹುದು.

ಭೋಜನಕ್ಕೆ ಅಣಿಮಾಡಿದ ಹುಡುಗ ಹೋಟೆಲಿನಲ್ಲಿ ಕೆಲಸದವನಿರಬೇಕೆಂದು ಮೊದಲು ತಿಳಿದಿದ್ದೆ. ನಾವು ಊಟಕ್ಕೆ ಪ್ರಾರಂಭಿಸಿದ ಮೇಲೆ ಅವನೂ ಒಂದು ಲೋಟ

ರವ್‌ಪಂಚನ್ನು ಪೀಪಾಯಿಯಿಂದ ಸುರಿದುಕೊಂಡು ಬಂದು ನಮ್ಮ ಜೊತೆ ಹರಟೆಗೆ ಪ್ರಾರಂಭಿಸಿದಾಗ ಅವನೇ ಮಾಲೀಕನೆಂದು ತಿಳಿಯಿತು. ಅವನ ಬಣ್ಣ, ತಲೆಗೂದಲುಗಳನ್ನು ಕಂಡು ಇವನು ಹಿಂದೂ ಆಗಿರಬೇಕು ಎಂದು ನನಗನ್ನಿಸಿದರೂ ಇವರ ನಿರ್ಲಕ್ಷ್ಯ ಭಾವನೆಯನ್ನು ಕಂಡು ನಾನು ಕೇಳಲಿಲ್ಲ. ಆ ಹುಡುಗನೇ ನನ್ನನ್ನು ಮಾತನಾಡಿಸಿ, ನೀವು ಭಾರತದವರೇ ಎಂದು ವಿಚಾರಿಸಿದ. ನಾನು ಹೌದು ಎಂದು ಹೇಳಿದಾಗ ಆತ ತಕ್ಷಣ, ದೇವರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದ. ನಮ್ಮ ಮೇಜಿನಲ್ಲಿಯೇ ಇನ್ನಿಬ್ಬರು ಬಿಳಿಯ ಹುಡುಗಿಯರು ಕುಳಿತಿದ್ದರು. ಏಕೆ, ನೀನು ಭಾರತೀಯನೆ ಎಂದು ನಾನು ಕೇಳಿದಾಗ ಆತ, ಹೌದು, ನಾನು ಅರ್ಧ ಹಿಂದೂ ಎಂದ. ಹುಡುಗಿಯರು ಕಿಸಕಿಸನೆ ನಕ್ಕರು. ಹುಡುಗ ಸ್ವಲ್ಪವೂ ಅಳುಕದೆ ತನ್ನ ಜನ್ಮ ಕಥೆಯನ್ನು ಹೇಳಿದ. ಅವನ ತಂದೆಯ ಕಡೆಯಿಂದ ಅವನು ಹಿಂದೂ, ತಾಯಿ ಕರಿಯ ಹೆಂಗಸು. ತಂದೆ ಎಲ್ಲಿದ್ದಾನೊ ತಿಳಿಯದು, ಆದರೆ ಅವನು ಬದುಕಿರಬಹುದು ಎಂದ. ಅದನ್ನು ಹೇಳುವಾಗ ಅವನು ವ್ಯಥೆಯನ್ನಾಗಲಿ, ಕುತೂಹಲವನ್ನಾಗಲಿ ವ್ಯಕ್ತಪಡಿಸಲಿಲ್ಲ. ದೇವರ ಬಗ್ಗೆ ಭಾರತೀಯರಿಗೆ ಮಾತ್ರವೇನು, ಪ್ರತಿಯೊಂದು ಜನಾಂಗದವರಿಗೂ ನಂಬಿಕೆಯಿರುತ್ತದೆ ಎಂದು ನಾನು ಹೇಳಿದಾಗ ಆ ಬಿಳಿ ಹುಡುಗಿಯರು, ನಿಮ್ಮ ಧರ್ಮ ಯಾವುದು ಎಂದು ಕೇಳಿದರು. ನಾನು ಭಾರತೀಯ, ನನ್ನದು ಮನುಜಮತ ಎಂದು ಹೇಳಿದೆ. ಆ ಅಮೆರಿಕದ ಹುಡುಗಿಯರಿಗೆ ಆಶ್ಚರ್ಯವಾಯಿತೆಂದು ಕಾಣುತ್ತದೆ. ಹಾಗೆಂದರೇನು, ಮನುಜ ಮತ ಎಲ್ಲಿದೆ ಎಂದರು. ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ನಿಮ್ಮನ್ನೆಲ್ಲ "ಅಮೆರಿಕದ ನನ್ನ ಸೋದರಸೋದರಿಯರೇ" ಎಂದು ಸಂಬೋಧಿಸಿದ ಮಾತಿನಲ್ಲಿ ಈ ಮನುಜಮತ ಕಾಣುವುದಿಲ್ಲವೆ ಎಂದೆ. ವಿಶ್ವದ ಸಂಕುಚಿತ ಜಾತಿ, ಮತ, ಧರ್ಮಗಳನ್ನು ಮೀರಿದ್ದು ಈ ಮನುಜಮತ. ಈಗ ಈ ಧರ್ಮವನ್ನು ಪ್ರತಿ ಪಾದಿಸುವ ಕವಿ, ಸಂತರು ನಮ್ಮಲ್ಲಿ ಅನೇಕರಿದ್ದಾರೆ ಎಂದೆ. ಅವರು ಸುಮ್ಮನೆ ತಲೆದೂಗಿದರು. ಆ ಹುಡುಗನೂ ಬೇರೇನೂ ಮಾತಾಡಲಿಲ್ಲ. ನಾನೂ ಕೇಳಲಿಲ್ಲ. ತನಗೆ ಜನ್ಮವಿತ್ತ ತಂದೆಯ ಬಗ್ಗೆಯೇ ಅಷ್ಟು ನಿರ್ಲಕ್ಷ್ಯವಿರಬೇಕಾದರೆ ಅವನ ಪೂರ್ವ ಧರ್ಮ, ಇತಿಹಾಸಗಳ ಬಗ್ಗೆ ಏನು ಕುತೂಹಲವಿದ್ದೀತು? ತಂದೆ ಎನ್ನುವ ವ್ಯಕ್ತಿ ಮಕ್ಕಳ ಹುಟ್ಟಿಗೆ ನಿಮಿತ್ತ ಮಾತ್ರನೆಂದು ಕಾಣುತ್ತದೆ ಇಲ್ಲಿ.

ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ಕಸಗುಡಿಸುವ ಕೆಲಸಕ್ಕಾಗಿ ಒಬ್ಬಳು ಹೆಂಗಸು ಬರುತ್ತಿದ್ದಳು. ಅವಳು ಸುಮಾರು 50 ವರ್ಷದ ಕರಿಯ ಹೆಂಗಸು. ಅವಳು ಈ ವಯಸ್ಸಿನಲ್ಲಿ ವ್ಯವಹಾರಶಾಸ್ತ್ರ ಕಲಿಯುತ್ತಿರುವುದಾಗಿ ಹೇಳಿದಳು. ಇವಳಿಗೆ ೨ ಜನ ಗಂಡುಮಕ್ಕಳಿದ್ದಾರಂತೆ. ಅವರೆಲ್ಲ ಬೇರೆಬೇರೆ ಕೆಲಸದಲ್ಲಿದ್ದಾರೆ ಎಂದಳು. ಇಂಗ್ಲೆಂಡಿನಲ್ಲೂ ಒಬ್ಬ ಮಗ ಇದ್ದಾನಂತೆ. ಇವಳಿನ್ನೂ ಅವಿವಾಹಿತೆ.

ನಮ್ಮ ಪ್ರವಾಸಿ ವ್ಯಾನು ಸೂರ್ಯ ಇನ್ನೂ ಮರೆಯಾಗುವ ಮೊದಲೇ ದ್ವೀಪವನ್ನು ಸುತ್ತುಹಾಕಿ ನಮ್ಮ ನಮ್ಮ ನೆಲೆಗೆ ಮುಟ್ಟಿಸಿತು.

ವಿದೇಶಿ ಹಿಂದೂಗಳ ಬಾಂಧವ್ಯ

ಬಾರ್ಬಡಾಸ್ ದ್ವೀಪದ ಅಲ್ಪಕಾಲದ ನನ್ನ ಕಾರ್ಯಕ್ರಮವನ್ನು ಮುಗಿಸಿ ಟ್ರಿನಿಡಾಡ್ ದ್ವೀಪಕ್ಕೆ ಹೊರಡುವ ದಿನ ವಿಶ್ವವಿದ್ಯಾನಿಲಯಕ್ಕೆ ರಜಾ ದಿನವಾದ್ದರಿಂದ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಯಾರೂ ನನ್ನ ಜೊತೆ ಇರಲಿಲ್ಲ. ಈ ಅಲ್ಪಕಾಲದ ನನ್ನ ಬಾರ್ಬಡಾಸ್ ವಾಸದಲ್ಲಿ ಹೇಳಿಕೊಳ್ಳುವಂಥ ನಿಕಟತೆಯನ್ನು ಯಾರ ಜೊತೆಯೂ ಬೆಳೆಸಿಕೊಂಡಿರಲಿಲ್ಲ. ನನಗೆ ನಾನೇ ಹೊರಡುವ ತರಾತುರಿಯಲ್ಲಿ ಇದ್ದೆ. ಅಷ್ಟರಲ್ಲಿ ಸಹಾಯಕ ಕುಲಸಚಿವೆ ರೋಜರ್ಸ್ ತಮ್ಮ ಕಾರಿನಲ್ಲಿ ಬಂದು ಅತಿಥಿ ಗೃಹದ ಹತ್ತಿರ ಕಾರಿನ ಹಾರ್ನ್ ಮಾಡಿದರು. ನಾನು ಹೊರಬಂದು ನೋಡಿದಾಗ, 'ಬೇಗ ಹೊರಡಿ, ವಿಮಾನಕ್ಕೆ ವೇಳೆಯಾಯಿತು' ಎಂದು ಆಕೆ ನನಗಿಂತ ಮಿಗಿಲಾಗಿ ಆತಂಕ ವ್ಯಕ್ತಪಡಿಸಿದರು. ನನ್ನ ಎಲ್ಲ ಸಾಮಾನುಗಳನ್ನು ಅವರ ಕಾರಿನಲ್ಲಿ ಇಟ್ಟ ತಕ್ಷಣ ಕಾರನ್ನು ವಿಮಾನ ನಿಲ್ದಾಣದ ಕಡೆಗೆ ಓಡಿಸಲಾರಂಭಿಸಿದರು. ಸುಮಾರು ಹತ್ತು ಮೈಲಿಗಳ ದೂರವನ್ನು ಕ್ರಮಿಸಬೇಕಾದರೆ ಎದುರಿನಿಂದ ಬರುವ ವಾಹನ ಗಳಿಂದಾಗಿ ಸುಮಾರು ಕಾಲವೇ ಬೇಕಾಯಿತು. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಹಾಗೆಯೇ ಎಲ್ಲ ಮಾತುಕತೆಗಳನ್ನು ಮುಗಿಸಿದ್ದಾಯಿತು. ಅತಿಥಿಗೃಹದ ಬಾಡಿಗೆಯನ್ನು ರೋಜರ್ಸ್ ಅವರ ಕೈಗೇ ಕೊಟ್ಟು ವಿಶ್ವವಿದ್ಯಾನಿಲಯದ ಲೆಕ್ಕಕ್ಕೆ ಜಮಾಮಾಡುವಂತೆ ಹೇಳಿದೆ. ವಿಮಾನ ನಿಲ್ದಾಣ ತಲುಪಿದ ಕೂಡಲೆ ಇಬ್ಬರೂ ಸಾಮಾನುಗಳನ್ನು ಹಿಡಿದುಕೊಂಡು ಸಂಬಂಧಿಸಿದ ಕೌಂಟರ್‌ನಲ್ಲಿ ನಿಂತು ವಿಮಾನ ನಿಲ್ದಾಣದ ಎಲ್ಲ ವಿಧಿಗಳನ್ನು ಮುಗಿಸಿದ್ದಾಯಿತು. ನಾವಿಬ್ಬರೂ ಸೇರಿ ಕೊನೆಯದಾಗಿ ಕಾಫೀ ಕುಡಿಯುವುದಕ್ಕಾಗಿ ಹೊರಡುತ್ತಿದ್ದಾಗ, ಧ್ವನಿವರ್ಧಕದಲ್ಲಿ ವಿಮಾನ ಹೊರಡುವ ಸೂಚನೆ ಕೊಟ್ಟರು. ರೋಜರ್ಸ್ ಅವರ ಕೈಕುಲುಕಿ ಬೀಳ್ಕೊಟ್ಟೆ. ಟ್ರಿನಿಡಾಡ್‌ಗೆ ಹೊರಡಲು ಸಿದ್ಧವಾಗಿ ನಿಂತಿದ್ದ ಲಿಯತ್ ಎಂಬ ಪುಟ್ಟ ವಿಮಾನವನ್ನು ಹತ್ತಿದ ಕೆಲವೇ ನಿಮಿಷಗಳಲ್ಲಿ ಗಾಳಿದಿರುಗಿನ ಪ್ರೊಪೆಲರ್‌ಗಳು ತಿರುಗಲಾರಂಭಿಸಿ ವಿಮಾನ ಚಲಿಸಿತು.

ಈ ಪುಟ್ಟ ವಿಮಾನ ಹತ್ತುವುದು ಮತ್ತು ಇಳಿಯುವುದು ಬೇರೆ ವಿಮಾನಗಳಿ ಗಿಂತ ಭಿನ್ನವಾಗಿತ್ತು. ಹೊರಡುವ ಮೊದಲು ಚಾಲಕವರ್ಗ ಏನೇನೊ ಸಿದ್ಧತೆ ಮಾಡುತ್ತಿದ್ದುದೆಲ್ಲ ಪ್ರಯಾಣಿಕರಿಗೆ ಕಾಣುತ್ತಿತ್ತು. ಬ್ರಿಡ್ಜ್‌ಟೌನನ್ನು ಬಿಟ್ಟು ವಿಮಾನ ಮೇಲಕ್ಕೆ ಹಾರಿದ ಒಂದು ನಿಮಿಷದಲ್ಲಿಯೇ ಬಾರ್ಬಡಾಸ್ ದ್ವೀಪದ ಪೂರ್ಣ ಚಿತ್ರ ಕಣ್ಣಿಗೆ ಬಿತ್ತು. ವಿಮಾನ ಮುಂದಕ್ಕೆ ಹಾರುತ್ತಿದ್ದಂತೆ ಹೆಜ್ಜೆಯ ಗುರುತಿನ ದ್ವೀಪ ಹಿಂದಕ್ಕೆ ಉಳಿಯಿತು.

ಗಗನದಲ್ಲಿ ಹೋಗುವಾಗ ಮತ್ತೆ ದ್ವೀಪಗಳ ಮಾಲೆ ಕಣ್ಣಿಗೆ ಬೀಳುತ್ತದೆ. ಜೊತೆಗೆ ಈ ವಿಮಾನ ಅಲ್ಲಲ್ಲಿ ದ್ವೀಪಗಳಲ್ಲಿ ಇಳಿದು ಪ್ರಯಾಣಿಕರನ್ನು ಇಳಿಸಿ, ಹತ್ತಿಸಿಕೊಂಡು ಹಾರುತ್ತದೆ. ಹಸಿರು ದ್ವೀಪಗಳು, ಹಸಿರು ನೀರಿನ ಮಾಲೆಗಳಿಂದ ಸುತ್ತುವರಿದ ದೃಶ್ಯಗಳು ಉದ್ದಕ್ಕೂ ಕಣ್ಣಿಗೆ ಬೀಳುತ್ತಲೇ ಇರುತ್ತವೆ. ಅಲ್ಲಲ್ಲಿ ದ್ವೀಪಗಳಲ್ಲಿ ಇಳಿದಾಗ ರೊಯ್ಯ್‌ಗುಡುವ ಬಿರುಗಾಳಿ ಗಿಡಮರಗಳನ್ನು ಬಗ್ಗಿಸಿ, ನಡೆದಾಡುವ ಜನರನ್ನು ನೂಕಿಕೊಂಡು ಹೋಗುವುದನ್ನು ಕಾಣಬಹುದು. ಇಲ್ಲಿಯ ಸಣ್ಣ ದ್ವೀಪಗಳಲ್ಲೂ ವಿಮಾನ ನಿಲ್ದಾಣಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡಿರುವುದು ಆಶ್ಚರ್ಯದ ವಿಷಯ. ಇಲ್ಲೆಲ್ಲ ಪ್ರವಾಸಿಗರು ಸದಾಕಾಲದಲ್ಲೂ ಬಂದು ಹೋಗುವುದರಿಂದ ವಿಮಾನ ನಿಲ್ದಾಣಗಳನ್ನು, ಹೋಟೆಲುಗಳನ್ನು ಸೊಗಸಾಗಿ ಅಭಿವೃದ್ಧಿ ಮಾಡಿದ್ದಾರೆಂದು ಕಾಣಿಸುತ್ತದೆ.

ಟ್ರಿನಿಡಾಡ್‌ನ ಪೋರ್ಟ್ ಆಫ್ ಸ್ಪೇಯ್ನ್ ವಿಮಾನ ನಿಲ್ದಾಣದಲ್ಲಿ ವಿಮಾನ ಬಂದು ಇಳಿದಾಗ ಮಧ್ಯಾಹ್ನ ಸುಮಾರು ಒಂದು ಗಂಟೆಯಾಗಿತ್ತು. ವಿಮಾನದಿಂದ ಇಳಿದು ನಿಲ್ದಾಣದ ಒಳಗೆ ಬರುತ್ತಿದ್ದಂತೆಯೇ ಮಹಡಿಯ ಮೇಲೆ ನಿಂತ ಜನರ ನಡುವೆ ಟ್ರಿನಿಡಾಡ್ ಕ್ಯಾಂಪಸ್‌ನ ಕಾರ್ಯದರ್ಶಿ ಗಿಬ್ಸನ್ ನನ್ನ ಕಡೆಗೆ ಕೈ ಬೀಸುವುದು ಕಾಣಿಸುತ್ತಿತ್ತು. ಈ ಹೊಸ ದ್ವೀಪಗಳಿಗೆ ನಾನು ಬಂದು ಇಳಿದಾಗೆಲ್ಲ ಹೀಗೆ ಕೈಬೀಸಿ ಕರೆಯುವವರು ಯಾರಾದರೂ ಇದ್ದೇ ಇರುತ್ತಿದ್ದರು. ಆದ್ದರಿಂದಲೇ ಹೊಸನಾಡನ್ನು ಪ್ರವೇಶಿಸುವಾಗ ಯಾವುದೇ ಆತಂಕವೂ ನನ್ನನ್ನು ಕಾಡಲಿಲ್ಲ. ಯಾರೂ ಕಾಣದ ಈ ನಾಡಿನಲ್ಲಿ ವಿಮಾನ ಇಳಿಯುವಾಗ ಸ್ವಾಗತಿಸಿ ತಮ್ಮ ವಾಹನದಲ್ಲಿ ಕರೆದುಕೊಂಡು ಬರುವ ಮತ್ತು ವಿಮಾನ ಹತ್ತುವಾಗ ಕಳುಹಿಸಿ ಬೀಳ್ಕೊಡುವ ಜನರಿದ್ದುದರಿಂದಲೇ ಇಲ್ಲಿಯ ನನ್ನ ಪ್ರವಾಸ ಎಷ್ಟೋ ಸುಖಕರವಾಗಿತ್ತು.

ಗಿಬ್ಸನ್ ಅವರು ನನ್ನನ್ನು ಕಂಡು ಕೈಬೀಸಿದಾಗ ಇದ್ದ ಸಂತೋಷ ನಿಲ್ದಾಣದ ಒಳಗಡೆ ಪ್ರವೇಶಿಸಿ, ತೆರಿಗೆ ಅಧಿಕಾರಿಗಳ ಮುಂದೆ ಪರಿಶೀಲನೆಗೆ ನಿಂತಾಗ ಹೊರಟುಹೋಗಿತ್ತು. ಪೆಟ್ಟಿಗೆಯೊಳಗಿನ ಸಣ್ಣಪುಟ್ಟ ಸಾಮಾನುಗಳನ್ನೆಲ್ಲ ಕೊಡವಿ ಹದ್ದಿನ ಕಣ್ಣುಗಳಿಂದ ಅವರು ಹುಡುಕುತ್ತಿದ್ದ ರೀತಿಗೆ ಅವರ ಮೇಲೆ ಕೋಪ ಬರುವುದಕ್ಕಿಂತ ಹೆಚ್ಚಿಗೆ ತೆರಿಗೆಗಳ್ಳರ ಮೇಲೆ ಕೋಪ ಬಂದಿತ್ತು. ನಿಂತ ಸಾಲು ಮುಂದಕ್ಕೆ ಹೋಗುತ್ತಲೆ ಇರಲಿಲ್ಲ. ನನ್ನ ಸರದಿ ಬಂದಾಗ ನನ್ನ ಪಾಸ್‌ಪೋರ್ಟ್ ಇತ್ಯಾದಿಗಳನ್ನು ಪರಿಶೀಲಿಸಿ ನನ್ನ ಕಾರ್ಯದ ವಿವರ ಕೇಳಿದ ತೆರಿಗೆ ಅಧಿಕಾರಿಗಳು ಏನನ್ನೂ ತಡಕಾಡದ ಸುಮ್ಮನೆ ಕಳುಹಿಸಿದರು. ನಮ್ಮ ದೇಶದ ತೆರಿಗೆ ಅಧಿಕಾರಿಗಳನ್ನು ಬಿಟ್ಟರೆ ಉಳಿದ ಕಡೆಯಲ್ಲೆಲ್ಲ ಸಾಮಾನ್ಯವಾಗಿ ನನಗೆ ಇದೇ ಮರ್ಯಾದೆ ಲಭ್ಯವಾಯಿತು. ನನ್ನ ಅದೃಷ್ಟವೋ ಅಥವಾ ನನ್ನ ಮುಖದಲ್ಲಿ ಕಳ್ಳತನ ಮಾಡಲಾರದವನು ಎನ್ನುವ ಪೆದ್ದುತನ ಇತ್ತೊ ಏನೊ, ಯಾವ ವಿಮಾನ ನಿಲ್ದಾಣದಲ್ಲೂ

ತೆರಿಗೆ ಅಧಿಕಾರಿಗಳು ಕಿರುಕುಳ ಕೊಡಲಿಲ್ಲ; ಸೂಕ್ಷ್ಮ ಪರಿಶೀಲನೆಗೆ ಒಳಪಡಿಸಲಿಲ್ಲ. ಎಲ್ಲರ ಸಾಮಾನುಗಳನ್ನು ಸೂಟ್‌ಕೇಸ್‌ನಿಂದ ಕಿತ್ತು ಹರಡಿ, ಶೋಧಿಸುತ್ತಿದ್ದ ಅಧಿಕಾರಿಗಳು ನನ್ನ ಸರದಿ ಬರುತ್ತಿದ್ದಂತೆ "ತೆರಿಗೆ ಹಾಕಬೇಕಾದ ಸಾಮಾನುಗಳು ಏನಿಲ್ಲ ತಾನೆ ?" ಎಂದು ನನ್ನನ್ನೇ ಕೇಳುತ್ತಿದ್ದರು. ನಾನು ಉತ್ತರ ಹೇಳುವ ಮೊದಲೆ "ತೆಗೆದುಕೊಂಡು ಹೊರಡಿ" ಎಂದು ನನ್ನ ಕಾಗದಪತ್ರಗಳನ್ನು ವಾಪಸ್ಸು ಕೊಟ್ಟುಬಿಡುತ್ತಿದ್ದರು. ಈ ಸರದಿ ಬರುವವರೆಗೆ ಕಾಯುವ ಕೆಲಸದಂಥ ಬೇಸರದ ಕೆಲಸ ಬೇರೊಂದಿಲ್ಲ. ತೆರಿಗೆಗಳ್ಳರ ಸಾಲಿನಲ್ಲಿ ನಿಂತು ನಿಂತು ಬೇಸರವಾದಾಗ ಏಕಾದರೂ ಈ ವಿದೇಶ ಪ್ರವಾಸ ಕೈಗೊಂಡೆನೊ ಎನ್ನಿಸುವುದೂ ಉಂಟು.

ಗಿಬ್ಸನ್ ನನ್ನನ್ನು ಕರೆದುಕೊಂಡು ಬಂದು ವಿಶ್ವವಿದ್ಯಾನಿಲಯದ ಕ್ಯಾಂಪಸ್ ಒಳಗಿರುವ ಅತಿಥಿಗೃಹದಲ್ಲಿರಿಸಿದರು. ಸೇಂಟ್ ಆಗಸ್ಟೈನ್ ಎಂದು ಕರೆಯುವ ಈ ಕ್ಯಾಂಪಸ್ ಸುಂದರವಾಗಿದೆ, ಅಚ್ಚುಕಟ್ಟಾಗಿದೆ. ಅತಿಥಿಗೃಹಗಳನ್ನು ಚೆನ್ನಾಗಿ ಇಟ್ಟಿದ್ದಾರೆ. ಆದರೆ ಇಲ್ಲಿಯ ರೂಮಿಗೆ ತೆರಬೇಕಾದ ಬಾಡಿಗೆಯನ್ನು ಕೇಳಿದರೆ ಆದರ ಸೌಂದರ್ಯವೆಲ್ಲ ಮರೆಯಾಗುತ್ತದೆ. ಒಂದು ದಿನಕ್ಕೆ ಸುಮಾರು 300 ರೂ. ಗಿಂತ ಹೆಚ್ಚು. ಈ ಬಾಡಿಗೆ ನಮ್ಮ ದೇಶದಲ್ಲಿ ಯಾವುದೇ ಪಟ್ಟಣದ ಪಂಚತಾರಾ ಹೋಟೆಲಿನ ಹವಾನಿಯಂತ್ರಿತ ರೂಮಿನ ಬಾಡಿಗೆಗಿಂತಲೂ ಹೆಚ್ಚು. ಈ ಅತಿಥಿಗೃಹದ ಬಾಡಿಗೆ ಋತುಮಾನಗಳಿಗೆ ತಕ್ಕಂತೆ ಹೆಚ್ಚುಕಡಿಮೆಯಾಗುತ್ತದೆ ಎಂದು ಕೇಳಿ ನನಗೆ ಇವರ ವ್ಯವಹಾರಬುದ್ಧಿಯ ಬಗ್ಗೆ ಆಶ್ಚರ್ಯವಾಯಿತು. ಈ ಬಗ್ಗೆ ನಾನು ಗಿಬ್ಸನ್ ಅವರನ್ನು ಕೇಳಿದಾಗ, ಹೋಟೆಲಿನಲ್ಲಿ 800 ರೂ. ಕೊಡುವುದಕ್ಕಿಂತ ಇಲ್ಲಿ 300 ರೂ. ಕೊಡುವುದು ಕಡಿಮೆಯಲ್ಲವೆ ಎಂದು ಹೇಳಿದರು. ಸಾಮಾನ್ಯವಾಗಿ ನಾವು ಕೊಡುವ ಹಣದ ಭಾರಕ್ಕಿಂತ ಕಡಿಮೆಯೇ ಇರುವ ಆಹಾರಪದಾರ್ಥಗಳು ಇದ್ದುದರಲ್ಲಿ ಶುದ್ಧವಾಗಿರುತ್ತವೆ. ಇಲ್ಲಿಯ ಕ್ಯಾಂಟೀನ್‌ನಲ್ಲಿ ಎರಡು ಮೊಟ್ಟೆಯ ದೋಸೆ, ನಾಲ್ಕು ಬ್ರೆಡ್ಡಿನ ಚೂರು ಮತ್ತು ಒಂದು ಲೋಟ ಕಾಫಿಗೆ ಸುಮಾರು 28 ರೂಪಾಯಿಗಳು!

ವಿಶ್ವವಿದ್ಯಾನಿಲಯದಲ್ಲಿನ ನನ್ನ ಕಾರ್ಯಕ್ರಮಗಳ ಪಟ್ಟಿಯನ್ನು ಗಿಬ್ಸನ್ ಅವರು ತಲುಪಿಸಿದ್ದರು. ದಿನಕ್ಕೆ ಇಬ್ಬರು ಅಥವಾ ಮೂರು ಜನ ಅಧಿಕಾರಿಗಳನ್ನು ಭೇಟಿ ಮಾಡಿ ಇಲ್ಲಿಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸುವುದು. ಈಗಾಗಲೆ ಸಾಕಷ್ಟು ಜನರನ್ನು ಭೇಟಿ ಮಾಡಿ, ಈ ವಿಶ್ವವಿದ್ಯಾನಿಲಯದ ಎಲ್ಲ ಕಾರ್ಯಚಟುವಟಿಕೆಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಸಿದ್ದರಿಂದ ಮತ್ತೆ ಅವರಲ್ಲಿ ಅಷ್ಟಾಗಿ ಆಸಕ್ತಿ ಇರಲಿಲ್ಲ. ಇದು ಯಾಂತ್ರಿಕವಾಗಿ ನಡೆಯುತ್ತಿತ್ತು. ಆದರೆ ಉಳಿದ ಕಾಲವನ್ನು ಹೇಗೆ ಕಳೆಯುವುದೆಂಬುದೇ ಸಮಸ್ಯೆಯಾಗಿತ್ತು. ಇಲ್ಲಿಗೆ ಬಂದು ಎರಡು ದಿನಗಳಾದರೂ ಕ್ಯಾಂಪಸ್‌ನಿಂದ ಹೊರಗೆ ಹೋಗಿರಲಿಲ್ಲ; ಯಾವ ಭಾರತೀಯನ ಪರಿಚಯವಾಗಿರಲಿಲ್ಲ. ಟ್ರಿನಿಡಾಡ್ ದ್ವೀಪದಲ್ಲಿ ಹೆಚ್ಚು ಹಿಂದೂಗಳು

ನೆಲೆಸಿರುವ ವಿಷಯ ನನಗೆ ಮೊದಲೇ ಪುಸ್ತಕಗಳಿಂದ ತಿಳಿದಿತ್ತು. ಅವರು ಹೇಗಿದ್ದಾರೆ, ಅವರ ಸಾಮಾಜಿಕ ಪರಿಸ್ಥಿತಿಯೇನು ಎಂದು ತಿಳಿಯುವ ಕುತೂಹಲವಿತ್ತು. ಒಬ್ಬ ಹಿಂದೂವನ್ನಾದರೂ ಪರಿಚಯ ಮಾಡಿಕೊಳ್ಳಲೇಬೇಕೆಂದು ನಿರ್ಧರಿಸಿ ಆ ದಿನ ಸಂಜೆ ನಾನೊಬ್ಬನೆ ಹೊರಗೆ ಹೊರಟೆ.

ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನ ದೊಡ್ಡ ದೊಡ್ಡ ಕಟ್ಟಡಗಳ ನಡುವೆ ಅಲ್ಲಿಯ ವಿದ್ಯಾರ್ಥಿಗಳಂತೆಯೇ ಅಡ್ಡದಾರಿಗಳ ಮೂಲಕ ಹಾಯ್ದು ವಿಶ್ವವಿದ್ಯಾನಿಲಯದ ಪ್ರವೇಶ ದ್ವಾರದ ಮೂಲಕ ಹೊರಬಂದೆ. ಕ್ಯಾಂಪಸ್ ಪಕ್ಕದಲ್ಲಿಯೇ ಚರ್ಚಿಲ್-ರೂಸ್‌ವೆಲ್ಟ್ ಹೈವೇ ಜೋಡಿ ರಸ್ತೆ ಇದೆ. ಕಾರುಗಳ ಸಾಲು ಸಾಲು ಹರಿದಾಡುತ್ತವೆ ಈ ರಸ್ತೆಯಲ್ಲಿ. ಪಾದಚಾರಿಗಳ ಸಂಖ್ಯೆ ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಎರಡು-ಮೂರು ಫರ್ಲಾಂಗು ಒಂಟಿಯಾಗಿ ಹೋಗಿ ಹಿಂದಕ್ಕೆ ತಿರುಗಿ ಬಂದೆ. ರಸ್ತೆಯ ಪಕ್ಕದಲ್ಲಿಯೇ ಒಂದು ಸಣ್ಣ ಅಂಗಡಿಯಲ್ಲಿ ಒಬ್ಬಳು ಹುಡುಗಿ ವ್ಯಾಪಾರ ಮಾಡುತ್ತಿದ್ದಳು. ಬಣ್ಣ ಮತ್ತು ಕೇಶರಾಶಿಯಲ್ಲಿ ಆಕೆ ಹಿಂದೂ ಹುಡುಗಿಯಂತಿದ್ದುದನ್ನು ಕಂಡು ವ್ಯಾಪಾರದ ನೆಪದಲ್ಲಿ ಆಕೆಯ ಜೊತೆ ಮಾತಿಗೆ ತೊಡಗಿದೆ. ಬಾಳೆಯ ಹಣ್ಣನ್ನು ಕೊಂಡು, "ನಿಮ್ಮ ಹೆಸರೇನು ?" ಎಂದು ಕೇಳಿದೆ. "ರಾಡಿಕಾ" ಎಂದು ಆಕೆ ಹೇಳಿದಾಗ ನಾನು ಅವಳನ್ನು ತಿದ್ದಿ "ರಾಧಿಕಾ ಅಲ್ಲವೇ" ಎಂದೆ. "ಹೌದು" ಎಂದಳು. "ನೀವು ಹಿಂದೂಗಳೆ ?" "ಹೌದು, ನಮ್ಮ ತಂದೆ ಹಿಂದೂ, ನಮ್ಮ ತಾಯಿ ಮುಸ್ಲಿಂ." "ನಿಮ್ಮ ತಂದೆಯ ಹೆಸರೇನು ?" "ರಾಮ್‌ಜಸ್." ಅಂಗಡಿಯಲ್ಲಿ ಅವಳಿಗಿಂತ ಚಿಕ್ಕವಳಾದ ಇನ್ನೊಬ್ಬ ಹುಡುಗಿಯಿದ್ದಳು. "ಇವಳು ನಿಮ್ಮ ತಂಗಿಯೆ ?" ಎಂದೆ. "ಹೌದು, ಅವಳು ನನ್ನ ತಂಗಿ ಅವಳು ಹಿಂದೂ ಅಲ್ಲ" ಎಂದಳು. ಅವಳ ಒಂದೊಂದು ಉತ್ತರದಿಂದಲೂ ಈ ಹಿಂದೂಗಳ ಬಗ್ಗೆ ನನ್ನ ಕುತೂಹಲ ಬೆಳೆಯುತ್ತಾ ಹೋಯಿತು. ಇಲ್ಲಿಯ ಹಿಂದೂಗಳ ಬಗ್ಗೆ ಅನೇಕ ಸಂಶಯಗಳು ಮೂಡಿದುವು. ಇದನ್ನೆಲ್ಲ ಸಂಶೋಧಿಸಬೇಕೆಂಬ ಆಸಕ್ತಿ ಮತ್ತಷ್ಟು ಹೆಚ್ಚಾಯಿತು. ಅಂಗಡಿಗೆ ಸೇರಿದಂತೆ ಇದ್ದ ಮನೆಯೇ ಇವರ ವಾಸದ ಮನೆಯೆಂದು ತಿಳಿಯಿತು.

ಈ ಹುಡುಗಿಯ ತಂದೆ ರಾಮ್‌ಜಸ್ (ರಾಮ್‌ಯಶ್) ಆಗ ಮನೆಯಲ್ಲಿ ಇಲ್ಲದ್ದರಿಂದ, ಆಕೆಗೆ ನನ್ನ ಪರಿಚಯ ಹೇಳಿ, ನಾಳೆ ಸಂಜೆ ಅವಳ ತಂದೆಯನ್ನು ನೋಡಲು ಬರುವುದಾಗಿ ಹೇಳಿ ಅತಿಥಿಗೃಹದ ನನ್ನ ಕೊಠಡಿಗೆ ವಾಪಸ್ ಬಂದೆ. ಮಾರನೆಯ ದಿನ ಮತ್ತೆ ರಾಮ್‌ಜಸ್ ಅವರ ಮನೆಯ ಅಂಗಡಿಯಲ್ಲಿ ಕುಮಾರಿ ರಾಧಿಕಾಳೇ ಇದ್ದಳು. ನನ್ನ ಮುಖ ಕಂಡಕೂಡಲೆ ಆಕೆಯೇ ನನ್ನನ್ನು ಮನೆಯ ಪಕ್ಕಕ್ಕೆ ಕರೆನುಕೊಂಡು ಬಂದು, ಕಾರಿನ ರಿಪೇರಿಯಲ್ಲಿ ತೊಡಗಿದ್ದ ರಾಮ್‌ಜಸ್ ಅವರಿಗೆ ನನ್ನ ಪರಿಚಯ ಮಾಡಿದಳು. ರಾಮ್‌ಜಸ್ ನಾನೂ ಭಾರತದ ಹಿಂದೂ ಎಂಬುದನ್ನು ಕೇಳಿ ಬಹು ಸಂಭ್ರಮದಿಂದ ಮೇಲೆದ್ದು ಬಂದು ಕೈಜೋಡಿಸಿ ನಮಸ್ಕರಿಸಿದರು.

ನನ್ನನ್ನು ಮನೆಯ ಮುಂದಣ ಕುರ್ಚಿಯಲ್ಲಿ ಕುಳಿತುಕೊಳ್ಳುವಂತೆ ಹೇಳಿ ನನ್ನ ಬಗ್ಗೆ ಆಸಕ್ತಿಯಿಂದ ವಿಚಾರಿಸಿಕೊಂಡರು. ನಾನು ಟ್ರಿನಿಡಾಡ್ ಹಿಂದೂಗಳ ಜೀವನ, ಸಂಪ್ರದಾಯಗಳ ಬಗ್ಗೆ ತಿಳಿಯಲು ಆಸಕ್ತನಾಗಿ ಬಂದಿದ್ದೇನೆ, ನೀವೇ ನನಗೆ ಮೊದಲು ಭೇಟಿಯಾದ ಟ್ರಿನಿಡಾಡ್ ಹಿಂದೂ ಎಂದು ಹೇಳಿದೆ. ರಾಮ್‌ಜಸ್ ನಮ್ಮ ಭಾರತದ ಹಿಂದೂವಿನಂತೆಯೇ ''ನನ್ನಂಥ ಸಾಮಾನ್ಯನ ಹತ್ತಿರಕ್ಕೆ ತಾವು ಬಂದಿರುವಾಗ ಇದು ನನಗೆ ದೊಡ್ಡ ಗೌರವವೆಂದೇ ಭಾವಿಸುತ್ತೇನೆ. ನೀವು ಯಾವಾಗಲಾದರೂ ಬನ್ನಿ, ಇಲ್ಲಿಯ ಹಿಂದೂಗಳ ವಿಷಯ ಹೇಳುತ್ತೇನೆ. ನಾವಿಬ್ಬರೂ ಹಿಂದೂಗಳೇ ಆಗಿರುವುದರಿಂದ ಬಂಧುಗಳೇ ಆದಂತಾಯಿತು" ಎಂದು ವಿನಯದ ಮಾತನ್ನಾಡಿದರು.

ರಾಮ್‌ಜಸ್ ಅವರಿಗೆ ಸುಮಾರು 50 ವರ್ಷ ವಯಸ್ಸಾಗಿರಬಹುದು. ಅವರು ವಿಮಾನನಿಲ್ದಾಣದಲ್ಲಿ ಒಂದು ಸಾಮಾನ್ಯ ಕೆಲಸದಲ್ಲಿದ್ದಾರೆ. ಅವರ ಇಬ್ಬರು ತಮ್ಮಂದಿರಾದ ಹೇರಾಮನ್ ಮತ್ತು ಪಾಲ್ ಅವರುಗಳೂ ಕೆಲಸದಲ್ಲಿದ್ದಾರೆ. ಹೇರಾಮನ್ ಸರ್ಕಾರಿ ಬಸ್ ಚಾಲಕರಾಗಿದ್ದಾರೆ. ಪಾಲ್ ದೊಡ್ಡ ಹೋಟೆಲೊಂದರಲ್ಲಿ ಮೇಲ್ವಿಚಾರಕರಾಗಿದ್ದಾರೆ. ಈ ಮೂರು ಸೋದರರಿಗೂ ಮೂರು ಕಾರುಗಳಿವೆ. ಅವರು ಪ್ರತಿದಿನ ತಮ್ಮ ಕಾರುಗಳಲ್ಲಿಯೇ ಕಛೇರಿಗೆ ಹೋಗಿಬರುತ್ತಾರೆ.

ರಾಮ್‌ಜಸ್ ಅವರ ಅಜ್ಜ–ಅವರ ಹೆಸರು ರಾಮ್‌ಜಸ್‌ರಿಗೆ ಸರಿಯಾಗಿ ತಿಳಿಯದು–1845ರಲ್ಲಿ ಭಾರತದಿಂದ ಈ ದ್ವೀಪಕ್ಕೆ ಹಡಗಿನಲ್ಲಿ ಬಂದರಂತೆ. ಬ್ರಿಟಿಷರು ಇಲ್ಲಿಯ ಪ್ಲಾಂಟೇಶನ್‌ಗಳಲ್ಲಿ ಕೆಲಸಮಾಡಲು ಭಾರತದಿಂದ ಅನೇಕ ಜನರನ್ನು ಹಡಗಿನಲ್ಲಿ ತುಂಬಿಕೊಂಡು ಬಂದರಂತೆ. ಭಾರತದ ಯಾವ ಪ್ರದೇಶಕ್ಕೆ ತಮ್ಮ ಅಜ್ಜ ಸೇರಿದವರೆಂದು ನಿಖರವಾಗಿ ರಾಮ್‌ಜಸ್ ಅವರಿಗೆ ತಿಳಿಯದು. ಆದರೆ ಇವರೆಲ್ಲ ಹೆಚ್ಚಾಗಿ ಅಲ್ಪಸ್ವಲ್ಪ ಹಿಂದಿ ಪದಗಳನ್ನು ಬಳಸುವುದರಿಂದ ಇವರೆಲ್ಲ ಹೆಚ್ಚಾಗಿ ಉತ್ತರ ಭಾರತದಿಂದ ಬಂದವರಿರಬೇಕೆನ್ನಿಸುತ್ತದೆ. ಭಾರತದಲ್ಲಿ ಈಗ ಯಾರೂ ತಮ್ಮ ಸಂಬಂಧಿಕರು ಇಲ್ಲ ಎಂದು ರಾಮ್‌ಜಸ್ ಹೇಳಿದರು.

ಈ ಸಂದರ್ಭದಲ್ಲಿ ರಾಮ್‌ಜಸ್ ಹೇಳಿದ ಒಂದು ಸ್ವಾರಸ್ಯ ಘಟನೆ ನನಗೆ ಮರೆಯಲಾಗಲಿಲ್ಲ. ಇವರಿಗೆ ಹತ್ತಿರದ ಸ್ನೇಹಿತರಾದ ಒಬ್ಬ ಟ್ರಿನಿಡಾಡ್‌ನ ಹಿಂದೂ ಭಾರತದಲ್ಲಿ ತಮ್ಮ ಹಿರಿಯರ ಹಳ್ಳಿಯನ್ನೂ ಮತ್ತು ಅವರ ವಂಶದವರನ್ನೂ ನೋಡುವ ಮಮತೆಯಿಂದ ಭಾರತಕ್ಕೆ ಹೋಗಿದ್ದರು. ಅವರು ಹೇಗೋ ತಮ್ಮ ಅಜ್ಜಂದಿರ ಹಳ್ಳಿಯನ್ನು ಪತ್ತೆಹಚ್ಚಿ, ಅಜ್ಜಂದಿರ ಮೊಮ್ಮಕ್ಕಳನ್ನು ನೆರೆಹೊರೆಯವರ ಸಹಾಯದಿಂದ ಪತ್ತೆಹಚ್ಚಿಕೊಂಡು ಹೋದರು. ಮನೆಯ ಬಾಗಿಲಿಗೆ ಹೋದ ತಕ್ಷಣ ಆ ಮೊಮ್ಮಕ್ಕಳು, ಇವರೆಲ್ಲ ಆಸ್ತಿಯ ಪಾಲಿಗೆ ಬಂದವರೆಂದು ಭಾವಿಸಿ, ನಿಮ್ಮಜ್ಜಂದಿರ ವಂಶದವರು ಈಗ ಯಾರೂ ಇಲ್ಲ, ಅವರ ಆಸ್ತಿಪಾಸ್ತಿಯೆಲ್ಲ ಮಾರಿಬಿಟ್ಟರು ಎಂಬುದಾಗಿ ಹೇಳತೊಡಗಿದರಂತೆ. ಪಾಪ! ಇವರು ಇಂಥ ದುರಾಶಾಪೀಡಿತ ಸ್ವಾರ್ಥಿ ಹಿಂದೂಗಳನ್ನು ತನ್ನ ವಂಶದವರೆಂದು ನೋಡಲು ಇಷ್ಟಪಡದೆ ಹಿಂದಕ್ಕೆ

ಬಂದರಂತೆ. ಭಾರತಕ್ಕೆ ತಮ್ಮ ಹಿರಿಯರ ವಂಶಜರನ್ನು ನೋಡಲು ಹೋಗಿ ನಿರಾಶರಾಗಿ ಹಿಂದಿರುಗುವುದಕ್ಕಿಂತ ರಾಮ್‌ಜಸ್‌ರವರಿಗೆ ಯಾರೂ ಭಾರತದ ಬಂಧುಗಳು ಇಲ್ಲದ್ದೇ ಒಳ್ಳೆಯದಾಯಿತೇನೋ !

ಈಗ ರಾಮ್‌ಜಸ್ ಅವರ ಮನೆಯಿರುವ ಜಾಗವನ್ನು ಸುಮಾರು 50 ವರ್ಷಗಳ ಹಿಂದೆಯೇ ಇವರ ತಂದೆ ದಿವಂಗತ ಕಿಷನ್‌ದೇವ್ ಅವರು ಕೊಂಡಿದ್ದರಂತೆ. ಈಗ ಸುಮಾರಾಗಿ ದೊಡ್ಡ ಮನೆಯನ್ನೇ ಕಟ್ಟಿದ್ದಾರೆ. ಹೆದ್ದಾರಿಯ ಪಕ್ಕದಲ್ಲಿಯೇ ಇರುವ ಮನೆಯ ಮುಂದೆ ಹಣ್ಣು ಮತ್ತು ಚಿಲ್ಲರೆ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಇಲ್ಲಿಯ ವ್ಯಾಪಾರ ರಾಮ್‌ಜಸ್ ಅವರ ಮಗಳು ಕುಮಾರಿ ರಾಧಿಕಾಳದು. ವಿಶ್ವವಿದ್ಯಾನಿಲಯಕ್ಕೆ ಸಮೀಪದಲ್ಲಿಯೇ ಇರುವುದರಿಂದ ಇಲ್ಲಿ ಒಳ್ಳೆಯ ವ್ಯಾಪಾರ ನಡೆಯುತ್ತದೆ. ಅಲ್ಲದೆ ರಾಮ್‌ಜಸ್ ಅವರ ಹೆಂಡತಿ ವಿದ್ಯಾರ್ಥಿಗಳಿಗಾಗಿ ಒಂದು ಊಟದ ಹೋಟೆಲು ನಡೆಸುತ್ತಿದ್ದಾರೆ. ಇವರ ಮನೆಯ ಮುಂದೆ ಇರುವ ಒಂದೇ ಒಂದು ಬೋರ್ಡು ಎಂದರೆ "ಇಲ್ಲಿ ಪೂಜಾಸಾಮಾನುಗಳು ದೊರೆಯುತ್ತವೆ" ಎಂಬುದು.

ರಾಮ್‌ಜಸ್ ಇಲ್ಲಿಯ ಎಲ್ಲ ಹಿಂದೂಗಳಂತೆ ಶ್ರೀರಾಮನ ಭಕ್ತರು. ಇಲ್ಲೆಲ್ಲ ವಿಶೇಷವಾಗಿ ನಡೆಯುವ ಪೂಜಾ ಉತ್ಸವವೆಂದರೆ ಶ್ರೀರಾಮೋತ್ಸವ. ತುಂಬಾ ವಿಜೃಂಭಣೆಯಿಂದ ಎಲ್ಲಾ ಹಿಂದೂಗಳೂ ಇದನ್ನು ಸಾಮೂಹಿಕವಾಗಿ ಮತ್ತು ಕೌಟುಂಬಿಕವಾಗಿ ಆಚರಿಸುತ್ತಾರೆ. ಹಳೆಯ ತಲೆಮಾರಿಗೆ ಸೇರಿದ ಜನರಂತೂ ಭಕ್ತಿಯಿಂದ ಶ್ರೀರಾಮನ ಪೂಜೆ ಮಾಡುತ್ತಾರೆ.

ರಾಮ್‌ಜಸ್ ರವರ ಮೊದಲ ಹೆಂಡತಿ ಎರಡು ಹೆಣ್ಣು ಮಕ್ಕಳನ್ನು ಬಿಟ್ಟು ತೀರಿಹೋದಮೇಲೆ ಅವರು ವಿಧವೆಯಾಗಿದ್ದ ಶ್ರೀಮತಿ ಬರ್ನಿಸ್ ಅವರನ್ನು ಮದುವೆಯಾದರಂತೆ. ಆಕೆ ಮುಸ್ಲಿಂ ವಂಶದಲ್ಲಿ ಹುಟ್ಟಿ, ಕ್ರೈಸ್ತಮತಸ್ಥನನ್ನು ಮದುವೆಯಾಗಿದ್ದರಂತೆ. ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದ ಈಕೆ ವಿಧುರರಾದ ರಾಮ್‌ಜಸ್ ಅವರನ್ನು ಕಂಡು ಅವರ ಕಟ್ಟುನಿಟ್ಟಿನ ಹಿಂದೂ ಸಂಪ್ರದಾಯಕ್ಕೆ ಮಾರುಹೋಗಿ ಅವರನ್ನು ಪುನರ್‌ವಿವಾಹ ಮಾಡಿಕೊಂಡರಂತೆ. ಈಗ ಶ್ರೀಮತಿ ಬರ್ನಿಸ್ ಪಕ್ಕಾಹಿಂದೂ ಸ್ತ್ರೀಯಂತೆ ಜೀವನ ಸಾಗಿಸುತ್ತಾರೆ. ಹಿಂದೂ ಧರ್ಮದ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಪರಿಪಾಲಿಸುತ್ತಾರೆ. ಈಕೆಗೆ ಮೊದಲ ಕ್ರೈಸ್ತ ಗಂಡನಲ್ಲಿ ಹುಟ್ಟಿದ ಒಬ್ಬಳು ಮಗಳಿದ್ದಾಳೆ. ರಾಮ್‌ಜಸ್ ಅವರಿಗೆ ಹಿರಿಯ ಹೆಂಡತಿಯಲ್ಲಿ ಹುಟ್ಟಿದ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ರಾಮಜಸ್ ಮತ್ತು ಬರ್ನಿಸ್ ಅವರಿಗೆ ಹುಟ್ಟಿದ ಎರಡು ಸಣ್ಣ ಮಕ್ಕಳಿವೆ. ಇವರೆಲ್ಲರನ್ನೂ ಬರ್ನಿಸ್ ಸಮಾನವಾಗಿ ಕಾಣುವುದು ಒಂದು ಅಚ್ಚರಿಯ ಸಂಗತಿ. ಈಕೆ ಮಲತಾಯಿಯಾಗಿ, ವಿಭಿನ್ನ ಧರ್ಮಗಳ ಕುಟುಂಬದ ಸದಸ್ಯೆಯಾಗಿ ಅಪಾರ ಸಹನೆ, ಜಾಣ್ಮೆಗಳನ್ನು ಮೈಗೂಡಿಸಿಕೊಂಡಿದ್ದಾರೆ.

ರಾಮ್‌ಜಸ್ ಅವರು ಪೂರ್ಣ ಶಾಖಾಹಾರಿಗಳು, ದೈವಭಕ್ತರು. ಹಿಂದೂ ಧರ್ಮದಲ್ಲಿ ಅವರಿಗೆ ಅಪಾರ ಶ್ರದ್ಧೆ ಮತ್ತು ನಂಬಿಕೆ. ಅವರ ಮನೆಯಲ್ಲಿ ಪ್ರತ್ಯೇಕವಾದ ದೇವರ ದೊಡ್ಡ ಕೋಣೆಯಿದೆ. ಅಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣ, ಆಂಜನೇಯರ, ಶಿವಪಾರ್ವತಿಯರ, ಇನ್ನೂ ಅನೇಕ ಹಿಂದೂ ದೇವತೆಗಳ ಪಟಗಳಿವೆ. ಪೂಜೆಗೆ ಬೇಕಾದ ಸಾಮಗ್ರಿಗಳೂ ರಾಮಾಯಣ, ಮಹಾಭಾರತದ ಹಿಂದಿ, ಇಂಗ್ಲಿಷ್ ಗ್ರಂಥಗಳೂ ಇಲ್ಲಿವೆ. ಪೂಜಾಸಾಮಗ್ರಿಗಳನ್ನು ಹಿಂದೂಗಳಿಗೆ ಮಾರಾಟ ಮಾಡುತ್ತಾರೆ. ಶ್ರೀರಾಮನವಮಿ ಕಾಲದಲ್ಲಿ ರಾಮ್‌ಜಸ್ ಅವರದು ಕಟ್ಟುನಿಟ್ಟಿನ ಆಚರಣೆ. ಆಗ ರಾಮನವಮಿ ಪ್ರಾರಂಭವಾಗಿದ್ದುದರಿಂದ ಅವರು ಉಪ್ಪು ಖಾರ ಹಾಕಿದ ಆಹಾರವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಹಣ್ಣು, ಬರಿಯ ಅನ್ನ, ಬೇಯಿಸಿದ ಸಪ್ಪೆ ತರಕಾರಿ ಅವರ ಆಗಿನ ಆಹಾರವಾಗಿತ್ತು.

ರಾಮನವಮಿಯ ಸಮಯ ಈ ಟ್ರಿನಿಡಾಡ್ ಹಿಂದೂಗಳಿಗೆ ಸಂಭ್ರಮದ ಕಾಲ. ಎಲ್ಲೆಲ್ಲೂ ರಾಮಾಯಣ ಪಾರಾಯಣದ ಸಮಾರಂಭಗಳು ನಡೆಯುತ್ತವೆ. ಅಂತಹ ಸಮಾರಂಭಗಳಿಗೆ ಹಿಂದೂಗಳು ಆಹ್ವಾನವಿಲ್ಲದೆ ಸೇರುತ್ತಾರೆ. ಇಂತಹ ಒಂದೆರಡು ಸಮಾರಂಭಗಳಿಗೆ ರಾಮ್‌ಜಸ್ ನನ್ನನ್ನು ಕರೆದುಕೊಂಡು ಹೋಗಿದ್ದರು. ಪ್ರತಿ ಶುಕ್ರವಾರ ರಾಮ್‌ಜಸ್ ಅವರ ಮನೆಯಲ್ಲೂ ವಿಶೇಷವಾದ ರಾಮ ಪೂಜೆ ನಡೆಯುತ್ತದೆ. ರಾಮ್‌ಜಸ್ ಅವರು ಹಿಂದೂಗಳು ಬಂದಾಗ ಕೈ ಕುಲುಕದೆ, ಕೈ ಜೋಡಿಸಿ ಮುಗಿಯುವ ಸಂಪ್ರದಾಯ ಪಾಲಿಸಿಕೊಂಡು ಬಂದಿದ್ದಾರೆ. ಅವರ ಮನೆಯ ಹಿರಿಯರೂ, ಮಕ್ಕಳೂ ಕೈಮುಗಿಯುವ ರೂಢಿ ಬೆಳೆಸಿಕೊಂಡಿದ್ದಾರೆ. ಇವರ ಮನೆಯಲ್ಲಿ ಕೆಲಸ ಮಾಡುವವರೂ 'ರಾಮ್ ರಾಮ್' ಎಂದು ಹೇಳಿ ಕೈ ಮುಗಿಯುತ್ತಾರೆ. ನಾನು ಇಲ್ಲಿದ್ದ ಸಮಯದಲ್ಲಿ ಅವರ ಮನೆಗೆ ಹೋದಾಗ ಲಂಗಧಾರಿಗಳಾದ ಹೆಂಗಸರೂ 'ರಾಮ್ ರಾಮ್' ಅಂತ ಹೇಳುತ್ತಾ ಕೈ ಮುಗಿಯುತ್ತಿದ್ದುದನ್ನು ಕಂಡು ಅವರ ವೇಷಭೂಷಣಕ್ಕೂ ಆಚರಣೆಗೂ ಏನೂ ಹೊಂದಾಣಿಕೆಯಿಲ್ಲವಲ್ಲ ಎನ್ನಿಸುತ್ತಿತ್ತು. ಇದು ನಾನು ಬೆಳೆದ ಪರಿಸರದ ಫಲವಿರಬಹುದು.

ರಾಮ್‌ಜಸ್ ಅವರಿಗೂ ನನಗೂ ಹಿಂದೂಧರ್ಮ ಬಾಂಧವ್ಯ ಬೆಳೆಸಿತು. ಅದು ಕೇವಲ ಧರ್ಮದ ಮಟ್ಟದಲ್ಲಿಯೇ ನಿಲ್ಲದೆ ಕುಟುಂಬದ ಸದಸ್ಯನೋ ಎಂಬ ವಿಶ್ವಾಸದ ಮಟ್ಟಕ್ಕೆ ಹೋಗಿತ್ತು. ನಾನು ಅವರ ಜೊತೆಯಲ್ಲಿದ್ದಾಗ ನನ್ನನ್ನು ಬಿಟ್ಟು ಅವರು ಊಟ ಮಾಡುತ್ತಿರಲಿಲ್ಲ. ನಾನು ಏನಾದರೂ ಅವರ ಜೊತೆಯಲ್ಲಿ ತೆಗೆದುಕೊಳ್ಳಲೇ ಬೇಕಿತ್ತು. ಅವರಿಲ್ಲದಿದ್ದಾಗ ಅವರ ಮಕ್ಕಳೂ ಏನನ್ನೂ ಕೊಡದೆ ವಾಪಸ್ಸು ಕಳುಹಿಸುತ್ತಿರಲಿಲ್ಲ. ಹಣ್ಣು, ತಂಪು ಪಾನೀಯವನ್ನಾದರೂ ತೆಗೆದುಕೊಳ್ಳಬೇಕಿತ್ತು. ಒಂದು ದಿನ ಮಧ್ಯಾಹ್ನ ಅವರ ಮನೆಗೆ ಹೋದಾಗ ಅವರ ಮಗಳು ರಾಧೀಕಾ ಅಂಗಡಿಯಲ್ಲಿದ್ದಳು. ಬಾಳೆಹಣ್ಣು ತೆಗೆದುಕೊಂಡು ದುಡ್ಡು ಕೊಡಲು ಹೋದಾಗ ಆಕೆ

ದುಡ್ಡು ತೆಗೆದುಕೊಳ್ಳಲು ನಿರಾಕರಿಸಿದಳು. ಇದು ವ್ಯಾಪಾರ, ಹಣ ತೆಗೆದುಕೊ ಎಂದು ನಾನು ಎಷ್ಟು ಹೇಳಿದರೂ ಆಕೆ ಕೇಳಲಿಲ್ಲ. ನೀವು ಗಿರಾಕಿಗಳಲ್ಲ, ನಮ್ಮ ಮನೆಯ ಅತಿಥಿಗಳು, ನೀವು ಹಣಕೊಡುವುದಿದ್ದರೆ ಹಣ್ಣನ್ನು ವಾಪಸ್ಸುಕೊಡಿ ಎಂದು ಬಿಟ್ಟಳು.

ರಾಮ್‌ಜಸ್ ಅವರ ಕೊನೆಯ ತಮ್ಮ ಹೇರಾಮನ್ ಅವರಿಗೆ ಇನ್ನೂ ಮದುವೆಯಾಗಿಲ್ಲ. ಸಿಕ್ಕಿದಾಗೆಲ್ಲ ನನ್ನ ಜೊತೆ ದೀರ್ಘ ಚರ್ಚೆಗೆ ತೊಡಗುತ್ತಿದ್ದ. ಈತನಿಗೂ ಹಿಂದೂಧರ್ಮದಲ್ಲಿ ಮತ್ತು ತಾತ್ವಿಕ ಚಿಂತನೆಯಲ್ಲಿ ಆಸಕ್ತಿ ಹೆಚ್ಚು. ರಾಮಾಯಣ, ಮಹಾಭಾರತದ ಸಂಗತಿಗಳ ಬಗ್ಗೆ ಹೊಸ ಹೊಸ ವ್ಯಾಖ್ಯಾನಗಳನ್ನು ಈತ ಆಗಾಗ ಹೇಳುತ್ತಿದ್ದ. ಬಸ್ ಚಾಲಕನಾಗಿ ಈತ ಇಷ್ಟು ಸೂಕ್ಷ್ಮ ವಿಚಾರಗಳನ್ನು ಹೇಗೆ ಗ್ರಹಿಸಿದ್ದಾನೆ ಎಂದು ನಾನು ಅಚ್ಚರಿ ಪಡುತ್ತೇನೆ. ಆತ ಹೇಳಿದ ಒಂದು ಪ್ರಸಂಗ ಇದು: ಸೀತೆ ಲಂಕೆಯ ಅಶೋಕವನದಲ್ಲಿದ್ದಾಗ ಹನುಮಂತ ಆಕೆಗೆ ಶ್ರೀರಾಮ ಮುದ್ರಿಕೆಯನ್ನು ಕೊಡಲೋಸುಗ ಲಂಕೆಗೆ ಹೋಗಿದ್ದನಷ್ಟೆ. ಆ ಸಂದರ್ಭದಲ್ಲಿ ಹನುಮಂತ ಲಂಕೆಯನ್ನು ಸುಟ್ಟಾಗ, ಅಲ್ಲಿಯ ರಾಕ್ಷಸರು ಬೆಂಕಿಯಲ್ಲಿ ಸುಟ್ಟು ಕರಿಯ ಜನಾಂಗವಾದ ನೀಗ್ರೋಗಳಾದರು. ಈ ನೀಗ್ರೋಗಳು ರಾವಣನ ಸಂತತಿಯವರೆಂಬುದು ಈತನ ವ್ಯಾಖ್ಯಾನ.

ಹೇರಾಮನ್ ಹತ್ತಿರ ಒಂದು ಸೊಗಸಾದ ಕಾರು ಇದೆ. ನಮ್ಮ ದೇಶದಲ್ಲಿ ಮಂತ್ರಿಗಳ ಹತ್ತಿರವೂ ಇಂತಹದು ಇರುತ್ತದೋ ಎಂಬ ಸಂಶಯವಿದೆ. ಒಳಗೆ ರೇಡಿಯೋ, ಟೇಪ್‌ರೆಕಾರ್ಡರ್, ಫ್ಯಾನು, ಹವಾನಿಯಂತ್ರಣ ಮೊದಲಾದ ಎಲ್ಲ ಸೌಕರ್ಯಗಳೂ ಇವೆ. ಈತ ತನ್ನ ಸ್ವಂತ ಕಾರಿನಲ್ಲಿ ಹೋಗಿ ಸರ್ಕಾರಿ ಬಸ್‌ನಲ್ಲಿ ಚಾಲಕನಾಗಿ ಕೆಲಸಮಾಡಿ ಬರುತ್ತಾನೆ. ಹಳೆ ಬಟ್ಟೆ ಹಾಕಿಕೊಂಡು ಪ್ರತಿದಿನ ಬೆಳಗ್ಗೆ ತನ್ನ ಕಾರನ್ನು ಚೊಕ್ಕಟ ಮಾಡುತ್ತಾನೆ. ಈತನಿಗೆ ಪುಸ್ತಕ ಓದುವ ಹವ್ಯಾಸವೂ ಇದೆ. ಧರ್ಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಾನೆ. ಭಾರತದಲ್ಲಿ ಹಿಂದೂ ಹುಡುಗಿಯನ್ನು ಮದುವೆಯಾಗುವ ಆಸೆ ಈತನಿಗೆ.

ವಿಶ್ವವಿದ್ಯಾನಿಲಯದ ಟ್ರಿನಿಡಾಡ್ ಕ್ಯಾಂಪಸ್‌ನಲ್ಲಿ ಅನೇಕ ಭಾರತೀಯರು ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲ ಕೆಲಸಕ್ಕಾಗಿ ಇಲ್ಲಿಗೆ ಬಂದು ನೆಲೆಸಿದವರು. ಇವರೆಲ್ಲ ಸ್ವಲ್ಪಕಾಲವಿದ್ದು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡು ಭಾರತಕ್ಕೆ ಹಿಂದಿರುಗುವ ಆಸೆಯುಳ್ಳವರು. ಭಾರತದಿಂದ ನನ್ನಂತೆ ಅಲ್ಪಕಾಲದ ಭೇಟಿಗಾಗಿ ಬರುವ ಜನರ ಬಗ್ಗೆ ಇವರಲ್ಲಿ ಕೆಲವರಿಗೆ ನಿಜವಾದ ಪ್ರೀತಿ, ಅಭಿಮಾನ ಇರುತ್ತದೆ. ಅಂಥವರು ಆತ್ಮೀಯತೆಯಿಂದ ಆಹ್ವಾನಿಸಿ ವಿಶ್ವಾಸ ತೋರಿಸುತ್ತಾರೆ. ಮತ್ತೆ ಕೆಲವರು ವಿಶ್ವಾಸದಿಂದ ಮಾತಾಡಿದರೆ ನಮಗೆಲ್ಲಿ ಹೊರೆಯಾದಾರೋ ಎಂಬ ಭಾವನೆಯಿಂದ ಪರಿಚಯವಾದರೂ ಮಾತಿಗೆ ತೊಡಗದೆ ದೂರವಾಗಿಯೆ ನಿಲ್ಲುತ್ತಾರೆ. ಅಂಥ ಒಂದೆರಡು ಜನರ ಪರಿಚಯವೂ ನನಗಾಯಿತು.

ನಾನು ಜನ್ವೈಕಾದಲ್ಲಿದ್ದಾಗ ಬಾರ್ಬಡಾಸ್ ಕ್ಯಾಂಪಸ್‌ನಲ್ಲಿ ನ್ಯಾಯಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಮೇನನ್ ಎಂಬುವರು ಯಾವುದೋ ಸಮಿತಿಯಲ್ಲಿ ಭಾಗವಹಿಸುವುದಕ್ಕಾಗಿ ಬಂದಿದ್ದರು. ರಾಬಿನ್‌ಸನ್ ಅವರ ಮನೆಯ ಭೋಜನದ ಸಂದರ್ಭದಲ್ಲಿ ನನಗೆ ಅವರ ಪರಿಚಯವಾಯಿತು. ಈ ದ್ವೀಪಗಳಲ್ಲಿ ದಕ್ಷಿಣ ಭಾರತದವರು ಕಡಿಮೆಯಿರುವುದರಿಂದ ನಾನು ನೆರೆಯ ರಾಜ್ಯದವರಾದ ಮೆನನ್ ಅವರನ್ನು ವಿಶ್ವಾಸದಿಂದಲೇ ಮಾತನಾಡಿಸಿದರೂ ಆತ ತೀರ ಅನ್ಯಮನಸ್ಕನಾಗಿಯೇ ಉತ್ತರಿಸುತ್ತಿದ್ದರು. ನಾನು ಬಾರ್ಬಡಾಸ್ ದ್ವೀಪಕ್ಕೆ ಬರುವ ವಿಷಯ ತಿಳಿಸಿ, ಅಲ್ಲಿಯ ಕಾರ್ಯದರ್ಶಿಗೆ ನನ್ನ ಕಾರ್ಯಕ್ರಮದ ಬಗ್ಗೆ ವಿಷಯ ತಿಳಿಸಬೇಕೆಂದು ಅವರನ್ನು ನಾನು ಕೇಳಿಕೊಂಡಾಗ, ಆತ ನಿರ್ದಾಕ್ಷಿಣ್ಯವಾಗಿ ಅದು ಸಾಧ್ಯವಾಗದ ಕೆಲಸವೆಂದರು. ನಾನು ಬಾರ್ಬಡಾಸ್ ದ್ವೀಪದಲ್ಲಿ ಇದ್ದಾಗ ಒಂದು ದಿನವಾದರೂ ದೂರವಾಣಿಯ ಮೂಲಕವಾದರೂ ಮಾತನಾಡಿಸುವ ಸೌಜನ್ಯ ತೋರಲಿಲ್ಲ. ಅದೇ ನ್ಯಾಯಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಚೌಧರಿ ನನ್ನನ್ನು ಹುಡುಕಿಕೊಂಡು ಬಂದು ವಿಶ್ವಾಸದಿಂದ ಮಾತನಾಡಿಸಿದರು. ಚೌಧರಿ ಉತ್ತರ ಭಾರತದವರು.

ನನ್ನ ಆಗಮನದ ವಿಷಯ ತಿಳಿದು ನನ್ನನ್ನು ಭೇಟಿಯಾಗಲು ಪತ್ರ ಬರೆದೋ, ದೂರವಾಣಿಯ ಮೂಲಕವೊ ಅನೇಕ ಭಾರತೀಯರು ವಿಚಾರಿಸಿದರು. ಅವರು ದೂರವಾಣಿಯ ಮೂಲಕ ನನ್ನ ಸಮಯವನ್ನು ತಿಳಿದುಕೊಂಡು ವಿಶ್ವವಿದ್ಯಾನಿಲಯದಲ್ಲಿ ನನಗೆ ಕೊಟ್ಟಿದ್ದ ರೂಮಿಗೆ ಬಂದು ಮಾತನಾಡಿಸಿ, ವಿಶ್ವಾಸದಿಂದ ತಮ್ಮ ಮನೆಗಳಿಗೆ ಆಹ್ವಾನಿಸುತ್ತಿದ್ದರು. ನಮ್ಮ ನಮ್ಮ ಊರುಗಳಲ್ಲಿದ್ದರೆ ಈ ವಿಶ್ವಾಸ ಮೂಡುತ್ತಿತ್ತೊ ಇಲ್ಲವೊ ಕಾಣೆ. ಆದರೆ ಈ ದೂರದ ನಾಡಿನಲ್ಲಿ ನಮ್ಮ ದೇಶದಲ್ಲಿ ನಾವೆಷ್ಟೇ ದೂರದ ರಾಜ್ಯಗಳವರಾದರೂ ಹತ್ತಿರವಾಗಿ ಬಿಡುತ್ತಿದ್ದೆವು, ಒಂದೇ ಊರಿನವರೋ ಎಂಬ ಆತ್ಮೀಯತೆಯಿಂದ.

ಇಲ್ಲಿಯ ಗಣಿತಶಾಸ್ತ್ರವಿಭಾಗದ ಪ್ರಾಧ್ಯಾಪಕರಾಗಿರುವ ಭೂದೇವ್ ಶರ್ಮ ನನ್ನನ್ನು ಭೇಟಿಮಾಡಲು ಆಸಕ್ತರಾಗಿ ಪತ್ರ ಬರೆದು ಕಳುಹಿಸಿದ್ದರು. ಅವರನ್ನು ಹುಡುಕಿಕೊಂಡು ನಾನೇ ಅವರ ವಿಭಾಗಕ್ಕೆ ಹೋದಾಗ ನಿಜವಾಗಿಯೂ ಅವರು ಆತ್ಮೀಯತೆಯಿಂದ ಸ್ವಾಗತಿಸಿದರು. ಅನಂತರ ನಾವೆಷ್ಟು ನಿಕಟವಾಗಿದ್ದೆವು ಎಂದರೆ ಪ್ರತಿದಿನ ಒಮ್ಮೆಯಾದರೂ ಭೇಟಿಯಾಗಿ ನನ್ನ ಕಾರ್ಯಕ್ರಮದ ಬಗ್ಗೆ ಚರ್ಚಿಸುತ್ತಿದ್ದೆವು. ಅವರ ಶ್ರೀಮತಿ ತಮ್ಮ ಸೋದರನಂತೆ ಕಂಡು, ನಮ್ಮ ಮನೆಯವರಿಗೆ ಸೀರೆ, ಬಟ್ಟೆ ತೆಗೆದುಕೊಡುವವರೆಗೆ ವಿಶ್ವಾಸ ತೋರಿಸುತ್ತಿದ್ದರು. ನಾನು ಭಾರತಕ್ಕೆ ಬಂದ ಮೇಲೂ ಅವರು ಪತ್ರ ಬರೆದು ತಾವು ಆಯ್ಕೆಮಾಡಿದ ಸೀರೆ ನನ್ನ ಹೆಂಡತಿಗೆ ಹಿಡಿಸಿತೆ ಎಂದು ವಿಚಾರಿಸಿದ್ದಾರೆ. ಅವರ ಮನೆಯಲ್ಲಿ ತಿಂದ ತಿಂಡಿ, ಊಟಗಳಿಗೆ, ಕೇಳಿದ ಭಾರತೀಯ ಸಂಗೀತಕ್ಕೆ, ನೋಡಿದ ವೀಡಿಯೋ ಚಿತ್ರಪ್ರದರ್ಶನಗಳಿಗೆ

ಲೆಕ್ಕವಿಲ್ಲ. ಟ್ರಿನಿಡಾಡ್‌ನಲ್ಲಿ ರಾಷ್ಟ್ರೀಯ ಹಬ್ಬವಾದ 'ಕಾರ್ನಿವಾಲ್' ಸಂದರ್ಭದ ಚಿತ್ರಗಳನ್ನು ನನಗಾಗಿ ತರಿಸಿ ವಿಶೇಷವಾಗಿ ಪ್ರದರ್ಶಿಸಿದರು.

ಇಲ್ಲಿಯ ಇಂಜನಿಯರಿಂಗ್ ವಿಭಾಗದಲ್ಲಿ ಹೆಚ್ಚು ಜನ ಭಾರತೀಯರಿದ್ದಾರೆ. ಮಂಗಳೂರಿನಿಂದ ಬಂದಿರುವ, ತಮಿಳುನಾಡಿನಿಂದ ಮತ್ತು ಸಿಂಹಳದಿಂದ ಬಂದ ಅನೇಕ ಅಧ್ಯಾಪಕರು ಇಲ್ಲಿದ್ದಾರೆ. ಕರ್ನಾಟಕದ ಡಾ. ದಯಾನಂದ ಶೆಟ್ಟಿ, ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್‌ನಿಂದ ಬಂದಿರುವ ಡಾ. ಶಾಮಾಶಾಸ್ತ್ರಿ ಅವರೆಲ್ಲ ಪ್ರತ್ಯೇಕವಾಗಿ ತಮ್ಮ ಮನೆಗಳಿಗೆ ಆಹ್ವಾನಿಸಿದ್ದರು. ಎಲ್ಲಿಯಾದರೂ ಹೋಗಬೇಕಿದ್ದರೆ ತಮ್ಮ ವಾಹನಗಳಲ್ಲಿ ಕರೆದುಕೊಂಡು ಹೋಗುವುದಾಗಿ ವಿಶ್ವಾಸದಿಂದ ಹೇಳುತ್ತಿದ್ದರು. ದೂರದ ಅತಿಥಿಗಳನ್ನು ತಮ್ಮ ವಾಹನಗಳಲ್ಲಿ ಕೂರಿಸಿಕೊಂಡು ಹೋಗುವುದು ಇಲ್ಲಿಯವರಿಗೆ ಒಂದು ರೀತಿಯ ಹೆಮ್ಮೆ. ಯಾರೂ ತಮ್ಮ ವಾಹನದಲ್ಲಿ ಅತಿಥಿಗಳನ್ನು ಕರೆದುಕೊಂಡು ಹೋಗಿ ಬೇಕಾದ ಸ್ಥಳದಲ್ಲಿ ಬಿಡಲು ಹಿಂಜರಿಯುವುದಿಲ್ಲ. ಏಕೆಂದರೆ ಎಲ್ಲಕ್ಕಿಂತ ಅಗ್ಗದ ಪದಾರ್ಥ ಎಂದರೆ ಇಲ್ಲಿ ಪೆಟ್ರೋಲು. ಒಂದು ಅಥವಾ ಒಂದೂವರೆ ಡಾಲರು ಕೊಟ್ಟರೆ ಕಾರಿನ ಟ್ಯಾಂಕ್ ಭರ್ತಿ ಮಾಡುತ್ತಾರೆ. ಇಲ್ಲಿಯ ಡಾಲರ್‌ಗೆ ನಮ್ಮ ನಾಲ್ಕು ರೂಪಾಯಿ ಸಮವಾದರೂ, ಇಲ್ಲಿ ಒಂದು ಡಾಲರ್ ಒಂದು ರೂ ಗಿಂತ ಕಡಿಮೆ ಬೆಲೆಯದು.

ಭೂದೇವ್ ಶರ್ಮರಿಂದ ಪರಿಚಿತರಾದ ಗಯಾನದ ಕೃಷ್ಣ ಬ್ರಿಜ್‌ಪಾಲ್ ಇಲ್ಲಿಯ ಕಂಪ್ಯೂಟರ್ ಕೇಂದ್ರದಲ್ಲಿ ಅಧ್ಯಾಪಕರಾಗಿದ್ದಾರೆ. ಇವರು ಗಯಾನದಲ್ಲಿ ನೆಲೆಸಿದ ಹಿಂದೂ ಕುಟುಂಬಕ್ಕೆ ಸೇರಿದವರು ಕೆಲವು ತಿಂಗಳ ಹಿಂದೆ ತಾನೆ ಈ ವಿಶ್ವವಿದ್ಯಾನಿಲಯದಲ್ಲಿ ನೌಕರವಾಗಿರುವುದರಿಂದ ಬ್ರಿಜ್‌ಪಾಲ್ ಇನ್ನೂ ಹೆಂಡತಿ ಮಕ್ಕಳನ್ನು ಇಲ್ಲಿಗೆ ಕರೆದುಕೊಂಡು ಬಂದಿಲ್ಲ. ನಾನು ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ಒಂಟಿಯಾಗಿದ್ದುದನ್ನು ತಿಳಿದು ಕೃಷ್ಣ ಬ್ರಿಜ್‌ಪಾಲ್ ತಮ್ಮ ಮನೆಗೆ ಬಂದಿರಲು ಆಹ್ವಾನಿಸಿದರು. ಅವರ ಕೆಲದಿನದ ಸಾಂಗತ್ಯ ಇಲ್ಲಿಯ ತರುಣ ಹಿಂದೂಗಳ ವಿಷಯದಲ್ಲಿ ಹೊಸದೊಂದು ಅನುಭವಗಳ ಸರಣಿಯನ್ನೇ ತಂದು ಕೊಟ್ಟಿತು.

ಕೃಷ್ಣರ ತಂದೆ ಗಯಾನದಲ್ಲಿ ದೊಡ್ಡ ಜಮೀನ್ದಾರರು. ಸಂಪ್ರದಾಯಸ್ಥರಾದ ಅವರ ತಂದೆತಾಯಿಗಳು ಅವರ ಬಂಧುಗಳ ಮಗಳನ್ನು ತಂದು ಕೃಷ್ಣರಿಗೆ ಮದುವೆ ಮಾಡಲು ಪ್ರಯತ್ನಿಸಿದರಂತೆ. ಕೃಷ್ಣ ತಂದೆತಾಯಿಗಳ ಆಯ್ಕೆಯನ್ನು ಒಪ್ಪದೆ ತಾವೇ ಆಯ್ಕೆ ಮಾಡಿಕೊಂಡ ಹಿಂದೂ ಹುಡುಗಿಯನ್ನು ಮದುವೆಯಾದರಂತೆ. ಈಗ ಅವರಿಗೆ ನಾಲ್ಕು ಮಕ್ಕಳಿವೆ. ಕೃಷ್ಣರಿಗೆ ಹಿಂದೂಧರ್ಮದಲ್ಲಿ ಅಷ್ಟಾಗಿ ನಂಬಿಕೆ ಇಲ್ಲ ಒಮ್ಮೆ ಕ್ರೈಸ್ತಧರ್ಮಕ್ಕೆ ಸೇರಬೇಕೆಂದು ಪ್ರಯತ್ನ ಪಟ್ಟಿದ್ದರಂತೆ ಅವರು ಹಿಂದೂ ಧರ್ಮದ ಅನೇಕ ನ್ಯೂನತೆಗಳನ್ನೂ ಧರ್ಮಾಂಧರ ಶೋಷಣೆಗಳನ್ನೂ ಕಟುವಾಗಿ ಟೀಕಿಸುತ್ತಿದ್ದರು. ಹಿಂದೂ ಧರ್ಮದಲ್ಲಿದ್ದುಕೊಂಡೇ ಹಿಂದೂ ಧರ್ಮವನ್ನು

ಹೀಯಾಳಿಸುವಂತೆ, ಕ್ರೈಸ್ತಧರ್ಮದಲ್ಲಾಗಲಿ, ಇಸ್ಲಾಂ ಧರ್ಮದಲ್ಲಾಗಲಿ ಮಾಡಲಾಗುವುದಿಲ್ಲವೆಂದು ನಾನು ಹೇಳಿದಾಗ ಅದು ನಿಜವೆಂದು ಕೃಷ್ಣ ಒಪ್ಪಿಕೊಂಡರು. ಆದರೆ ವಿಚಾರಕ್ಕೂ, ಆಚಾರಕ್ಕೂ ಸಂಬಂಧವಿಲ್ಲದ, ಬೂಟಾಟಿಕೆಯ ಆಚಾರಗಳನ್ನು ನನಗೆ ಸಹಿಸಲು ಸಾಧ್ಯವಿಲ್ಲವೆಂದರು.

ಕೃಷ್ಣರ ತಂದೆಗೆ ನೂರಾರು ಎಕರೆಗಳ ಜಮೀನು, ಹಸು, ಎಮ್ಮೆಗಳು ಇವೆಯಂತೆ. ಯಂತ್ರಗಳನ್ನು ಬಳಸಿ ವ್ಯವಸಾಯ ಮಾಡುವುದರಿಂದ ಸಾಕಷ್ಟು ಸಂಪಾದನೆಯಿದೆಯಂತೆ. ಆದರೆ ಅವರು ಖರ್ಚುಮಾಡದೆ ಗಳಿಸುವುದು, ದುಡಿದರೂ ಸುಖಪಡದೆ ಇರುವುದು ಕೃಷ್ಣರಿಗೆ ಹಿಡಿಸುವುದಿಲ್ಲ. ಹಿಂದೂಧರ್ಮದಲ್ಲಿರುವ, ತಂದೆ ಮಕ್ಕಳಿಗಾಗಿ ಕೂಡಿಡುವ ಸಂಪ್ರದಾಯದ ಬಗ್ಗೆ, ಭವಿಷ್ಯದ ಚಿಂತನೆಯಲ್ಲಿ ತಮ್ಮ ಜೀವನವನ್ನು ಕಳೆಯುವ ಹಿಂದೂ ಮನೋಭಾವನೆಯ ಬಗ್ಗೆ ಇವರಿಗೆ ತಿರಸ್ಕಾರ ಭಾವನೆ. ಈ ಸಂಪ್ರದಾಯದ ಹಿನ್ನೆಲೆಗಳನ್ನು ನಾನು ವಿವರಿಸಿ, ಅವುಗಳಲ್ಲಿರುವ 'ಅತಿ'ಗಳನ್ನು ಬಿಟ್ಟರೆ ಈ ಸಂಪ್ರದಾಯಗಳ ಆಶಯಗಳು ಒಳ್ಳೆಯವೇ ಎಂದು ಹೇಳಿದೆ. ತಂದೆ ಮಗನಿಗಾಗಿ ಗಳಿಸುವ ಕಾರ್ಯ ಸ್ವಾರ್ಥದೂರವಾದುದೂ ಅಲ್ಲ, ತ್ಯಾಗಮೂಲವಾದುದೂ ಅಲ್ಲ. ಮುಪ್ಪಿನ ತನ್ನ ಜೀವನಕ್ಕೆ ತನ್ನ ಮಗ ತನಗೆ ಆಸರೆಯಾಗಲಿ ಎಂಬ ದೂರಾಲೋಚನೆಯ ಸ್ವಾರ್ಥವೂ ಅದರಲ್ಲಿದೆ ಎಂಬ ಲೌಕಿಕ ದೃಷ್ಟಿಯನ್ನು ಎತ್ತಿಹಿಡಿದಾಗ ಕೃಷ್ಣ ಅದನ್ನು ಒಪ್ಪಿಕೊಂಡರು.

ಹಿಂದೂಧರ್ಮ ಸ್ತ್ರೀಗೆ ಕೊಟ್ಟಿರುವ ಸ್ಥಾನಮಾನಗಳ ಬಗ್ಗೆ ಕೃಷ್ಣರಿಗೆ ವಿಶೇಷವಾದ ಅಸಮಾಧಾನವಿದೆ. ಹೆಣ್ಣು ಗಂಡಿಗೆ ಸಮಾನಳಲ್ಲ ಎನ್ನುವುದು, ಹೆಣ್ಣು ಸದಾ ಗಂಡಿನ ಆಶ್ರಯದಲ್ಲೇ ಬದುಕಬೇಕೆಂಬುದು, ಅವಳಿಗೆ ಆಚಾರ ವಿಚಾರಗಳ ಸ್ವಾತಂತ್ರ್ಯವಿಲ್ಲ ಎಂಬುದು ಮೊದಲಾದ ವಿಷಯಗಳಲ್ಲಿ ಕೃಷ್ಣರಿಗೆ ತೀವ್ರ ವಿರೋಧವಿದೆ. ಇವುಗಳನ್ನು ಪ್ರತಿಪಾದಿಸುವ ಹಿಂದೂ ಸಂಪ್ರದಾಯವಾದಿಗಳನ್ನು ಶೋಷಕರು ಎಂದು ತೆಗಳುತ್ತಾರೆ. ಈ ಮೌಢ್ಯಗಳ ವಿರುದ್ಧ ನಮ್ಮ ಸ್ತ್ರೀಸಮಾಜ ಬಂಡೇಳಬೇಕು ಎನ್ನುತ್ತಾರೆ. ಈಗೀಗ ಪಾಶ್ಚಿಮಾತ್ಯ ದೇಶಗಳ ಹಿಂದೂಗಳಲ್ಲಿ ಈ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದೆಯಂತೆ.

ಗಂಡ ತನ್ನ ಸ್ನೇಹಿತರ ಜೊತೆ ಬೇಕೆಂದಾಗ ಹೋಗುವ ಸ್ವಾತಂತ್ರ್ಯವಿರುವಂತೆ ಹೆಂಡತಿಗೂ ಆಕೆಯ ಸ್ನೇಹಿತರ ಜೊತೆ ಬೇಕೆಂದಾಗ ಹೋಗುವ ಸ್ವಾತಂತ್ರ್ಯವಿರಬೇಕು ಎನ್ನುವುದು ಅವರ ವಾದ. ಗಂಡನ ಅಭಿಪ್ರಾಯವೇ ಕುಟುಂಬದಲ್ಲಿ ಮುಂದಾಗಿರಬೇಕು ಎನ್ನುವುದನ್ನು ಇವರು ಅಲ್ಲಗಳೆಯುತ್ತಾರೆ. ಗಂಡ ಹೆಂಡತಿಯನ್ನು ಅಸ್ವತಂತ್ರಳಾಗಿ ಮಾಡುವ ಒಂದು ಸಂಪ್ರದಾಯ ಹಿಂದೂಗಳಲ್ಲಿದ್ದರೂ, ಆಕೆಯನ್ನು ಕೀಳಾಗಿ ಕಾಣುವ, ಅವಳ ಅಭಿಪ್ರಾಯಕ್ಕೆ ಮಾನ್ಯತೆ ನೀಡದಿರುವ ಕ್ರೂರ ಪ್ರವೃತ್ತಿ ಸಾಮಾನ್ಯವಾಗಿ ಹಿಂದೂಗಳಲ್ಲಿಲ್ಲ ಎಂದು ನಾನು ಹೇಳಿದೆ. ಹೊರಜಗತ್ತಿಗೆ ಗಂಡ ಪ್ರಧಾನವಾಗಿ ಕಂಡರೂ, ಒಳಜಗತ್ತಿನಲ್ಲಿ ಹೆಂಡತಿ ಪ್ರಧಾನ ಪಾತ್ರ

ವಹಿಸುತ್ತಾಳೆ; ಗಂಡನ ಮೇಲೂ ಆಕೆ ಪ್ರಭಾವ ಬೀರುತ್ತಾಳೆ. ಸಮಾಜದಲ್ಲಿ ಆಕೆಗೆ ಗೌರವವಿರುತ್ತದೆ ಎಂದು ನಾನು ವಿವರಿಸಿದರೂ ಕೃಷ್ಣ ಅದನ್ನು ಒಪ್ಪಲಿಲ್ಲ. ಹೆಣ್ಣನ್ನು ಸಾಕಿದ ಪ್ರಾಣಿಯಂತೆ ಹಿಂದೂಧರ್ಮದಲ್ಲಿ ಕಾಣಲಾಗುತ್ತಿದೆ ಎಂದರು.

ಕೃಷ್ಣ ಒಬ್ಬ ಕಟ್ಟಾ ದೇಶಪ್ರೇಮಿ. ತನ್ನ ತಾಯ್ನಾಡು ಗಯಾನದ ಬಗ್ಗೆ ಆಗಾಗ ಕಳವಳ ವ್ಯಕ್ತಪಡಿಸಿ, ಮತ್ತೆ ತನ್ನ ನಾಡಿಗೆ ಹಿಂದಿರುಗಲೇಬೇಕು ಎಂದು ಹೇಳುತ್ತಿದ್ದರು. ಹಿಂದೂಗಳೇ ಬಹು ಸಂಖ್ಯೆಯಲ್ಲಿರುವ ಗಯಾನದಲ್ಲಿ ಈಗ ಕಪ್ಪು ಜನರ ಆಡಳಿತ ನಡೆದಿದೆ. ಚುನಾವಣೆಯ ಸಮಯದಲ್ಲಿ ನಡೆಸಿದ ಓಟುಗಳ್ಳತನದಿಂದಾಗಿ ಹಿಂದೂಗಳು ಸೋತು ಅಧಿಕಾರ ನೀಗ್ರೋಗಳ ಪಾಲಾಯಿತು. ಹಿಂದೂಗಳು ಹೆಚ್ಚು ಸವಲತ್ತಿರುವವರಾದ್ದರಿಂದ ಹೆಚ್ಚಿನ ಭೂಮಿಯೆಲ್ಲಾ ಹಿಂದೂಗಳಿಗೆ ಸೇರಿದೆ. ನೀಗ್ರೋಗಳು ಸಾಮಾನ್ಯಚಾಕರಿಗಳಾದ ಪೋಲೀಸು, ಸೈನ್ಯ ಮೊದಲಾದ ವೃತ್ತಿಗಳಲ್ಲಿದ್ದಾರೆ. ಈಚೆಗೆ ಹಿಂದೂಗಳು ವಿದ್ಯಾಭ್ಯಾಸದಲ್ಲಿ ಮುಂದುವರಿದು ವಿದೇಶಗಳಲ್ಲಿ ನೆಲೆಸಿದ್ದಾರೆ. ಕರಿಯರ ಕೈಯಲ್ಲಿ ಸೈನ್ಯ ಮತ್ತು ಪೋಲೀಸು ಇರುವುದರಿಂದ ಕಡಿಮೆ ಸಂಖ್ಯೆಯ ಕರಿಯರು ಬಹು ಸಂಖ್ಯೆಯ ಹಿಂದೂಗಳನ್ನು ಬಂದೋಬಸ್ತಿನಲ್ಲಿ ಇಡುವುದು ಸಾಧ್ಯವಾಗಿದೆ. ಬುದ್ಧಿವಂತರಾದ ಹಿಂದೂಗಳನ್ನು ಮೂರ್ಖರಾದ ಕರಿಯರು ಪಶುಬಲದಿಂದ ಹತ್ತಿಕ್ಕುತ್ತಿದ್ದಾರೆ; ಕಿರುಕುಳ ತಾಳದೆ ಹಿಂದೂಗಳು ಈಗ ಮಾತೃಭೂಮಿಯನ್ನು ತೊರೆದು ಹೊರದೇಶಗಳಿಗೆ ಹೋಗಿ ನೆಲೆಸುವ ಹವಣಿಕೆಯಲ್ಲಿದ್ದಾರೆಂದು ಕೃಷ್ಣ ಕಳವಳಿಸಿದರು. ಗಯಾನ ವಿಶ್ವವಿದ್ಯಾನಿಲಯದಲ್ಲಿ ಮೊದಲು ಅಧ್ಯಾಪಕರಾಗಿದ್ದ ಕೃಷ್ಣ ಈ ಕಲುಷಿತ ವಾತಾವರಣದಿಂದ ತಪ್ಪಿಸಿಕೊಳ್ಳಲೋಸುಗವೇ ಟ್ರಿನಿಡಾಡ್‌ಗೆ ಬಂದರಂತೆ. ಇವರಿಗೆ ಗಯಾನದಲ್ಲಿ ತಾವೇ ಕಟ್ಟಿಸಿದ ಸ್ವಂತ ಮನೆಯಿದೆಯಂತೆ. ಅದನ್ನು ಎಂತಹ ಸಂದರ್ಭ ಬಂದರೂ ಮಾರುವುದಿಲ್ಲ, ನನ್ನ ಹೃದಯವೆಲ್ಲ ಗಯಾನದಲ್ಲೇ ಇವೆ ಎಂದು ಪದೇ ಪದೇ ಹೇಳುತ್ತಿದ್ದರು.

ಕರಿಯರ ವರ್ತನೆಯಿಂದ ಗಯಾನ ಈಗ ಅನಾಯಕತ್ವದ ಪರಿಸ್ಥಿತಿಯನ್ನು ತಲಪಿದೆ. ಪ್ರಧಾನಮಂತ್ರಿ ಬರ್ನಾಮ್ ಚತುರನಾದ ವ್ಯಕ್ತಿಯಾದ್ದರಿಂದ ಹಿಂದೂಗಳನ್ನು ಸಮಯೋಚಿತನಾಗಿ ಹತ್ತಿಕ್ಕುತ್ತಿದ್ದಾನೆ. ವಿರೋಧಪಕ್ಷದ ನಾಯಕ, ಗಯಾನಾದ ಹಿಂದು ಚಡಿಜಗನ್ ಕಮ್ಯೂನಿಸ್ಟ್ ನೀತಿಯುವನಾದ್ದರಿಂದ, ಅಮೆರಿಕದ ಸರಕಾರ ಕರಿಯರ ಸರಕಾರಕ್ಕೆ ಬೆಂಬಲ ನೀಡುತ್ತಿದೆ. ಎಲ್ಲಾ ಹುದ್ದೆಗಳಿಗೂ ಈಗ ಅನರ್ಹರಾಗಿದ್ದರೂ ಕರಿಯರನ್ನೇ ತುಂಬಲಾಗುತ್ತಿದೆ. ಭಾರತ ಸರ್ಕಾರ ನೀಡಿದ ಭರತನಾಟ್ಯದ ಶಿಷ್ಯವೇತನವೂ ಕೂಡ ಹಿಂದೂಗಳಿಗೆ ಸಿಕ್ಕದೆ ನೀಗ್ರೋ ಜನಾಂಗದವರ ಪಾಲಾಯಿತು. ಈ ಎಲ್ಲ ಪರಿಸ್ಥಿತಿಗೆ ಹಿಂದುವೇ ಆದ ಚಡಿಜಗನ್ ಅವರೇ ಕಾರಣ, ಅವರನ್ನು ಮೊದಲು ಕೊಂದು ಹಿಂದೂಗಳನ್ನು ರಕ್ಷಿಸಬೇಕಾಗಿದೆ ಎಂದು ಕೃಷ್ಣ ಉದ್ರೇಕಗೊಂಡು ಹೇಳುತ್ತಿದ್ದರು.

ಭಜನೆ ಮಂದಿ(ರ)

ಭಾರತದಲ್ಲಿ ಸಂಸ್ಕೃತದ ಶ್ಲೋಕ, ಮಂತ್ರಗಳನ್ನು ಅರ್ಥ ತಿಳಿಯದಿದ್ದರೂ ವಿಶೇಷ ಸಮಾರಂಭಗಳಲ್ಲಿ, ಮಂಗಳ ಮುಹೂರ್ತಗಳಲ್ಲಿ ನಮ್ಮವರು ಹಾಡುವಂತೆ, ಟ್ರಿನಿಡಾಡ್ ಹಿಂದೂಗಳೂ ಹಿಂದಿಯ ಕಾವ್ಯಭಾಗಗಳನ್ನೂ, ಶ್ಲೋಕಗಳನ್ನೂ ಹಾಡುತ್ತಾರೆ. ರಾಮಾಯಣ ಪಾರಾಯಣ ಮಾಡುವಾಗ ಹಿಂದಿಯ ರಾಮಾಯಣ ಕಾವ್ಯ ಭಾಗಗಳನ್ನು ಹಾಡಿ ವ್ಯಾಖ್ಯಾನ ಮಾಡುತ್ತಾರೆ. ತುಳಸೀದಾಸ ರಾಮಾಯಣವನ್ನು ರಾಮನವಮಿ ಸಂದರ್ಭದ ವಿಶೇಷ ಸಮಾರಂಭಗಳಲ್ಲಿ ಹಾಡುತ್ತಾರೆ. ಈಗೀಗ ಹಿಂದಿಯಲ್ಲಿ ಹಾಡಿದ ರಾಮಾಯಣದ ಟೇಪುಗಳು ಹೇರಳವಾಗಿ ಇಲ್ಲಿ ದೊರೆಯುತ್ತವೆ. ಈ ಟೇಪುಗಳನ್ನು ಇಲ್ಲಿಯ ಹಿಂದೂಗಳು ತಮ್ಮ ಮನೆಗಳಲ್ಲಿ ಇಟ್ಟುಕೊಂಡು ಕೇಳುತ್ತಿರುತ್ತಾರೆ. ಕಾರುಗಳಲ್ಲಿ ಇಂತಹ ಟೇಪುಗಳನ್ನು ಇಟ್ಟುಕೊಂಡು ಕಛೇರಿಗಳಿಗೆ ಹೋಗುವಾಗ ಬರುವಾಗ ಕಾಲಹರಣವಾಗದಂತೆ ಕೇಳುತ್ತಾರೆ.

ನಾನು ಟ್ರಿನಿಡಾಡ್‌ನಲ್ಲಿದ್ದ ಸಮಯದಲ್ಲಿ ರಾಮಾಯಣ ಪಾರಾಯಣಗಳು ಪ್ರತಿದಿನ ನಡೆಯುತ್ತಿದ್ದುವು. ಹಿಂದಿಯಲ್ಲಿ ಓದಬಲ್ಲ, ಮಾತನಾಡಬಲ್ಲವರು ಕೆಲವರು ರಾಮಾಯಣ ಹಾಡುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೆ. ಹಾರ್ಮೋನಿಯಂ ಮತ್ತು ತಬಲ ಈ ಹಾಡುಗಾರಿಕೆಯಲ್ಲಿ ಇರಲೇಬೇಕಾದ ವಾದ್ಯಗಳು. ಈ ಹಾಡುಗಾರಿಕೆ ಕೆಲವು ಸಾರಿ ಭಜನೆಯ ರೂಪದಲ್ಲಿರುತ್ತದೆ.

ಒಂದು ದಿನ ಕೃಷ್ಣ ಬ್ರಿಜ್‌ಪಾಲ್ ಮತ್ತು ನಾನು ಒಂದು ರಾಮಾಯಣ ಪಾರಾಯಣದ ಸಮಾರಂಭಕ್ಕೆ ಹೋಗಿದ್ದೆವು. ನಮ್ಮ ಜೊತೆ ಗಯಾನಾದ ಮತ್ತೊಬ್ಬ ಸ್ನೇಹಿತರಾದ ಪ್ರಸಾದ್ (ಪರ್‌ಸಾದ್ ಎಂದು ಇಲ್ಲಿ ಉಚ್ಚರಿಸುತ್ತಾರೆ) ಅವರೂ ಬಂದಿದ್ದರು. ಪ್ರಸಾದ್ ವೃತ್ತಿಯಲ್ಲಿ ಇಂಜಿನಿಯರ್. ಇವರು ಗಯಾನ ಬಿಟ್ಟು ಕೆನಡಾದಲ್ಲಿ ಪೌರತ್ವವನ್ನು ಸಂಪಾದಿಸಿ ಈಗ ಟ್ರಿನಿಡಾಡ್‌ನಲ್ಲಿ ಕೆಲಸದಲ್ಲಿದ್ದಾರೆ. ಪ್ರಸಾದ್ ಸರಸಿ. ನಾವೆಲ್ಲ ಸೇರಿ ರಾಮಾಯಣ ಭಜನೆ ನಡೆಯುವ ಸ್ಥಳಕ್ಕೆ ಹೋದೆವು. ಧ್ವನಿವರ್ಧಕಗಳನ್ನು ಹಾಕಿ ಸುಮಾರು ದೂರದವರೆಗೆ ಈ ಭಜನೆ ಮತ್ತು ಪಾರಾಯಣ ಕೇಳುವಂತೆ ಮಾಡಿರುತ್ತಾರೆ. ಯಾವುದಾದರೂ ಮನೆಯ ವರಾಂಡದಲ್ಲಿ ರಾಮಾಯಣದ ಚಿತ್ರಪಟಗಳನ್ನು ಇಟ್ಟು ವಿಶೇಷವಾಗಿ ಪೂಜಾಸಾಮಗ್ರಿಗಳಿಂದ ಅಲಂಕರಿಸಿರುತ್ತಾರೆ. ಅಲ್ಲಿ ಕುಳಿತುಕೊಳ್ಳಲು ಕುರ್ಚಿ ಮತ್ತು ಬೆಂಚುಗಳನ್ನು ಹಾಕಿರುತ್ತಾರೆ. ನಾವು ಭಜನೆ ಮಂದಿರಕ್ಕೆ ಹತ್ತಿರವಿದ್ದ ಬೇರೊಂದು ಮನೆಗೆ ಹೋದೆವು ಇದು ಒಂದು ಕ್ಲಬ್ ತರಹದ ಸಾರ್ವಜನಿಕ ಸ್ಥಳವೆಂದು ಕಾಣುತ್ತದೆ. ಅಲ್ಲಿ ನಮಗಿಂತ ಮುಂಚೆಯೇ ಟ್ರಿನಿಡಾಡ್ ಹಿಂದೂ ತರುಣರ ಗುಂಪು ಸೇರಿತ್ತು. ಇವರೆಲ್ಲರೂ ಕೂಡ ರಾಮಾಯಣದ ಭಜನೆಗೆ ಬಂದವರೇ. ವಿವಿಧ ಪಾನೀಯಗಳನ್ನು ಸೇವಿಸುತ್ತಾ, ಕೆಲವರು ಇಸ್ಪೀಟಿನಲ್ಲಿ, ಕೆಲವರು ಕಾಡು ಹರಟೆಯಲ್ಲಿ ಮುಳುಗಿದ್ದರು.

ಈ ಭಜನೆ ಮಂದಿಯನ್ನು ಕಂಡು ನನಗೆ ನಿಜವಾಗಿ ಕುತೂಹಲವಾಯಿತು. ಹಿಂದೂಗಳಾದ ಈ ತರುಣರು ತಮ್ಮ ಧರ್ಮದ ಬಗ್ಗೆ ಇಷ್ಟು ಲಘುವಾಗಿ ನಡೆದು ಕೊಳ್ಳುತ್ತಿದ್ದುದನ್ನು ಕಂಡು ಚಿಂತಿಸತೊಡಗಿದೆ ಹಿಂದೂಧರ್ಮದ ಬಗ್ಗೆ, ಧರ್ಮ ಪ್ರಸಾರಕರಾದ ಇಲ್ಲಿಯ ಪಂಡಿತರ ಬಗ್ಗೆ, ಧರ್ಮಗುರುಗಳ ಬಗ್ಗೆ ತೀರ ಅಸಭ್ಯವಾದ ಮಾತುಗಳನ್ನು ಇವರು ಆಡುತ್ತಿದ್ದರು. ಇದೆಲ್ಲವನ್ನು ಸುಮ್ಮನೆ ನೋಡುತ್ತಿದ್ದ ನನಗೆ ಭಾರತದಲ್ಲಿಯ ತರುಣ ಪೀಳಿಗೆಯ ನೆನಪಾಯಿತು. ಇಂತಹ ಅನೇಕರನ್ನು ನಮ್ಮ ದೇಶದಲ್ಲಿಯೇ ನೋಡಿದ್ದೇನೆ. ಅವರ ಮಾತಿನ ರೀತಿಯಲ್ಲಿ, ವಾದದ ಸರಣಿಯಲ್ಲಿ ಸಕಾರಣವಾದ ವಿಚಾರಗಳನ್ನು ಮೆಚ್ಚಿಕೊಂಡಿದ್ದೇನೆ ಟ್ರಿನಿಡಾಡ್ ಹಿಂದೂ ತರುಣರಿಗೂ ನಮ್ಮ ತರುಣರಿಗೂ ಏನೂ ವ್ಯತ್ಯಾಸವಿಲ್ಲವೆನ್ನಿಸಿತು. ನಮ್ಮ ದೇಶದಲ್ಲಿ ಮಾತ್ರ ಹಿಂದೂಧರ್ಮದ ಪಾಡು ಹೀಗೆಂದುಕೊಂಡಿದ್ದರೆ, ದೇಶಾಂತರದಲ್ಲೂ ಹಿಂದೂಧರ್ಮದ ಪಾಡು ಬದಲಾಯಿಸಿಲ್ಲ. ನಮ್ಮ ಧರ್ಮದಲ್ಲಿ ಆಚಾರವಿಚಾರಗಳಿಗೆ ಇರುವ ಅಂತರವೇ ಇದಕ್ಕೆ ಕಾರಣ ಎಂದು ನನ್ನಂತೆ ಈ ತರುಣರೂ ಹೇಳುತ್ತಾರೆ.

ಈ ತರುಣರ ಭಜನೆ ರಾತ್ರಿ ಸುಮಾರು 10 ರವರೆಗೆ ನಡೆಯಿತು. ಆಮೇಲೆ ರಾಮಾಯಣ ಪಾರಾಯಣ ಮಾಡುತ್ತಿದ್ದ ಭಜನೆ ಮಂದಿರಕ್ಕೆ ಈ ತರುಣರ ಗುಂಪು ಚಲಿಸಿತು. ಅಲ್ಲಿ ಭಕ್ತಾದಿಗಳಿಗೆ ಕೆಲವು ಕುರ್ಚಿಗಳನ್ನು ಹಾಕಿದ್ದರೂ ಹೆಚ್ಚಿನವುಗಳು ಖಾಲಿ ಇದ್ದುವು. ಅಲ್ಲಲ್ಲಿ ಕೆಲವರು ಕುಳಿತು ರಾಮಾಯಣದ ಹಾಡಿಗೆ ನಿರ್ಲಿಪ್ತರಾಗಿ, ತಮ್ಮತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು. ಅವರಲ್ಲಿ ಸ್ತ್ರೀಯರೇ ಹೆಚ್ಚಿದ್ದರು. ಇವರೆಲ್ಲ ಹಿಂದೂಗಳಾದರೂ ಯಾರೂ ಸೀರೆ ಉಟ್ಟಿರಲಿಲ್ಲ. ಎಲ್ಲ ತುಂಡು ಲಂಗದವರು. ನನ್ನ ಪರಿಚಯ ಮಾಡಿಕೊಟ್ಟಾಗ ಕೆಲವರು ಕೈ ಜೋಡಿಸಿದರು, ಮತ್ತೆ ಕೆಲವರು ಕೈ ಕುಲುಕಿದರು.

ನಮ್ಮ ತರುಣರ ತಂಡ ಕೈಯಲ್ಲಿ ಸುರೆಯ ಸೀಸೆಗಳನ್ನು ಹಿಡಿದುಕೊಂಡೇ ಭಜನೆ ಮಂದಿರದ ಮೂಲಕ ಪ್ರಸಾದ ಮಂದಿರಕ್ಕೆ ನಡೆಯಿತು. ಭಜನೆಯಲ್ಲಿ ಪಾಲುಗೊಂಡವರು ಪ್ರಸಾದ ಸ್ವೀಕರಿಸಿಯೇ ಹೋಗಬೇಕೆಂಬ ಸಂಪ್ರದಾಯವಿದೆ. ಸಂಪ್ರದಾಯಪಾಲನೆಗೆ ಬದ್ಧರಾಗಿ ಪ್ರಸಾದ ಸ್ವೀಕಾರಕ್ಕೆ ಬಂದರು. ಪ್ರಸಾದವೆಂದರೆ ಬೆರಳ ತುದಿಯಲ್ಲಿ ಬಾಯಿಗೆ ಎಸೆದುಕೊಳ್ಳುವ ಭಾರತದ ಪ್ರಸಾದವಲ್ಲ ಇದು. ಇದು ರೊಟ್ಟಿ, ಸಿಹಿ, ಖಾರ ಪಲ್ಯಗಳ ಗಡದ್ದಾದ ಭೋಜನ. ಇವುಗಳ ಜೊತೆಗೆ ಮೃದು ಪಾನೀಯಗಳ ಕುಡಿತ. ಇಲ್ಲಿ ಮತ್ತೆ ತಿನ್ನುತ್ತಾ ಕುಡಿಯುತ್ತಾ (ಮೃದು ಮತ್ತು ಕಠಿಣ) ಕಾಡುಹರಟೆ ಕಾಲದ ಮಿತಿಯಿಲ್ಲದೆ ಸಾಗುತ್ತದೆ. ಭೋಜನ ಪ್ರಸಾದ ಸ್ವೀಕಾರ ಮುಗಿದ ಮೇಲೆ ನಮ್ಮ ತರುಣರ ಗುಂಪು ಮತ್ತೆ ತಮ್ಮ ಮಾಮೂಲಿ ಭಜನೆ ಮಂದಿರಕ್ಕೆ ತೆರಳಿತು. ಅಲ್ಲಿ ಮತ್ತೆ ಸಿಗರೇಟು, ಪಾನೀಯಗಳ ಸೇವನೆ. ಕುಡಿದು ಕುಡಿದು ಕಣ್ಣುಗಳು ತಮಗೆ ತಾನೇ ಮುಚ್ಚಿಕೊಳ್ಳುವಾಗ ಒಬ್ಬೊಬ್ಬರೇ ಎದ್ದು ಮನೆಗೆ ತೆರಳುತ್ತಾರೆ. ನನ್ನ ಪರಿಸ್ಥಿತಿಯನ್ನು ಕಂಡು ಕೃಷ್ಣ ಬ್ರಿಜ್‌ಪಾಲ್

ಮತ್ತು ಪ್ರಸಾದರು ನೋಡಿದ್ದು ಕಾರನ್ನು ಸ್ಟಾರ್ಟ್ ಮಾಡಿದರು. ಕಾರಿನಿಂದ ಇಳಿದು ಮನೆಯೊಳಗೆ ಬಂದಾಗ 12 ಗಂಟೆಯಾಗಿತ್ತು.

ಆಗ ವಿಶ್ವವಿದ್ಯಾನಿಲಯದಲ್ಲಿ ಬೇಸಿಗೆ ರಜೆ ಪ್ರಾರಂಭವಾಗಿದ್ದುದರಿಂದ ಕೃಷ್ಣ ಬ್ರಿಜ್‌ಪಾಲ್‌ರಿಗೆ ಕೆಲಸವಿರಲಿಲ್ಲ. ಬೆಳಗ್ಗೆ ಎದ್ದು ಸ್ನಾನ ಮಾಡಿ ಕಾಫೀ ತಿಂಡಿ ಮಾಡಿಕೊಂಡರೆ ಮಧ್ಯಾಹ್ನದವರೆಗೆ ಬೇರೆ ಕೆಲಸವಿಲ್ಲ. ಎಲ್ಲಾದರೂ ಹೊರಗೆ ಹೋಗಿ ಮನೆಗೆ ಬೇಕಾದ ಸಾಮಾನುಗಳನ್ನು ಕೊಂಡು ಆಡ್ಡಾಡಿ ಬಂದರೆ ಮತ್ತೆ ಮಧ್ಯಾಹ್ನದ ಊಟಕ್ಕೆ ತಯಾರಿ. ಮಧ್ಯಾಹ್ನದ ಊಟ ಮುಗಿಸಿ ಸ್ವಲ್ಪ ನಿದ್ದೆ ಮಾಡಿದರೆ ಮತ್ತೆ ಸಂಜೆ ಕಾರಿನಲ್ಲಿ ಗಾಳಿ ಸವಾರಿ ಹೊರಡುವುದು. ಅವರು ಒಂಟಿಯಾಗಿದ್ದುದರಿಂದ, ನಾನು ಮನೆಯಲ್ಲಿದ್ದರೆ ಜೊತೆಯಲ್ಲಿ ಬರುವಂತೆ ಕರೆಯುತ್ತಿದ್ದರು. ಅವರ ಅನೇಕ ಸ್ನೇಹಿತರ ಮನೆಗಳಿಗೆ ನಾನು ಹೋಗಿದ್ದೇನೆ. ಅವರ ಮನೆಗಳಲ್ಲಿ ಮನೆಯ ಸದಸ್ಯನಂತೆ ಗಂಟೆಗಟ್ಟಲೆ ಕಳೆದಿದ್ದೇನೆ ಅಲ್ಲಿಯ ಅನೇಕ ಹಿಂದೂ ತರುಣರ ವಿಶ್ವಾಸ ಗಳಿಸಿದ್ದೇನೆ.

ಕೃಷ್ಣ ಒಂದು ಸಂಜೆ ವಿಮಾನ ನಿಲ್ದಾಣದ ಬಳಿ ವಾಸ ಇದ್ದ ತಮ್ಮ ಸ್ನೇಹಿತ ಜಗ್‌ಮೋಹನ್ ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋದರು. ಜಗ್‌ಮೋಹನ್ ವಿಶ್ವವಿದ್ಯಾನಿಲಯದ ಅಚ್ಚುಕೂಟದಲ್ಲಿ ಕೆಲಸ ಮಾಡುತ್ತಿದ್ದಾರೆ. ಈತನೂ ಕೂಡ ಟ್ರಿನಿಡಾಡ್ ಹಿಂದೂ ತರುಣ. ಈತನಿಂದ ತನಗೆ ಬಹಳ ಸಹಾಯವಾಗಿದೆ ಎಂದು ಕೃಷ್ಣ ಹೇಳಿದರು. ಜಗ್‌ಮೋಹನ್ ಸಾಮಾನ್ಯ ಕೆಲಸಗಾರನಾದರೂ ದುಡಿಯುವ ಬೇರೆ ವಿಧಾನಗಳನ್ನು ಕಂಡುಹಿಡಿದುಕೊಂಡು ಚೆನ್ನಾಗಿ ಜೀವನ ನಡೆಸುತ್ತಿದ್ದಾರೆ. ಇವರ ಮನೆಯಿಂದ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ 8 ಮೈಲಿ ದೂರವಿದೆ. ಕಛೇರಿ ಕೆಲಸಕ್ಕೆ ಬರುವಾಗ, ಹೋಗುವಾಗ ತನ್ನ ಕಾರನ್ನು ಟ್ಯಾಕ್ಸಿ ಮಾಡಿಕೊಂಡು ಪ್ರಯಾಣಿಕರಿಂದ ಹಣ ಸಂಪಾದಿಸುತ್ತಾರೆ, ಬಿಡುವಿನ ವೇಳೆಯಲ್ಲೂ ಟ್ಯಾಕ್ಸಿ ಓಡಿಸುತ್ತಾರೆ.

ಜಗ್‌ಮೋಹನ್ ಅವರ ಮನೆಗೆ ಹೋದಾಗ ಆತ ಸಾಮಾನ್ಯ ಕೆಲಸಗಾರನಂತೆ ಚಡ್ಡಿ ಹಾಕಿಕೊಂಡು ಬನಿಯನ್‌ನಲ್ಲಿ ತಮ್ಮ ಕಾರಿನ ರಿಪೇರಿ ಮಾಡುತ್ತಿದ್ದರು. ನನ್ನ ಪರಿಚಯವಾದರೂ ಆತ ಮಾಮೂಲಿ ಉಡುಪಿನಲ್ಲಿಯೇ ಕೂತು ಮಾತನಾಡುತ್ತಿದ್ದರು. ರಾಮ್‌ಕಿಷೂನ್ (ರಾಮಕೃಷ್ಣ) ಎನ್ನುವವರೂ ನಮ್ಮ ಜೊತೆಗೆ ಸೇರಿಕೊಂಡರು. ಅವರು ಜಗ್‌ಮೋಹನ್ ಅವರ ಷಡ್ಡಕ. ವಿಮಾನ ನಿಲ್ದಾಣದಲ್ಲಿ ಕೆಲಸದಲ್ಲಿದ್ದಾರೆ. ಜಗ್‌ಮೋಹನ್ ಯಾವುದೇ ಆಡಂಬರವಿಲ್ಲದ ಮತ್ತು ಇದ್ದುದನ್ನು ನೇರವಾಗಿ ಹೇಳುವ ವ್ಯಕ್ತಿ. ಪಾನೀಯಗಳಿಂದ ಪ್ರಾರಂಭಿಸಿ ರಾತ್ರಿ ಭೋಜನದವರೆಗೆ ನಮ್ಮ ಮಾತುಕತೆ ಸಾಗಿತು. ಗಂಭೀರವಾದ ವಿಷಯಗಳೇನನ್ನೂ ನಾವು ಚರ್ಚಿಸದಿದ್ದರೂ, ಭಾರತದ ಧಾರ್ಮಿಕ ಪರಿಸ್ಥಿತಿ, ಸಾಮಾಜಿಕ ಪರಿವರ್ತನೆಗಳ ಬಗ್ಗೆ ಕುತೂಹಲದಿಂದ ಕೇಳಿದರು. ಧಾರ್ಮಿಕ ರಂಗದಲ್ಲಿ ನಡೆಯುವ ಶೋಷಣೆ,

ದ್ವಂದ್ವಾಚಾರಗಳ ಬಗ್ಗೆ ನಾನು ಸೋದಾಹರಣವಾಗಿ ಹೇಳಿದೆ. ನಾವುಗಳು ಬೇರೆ ಬೇರೆ ದೇಶದವರಾದರೂ ಹಿಂದೂಗಳೇ ಆಗಿರುವುದರಿಂದ ಮುಚ್ಚುಮರೆಯಿಲ್ಲದೆ ಹೇಳಬೇಕೆಂದು ಜಗ್‌ಮೋಹನ್ ಆಗಾಗ ಹೇಳುತ್ತಿದ್ದರು. ಅವರ ಆ ವಿಶೇಷ ಸೂಚನೆ ನನಗೆ ಬೇಕಿರಲಿಲ್ಲ. ಏಕೆಂದರೆ ಈಗಾಗಲೆ ಇಲ್ಲಿಯ ಹಿಂದೂ ತರುಣರ ಮನಸ್ಸು ನನಗೆ ಸಂಪೂರ್ಣವಾಗಿ ಅರ್ಥವಾಗಿತ್ತು. ಅವರು ನಿರೀಕ್ಷಿಸುತ್ತಿದ್ದುದಕ್ಕಿಂತ ಹೆಚ್ಚು ವಾಸ್ತವಿಕವಾಗಿಯೇ ನಾನು ನಮ್ಮ ದೇಶದ ವಿಷಯವಾಗಿ ಹೇಳುತ್ತಿದ್ದುದನ್ನು ಅವರು ತುಂಬಾ ಮೆಚ್ಚಿಕೊಂಡರು. ಹಿಂದೂಧರ್ಮದಲ್ಲಿರುವ ಒಳ್ಳೆಯದನ್ನು ಹೇಳಿ ಅವರ ತಿಳಿವಳಿಕೆಯನ್ನು ನಾನು ತಿದ್ದಿದಾಗ ಅವರು ಇನ್ನೂ ಅಧಿಕವಾಗಿ ಮೆಚ್ಚುಗೆ ವ್ಯಕ್ತಪಡಿಸಿದರು. ಯಾವುದೇ ಪಕ್ಷಪಾತವಿಲ್ಲದ ವಾದಸರಣಿಯನ್ನು ನಾವು ನಿಜವಾಗಿ ಮೆಚ್ಚಿಕೊಂಡಿದ್ದೇವೆ ಎಂದರು. ನಾವು ಮಾತನಾಡುವಾಗ ಜಗ್‌ಮೋಹನ್ ಫೋಟೋ ತೆಗೆಯಲು ಹೊರಟರು. ಕುಡಿಯುವ ಲೋಟ ಹಿಡಿದಂತೆ ಫೋಟೋ ತೆಗೆದರೆ ಅಡ್ಡಿಯಿಲ್ಲ ತಾನೆ ಎಂದು ಕೇಳಿದಾಗ, ಬೇಡ ಎಂದರೆ ನಾವೀಗ ಆಡಿದ ಮಾತುಗಳಿಗೆ ಅರ್ಥವೇನು ? ನಮ್ಮ ಮಾತಿಗೂ ಕೃತಿಗೂ ಅಂತರವುಂಟಾಗುವುದಿಲ್ಲವೆ? ಎಂದು ನಾನು ಹೇಳಿದೆ. ಆ ಫೋಟೋಗಳನ್ನು ನಾನು ಭಾರತಕ್ಕೆ ಬಂದ ಮೇಲೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಅದರಲ್ಲಿ ನಾವು ಏನು ಕುಡಿದೆವು ಎಂದು ಹೇಗೆ ಕಂಡೀತು ?

ಜಗ್‌ಮೋಹನ್ ಮತ್ತು ರಾಮ್‌ಕಿಷೂನ್ ಭಾರತಕ್ಕೆ ಬರುವ ಆಸೆಯಿದೆ ಎಂದು ಹೇಳಿದರು. ನನ್ನ ಮಾತುಗಳು ನಿಮಗೆ ಚೆನ್ನಾಗಿ ತಿಳಿದಿದ್ದರೆ ಭಾರತದಲ್ಲಿ ನಿಮಗೆ ನಿರಾಶೆ ಆಗಲಾರದು ಎಂದೆ. ಭಾರತದ ಹಿಂದೂಧರ್ಮದಲ್ಲಿ ನಮಗೆ ಈಗ ಕುತೂಹಲವೇನೂ ಇಲ್ಲ, ಆದರೆ ಅದು ಎಷ್ಟರಮಟ್ಟಿಗೆ ಕೆಟ್ಟಿದೆ ಎಂಬುದನ್ನು ನೋಡುವುದರಲ್ಲಿ ಕುತೂಹಲವಿದೆ ಎಂದರು. ಇಷ್ಟಾದರೂ ಅವರು ಸತ್ಯ ಸಾಯಿಬಾಬಾ ಬಗ್ಗೆ ವ್ಯಕ್ತಮಾಡಿದ ಆಸಕ್ತಿಗೆ ಕಾರಣ ತಿಳಿಯದಾದೆ.

ಭೋಜನಾನಂತರ ಶ್ರೀಮತಿ ಜಗ್‌ಮೋಹನ್ ಅವರಿಗೆ, ಅವರ ಭಾರತೀಯ ಮಾದರಿಯ ಅಡುಗೆಗಾಗಿ ವಂದಿಸಿದೆ. ಬಾಡಿನ ಸಾರು ನಮ್ಮ ತಯಾರಿಕೆಯಂತೆಯೇ ಇತ್ತು. ಆಕೆ ಕಡ್ಡಿಯಂತೆ ತೆಳುವಾಗಿದ್ದುದನ್ನು ಕಂಡು, ಇವರು ಊಟ ಮಾಡುವುದಿಲ್ಲವೇ ಎಂದು ಜಗ್‌ಮೋಹನ್ ಅವರನ್ನು ಕೇಳಿದೆ. ಆಕೆ ಹಿಂದೂಧರ್ಮದಲ್ಲಿರುವ ಯೋಗಾಸನಗಳನ್ನು ಮಾಡಿ ಹೀಗಾಗಿದ್ದಾಳೆ ಎಂದು ತಮಾಷೆ ಮಾಡಿದರು. ನೀವೂ ಯೋಗಾಸನ ಮಾಡಿ, ಸಣ್ಣಗಾಗುತ್ತೀರಿ ಎಂದು ನಾನು ಹೇಳಿದಾಗ ಜಗ್‌ಮೋಹನ್, ನಾನು ಹಾಸಿಗೆಯಲ್ಲಿ ಈಕೆಯ ಜೊತೆ ಯೋಗಾಸನ ಮಾಡುತ್ತೇನೆ ಅಷ್ಟೇ ಎಂದಾಗ ಆಕೆ ಟ್ರಿನಿಡಾಡ್ ಹಿಂದೂ ಆದರೂ ನಾಚಿಕೊಂಡರು.

ವಾಪಸ್ಸು ಮನೆಗೆ ಬರುವಾಗ ನಾನು ಯೋಚಿಸಿದೆ. ಈ ಕೃಷ್ಣ ಹಿಂದೂ ಧರ್ಮವನ್ನು ಅಲ್ಲಗಳೆದರೂ ಹಿಂದೂಧರ್ಮದವರನ್ನೇ ಏಕೆ ಹೆಚ್ಚಾಗಿ ಸ್ನೇಹಿತರ

ನ್ನಾಗಿ ಮಾಡಿಕೊಂಡಿದ್ದಾರೆ? ಹಿಂದೂಗಳ ಬಗ್ಗೆ ಕೃಷ್ಣ ವ್ಯಕ್ತಮಾಡಿದ ನಂಬಿಕೆ ವಿಶ್ವಾಸಗಳನ್ನು ಬೇರೆ ಧರ್ಮದವರ ಬಗ್ಗೆ ಎಂದೂ ವ್ಯಕ್ತಮಾಡಲಿಲ್ಲ. ಈತ ಒಂದು ದಿನವೂ ಬೇರೆ ಧರ್ಮದವರ ಜೊತೆಗೆ ಮಿಳಿತಗೊಂಡಿದ್ದನ್ನು ಕಾಣಲಿಲ್ಲ.

ಕಾರಿನಲ್ಲಿ ಬರುವಾಗ ಕೃಷ್ಣ ಸಂಬಂಧವಿಲ್ಲದೆ ಹೇಳಿದ ಒಂದು ಸಂಗತಿ ಸ್ವಾರಸ್ಯವಾಗಿದೆ. ಇವರು ಒಂದುದಿನ ಪೋರ್ಟ್ ಆಫ್ ಸ್ಪೇಯಿನ್ನ ಪೇಟೆ ಬೀದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ತುಂಬು ಗರ್ಭಿಣಿಯಾದ ಒಬ್ಬಳು ಹುಡುಗಿ ಕೃಷ್ಣರನ್ನು ದುರುಗುಟ್ಟುತ್ತಾ ನೋಡುತ್ತಾ ನಿಂತಿದ್ದಳಂತೆ. ಈತ ಆಕೆಯ ಹತ್ತಿರ ಹೋಗಿ "ಏಕೆ ಹಾಗೆ ನನ್ನನ್ನು ನೋಡುತ್ತಿದ್ದೀರಿ?" ಎಂದು ಕೇಳಿದರಂತೆ. ಆಕೆ ನಿಟ್ಟುಸಿರುಬಿಟ್ಟು, "ಏನೂ ಇಲ್ಲ ಹೋಗಿ, ನೀವು ನನ್ನ ಗರ್ಭದಲ್ಲಿರುವ ಶಿಶುವಿನ ತಂದೆಯಂತೆ ಕಂಡಿರಿ. ಅದಕ್ಕೇ ಹಾಗೆ ನೋಡುತ್ತಿದ್ದೆ" ಎಂದಳಂತೆ. ಖಂಡಿತ ನಾನು ಆ ಗರ್ಭದ ತಂದೆಯಲ್ಲ ಎಂದು ಹೇಳಿ ಸರಸರನೆ ಬಂದುಬಿಟ್ಟರಂತೆ ಕೃಷ್ಣ.

ರಾಮ್‌ಜಸ್ ಅವರ ಧರ್ಮಪ್ರಿಯತೆ

ರಾಮ್‌ಜಸ್ ಅವರು ಹಿಂದೂ ಧರ್ಮದಲ್ಲಿ ಅಪಾರ ಭಕ್ತಿಯುಳ್ಳವರು. ರಾಮ್‌ಜಸ್ ಮತ್ತು ಅವರ ಸೋದರರು ಸಾಮಾನ್ಯ ನೌಕರಿಯಲ್ಲಿದ್ದರೂ ಹಿಂದೂ ಧರ್ಮದ ಆಚಾರಗಳಿಗಾಗಿ ತುಂಬಾ ಹಣ ಖರ್ಚು ಮಾಡುತ್ತಾರೆ. ಅದರಲ್ಲಿ ಅವರಿಗೆ ಅಪಾರವಾದ ಭಕ್ತಿಯಿದೆ. ಹಿಂದೂಧರ್ಮದಲ್ಲಿ ಹಾಗೂ ಶ್ರೀರಾಮನಲ್ಲಿ ಭಕ್ತಿ, ನಂಬಿಕೆಗಳು ಹುಟ್ಟಿದ ವಿಷಯದಲ್ಲಿ ರಾಮ್‌ಜಸ್ ಒಂದು ಘಟನೆ ಹೇಳಿದರು. ಒಂದು ದಿನ ರಾಮಾಯಣ ಪೂಜೆಯಿಂದ ಬಂದವರು ಮಲಗಿ ನಿದ್ರಿಸುವಾಗ ಒಂದು ಕನಸು ಕಂಡರು. ಭಯಂಕರವಾದ ಒಂದು ಮನುಷ್ಯಾಕೃತಿಯನ್ನು ಕಂಡು ಅದು ತನ್ನನ್ನು ಆವರಿಸಿ ಮುಗಿಸಿಬಿಡುತ್ತದೆ ಎಂದು ಭಯಪಡುತ್ತಿರುವಷ್ಟರಲ್ಲಿ, ಆ ಆಕಾರ ದಿವ್ಯರೂಪವಾಗಿ ರಾಮ್‌ಜಸ್ ಅವರನ್ನು ಕೈಬೀಸಿ ಕರೆಯಲಾರಂಭಿಸಿತು. ಹತ್ತಿರ ಹೋದಾಗ ತನ್ನ ತೋಳುಗಳಲ್ಲಿ ಎತ್ತಿ ಮಲಗಿಸಿಕೊಂಡಿತು. ಆಮೇಲೆ ಶ್ರೀರಾಮನ ವಿವಿಧ ಲೀಲೆಗಳು ತೆರೆತೆರೆಯಾಗಿ ತನಗೆ ಕಾಣಿಸಿಕೊಂಡುವು. ಬೆಳಗಾದಾಗ ಎದ್ದು ನೋಡಿದರೆ ತಾನು ರಾಮಮಂದಿರದಲ್ಲಿ ನಿದ್ರಿಸುತ್ತಿದ್ದರಂತೆ. ಆ ಘಟನೆಯನಂತರ ಅವರು ಮಾಂಸಾಹಾರವನ್ನು ಬಿಟ್ಟು, ಧರ್ಮಾಚರಣೆ ಶ್ರೀರಾಮ ಪೂಜೆಗಳಲ್ಲಿ ಅಪಾರ ಭಕ್ತಿಯನ್ನು ಬೆಳೆಸಿಕೊಂಡರು.

ಶ್ರೀರಾಮನವಮಿ ಇವರ ಮನೆಯಲ್ಲಿ ವಿಜೃಂಭಣೆಯಿಂದ ಜರುಗುತ್ತದೆ. ತಮ್ಮ ಮನೆಯ ರಾಮಮಂದಿರ ವಿಶೇಷವಾಗಿ ಅದಕ್ಕಾಗಿ ಸಜ್ಜುಗೊಳ್ಳುತ್ತದೆ. ಈ ಸಾರಿಯ ಪೂಜೆಯಲ್ಲಿ ನಾನೂ ಅಲ್ಲಿ ಪಾಲುಗೊಂಡಿದ್ದರಿಂದ ಅವರ ಪೂಜಾವಿಧಾನಗಳನ್ನು ನೋಡುವ ಅವಕಾಶ ದೊರೆಯಿತು.

ಹಿಂದೂ ದೇವತೆಗಳ ಚಿತ್ರಪಟಗಳು, ರಾಮಾಯಣ ಮಹಾಭಾರತಗಳಿಗೆ ಸಂಬಂಧಿಸಿದ, ಸಾಧು ಸಂತರಿಗೆ ಸಂಬಂಧಿಸಿದ ಪುಸ್ತಕಗಳು, ಪೂಜಾಸಾಮಗ್ರಿಗಳು ಮಂದಿರದ ತುಂಬೆಲ್ಲ ಸಾಲುಸಾಲಾಗಿ ಮೆರೆದಿವೆ. ಪೂಜಾಮಂದಿರದ ಬಾಗಿಲುಗಳು ತಳಿರು ತೋರಣಗಳಿಂದ ಅಲಂಕಾರಗೊಂಡಿವೆ. ಈ ಸಮಯದಲ್ಲಿ ಉಪವಾಸ ವ್ರತ ಧಾರಿಯಾದ ಶ್ರೀರಾಮ್‌ಜಸ್ ಅವರದು ಸಂಭ್ರಮದ ಓಡಾಟ. ಪಂಡಿತ ಹರಿದತ್ ಅವರು ಇವರ ಮನೆಯ ಪುರೋಹಿತರು. ನಾವೆಲ್ಲ ಅವರಿಗಾಗಿ ಕಾಯುತ್ತಿದ್ದಂತೆಯೇ ಪಂಡಿತರು ತಮ್ಮ ಕಾರಿನಲ್ಲಿ ಪೂಜಾಸಾಮಗ್ರಿಗಳ ಜೊತೆ ಬಂದರು. ಶ್ರೀರಾಮ್‌ಜಸ್ ಅವರ ಕುಟುಂಬವೇ ಅವರ ಕಾಲಿಗೆ ಎರಗಿತು. ಪಂಡಿತರು ತಮಗಾಗಿ ಇರಿಸಿದ ನೀರಿನಲ್ಲಿ ಕೈಕಾಲು ತೊಳೆದು ಪೂಜಾಮಂದಿರಕ್ಕೆ ಆಗಮಿಸಿ ಪೀಠದ ಮೇಲೆ ಮಂಡಿಸಿದರು.

ಪಂಡಿತರ ಪರಿಚಯ ನನಗೆ ಮೊದಲೇ ಆಗಿದ್ದುದರಿಂದ, ಪೂಜೆಗೆ ಅಣಿಯಾಗುವ ವರೆಗೆ ಮಾತನಾಡೋಣ ಬನ್ನಿ ಎಂದು ಅವರು ಕರೆದರು. ಪಂಡಿತರಿಗೆ ಟ್ರಿನಿಡಾಡ್‌ನಲ್ಲಿ ಒಂದು ದೊಡ್ಡ ತೋಟವಿದೆ. ಅದರಲ್ಲಿ ತೆಂಗು, ಕೋಕೊ, ಹಣ್ಣಿನಗಿಡ ಮೊದಲಾದು ವನ್ನು ಬೆಳೆಸಿದ್ದಾರೆ. ತೋಟದ ಒಳಗಿನ ಮನೆಯಲ್ಲಿ ಪಟ್ಟಣದ ಗಲಿಬಿಲಿಯಿಂದ ದೂರವಾಗಿ ಇರುವುದಾಗಿ ಹೇಳಿದರು. ಪಂಡಿತರಿಗೆ ನಾಲ್ಕುಜನ ಮಕ್ಕಳು. ಇಬ್ಬರು ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಳು. ಹೆಣ್ಣು ಮಕ್ಕಳಿಗೆ ಮದುವೆಯಾಗಿ ಒಬ್ಬಳು ಇಂಗ್ಲೆಂಡಿನಲ್ಲಿ ಇನ್ನೊಬ್ಬಳು ಕೆನಡಾದಲ್ಲಿ ಇದ್ದಾರೆ. ಇಬ್ಬರು ಗಂಡು ಮಕ್ಕಳೂ ಟ್ರಿನಿಡಾಡ್‌ನಲ್ಲೇ ಸರ್ಕಾರಿ ಕೆಲಸದಲ್ಲಿದ್ದಾರೆ. ಇವರು ತಮ್ಮ ಸರ್ಕಾರಿ ಕೆಲಸದ ಜೊತೆಗೆ ವಂಶಪಾರಂಪರ್ಯವಾಗಿ ಬಂದ ಪೌರೋಹಿತ್ಯವನ್ನೂ ಮುಂದು ವರಿಸಿಕೊಂಡು ಹೋಗುತ್ತಿದ್ದಾರೆ.

ಪಂಡಿತರು ಶುಭ್ರವಾದ ಜುಬ್ಬ ಕಚ್ಚೆಗಳನ್ನು ಧರಿಸಿ, ರುದ್ರಾಕ್ಷಿಮಾಲೆ ಹಾಕಿ ಬಂಗಾಳಿಗಳಂತೆ ಕಾಣುತ್ತಾರೆ. ಕಾಲಿಗೆ ಸೊಗಸಾದ ಚಪ್ಪಲಿ ಕೈಗೆ ಚಿನ್ನದ ಸರಪಣಿಯ ಗಡಿಯಾರ ನುಣ್ಣಗೆ ಮುಖಕ್ಷೌರಮಾಡಿ, ನೀಟಾಗಿ ತಲೆಬಾಚಿಕೊಂಡು ಮಿರುಗುವ ಈ 60 ವರ್ಷದ ಪಂಡಿತರು 40 ವರ್ಷದವರಂತೆ ಕಾಣುತ್ತಾರೆ. ತಲೆಯಲ್ಲಿ ಒಂದೂ ಬಿಳಿಕೂದಲು ಕಾಣಲಿಲ್ಲ.

ಪಂಡಿತರಿಗೆ ಹಿಂದಿ ಸುಮಾರಾಗಿ ಬರುತ್ತದೆ. ಸಂಸ್ಕೃತದ ಶ್ಲೋಕಗಳನ್ನು ಬಾಯಿಪಾಠ ಮಾಡಿದ್ದಾರೆ. ಹಿಂದಿ ಸಂಸ್ಕೃತಗಳ ಶ್ಲೋಕಗಳ ನಡುವೆ ಇಂಗ್ಲಿಷ್‌ನಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಭಕ್ತಾದಿಗಳಿಗೆ ಇಂಗ್ಲಿಷಿನಲ್ಲಿಯೇ ಸೂಚನೆ ಕೊಡು ತ್ತಾರೆ.

ರಾಮ್‌ಜಸ್ ಅವರ ಹೆಂಡತಿ ಮತ್ತು ಹೆಣ್ಣು ಮಕ್ಕಳು ಈ ದಿನ ಸೀರೆ ರವಿಕೆ ತೊಟ್ಟು, ಹಣೆಗೆ ಗಂಧ ಕುಂಕುಮಗಳನ್ನು ಧರಿಸಿ ಸಂಭ್ರಮದಿಂದ ಪೂಜೆಗೆ ಅಣಿ ಮಾಡುತ್ತಿದ್ದರು. ಪೂಜೆಯ ದಿನ ಮಾತ್ರ ಸೀರೆ ಉಡುವ ಇವರಿಗೆ ಸರಿಯಾಗಿ

ಉಡುವುದು ಗೊತ್ತಿಲ್ಲವೆಂದು ಕಾಣುತ್ತದೆ. ಹುಡುಗಿಯರು ಸುಮ್ಮನೆ ಸೀರೆ ಸುತ್ತಿಕೊಂಡು ತಲೆಯ ತುಂಬ ಸೆರಗನ್ನು ಹೊದ್ದುಕೊಂಡಿದ್ದರು. ಹಿರಿಯ ಹುಡುಗಿಗೆ ಈಗ ಮದುವೆ ನಿಶ್ಚಯವಾಗಿರುವುದರಿಂದ ಆಕೆ ವಿಶೇಷವಾಗಿ ಅಲಂಕರಿಸಿಕೊಂಡಿದ್ದಳು.

ಪಂಡಿತರು ಒಬ್ಬೊಬ್ಬರನ್ನು ಕರೆದು, ತಮ್ಮ ಮುಂದೆ ಹಾಕಿದ್ದ ಮಣೆಯ ಮೇಲೆ ಕೂರಿಸಿ ಪೂಜೆ ಮಾಡಿಸುತ್ತಿದ್ದರು. ಕೆಲವು ಮಂತ್ರಗಳನ್ನು ಹೇಳಿಕೊಟ್ಟು ಅವರಿಂದ ಹೇಳಿಸುತ್ತಿದ್ದರು. ಮಧ್ಯೆ ಮಧ್ಯೆ ಇಂಗ್ಲಿಷ್‌ನಲ್ಲಿ ಸೂಚನೆಕೊಡುತ್ತಿದ್ದರು. "Request the God to fulfil your ambition." "Take the prasad", "God has accepted your offers." ಇತ್ಯಾದಿ ಆದೇಶ, ಸೂಚನೆ ನೀಡುತ್ತಿದ್ದರು.

ಪಂಡಿತರ ಪೂಜೆಯನ್ನು ಸಾಂಗವಾಗಿ ನಡೆಸಿದರು. ನಮ್ಮ ಹಾಗೆಯೇ ಹಣ್ಣು, ತುಪ್ಪ, ಎಣ್ಣೆ, ಬಟ್ಟೆ ಮೊದಲಾದುವನ್ನು ಧಾರಾಳವಾಗಿ ಅಗ್ನಿಗೆ ಆಹುತಿ ಕೊಡಿಸಿದರು. ಸುಮಾರು ಒಂದೂವರೆ ಗಂಟೆ ನಡೆದ ಪೂಜಾವಿಧಿಗೆ ಆಗಾಗ ಇಡುವ ಕಾಣಿಕೆಯೇ ಸುಮಾರು 25–30 ಡಾಲರು ಹಣ ಆಗಿತ್ತು. ಜೊತೆಗೆ ಬಟ್ಟೆ, ಹಣ್ಣು, ಧಾನ್ಯಗಳು ತೆಂಗಿನಕಾಯಿಗಳು ರಾಶಿಯಾಗಿತ್ತು. ಪೂಜೆ ಮುಗಿದ ಮೇಲೆ ಭಕ್ತರ ಕಾಣಿಕೆ ಸಂದಾಯವಾಗಬೇಕು. ಇದು ಭಕ್ತರ ಸಾಮರ್ಥ್ಯವನ್ನು ಅವಲಂಬಿಸಿರುತ್ತದಂತೆ. ರಾಮಜಸ್ 100 ಡಾಲರ್‌ನ ಒಂದು ನೋಟು ಕೊಟ್ಟರು. ಪಂಡಿತರು ಪ್ರತಿ ದಿನ ಈ ರೀತಿಯ 2–3 ಪೂಜೆಗಳನ್ನು ನೆರವೇರಿಸುತ್ತಾರೆ. ಇಷ್ಟಾದರೂ ಪಂಡಿತರಿಗೆ ಈ ಪೌರೋಹಿತ್ಯ ಉಪಕಸಬು.

ಪೂಜಾಮಂದಿರದ ಪಕ್ಕದಲ್ಲಿ ಒಂದು ಮಾವಿನ ಮರಕ್ಕೆ ವೀಳ್ಯದ ಬಳ್ಳಿಯನ್ನು ಹಬ್ಬಿಸಿದ್ದಾರೆ. ಈ ವೀಳ್ಯದ ಎಲೆಗಳನ್ನು ಇಲ್ಲಿ ಯಾರೂ ತಿನ್ನುವುದಿಲ್ಲ. ಪೂಜೆಗೆ ಮಾತ್ರ ಬಳಸುತ್ತಾರೆ. ಅಡಿಕೆ ಗಿಡಗಳನ್ನೂ ಬೆಳೆಸಿದ್ದಾರೆ. ಅಡಿಕೆ ಕಾಯಿಗಳನ್ನು ಪೂಜೆಗೆ ಇಡುತ್ತಾರೆ. ಪೂಜೆಯ ಮುಖ್ಯ ಭಾಗವೆಂದರೆ, ಬಿದಿರಿನ ಗಳುಗಳಿಗೆ ಬಣ್ಣ ಬಣ್ಣದ ಬಟ್ಟೆಯ ಬಾವುಟಗಳನ್ನು ಕಟ್ಟುವುದು. ಇಂತಹ 8–10 ಬಿದಿರುಗಳಿಗೆ ಬಾವುಟ ಕಟ್ಟಿ ಮನೆಯ ಮುಂದೆ ನಿಲ್ಲಿಸುತ್ತಾರೆ. ಈ ಬಾವುಟದ ಕಂಬಗಳಿರುವ ಮನೆಗಳೆಲ್ಲ ಹಿಂದೂಗಳವು ಎಂದು ಸುಲಭವಾಗಿ ಪತ್ತೆಹಚ್ಚಬಹುದು.

ಕೆರೇಬಿಯನ್ ಸಂಸ್ಕೃತಿ

ಕೆರೇಬಿಯನ್ ಸಮುದ್ರದ ನಡುವೆ ವಿರಳವಾಗಿ ನಡುಗಡ್ಡೆಗಳಂತೆ ನಿಂತಿರುವ ವೆಸ್ಟ್‌ಇಂಡೀಸ್ ದ್ವೀಪಗಳ ಸಂಸ್ಕೃತಿ ವಿಶಿಷ್ಟವಾದುದು. ಈ ದ್ವೀಪಗಳೆಲ್ಲ ಸುಣ್ಣದ ಕಲ್ಲಿನ ಭೂಮಿಯಿಂದ ಕೂಡಿರುವುದರಿಂದ ಸಮುದ್ರದ ನೀರು ಹಸುರಾಗಿ, ಅದರಿಂದಾಚೆಗೆ ಅಚ್ಚ ನೀಲಿಯಾಗಿ ಕಂಗೊಳಿಸುತ್ತದೆ. ದ್ವೀಪದ ಯಾವುದೇ ಭಾಗದಲ್ಲೂ ಸಮುದ್ರವನ್ನು ಕಾಣಬಹುದು. ಈ ದ್ವೀಪಗಳ ಸಮುದ್ರದ ದಡೆಗಳಂತೆ

ಒಳನಾಡುಗಳು ಮುಂದುವರೆದಿಲ್ಲ. ಅಥವಾ ಅಲ್ಲಿ ವಿಶೇಷವಾದುದು ಏನೂ ಇಲ್ಲ. ತೀರಪ್ರದೇಶಗಳಲ್ಲಿ ಕೈಗಾರಿಕೆ, ಪ್ರವಾಸೋದ್ಯಮ ಬೆಳೆದಿರುವುದರಿಂದ ನಗರಗಳು, ನಾಗರಿಕತೆಗಳು ಅಲ್ಲಿ ನೆಲೆನಿಂತಿವೆ. ಆದ್ದರಿಂದ ಎತ್ತೆತ್ತ ನೋಡಿದರೂ ನೀರು ಮತ್ತು ನೀರು !

ಇಲ್ಲಿಯ ಜನ ನಡೆಯುವುದಿಲ್ಲ, ಸರ್ಕಾರಿ ಬಸ್‌ಗಳಲ್ಲಿ ನೂಕು ನುಗ್ಗಲುಗಳಿಲ್ಲ. ಕಛೇರಿ ಕೆಲಸಗಾರರು, ಕಾರ್ಮಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಸಂಚರಿಸುವ ಸಾಲು ಸಾಲು ಕಾರುಗಳಿಂದ ರಸ್ತೆ ಆವೃತವಾಗಿರುತ್ತವೆ. ಪಕ್ಕದ ಮನೆಗೆ ಹೋಗಬೇಕಾದರೆ ನಡೆದು ಹೋಗುವುದಿಲ್ಲ, 3–4 ಫರ್ಲಾಂಗು ದೂರ ಹೋಗಿ ಬೇರೆ ರಸ್ತೆಯಲ್ಲಿ ಹಿಂದಕ್ಕೆ ತಿರುಗುವ ಜಾಗದಿಂದ ವಾಪಸ್ಸು ಬಂದು ಪಕ್ಕದ ಮನೆಗೆ ಸೇರಬೇಕು. ಪರಂಗಿ ಹಣ್ಣಿನ ಒಂದು ಬುಟ್ಟಿಯನ್ನು ಕಾರಿನಲ್ಲಿ ತಂದು ಅಂಗಡಿಗೆ ಮಾರುತ್ತಾನೆ ರೈತ. ಇವರೆಲ್ಲರಿಂದ ರಸ್ತೆಗಳು ಸದಾ ಕಾರುಗಳಿಂದ ಗಿಜಿಗರಿದಿರುತ್ತವೆ. ಒಂದು ಮೈಲಿ ಹೋಗಬೇಕಾದರೆ ಸಾಧಾರಣ 15–20 ನಿಮಿಷವಾದರೂ ಬೇಕು. ದಾಟುರಸ್ತೆಗಳ ಹತ್ತಿರ ಕೆಲವು ಸಾರಿ ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಮೈಲಿ ಮೈಲಿ ಕಾರುಗಳ ಮೆರವಣಿಗೆ ಜೋಡಿರಸ್ತೆಗಳಲ್ಲಿ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಕಛೇರಿಗಳು ಪ್ರಾರಂಭವಾಗುವ ಮತ್ತು ಮುಗಿಯುವ ಸಮಯಗಳಲ್ಲಿ ಹೊರಗೆ ಹೋಗಲು ಇಲ್ಲಿ ಜನ ಭಯಪಡುತ್ತಾರೆ. ಪರಿಚಯದ ಜನ ಇಲ್ಲಿ 'ಡ್ರಾಪ್' ಕೊಡುವುದಕ್ಕೆ ಸ್ವಲ್ಪವೂ ಹಿಂಜರಿಯುವುದಿಲ್ಲ.

ಇಲ್ಲಿಯ ಜನ ನೀರು ಕುಡಿಯುವುದಿಲ್ಲ. ಊಟ, ತಿಂಡಿ ತಿನ್ನುವಾಗ ಟೇಬಲ್ ಮೇಲೆ ನೀರು ಇಡುವುದಿಲ್ಲ. ಹೋಟೆಲಿಗೆ ಹೋಗಿ ಊಟ, ತಿಂಡಿ ಕೇಳಿದರೆ, ಅದಕ್ಕೆ ಮೊದಲು ಕುಡಿಯುವುದಕ್ಕೆ ಏನು ಬೇಕು ಎಂದು ಕೇಳುತ್ತಾರೆ. ಬೀರನ್ನು ನೀರಿನಂತೆ ಕುಡಿಯುತ್ತಾರೆ. ಕಾಲೇಜುಗಳಿಗೆ ವಿದ್ಯಾರ್ಥಿಗಳು ಡಬ್ಬಿಗಳಲ್ಲಿ ಸಿಕ್ಕುವ ಬೀರನ್ನು ಕೈಯಲ್ಲಿ ಹಿಡಿದು ಕುಡಿಯುತ್ತಾ ಹೋಗುತ್ತಾರೆ. ಮುಗಿಸಿ ಡಬ್ಬಿಗಳನ್ನು ಬಿಸಾಡುತ್ತಾರೆ. ಕುಡಿಯುವುದು ಕೆಟ್ಟ ಅಭ್ಯಾಸ ಎನ್ನುವುದು ಇಲ್ಲಿ ಯಾರಿಗೂ ಗೊತ್ತಿಲ್ಲ.

ಕೆರೇಬಿಯನ್ ದ್ವೀಪಗಳಲ್ಲಿ ಹೆಚ್ಚಾಗಿ ದುಡಿಯುವವರು ಹೆಂಗಸರೇ. ಈ ದ್ವೀಪಗಳಲ್ಲಿ ಹೆಂಗಸರ ಸಂಖ್ಯೆ ಹೆಚ್ಚಂತೆ. ಎಲ್ಲ ಕಛೇರಿಗಳಲ್ಲೂ ಸ್ತ್ರೀಯರೇ ಇರುತ್ತಾರೆ. ಸಾಮಾನ್ಯವಾಗಿ ವ್ಯಾಪಾರವೂ ಸ್ತ್ರೀಯರದೇ. ಗಂಡಸರು ಸಾಮಾನ್ಯವಾಗಿ ಸೋಮಾರಿಗಳು, ಕಷ್ಟಪಟ್ಟು ಕೆಲಸಮಾಡುವುದಿಲ್ಲ. ಕುಟುಂಬದ ಹೊಣೆಗಾರಿಕೆಯೂ ಹೆಂಗಸನ್ನೇ ಅವಲಂಬಿಸಿರುತ್ತದೆ. ರಾಮ್‌ಜಸ್ ಅವರ ಇಬ್ಬರು ಸೋದರರೂ ಕಛೇರಿ ಕೆಲಸ ಮುಗಿಸಿ ಬಂದರೆ, ಸದಾ ಸಿಗರೇಟು ಸೇದುತ್ತಾ ಕೂತಿರುತ್ತಾರೆ. ಅವರ ಮನೆಯ ಹುಡುಗಿಯರು ಅಂಗಡಿಗೆ ಸಾಮಾನು ಹೊರುತ್ತಿದ್ದರೂ ಈ ಗಂಡಸರು ಸಹಾಯ ಮಾಡುವುದಿಲ್ಲ. ನಮ್ಮಲ್ಲಿಯ ಹೆಂಗಸರಂತೆ ಅಲ್ಲಿ ಗಂಡಸರು ಹೆಚ್ಚು

ಸಮಯ ಕೆಲಸವಿಲ್ಲದೆ ಕಳೆಯುತ್ತಾರೆ. ಗೃಹಕೃತ್ಯದ ಜೊತೆಗೆ ಕುಟುಂಬಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳೂ ಹೆಂಗಸರಿಗೆ ಸೇರಿದ್ದು ಎಂಬ ಭಾವನೆ ಇಲ್ಲಿ ಇರುವಂತಿದೆ. ಆದ್ದರಿಂದಲೇ ಇಲ್ಲಿಯ ಹೆಂಗಸರು ಸ್ಥೂಲಕಾಯದವರಾದರೂ ಗಟ್ಟಿಮುಟ್ಟಾಗಿ ಆರೋಗ್ಯವಂತರಾಗಿರುತ್ತಾರೆ. ಜೀವನದ ನಾನಾ ರಂಗಗಳಲ್ಲಿ ದುಡಿಯುವ ಹೆಂಗಸರು ಸದಾ ಕಣ್ಣಿಗೆ ಬೀಳುತ್ತಾರೆ. ಇವರನ್ನೆಲ್ಲ ನೋಡಿದಾಗ ಗಂಡಸರು ಏನಾದರು ಎನ್ನಿಸುತ್ತದೆ.

ಹಿಂದೆ ಗುಲಾಮರ ಮಾರಾಟವಿದ್ದ ಕಾಲದಲ್ಲಿ ಗುಲಾಮರನ್ನು ತಯಾರು ಮಾಡುತ್ತಿದ್ದ ಒಂದು ವಿಧಾನವನ್ನು ನನ್ನ ಸ್ನೇಹಿತರು ಹೇಳಿದರು. ಈ ಕೆರೇಬಿಯನ್ ಸಮುದ್ರದ ಕೆಲವು ಸಣ್ಣ ದ್ವೀಪಗಳಲ್ಲಿ ಮಕ್ಕಳನ್ನು ಹೆರಬಲ್ಲ ಸಾಮರ್ಥ್ಯವುಳ್ಳ ಹೆಂಗಸರು ಮತ್ತು ಕಟ್ಟುಮಸ್ತಾದ ಗಂಡಸರನ್ನು ಕೂಡಿ ಹಾಕಿ ಮಕ್ಕಳನ್ನು ಪಡೆದು ಬೆಳೆಸುತ್ತಿದ್ದರಂತೆ. ಆಡು, ಕುರಿಗಳಂತೆ ಅವುಗಳನ್ನು ಬೆಳೆಸಿ ಮಾರಾಟಕ್ಕೆ ಬಳಸಿಕೊಳ್ಳುತ್ತಿದ್ದರಂತೆ. ಈಗ ಇಲ್ಲಿಯ ಕಲಾವಿದರು ಇವುಗಳನ್ನೆಲ್ಲ ತಮ್ಮ ಕಲೆಯಲ್ಲಿ ಬಿಂಬಿಸುತ್ತಿದ್ದಾರೆ.

ಈ ದ್ವೀಪಗಳ ಜನ ಬ್ರಿಟಿಷರಂತೆ ಮುಖ ಗಂಟು ಹಾಕಿಕೊಳ್ಳುವವರಲ್ಲ, ಅಮೆರಿಕನರಂತೆ ಅಪರಿಚಿತರಲ್ಲೂ ಹಸನ್ಮುಖರಾಗಿರುವುದಿಲ್ಲ. ಇದೊಂದು ರೀತಿಯ ಮಿಶ್ರ ಸಂಸ್ಕೃತಿ. ಕಾರು ಬೀರು ನೀರು ನೀರೆಯರ ನಾಡು ಇದು!

ಟ್ರಿನಿಡಾಡ್‌ನಲ್ಲಿ ಹಿಂದೂಗಳು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಈ ಸಂಸ್ಥೆಗಳು ಶಿಕ್ಷಣದ ಜೊತೆಗೆ ಧರ್ಮಜಾಗೃತಿಯನ್ನುಂಟುಮಾಡುವ ಕೆಲಸವನ್ನೂ ಸಾಕಷ್ಟು ಪ್ರಮಾಣದಲ್ಲಿ ಮಾಡುತ್ತಿವೆ. ಈ ಸಂಸ್ಥೆಗಳ ಶಾಲೆಗಳಲ್ಲಿ ಹಿಂದಿ ಭಾಷೆಯನ್ನು ಕಲಿಸಲಾಗುತ್ತಿದೆಯಂತೆ. ಭೂದೇವ್‌ಶರ್ಮರ ಮೂಲಕ ಇಂತಹ ಶಾಲೆಗಳ ಕೆಲವು ಅಧ್ಯಾಪಕರ ಪರಿಚಯವಾಗಿತ್ತು. ಸೇಂಟ್ ಆಗಸ್ಟೈನ್‌ನಲ್ಲಿರುವ ಲಕ್ಷ್ಮೀಪ್ರೌಢಶಾಲೆಯಲ್ಲಿ ಒಂದು ದಿನ ನಾನು ಮಾತನಾಡಬೇಕೆಂದು ಕೇಳಿದ್ದರು. ಪ್ರತಿ ಭಾನುವಾರ ಶಾಲೆಯಲ್ಲಿ ಭಜನೆ ಮತ್ತು ಪೂಜೆಗಳನ್ನು ಇಲ್ಲಿ ಇಟ್ಟುಕೊಳ್ಳುತ್ತಾರೆ. ಅಲ್ಲಿಯ ಹಿಂದೂಗಳೆಲ್ಲ ಸಾಮಾನ್ಯವಾಗಿ ಈ ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. ಶರ್ಮರು ನನ್ನನ್ನು ಈ ಸಭೆಗೆ ಕರೆದುಕೊಂಡು ಹೋಗಿದ್ದರು. ಪ್ರಾರಂಭದಲ್ಲಿ ಹಿಂದಿ ಮತ್ತು ಸಂಸ್ಕೃತದ ಶ್ಲೋಕಗಳ ಪಠನವಾಯಿತು. ಆಮೇಲೆ ಸ್ವಲ್ಪ ಹೊತ್ತು ಭಜನೆ ನಡೆಯಿತು. ಯಾರಾದರೂ ಹಿರಿಯರು ನಿಂತು ಈ ಕಾರ್ಯಕ್ರಮವನ್ನೆಲ್ಲ ನಡೆಸಿಕೊಡುತ್ತಾರೆ. ಆಮೇಲೆ ಪೂಜಾವಿಧಿಗಳು ಸಾಂಗವಾಗಿ ನಡೆಯುತ್ತವೆ. ಹಿಂದೂ ದೇವರುಗಳ ಚಿತ್ರಪಟಗಳಿಗೆ ಪೂಜೆಯಾದ ಮೇಲೆ ಪ್ರಸಾದ ಹಂಚಿಕೆಯಾಗುತ್ತದೆ. ಕೊನೆಯಲ್ಲಿ ವಿಶೇಷ ಆಹ್ವಾನಿತರಿಂದ ಉಪನ್ಯಾಸ ನಡೆಯುತ್ತದೆ—ಹಿಂದೂ ಧರ್ಮ ಸಂಸ್ಕೃತಿಗಳ ಬಗ್ಗೆ. ಆ ದಿನ ನಾನು ಹಿಂದೂ ಧರ್ಮದ ಬಗ್ಗೆ ಮಾತನಾಡಿದೆ. ಧರ್ಮ ಎನ್ನುವುದು ಅತಿ ಸರಳವಾದುದು. ಪಂಡಿತರು

ವ್ಯಾಖ್ಯಾನಿಸುವಂತೆ ಅದು ಜಟಿಲವಾದುದಲ್ಲ ಎಂದು ಹೇಳಿ ಬಸವಣ್ಣನವರ "ಕಳಬೇಡ ಕೊಲಬೇಡ...." ಎಂಬ ವಚನವನ್ನು ವಿವರಿಸಿದೆ. ಸರಳವಾದ ಧರ್ಮವನ್ನು ಪಂಡಿತರು ತಮ್ಮ ಉಳಿವಿಗಾಗಿ ಕ್ಲಿಷ್ಟವಾದುದನ್ನಾಗಿ ಮಾಡಿದ್ದಾರೆ. ಜನಸಾಮಾನ್ಯರಿಗೆ ಧರ್ಮದ ವಿಷಯ ತಿಳಿಯುವಂತೆ ಮಾಡುವುದು ಇಂತಹ ಸಂಸ್ಥೆಗಳ ಕರ್ತವ್ಯವಾಗ ಬೇಕು ಎಂದು ಹೇಳಿದೆ. ಮತ್ತು ಹಿಂದೂ ಧರ್ಮ, ಸಂಸ್ಕೃತಿಗಳ ಬಗ್ಗೆ ಅವರಿಗಿರುವ ಶ್ರದ್ಧೆ ಭಾರತೀಯರಿಗೆ ಇಲ್ಲವೆಂದೂ, ಭಾರತದ ಧರ್ಮಸಂಸ್ಥೆಗಳಲ್ಲಿ ನಡೆಯುವ ಅನಾಚಾರಗಳನ್ನು ಕಣ್ಣಾರೆ ಕಂಡರೆ ಭಾರತ ಮತ್ತು ಹಿಂದೂಧರ್ಮಗಳ ಮೇಲಿನ ಇಲ್ಲಿಯವರ ಶ್ರದ್ಧೆ ಕಡಿಮೆಯಾಗಬಹುದೆಂದೂ ಹೇಳಿದೆ. ಇಲ್ಲಿಯ ಹಿಂದೂಗಳಲ್ಲಿ ಇನ್ನೂ ಇರುವ ಮಾತೃಭೂಮಿ, ಮಾತೃಧರ್ಮಗಳ ಪ್ರೇಮ ಅನ್ಯಾದೃಶವಾದುದು. ಮೂಲದಲ್ಲಿ ಸಾಯುತ್ತಿರುವ ಈ ಪ್ರೇಮ ಈ ತುದಿಯಲ್ಲಿ ಇನ್ನು ಹಸಿರಾಗಿದೆ.

ನಾನು ಜಮೈಕಾದಲ್ಲಿರುವಾಗ ಅಲ್ಲಿಯ ಇಂಗ್ಲಿಷ್ ಮತ್ತು ಭಾಷಾಶಾಸ್ತ್ರದ ಪ್ರಾಧ್ಯಾಪಕರಾದ ಅಲೆಯ್ನ್ ಅವರ ಒತ್ತಾಯದ ಮೇಲೆ "ಭಾರತೀಯ ಜನಪದ ನಂಬಿಕೆ" ಎಂಬ ವಿಷಯದಲ್ಲಿ ಮಾತನಾಡಿದ್ದೆ. ಅಲೆಯ್ನ್ ಅವರ ವಿಭಾಗದಲ್ಲೇ ಏರ್ಪಟ್ಟ ಈ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಅಧ್ಯಾಪಕರೇ ಸೇರಿದ್ದರು, ಅದರಲ್ಲೂ ಮಹಿಳಾ ಅಧ್ಯಾಪಕರು ಹೆಚ್ಚಿದ್ದರು. ಜನಪದ ನಂಬಿಕೆಯಲ್ಲಿ ಅಡಕವಾಗಿರುವ ಕೆಲವು ವೈಜ್ಞಾನಿಕವಾದ, ವ್ಯಾವಹಾರಿಕವಾದ ಮತ್ತು ಸಾಮಾಜಿಕವಾದ ಮೌಲ್ಯಗಳನ್ನು ಎತ್ತಿಹಿಡಿದು, ಮೌಢ್ಯಮೂಲವಾದ ನಂಬಿಕೆಗಳನ್ನು ಅಲ್ಲಗಳೆದೆ. ಸ್ತ್ರೀಸಂಬಂಧವಾದ ನಂಬಿಕೆಗಳು ಬಂದಾಗ ಅಲ್ಲಿದ್ದ ಸ್ತ್ರೀಯರು ಬಹು ಕುತೂಹಲದಿಂದ ವಿವರ ಕೇಳುತ್ತಿದ್ದರು. ಮಕ್ಕಳಿಲ್ಲದ ಸ್ತ್ರೀಗೆ ಸ್ವರ್ಗದಲ್ಲಿ ಸ್ಥಾನವಿಲ್ಲ. ಗಂಡನಿಗಿಂತ ಮೊದಲು ಹೆಂಡತಿ ಊಟಮಾಡಬಾರದು ಇತ್ಯಾದಿ ನಂಬಿಕೆಗಳನ್ನು ಈ ಮಹಿಳೆಯರು ಕಟುವಾಗಿ ಟೀಕಿಸಿದರು. ಭಾರತೀಯ ಗಂಡಸರು ಪಕ್ಷಪಾತಿಗಳು ಎಂದು ಹೀಯ್ಯಾಳಿಸಿದರು. ಹೆಂಗಸಿಗೇಕೆ ಗಂಡಸಿಗೆ ಸಮಾನವಾದ ಸ್ಥಾನಮಾನಗಳಿಲ್ಲ ಎಂದು ಪ್ರಶ್ನೆಗಳ ಮಳೆಗರೆದರು. ನಾನು ನೇರವಾಗಿ, ನಮ್ಮದು ಪುರುಷ ಪ್ರಧಾನವಾದ ಸಮಾಜ, ಇಲ್ಲಿ ಸ್ತ್ರೀಯರ ಸ್ಥಾನಮಾನಗೌಣವಾಗಿರುತ್ತವೆ ಎಂದು ಒಪ್ಪಿಕೊಂಡೆ. ಆದರೆ ಸ್ತ್ರೀಯರನ್ನು ಕೆಲವೊಂದು ವಿಷಯಗಳಲ್ಲಿ ಗಂಡಸಿಗಿಂತ ಹೆಚ್ಚು ಗೌರವದಿಂದ ಕಾಣುತ್ತೇವೆ. ಕುಟುಂಬದಲ್ಲಿ ಸ್ತ್ರೀಗೆ ದೊಡ್ಡ ಸ್ಥಾನವಿದೆ ಎಂದು ಹೇಳಿದೆ. ಸ್ತ್ರೀಯನ್ನು ಗೌರವಿಸುವುದರಿಂದ ದೇವತೆಗಳು ಸುಪ್ರೀತರಾಗುತ್ತಾರೆ ಎಂಬ ನಂಬಿಕೆಗಳೂ ನಮ್ಮಲ್ಲಿವೆ ಎಂದು ಹೇಳಿದೆ. ಏನೇ ಆಗಲಿ ಇಂಥ ನಂಬಿಕೆಗಳಿಂದ ನಮ್ಮ ಸಮಾಜಕ್ಕೆ ಕೇಡೇನೂ ಆಗಿಲ್ಲ, ಕೌಟುಂಬಿಕ ಜೀವನ ಸುಭದ್ರವಾಗಿದೆ ಎಂದು ವಾದಿಸಿದೆ. ನಂಬಿಕೆಗಳಲ್ಲಿರುವ ಕೆಡುಕನ್ನು ಒಳಿತನ್ನು ನಿಷ್ಪಕ್ಷಪಾತವಾಗಿ ನಾನು ಚರ್ಚಿಸಿದಾಗ, ಅವರು ನನ್ನ ವಸ್ತುನಿಷ್ಠವಾದ ದೃಷ್ಟಿಯನ್ನು ಮೆಚ್ಚಿಕೊಂಡರು. ನನ್ನ ಭಾಷಣ ಮತ್ತು ಚರ್ಚೆಯ ಪೂರ್ಣ ಪಾಠವನ್ನು ಒಬ್ಬ

ಅಧ್ಯಾಪಕಿ ಧ್ವನಿಮುದ್ರಿಸಿಕೊಂಡರು. ಒಟ್ಟಿನಲ್ಲಿ ಇವರಿಗೆ ನಮ್ಮ ಸಮಾಜದ ಸ್ತ್ರೀಯರ ಸ್ಥಾನದ ಬಗ್ಗೆ ಕನಿಕರದ ಭಾವವಿತ್ತು !

ಅಂತರ್ಧರ್ಮೀಯ ವಿವಾಹಕ್ಕೆ ಪೌರೋಹಿತ್ಯ

ರಾಮ್‌ಜಸ್ ಅವರು ತಮ್ಮ ಹಿರಿಯ ಮಗಳ ಮದುವೆಗೆ ನಿಶ್ಚಯಿಸಿದ್ದರು. ನಾನು ಅವರ ಮನೆಗೆ ಹೋದ ಸಂದರ್ಭಗಳಲ್ಲಿ ಒಂದಲ್ಲ ಒಂದು ಏರ್ಪಾಡುಗಳಲ್ಲಿ ನಿರತರಾಗಿರುತ್ತಿದ್ದರು. ಅವರ ಹೆಂಡತಿ ಬರ್ನಿಸ್ ಅವರು ಬಾಗಿಲು, ಕಿಟಕಿ, ಸೋಫಗಳಿಗೆ ಬಟ್ಟೆಗಳನ್ನು ಹೊಲಿಗೆ ಮಾಡುವುದರಲ್ಲಿ, ಮನೆಯ ನೆಲಕ್ಕೆ ಪ್ಲಾಸ್ಟಿಕ್ ಚಾಪೆಗಳನ್ನು ಹಾಸುವುದರಲ್ಲಿ ನಿರತರಾಗಿರುತ್ತಿದ್ದರು. ಒಂದು ದಿನ ಸಂಜೆ ನಾನು ರಾಮ್‌ಜಸ್ ಮತ್ತು ಅವರ ಸೋದರರ ಜೊತೆ ಮಾತನಾಡುತ್ತಾ ಕುಳಿತಿದ್ದಾಗ ಹಿಂದೂವಿನಂತೆ ಕಾಣುತ್ತಿದ್ದ ತರುಣನೊಬ್ಬ ನಮ್ಮ ಬಳಿಗೆ ಬಂದು "ನಿಮ್ಮ ಜೊತೆ ಒಂದು ವಿಷಯ ಮಾತನಾಡಬೇಕಾಗಿದೆ" ಎಂದು ರಾಮ್‌ಜಸ್ ಅವರ ಅನುಮತಿ ಕೋರಿದ. ಅವರು, "ಇವರೆಲ್ಲ ನಮ್ಮವರೇ, ಏನು ವಿಷಯ, ಮಾತನಾಡಿ" ಎಂದು ಹೇಳಿದರು. ಆ ಹುಡುಗ ಯಾವ ಸಂಕೋಚವಿಲ್ಲದೆ ವಿಷಯವನ್ನು ಹೇಳಿದ. ಆತ ಪೋಲೀಸ್ ಇಲಾಖೆಯಲ್ಲಿ ಕೆಲಸದಲ್ಲಿದ್ದಾನೆ. ಮುಸ್ಲಿಂ ಧರ್ಮಕ್ಕೆ ಸೇರಿದವನು. ಸುಮಾರು ಆರು ತಿಂಗಳಿಂದ ಇವರ ಮಗಳು ರಾಧಿಕಾಳ ಜೊತೆ ಸ್ನೇಹ ಬೆಳೆದು ತಾವಿಬ್ಬರೂ ಮದುವೆಗೆ ಒಪ್ಪಿರುವುದಾಗಿಯೂ, ಅದಕ್ಕೆ ತಮ್ಮ ಒಪ್ಪಿಗೆ ಕೊಡಬೇಕೆಂದೂ ರಾಮ್‌ಜಸ್ ಅವರನ್ನು ಕೇಳಿಕೊಂಡ. ಇಷ್ಟರಲ್ಲಿ ಬರ್ನಿಸ್ ಮತ್ತು ಇತರೆ ಹೆಣ್ಣು ಮಕ್ಕಳು ಅಲ್ಲಿಗೆ ಬಂದರು. ನನ್ನನ್ನು ಬಿಟ್ಟರೆ ಬೇರೆ ಯಾರಿಗೂ ಇದು ಆಶ್ಚರ್ಯದ ವಿಷಯವಾಗಿರಲಿಲ್ಲ. ನಿಮ್ಮಿಬ್ಬರ ಸ್ನೇಹ ಹೇಗೆ ಬೆಳೆಯಿತು ಎಂದು ಹೇರಾಮನ್ ಆ ತರುಣನನ್ನು ಕೇಳಿದರು. ಪ್ರತಿ ದಿನ ಬಂದು ಅಂಗಡಿಯಲ್ಲಿ ಬಾಳೆಹಣ್ಣು ಸಿಗರೇಟು ವ್ಯಾಪಾರ ಮಾಡುವಾಗ ರಾಧಿಕಾಳ ಸ್ನೇಹ ಸುಮಾರು ಆರು ತಿಂಗಳಿಂದ ಬೆಳೆಯಿತು ಎಂದು ಆತ ಹೇಳಿದ. ರಾಮ್‌ಜಸ್ ಉಳಿದವರ ಮುಖಗಳನ್ನು ನೋಡಿ ಈಗ ಏನು ಹೇಳುವುದು ಎಂಬಂತೆ ಮೌನವಾದರು. ಅವರ ಮಗಳು ಮಾತ್ರ ಇಲ್ಲಿಗೆ ಬಾರದೆ ಅಂಗಡಿಯಲ್ಲೇ ವ್ಯಾಪಾರದಲ್ಲಿ ನಿರತಳಾಗಿದ್ದಳು. ನಾನೇ ಮಧ್ಯೆ ಬಾಯಿಹಾಕಿ, ಈ ವಿಷಯದಲ್ಲಿ ತಕ್ಷಣ ನಿರ್ಣಯ ಹೇಳುವುದು ಹೇಗೆ ಸಾಧ್ಯ, ಒಂದೆರಡು ದಿನದಲ್ಲಿ ತೀರ್ಮಾನ ತೆಗೆದುಕೊಂಡು ತಿಳಿಸಿರಿ ಎಂದು ಸೂಚಿಸಿದೆ. ಅದರಂತೆ ಆ ತರುಣನಿಗೆ ಮತ್ತೆ ನಾಳೆ ಬನ್ನಿ, ನಾವೆಲ್ಲ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ರಾಮ್‌ಜಸ್ ಹೇಳಿಕಳುಹಿಸಿದರು.

ಆ ಹುಡುಗ ಹೊರಟು ಹೋದನಂತರ ನಾವೆಲ್ಲ ಕುಳಿತು ಮಾತನಾಡಿಕೊಂಡೆವು. ಹೇರಾಮನ್ ಈ ವಿವಾಹಕ್ಕೆ ವಿರೋಧ ವ್ಯಕ್ತಪಡಿಸಿದರು. ಬರ್ನಿಸ್ ಮುಸ್ಲಿಂ ಧರ್ಮದಲ್ಲಿ ಹುಟ್ಟಿ ಬೆಳೆದಿದ್ದರೂ ಈ ವಿವಾಹಕ್ಕೆ ಸಮ್ಮತಿ ಸೂಚಿಸಲಿಲ್ಲ.

ಮುಸ್ಲಿಂ ಧರ್ಮದ ಬಹುಪತ್ನಿತ್ವ ಮತ್ತು ಧಾರ್ಮಿಕ ಆಚರಣೆಗಳು ಸಂಸಾರ ಜೀವನಕ್ಕೆ ಅಡ್ಡಿಯಾಗಬಹುದೆಂಬ ಸಂಶಯವನ್ನು ಅವರು ವ್ಯಕ್ತಪಡಿಸಿದರು. ಈ ಎಲ್ಲ ವಿಷಯಗಳನ್ನು ಹುಡುಗಿಯ ಜೊತೆ ಸ್ಪಷ್ಟವಾಗಿ ಮಾತನಾಡಿ ಅವಳ ಅಭಿಪ್ರಾಯವನ್ನು ಏಕೆ ಕೇಳಬಾರದು ಎಂದು ನಾನು ಸೂಚಿಸಿದೆ. ಅವರೆಲ್ಲ ಹುಡುಗಿಯ ಅಭಿಪ್ರಾಯ ತಿಳಿಯುವ ಕೆಲಸವನ್ನು ನನಗೇ ವಹಿಸಿದರು. ಪ್ರೇಮವಿವಾಹ ಮಾಡಿಕೊಳ್ಳುವ ತರುಣ–ತರುಣಿಯರು ಅವರ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಗಳ ಬಗ್ಗೆ ಆಲೋಚಿಸುವುದಿಲ್ಲ. ಆದರಿಂದ ಅನೇಕ ಸಂದರ್ಭಗಳಲ್ಲಿ ಪ್ರೇಮ ವಿವಾಹಗಳು ವಿಫಲವಾಗುತ್ತವೆ ಎಂಬ ವಿಷಯವನ್ನು ಅವರಿಗೆ ಹೇಳಿದೆ. ಆದರೆ ಈ ಕೆರೇಬಿಯನ್ ದ್ವೀಪಗಳಲ್ಲಿ ಅದರಲ್ಲೂ ಟ್ರಿನಿಡಾಡ್ ಮತ್ತು ಗಯಾನಾ ದ್ವೀಪಗಳಲ್ಲಿ ಭಾರತದಿಂದ ಬಂದು ನೆಲಸಿರುವ ಹಿಂದೂ ಮತ್ತು ಮುಸ್ಲಿಂ ಜನರಲ್ಲಿ ಒಂದು ರೀತಿಯ ಹೊಂದಾಣಿಕೆ ಇದೆ. ಭಾರತದಲ್ಲಿರುವಂತೆ ತಿಕ್ಕಾಟ, ವೈರವಿಲ್ಲ ಇಲ್ಲಿ. ಇದಕ್ಕೆ ಇಲ್ಲಿಯ ಹಿಂದೂಗಳ ಉದಾರ ವರ್ತನೆ ಒಂದು ಕಾರಣವಾದರೆ, ಇಲ್ಲಿಯ ಕರಿಯರ ಹಿಂದೂ ದ್ವೇಷ ಮತ್ತೊಂದು ಕಾರಣವಾಗಿದೆ. ಹೀಗಾಗಿ ಹಿಂದೂ ಮುಸ್ಲಿಂ ಬಾಂಧವ್ಯ ಇಲ್ಲಿ ಹದಗೆಟ್ಟಿಲ್ಲ.

ರಾಧಿಕಾಳನ್ನು ಕರೆಸಿ ನಾನು ಅಂತರ್‌ಧರ್ಮೀಯ ವಿವಾಹದಲ್ಲಿರುವ ಕೆಲವು ಅಡಚಣೆಗಳನ್ನು, ಅನನುಕೂಲಗಳನ್ನು ವಿವರವಾಗಿ ಹೇಳಿದಾಗ ಅವಳು ಆತಂಕಗೊಳ್ಳಲಿಲ್ಲ, ಭಾವಪೂರಿತಳಾಗಲಿಲ್ಲ. ಚೆನ್ನಾಗಿ ಆಲೋಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಹೇಳಿದೆ. ಅವಳ ಹಿರಿಯರಿಗೆ ಈ ವಿವಾಹದಲ್ಲಿ ಅಷ್ಟಾಗಿ ವಿಶ್ವಾಸವಿಲ್ಲವೆಂದೂ ಹೇಳಿದೆ. ಅವಳು ಆಲೋಚಿಸಿ ಹೇಳುವುದಾಗಿ ತಿಳಿಸಿ ಒಳಗೆ ಹೋದವಳು ಕೋಣೆಯಲ್ಲಿ ಅಳುತ್ತಿದ್ದಾಳೆಂದು ಹೇರಾಮನ್ ಬಂದು ಹೇಳಿದರು. ಮತ್ತೆ ಅವಳನ್ನು ಕರೆಸಿ, ಅಂತಿಮ ತೀರ್ಮಾನ ನಿನ್ನದೇ, ನಿನ್ನ ವಯಸ್ಸಿನವರಿಗೆ ಈ ಕೆಲವು ಸಮಸ್ಯೆಗಳು ಅರ್ಥವಾಗುವುದಿಲ್ಲ ಎಂಬ ಕಾರಣಕ್ಕಾಗಿ ಇದನ್ನು ಹೇಳಬೇಕಾಯಿತು, ಮತ್ತೊಮ್ಮೆ ಆ ಹುಡುಗನ ಜೊತೆ ಮಾತನಾಡಿ ತೀರ್ಮಾನ ತೆಗೆದುಕೊ ಎಂದು ಹೇಳಿದೆ. ಆತ ಹಿಂದೂ ಧರ್ಮದ ಆಚರಣೆಗೆ ಒಪ್ಪುವುದಾದರೆ ಮದುವೆಗೆ ಒಪ್ಪುತ್ತೇನೆ ಎಂದು ಹೇಳಿದಳು. ಈಗ ರಾಧಿಕಾ ಭಾವೋದ್ರೇಕಕ್ಕಿಂತ ವಿಚಾರಕ್ಕೆ ಹೆಚ್ಚು ಬೆಲೆಕೊಡುವಂತೆ ಕಂಡಳು.

ಮುಂದೆ ಕುಮಾರಿ ರಾಧಿಕಾ ವಿಚಾರಮಾಡಿ ತೆಗೆದುಕೊಂಡ ನಿರ್ಣಯವನ್ನು ತಿಳಿಯುವ ಹೊತ್ತಿಗೆ ನಾನು ಟ್ರಿನಿಡಾಡ್ ಬಿಟ್ಟು ಭಾರತಕ್ಕೆ ಮರಳಿದ್ದೆ. ರಾಮ್‌ಜಸ್ ಅವರ ಹಿರಿಯ ಮಗಳ ಮತ್ತು ಎರಡನೆ ಮಗಳು ರಾಧಿಕಾಳ ಮದುವೆಗೆ ನಾನು ಅಲ್ಲಿ ಇರಲಾಗಲಿಲ್ಲ. ಅವರಿಬ್ಬರಿಗೂ ನನ್ನ ಶುಭ ಹಾರೈಕೆಯನ್ನು ಮೊದಲೇ ತಿಳಿಸಿ ಕಾಣಿಕೆಗಳನ್ನು ಕೊಟ್ಟೆ. ಧರ್ಮ–ಮತಗಳ ವಿಷಯದಲ್ಲಿ ಇಲ್ಲಿ ಯಾರಿಗೂ ಅಂಥ ಶ್ರದ್ಧೆ ಇಲ್ಲದಿರುವುದರಿಂದ ಧರ್ಮಕ್ಕಾಗಿ ಪ್ರೇಮವನ್ನು ಬಲಿಕೊಡುವ ಮೂರ್ಖರು ಇವರಲ್ಲ ಎಂಬ ನಂಬಿಕೆ ನನ್ನದು!

ಹಿಂದಿರುಗುವ ದಾರಿಯಲ್ಲಿ

ಕೆರೇಬಿಯನ್ ದ್ವೀಪಗಳಲ್ಲಿ ನನ್ನ ಕಾರ್ಯಕ್ರಮವನ್ನು ಮುಗಿಸಿ ಮಾತೃ ಭೂಮಿಗೆ ಹಿಂದಿರುಗುವ ಸಿದ್ಧತೆ ನಡೆಯುತ್ತಿತ್ತು. ನಾನು ನನ್ನ ಪ್ರವಾಸವನ್ನು ಪ್ರಾರಂಭಿಸುವ ಮೊದಲಿನಿಂದಲೂ ಜಗತ್ತಿನ ಅತ್ಯಂತ ಪ್ರತಿಷ್ಠಿತ ದೇಶವಾದ ಅಮೇರಿಕದಲ್ಲಿ ಪ್ರವಾಸಮಾಡಲು ಪ್ರಯತ್ನ ಮಾಡುತ್ತಿದ್ದೆ. ಅಮೇರಿಕದ ಹತ್ತಿರವೇ ಇಷ್ಟುಕಾಲ ಇದ್ದು ಈ ದೇಶದ ಸ್ಪರ್ಶಮಾಡದೆ ಹೋಗುವುದು ಹೇಗೆ ಎಂಬುದರ ಜೊತೆಗೆ, ಅಮೇರಿಕ ನೋಡದಿದ್ದರೆ ಎಂಥ ವಿದೇಶ ಪ್ರವಾಸ ಎನ್ನುವವರಿಗೆ ಸಮಾಧಾನ ಮಾಡುವುದೂ ನನ್ನ ಈ ಪ್ರಯತ್ನದ ಉದ್ದೇಶವಾಗಿತ್ತು. ಮದ್ರಾಸಿನಲ್ಲಿ ಅಮೇರಿಕಕ್ಕೆ ವೀಸಾ ಪಡೆಯಲು ಮಾಡಿದ ಪ್ರಯತ್ನ ನಿರಾಶೆಯನ್ನುಂಟು ಮಾಡಿದ್ದರೂ, ಕೆರೇಬಿಯನ್ ದ್ವೀಪಗಳಲ್ಲಿ ಪ್ರಯತ್ನಿಸಿದರೆ ವೀಸಾ ಸುಲಭವಾಗಿ ದೊರೆಯಬಹುದೆಂಬ ದೂರದಾಶೆಯಿತ್ತು. ಜಮೈಕಾಗೆ ಹೋಗುವ ದಾರಿಯಲ್ಲಿ ಒಂದು ರಾತ್ರಿ ನ್ಯೂಯಾರ್ಕ್‌ನಲ್ಲಿ ತಂಗುವುದಕ್ಕೆ ಮಾತ್ರ ಮದ್ರಾಸಿನಲ್ಲಿ ಅನುಮತಿ ದೊರೆತಿತ್ತು. ಜಮೈಕಾಕ್ಕೆ ಬಂದ ಮೇಲೆ ಅಲ್ಲಿ ಅಮೇರಿಕಾ ವೀಸಾ ಪಡೆಯಲು ತೀರ ಆಶಾಭಾವನೆಯಿಂದಲೇ ಪ್ರಯತ್ನಿಸಿದೆ. ಅಲ್ಲಿಯ ಅಮೇರಿಕಾ ರಾಯಭಾರಿ ಕಛೇರಿಯ ಒಬ್ಬ ಬಿಳಿಯ, "ಭಾರತೀಯನಿಗೇಕೆ ಇಲ್ಲಿಂದ ವೀಸಾ ?" ಎಂದು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದ. ಇದಾದ ಮೇಲೆ ನನಗೆ ವೀಸಾ ಸಿಕ್ಕುವ ಭರವಸೆ ಇರಲಿಲ್ಲವಾದ್ದರಿಂದ, ಅಮೇರಿಕಾಕ್ಕೆ ಹೋಗುವ ಆಸೆಯನ್ನು ದೂರಮಾಡಿದೆ. ಟ್ರಿನಿಡಾಡ್‌ನಲ್ಲಿ ನನ್ನ ಕಾರ್ಯಕ್ರಮ ಮುಗಿಸುವ ಒಂದೆರಡು ದಿನಗಳ ಮುಂಚೆ ವೀಸಾ ಪಡೆಯಲು ಉದಾಸೀನನಾಗಿಯೇ ಪ್ರಯತ್ನಿಸಿದೆ. ಅರ್ಜಿಯನ್ನು ಸರಿಯಾಗಿ ಭರ್ತಿ ಮಾಡದೆ, ಅದಕ್ಕೆ ಬೇಕಾದ ಭಾವಚಿತ್ರವನ್ನು ಅಂಟಿಸದೆ ಅರ್ಜಿ ಸಲ್ಲಿಸಿದೆ. ಈಗಾಗಲೇ ಈ ರಾಯಭಾರಿ ಕಛೇರಿಗಳವರ ಸ್ವಭಾವ ಅರ್ಥವಾಗಿದ್ದದ್ದರಿಂದ, ತಲೆಕೆದರಿ ಅನ್ಯಮನಸ್ಕಳಂತೆ ಕಾಣುತ್ತಿದ್ದ ಒಬ್ಬ ಬಿಳಿಯ ಹೆಂಗಸಿನ ಹತ್ತಿರಕ್ಕೆಹೋಗಿ ಅರ್ಜಿ ಮತ್ತು ಇತರೆ ಪತ್ರಗಳನ್ನು ತೋರಿಸಿದೆ. ಅವಳು ಎಲ್ಲವನ್ನು ಒಮ್ಮೆ ತಿರುವಿಹಾಕಿ "ಎಷ್ಟು ದಿನ ನೀವು ಅಮೇರಿಕೆಯಲ್ಲಿರುತ್ತೀರಿ ?" ಎಂದು ಔದಾಸೀನ್ಯದಿಂದಲೇ ಕೇಳಿದಳು. ಅವಳ ಮಾತಿನ ರೀತಿಯಲ್ಲಿ, ವೀಸಾ ಸಿಗುವ ಭರವಸೆ ನನಗೆ ಬರಲಿಲ್ಲ. ನಾನೂ ಅವಳ ರೀತಿಯಲ್ಲೇ, 4–5 ದಿನಗಳಿರಬಹುದು ಎಂದೆ. ಐದು ನಿಮಿಷ ಕುಳಿತು ಕೊಳ್ಳಿ ಎಂದವಳು ಒಳಗೆ ಹೋಗಿ ನನ್ನ ಪಾಸ್‌ಪೋರ್ಟಿನಲ್ಲಿ ನಾನು ಕೇಳಿದಂತೆ ನಮೂದಿಸಿ ತಂದುಕೊಟ್ಟೇ ಬಿಟ್ಟಳು. ವೀಸಾ ಸಿಕ್ಕಿದ ರೀತಿ ನನಗೆ ಪರಮಾಶ್ಚರ್ಯ ವನ್ನುಂಟುಮಾಡಿತು. ಈ ಅಮೇರಿಕದ ಪ್ರತಿನಿಧಿಗಳು ವೀಸಾ ನೀಡಲು ಏನು ಆಧಾರ ಇಟ್ಟುಕೊಂಡಿರುತ್ತಾರೆ ಎಂದು ನನಗೆ ತಿಳಿಯದಾಗಿತ್ತು. ಈ ವೀಸಾ ನೀಡುವಿಕೆ ವ್ಯಕ್ತಿಯ ಮಾನಸಿಕ ಪರಿಸ್ಥಿತಿ, ಸಮಯ ಸಂದರ್ಭಗಳ

ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ ಎಂದು ಕಾಣುತ್ತದೆ. ಅಂತು ಈ ಅಮೇರಿಕೆಯ ವೀಸಾದಿಂದ ನನ್ನ ಪ್ರವಾಸದ ಒಂದು ಕೊರತೆ ನಿವಾರಣೆಯಾದಂತಾಯಿತು.

ಟ್ರಿನಿಡಾಡ್‌ದ್ವೀಪವನ್ನು ಬಿಟ್ಟು ನ್ಯೂಯಾರ್ಕ್‌ಗೆ ನಾನು ಪ್ರಯಾಣ ಮಾಡುವ ದಿನದ ಹಿಂದಿನರಾತ್ರಿ ನನಗೆ ನಿದ್ದೆಮಾಡಲು ಸಾಧ್ಯವಾಗಲೇ ಇಲ್ಲ. ಕೆರೇಬಿಯನ್ ದ್ವೀಪಗಳಲ್ಲಿ ಸುಮಾರು ಎರಡು ತಿಂಗಳುಗಳ ನನ್ನಪ್ರವಾಸ ಅಂತ್ಯವಾಗುತ್ತಿದ್ದುದು, ಮನೆ, ಮಡದಿ ಮಕ್ಕಳನ್ನು ಎಷ್ಟುಬೇಗನೆ ನೋಡುತ್ತೇನೆಂಬದು, ಇಲ್ಲಿಯ ಬಿಸಿಲಿನ ದಗೆ—ಇವೆಲ್ಲ ಇದಕ್ಕೆ ಕಾರಣವಾಗಿದ್ದುವು. ಹನ್ನೊಂದು ಗಂಟೆಗೆ ಹೊರಡುವ ವಿಮಾನಕ್ಕೆ ಬೆಳಗಿನ 4 ಗಂಟೆಯಿಂದಲೇ ತಯಾರಿ ನಡೆಸಿದೆ. ನನ್ನನ್ನು ವಿಮಾನನಿಲ್ದಾಣಕ್ಕೆ ತನ್ನ ಕಾರಿನಲ್ಲಿ ಕರೆದುಕೊಂಡು ಹೋಗಿ ಬಿಡಲು ಒಪ್ಪಿಕೊಂಡಿದ್ದ ಹೇರಾಮನ್ ಅವರನ್ನು ಅರುಗಂಟೆಗೇ ಹೊರಡಿಸಲು ಪ್ರಾರಂಭಿಸಿದೆ. ಅವರು ಎದ್ದು ನಿತ್ಯಕರ್ಮಗಳನ್ನು ಮುಗಿಸಿ ಕಾರಿಗೆ ನನ್ನ ಸೂಟ್‌ಕೇಸುಗಳನ್ನು ಇಟ್ಟುಕೊಂಡು ಕಾರನ್ನು ಸ್ಟಾರ್ಟ್‌ಮಾಡಿದಾಗ ನನ್ನ ಆತಂಕ ಸ್ವಲ್ಪ ಕಡಿಮೆಯಾಯಿತು.

ಟ್ರಿನಿಡಾಡ್‌ನ ವಿಮಾನ ನಿಲ್ದಾಣದಲ್ಲಿ ವಿಮಾನ ಹತ್ತುವಾಗ ಇದ್ದ ಬಿಸಿಲಿನ ದಗೆ, ಆತಂಕಗಳು ವಿಮಾನ ಕೆರೇಬಿಯನ್ ಸಮುದ್ರದ ಮೇಲೆ ಹಾರಾಟ ಪ್ರಾರಂಭಿಸಿದ ಮೇಲೆ ಕಡಿಮೆಯಾದುವು. ಸಂಜೆ ಸುಮಾರು 4 ಗಂಟೆಗೆ ನ್ಯೂಯಾರ್ಕ್ ತಲುಪಿದಾಗ ಹವೆ ಟ್ರಿನಿಡಾಡ್ ಹವೆಗೆ ತೀರ ವಿರುದ್ಧವಾಗಿತ್ತು. ವಿಮಾನ ಹತ್ತಿದಾಗ ಮೈಮೇಲಿನ ಬಟ್ಟೆಗಳನ್ನು ಕೆದರಿಕೊಳ್ಳುತ್ತಿದ್ದರೆ ಇಳಿಯುವಾಗ ಅವುಗಳನ್ನು ಮುದುರಿಕೊಳ್ಳುವಂತಾಗಿತ್ತು. ಒಂದೇ ದಿನದ ಕೆಲವೇ ಗಂಟೆಗಳ ಅಂತರ ಒಳ ಹೊರಗಿನ ಪರಿಸರವನ್ನು ಸಂಪೂರ್ಣವಾಗಿ ಬದಲಿಸಿತ್ತು.

ಟ್ರಿನಿಡಾಡ್ ಬಿಡುವಾಗ ನಾನು ನಿರ್ಧರಿಸಿಕೊಂಡಂತೆ, ನನ್ನ ಮುಂದಿನ ಪ್ರವಾಸವೆಲ್ಲ ನನ್ನನ್ನೇ ಅವಲಂಬಿಸಿತ್ತು. ಹಿಂದಿನ ನನ್ನ ಪ್ರವಾಸದಂತೆ ಆಹ್ವಾನಿಸಲು ಬೀಳ್ಕೊಡಲು ಇಲ್ಲಿ ಯಾರೂ ಇರುವುದಿಲ್ಲ ಎಂಬುದು ನನಗೆ ಮೊದಲೇ ತಿಳಿದ ವಿಷಯವಾಗಿದ್ದುದರಿಂದ ನನ್ನ ಅಗತ್ಯಗಳನ್ನು ನಾನೇ ಪೂರೈಸಬೇಕಾಗಿತ್ತು. ಜಗತ್ ಪ್ರಸಿದ್ಧವಾದ ಎಂಪೈರ್ ಸ್ಟೇಟ್ ಕಟ್ಟಡವಿರುವ ಮ್ಯಾನ್‌ಹಾಟ್ಟನ್ ಪ್ರದೇಶದ 34ನೇ ರಸ್ತೆಯಲ್ಲೇ ಇರುವ ವೈ.ಎಂ.ಸಿ.ಎ. ನಾನು ಇಳಿದುಕೊಳ್ಳಲು ನಿರ್ಧರಿಸಿದ್ದ ಸ್ಥಳ. ಟ್ಯಾಕ್ಸಿ ಹತ್ತಿ ಸುಮಾರು ಒಂದು ಗಂಟೆ ನ್ಯೂಯಾರ್ಕ್ ನಗರದ ರಸ್ತೆಗಳಲ್ಲಿ ಅಲೆಯುತ್ತಾ ವೈ.ಎಂ.ಸಿ.ಎ. ತಲಪಿದ್ದಾಯಿತು. ಇದೊಂದು ಬೃಹತ್‌ಕಟ್ಟಡ. ಸಾವಿರಾರು ರೂಮುಗಳು 15–20 ಅಂತಸ್ತುಗಳಲ್ಲಿವೆ. ಇಲ್ಲಿಯ ಕ್ಯಾಂಟೀನಿನಲ್ಲಿ ಬ್ರೆಡ್ಡು, ಕೋಳಿಮಾಂಸ, ಹಣ್ಣಿನರಸ ಸೇವಿಸಿ ಮಲಗಿ ಬೆಳಗ್ಗೆ ಎದ್ದಾಗ ಮತ್ತೆ ಪರಿಸರ ಪೂರ್ಣ ಬದಲಾಗಿತ್ತು.

ಆರನೇ ಅಂತಸ್ತಿನ ಕೊಠಡಿಯ ಕಿಟಕಿಯಿಂದ ಹೊರಗೆ ದೃಷ್ಟಿಸಿದಾಗ ಹಿಮವರ್ಷ ಸುರಿಯುತ್ತಿತ್ತು. ಮನೆ, ಮರ, ವಾಹನ, ರಸ್ತೆಗಳೆಲ್ಲ ಹಿಮಗಡ್ಡೆಯ

ರಗ್ಗು ಹೊದ್ದಿದ್ದವು. ಏಪ್ರಿಲ್ ತಿಂಗಳಿನಲ್ಲಿ ಹಿಮಪಾತವಾಗುವುದಿಲ್ಲವಂತೆ. ಆದರೆ ಈ ವರ್ಷ ಆ ನಂಬಿಕೆಯನ್ನು ಹವಾಮಾನ ಸುಳ್ಳುಮಾಡಿತ್ತು. ರಸ್ತೆಗಳಲ್ಲಿ 2–3 ಅಡಿ ಹಿಮದ ರಾಶಿ ಬಿದ್ದಿತ್ತು. ಫೆಬ್ರವರಿಯ ಪ್ರಾರಂಭದಲ್ಲಿ ಇಂಗ್ಲೆಂಡಿನಲ್ಲಿದ್ದಾಗ ನಾನು ಹಿಮವರ್ಷವನ್ನು ನೋಡುವ ಅವಕಾಶ ಸಿಕ್ಕಿರಲಿಲ್ಲ. ಈ ಹಿಮಪಾತ ದರ್ಶನ, ಸ್ಪರ್ಶಗಳಿಂದ ಜಗತ್ತಿನ ಎಲ್ಲ ಹವಾಮಾನಗಳ ಅತಿರೇಕಗಳನ್ನು ನಾನು ಅನುಭವಿಸಿದಂತಾಗಿತ್ತು. ಈ ಶೀತ ದೇಶಗಳಲ್ಲಿ ಜನರು ಏಕೆ ಕೆಂಪಾಗುತ್ತಾರೆ ಎನ್ನುವ ಗುಟ್ಟು ನಾನು ಹಿಮದಲ್ಲಿ ರಸ್ತೆಯಲ್ಲಿ ಅಡ್ಡಾಡಿದಾಗ ತಿಳಿಯಿತು. ಕಪ್ಪು ಬಣ್ಣದವನಾದ ನಾನೂ ರಕ್ತದ ಶೀಘ್ರ ಚಲನೆಯಿಂದ ಕೆಂಪಾಗಿದ್ದೆ.

ನಗರ ಪ್ರದಕ್ಷಿಣೆಗೆ ಹೊರಟರೆ ಮತ್ತೆ ಇಲ್ಲಿ ನನಗೆ ಬೀದಿಯಲ್ಲಿ ಹೋಗುವವರೇ ಮಾರ್ಗದರ್ಶಕರು. ರಸ್ತೆಯಲ್ಲಿ ನಿಂತ ಕರಿಯ ಸೂಟಿನ ಪೋಲೀಸರು ಇಂಗ್ಲೆಂಡಿನಂತ ವರಲ್ಲದೆ, ಮಾತಿನಲ್ಲಿ ಮಾತ್ರ ವಿವರ ಹೇಳದೆ, ತಾವೇ ಸ್ವಲ್ಪದೂರ ಬಂದು ದಾರಿ ತೋರಿಸುತ್ತಾರೆ; ಅಥವಾ ಹೋಗಬೇಕಾದ ಬಸ್‌ಸ್ಟಾಪನ್ನು ತೋರಿಸುತ್ತಾರೆ. ಇಂಗ್ಲೆಂಡಿನ ಬಿಳಿಯರಿಗೂ ಅಮೇರಿಕದ ಬಿಳಿಯರಿಗೂ ಬಣ್ಣವೊಂದೇ ಸಾಮಾನ್ಯ ವೆಂದು ನ್ಯೂಯಾರ್ಕ್ ರಸ್ತೆಗಳಲ್ಲಿ ತಿಳಿದುಕೊಂಡೆ.

ಮ್ಯಾನ್‌ಹಾಟ್ಟನ್ ಪ್ರದೇಶದ ಗಗನಚುಂಬಿಗಳು ಒಂದಕ್ಕೊಂದು ಸ್ಪರ್ಧಿ ಸುತ್ತವೆ. ಇಲ್ಲಿಯ ಎಂಪೈರ್ ಸ್ಟೇಟ್ ಕಟ್ಟಡದ ಬೃಹತ್ತು ಎದ್ದು ಕಾಣದಂತೆ ಉಳಿದ ಕಟ್ಟಡಗಳೆಲ್ಲ ಅದನ್ನು ಹಂಚಿಕೊಂಡು ಬಿಟ್ಟವೆ. ರವಿಮುಳುಗದ ಸಾಮ್ರಾಜ್ಯವನ್ನು ಬ್ರಿಟಿಷರು ಸ್ಥಾಪಿಸಿದ ಸ್ಪರ್ಧೆಗಾಗಿ ಅಮೇರಿಕನರು ಸೂರ್ಯನ ಬಿಸಿಲು ಸ್ಪರ್ಶಿಸದ ನೆಲದ ನಗರವನ್ನು ಕಟ್ಟಲು ಪ್ರಯತ್ನಿಸಿದರೋ ಎನ್ನಿಸುತ್ತದೆ. ಇಷ್ಟು ಎತ್ತರದ ಕಟ್ಟಡಗಳ ರಸ್ತೆಗಳಲ್ಲೂ ಬೀಸುವ ಪ್ರಚಂಡ ಬಿರುಗಾಳಿ ಎದೆ ನಡುಗಿಸುತ್ತದೆ. ಹಿಮಪಾತವಿದ್ದರಂತೂ ಮಾರುತನಿಗೆ ಎದುರಾಗಿ ಹೋಗುವ ಗಂಡುತನ ಯಾರಿಗೂ ಸಾಧ್ಯವಿಲ್ಲ. ಗೋಡೆ ಹಿಡಿದುಕೊಂಡು ರಸ್ತೆಯಲ್ಲಿ ಸಾಗ ಬೇಕಾಗುತ್ತದೆ.

ಸ್ಟರ್ಲಿಂಗ್ ಚೆಕ್‌ಗಳು ನನ್ನ ಜೇಬಿನಲ್ಲಿರುವ ತನಕ ಜಗತ್ತಿನ ಯಾವ ಮೂಲೆಗಾದರೂ ಒಬ್ಬನೇ ಹೋಗಿ ಬರಬಲ್ಲೆ, ಎಂಬ ಅಹಂಕಾರ ನನ್ನಲ್ಲಿತ್ತು. ನ್ಯೂಯಾರ್ಕ್ ನಗರ ಈ ಭ್ರಮೆಯನ್ನು ದಿಗ್ಭ್ರಮೆಗೊಳ್ಳುವ ರೀತಿಯಲ್ಲಿ ಬಿಡಿಸಿತು. ನನ್ನಲ್ಲಿದ್ದ ಡಾಲರ್ ಹಣ ಮುಗಿದು ಹೋಗಿದ್ದ ಕಾರಣ, ಒಂದು ದೊಡ್ಡ ಬಟ್ಟೆ ಅಂಗಡಿಯಲ್ಲಿ ಕೆಲವು ಬಟ್ಟೆಕೊಂಡಾದ ಮೇಲೆ ಸ್ಟರ್ಲಿಂಗ್ ಚೆಕ್ ನೀಡಿದಾಗ ನನ್ನ ಅನಾಥ ಪ್ರಜ್ಞೆ ಬಯಲಾಯಿತು. ಅಂಗಡಿ ಮಾಲೀಕ ನನ್ನ ಚೆಕ್ಕನ್ನು ಕಾಗದದ ತುಂಡಿನಂತೆ ಹಿಂದಕ್ಕೆಸೆದು ಅದು ಇಲ್ಲಿ ನಡೆಯುವುದಿಲ್ಲವೆಂದುಕೊಂಡದ್ದನ್ನೆಲ್ಲ ವಾಪಸ್ಸುಕೊಟ್ಟು ಬ್ಯಾಂಕುಗಳನ್ನು ಹುಡುಕುತ್ತಾ ಹೊರಟೆ. ಎಲ್ಲರೂ ನನ್ನ ಚೆಕ್ಕನ್ನು ತಿರಸ್ಕಾರದಿಂದ ನೋಡಿದರು. ಈ ಚೆಕ್ಕಿನ ಬೆಲೆಯನ್ನು ನಿರ್ಧರಿಸಿಕೊಳ್ಳುವ ವೇಳೆಗೆ

ಕತ್ತಲೆ ಆವರಿಸುತ್ತಿತ್ತು. ಪೈಸೆಯೂ ಜೇಬಿನಲ್ಲಿಲ್ಲದೆ ನನ್ನ ಸ್ವಸ್ಥಾನ ಸೇರುವ ಬಗೆ ಚಿಂತೆ ಆವರಿಸಿತು. 3–4 ಮೈಲಿಗಳ ದೂರದ ವೈ. ಎಂ. ಸಿ. ಎ.ಗೆ ನಡೆದುಕೊಂಡು ಬರುವುದನ್ನು ಬಿಟ್ಟರೆ ಬೇರೆ ದಾರಿಯಿರಲಿಲ್ಲ. ಇಷ್ಟು ದೂರ ನಡೆಯುವ ಚೇತನಕ್ಕೆ ಕಾರಣ ನಾನಿಳಿದುಕೊಂಡಿದ್ದ ವೈ. ಎಂ. ಸಿ. ಎ.ಯವರು ನನಗೆ ಹಣಕೊಡಿಸುವುದರಲ್ಲಿ ನೆರವು ನೀಡುವರೆಂಬ ನಿರೀಕ್ಷೆ. ಆದರೆ ಆ ನಿರೀಕ್ಷೆಯೂ ಈಗ ಸುಳ್ಳಾಯಿತು. ಇದು ದೊಡ್ಡ ವ್ಯಾಪಾರ ಸ್ಥಳ. ಇಲ್ಲಿ ವೈಯಕ್ತಿಕವಾದ ಸಮಸ್ಯೆಗಳಿಗೆ ಪರಿಹಾರ ಹೇಳುವವರು ಯಾರು ? ನಾನು ಕಛೇರಿಯ ಒಳಗೆ ಒಂದು ಮೇಜಿನಿಂದ ಮತ್ತೊಂದು ಮೇಜಿಗೆ ಅಲೆದಾಡುವುದನ್ನು ಕಂಡ ಒಬ್ಬ ಬ್ರಿಟಿಷ್ ಮಹಿಳೆ ನನ್ನ ಪರವಾಗಿ ವಾದಿಸಲು ಬಂದಳು. "ಇದು ನಮ್ಮ ಬ್ಯಾಂಕಿನ ಚೆಕ್ಕು, ಇದಕ್ಕೇಕೆ ಹಣಕೊಡುವುದಿಲ್ಲ?" ಎಂದು ಆಕೆ ಮ್ಯಾನೇಜರ್‌ಗೆ ಹೇಳಿದಾಗ, ಆತ, "ಮೇಡಂ, ಇದು ನ್ಯೂಯಾರ್ಕ್ ಸಿಟಿ, ನಿಮ್ಮ ಇಂಗ್ಲೆಂಡಲ್ಲ!'' ಎಂದು ಒಂದೇ ಮಾತಿನಲ್ಲಿ ಚರ್ಚೆ ನಿಲ್ಲಿಸಿದ. ಬ್ರಿಟಿಷ್ ಮಹಿಳೆ ತನ್ನ ಅಸಹಾಯಕತೆಯನ್ನು ವ್ಯಕ್ತ ಮಾಡಿದಳು. ಒಂದು ಬ್ಯಾಂಕಿನ ವಿಳಾಸ ಕೊಟ್ಟು, "ಅಲ್ಲಿ ಪ್ರಯತ್ನಿಸಿರಿ. ಇದು ನಮ್ಮ ಬ್ಯಾಂಕಿನ ಚೆಕ್ಕು, ಇದಕ್ಕೆ ಈ ಗತಿ ಬಂದದ್ದನ್ನು ಕಂಡು ನಾಚಿಕೆಯಾಗುತ್ತದೆ'' ಎಂದು ಹೇಳಿ ಹೊರಟು ಹೋದಳು. ಮತ್ತೆ ನನ್ನ ಅದೃಷ್ಟ ಪರೀಕ್ಷೆಗೆ, ಉಪವಾಸ ನಿದ್ದೆಯಲ್ಲಿ ರಾತ್ರಿ ಕಳೆದು ಪ್ರಯತ್ನಿಸಿದೆ. ನಾನಿದ್ದ ಕಟ್ಟಡದಿಂದ ನಾಲ್ಕೈದು ಫರ್ಲಾಂಗ್ ದೂರದಲ್ಲಿದ್ದ ಬ್ರಿಟಿಷ್ ಮಹಿಳೆ ಸೂಚಿಸಿದ ಬ್ಯಾಂಕ್ ಶಾಖೆಗೆ ಹಿಮದ ರಾಶಿಯ ಮೇಲೆ ಹಸಿದ ಹೊಟ್ಟೆಯಲ್ಲಿ ಸ್ಕೇಟಿಂಗ್ ಆಡುತ್ತಾ ಬಂದೆ. ಸ್ಟರ್ಲಿಂಗ್ ಚೆಕ್‌ನ್ನು ನೋಡಿದ ಬ್ಯಾಂಕಿನ ಅಧಿಕಾರಿ ಹತ್ತಾರು ಕಡೆಗೆ ಫೋನ್ ಮಾಡಿ ಡಾಲರ್ ಹಣ ಕೊಡಲು ಒಪ್ಪಿದರು. ಆ ಮಹಿಳಾ ಅಧಿಕಾರಿ ಒಳಗೆ ಹೋಗಿ ಚೆಕ್‌ಗೆ ಸಮಾನವಾಗಿ ಡಾಲರ್ ನೋಟುಗಳನ್ನು ತಂದು ನನ್ನ ಕೈಗೆ ಕೊಟ್ಟಾಗ, ನಾನು ಮಾಮೂಲಿನಂತೆ ನೋಟುಗಳನ್ನು ಎಣಿಸಲಾರಂಭಿಸಿದೆ ನನ್ನ ಕೆಲಸವನ್ನು ಕಂಡ ಆ ಅಧಿಕಾರಿಣಿ ಹೌಹಾರಿದಂತೆ ನನ್ನ ಕೈ ತಡೆದು, " ನೀವು ತುಂಬಾ ಅಪಾಯದ ಕೆಲಸ ಮಾಡುತ್ತಿದ್ದೀರಿ. ಇದನ್ನು ಯಾರಾದರೂ ನೋಡಿದರೆ ನಿಮ್ಮ ಹಣ, ಪ್ರಾಣ ಎರಡನ್ನೂ ಅಪಹರಿಸಿಯಾರು ಜೋಕೆ !" ಎಂದು ಎಚ್ಚರಿಸಿದರು. ನ್ಯೂಯಾರ್ಕಿನಲ್ಲಿ ನನಗೆ ಡಾಲರ್ ಹಣ ದೊರಕೀತೆ ಎಂಬ ಚಿಂತೆಯಿಂದ ಪಾರಾದ ನನಗೆ ಈಗ ಹಣವನ್ನು ತೆಗೆದುಕೊಂಡು ರಸ್ತೆಯಲ್ಲಿ ಹೇಗೆ ಹೋಗಲಿ ಎಂಬ ಭಯ–ಚಿಂತೆಗಳಿಗೆ ಒಳಗಾದೆ. ಚಳಿಗೆ ಹಾಕಿದ್ದ ಟೋಪಿ ತೆಗೆದು, ಕೊರಳ ಪಟ್ಟಿ ಬಿಚ್ಚಿ ಸ್ವಲ್ಪ ವೇಷ ಬದಲಾಯಿಸಿದೆ. ರಸ್ತೆಗೆ ಬಂದವನೆ ಹಿಂದೆ ಮುಂದೆ ನೋಡದೆ ತಕ್ಷಣ ಒಂದು ಚೀನಿ ಬಟ್ಟೆ ಅಂಗಡಿಯೊಳಕ್ಕೆ ನುಸುಳಿದೆ. ಏನಾದರೂ ವ್ಯಾಪಾರ ಮಾಡುವವನಂತೆ ನಟಿಸಲು ಹುಡುಗರ ಬಟ್ಟೆಗಳ ಬಗ್ಗೆ ವಿಚಾರಿಸಿದೆ. ಆ ಚೀನೀ ಮಾಲೀಕ ನನ್ನ 'ಬಾಯ್ಸ್' (Boys) ಎಂಬ ಮಾತನ್ನು ಕೇಳಿ ತಿಳಿಯದವನಂತೆ ಮತ್ತೆ ಮತ್ತೆ ಕೇಳಿದ. ನಾನು ಮತ್ತೆ ಅದೇ ರೀತಿ ಉಚ್ಚರಿಸಿದಾಗ ಅವನು, "ನಿಮ್ಮ ಉಚ್ಚಾರಣೆ

ಸರಿಯಲ್ಲ, 'ಬೋಯ್ಸ್' ಎನ್ನಬೇಕು'' ಎಂದು ನನ್ನನ್ನು ತಿದ್ದಿದ. ಇಂಡಿಯಾದವರಿಗೆ ಸರಿಯಾಗಿ ಇಂಗ್ಲಿಷ್ ಬರುವುದಿಲ್ಲ ಎಂದು ತನ್ನ ಇಂಗ್ಲಿಷ್ ಭಾಷಾ ಪಾಂಡಿತ್ಯವನ್ನು ತೋರುತ್ತಿದ್ದಾಗ ನನಗೆ ಅವನ ಅಹಂಕಾರ ಕೋಪವನ್ನುಂಟು ಮಾಡಿತು. "ಹೌದು, ನಮಗೆ ಅದರ ಅಗತ್ಯವಿಲ್ಲ. ನಮ್ಮ ಭಾಷೆಗಳೇ ನಮಗಿವೆ. ನಿಮ್ಮ ಇಂಗ್ಲಿಷ್ ನಮಗೆ ಬಾರದಿದ್ದರೂ ನಮಗೆ ನಮ್ಮದೇ ಇಂಗ್ಲಿಷ್ ಬರುತ್ತದೆ. ಇನ್ನೊಬ್ಬರ ಭಾಷೆಯನ್ನು ನಿಷ್ಠೆಯಿಂದ ಕಲಿಯುವ ದಾಸ್ಯ ನಮಗಿಲ್ಲ. ನೀವು ಚೀನೀಯರಾದರೂ ಅಮೇರಿಕನರ ಭಾಷೆಯನ್ನು ನಿಷ್ಠೆಯಿಂದ ಕಲಿತಿದ್ದೀರಿ" ಎಂದು ನೇರವಾಗಿ ಹೇಳಿದೆ. ನನ್ನ ಚುಚ್ಚು ಮಾತುಗಳನ್ನು ಕೇಳಿದ ಮಾಲೀಕ ಅಪಮಾನಗೊಂಡವನಂತೆ, ''ನಿಮಗೆ ಬೇಕಾದ ಬಟ್ಟೆ ನಮ್ಮಲ್ಲಿಲ್ಲ'' ಎಂದ. ನನಗೂ ಅದೇ ಬೇಕಾಗಿತ್ತು. ಸುಮ್ಮನೆ ಹೊರ ಬಂದೆ.

ವೈ. ಎಂ. ಸಿ. ಎ. ಕಟ್ಟಡದ ಒಳಗೆ ಬಂದ ಮೇಲೆ ನನ್ನ ಆತಂಕ ಪರಿಹಾರವಾಯಿತು. ಹೊರಗೆ ಹಿಮವರ್ಷ ಸುರಿಯುತ್ತಿದ್ದುದರಿಂದ ಹೊರಗೆ ಹೋಗುವುದು ಈಗ ಬೇಡವಾಗಿತ್ತು. ಒಳಗಿನ ಕ್ಯಾಂಟೀನಿನಲ್ಲಿ ಹಸಿದ ಹೊಟ್ಟೆಗೆ ಏನಾದರೂ ತುರುಕುವ ಕಡೆಗೆ ಕಾರ್ಯಮಗ್ನನಾದೆ. ನನ್ನ ಪಕ್ಕದಲ್ಲಿಯೇ ಕುಳಿತು ಊಟ ಮಾಡುತ್ತಿದ್ದ ಮತ್ತೊಬ್ಬ ಪ್ರವಾಸಿಯ ಪರಿಚಯವಾಯಿತು. ಅವರು ಫ್ಲಾರಿಡಾದಲ್ಲಿ ಸಾರಿಗೆ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರಂತೆ. ಹೆಸರು ಮೈಕೇಲ್ ಎಂದು. ಅವರು ರಜೆಯ ಮೇಲೆ ನ್ಯೂಯಾರ್ಕ್‌ಗೆ ಬಂದಿದ್ದರಂತೆ. ಊಟಮಾಡಿ ಇಬ್ಬರೂ ಮಾತನಾಡುತ್ತಾ ಹೊರಬಂದೆವು. ಅವರ ಹತ್ತಿರ ಕೊಡೆ ಇದ್ದುದರಿಂದ ನಾನು ಅವರ ಪಕ್ಕಕ್ಕೆ ಸರಿದುಕೊಂಡೆ. ಅವರು ಮುಂದೆ ನಡೆಯುತ್ತಾ "ಭಾರತದಲ್ಲಿ ತುಂಬಾ ಬಡತನ ಇದೆಯಂತೆ, ನಿಜವೆ? ಬನ್ನಿ ಕೊಡೆಯೊಳಕ್ಕೆ" ಎಂದು ಕೇಳಿದರು. ಕೊಡೆಯ ಆಶ್ರಯ ಪಡೆದುದಕ್ಕಾಗಿ ಈತ ಹೀಗೆ ಪ್ರಶ್ನೆ ಕೇಳುತ್ತಿದ್ದಾನೇನೋ ಎಂಬ ಅನುಮಾನ ಬಂತು? ತಾಳ್ಮೆಯಿಂದ ಮೈಕೇಲ್ ಅವರನ್ನು ಕೇಳಿದೆ, ''ನಿಮಗೆ ಈ ಅಭಿಪ್ರಾಯ ಹೇಗೆ ಬಂತು?'' "ನಾನು ಈವರೆಗೆ ಅನೇಕ ಭಾರತೀಯರನ್ನು ಭೇಟಿ ಮಾಡಿದ್ದೇನೆ. ಅವರೆಲ್ಲ ಇದೇ ಅಭಿಪ್ರಾಯ ವ್ಯಕ್ತಮಾಡಿದ್ದಾರೆ" ಎಂದರು. "ಅವರೆಲ್ಲ ಮೂರ್ಖರು, ವಿಚಾರಶೂನ್ಯರು. ಅವರ ಮಾತನ್ನು ನಂಬುವುದೂ ಮೂರ್ಖತನ!'' ಎಂದು ನಾನು ಮೈಕೇಲ್ ಅವರಿಗೆ ಹೇಳಿದೆ. ಏಕೆ ಎಂದು ಅವರು ಕೇಳಿದ್ದಕ್ಕೆ ನಾನು ಸ್ವಲ್ಪ ದೀರ್ಘವಾಗಿಯೇ ಮಾತನಾಡಿದೆ: "ನಮ್ಮ ಜನರಿಗೆ ಕಾರುಗಳಿಲ್ಲ ನಿಜ. ಅವು ನಮಗೆ ಅಗತ್ಯವಿಲ್ಲ. ಪ್ರತಿ ದಿನ 20-25 ಮೈಲಿ ದೂರದಿಂದ ಕೆಲಸದ ಸ್ಥಳಕ್ಕೆ ಬರಲು ನಿಮಗೆ ಕಾರು ಅಗತ್ಯ. ಇಷ್ಟಾದರೂ 10 ಗಂಟೆಯ ಕಛೇರಿ ಕೆಲಸಕ್ಕೆ 7 ಗಂಟೆಗೇ ಹೊರಡುತ್ತೀರಿ. ನಿಮಗೆ ಕಾರಿದ್ದರೂ ಅದರ ವೇಗ ಇಲ್ಲಿ ಸೈಕಲ್‌ವೇಗಕ್ಕಿಂತ ಹೆಚ್ಚಿರಲಾರದು. ನಿಮ್ಮೆಲ್ಲರ ಕಾರುಗಳನ್ನು ನಿಲ್ಲಿಸಲು ಕಛೇರಿಯ ಮುಂದೆ ಸ್ಥಳವೇ ಇರುವುದಿಲ್ಲ. ನಮ್ಮ ದೇಶದಲ್ಲಿ ಕೆಲಸಕ್ಕೆ ಅರ್ಧ ಗಂಟೆ ಮುಂಚೆ ಹೊರಟರೆ ಸಾಕು. ನೀವು ಇಲ್ಲಿ ಧರಿಸುವ ಸೂಟು, ಮೈತುಂಬಿದ ಬಟ್ಟೆ ನಮ್ಮ ದೇಶದಲ್ಲಿ

ಅಗತ್ಯವಿಲ್ಲ. ಕಾರಿಲ್ಲದಿರುವುದು, ಸೂಟು ಧರಿಸದಿರುವುದು ದಾರಿದ್ರ್ಯದ ಗುರುತುಗಳಲ್ಲ ನಿಮ್ಮ ದೇಶದ ಒಬ್ಬ ದರಿದ್ರ ನಮ್ಮ ದೇಶದ ಭವ್ಯ ಹೋಟೆಲಲ್ಲಿ ಇದ್ದು ಬರಬಹುದು ನಮ್ಮ ಶ್ರೀಮಂತರೂ ಕೂಡ ನಿಮ್ಮ ದೇಶದಲ್ಲಿ ತಮ್ಮ ಆವಶ್ಯಕತೆಗಳನ್ನು ಪೂರೈಸಿ ಕೊಳ್ಳುವುದು ಕಷ್ಟ. ಆದ್ದರಿಂದ ಬಡತನ ಸಿರಿತನಗಳು ವಾಸ್ತವಿಕವಾಗಿ ಊಹೆಯ ಪದಗಳು; ಆವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಇವುಗಳಿ ಅರ್ಥವಿಲ್ಲ. ನೀವು ತಿಳಿದಂತೆ ನಮ್ಮಲ್ಲಿ ಬಡತನವಿಲ್ಲ; ಮೌಢ್ಯವಿದೆ; ಅಜ್ಞಾನವಿದೆ, ನಿಮ್ಮಲ್ಲಿಯೂ ಭಿಕ್ಷುಕರಿದ್ದಾರೆ. ಈ ಮಹಾನಗರದಲ್ಲೂ ನಾನು ಅನೇಕ ಭಿಕ್ಷುಕರನ್ನು ನೋಡಿದ್ದೇನೆ. ಆದರೆ ನಿಮ್ಮ ಭಿಕ್ಷುಕರು ಸೂಟುಧಾರಿಗಳಾಗಿದ್ದಾರೆ!"

ಮೈಕೆಲ್ ನನ್ನ ವಿಚಾರ ಸರಣಿಯನ್ನು ಕೇಳಿ "ನಿಮ್ಮ ದೃಷ್ಟಿಕೋನ ಸೈ ವಾದುದು. ಪ್ರತಿಯೊಂದನ್ನೂ ಆಯಾ ಪರಿಸರದಲ್ಲಿ ನೋಡುವುದೇ ವಾಸ್ತವಿಕತೆ. ಈ ರೀತಿ ವಿಚಾರಮಾಡಿ ನನಗೆ ನಿಮ್ಮವರು ಯಾರೂ ಹೇಳಲಿಲ್ಲ'' ಎಂದು ಒಪ್ಪಿ ಕೊಂಡರು.

ಭಾರತದಿಂದ ವಿದೇಶಗಳಿಗೆ ಹೋದವರು ಅಲ್ಲಿಯ ಯಾಂತ್ರಿಕ ಸೌಲಭ್ಯಗಳನ್ನು ಕಂಡು, ಯಾವ ತತ್ವಗಳಿಗೂ ಕಟ್ಟು ಬೀಳದ ಅವರ ಸ್ವಚ್ಛಂದ ಜೀವನವನ್ನು ಕಂಡು ಹುಚ್ಚರಾಗಿ ಭಾರತದ ಬಗ್ಗೆ ಕೀಳರಿಮೆಯಿಂದ ಮಾತನಾಡುತ್ತಾರೆ; ವಿಚಾರಮಾಡದೆ ಉನ್ನತ ಮೌಲ್ಯಗಳನ್ನು ಅಲ್ಲಗಳೆಯುತ್ತಾರೆ. ಈ ಕಾರಣದಿಂದ ಭಾರತದ ಬಗ್ಗೆ ತುಂಬಾ ತಪ್ಪು ಅಭಿಪ್ರಾಯ ಹೊರದೇಶಗಳಲ್ಲಿ ಮನೆ ಮಾಡಿವೆ. ಬಡತನ, ಮೌಢ್ಯ ಕ್ರೌರ್ಯ ಮೊದಲಾದವುಗಳು ಎಲ್ಲ ದೇಶಗಳಲ್ಲೂ ಇರುವ ಸಾಮಾಜಿಕ ಸಮಸ್ಯೆಗಳು. ನ್ಯೂಯಾರ್ಕ್ ನಗರದಲ್ಲೇ ಭಿಕ್ಷುಕರಿರಬೇಕಾದರೆ, ಕೊಲೆ ಸುಲಿಗೆಗಳಿರಬೇಕಾದರೆ ಅತ್ಯಾಚಾರ, ಭ್ರಷ್ಟಾಚಾರಗಳಿರಬೇಕಾದರೆ ಬೇರೆ ಕಡೆ ಅವು ಇರುವುದಿಲ್ಲವೇ? ಕಾಲಲ್ಲಿ ನಡೆಯುವುದು, ಹವಾಮಾನಕ್ಕೆ ತಕ್ಕ ಉಡುಪು ಧರಿಸುವುದು, ತಮ್ಮಲ್ಲಿ ಬೆಳೆಯುವ ಆಹಾರವನ್ನು ತಿನ್ನುವುದು ಬಡತನವೆಂದು ತಿಳಿಯುವುದು ಮೌಢ್ಯ. ಭಾವನಾತ್ಮಕವಾಗಿ ಭಾರತೀಯರು ಪಾಶ್ಚಾತ್ಯರಿಗಿಂತ ಸಂತುಷ್ಟರು. ಪಾಶ್ಚಾತ್ಯರ ಭೌತಿಕ ಸಾಧನ ಸವಲತ್ತುಗಳು ಅವುಗಳೇ ಉಂಟುಮಾಡುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕು ಸಾಲದಾಗುತ್ತವೆ ಮಾನಸಿಕ ತೃಪ್ತಿ ಅವರಿಗೆ ದುರ್ಲಭ.

ಭಾರತಕ್ಕೆ ಹಿಂದಿರುಗುವ ದಿನ ನ್ಯೂಯಾರ್ಕ್ ನಗರದಲ್ಲಿ ಇನ್ನೂ ಹಿಮ ಸುರಿಯುತ್ತಲೇ ಇದ್ದುದರಿಂದ ರಸ್ತೆಯಲ್ಲಿ ಸಣ್ಣ ವಾಹನಗಳು ಚಲಿಸುತ್ತಿರಲಿಲ್ಲ. ಹಿಮದ ರಾಶಿಯ ಮೇಲೆ ಹೋದರೆ ಇಳಿಜಾರುಗಳಲ್ಲಿ ಈ ವಾಹನಗಳು ಜಾರಿಕೊಂಡು ಹೋಗಿ ಹಿಡಿತ ತಪ್ಪಬಹುದಾದ್ದರಿಂದ ಟ್ಯಾಕ್ಸಿಗಳು ಓಡಾಡುವುದಿಲ್ಲ. ವೈ.ಎಂ.ಸಿ.ಎ. ಯಿಂದ ಕೆನಡಿ ವಿಮಾನ ನಿಲ್ದಾಣಕ್ಕೆ ಸುಮಾರು 25-30 ಮೈಲು ದೂರ ಹೇಗೆ ಹೋಗುವುದೆಂಬುದು ಸಮಸ್ಯೆಯಾಯಿತು. ವಿಮಾನ ಹೊರಡುವ ವೇಳೆ ಸಮೀಪಿಸು ತ್ತಿದ್ದರೂ ಟ್ಯಾಕ್ಸಿ ಸಿಕ್ಕುವ ಹಾಗೆ ಕಾಣಲಿಲ್ಲ. ಕೇಳಿದ ಟ್ಯಾಕ್ಸಿ ಚಾಲಕರು ಕೈ

ಅಲ್ಲಾಡಿಸಿ ಮುಂದೆ ಹೊರಟು ಹೋಗುತ್ತಿದ್ದರು. ನನ್ನ ಹಾಗೆ ವಿಮಾನ ನಿಲ್ದಾಣಕ್ಕೆ ಹೊರಟಿದ್ದ ಇಬ್ಬರು ಅಲ್ಜೀರಿಯಾದ ಕರಿಯ ತರುಣರೂ ನಾನೂ ಸೇರಿ ಕೊನೆಗೆ ವಿಧಿಯಿಲ್ಲದೆ ಒಂದು ಉಪಾಯ ಆಲೋಚಿಸಬೇಕಾಯಿತು. ಹತ್ತಿರ ರಸ್ತೆಯಲ್ಲಿನ ಹೋಟೆಲಿಗೆಂದು ಟ್ಯಾಕ್ಸಿ ಹತ್ತುವುದು, ಹತ್ತಿದ ಮೇಲೆ ವಿಮಾನ ನಿಲ್ದಾಣಕ್ಕೆ ಹೋಗಬೇಕು ಎಂದು ಹೇಳುವುದು ಎಂಬುದೇ ನಮ್ಮ ಉಪಾಯ. ತಕ್ಷಣ ರಸ್ತೆಯಲ್ಲಿ ಹೋಗುತ್ತಿದ್ದ ಒಂದು ಟ್ಯಾಕ್ಸಿಯನ್ನು ನಿಲ್ಲಿಸಿದೆವು. ಅದರ ಚಾಲಕ ಚೀನೀ ತರುಣ ನಮ್ಮನ್ನು ಎಲ್ಲಿಗೆ ಎಂದು ಕೇಳಲೇ ಇಲ್ಲ. ಸಾಮಾನುಗಳನ್ನು ಟ್ಯಾಕ್ಸಿಯೊಳಗೆ ಹಾಕಿ ಮೂವರು ಒಳಗೆ ತೂರಿಕೊಂಡ ಮೇಲೆ ಆ ಚೀನೀ ತರುಣ ಎಲ್ಲಿಗೆ ಎಂದು ಕೇಳಿದ. ಈಗ ಸುಳ್ಳು ಹೇಳುವ ಅಗತ್ಯವಿಲ್ಲದ್ದರಿಂದ ಸತ್ಯವನ್ನೇ ಹೇಳಿದೆ. ಚಾಲಕ ಗೊಣಗುಟ್ಟುತ್ತಾ ತನ್ನ ಕಷ್ಟವನ್ನು ಹೇಳಿಕೊಂಡ. ಅವನಿಗೆ ಹೆಚ್ಚು ಬಾಡಿಗೆ ಕೊಡುವ ಪುಸಲಾವಣೆಯಿಂದ ಅವನನ್ನು ಹೊರಡಿಸಿದೆವು. ಟ್ಯಾಕ್ಸಿ ನಿಧಾನವಾಗಿ ಸಾಗತೊಡಗಿ ವಿಮಾನ ನಿಲ್ದಾಣ ತಲುಪಿದಾಗ ಕರಿಯ ಮಿತ್ರರು ಹೆಚ್ಚು ಬಾಡಿಗೆ ಕೊಡಲು ನಿರಾಕರಿಸಿದರು. ಆದರೂ ಚೀನೀ ಚಾಲಕ ಒತ್ತಾಯ ಮಾಡಲಿಲ್ಲ. ಅವನ ಸಭ್ಯತೆಗೆ ನಾನೇ ಐದು ಡಾಲರು ಹೆಚ್ಚು ಕೊಟ್ಟೆ.

ಇಷ್ಟೆಲ್ಲ ಅವಸರದಿಂದ ಬಂದರೂ ನಾನು ಹೊರಡಬೇಕಿದ್ದ ಏರ್ ಇಂಡಿಯಾ ಜಂಬೋಜೆಟ್ ವಿಮಾನ ನಿಲ್ದಾಣಕ್ಕೆ ಬಂದೇ ಇರಲಿಲ್ಲ. ಹಿಮಪಾತದ ಕಾರಣದಿಂದ ಆ ವಿಮಾನ ನ್ಯೂಯಾರ್ಕ್‌ನಲ್ಲಿ ಇಳಿಯದೆ ವಾಷಿಂಗ್‌ಟನ್‌ಗೆ ಹೊರಟು ಹೋಗಿತ್ತು. ಅದು ಬರುವುದಕ್ಕೆ ಕಾಯುತ್ತಾ ರಾತ್ರಿಯೆಲ್ಲ ಕೊರೆವ ಚಳಿಯಲ್ಲಿಯೇ ಜಾಗರಣೆ ಮಾಡಿದ್ದಾಯಿತು. ವಿಮಾನ ಬಂದು ನಾವೆಲ್ಲ ಅದನ್ನು ಹತ್ತುತ್ತಿದ್ದಾಗ ಮೂಡಲಲ್ಲಿ ಕೆಂಪಾಗುತ್ತಿತ್ತು. ಗಗನಸಖಿಯ ಸ್ವಾಗತ, ವಿಮಾನದೊಳಗಿನ ವಾತಾವರಣಗಳು ವಿದೇಶದ ಪರಕೀಯತೆಯನ್ನು ಪರಿಹರಿಸಿದ್ದವು. ಸುಮಾರು ಹದಿನಾಲ್ಕು ಗಂಟೆಗಳ ವಿಮಾನಯಾನ ಮನೆಯಲ್ಲಿದ್ದಂತೆಯೇ ಮುಗಿದು ಹೋಗಿ, ಮಾರನೆಯ ದಿನ ಬೆಳಗಿನ ಬಿಸಿಲಿನಲ್ಲಿ ಕುತುಬ್ ಮಿನಾರ್ ಗೋಪುರದ ಮೇಲೆ ವಿಮಾನ ಹಾರಿಬಂದು ಮಾತೃಭೂಮಿಯ ಸ್ಪರ್ಶಮಾಡಿತು.

ಜೆ. ಆರ್. ನಂಜುಂಡೇಗೌಡ

ಕೆರೇಬಿಯನ್ ಸಂಸ್ಕೃತಿ

ಕೆರೇಬಿಯನ್ ಕಡಲ ನಡುವೆ
ತೇಲುವ ಪುಟ್ಟ ದೋಣಿಗಳಿವು ಈ ಪುಟ್ಟ ದ್ವೀಪಗಳು.
ಹಸಿರು ನೀಲಿ ಪರಕಾರ ತೊಟ್ಟ
ಈ ಪುಟ್ಟ ನೀರೆಯರ ಕಂಡವರ
ಕಣ್ ನೆಟ್ಟು ನಿಲ್ಲುವುವು ಇಲ್ಲಿ.
ಕಡಲ ಅಲೆ ಅಪ್ಪಳಿಸಿ ಸವೆದ ದಂಡೆಗಳಂತೆ,
ಬಂಡೆಗಳಂತೆ ಇತಿಹಾಸ, ಸಂಸ್ಕೃತಿ ಅಸ್ಪಷ್ಟ.
ಅಜ್ಜ ಪಿಜ್ಜರ ಆಲದ ಮರವ ಬಿಟ್ಟು ಕಡಲ ಉಸುಕಿನ ಮೇಲೆ ನೆಲೆನಿಂತು
ಹೊಸ ಅಲೆಗೆ ದಿಟ್ಟಿಯಿಟ್ಟು ಸುಖಿಸುವವರು.
ಗಂಡಿಗೆ ಸಮನಾಗಿ, ಅಲ್ಲಲ್ಲ, ಮಿಗಿಲಾಗಿ ದುಡಿದು
ಮನೆಮಾರುಕಟ್ಟಿ, ಗಂಡ ಅನಿವಾರ್ಯವೆನ್ನದೆ ಹಡೆದು,
ಗುಟುಕು ಕೊಟ್ಟು, ಆಕಾಶಕ್ಕೆ ಹಾರಿಬಿಟ್ಟು,
ವರ್ತಮಾನದ ನೇರದಾರಿಯಲ್ಲಿ ನಡೆವ ನಾರಿಯರ ತವರು.
ಕಡಲ ದಂಡೆಗಳಲ್ಲಿ ಬೀಚು ಹೋಟೆಲು ಕಟ್ಟಿ
ಈ ನೆಲಜಲದ ಚಲುವ ಮಾರುವೀ ನಾಡು
ಕಾರು ಬೀರು ನೀರು ನೀರೆಯರ ನಾಡು.

ಮೂಲ : **ವೆಲಕ್ ಮತ್ತು ವಾರೆನ್**

ಅನು : **ಸಿ. ಪಿ. ಕೆ.**

ಸಾಹಿತ್ಯ ತತ್ತ್ವ

೪. ಸಾಹಿತ್ಯಕತತ್ತ್ವ, ವಿಮರ್ಶೆ, ಮತ್ತು ಚರಿತ್ರೆ

ಸಾಹಿತ್ಯಾಭ್ಯಾಸಕ್ಕಾಗಿ ನಾವೊಂದು ತತ್ತ್ವಾಧಾರವನ್ನು ರೂಪಿಸಿಕೊಂಡಿರುವುದರಿಂದ, ವ್ಯವಸ್ಥಿತವೂ ಸುಸಂಬದ್ಧವೂ ಆದ ಸಾಹಿತ್ಯಾಭ್ಯಾಸದ ಸಾಧ್ಯತೆಯನ್ನು ನಾವು ನಿರ್ಧರಿಸಬೇಕು. ಇದಕ್ಕೆ ಇಂಗ್ಲಿಷಿನಲ್ಲಿ ಬಹಳ ಒಳ್ಳೆಯ ಹೆಸರು ಸಿಗುವುದಿಲ್ಲ. ಅದಕ್ಕೆ ಅತ್ಯಂತ ಸಾಮಾನ್ಯ ಶಬ್ದಗಳೆಂದರೆ "ಸಾಹಿತ್ಯಕ ವಿದ್ವತ್ತು" ಮತ್ತು "ವಿದ್ಯಾಭಿಮಾನ" ("philology"). ಮೊದಲನೆಯ ಶಬ್ದ, "ವಿಮರ್ಶೆ"ಯನ್ನು ಬಿಡುವಂತೆ ಮತ್ತು ಅಧ್ಯಯನದ ವಿದ್ವತ್ ಸ್ವರೂಪವನ್ನು ಒತ್ತಿ ಹೇಳುವಂತೆ ತೋರುವುದರಿಂದ ಮಾತ್ರ ಆಕ್ಷೇಪಣೀಯ; "ವಿದ್ವಾಂಸ" ಶಬ್ದವನ್ನು ಎಮರ್ಸನ್ನನಷ್ಟು ವ್ಯಾಪಕವಾಗಿ ವ್ಯಾಖ್ಯಾನಿಸಿದಲ್ಲಿ ಅದು ನಿಸ್ಸಂದೇಹವಾಗಿ ಸ್ವೀಕಾರಯೋಗ್ಯ. ಎರಡನೆಯ ಶಬ್ದ—"ವಿದ್ಯಾಭಿಮಾನ"—ಅನೇಕ ಅಪಾರ್ಥಗಳಿಗೆ ಆಸ್ಪದವೀಯುತ್ತದೆ. ಚಾರಿತ್ರಿಕವಾಗಿ ಅದು ಎಲ್ಲ ಸಾಹಿತ್ಯಕ ಹಾಗೂ ಭಾಷಾಶಾಸ್ತ್ರೀಯ ಅಧ್ಯಯನಗಳನ್ನು ಮಾತ್ರವಲ್ಲದೆ ಮಾನವ ಮನಸ್ಸಿನ ಎಲ್ಲ ಉತ್ಪನ್ನಗಳ ಅಧ್ಯಯನಗಳನ್ನು ಒಳಗೊಳ್ಳುವಂತೆ ಬಳಕೆಗೊಂಡಿದೆ. ಅದು ಅತ್ಯಂತ ಪ್ರಚುರವಾಗಿದ್ದುದು ಹತ್ತೊಂಬತ್ತನೆಯ ಶತಮಾನದ ಜರ್ಮನಿಯಲ್ಲಾದರೂ Modern Philology, Philological Quarterly ಮತ್ತು Studies in Philologyಯಂತಹ ಅವಲೋಕನಗಳ ಶೀರ್ಷಿಕೆಗಳಲ್ಲಿ ಅದಿನ್ನೂ ಉಳಿದುಕೊಂಡಿದೆ. ಒಂದು ಮೂಲಭೂತ Encyklopadie und methodologie der Philologischen wissenschaftenನ್ನು (1877, ಆದರೆ ಭಾಗಶಃ 1809ರಷ್ಟು ಹಿಂದಕ್ಕೆ ಹೋಗುವ ಉಪನ್ಯಾಸಗಳನ್ನು ಆಧರಿಸಿದ್ದು) ಬರೆದ ಬೊಯೆಖ್ "Philology"ಯನ್ನು "ಜ್ಞಾತದ ಜ್ಞಾನ"ವೆಂದೂ, ಆದ ಕಾರಣ ಭಾಷೆ ಸಾಹಿತ್ಯಗಳ, ಕಲೆಗಳ ಮತ್ತು ರಾಜ್ಯಶಾಸ್ತ್ರದ, ಧರ್ಮ ಮತ್ತು ಸಮಾಜ ಪದ್ಧತಿಗಳ ಅಧ್ಯಯನವೆಂದೂ ಲಕ್ಷಣೀಕರಿಸಿದ. ಗ್ರೀನ್‌ಲಾನ "ಸಾಹಿತ್ಯಚರಿತ್ರೆ"

ಯೊಡನೆ ಅಭಿನ್ನವಾಗಿರುವ ಬೊಯೆಖ್‌ನ Philology ಸ್ಪಷ್ಟವಾಗಿ ಕ್ಲಾಸಿಕಲ್ ಅಧ್ಯಯನಗಳ ಅಗತ್ಯಗಳಿಂದ—ಅವುಗಳಿಗೆ ಚರಿತ್ರೆಯ ಮತ್ತು ಪುರಾತತ್ವ ಶಾಸ್ತ್ರದ ಸಹಾಯ ವಿಶೇಷವಾಗಿ ಅಗತ್ಯ—ಪ್ರೇರಿತವಾಗಿದೆ. ಬೊಯೆಖ್‌ನ ಪಾಲಿಗೆ ಸಾಹಿತ್ಯಾಭ್ಯಾಸವು ನಾಗರಿಕತೆಯ ಒಂದು ಸಮಗ್ರಶಾಸ್ತ್ರವೆಂದು, ಅದರಲ್ಲೂ ಅವನು "ರಾಷ್ಟ್ರಧರ್ಮ"ವೆಂದು ಜರ್ಮನ್ ರೊಮ್ಯಾಂಟಿಕ್‌ವಾದದೊಡನೆ ಕರೆಯತಕ್ಕದ್ದರ ಶಾಸ್ತ್ರವೆಂದು ಅರ್ಥಗೊಂಡ ವಿದ್ಯೆಯ ಒಂದು ಶಾಖೆಯಷ್ಟೆ. ಇಂದು, ತನ್ನ ವ್ಯುತ್ಪತ್ತಿ ಹಾಗೂ ತಜ್ಞರ ಬಹು ಪಾಲು ವಾಸ್ತವಿಕ ಕಾರ್ಯದಿಂದಾಗಿ Philology ಮೇಲಿಂದ ಮೇಲೆ ಭಾಷಾವಿಜ್ಞಾನವೆಂದು, ವಿಶೇಷವಾಗಿ ಚಾರಿತ್ರಿಕ ವ್ಯಾಕರಣ ಹಾಗೂ ಭಾಷೆಗಳ ಪ್ರಾಚೀನ ರೂಪಗಳ ಅಧ್ಯಯನವೆಂದು ಅರ್ಥಮಾಡಿಕೊಳ್ಳಲ್ಪಡುತ್ತಿದೆ. ಆ ಶಬ್ದಕ್ಕೆ ಅನೇಕ ಮತ್ತು ಇಂತಹ ವಿಭಿನ್ನ ಅರ್ಥಗಳಿರುವುದರಿಂದ, ಅದನ್ನು ತ್ಯಜಿಸುವುದು ಅತ್ಯುತ್ತಮ.

ಸಾಹಿತ್ಯ ವಿದ್ವಾಂಸನ ಕೆಲಸಕ್ಕೆ ಮತ್ತೊಂದು ಪರ್ಯಾಯ ಶಬ್ದವೆಂದರೆ "ಸಂಶೋಧನೆ." ಆದರೆ ಇದು ವಿಶೇಷತಃ ದುರದೃಷ್ಟಕರವಾಗಿ ತೋರುತ್ತದೆ; ಏಕೆಂದರೆ, ಅದು ಸಾಮಗ್ರಿಗಳ ಪೂರ್ವಭಾವಿ ಶೋಧನೆಯನ್ನಷ್ಟೆ ಒತ್ತಿ ಹೇಳುತ್ತದೆ ಮತ್ತು "ಶೋಧಿಸಬೇಕಾದ" ಸಾಮಗ್ರಿಗಳಿಗೂ ಸುಲಭವಾಗಿ ಸಿಗುವ ಸಾಮಗ್ರಿಗಳಿಗೂ ನಡುವೆ ಅಸಮರ್ಥನೀಯವಾದ ಭೇದ ಕಲ್ಪಿಸುತ್ತದೆ ಅಥವಾ ಹಾಗೆ ತೋರುತ್ತದೆ. ಉದಾಹರಣೆಗೆ, ಒಬ್ಬಾತ ಅಪರೂಪದ ಗ್ರಂಥವೊಂದನ್ನೋದಲು ಬ್ರಿಟಿಷ್ ಮ್ಯೂಸಿಯಂಗೆ ಹೋದಾಗ ಅದು "ಸಂಶೋಧನೆ"; ಆದರೆ ಮನೆಯಲ್ಲೊಂದು ಆರಾಮ ಕುರ್ಚಿಯ ಮೇಲೆ ಕುಳಿತು ಆದೇ ಗ್ರಂಥದ ಪುನರ್ಮುದ್ರಣವನ್ನೋದುವುದು ಬೇರೆಯೇ ಆದ ಮಾನಸಿಕ ಕ್ರಿಯೆಯನ್ನೊಳಗೊಳ್ಳುತ್ತದೆ. ಹೆಚ್ಚೆಂದರೆ, "ಸಂಶೋಧನೆ" ಕೆಲವು ಪೂರ್ವಸಿದ್ಧತೆಗಳನ್ನು–ಅವುಗಳ ವ್ಯಾಪ್ತಿ ಮತ್ತು ಸ್ವರೂಪ, ಸಮಸ್ಯೆಯ ಸ್ವರೂಪದೊಡನೆ ಬಹಳ ವ್ಯತ್ಯಸ್ತವಾಗುತ್ತದೆ–ಸೂಚಿಸುತ್ತದೆ. ಆದರೆ ಸಾಹಿತ್ಯಕ ಅಧ್ಯಯನಗಳಿಗೆ ವಿಶಿಷ್ಟವಾದ ವ್ಯಾಖ್ಯಾನ, ಗುಣವಿವರಣೆ, ಮೌಲ್ಯಮಾಪನಗಳ ಮಾರ್ಮಿಕ ಸಂಬಂಧಗಳನ್ನದು ಸರಿಯಾಗಿ ಸೂಚಿಸುವುದಿಲ್ಲ.

ನಮ್ಮ ''ನಿಸ್ಕೃಷ್ಟ ಅಧ್ಯಯನ''ದ ವ್ಯಾಪ್ತಿಯಲ್ಲಿ, ಸಾಹಿತ್ಯಕ ತತ್ತ್ವ–ವಿಮರ್ಶೆ–ಚರಿತ್ರೆಗಳ ನಡುವಣ ಭೇದಗಳು ಸ್ಪಷ್ಟವಾಗಿ ಅತ್ಯಂತ ಮುಖ್ಯವಾದವು. ಮೊದಲಿಗೆ, ಸಾಹಿತ್ಯವೊಂದು ಏಕಕಾಲಿಕ ವ್ಯವಸ್ಥೆಯೆಂಬ ದೃಷ್ಟಿಗೂ ಕಾಲಾನುಕ್ರಮದಲ್ಲಿ ಅಣಿಗೊಳಿಸಿದ ಕೃತಿಸರಣಿಯಾಗಿ ಮತ್ತು ಚಾರಿತ್ರಿಕ ಕ್ರಿಯೆಯ ಅಭಿನ್ನಾಂಗಗಳಾಗಿ ಸಾಹಿತ್ಯವನ್ನು ನೋಡುವ ದೃಷ್ಟಿಗೂ ಭೇದವಿದೆ. ಆ ಮೇಲೆ, ತತ್ತ್ವಗಳ ಮತ್ತು ಸಾಹಿತ್ಯದ ಮಾನದಂಡಗಳ ಅಧ್ಯಯನಕ್ಕೂ ಮೂರ್ತ ಸಾಹಿತ್ಯ ಕಲಾಕೃತಿಗಳ—ಅವುಗಳನ್ನು ನಾವು ಬಿಡಿ ಬಿಡಿಯಾಗಿ ಅಭ್ಯಸಿಸಲಿ ಅಥವಾ ಕಾಲಾನುಕ್ರಮ ಸರಣಿಯೊಂದರಲ್ಲಿ ಅಭ್ಯಸಿಸಲಿ–ಅಧ್ಯಯನಕ್ಕೂ ಭೇದವಿದೆ. ಸಾಹಿತ್ಯದ ತತ್ತ್ವಗಳು,

ವರ್ಗಗಳು, ಮಾನದಂಡಗಳು ಇತ್ಯಾದಿಗಳನ್ನು "ಸಾಹಿತ್ಯ ತತ್ತ್ವ" ವೆಂದು ಕರೆಯುವುದರ ಮೂಲಕ ಮತ್ತು ಮೂರ್ತ ಕಲಾಕೃತಿಗಳ ಅಧ್ಯಯನಗಳನ್ನು "ಸಾಹಿತ್ಯವಿಮರ್ಶೆ"ಯೆಂದೊ (ಮುಖ್ಯವಾಗಿ ಸ್ಥಾಯಿ ಸ್ವರೂಪದ್ದು) "ಸಾಹಿತ್ಯ ಚರಿತ್ರೆ"ಯೆಂದೊ ಬೇರ್ಪಡಿಸುವುದರ ಮೂಲಕ ಈ ಭೇದಗಳ ಕಡೆಗೆ ಗಮನ ಸೆಳೆಯುವುದು ಅತ್ಯುತ್ತಮವಾಗಿ ಕಾಣುತ್ತದೆ. ಎಲ್ಲ ಸಾಹಿತ್ಯತತ್ತ್ವವನ್ನೂ ಒಳಗೊಳ್ಳುವಂತೆ "ಸಾಹಿತ್ಯವಿಮರ್ಶೆ" ಮೇಲಿಂದ ಮೇಲೆ ಬಳಕೆಯಾಗುತ್ತಿರುವು ದೇನೊ ನಿಜ; ಆದರೆ ಇಂಥ ಬಳಕೆ ಉಪಯುಕ್ತ ಭೇದವೊಂದನ್ನು ಅಲಕ್ಷಿಸುತ್ತದೆ. ಅರಿಸ್ಟಾಟಲ್ ಮೀಮಾಂಸಕನಾಗಿದ್ದ; ಸೇಂಟ್ ಬ್ಯೂವ್ ಪ್ರಧಾನವಾಗಿ ವಿಮರ್ಶಕ. ಕೆನ್ನೆತ್ ಬರ್ಕ್ ಬಹುಮಟ್ಟಿಗೆ ಸಾಹಿತ್ಯಮೀಮಾಂಸಕ, ಆರ್. ಪಿ. ಬ್ಲ್ಯಾಕ್ ಮೂರನಾದರೋ ಸಾಹಿತ್ಯವಿಮರ್ಶಕ. "ಸಾಹಿತ್ಯತತ್ತ್ವ" ಶಬ್ದ ಅಗತ್ಯವಾದ "ಸಾಹಿತ್ಯವಿಮರ್ಶೆಯ ತತ್ವ"ವನ್ನೂ "ಸಾಹಿತ್ಯ ಚರಿತ್ರೆ"ಯ ತತ್ತ್ವವನ್ನೂ ಒಳಗೊಳ್ಳಬಹುದು—ಈ ಪುಸ್ತಕದಂತೆ.

ಈ ಭೇದಗಳು ಸಾಕಷ್ಟು ಸ್ಪಷ್ಟವಾಗಿವೆ ಮತ್ತು ವ್ಯಾಪಕವಾಗಿ ಅಂಗೀಕೃತ ವಾಗಿವೆ. ಆದರೆ ಹೀಗೆ ಹೆಸರಿಸಿದ ವಿಧಾನಗಳನ್ನು ಪ್ರತ್ಯೇಕವಾಗಿ ಬಳಸುವುದು ಸಾಧ್ಯವಿಲ್ಲ, ಅವು ಒಂದನ್ನೊಂದು ಪೂರ್ತಿಯಾಗಿ ಕುರಿಯುತ್ತವೆ; ಎಷ್ಟರಮಟ್ಟಿಗೆಂದರೆ, ಸಾಹಿತ್ಯ ವಿಮರ್ಶೆ ಅಥವಾ ಚರಿತ್ರೆಯಿಲ್ಲದೆ ಸಾಹಿತ್ಯತತ್ತ್ವವನ್ನಾಗಲಿ ತತ್ತ್ವ ಮತ್ತು ಚರಿತ್ರೆಯಿಲ್ಲದೆ ವಿಮರ್ಶೆಯನ್ನಾಗಲಿ ತತ್ತ್ವ ಮತ್ತು ವಿಮರ್ಶೆಯಿಲ್ಲದೆ ಚರಿತ್ರೆ ಯನ್ನಾಗಲಿ ಕಲ್ಪಿಸಿಕೊಳ್ಳುವುದು ಅಶಕ್ಯ. ಈ ಅರಿವು ಅಷ್ಟೇನೂ ವ್ಯಾಪಕವಾಗಿಲ್ಲ. ಮೂರ್ತ ಸಾಹಿತ್ಯ ಕೃತಿಗಳ ಅಧ್ಯಯನದ ತಳಹದಿಯ ಮೇಲಲ್ಲದೆ ಸಾಹಿತ್ಯ ತತ್ತ್ವ ಅಸಾಧ್ಯವೆಂಬುದು ಸ್ಪಷ್ಟ. ಮಾನದಂಡಗಳು, ವರ್ಗಗಳು ಮತ್ತು ಯೋಜನೆಗಳು ಶೂನ್ಯದಲ್ಲಿ ಗಮ್ಯವಾಗಲಾರವು. ಆದರೆ ಪ್ರತಿಯಾಗಿ, ಯಾವುದಾದರೂ ಪ್ರಶ್ನ ವ್ಯವಸ್ಥೆ, ಪರಿಗ್ರಹಿಕೆಗಳ ವ್ಯವಸ್ಥೆ, ಅನ್ವಯಸಂಗತಿಗಳು, ಸಾಧಾರಣೀಕರಣಗಳು ಇಲ್ಲದೆ ವಿಮರ್ಶೆ ಅಥವಾ ಚರಿತ್ರೆ ಸಾಧ್ಯವಿಲ್ಲ. ಇಲ್ಲಿ ಅಪರಿಹಾರ್ಯವಾದ ಸಂದಿಗ್ಧವೇನೂ ಇಲ್ಲ: ನಾವು ಯಾವಾಗಲೂ ಕೆಲವು ಪೂರ್ವಕಲ್ಪನೆಗಳನ್ನಿಟ್ಟುಕೊಂಡು ಓದುತ್ತೇವೆ ಮತ್ತು ಸಾಹಿತ್ಯ ಕೃತಿಗಳ ಮುಂದಿನ ಅನುಭವದಿಂದ ಈ ಪೂರ್ವಕಲ್ಪನೆಗಳನ್ನು ಯಾವಾಗಲೂ ಮಾರ್ಪಡಿಸಿಕೊಳ್ಳುತ್ತೇವೆ. ಕ್ರಿಯೆ ತಾರ್ಕಿಕವಾದುದು: ತತ್ತ್ವ, ಆಚರಣೆಗಳ ಪರಸ್ಪರ ಅಂತರ್‌ಭೇದನ.

ಸಾಹಿತ್ಯಚರಿತ್ರೆಯನ್ನು ತತ್ತ್ವ, ವಿಮರ್ಶೆಗಳಿಂದ ಬೇರ್ಪಡಿಸುವ ಪ್ರಯತ್ನಗಳು ನಡೆದಿವೆ. ಉದಾಹರಣೆಗೆ, ಸಾಹಿತ್ಯಚರಿತ್ರೆ A ಎಂಬುದು Bಯಿಂದ ನಿಷ್ಪನ್ನ ವಾಯಿತೆಂಬುದನ್ನು ತೋರಿದರೆ, ವಿಮರ್ಶೆ A ಎಂಬುದು B ಗಿಂತ ಉತ್ತಮವೆಂದು ಹೇಳುತ್ತದೆ ಎಂದು ಬೇಟ್‌ಸನ್ ವಾದಿಸಿದ. ಈ ದೃಷ್ಟಿಯ ಪ್ರಕಾರ, ಮೊದಲನೆಯ ದಾದರಿ ತಾಳಿನೋಡಬಹುದಾದ ಸಂಗತಿಗಳೊಡನೆ ವ್ಯವಹರಿಸುತ್ತದೆ, ಎರಡನೆಯದು,

ಅಭಿಪ್ರಾಯ, ನಂಬಿಕೆಗಳ ವಿಷಯಗಳೊಡನೆ. ಆದರೆ ಈ ಭೇದ ಅಸಮರ್ಥನೀಯ. ಸಂಪೂರ್ಣವಾಗಿ ತಟಸ್ಥ "ಸಂಗತಿ"ಗಳಾದ ಸಾಮಗ್ರಿಗಳು ಸಾಹಿತ್ಯ ಚರಿತ್ರೆಯಲ್ಲಿರುವುದಿಲ್ಲ. ಸಾಮಗ್ರಿಗಳ ಆಯ್ಕೆಯಲ್ಲಿ–ಗ್ರಂಥಗಳ ಮತ್ತು ಸಾಹಿತ್ಯದ ನಡುವಣ ಸರಳ ಪೂರ್ವಭಾವಿ ಭೇದದಲ್ಲಿ, ಈ ಆ ಕವಿಗೆ ಕೊಡುವ ಸ್ಥಳವಷ್ಟರಲ್ಲಿ–ಮೌಲ್ಯ ನಿರ್ಣಯಗಳು ಸೂಚಿತವಾಗುತ್ತವೆ. ಒಂದು ಕಾಲದ ಅಥವಾ ಶೀರ್ಷಿಕೆಯ ನಿಷ್ಕರ್ಷೆ ಕೂಡ ಯಾವುದಾದರೊಂದು ಬಗೆಯ ತೀರ್ಪನ್ನು–ಈ ನಿರ್ದಿಷ್ಟ ಪುಸ್ತಕ ಅಥವಾ ಘಟನೆಯನ್ನು ಲಕ್ಷಾಂತರ ಇತರ ಪುಸ್ತಕ, ಘಟನೆಗಳಿಂದ ಆಯುವಂಥದು–ಮುನ್ನೂಹಿಸುತ್ತದೆ. ತೌಲನಿಕವಾಗಿ ತಟಸ್ಥವಾದ ಸಂಗತಿಗಳು–ಕಾಲಗಳು, ಶೀರ್ಷಿಕೆಗಳು, ಜೀವನಚರಿತ್ರೆಯ ಘಟನೆಗಳು ಇಂಥವು–ಉಂಟೆಂದು ನಾವೊಪ್ಪಿಕೊಂಡರೂ, ಸಾಹಿತ್ಯಚರಿತ್ರೆಯ ರಚನೆಯ ಸಾಧ್ಯತೆಯನ್ನಷ್ಟೆ ನಾವೊಪ್ಪಿಕೊಳ್ಳುತ್ತೇವೆ. ಆದರೆ ಮತ್ತಷ್ಟು ಮುಂದುವರಿದ ಯಾವುದೇ ಪ್ರಶ್ನೆಗೆ, ಗ್ರಂಥ ಸಂಪಾದನದ ಅಥವಾ ಆಕರಗಳ ಮತ್ತು ಪ್ರಭಾವಗಳ ಪ್ರಶ್ನೆಗೆ ಕೂಡ, ತೀರ್ಪಿನ ನಿರಂತರ ಕ್ರಿಯೆಗಳು ಅವಶ್ಯವಾಗುತ್ತವೆ. ಉದಾಹರಣೆಗೆ, "ಡ್ರೈಡನ್ನನಿಂದ ಪೋಪ್ ತೆಗೆದುಕೊಳ್ಳುತ್ತಾನೆ" ಎಂಬ ಹೇಳಿಕೆ, ಡ್ರೈಡನ್ ಮತ್ತು ಪೋಪರನ್ನು ಅವರ ಕಾಲದ ಅಸಂಖ್ಯ ಪದ್ಯ ರಚಕರಿಂದ ಆಯುವ ಕ್ರಿಯೆಯನ್ನು ಮುನ್ನೂಹಿಸುವುದು ಮಾತ್ರವಲ್ಲದೆ ಡ್ರೈಡನ್–ಪೋಪರ ಗುಣಗಳ ಪರಿಜ್ಞಾನವನ್ನೂ ಅನಂತರ ತೂಗುವ, ಹೋಲಿಸುವ ಮತ್ತು ಆಯ್ಕೆಮಾಡುವ ನಿರಂತರ ಚಟುವಟಿಕೆಯನ್ನೂ—ಅದು ಸಾರತಃ ವಿಮರ್ಶಾತ್ಮಕವಾದುದು–ಅವಶ್ಯಗೊಳಿಸುತ್ತದೆ. ಬೋಮಂಟ್ ಮತ್ತು ಫ್ಲೆಚರರ ಸಹಕರ್ತೃತ್ವದ ಪ್ರಶ್ನೆ ಅಪರಿಹಾರ್ಯವಾಗುತ್ತದೆ, ಕೆಲವು ಶೈಲಿ ಲಕ್ಷಣಗಳು (ಅಥವಾ ತಂತ್ರಗಳು) ಇಬ್ಬರು ಲೇಖಕರಲ್ಲಿ ಒಬ್ಬನಿಗಿಂತ ಮತ್ತೊಬ್ಬನಿಗೆ ಹೆಚ್ಚಾಗಿ ಸಂಬಂಧಿಸಿವೆ ಎಂಬಂತಹ ಮುಖ್ಯ ತತ್ತ್ವವೊಂದನ್ನು ನಾವೊಪ್ಪದಿದ್ದರೆ; ಅಥವಾ, ಶೈಲಿಯ ವ್ಯತ್ಯಾಸಗಳನ್ನು ವಸ್ತುಸ್ಥಿತಿಯೆಂದಷ್ಟೆ ನಾವೊಪ್ಪಬೇಕು.

ಆದರೆ ಸಾಮಾನ್ಯವಾಗಿ ಸಾಹಿತ್ಯಚರಿತ್ರೆಯನ್ನು ಸಾಹಿತ್ಯವಿಮರ್ಶೆಯಿಂದ ಬೇರ್ಪಡಿಸುವುದರ ಪರ ವಾದವನ್ನು ಬೇರೆ ಬೇರೆ ಆಧಾರಗಳ ಮೇಲೆ ನಿಲ್ಲಿಸಲಾಗುತ್ತದೆ ತೀರ್ಪಿನ ಕ್ರಿಯೆಗಳು ಅಗತ್ಯವೆಂಬುದನ್ನು ನಿರಾಕರಿಸುವುದಿಲ್ಲ, ಆದರೆ ಸಾಹಿತ್ಯ ಚರಿತ್ರೆಗೆ ಆದರವೇ ಆದ ಸ್ವಂತ ವಿಶಿಷ್ಟ ಮಾನದಂಡಗಳು–ಎಂದರೆ ಇತರ ಯುಗಗಳವು–ಉಂಟೆಂದು ವಾದಿಸಲಾಗುತ್ತದೆ. ನಾವು ನಮ್ಮ ಸ್ವಂತ ಪೂರ್ವಕಲ್ಪನೆಗಳ ಒ ನುಗ್ಗುವಿಕೆಯನ್ನು ಉದ್ದೇಶಪೂರ್ವಕವಾಗಿ ವರ್ಜಿಸಿ, ಗತಯುಗಗಳ ಮನಸ್ಸನ್ನೂ ದೃಷ್ಟಿಯನ್ನೂ ಹೊಕ್ಕು ಅವುಗಳ ಮಾನದಂಡಗಳನ್ನೊಪ್ಪಿಕೊಳ್ಳಬೇಕೆಂದು ಈ ಸಾಹಿತ್ಯಕ ಪುನರ್ರಚನಾವಾದಿಗಳು ವಾದಿಸುತ್ತಾರೆ. "ಇತಿಹಾಸವಾದ" ವೆಂದ ಕರೆಯಲ್ಪಡುವ ಈ ದೃಷ್ಟಿ ಹತ್ತೊಂಬತ್ತನೆಯ ಶತಮಾನದಲ್ಲಿ ಜರ್ಮನಿಯಲ್ಲಿ ಸತತವಾಗಿ ವಿಸ್ತರಣಗೊಂಡಿತು, ಅಲ್ಲಿ ಕೂಡ ಅರ್ನೆಸ್ಟ್ ಟ್ರೊಯೆಲ್ಷ್‌ನಂತಹ ಮೊಡ್ಡ

ಇತಿಹಾಸಸಿದ್ಧಾಂತಿಗಳಿಂದ ಅವು ಖಂಡಿಸಲ್ಪಟ್ಟರೂ. ಈಗ ಅದು ಸಂಯುಕ್ತ ಸಂಸ್ಥಾನಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರವೇಶಿಸಿರುವಂತೆ ತೋರುತ್ತದೆ; ನಮ್ಮ ಅನೇಕ "ಸಾಹಿತ್ಯಚರಿತ್ರಕಾರರು" ಹೆಚ್ಚು ಕಡಮೆ ಸ್ಪಷ್ಟವಾಗಿ ಅದಕ್ಕೆ ನಿಷ್ಠೆ ತೋರುತ್ತಿದ್ದಾರೆ. ಉದಾಹರಣೆಗೆ, ಇತ್ತೀಚಿನ ವಿದ್ವತ್ತಿನ ಅತ್ಯಂತ ನವೀನ ಮತ್ತು ಅತ್ಯುತ್ತಮ ಮುಖವೆಂದರೆ "ಕಾಲವಿರುದ್ಧ-ವಿಚಾರವರ್ಜನ" ವೆಂದು ಹಾರ್ಡಿನ್ ಕ್ರೇಗ್ ಹೇಳಿದ. ಎಲಿಜಬೆತ್‌ಕಾಲೀನ ರಂಗಭೂಮಿಯ ಪದ್ಧತಿಗಳನ್ನೂ ಅದರ ಪ್ರೇಕ್ಷಕರ ನಿರೀಕ್ಷೆಗಳನ್ನೂ ಅಭ್ಯಸಿಸಿದ ಇ. ಇ. ಸ್ಟೋಲ್, ಸಾಹಿತ್ಯಚರಿತ್ರೆಯ ಕೇಂದ್ರೋದ್ದೇಶವೆಂದರೆ ಲೇಖಕನ ಇಂಗಿತದ ಪುನಸ್ರಚನೆ ಎಂಬ ಸೂತ್ರದ ಮೇಲೆ ಕೆಲಸ ಮಾಡುತ್ತಾನೆ. ಎಲಿಜಬೆತ್ ಕಾಲೀನ ಮನೋವೈಜ್ಞಾನಿಕ ಸೂತ್ರಗಳನ್ನು-ಚಿತ್ತವೃತ್ತಿಸಿದ್ಧಾಂತ, ಅಥವಾ ಕವಿಗಳ ವೈಜ್ಞಾನಿಕ ಅಥವಾ ಮಿಥ್ಯಾವೈಜ್ಞಾನಿಕ ಕಲ್ಪನೆಯ ಸಿದ್ಧಾಂತ ಮುಂತಾದುವು-ಅಭ್ಯಸಿಸುವ ಅನೇಕ ಪ್ರಯತ್ನಗಳಲ್ಲಿ ಇಂಥದೊಂದು ಸೂತ್ರ ಸೂಚಿತವಾಗುತ್ತದೆ. ಡನ್ ಮತ್ತು ಅವನ ಸಮಕಾಲೀನರು ರ್‍ಯಾಮಿಸ್ಟ್ ತರ್ಕದಲ್ಲಿ ಪಡೆದ ಶಿಕ್ಷಣವನ್ನು ಪರಾಮರ್ಶಿಸುವುದರ ಮೂಲಕ ಆಧ್ಯಾತ್ಮಿಕ ಪ್ರತಿಮೆಗಳ ಮೂಲ ಮತ್ತು ಅರ್ಥವನ್ನು ವಿವರಿಸಲು ರೋಸ್‌ಮಂಡ್ ಟೂವ್ ಯತ್ನಿಸಿದ್ದಾನೆ.

ವಿವಿಧ ಯುಗಗಳು ವಿವಿಧ ವಿಮರ್ಶನಗ್ರಹಿಕೆಗಳನ್ನೂ ಸಂಪ್ರದಾಯಗಳನ್ನೂ ತಳದಿವೆಯೆಂಬುದನ್ನು ಈ ಅಧ್ಯಯನಗಳು ನಮಗೆ ಮನದಟ್ಟು ಮಾಡಿಕೊಡುವುದರಿಂದ, ಪ್ರತಿಯೊಂದು ಯುಗವೂ ತನ್ನ ಸ್ವಂತ ಕಾವ್ಯ ಮಾದರಿಯ ಮೂಲಕ ಅಭಿವ್ಯಕ್ತವಾಗುವ ಒಂದು ಸ್ವಯಂಪೂರ್ಣ ಐಕ್ಯ, ಅದು ಮತ್ತಾವುದಕ್ಕೂ ಅನುಸಾರವಲ್ಲದ್ದು ಎಂದು ತೀರ್ಮಾನಿಸಲಾಗಿದೆ. ಈ ದೃಷ್ಟಿಯನ್ನು ಫ್ರೆಡರಿಕ್ ಎ. ಪಾಟ್ಲ್ ತನ್ನ 'Idiom of poetry'ಯಲ್ಲಿ ಪ್ರಾಮಾಣಿಕವಾಗಿ ಮತ್ತು ದೃಢವಾಗಿ ಪ್ರತಿಪಾದಿಸಿದ್ದಾನೆ. ತನ್ನ ನೆಲೆಯನ್ನವನು "ವಿಮರ್ಶನ ಸಾಪೇಕ್ಷತೆ"ಯದೆಂದು ಕರೆಯುತ್ತಾನೆ ಮತ್ತು ಕಾವ್ಯಚರಿತ್ರೆಯಲ್ಲಿ "ಸಂವೇದನೆಗಳ ಸ್ಥಾನಾಂತರ"ಗಳನ್ನೂ "ಒಟ್ಟು ಅಸಾತತ್ಯ"ವನ್ನೂ ಪ್ರಸ್ತಾಪಿಸುತ್ತಾನೆ. ಅವನು ತನ್ನ ಪ್ರತಿಪಾದನೆಯನ್ನು ನೀತಿಶಾಸ್ತ್ರ, ಧರ್ಮಗಳಲ್ಲಿನ ನಿರಪೇಕ್ಷ ಮಾನದಂಡಗಳ ಅಂಗೀಕಾರದೊಡನೆ ಕೂಡಿಸುವುದರಿಂದ ಅದು ಮತ್ತೂ ಅಮೂಲ್ಯವಾಗಿದೆ.

ತನ್ನ ಅತ್ಯುತ್ತಮ ಸ್ಥಿತಿಯಲ್ಲಿ, "ಸಾಹಿತ್ಯಚರಿತ್ರೆ"ಯ ಈ ಗ್ರಹಿಕೆಯು ಪ್ರತಿಭೆಯ, "ಸಹಾನುಭೂತಿ"ಯ, ಒಂದು ಗತಯುಗ ಅಥವಾ ಮರೆಯಾದ ಅಭಿರುಚಿಯೊಡನೆ ಸಾಮರಸ್ಯದ ಪ್ರಯತ್ನವನ್ನು ಕೋರುತ್ತದೆ. ಅನೇಕ ನಾಗರಿಕತೆಗಳ ಸಾಮಾನ್ಯ ಜೀವನ ದೃಷ್ಟಿ, ನಿಲುವು, ಪರಿಕಲ್ಪನೆ, ಪೂರ್ವಗ್ರಹಗಳನ್ನೂ ಹಿನ್ನೆಲೆಯಲ್ಲಿರುವ ಗ್ರಹಿಕೆಗಳನ್ನೂ ಪುನಸ್ರಚಿಸುವ ಯಶಸ್ವೀ ಪ್ರಯತ್ನಗಳು ನಡೆದಿವೆ. ದೇವತೆಗಳನ್ನೂ ಸ್ತ್ರೀಯರನ್ನೂ ಗುಲಾಮರನ್ನೂ ಕುರಿತ ಗ್ರೀಕ್ ದೃಷ್ಟಿಯ ಬಗೆಗೆ

ನಮಗೆ ಬೇಕಾದಷ್ಟು ಗೊತ್ತು; ಮಧ್ಯಯುಗಗಳ ವಿಶ್ವಶಾಸ್ತ್ರವನ್ನು ನಾವು ವಿವರವಾಗಿ ಬಣ್ಣಿಸಬಲ್ಲೆವು; ಮತ್ತು ಬೈಜಾಂತೀನ್ ಹಾಗೂ ಚೀಣೀ ಕಲೆ ಸೂಚಿಸುವ ತೀರ ವಿಭಿನ್ನ ಕಾಣ್ಕೆಯ ರೀತಿಯನ್ನು ಅಥವಾ ಕಡೆಯ ಪಕ್ಷ ತೀರ ವಿಭಿನ್ನವಾದ ಕಲಾಪರಂಪರೆ ಸಂಪ್ರದಾಯಗಳನ್ನು ತೋರಿಸುವ ಪ್ರಯತ್ನಗಳನ್ನು ನಾವೆಸಗಿದ್ದೇವೆ. ವಿಶೇಷವಾಗಿ ಜರ್ಮನಿಯಲ್ಲಿ, ನಮ್ಮ ಕಾಲದಿಂದ ಬೇರೆಯಾಗಿ ತಮ್ಮದೇ ಆದ ಪ್ರಪಂಚದಲ್ಲಿ ಬದುಕುತ್ತಿದ್ದಾರೆಂದು ಊಹಿಸಲಾಗಿರುವ ಗಾಥಿಕ್ ಮಾನವನನ್ನೂ ಬ್ಯಾರೋಕ್ ಮಾನವನನ್ನೂ ಕುರಿತು ಅಧ್ಯಯನಗಳು ಸಮೃದ್ಧವಾಗಿವೆ; ಅವುಗಳಲ್ಲಿ ಕೆಲವು ಸ್ಪೆಂಗ್ಲರನಿಂದ ಪ್ರಭಾವಿತವಾದವು.

ಸಾಹಿತ್ಯಾಭ್ಯಾಸದಲ್ಲಿ, ಚಾರಿತ್ರಿಕ ಪುನರ್ರಚನೆಯ ಈ ಪ್ರಯತ್ನ ಲೇಖಕನ ಉದ್ದೇಶದ ಮೇಲಿನ ವಿಶೇಷ ಅವಧಾರಣೆಗೆ ಕೊಂಡೊಯ್ದಿದೆ; ಆ ಉದ್ದೇಶವನ್ನು ವಿಮರ್ಶೆಯ ಮತ್ತು ಸಾಹಿತ್ಯಾಭಿರುಚಿಯ ಚರಿತ್ರೆಯಲ್ಲಿ ಅಭ್ಯಸಿಸಬಹುದೆಂದು ಭಾವಿಸಲಾಗುತ್ತದೆ. ಈ ಉದ್ದೇಶವನ್ನು ನಾವು ಖಚಿತಪಡಿಸಿಕೊಂಡು, ಲೇಖಕ ಅದನ್ನು ಈಡೇರಿಸಿದ್ದಾನೆಂಬುದನ್ನು ಕಂಡುಕೊಳ್ಳಬಲ್ಲೆವಾದರೆ, ವಿಮರ್ಶೆಯ ಸಮಸ್ಯೆಯನ್ನೂ ನಾವು ನಿವಾರಿಸಬಲ್ಲೆವೆಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಲೇಖಕ ಸಮಕಾಲೀನ ಉದ್ದೇಶವೊಂದನ್ನು ನೆರವೇರಿಸಿದ್ದಾನೆ; ಅವನ ಕೃತಿಯನ್ನು ಮತ್ತೂ ವಿಮರ್ಶಿಸುವ ಅಗತ್ಯ ಅಥವಾ ಸಾಧ್ಯತೆ ಕೂಡ ಇಲ್ಲ. ಹೀಗಾಗಿ ಈ ವಿಧಾನ ಏಕೈಕ ವಿಮರ್ಶನ ಮಾನದಂಡವೊಂದರ—ಅದು ಸಮಕಾಲೀನ ಯಶಸ್ಸಿನದು—ಅಂಗೀಕಾರಕ್ಕೆ ಕೊಂಡೊಯ್ಯುತ್ತದೆ. ಆದ್ದರಿಂದ ಕೇವಲ ಒಂದಲ್ಲ, ಎರಡಲ್ಲ, ಅಕ್ಷರಶಃ ನೂರಾರು ಸ್ವತಂತ್ರವೂ ವಿಭಿನ್ನವೂ ಪರಸ್ಪರ ಪ್ರತ್ಯೇಕವೂ ಆದ ಸಾಹಿತ್ಯ ಪರಿಕಲ್ಪನೆಗಳಿವೆ–ಒಂದು ರೀತಿಯಲ್ಲಿ ಅವೊಂದೊಂದೂ 'ಸರಿ'. ಕಾವ್ಯದ ಆದರ್ಶವನ್ನು, ಅದರಲ್ಲೇನೂ ಉಳಿಯದಂತೆ ಎಷ್ಟೋ ಸೀಳುಗಳಾಗಿ ಒಡೆಯಲಾಗುತ್ತದೆ; ಒಂದು ಸಾರ್ವತ್ರಿಕ ಅರಾಜಕತೆ ಅಥವಾ ಎಲ್ಲ ಮೌಲ್ಯಗಳ ಮಟ್ಟಸ ಇದರ ಫಲಿತಾಂಶವಾಗಬೇಕು. ಸಾಹಿತ್ಯಚರಿತ್ರೆ ಬೇರೆಬೇರೆಯಾದ, ಆದ್ದರಿಂದ ಅಂತಿಮವಾಗಿ ಅಗ್ರಾಹ್ಯವಾದ ತುಣುಕುಗಳ ಮಟ್ಟಕ್ಕಿಳಿಯುತ್ತದೆ. ಈ ಇತಿಹಾಸವಾದದ ಅತಿರೇಕ ರೂಪ ಶಿಕಾಗೋ ನಿಯೊ-ಅರಿಸ್ಟಾಟಲೀಯ ವಾದ; ಅದು ಸಾಹಿತ್ಯದ ಸಾಮಾನ್ಯ ಸೂತ್ರವೊಂದರ ಸಾಧ್ಯತೆಯನ್ನು ನಿರಾಕರಿಸಿ, ವಿಶಿಷ್ಟವೂ ತತ್ಕಾರಣದಿಂದ ಅನನುಗುಣವೂ ಸಮಾನವೂ ಆದ ಕೃತಿಗಳನ್ನು ನಮಗುಳಿಸುತ್ತದೆ. ಶಿಫಾರಸು ಮಾಡಲಾದ ಆಲಂಕಾರಿಕ ವಿಶ್ಲೇಷಣೆಯನ್ನು 'Divine Comedy'ಗೆ ಅಥವಾ ಅತ್ಯಂತ ಕಳಪೆ ಪತ್ತೇದಾರಿ ಕಾದಂಬರಿಗೆ ಸಂಬಂಧಿಸಿದಂತೆ ಏಕ ಪ್ರಕಾರವಾಗಿ ಕೈಗೊಳ್ಳಬಹುದು. ಇನ್ನಷ್ಟು ಸೌಮ್ಯವಾದ ರೂಪವೆಂದರೆ, ನಡುವೆ ಒಂದು ಸಮಾನ ಸಾಧನವಿಲ್ಲದಷ್ಟು ಮಟ್ಟಿಗೆ ಭಿನ್ನಭಿನ್ನವಾದ ಧ್ರುವ ಕಾವ್ಯಾದರ್ಶಗಳು–ಕ್ಲ್ಯಾಸಿಕ್‌ವಾದ ಮತ್ತು ರೊಮ್ಯಾಂಟಿಕ್‌ವಾದ, ಪೋಪ್ ಮತ್ತು ವರ್ಡ್ಸ್‌ವರ್ತನ ಆದರ್ಶ, ವಾಚ್ಯಕಾವ್ಯ ಮತ್ತು ವ್ಯಂಗ್ಯಕಾವ್ಯ–ಉಂಟೆನ್ನುವ ದೃಷ್ಟಿ.

ಲೇಖಕನ 'ಉದ್ದೇಶ' ಸಾಹಿತ್ಯಚರಿತ್ರೆಯ ಸಮರ್ಪಕ ವಿಷಯವೆಂಬ ಇಡೀ ಭಾವನೆ ಹೇಗೋ ಅಪಾರ್ಥಗೊಂಡಿದೆಯೆಂದು ತೋರುತ್ತದೆ. ಒಂದು ಕಲಾಕೃತಿಯ ಅರ್ಥ, ಅದರ ಉದ್ದೇಶದಿಂದ ಬರಿದುಗೊಳ್ಳುವುದಿಲ್ಲ ಅಥವಾ ಅದಕ್ಕೆ ಸಮಾನವೂ ಅಲ್ಲ. ಒಂದು ಮೌಲ್ಯವ್ಯವಸ್ಥೆಯಾಗಿ ಅದೊಂದು ಸ್ವತಂತ್ರ ಬದುಕು ನಡೆಸುತ್ತದೆ. ಒಂದು ಕಲಾಕೃತಿಯ ಒಟ್ಟು ಅರ್ಥವನ್ನು, ಲೇಖಕನಿಗೆ ಮತ್ತು ಅವನ ಸಮಕಾಲೀನರಿಗೆ ಅದು ಕೊಡುವ ಅರ್ಥದ ದೃಷ್ಟಿಯಿಂದಷ್ಟೆ ಲಕ್ಷಣೀಕರಿಸುವುದು ಸಾಧ್ಯವಿಲ್ಲ. ಅದು ಪುಂಜೀಕರಣಕ್ರಿಯೆಯ ಪರಿಣಾಮ, ಅರ್ಥಾತ್ ಅನೇಕ ಯುಗಗಳಲ್ಲಿ ಅನೇಕ ವಾಚಕರಿಂದಾದ ಅದರ ವಿಮರ್ಶೆಯ ಚರಿತ್ರೆ. ಈ ಇಡೀ ಕ್ರಿಯೆ ಅಪ್ರಕೃತವೆಂದೂ ಅದರ ಪ್ರಾರಂಭಕ್ಕಷ್ಟೆ ನಾವು ಮರಳಬೇಕೆಂದೂ ಚಾರಿತ್ರಿಕ ಪುನರ್ರಚನಕಾರರಂತೆ ನಾವು ಘೋಷಿಸುವುದು ಅನಗತ್ಯವಾಗಿ, ವಸ್ತುತಃ ಅಸಾಧ್ಯವಾಗಿ ತೋರುತ್ತದೆ. ಗತಕಾಲವನ್ನು ಕುರಿತ ನಿರ್ಣಯದಲ್ಲಿ ನಾವು ತೊಡಗುವಾಗ, ಇಪ್ಪತ್ತನೆಯ ಶತಮಾನದ ವ್ಯಕ್ತಿಗಳಾಗಿಯೆ ಉಳಿದುಬಿಡುವುದು ಸಾಧ್ಯವಿಲ್ಲ: ನಮ್ಮ ಸ್ವಂತ ಭಾಷೆಯ ಸಾಹಚರ್ಯಗಳನ್ನು, ಹೊಸದಾಗಿ ಗಳಿಸಿದ ದೃಷ್ಟಿಗಳನ್ನು, ಗತಶತಮಾನಗಳ ಪ್ರಭಾವ ಹಾಗೂ ಅರ್ಥವನ್ನು ನಾವು ಮರೆಯಲಾರೆವು. ನಾವು ಹೋಮರನ ಅಥವಾ ಭಾಸರನ ಸಮಕಾಲೀನ ವಾಚಕರಾಗಲಿ ಅಥೆನ್ಸಿನ ಡಯೋನಿಸಸ್ ರಂಗಮಂದಿರದ ಅಥವಾ ಲಂಡನ್ನಿನ ಗ್ಲೋಬ್ ರಂಗಮಂದಿರದ ಪ್ರೇಕ್ಷಕರಾಗಲಿ ಆಗಲಾರೆವು ಕಲ್ಪನಾತ್ಮಕ ಪುನರ್ರಚನಾಕ್ರಿಯೆಗೂ ಒಂದು ಗತ ದೃಷ್ಟಿಕೋನದಲ್ಲಿ ವಾಸ್ತವವಾಗಿ ಭಾಗವಹಿಸುವುದಕ್ಕೂ ನಡುವೆ ಯಾವಾಗಲೂ ನಿರ್ಣಾಯಕ ವ್ಯತ್ಯಾಸವೊಂದಿರುತ್ತದೆ. ಯೂರಿಪಿಡಿಸನ 'Bacchae'ದ ಪ್ರೇಕ್ಷಕರು ಮಾಡಿರಬಹುದಾದಂತೆ, ನಾವು ಡಯೋನಿಸಸನ್ನು ನಿಜವಾಗಿಯೂ ನಂಬಿ ಆಗಲಿ ಅವನನ್ನು ಕುರಿತು ನಗೆಯಾಡಲಾರೆವು; ಡಾಂಟೆಯ ನರಕ ವೃತ್ತಗಳನ್ನೂ ಶುದ್ಧಿ ಲೋಕಪರ್ವತವನ್ನೂ ಅಕ್ಷರಶಃ ಸತ್ಯವೆಂದು ಒಪ್ಪಿಕೊಳ್ಳಲಾರೆವು. 'ಹ್ಯಾಮ್ಲೆಟ್' ತನ್ನ ಸಮಕಾಲೀನ ವಾಚಕರಿಗೆ ಕೊಟ್ಟಂತಹ ಅರ್ಥವನ್ನು ನಾವು ನಿಜವಾಗಿಯೂ ಪುನರ್ರಚಿಸಬಲ್ಲೆವಾದರೆ, ಅದನ್ನು ರಿಕ್ತಗೊಳಿಸುತ್ತೇವಷ್ಟೆ. ಅನಂತರದ ಪೀಳಿಗೆಗಳು 'ಹ್ಯಾಮ್ಲೆಟ್'ದಲ್ಲಿ ಕಂಡುಕೊಂಡ ನ್ಯಾಯುವಾದ ಅರ್ಥಗಳನ್ನು ನಾವು ದಮನ ಮಾಡುತ್ತೇವೆ. ಹೊಸ ವ್ಯಾಖ್ಯಾನವೊಂದರ ಸಾಧ್ಯತೆಯನ್ನು ತಡೆಗಟ್ಟುತ್ತೇವೆ. ಇದು ಐಚ್ಛಿಕ ವ್ಯಕ್ತಿನಿಷ್ಠ ಅಪಗ್ರಹಿಕೆಗಳ ಪರವಾಗಿ ಹೂಡಿದ ವಾದವಲ್ಲ: 'ಸಮರ್ಪಕ' ಗ್ರಹಿಕೆಗಳಿಗೂ ತಪ್ಪು ಗ್ರಹಿಕೆಗಳಿಗೂ ನಡುವೆ ಭೇದ ಮಾಡುವ ಸಮಸ್ಯೆ ಉಳಿದೇ ಉಳಿಯುತ್ತದೆ; ಪ್ರತಿಯೊಂದು ನಿಶ್ಚಿತ ಪ್ರಕರಣದಲ್ಲೂ ಅದಕ್ಕೆ ಪರಿಹಾರ ಒದಗಿಸಬೇಕು. ಚಾರಿತ್ರಿಕ ವಿದ್ವಾಂಸ ಕಲಾಕೃತಿಯೊಂದನ್ನು ನಮ್ಮ ಸ್ವಂತ ಕಾಲದ ದೃಷ್ಟಿಕೋನದಿಂದ ಬೆಲೆಗಟ್ಟುವುದರಲ್ಲಿ ತೃಪ್ತನಾಗುವುದಿಲ್ಲ--ಅದು, ಇಂದಿನ ಶೈಲಿ ಅಥವಾ ಗತಿಯ ಅಗತ್ಯಗಳ ದೃಷ್ಟಿಯಿಂದ ಹಿಂದನ್ನು ಮರುಬೆಲೆಗಟ್ಟುವ

ಉದ್ಯೋಗನಿರತ ವಿಮರ್ಶಕನಿಗಿರುವ ಸೌಲಭ್ಯ. ತನಗಾಗಲಿ ಲೇಖಕನಿಗಾಗಲಿ ಸಮಕಾಲೀನವಲ್ಲದ ಮೂರನೆಯ ಕಾಲವೊಂದರ ದೃಷ್ಟಿಯಿಂದ ಕಲಾಕೃತಿಯನ್ನು ನೋಡುವುದು ಅಥವಾ ಒಂದು ಕೃತಿಯ ವ್ಯಾಖ್ಯಾನ ವಿಮರ್ಶೆಗಳ ಇಡೀ ಚರಿತ್ರೆಯನ್ನು ಸಮೀಕ್ಷಿಸುವುದು ಕೂಡ ಅವನಿಗೆ ಬೋಧಪ್ರದವಾಗಬಹುದು ; ಅದು ಸಮಗ್ರಾರ್ಥಕ್ಕೊಂದು ಮಾರ್ಗದರ್ಶಿಯಾಗುತ್ತದೆ.

ಕಾರ್ಯತಃ, ಚಾರಿತ್ರಿಕ ದೃಷ್ಟಿಕೋನಕ್ಕೂ ಇಂದಿನದಕ್ಕೂ ನಡುವೆ ಸ್ಫುಟವಾದ ಆಯ್ಕೆಗಳು ಸಾಧ್ಯವಿಲ್ಲ. ಹುಸಿ ಸಾಪೇಕ್ಷತ್ವ, ಹುಸಿ ನಿರಪೇಕ್ಷತ್ವ–ಎರಡರ ಬಗ್ಗೆಯೂ ನಾವು ಎಚ್ಚರದಿಂದಿರಬೇಕು. ಮೌಲ್ಯಗಳು ಮೌಲ್ಯ ನಿರ್ಣಯದ ಚಾರಿತ್ರಿಕ ಕ್ರಿಯೆಯಿಂದ ಬೆಳೆಯುತ್ತವೆ ಮತ್ತು ಅದನ್ನು ಅರ್ಥಮಾಡಿಕೊಳ್ಳಲು ನಮಗೆ ನೆರವಾಗುತ್ತವೆ. 'ಬದಲಾಗದ ಮಾನವ ಪ್ರಕೃತಿ' ಅಥವಾ 'ಕಲೆಯ ಸಾರ್ವತ್ರಿಕತೆ' ಯನ್ನು ಆಶ್ರಯಿಸುವ ಸೈದ್ಧಾಂತಿಕ ಸಾಪೇಕ್ಷತ್ವ ಚಾರಿತ್ರಿಕ ಸಾಪೇಕ್ಷತ್ವಕ್ಕೆ ಉತ್ತರವಲ್ಲ. 'ಯಥಾದೃಷ್ಟಿತ್ವ' (Perspectivism) ಎಂಬ ಶಬ್ದ ಯಾವುದಕ್ಕೆ ಉಚಿತವಾಗಿ ತೋರುತ್ತದೋ ಅಂಥ ದೃಷ್ಟಿಯೊಂದನ್ನು ನಾವು ತಳೆಯಬೇಕು. ಕಲಾಕೃತಿಯೊಂದನ್ನು ಅದರ ಸ್ವಂತ ಕಾಲದ ಮತ್ತು ಅದಕ್ಕಿಂತ ಹಿಂದಿನ ಎಲ್ಲ ಕಾಲಗಳ ಮೌಲ್ಯಗಳೊಡನೆ ಸಂಬಂಧಗೊಳಿಸಲು ನಾವು ಸಮರ್ಥರಾಗಬೇಕು. ಒಂದು ಕಲಾಕೃತಿ " ಚಿರಂತನ "ವೂ ಹೌದು (ಎಂದರೆ, ಒಂದು ನಿರ್ದಿಷ್ಟ ಅನನ್ಯತೆಯನ್ನುಳಿಸಿಕೊಳ್ಳತಕ್ಕದ್ದು), " ಚಾರಿತ್ರಿಕ "ವೂ ಹೌದು (ಎಂದರೆ, ಗುರುತಿಸಬಹುದಾದ ಬೆಳವಣಿಗೆಯ ಕ್ರಿಯೆಯೊಂದರ ಮೂಲಕ ಹಾದುಹೋಗುವಂಥದು). ಸಾಪೇಕ್ಷತಾವಾದ ಸಾಹಿತ್ಯಚರಿತ್ರೆಯನ್ನು ಭಿನ್ನಭಿನ್ನವೂ ತತ್ಕಾರಣದಿಂದ ಅಸಂತತವೂ ಆದ ತುಣಕುಗಳ ಸರಣಿಯನ್ನಾಗಿಸುತ್ತದೆ ; ಬಹುಪಾಲು ನಿರಪೇಕ್ಷತಾವಾದಗಳಾದರೋ ತಾತ್ಕಾಲಿಕ ವರ್ತಮಾನ ಪರಿಸ್ಥಿತಿಗಷ್ಟೆ ನೆರವಾಗುತ್ತವೆ, ಇಲ್ಲವೆ ಸಾಹಿತ್ಯದ ಚಾರಿತ್ರಿಕ ವೈವಿಧ್ಯಕ್ಕೆ ಉಚಿತವಲ್ಲದ ಯಾವುದಾದರೊಂದು ಅಮೂರ್ತ ಅಸಾಹಿತ್ಯಕ ಆದರ್ಶದ ಮೇಲೆ ಆಧರಿಸಲ್ಪಡುತ್ತವೆ (ನವಮಾನವತಾವಾದಿಗಳ, ಮಾರ್ಕ್ಸವಾದಿಗಳ ಮತ್ತು ನವ್ಯ-ಥಾಮಿಸ್ಟರ ಮಾನದಂಡಗಳಂತೆ). "ಯಥಾದೃಷ್ಟಿವಾದ" ವೆಂದರೆ, ಎಲ್ಲ ಯುಗಗಳಲ್ಲೂ ಹೋಲಿಸಬಹುದಾದ, ವಿಕಾಸಶೀಲವಾದ, ಪರಿವರ್ತನಶೀಲವಾದ, ಸಾಧ್ಯತೆಗಳಿಂದ ತುಂಬಿದ ಒಂದು ಕಾವ್ಯವುಂಟು, ಒಂದು ಸಾಹಿತ್ಯವುಂಟು ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆಂದು ಅರ್ಥ. ಸಾಹಿತ್ಯವು ಸಮಾನಾಂಶ ಯಾವುದೂ ಇಲ್ಲದ ವಿಶಿಷ್ಟ ಕೃತಿಗಳ ಒಂದು ಸರಣಿಯೂ ಅಲ್ಲ ; ರೊಮ್ಯಾಂಟಿಕ್‌ವಾದ ಅಥವಾ ಕ್ಲ್ಯಾಸಿಕ್‌ವಾದದ, ಪೋಪನ ಮತ್ತು ವರ್ಡ್ಸ್‌ವರ್ತನ ಯುಗದ ಕಾಲಚಕ್ರಗಳಲ್ಲಿ ಅಡಕವಾದ ಕೃತಿಸರಣಿಯೂ ಅಲ್ಲ. ಹಿಂದಿನ ಕ್ಲ್ಯಾಸಿಕ್‌ವಾದ ಆದರ್ಶವೆಂದು ಕಲ್ಪಿಸಿಕೊಂಡಿದ್ದ ಏಕರೀತಿಯ ಮತ್ತು ನಿರ್ವಿಕಲ್ಪದ "ಸ್ಥಾಣು-ವಿಶ್ವ"ವೂ ಅದಲ್ಲ. ನಿರಪೇಕ್ಷತಾವಾದ ಸಾಪೇಕ್ಷತಾವಾದಗಳೆರಡೂ

ಮಿಥ್ಯೆ ; ಆದರೆ ಇಂದು, ಕಡೆಯ ಪಕ್ಷ ಅಮೇರಿಕದಲ್ಲಿ, ಹೆಚ್ಚು ಅಗೋಚರವಾದ ಅಪಾಯವೆಂದರೆ ಮೌಲ್ಯಗಳ ಅರಾಜಕತೆಗೆ, ವಿಮರ್ಶನ ಕಾರ್ಯದ ತ್ಯಾಗಕ್ಕೆ ಸಮಾನಾರ್ಥಕವಾದ ಒಂದು ಸಾಪೇಕ್ಷತಾವಾದ.

ಕಾರ್ಯತಃ, ಆಯ್ಕೆಯ ಯಾವುದೇ ತತ್ತ್ವಗಳಿಲ್ಲದೆ, ಗುಣವಿವರಣೆಯ ಮತ್ತು ಮೌಲ್ಯಮಾಪನದ ಯಾವುದೇ ಪ್ರಯತ್ನವಿಲ್ಲದೆ, ಯಾವ ಸಾಹಿತ್ಯಚರಿತ್ರೆಯೂ ಲಿಖಿತವಾಗಿಲ್ಲ. ವಿಮರ್ಶೆಯ ಪ್ರಾಮುಖ್ಯವನ್ನು ನಿರಾಕರಿಸುವ ಸಾಹಿತ್ಯಚರಿತ್ರಕಾರರು ಸ್ವತಃ ಅಪ್ರಜ್ಞಾಪೂರ್ವಕ—ಸಾಮಾನ್ಯವಾಗಿ ನಿಷ್ಪನ್ನ—ವಿಮರ್ಶಕರಾಗಿದ್ದು, ಪರಂಪರಾಗತ ಮಾನದಂಡಗಳನ್ನೂ ಕೀರ್ತಿಯನ್ನೂ ವಹಿಸಿಕೊಂಡಿರುತ್ತಾರಷ್ಟೆ. ಸಾಮಾನ್ಯವಾಗಿ, ಅವರಿಂದು ಕಾಲನಿಮಿರಿದ ರೊಮ್ಯಾಂಟಿಕ್‌ವಾದಿಗಳು; ಕಲೆಯ ಇತರ ಎಲ್ಲ ಮಾದರಿಗಳಿಗೆ ಮತ್ತು ವಿಶೇಷತಃ ಆಧುನಿಕ ಸಾಹಿತ್ಯಕ್ಕೆ ಮನ ಮುಚ್ಚಿಕೊಂಡವರು. ಆದರೆ ಆರ್. ಜಿ. ಕಾಲಿಂಗ್‌ವುಡ್ ಬಹಳ ಸಮಂಜಸವಾಗಿ ಹೇಳಿರುವಂತೆ, "ಷೇಕ್ಸ್‌ಪಿಯರನನ್ನು ಕವಿಯನ್ನಾಗಿ ಮಾಡಿರತಕ್ಕದ್ದೇನೆಂಬುದನ್ನು ತಿಳಿಯುವ ಹಕ್ಕು ಮಂಡಿಸುವ ಒಬ್ಬ ವ್ಯಕ್ತಿ, ಕುಮಾರಿ ಸ್ಟೇನ್ ಒಬ್ಬ ಕವಿಯೇ ಎಂಬುದನ್ನೂ ಅಲ್ಲವಾದರೆ ಏಕಲ್ಲ ಎಂಬುದನ್ನೂ ತಿಳಿಯುವ ಹಕ್ಕನ್ನು ಸೂಚ್ಯವಾಗಿ ಮಂಡಿಸುತ್ತಿದ್ದಾನೆ.''

ಇತ್ತೀಚಿನ ಸಾಹಿತ್ಯವನ್ನು ಗಂಭೀರವಾದ ಅಧ್ಯಯನದಿಂದ ಹೊರತುಪಡಿಸಿದ್ದು ವಿಶೇಷತಃ ಈ "ವಿದ್ವತ್" ದೃಷ್ಟಿಯ ಒಂದು ದುಷ್ಪರಿಣಾಮ. ಮಿಲ್ಟನ್ನನಿಂದೀಚೆಗೆ ಯಾವುದೇ ಕೃತಿ ಗೌರವಾರ್ಹವಾದ ಒಂದು ಅಧ್ಯಯನ ವಿಷಯವಾಗಿ ಪರಿಗಣಿತವಾಗದಷ್ಟು ವಿಸ್ತಾರವಾಗಿ "ಆಧುನಿಕ" ಸಾಹಿತ್ಯ ಶಬ್ದ ಪಂಡಿತರಿಂದ ವ್ಯಾಖ್ಯಾನಗೊಳ್ಳುತ್ತಿತ್ತು. ಅಲ್ಲಿಂದೀಚೆಗೆ, ಹದಿನೆಂಟನೆಯ ಶತಮಾನ ಸಾಂಪ್ರದಾಯಿಕ ಸಾಹಿತ್ಯಚರಿತ್ರೆಯಾಗಿ ಒಳ್ಳೆಯ ಸ್ಥಾನಮಾನಗಳನ್ನು ಪಡೆದುಕೊಂಡಿದೆ ಮಾತ್ರವಲ್ಲ, ಷೋಕಿಯದಾಗಿಯೂ ಪರಿಣಮಿಸಿದೆ-ಹೆಚ್ಚು ಸುಖಾವಹವೂ ಸ್ಥಿರವೂ ಶ್ರೇಣಿಬದ್ಧವೂ ಆದ ಜಗತ್ತೊಂದಕ್ಕೆ ಅದು ಪಲಾಯನವೊದಗಿಸುವಂತೆ ತೋರುವುದರಿಂದ. ರೊಮ್ಯಾಂಟಿಕ್ ಯುಗ ಹಾಗೂ ಈಚಿನ ಹತ್ತೊಂಬತ್ತನೆಯ ಶತಮಾನ ಕೂಡ ವಿದ್ವಾಂಸರ ಗಮನ ಸೆಳೆಯತೊಡಗಿವೆ; ಅಲ್ಲದೆ ಸಮಕಾಲೀನ ಸಾಹಿತ್ಯದ ವಿದ್ವತ್ಪೂರ್ಣ ಅಧ್ಯಯನವನ್ನು ಸಮರ್ಥಿಸುವ ಮತ್ತು ಕೈಗೊಳ್ಳುವ ಕೆಲವರು ದಿಟ್ಟ ವ್ಯಕ್ತಿಗಳೂ ವಿದ್ವತ್ ಸ್ಥಾನಗಳಲ್ಲಿದ್ದಾರೆ.

ಬದುಕಿರುವ ಲೇಖಕರ ಅಧ್ಯಯನದ ವಿರುದ್ಧ ಏಕೈಕ ಸಾಧ್ಯ ವಾದವೆಂದರೆ, ಪೂರ್ಣಗೊಂಡ ಕೃತಿಯ ಮತ್ತು ಹಿಂದಿನ ಕೃತಿಗಳ ಸೂಚನೆಗಳಿಗೆ ಆ ಮೇಲಿನ ಕೃತಿಗಳು ಕೊಡಬಹುದಾದ ವಿಶದೀಕರಣದ ಯಥಾದರ್ಶನವನ್ನು ಅಭ್ಯಾಸಿ ಕೈಬಿಡುತ್ತಾನೆಂಬ ಸಂಗತಿ. ಆದರೆ ಬೆಳೆಯುವ ಲೇಖಕರ ವಿಷಯದಲ್ಲಿ ಮಾತ್ರ ಸಿಂಧುವಾದ ಈ ಅಸೌಕರ್ಯವು, ಹಿನ್ನೆಲೆ ಹಾಗೂ ಕಾಲವನ್ನು ತಿಳಿಯುವುದರಲ್ಲಿ

ಮತ್ತು ವೈಯಕ್ತಿಕ ಪರಿಚಯದ ಪ್ರಶ್ನಾವಳಿಯ ಅಥವಾ ಕಡೆಯ ಪಕ್ಷ ಪತ್ರ ವ್ಯವಹಾರದ ಅವಕಾಶಗಳಲ್ಲಿ ನಮಗಿರುವ ಸೌಕರ್ಯಗಳಿಗೆ ಹೋಲಿಸಿದಾಗ ಅಲ್ಪವಾಗಿ ಕಾಣುತ್ತದೆ. ಗತಕಾಲದ ಅನೇಕ ಎರಡನೆಯ ದರ್ಜೆಯ ಲೇಖಕರು ಅಥವಾ ಹತ್ತನೆಯ ದರ್ಜೆಯವರು ಕೂಡ ಅಧ್ಯಯನಯೋಗ್ಯರಾಗಿದ್ದಲ್ಲಿ, ನಮ್ಮ ಕಾಲದ ಒಬ್ಬ ಪ್ರಥಮ ದರ್ಜೆಯ ಲೇಖಕ ಅಥವಾ ದ್ವಿತೀಯ ದರ್ಜೆಯವನು ಕೂಡ ಅಧ್ಯಯನ ಯೋಗ್ಯನಾಗಿರುತ್ತಾನೆ. ಸ್ವತಃ ಮೌಲ್ಯನಿರ್ಣಯ ಮಾಡುವುದು ಪಂಡಿತರಿಗೆ ಇಷ್ಟವಾಗದಂತೆ ಮಾಡತಕ್ಕದ್ದು ಮಾಮೂಲಾಗಿ ಪರಿಗ್ರಹಿಕೆಯ ಅಭಾವ ಅಥವಾ ಪುಕ್ಕಲುತನ. ಅವರು "ಯುಗಗಳ ತೀರ್ಪನ್ನು" ಕಾಯುವುದಾಗಿ ಹೇಳಿಕೊಳ್ಳುತ್ತಾರೆ-ಇದು ಇತರ ಪ್ರಾಧ್ಯಾಪಕರೂ ಸೇರಿದಂತೆ ಇತರ ವಿಮರ್ಶಕರ ಮತ್ತು ವಾಚಕರ ತೀರ್ಪಷ್ಟೆ ಎಂಬುದನ್ನು ಅರಿತುಕೊಳ್ಳದೆ. ವಿಮರ್ಶೆ ಮತ್ತು ಸಿದ್ಧಾಂತದ ಬಗ್ಗೆ ಸಾಹಿತ್ಯ ಚರಿತ್ರಕಾರನ ಕಲ್ಪಿತ ಅಲಿಪ್ತತೆ ಸಂಪೂರ್ಣವಾಗಿ ಹುಸಿ; ಒಂದು ಸರಳ ಕಾರಣಕ್ಕಾಗಿ : ಪ್ರತಿಯೊಂದು ಕಲಾಕೃತಿಯೂ ಈಗ ಅಸ್ತಿತ್ವದಲ್ಲಿದೆ, ನೇರವಾಗಿ ಪರಿಶೀಲನೆಗೆ ದಕ್ಕುತ್ತಿದೆ ಮತ್ತು ಅದು ನೆನ್ನೆ ರಚಿತವಾಗಿರಲಿ ಅಥವಾ ಸಾವಿರ ವರ್ಷಗಳ ಹಿಂದೆ ರಚಿತವಾಗಿರಲಿ, ಕೆಲವು ಕಲಾಸಮಸ್ಯೆಗಳನ್ನು ಪರಿಹರಿಸುತ್ತದೆ. ವಿಮರ್ಶಾ ತತ್ತ್ವಗಳನ್ನು ನಿರಂತರವಾಗಿ ಆಶ್ರಯಿಸದೆ ಅದನ್ನು ವಿಶ್ಲೇಷಿಸುವುದಾಗಲಿ, ವರ್ಣಿಸುವುದಾಗಲಿ, ಬೆಲೆಗಟ್ಟುವುದಾಗಲಿ ಸಾಧ್ಯವಿಲ್ಲ. "ಸಾಹಿತ್ಯಚರಿತ್ರಕಾರ, ಚರಿತ್ರಕಾರನಾಗಿರಬೇಕಾದರೂ ವಿಮರ್ಶಕನಾಗಿರಲೇ ಬೇಕು."

ಪ್ರತಿಯಾಗಿ, ಸಾಹಿತ್ಯಚರಿತ್ರೆ ಕೂಡ ಸಾಹಿತ್ಯ ವಿಮರ್ಶೆಗೆ ಬಹಳ ಮುಖ್ಯವಾದುದು—ಸಾಹಿತ್ಯ ವಿಮರ್ಶೆ ಇಷ್ಟಾನಿಷ್ಟಗಳ ಅತ್ಯಂತ ವ್ಯಕ್ತಿನಿಷ್ಠ ಹೇಳಿಕೆಗೆ ಅತೀತವಾದೊಡನೆಯೆ. ಎಲ್ಲ ಚಾರಿತ್ರಿಕ ಸಂಬಂಧಗಳ ಬಗೆಗೂ ಅಜ್ಞಾನ ಸಂತೃಪ್ತನಾಗುವ ವಿಮರ್ಶಕ ತನ್ನ ನಿರ್ಣಯಗಳಲ್ಲಿ ಸತತವಾಗಿ ದಾರಿತಪ್ಪುತ್ತಾನೆ. ಯಾವ ಕೃತಿ ಮೂಲ ಮತ್ತು ಯಾವುದು ನಿಷ್ಪನ್ನ ಎಂಬುದನ್ನವನು ಅರಿಯಲಾರ; ಚಾರಿತ್ರಿಕ ಪರಿಸ್ಥಿತಿಗಳ ತನ್ನ ಅಜ್ಞಾನದಿಂದಾಗಿ ಅವನು ನಿಶ್ಚಿತ ಕಲಾಕೃತಿಗಳ ಗ್ರಹಿಕೆಯಲ್ಲಿ ನಿರಂತರವಾಗಿ ತಪ್ಪುತ್ತಾನೆ. ಚರಿತ್ರೆಯ ಅಲ್ಪಜ್ಞಾನ ಅಥವಾ ಅಜ್ಞಾನವುಳ್ಳ ವಿಮರ್ಶಕ ಅಡ್ಡಾದಿಡ್ಡಿ ಊಹೆಗಳನ್ನು ಮಾಡುವುದರಲ್ಲಿ ಅಥವಾ ಆತ್ಮ ಚರಿತ್ರಾತ್ಮಕ "ಮಹಾಕೃತಿಗಳ ನಡುವಣ ಸಾಹಸ"ದಲ್ಲಿ ತೊಡಗುತ್ತಾನೆ ಮತ್ತು ಒಟ್ಟನಲ್ಲಿ, ದೂರತರ ಗತಕಾಲವನ್ನು ಪ್ರಾಚೀನತಾ ಸಂಶೋಧಕನಿಗೆ ಮತ್ತು 'ವಿದ್ವಾಂಸ'ನಿಗೆ ಒಪ್ಪಿಸಿಕೊಟ್ಟು ಅದರ ಸಂಬಂಧವನ್ನು ತಪ್ಪಿಸಿಕೊಳ್ಳುತ್ತಾನೆ.

ಒಂದು ಪ್ರಕೃತ ಪ್ರಕರಣವೆಂದರೆ ಮಧ್ಯಕಾಲೀನ ಸಾಹಿತ್ಯ, ಅದರಲ್ಲೂ ಇಂಗ್ಲಿಷ್ ಮಧ್ಯಕಾಲೀನ ಸಾಹಿತ್ಯ; ಅದು—ಛಾಸರನನ್ನು ಬಿಟ್ಟರೆ—ಯಾವುದೇ ಸೌಂದರ್ಯ ಮೀಮಾಂಸಾತ್ಮಕ ಅಥವಾ ವಿಮರ್ಶಾತ್ಮಕ ದೃಷ್ಟಿಯಿಂದ ಅವಲೋಕನ ಗೊಂಡಿಲ್ಲ. ಆಧುನಿಕ ಸಂವೇದನೆಯ ಅನ್ವಯ ಬಹುಪಾಲು ಆಂಗ್ಲೊ–ಸ್ಯಾಕ್ಸನ್

ಕಾವ್ಯಕ್ಕೆ ಅಥವಾ ಶ್ರೀಮಂತ ಮಧ್ಯಕಾಲೀನ ಭಾವಗೀತೆಗೆ ವಿಭಿನ್ನ ಯಥಾದೃಷ್ಟಿತ್ವವೊಂದನ್ನು ನೀಡುತ್ತದೆ; ಹಾಗೆಯೆ, ಪ್ರತಿಯಾಗಿ, ಚಾರಿತ್ರಿಕ ದೃಷ್ಟಿಕೋನಗಳನ್ನೂ ಉತ್ಪತ್ತಿ ಸಂಬಂಧವಾದ ಸಮಸ್ಯೆಗಳ ಕ್ರಮಬದ್ಧ ಪರಿಶೀಲನೆಯನ್ನೂ ಪ್ರವೇಶಗೊಳಿಸುವುದರಿಂದ ಸಮಕಾಲೀನ ಸಾಹಿತ್ಯದ ಮೇಲೆ ಬಹಳ ಬೆಳಕು ಚೆಲ್ಲಬಹುದು. ಸಾಹಿತ್ಯ ವಿಮರ್ಶೆಯು ಮತ್ತು ಸಾಹಿತ್ಯ ಚರಿತ್ರೆಯು ನಡುವೆ ಸಾಧಾರಣವಾಗಿ ಕಂಡುಬರುವ ವಿಚ್ಛೇದನ ಎರಡಕ್ಕೂ ಅಪಾಯಕಾರಿಯಾಗಿದೆ.

೫. ಸಾಧಾರಣ, ತೌಲನಿಕ ಹಾಗೂ ರಾಷ್ಟ್ರೀಯ ಸಾಹಿತ್ಯ

ಸಾಹಿತ್ಯಕ ಅಧ್ಯಯನಗಳೊಳಗೆ ನಾವು ತತ್ತ್ವ, ಚರಿತ್ರೆ ಹಾಗೂ ವಿಮರ್ಶೆಯು ನಡುವೆ ಭೇದ ಕಲ್ಪಿಸಿದ್ದೇವೆ. ವಿಭಜನೆಯ ಮತ್ತೊಂದು ಆಧಾರವನ್ನಿಟ್ಟುಕೊಂಡು ನಾವೀಗ ತೌಲನಿಕ, ಸಾಧಾರಣ ಮತ್ತು ರಾಷ್ಟ್ರೀಯ ಸಾಹಿತ್ಯದ ಕ್ರಮಬದ್ಧ ಲಕ್ಷಣೀಕರಣಕ್ಕೆ ಪ್ರಯತ್ನಿಸುತ್ತೇವೆ. "ತೌಲನಿಕ" ಶಬ್ದ ತೊಂದರೆ ಕೊಡುವಂಥದು; ಸಾಹಿತ್ಯಾಭ್ಯಾಸದ ಈ ಮುಖ್ಯ ವಿಧಾನ ನಿರೀಕ್ಷಿಸಿದಷ್ಟು ವಿದ್ವತ್ ಯಶ ಗಳಿಸದಿರುವುದಕ್ಕೆ ಖಂಡಿತ ಇದೊಂದು ಕಾರಣ. ಅಂಪಿಯರನ "historie comparative"ದ ಬಳಕೆಯನ್ನು ಭಾಷಾಂತರಿಸಿದ ಮ್ಯಾಥ್ಯೂ ಅರ್ನಾಲ್ಡ್ ಈ ಶಬ್ದವನ್ನು ಇಂಗ್ಲಿಷಿನಲ್ಲಿ ಬಳಸಿದವರಲ್ಲಿ ಮೊದಲಿಗ (1848). ಕುವಿಯರನ Anatomie comparee (1800)ಯ ಸಾಮ್ಯದಿಂದ "Litterature comparee"ಯ ಬಗ್ಗೆ ಪ್ರಸ್ತಾಪಿಸಿದ ವಿಲ್ಲೆಮೇನ್ (1829) ಇನ್ನೂ ಹಿಂದೆಯೇ ಬಳಸಿದ್ದ ಶಬ್ದವನ್ನು ಫ್ರೆಂಚರು ಇಟ್ಟುಕೊಂಡಿದ್ದಾರೆ. ಜರ್ಮನ್ನರು "Verglechende Literaturge schichte" ಯನ್ನು ಕುರಿತಾಡುತ್ತಾರೆ. ಆದರೆ ಈ ಎರಡು ಭಿನ್ನರೂಪಿತ ವಿಶೇಷಣಗಳಲ್ಲಿ ಯಾವುದೂ ಬಹಳ ಬೆಳಕು ಚೆಲ್ಲುವುದಿಲ್ಲ–ಏಕೆಂದರೆ, ತುಲನೆಯೆನ್ನುವುದು ಎಲ್ಲ ವಿಮರ್ಶೆ ಹಾಗೂ ಶಾಸ್ತ್ರಗಳು ಬಳಸುವ ಒಂದು ವಿಧಾನವಾಗಿದ್ದು, ಸಾಹಿತ್ಯಾಭ್ಯಾಸದ ನಿಶ್ಚಿತ ಕ್ರಮಗಳನ್ನು ಯಾವ ರೀತಿಯಲ್ಲೂ ಸಮರ್ಪಕವಾಗಿ ವಿವರಿಸುವುದಿಲ್ಲ. ಸಾಹಿತ್ಯಗಳ—ಅಥವಾ ಚಳುವಳಿಗಳ, ಚಿತ್ರಗಳ ಅಥವಾ ಕೃತಿಗಳ—ನಡುವಣ ಸಾಂಪ್ರದಾಯಿಕ ತುಲನೆ ಸಾಹಿತ್ಯ ಚರಿತ್ರೆಯಲ್ಲೊಂದು ಕೇಂದ್ರ ವಿಷಯವಾಗುವುದು ವಿರಳ, ಫ್ರೆಂಚ್ ಮತ್ತು ಹದಿನೆಂಟನೆಯ ಶತಮಾನದ ಇಂಗ್ಲಿಷ್ ಸಾಹಿತ್ಯದ ಮುಖಗಳನ್ನು ಹೋಲಿಸುವ ಎಫ್. ಸಿ. ಗ್ರೀನನ 'Minuet'ದಂತಹ ಪುಸ್ತಕ ಎರಡು ರಾಷ್ಟ್ರಗಳ ಸಾಹಿತ್ಯಕ ಬೆಳವಣಿಗೆಯ ನಡುವಣ ಸಮಾನತೆಗಳು ಮತ್ತು ಬಾಂಧವ್ಯಗಳನ್ನು ಮಾತ್ರವಲ್ಲದೆ ವ್ಯತ್ಯಾಸಗಳನ್ನು ಕೂಡ ಲಕ್ಷಣೀಕರಿಸುವಲ್ಲಿ ಬೋಧಪ್ರದವಾಗಬಹುದಾದರೂ.

ಕಾರ್ಯತಃ "ತೌಲನಿಕ" ಸಾಹಿತ್ಯವೆಂಬ ಶಬ್ದ ಅಧ್ಯಯನದ ವಿಶಿಷ್ಟ ಕ್ಷೇತ್ರಗಳನ್ನೂ ಸಮಸ್ಯೆಗಳ ಗುಂಪುಗಳನ್ನೂ ವ್ಯಾಪಿಸಿದೆ ಮತ್ತು ಇನ್ನೂ

ವ್ಯಾಪಿಸುತ್ತಿದೆ. ಮೊದಲನೆಯದಾಗಿ, ಅದು ವಾಚಿಕ ಸಾಹಿತ್ಯದ-ಅದರಲ್ಲೂ ಜನಪದ ಕಥಾವಸ್ತುಗಳ ಮತ್ತು ಅವುಗಳ ವಲಸೆಯ—ಅಧ್ಯಯನವನ್ನೂ ಅವು "ಪ್ರೌಢತರ", "ಕಲಾತ್ಮಕ" ಸಾಹಿತ್ಯಕ್ಕೆ ಎಂತು ಮತ್ತು ಯಾವಾಗ ಪ್ರವೇಶಿಸಿದು ವೆಂಬುದರ ಅಧ್ಯಯನವನ್ನೂ ಸೂಚಿಸಬಹುದು. ಈ ಬಗೆಯ ಸಮಸ್ಯೆಯನ್ನು ಜಾನಪದಕ್ಕೆ ವರ್ಗಾಯಿಸಬಹುದು; ಜಾನಪದವು ವಿದ್ವತ್ತಿನೊಂದು ಮುಖ್ಯಶಾಖೆ-ಸೌಂದರ್ಯಾನುಭವ ಸಂಗತಿಗಳಿಗೆ ಭಾಗಶಃ ಮಾತ್ರ ಸಂಬಂಧಿಸಿರುವಂಥದು; ಏಕೆಂದರೆ, ಅದು ಒಂದು "ಜನಪದ"ದ ಒಟ್ಟು ನಾಗರಿಕತೆಯನ್ನು, ಅದರ ಉಡುಗೆತೊಡುಗೆ ಮತ್ತು ಆಚಾರಗಳನ್ನು, ಮೂಢನಂಬಿಕೆಗಳನ್ನು ಮತ್ತು, ಅದರ ಕಲೆಗಳು ಮತ್ತು ಉಪಕರಣಗಳನ್ನು ಅಧ್ಯಯನಿಸುತ್ತದೆ. ಅಂತೂ, ವಾಚಿಕ ಸಾಹಿತ್ಯದ ಅಧ್ಯಯನ ಸಾಹಿತ್ಯಕ ವಿದ್ವತ್ತಿನ ಒಂದು ಅಭಿನ್ನಾಂಗವೆಂಬ ದೃಷ್ಟಿಯನ್ನು ನಾವಿಟ್ಟುಕೊಳ್ಳಬೇಕು-ಏಕೆಂದರೆ, ಅದನ್ನು ಲಿಖಿತ ಕೃತಿಗಳ ಅಧ್ಯಯನದಿಂದ ಬೇರ್ಪಡಿಸುವುದು ಶಕ್ಯವಿಲ್ಲ; ವಾಚಿಕ ಹಾಗೂ ಲಿಖಿತ ಸಾಹಿತ್ಯದ ನಡುವೆ ನಿರಂತರವಾದ ಅಂತಃಕ್ರಿಯೆ ಇದ್ದೇಇದೆ. ಎಲ್ಲ ವಾಚಿಕ ಸಾಹಿತ್ಯವೂ "ಆಳಕ್ಕೆ ಬೇರಿಳಿಸಿದ ಸಂಸ್ಕೃತಿಸಾರ"ವೆಂದು ಗಣಿಸುವ ಹ್ಯಾನ್ಸ್ ನೌಮನ್‌ನಂತಹ ಜಾನಪದ ವಿದ್ವಾಂಸರ ಅತಿರೇಕಕ್ಕೆ ಹೋಗದೆ, ಉಚ್ಚವರ್ಗದ ಲಿಖಿತಸಾಹಿತ್ಯ ವಾಚಿಕಸಾಹಿತ್ಯದ ಮೇಲೆ ಅಪಾರ ಪರಿಣಾಮ ಬೀರಿದೆಯೆಂಬುದನ್ನು ನಾವು ಗುರುತಿಸಬಲ್ಲೆವು. ಜಾನಪದದಲ್ಲಿ ಸಾಹಸಯುಕ್ತ ರೊಮಾನ್ಸ್ ಹಾಗೂ ಭಾವಗೀತದ ಸೇರ್ಪಡೆಯೊಂದು ಅಸಂದಿಗ್ಧ ಸಂಗತಿ. ಜನಪದದ ಸೃಜನಶಕ್ತಿ ಹಾಗೂ ಜನಪದ ಕಲೆಯ ಪ್ರಪ್ರಾಚೀನತೆಯನ್ನು ನಂಬುವ ರೊಮ್ಯಾಂಟಿಕ್ ಪ್ರವೃತ್ತಿಯವರಿಗೆ ಆಘಾತವುಂಟುಮಾಡುವ ದೃಷ್ಟಿ ಇದಾದರೂ, ನಮಗೆ ತಿಳಿದಿರುವಂತೆ ಜನಪ್ರಿಯ ಲಾವಣಿಗಳು, ಕಿನ್ನರ ಕಥೆಗಳು ಹಾಗೂ ಐತಿಹ್ಯಗಳು ಬಹುಮಟ್ಟಿಗೆ ಇತ್ತೀಚೆಗೆ ಉಗಮಗೊಂಡವು ಮತ್ತು ಉಚ್ಚ ವರ್ಗದಿಂದ ನಿಷ್ಪನ್ನವಾದವು. ಆದರೂ ಸಾಹಿತ್ಯದ ಬೆಳವಣಿಗೆಯ ಕ್ರಿಯೆಗಳನ್ನೂ ನಮ್ಮ ಸಾಹಿತ್ಯ ಜಾತಿಗಳ ಮತ್ತು ತಂತ್ರಗಳ ಉಗಮ ವಿಕಾಸಗಳನ್ನೂ ಅರಿಯಬಯಸುವ ಪ್ರತಿಯೊಬ್ಬ ಸಾಹಿತ್ಯವಿದ್ವಾಂಸನ ಪಾಲಿಗೆ ವಾಚಿಕ ಸಾಹಿತ್ಯದ ಅಧ್ಯಯನವೊಂದು ಮುಖ್ಯ ವಿಷಯವಾಗಬೇಕು. ಇದುವರೆಗೆ ವಾಚಿಕಸಾಹಿತ್ಯದ ಅಧ್ಯಯನವು ವಸ್ತುಗಳ ಮತ್ತು ದೇಶದಿಂದ ದೇಶಕ್ಕೆ ಅವುಗಳ ವಲಸೆಗಳ—ಎಂದರೆ, ಆಧುನಿಕ ಸಾಹಿತ್ಯಗಳ ಕಚ್ಚಾ ಸಾಮಗ್ರಿಗಳ — ಅಧ್ಯಯನಕ್ಕಷ್ಟೆ ಸಂಬಂಧಿಸಿದ್ದುದು ಬಹಳ ದುರ್ದೈವದ ಸಂಗತಿ. ತಡವಾಗಿಯಾದರೂ ಜಾನಪದ ವಿದ್ವಾಂಸರು ಮಾದರಿಗಳ, ರೂಪಗಳ ಮತ್ತು ತಂತ್ರಗಳ ಅಧ್ಯಯನಕ್ಕೆ, ಸಾಹಿತ್ಯರೂಪಗಳ ರಚನಾಶಾಸ್ತ್ರಕ್ಕೆ, ಕಥೆಯ ವಕ್ತೃವಿನ ಮತ್ತು ನಿರೂಪಕನ ಹಾಗೂ ಶ್ರೋತೃವೃಂದದ ಸಮಸ್ಯೆಗಳಿಗೆ ಹೆಚ್ಚು ಹೆಚ್ಚಾಗಿ ಗಮನ ಹರಿಸಿದ್ದಾರೆ. ಮತ್ತು ತನ್ಮೂಲಕ, ತಮ್ಮ ಅಧ್ಯಯನಗಳನ್ನು ಸಾಹಿತ್ಯವಿದ್ವತ್ತಿನ ಒಂದು ಸಾಧಾರಣ

ಪರಿಕಲ್ಪನೆಯಾಗಿ ಐಕ್ಯಗೊಳಿಸುವುದರತ್ತ ದಾರಿ ಸವೆದಿದ್ದಾರೆ. ವಾಚಿಕ ಸಾಹಿತ್ಯಕ್ಕೆ ಅದರದೇ ಆದ ವಿಶಿಷ್ಟ ಸಮಸ್ಯೆಗಳು–ಪ್ರವಹಣ ಮತ್ತು ಸಾಮಾಜಿಕ ಹಿನ್ನೆಲೆಯವು–ಇದ್ದರೂ, ಅದರ ಮೂಲಭೂತ ಸಮಸ್ಯೆಗಳಲ್ಲಿ ಲಿಖಿತ ಸಾಹಿತ್ಯ ನಿಸ್ಸಂದೇಹವಾಗಿ ಪಾಲ್ಗೊಳ್ಳುತ್ತದೆ; ವಾಚಿಕ ಹಾಗೂ ಲಿಖಿತ ಸಾಹಿತ್ಯದ ನಡುವೆ, ಎಂದೂ ತಡೆಗೊಳ್ಳದಂಥ ಸಾತತ್ಯವೊಂದಿದೆ. ಆಧುನಿಕ ಯುರೋಪಿಯನ್ ಸಾಹಿತ್ಯಗಳಲ್ಲಿನ ವಿದ್ವಾಂಸರು ಈ ಪ್ರಶ್ನೆಗಳನ್ನು ಅಲಕ್ಷಿಸಿ, ನಷ್ಟಕ್ಕೀಡಾಗಿದ್ದಾರೆ; ಆದರೆ ಸ್ಲಾವಿಕ್ ಮತ್ತು ಸ್ಕಾಂಡಿನೇವಿಯನ್ ದೇಶಗಳಲ್ಲಿನ—ಅಲ್ಲಿ ಜಾನಪದ ಈಗಲೂ ಜೀವಂತವಾಗಿದೆ ಅಥವಾ ಇತ್ತೀಚಿನವರೆಗೂ ಜೀವಂತವಾಗಿತ್ತು—ಸಾಹಿತ್ಯ ಚರಿತ್ರಕಾರರು ಈ ಅಧ್ಯಯನಗಳೊಡನೆ ನಿಕಟ ಸಂಪರ್ಕ ಹೊಂದಿದ್ದಾರೆ. ಆದರೆ "ತೌಲನಿಕ ಸಾಹಿತ್ಯ" ಎಂಬುದು ವಾಚಿಕ ಸಾಹಿತ್ಯದ ಅಧ್ಯಯನವನ್ನು ಹೆಸರಿಸಲು ತಕ್ಕ ಶಬ್ದವಲ್ಲ.

"ತೌಲನಿಕ" ಸಾಹಿತ್ಯದ ಮತ್ತೊಂದು ಅರ್ಥ, ಅದನ್ನು ಎರಡು ಅಥವಾ ಹೆಚ್ಚು ಸಾಹಿತ್ಯಗಳ ನಡುವಣ ಸಂಬಂಧಗಳ ಅಧ್ಯಯನಕ್ಕೆ ಸೀಮಿತಗೊಳಿಸುತ್ತದೆ. ಇದು, ಫರ್ನಾಂಡ್ ಬಾಲ್ಡೆನ್‌ಸ್ಪರ್ಗರ್ ಅವರ ನೇತೃತ್ವದಲ್ಲಿರುವ ವೃದ್ಧಿಶೀಲ ಫ್ರೆಂಚ್ Comparitistes ಪಂಥದಿಂದ—ಅದು Revue de litterature Compareeಯ ಸುತ್ತ ಸೇರಿಕೊಂಡದ್ದು–ಸ್ಥಿರೀಕೃತವಾದ ಬಳಕೆ. ಫ್ರಾನ್ಸ್ ಮತ್ತು ಇಂಗ್ಲೆಂಡಿನಲ್ಲಿ ಗಯಟೆಯು, ಫ್ರಾನ್ಸಿನಲ್ಲಿ ಆಸ್ಸಿಯನ್ ಕಾರ್ಲೈಲ್ ಷಿಲ್ಲರರ ಪ್ರವೇಶ, ಪ್ರಭಾವ ಮತ್ತು ಪ್ರಸಿದ್ಧಿಗಳಂತಹ ಪ್ರಶ್ನೆಗಳಿಗೆ ಈ ಪಂಥ ಕೆಲವೊಮ್ಮೆ ಯಾಂತ್ರಿಕವಾಗಿ ಮತ್ತು ಕೆಲವೊಮ್ಮೆ ಸಾಕಷ್ಟು ವಿವೇಚನಪೂರ್ವಕವಾಗಿ ಲಕ್ಷ್ಯವಿತ್ತಿದೆ. ಅದು, ಗ್ರಂಥಾವಲೋಕನ, ಭಾಷಾಂತರ, ಪ್ರಭಾವಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹದಿಂದಾಚೆಗೆ ಹೋಗಿ, ಒಂದು ನಿರ್ದಿಷ್ಟಕಾಲದಲ್ಲಿ ಒಬ್ಬ ಲೇಖಕನ ಬಿಂಬ ಹಾಗೂ ಪರಿಕಲ್ಪನೆಯನ್ನೂ ಪತ್ರಿಕೆಗಳು, ಭಾಷಾಂತರ ಕಾರರು, ಪ್ರತಿಷ್ಠಿತ ಸಭೆಗಳು ಮತ್ತು ಪ್ರವಾಸಿಗಳಂತಹ ವಿವಿಧ ವಾಹಕಾಂಶಗಳನ್ನೂ "ಗ್ರಾಹಕಾಂಶ"–ಒಬ್ಬ ವಿದೇಶೀ ಲೇಖಕನನ್ನು ಬರಮಾಡಿಕೊಳ್ಳುವ ವಿಶೇಷ ಪರಿಸರ ಮತ್ತು ಸಾಹಿತ್ಯಕ ಪರಿಸ್ಥಿತಿ—ವನ್ನೂ ಎಚ್ಚರಿಕೆಯಿಂದ ಪರಿಗಣಿಸುವ ವಿಧಾನ ಶಾಸ್ತ್ರವೊಂದನ್ನು ಬೆಳೆಸಿಕೊಂಡಿದೆ. ಒಟ್ಟಿನಲ್ಲಿ, ನಿಕಟವಾದ ಐಕ್ಯಕ್ಕೆ—ವಿಶೇಷವಾಗಿ ಪಶ್ಚಿಮ ಯುರೋಪಿಯನ್ ಸಾಹಿತ್ಯಗಳದು—ಬಹಳ ಸಾಕ್ಷಿ ಸಂಗ್ರಹಗೊಂಡಿದೆ; ಮತ್ತು ಸಾಹಿತ್ಯಗಳ "ವಿದೇಶ ವ್ಯಾಪಾರ"ವನ್ನು ಕುರಿತ ನಮ್ಮ ಜ್ಞಾನ ಅಪರಿಮಿತವಾಗಿ ವೃದ್ಧಿಸಿದೆ.

ಆದರೆ "ತೌಲನಿಕ ಸಾಹಿತ್ಯ"ದ ಈ ಪರಿಕಲ್ಪನೆಗೆ ಅದರದೇ ಆದ ವಿಲಕ್ಷಣ ಸಂಕಷ್ಟಗಳೂ ಇವೆಯೆಂಬುದು ಯಾರಿಗೂ ತಿಳಿಯುತ್ತದೆ. ಇಂಥ ಅಧ್ಯಯನಗಳ ಸಂಚಯದಿಂದ ಯಾವುದೇ ವಿಶಿಷ್ಟ ವ್ಯವಸ್ಥೆ ಹೊಮ್ಮಲಾರದೆಂದು ತೋರುತ್ತದೆ.

"ಫ್ರಾನ್ಸಿನಲ್ಲಿ ಷೇಕ್ಸ್‌ಪಿಯರ್' ಕುರಿತ ಅಧ್ಯಯನಕ್ಕೂ "ಹದಿನೆಂಟನೆಯ ಶತಮಾನದ ಇಂಗ್ಲೆಂಡಿನಲ್ಲಿ ಷೇಕ್ಸ್‌ಪಿಯರ್" ಕುರಿತ ಅಧ್ಯಯನಕ್ಕೂ ನಡುವೆ ಅಥವಾ ಬೋದಲೇರ್ ಮೇಲೆ ಪೋಪನ ಪ್ರಭಾವದ ಅಧ್ಯಯನಕ್ಕೂ ಪೋಪನ ಮೇಲೆ ಡ್ರೈಡನ್ನನ ಪ್ರಭಾವದ ಅಧ್ಯಯನಕ್ಕೂ ನಡುವೆ ಯಾವುದೇ ವಿಧಾನ ಶಾಸ್ತ್ರೀಯ ಭೇದವಿಲ್ಲ. ಸಮಗ್ರ ರಾಷ್ಟ್ರೀಯ ಸಾಹಿತ್ಯಗಳ ಸಂಬಂಧದಿಂದ ಪ್ರತ್ಯೇಕಿಸಿದಲ್ಲಿ, ಸಾಹಿತ್ಯಗಳ ನಡುವಣ ಹೋಲಿಕೆಗಳು ಆಕರಗಳ ಮತ್ತು ಪ್ರಭಾವಗಳ, ಕೀರ್ತಿ ಪ್ರಸಿದ್ಧಿಗಳ ಬಾಹ್ಯ ಸಮಸ್ಯೆಗಳಿಗಷ್ಟೆ ಮಿತಿಗೊಳ್ಳುತ್ತವೆ. ಇಂಥ ಅಧ್ಯಯನಗಳು ಒಂದು ವ್ಯಷ್ಟಿ ಕಲಾಕೃತಿಯನ್ನು ವಿಶ್ಲೇಷಿಸಿ ಬೆಲೆಗಟ್ಟುವುದಕ್ಕೆ, ಅಥವಾ ಅದರ ಹುಟ್ಟಿನ ಸಂಕೀರ್ಣ ಸಾಮಗ್ರ್ಯವನ್ನು ಪರಿಗಣಿಸುವುದಕ್ಕೆ ಕೂಡ ನಮಗೆ ಆಸ್ಪದವೀಯುವುದಿಲ್ಲ; ಬದಲಾಗಿ, ಭಾಷಾಂತರ ಅನುಕರಣಗಳಂಥ ಒಂದು ಮಹಾ ಕೃತಿಯ ಪ್ರತಿಧ್ವನಿಗಳಿಗೆ—ಬಹಳಮಟ್ಟಿಗೆ ದ್ವಿತೀಯ ದರ್ಜೆಯ ಲೇಖಕರವು—ಅಥವಾ ಒಂದು ಮಹಾಕೃತಿಯ ಪೂರ್ವಚರಿತ್ರೆಗೆ, ಅದರ ವಸ್ತು, ರೂಪಗಳ ವಲಸೆ ಹಾಗೂ ಪ್ರಸಾರಕ್ಕೆ ಅವು ವಿಶೇಷತಃ ಮೀಸಲಾಗುತ್ತವೆ. ಹೀಗೆ ಭಾವಿತವಾದ "ತೌಲನಿಕ ಸಾಹಿತ್ಯ"ದ ಅವಧಾರಣೆ ಬಹಿರಂಗದ ಮೇಲಿರುತ್ತದೆ; ಕೇವಲ "ಸಂಗತಿ"ಗಳ ಆಕರ ಮತ್ತು ಪ್ರಭಾವಗಳ ಮೇಲಿನ ಒತ್ತು ಸಾಧಾರಣವಾಗಿ ಅಲಕ್ಷಿತವಾಗಿರುವುದನ್ನು ಈಚಿನ ದಶಕಗಳಲ್ಲಿನ "ತೌಲನಿಕ ಸಾಹಿತ್ಯ"ದ ಅವನತಿ ಬಿಂಬಿಸುತ್ತದೆ.

ಆದರೂ, ಮೂರನೆಯ ಪರಿಕಲ್ಪನೆಯೊಂದು, "ತೌಲನಿಕ ಸಾಹಿತ್ಯ"ವನ್ನು ಸಾಮಗ್ರ ಸಾಹಿತ್ಯಾಭ್ಯಾಸದೊಡನೆ, "ಲೋಕ-ಸಾಹಿತ್ಯ"ದೊಡನೆ, "ಸಾಧಾರಣ" ಅಥವಾ "ವಿಶ್ವ" ಸಾಹಿತ್ಯದೊಡನೆ ಅಭೇದಗೊಳಿಸುವುದರ ಮೂಲಕ ಈ ಎಲ್ಲ ವಿಮರ್ಶೆಗಳನ್ನೂ ನಿವಾರಿಸಿಬಿಡುತ್ತದೆ. ಈ ಸೂಚಿತ ಸಮೀಕರಣಗಳಲ್ಲಿ ಕೆಲವು ತೊಂದರೆಗಳಿವೆ. ಗಯಟೆಯ Weltliteratur ದ ಭಾಷಾಂತರವಾದ "ಲೋಕ ಸಾಹಿತ್ಯ" ಶಬ್ದ ಪ್ರಾಯಃ ಅನಗತ್ಯವಾಗಿ ಘನೋದ್ದೇಶವುಳ್ಳದ್ದಾಗಿದ್ದು, ನ್ಯೂಜಿಲೆಂಡಿನಿಂದ ಐಸ್ಲೆಂಡಿನವರೆಗೆ ಎಲ್ಲ ಐದೂ ಖಂಡಗಳ ಮೇಲೆ ಸಾಹಿತ್ಯ ಅಧ್ಯಯನಗೊಳ್ಳಬೇಕೆಂದು ಸೂಚಿಸುತ್ತದೆ. ಲೋಕಸಾಹಿತ್ಯದ ಪ್ರಸ್ತುತ ಶಿಕ್ಷಣಕ್ರಮಗಳು, ಅವುಗಳಿಗಾಗಿ ರಚಿತವಾದ ಪಠ್ಯ ಪುಸ್ತಕಗಳು ಮತ್ತು ಕೈಪಿಡಿಗಳಂತೆ, 'ಋಗ್ವೇದ'ದಿಂದ ಆಸ್ಕರ್ ವೈಲ್ಡ್‌ನವರೆಗೆ ವ್ಯಾಪ್ತಿಯುಳ್ಳ ಪ್ರಸಿದ್ಧ ಲೇಖಕರಿಂದ ಮತ್ತು ಮಹಾಗ್ರಂಥಗಳಿಂದ ತುಣುಕುಗಳನ್ನು ನಮಗೊದಗಿಸುತ್ತವೆ ಮತ್ತು ವಿವೇಚನರಹಿತ ಪರಿಚಯವನ್ನು, ಅಸ್ಪಷ್ಟವಾದ ಭಾವಾತಿರೇಕಯುಕ್ತ ವಿಶ್ವವಿಶಾಲದೃಷ್ಟಿಯನ್ನು ಪ್ರೋತ್ಸಾಹಿಸುತ್ತವೆ. ಪ್ರಾಯಃ ಆಯ್ಕೆಗೆ ಯೋಗ್ಯವಾದ "ಸಾಧಾರಣ ಸಾಹಿತ್ಯ" ಶಬ್ದದಲ್ಲಿರುವ ಅನನುಕೂಲವೇನೆಂದರೆ, ಪಾಲ್ ವಾನ್ ಟಿಯೆಂ ಅದನ್ನು, "ತೌಲನಿಕ ಸಾಹಿತ್ಯ"ದ ವಿರುದ್ಧ ಒಂದು ಸಂಕುಚಿತ ಪರಿಕಲ್ಪನೆಗಾಗಿ ಹಿಡಿದುಕೊಳ್ಳಲು

ಯತ್ನಿಸಿದ್ದಾನೆ. ಅವನ ಪ್ರಕಾರ, ರಾಷ್ಟ್ರೀಯ ರೇಖೆಗಳನ್ನು ಮೀರುವ ಸಾಹಿತ್ಯಕ ಚಳುವಳಿಗಳನ್ನೂ ಪ್ರವೃತ್ತಿಗಳನ್ನೂ "ಸಾಧಾರಣ ಸಾಹಿತ್ಯ" ಅಭ್ಯಸಿಸುತ್ತದೆ. ಆದರೂ ಆಚರಣೆಯಲ್ಲಿ, ಯಾವ ಚಳುವಳಿಗಳು ಸಾಧಾರಣವೆಂಬುದನ್ನು ಮೊದಲೇ ನಿರ್ಧರಿಸುವುದು ಮತ್ತು ಆ ಮೂಲಕ ಶುದ್ಧವಾಗಿ ರಾಷ್ಟ್ರೀಯವಾದುದಕ್ಕೂ ಸಾಧಾರಣವಾದುದಕ್ಕೂ ನಡುವೆ ಭೇದರೇಖೆಯನ್ನೆಳೆಯುವುದು ಕಷ್ಟವಾಗುತ್ತದೆ. ವಾನ್ ಟಿಯೆಮುನ ಬಹುಕಾಲು ಸ್ವಂತ ಪುಸ್ತಕಗಳೇ ಫ್ರಾನ್ಸ್‌ನಲ್ಲಿ ಆಸ್ಸಿಯನ್‌ನನ್ನೋ "ಶ್ಮಶಾನ ಕಾವ್ಯ"ದ ಅಂತರ ರಾಷ್ಟ್ರೀಯ ಪ್ರಾಚುರ್ಯವನ್ನೋ ಅಧ್ಯಯನಿಸುತ್ತಿದ್ದು, ತೌಲನಿಕ ರೀತಿಯ ಸಾಂಪ್ರದಾಯಿಕ ತನಿಖೆಗಳಾಗಿವೆ ಅಥವಾ ಬಾಹ್ಯಸಂಗತಿಗಳ ಮತ್ತು ಅಂತರ ಸಂಬಂಧಗಳ ಕೈಪಿಡಿಗಳಾಗಿವೆ.

ವಿಶ್ವಸಾಹಿತ್ಯ ಚರಿತ್ರೆಯ ಪರಿಕಲ್ಪನೆ ಯಾವ ತೊಂದರೆಗಳಲ್ಲಾದರೂ ಸಿಕ್ಕಿ ಹಾಕಿಕೊಳ್ಳಲಿ, ಸಾಹಿತ್ಯವನ್ನು ಒಂದು ಸಾಮಗ್ರ್ಯವನ್ನಾಗಿ ಪರಿಭಾವಿಸುವುದು ಮತ್ತು ಭಾಷಿಕ ಭೇದಗಳನ್ನೆಣಿಸದೆ ಸಾಹಿತ್ಯದ ಬೆಳವಣಿಗೆಯನ್ನು ಗುರುತಿಸುವುದು ಮುಖ್ಯ. ಇಂಥ ಆಲೋಚನೆಯ ವ್ಯಾವಹಾರಿಕ ಫಲಿತಾಂಶವೆಂದರೆ, ಒಂದು ಸಾಧಾರಣ ಚರಿತ್ರೆ–ವಿಶೇಷವಾಗಿ ಪಾಶ್ಚಾತ್ಯ ಪರಂಪರೆಯದು. ಗ್ರೀಕ್ ಮತ್ತು ರೋಮನ್ ಸಾಹಿತ್ಯಗಳ, ಪಾಶ್ಚಾತ್ಯ ಮಧ್ಯಕಾಲೀನ ಜಗತ್ತಿನ ಮತ್ತು ಮುಖ್ಯ ಆಧುನಿಕ ಸಾಹಿತ್ಯಗಳ ನಡುವಣ ಸಾತತ್ಯವನ್ನು ಯಾರೂ ಶಂಕಿಸಲಾರರು; ಪೌರ್ವಾತ್ಯ ಪ್ರಭಾವಗಳ—ವಿಶೇಷವಾಗಿ ಬೈಬಲ್ಲಿನದು—ಪ್ರಾಮುಖ್ಯವನ್ನು ಕನಿಷ್ಠಗೊಳಿಸದೆ, ಎಲ್ಲ ಯೂರೋಪು, ರಷ್ಯಾ, ಸಂಯುಕ್ತ ಸಂಸ್ಥಾನಗಳು ಮತ್ತು ದಕ್ಷಿಣ ಅಮೆರಿಕದ ಸಾಹಿತ್ಯಗಳು ಇಷ್ಟನ್ನೂ ಒಳಗೊಳ್ಳುವ ನಿಕಟ ಐಕ್ಯವೊಂದನ್ನು ಗುರುತಿಸಬೇಕು. ಶ್ಲೀಗಲ್ಸ್, ಸಿಸ್ಮಾಂಡಿ, ಬೌಟರ್‌ವೆಕ್, ಹ್ಯಾಲಮ್‌ರಂತಹ ಹತ್ತೊಂಬತ್ತನೆಯ ಶತಮಾನದ ಆರಂಭದ ಸಾಹಿತ್ಯಚರಿತ್ರ ಸ್ಥಾಪಕರು ಈ ಆದರ್ಶವನ್ನಿಟ್ಟುಕೊಂಡು, ತಮ್ಮ ಸಾಧನಗಳ ಮಿತಿಯಲ್ಲಿ ಅದನ್ನು ಈಡೇರಿಸಿದರು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಈ ಆದರ್ಶ ಮತ್ತಷ್ಟು ನಿಕಟವಾಗಿ ಖಚಿತಗೊಂಡಿತು ಮತ್ತು ವಿಕಾಸವಾದದ ಪ್ರಭಾವದ ಮೂಲಕ ಸುಸಂಬದ್ಧ ದೃಷ್ಟಿಯೊಂದಕ್ಕೆ ಹತ್ತಿರ ತರಲ್ಪಟ್ಟಿತು. ತೌಲನಿಕ ಸಾಹಿತ್ಯದ ಮೊದಲ ಸಿದ್ಧಾಂತಗಳು, ಕರಯೇವ್ ಮತ್ತು ಪಾಸ್ನೆಟ್ಟರ ಪುಸ್ತಕಗಳು, ಹರ್ಬರ್ಟ್ ಸ್ಪೆನ್ಸರನ ಸಮಾಜಶಾಸ್ತ್ರೀಯ ಪರಿಕಲ್ಪನೆಗಳ ಪ್ರಭಾವಕ್ಕೆ ಬಹಳಮಟ್ಟಿಗೆ ಒಳಗಾಗಿದ್ದವು ಮತ್ತು ಸಂಸ್ಥೆಗಳ ಬೆಳವಣಿಗೆ ಮತ್ತು ಸಾಹಿತ್ಯದ ಬೆಳವಣಿಗೆಗಳ ನಡುವಣ ಸಂವಾದಕ್ಕೆ ತೀರ ಹತ್ತಿರ ಬಂದುವು. ಆದರೆ ಸಾಧಾರಣ ಸಾಹಿತ್ಯ ಚರಿತ್ರ ಲೇಖನದ ಮಹಾಪರಿಣತರ ಆದರ್ಶಗಳಿಗೆ ಮತ್ತು ಮಹದಾಕಾಂಕ್ಷೆಗಳಿಗೆ ಮರಳುಪಿಕೆ ಅತ್ಯಗತ್ಯ, ಇಂದು ಅವುಗಳ ಪಿಧಾನಗಳ ವಿವರಗಳಲ್ಲಿ ನಾವು ಏನೇ ಮಾರ್ಪಾಟುಗಳನ್ನು ಮಾಡಲಿ ಮತ್ತು ನಮ್ಮ ಮಾಹಿತಿಗಳ ಆಕರಗಳು ಎಷ್ಟೇ ಸಮೃದ್ಧವಾಗಿರಲಿ. ಒಂದು ಸಮನ್ವಯವಾಗಿ ಸಾಹಿತ್ಯಚರಿತ್ರೆ

ಯನ್ನು, ಅತಿರಾಷ್ಟ್ರೀಯ ಪರಿಮಾಣದಲ್ಲಿ ಸಾಹಿತ್ಯಚರಿತ್ರೆಯನ್ನು ಮತ್ತೆ ಬರೆಯ ಬೇಕು. ಈ ಅರ್ಥದಲ್ಲಿ ತೌಲನಿಕ ಸಾಹಿತ್ಯದ ಅಧ್ಯಯನ, ನಮ್ಮ ವಿದ್ವಾಂಸರ ಭಾಷಾಶಾಸ್ತ್ರೀಯ ನೈಪುಣ್ಯಗಳ ಮೇಲೆ ದೊಡ್ಡ ಬೇಡಿಕೆಗಳನ್ನಿರಿಸುತ್ತದೆ. ಯಥಾ ದೃಷ್ಟಿಯ ವಿಸ್ತೃತಿಯನ್ನು, ಸ್ಥಳೀಯ ಹಾಗೂ ಪ್ರಾಂತೀಯ ಭಾವಗಳ ದಮನವನ್ನು ಅದು ಕೇಳುತ್ತದೆ ; ಅದು ಸುಲಭಸಾಧ್ಯವಲ್ಲ. ಆದರೂ ಸಾಹಿತ್ಯ ಒಂದು—ಕಲೆ ಮತ್ತು ಮಾನವತೆ ಹೇಗೋ ಹಾಗೆ ; ಚಾರಿತ್ರಿಕ ಸಾಹಿತ್ಯಾಭ್ಯಾಸಗಳ ಭವಿಷ್ಯ ಈ ಪರಿಕಲ್ಪನೆಯಲ್ಲಿದೆ.

ಆಚರಣೆಯಲ್ಲಿ ಎಲ್ಲ ಸಾಹಿತ್ಯಚರಿತ್ರೆಯೊಡನೆ ಅಭಿನ್ನವಾಗಿರುವ ಈ ವಿಸ್ತಾರ ಪ್ರಾಂತದೊಳಗೆ, ಕೆಲವೊಮ್ಮೆ ಭಾಷಿಕ ರೇಖೆಗಳ ಮೇಲೆ ಸಾಗುವ ಉಪವಿಭಾಗ ಗಳುಂಟು. ಅವುಗಳಲ್ಲಿ ಮೊದಲನೆಯದಾಗಿ, ಯೂರೋಪಿನ ಮೂರು ಮುಖ್ಯ ಭಾಷಾ ಕುಟುಂಬಗಳಿವೆ-ಜರ್ಮನಿಕ್, ರೊಮಾನ್ಸ್, ಮತ್ತು ಸ್ಲಾವಿಕ್ ಸಾಹಿತ್ಯಗಳು. ವಿಶೇಷವಾಗಿ ರೊಮಾನ್ಸ್ ಸಾಹಿತ್ಯಗಳು, ಬೌಟರ್‌ವೆಕ್‌ನ ದಿನಗಳಿಂದ ಹಿಡಿದು ಮಧ್ಯಕಾಲಕ್ಕಾಗಿ ಅವುಗಳೆಲ್ಲವರ ಚರಿತ್ರೆಯನ್ನು ಬರೆಯಲು ಲಿಯೊನಾರ್ಡೊ ಓಲ್‌ಷ್ಕಿ ಮಾಡಿದ ಭಾಗಶಃ ಯಶಸ್ವೀ ಪ್ರಯತ್ನದವರೆಗೆ ಮೇಲಿಂದ ಮೇಲೆ ನಿಕಟ ಅಂತರ ಸಂಬಂಧದಲ್ಲಿ ಅಧ್ಯಯನಗೊಂಡಿವೆ. ಜರ್ಮನಿಕ್ ಸಾಹಿತ್ಯಗಳು ಸಾಮಾನ್ಯವಾಗಿ ಮಧ್ಯಯುಗದ ಪ್ರಾರಂಭದ ಮಟ್ಟಿಗೆ ಮಾತ್ರ ತುಲನೀಯವಾಗಿ ಅಧ್ಯಯನಗೊಂಡಿವೆ; ಸಾಧಾರಣ ಟ್ಯುಟೊನಿಕ್ ನಾಗರಿಕತೆಯ ನಿಕಟತೆ ಆಗಲೂ ತನ್ನ ದೃಢ ಪ್ರಭಾವವನ್ನುಳಿಸಿಕೊಂಡಿತ್ತು. ಪೋಲಿಷ್ ವಿದ್ವಾಂಸರ ಮಾಮೂಲು ವಿರೋಧವಿದ್ದರೂ, ಸ್ಲಾವಿಕ್ ಭಾಷೆಗಳ ನಿಕಟ ಭಾಷಿಕ ಬಾಂಧವ್ಯಗಳು, ಛಂದೋ ರೂಪಗಳಿಗೆ ಕೂಡ ವಿಸ್ತರಿಸುವ ಜನಪ್ರಿಯ ಪರಂಪರೆಗಳ ಜೊತೆಗೂಡಿ ಸಾಮಾನ್ಯ ಸ್ಲಾವಿಕ್ ಸಾಹಿತ್ಯವೊಂದರ ತಳಹದಿಯನ್ನು ರೂಪಿಸುವಂತೆ ತೋರುತ್ತದೆ.

ವಿಷಯಗಳ ಮತ್ತು ರೂಪಗಳ, ತಂತ್ರಗಳ ಮತ್ತು ಸಾಹಿತ್ಯ ಜಾತಿಗಳ ಚರಿತ್ರೆ ಸ್ಪಷ್ಟವಾಗಿ ಒಂದು ಅಂತರರಾಷ್ಟ್ರೀಯ ಚರಿತ್ರೆಯಾಗಿದೆ. ನಮ್ಮ ಬಹುಪಾಲು ಸಾಹಿತ್ಯ ಜಾತಿಗಳು ಗ್ರೀಸ್ ಮತ್ತು ರೋಮಿನ ಸಾಹಿತ್ಯದಿಂದ ಇಳಿದು ಬಂದರೂ, ಅವು ಮಧ್ಯಯುಗಗಳಲ್ಲಿ ಬಹಳ ಗಣನಾರ್ಹವಾಗಿ ಮಾರ್ಪಾಟುಗೊಂಡುವು ಮತ್ತು ಮಧ್ಯ ಯುಗಗಳಲ್ಲಿ ಅಭಿವೃದ್ಧಿಗೊಂಡುವು. ನಮ್ಮ ಛಂದಶ್ಶಾಸ್ತ್ರದ ಚರಿತ್ರೆ ಕೂಡ, ವ್ಯಷ್ಟಿ ಭಾಷಾಪದ್ಧತಿಗಳೊಡನೆ ನಿಕಟವಾಗಿ ಸಂಬದ್ಧವಾಗಿದ್ದರೂ, ಅಂತರರಾಷ್ಟ್ರೀಯವಾಗಿದೆ. ಅಲ್ಲದೆ, ಆಧುನಿಕ ಯೂರೋಪಿನ ಮಹಾ ಸಾಹಿತ್ಯಚಳುವಳಿಗಳು (ನವೋದಯ, ಬ್ಯಾರೋಕ್, ನವ್ಯ—ಕ್ಲ್ಯಾಸಿಕ್ ಪ್ರವೃತ್ತಿ, ರೊಮ್ಯಾಂಟಿಕ್ ಪ್ರವೃತ್ತಿ, ವಾಸ್ತವಿಕ ಪ್ರವೃತ್ತಿ, ಸಂಕೇತ ಪ್ರವೃತ್ತಿ) ಯಾವುದೇ ಒಂದು ದೇಶದ ಗಡಿಗಳನ್ನು ಮೀರುತ್ತವೆ- ಈ ಶೈಲಿಗಳ ಫಲಿತಾಂಶಗಳಲ್ಲಿ ಮಹತ್ವಪೂರ್ಣ ರಾಷ್ಟ್ರೀಯ ವ್ಯತ್ಯಾಸ ಗಳಿದ್ದರೂ. ಒಟ್ಟಿನಲ್ಲಿ, ಭಾಷಿಕ ಆತಂಕಗಳ ಪ್ರಾಮುಖ್ಯವನ್ನು ಹತ್ತೊಂಬತ್ತನೆಯ ಶತಮಾನದಲ್ಲಿ ಅನುಚಿತವಾಗಿ ದೊಡ್ಡದು ಮಾಡಲಾಯಿತು.

ಈ ಅವಧಾರಣೆಗೆ ಕಾರಣ, ರೊಮ್ಯಾಂಟಿಕ್ (ಬಹುಮಟ್ಟಿಗೆ ಭಾಷಿಕ) ರಾಷ್ಟ್ರೀಯತೆಯ ಹಾಗೂ ಆಧುನಿಕ ವ್ಯವಸ್ಥಿತ ಸಾಹಿತ್ಯ ಚರಿತ್ರೆಯ ಉದಯದ ನಡುವಣ ಬಹುನಿಕಟ ಸಾಹಚರ್ಯ. ಸಾಹಿತ್ಯದ ಬೋಧನೆ, ಭಾಷಾಬೋಧನೆಗಳ ಅಭೇದದಂತಹ ವಾಸ್ತವ ಪ್ರಭಾವಗಳ ಮೂಲಕ ಅದು ಇಂದಿಗೂ ಮುಂದುವರಿಯುತ್ತಿದೆ. ಅಮೆರಿಕದಲ್ಲಿ ಅದರ ಫಲಿತಾಂಶವೇನೆಂದರೆ, ಇಂಗ್ಲಿಷ್, ಜರ್ಮನ್ ಮತ್ತು ಫ್ರೆಂಚ್ ಸಾಹಿತ್ಯದ ವಿದ್ಯಾರ್ಥಿಗಳ ನಡುವೆ ಸಂಪರ್ಕದ ಅಸಾಧಾರಣ ಅಭಾವ. ಈ ಗುಂಪುಗಳಲ್ಲಿ ಪ್ರತಿಯೊಂದೂ ಸಂಪೂರ್ಣಭಿನ್ನವಾದ ಪ್ರಭಾವಮುದ್ರೆಯನ್ನು ತಳೆದಿದೆ ಮತ್ತು ಬೇರೆ ಬೇರೆ ವಿಧಾನಗಳನ್ನು ಬಳಸುತ್ತದೆ. ಈ ವಿಚ್ಛೇದನಗಳು ಭಾಗಶಃ ಅಪರಿಹಾರ್ಯವೆಂಬುದರಲ್ಲಿ ಸಂಶಯವಿಲ್ಲ; ಕಾರಣವಿಷ್ಟೆ: ಬಹಳ ಜನ ಬದುಕುವುದು ಏಕೈಕ ಭಾಷಾಮಾಧ್ಯಮದಲ್ಲಿ; ಆದರೂ ಅವು ವಿಕೃತ ಪರಿಣಾಮಗಳಿಗೆ ಕೊಂಡೊಯ್ಯುತ್ತವೆ—ಕೇವಲ ಆ ನಿರ್ದಿಷ್ಟ ಭಾಷೆಯಲ್ಲಿ ವ್ಯಕ್ತವಾದ ದೃಷ್ಟಿಗಳಿಗೆ ಸಂಬಂಧಿಸಿ ಮತ್ತು ಆ ಭಾಷೆಯ ಗ್ರಂಥ ಹಾಗೂ ದಾಖಲೆಗಳನ್ನು ಉಲ್ಲೇಖಿಸಿ ಸಾಹಿತ್ಯ ಸಮಸ್ಯೆಗಳನ್ನು ಚರ್ಚಿಸಿದಾಗ. ಕಲಾಶೈಲಿ, ಛಂದಸ್ಸುಗಳಲ್ಲಿ ಮತ್ತು ಸಾಹಿತ್ಯಜಾತಿಯ ಸಮಸ್ಯೆಗಳಲ್ಲಿ ಯುರೋಪಿಯನ್ ಸಾಹಿತ್ಯಗಳ ನಡುವಣ ಭಾಷಿಕ ವ್ಯತ್ಯಾಸಗಳು ಮುಖ್ಯವಾಗುತ್ತವಾದರೂ, ವಿಮರ್ಶಭಾವನೆಗಳೂ ಸೇರಿದಂತೆ ಭಾವನೆಗಳ ಚರಿತ್ರೆಯ ಅನೇಕ ಸಮಸ್ಯೆಗಳ ಪಾಲಿಗೆ ಇಂತಹ ಭೇದಗಳು ಅಸಮರ್ಥನೀಯವೆಂಬುದು ಸ್ಪಷ್ಟ; ಏಕರೂಪದ ಸಾಮಗ್ರಿಗಳ ಮೂಲಕ ಕೃತಕ ಅಡ್ಡಕೊಯ್ತಗಳು ಬರುತ್ತವೆ ಮತ್ತು ಇಂಗ್ಲಿಷ್, ಅಥವಾ ಜರ್ಮನ್ ಅಥವಾ ಫ್ರೆಂಚ್‌ನಲ್ಲಿ ಆಕಸ್ಮಿಕವಾಗಿ ಅಭಿವ್ಯಕ್ತವಾದ ವಿಚಾರಾತ್ಮಕ ಪ್ರತಿಧ್ವನಿಗಳಿಗೆ ಸಂಬಂಧಿಸಿದಂತೆ ಚರಿತ್ರೆಗಳು ಲಿಖಿತವಾಗುತ್ತವೆ. ಯಾವುದೇ ಒಂದು ದೇಶಭಾಷೆಗೆ ಸಲ್ಲುವ ಅತೀವ ಲಕ್ಷ್ಯ ವಿಶೇಷವಾಗಿ ಮಧ್ಯಕಾಲೀನ ಸಾಹಿತ್ಯದ ಅಧ್ಯಯನಕ್ಕೆ ಅಪಾಯಕಾರಿಯಾಗುತ್ತದೆ—ಏಕೆಂದರೆ, ಮಧ್ಯಯುಗಗಳಲ್ಲಿ ಲ್ಯಾಟಿನ್ ಅಗ್ರೇಸರ ಸಾಹಿತ್ಯ ಭಾಷೆಯಾಗಿತ್ತು ಮತ್ತು ಯೂರೋಪ್ ಬಹು ನಿಕಟವಾದ ಬೌದ್ಧಿಕ ಐಕ್ಯವೊಂದನ್ನು ರೂಪಿಸಿತು. ಲ್ಯಾಟಿನ್ ಮತ್ತು ಆಂಗ್ಲೊ-ನಾರ್ಮನ್‌ನಲ್ಲಿರುವ ಸಮೃದ್ಧ ಬರವಣಿಗೆಯನ್ನು ಅಲಕ್ಷಿಸುವ ಇಂಗ್ಲೆಂಡಿನ ಮಧ್ಯಯುಗೀನ ಸಾಹಿತ್ಯ ಚರಿತ್ರೆ, ಇಂಗ್ಲೆಂಡಿನ ಸಾಹಿತ್ಯಪರಿಸ್ಥಿತಿಯ ಹಾಗೂ ಸಾಧಾರಣ ಸಂಸ್ಕೃತಿಯ ತಪ್ಪು ಚಿತ್ರವೊಂದನ್ನು ನೀಡುತ್ತದೆ.

ತೌಲನಿಕ ಸಾಹಿತ್ಯದ ಈ ಶಿಫಾರಸು ವ್ಯಷ್ಟಿ ರಾಷ್ಟ್ರೀಯ ಸಾಹಿತ್ಯಗಳ ಅಧ್ಯಯನವನ್ನು ಅಲಕ್ಷಿಸಬೇಕೆಂದು ಸೂಚಿಸುವುದಿಲ್ಲ, ನಿಜ. ವಸ್ತುತಃ, ಕೇಂದ್ರವೆಂದು ಅರಿತುಕೊಳ್ಳಬೇಕಾದದ್ದು "ರಾಷ್ಟ್ರೀಯತೆ"ಯ ಮತ್ತು ಈ ಸಾಧಾರಣ ಸಾಹಿತ್ಯ ಪ್ರಕ್ರಿಯೆಗೆ ವ್ಯಷ್ಟಿ ರಾಷ್ಟ್ರಗಳ ವಿಶಿಷ್ಟ ಕೊಡುಗೆಗಳ ಸಮಸ್ಯೆಯನ್ನೇ. ತಾತ್ವಿಕ ಸ್ಪಷ್ಟತೆಯಿಂದ ಅಧ್ಯಯನಗೊಳ್ಳುವುದರ ಬದಲು ಈ ಸಮಸ್ಯೆ ರಾಷ್ಟ್ರೀಯ

ಭಾವ ಹಾಗೂ ಜಾನಾಂಗಿಕ ಸಿದ್ಧಾಂತಗಳಿಂದ ಮುಸುಕುಗೊಂಡಿದೆ. ಸಾಧಾರಣ ಸಾಹಿತ್ಯಕ್ಕೆ ಇಂಗ್ಲಿಷ್ ಸಾಹಿತ್ಯದ ಖಚಿತ ಕೊಡುಗೆಗಳನ್ನು ಬೇರ್ಪಡಿಸುವಿಕೆ—ಇದೊಂದು ಆಕರ್ಷಕ ಸಮಸ್ಯೆ—ಯಥಾದೃಷ್ಟಿಯ ಬದಲಾವಣೆಗೂ ವ್ಯತ್ಯಸ್ತ ಮೌಲ್ಯನಿರ್ಣಯಕ್ಕೂ ಕರೆದೊಯ್ಯಬಹುದು. ಪ್ರತಿಯೊಂದು ರಾಷ್ಟ್ರೀಯ ಸಾಹಿತ್ಯದೊಳಗೂ ಪ್ರಾಂತಗಳ ಮತ್ತು ನಗರಗಳ ಖಚಿತ ಪಾಲುಗಳ ಸದೃಶ ಸಮಸ್ಯೆಗಳೇಳುತ್ತವೆ. ಪ್ರತಿಯೊಂದು ಜರ್ಮನ್ ಬುಡಕಟ್ಟಿನ ಮತ್ತು ಪ್ರಾಂತದ ಗುಣಲಕ್ಷಣಗಳನ್ನೂ ಅದರ ಪ್ರತಿಫಲನಗಳನ್ನೂ ಸಾಹಿತ್ಯದಲ್ಲಿ ಗೊತ್ತುಮಾಡಲು ತಾನು ಸಮರ್ಥನೆಂದು ಹೇಳಿಕೊಳ್ಳುವ ಜೋಸೆಫ್ ನಾಡ್ಲರನ ಸಿದ್ಧಾಂತದಂತಹ ಉತ್ಪ್ರೇಕ್ಷಿತ ಸಿದ್ಧಾಂತಗಳು, ಈ ಸಮಸ್ಯೆಗಳ ಪರಿಗಣನೆಯಿಂದ ನಮ್ಮನ್ನು ಹಿಮ್ಮೆಟ್ಟಿಸಕೂಡದು; ಇವುಗಳನ್ನು ಪರಿಪೂರ್ಣ ಮಾಹಿತಿಯಿಂದ ಮತ್ತು ಯಾವುದೇ ಸುಸಂಬದ್ಧ ವಿಧಾನದಿಂದ ಪರಿಶೀಲಿಸಿಯೇ ಇಲ್ಲ. ಅಮೇರಿಕನ್ ಸಾಹಿತ್ಯದ ಇತಿಹಾಸದಲ್ಲಿ ನವ ಇಂಗ್ಲೆಂಡ್, ಮಧ್ಯಪ್ರಾಚ್ಯ ಹಾಗೂ ದಕ್ಷಿಣಗಳ ಪಾತ್ರವನ್ನು ಕುರಿತು ಲಿಖಿತವಾಗಿರುವುದರಲ್ಲಿ ಬಹುಪಾಲು ಮತ್ತು ಪ್ರಾಂತೀಯತೆಯನ್ನು ಕುರಿತ ಬಹುಪಾಲು ಬರವಣಿಗೆ, ಪವಿತ್ರ ಆಶೋತ್ತರಗಳ, ಸ್ಥಳೀಯ ಹೆಮ್ಮೆಯ ಮತ್ತು ಕೇಂದ್ರೀಕರಣ ಶಕ್ತಿಗಳ ನಿರೋಧಕ್ಕಿಂತ ಹೆಚ್ಚೇನೂ ಆಗುವುದಿಲ್ಲ. ಯಾವುದೇ ವಸ್ತುನಿಷ್ಠ ವಿಶ್ಲೇಷಣೆ, ಲೇಖಕರ ಜಾನಾಂಗಿಕ ತಲೆಮೊರೆಗೆ ಸಂಬಂಧಿಸಿದ ಪ್ರಶ್ನೆಗಳು ಮತ್ತು ಉಗಮ ಸಂಬಂಧವಾದ ಸಮಾಜ ಶಾಸ್ತ್ರೀಯ ಪ್ರಶ್ನೆಗಳಿಗೂ ಭೂದೃಶ್ಯದ ವಾಸ್ತವಿಕ ಪ್ರಭಾವಕ್ಕೆ ಸಂಬಂಧಿಸಿದ ಪ್ರಶ್ನೆಗಳು ಮತ್ತು ಸಾಹಿತ್ಯಕ ಪರಂಪರೆ, ಪೋಕಿಗಳ ಪ್ರಶ್ನೆಗಳಿಗೂ ಭೇದ ಕಲ್ಪಿಸಬೇಕು.

ಅಮೆರಿಕನ್ ಮತ್ತು ಆಧುನಿಕ ಐರಿಷ್‌ಗಳಂತೆ, ಒಂದೇ ಭಾಷೆಯಲ್ಲಿರುವ ಸಾಹಿತ್ಯಗಳು ಪ್ರತ್ಯೇಕ ರಾಷ್ಟ್ರೀಯ ಸಾಹಿತ್ಯಗಳೆಂದು ನಾವು ನಿರ್ಧರಿಸಬೇಕಾದಲ್ಲಿ, "ರಾಷ್ಟ್ರೀಯತೆ"ಯ ಸಮಸ್ಯೆಗಳು ವಿಶೇಷ ಜಟಿಲವಾಗಿಬಿಡುತ್ತವೆ. ಏಟ್ಸ್ ಮತ್ತು ಜಾಯ್ಸ್ ಐರಿಷ್ ಸಾಹಿತ್ಯಕ್ಕೆ ಸೇರುವಾಗ, ಗೋಲ್ಡ್‌ಸ್ಮಿತ್, ಸ್ಟರ್ನ್ ಮತ್ತು ಷೆರಿಡಾನ್ ಏತಕ್ಕೆ ಸೇರುವುದಿಲ್ಲ ಎನ್ನುವಂಥ ಪ್ರಶ್ನೆಗೊಂದು ಉತ್ತರ ಅವಶ್ಯ. ಸ್ವತಂತ್ರವಾದ ಬೆಲ್ಜಿಯನ್, ಸ್ವಿಸ್ ಮತ್ತು ಆಸ್ಟ್ರಿಯನ್ ಸಾಹಿತ್ಯಗಳುಂಟೆ? ಅಮೆರಿಕದಲ್ಲಿ ರಚಿತವಾದ ಸಾಹಿತ್ಯಗಳು "ವಸಾಹತುಶಾಹಿ ಇಂಗ್ಲಿಷ್" ಆಗಿರುವುದನ್ನು ನಿಲ್ಲಿಸಿ ಒಂದು ಸ್ವತಂತ್ರ ರಾಷ್ಟ್ರೀಯ ಸಾಹಿತ್ಯವಾದಂತಹ ಬಿಂದುವನ್ನು ನಿರ್ಧರಿಸುವುದು ಬಹಳ ಸುಲಭವಲ್ಲ. ಅದು ಕೇವಲ ರಾಜಕೀಯ ಸ್ವಾತಂತ್ರ್ಯದ ಸಂಗತಿಯೆ? ಸ್ವತಃ ಲೇಖಕರ ರಾಷ್ಟ್ರೀಯ ಪ್ರಜ್ಞೆಯೆ? ರಾಷ್ಟ್ರೀಯ ವಸ್ತುವಿನ ಮತ್ತು "ಸ್ಥಳೀಯ ವರ್ಣ"ದ ಬಳಕೆಯೆ? ಅಥವಾ ನಿಶ್ಚಿತ ರಾಷ್ಟ್ರೀಯ ಸಾಹಿತ್ಯ ಶೈಲಿಯೊಂದರ ಉದಯವೆ?

ಈ ಸಮಸ್ಯೆಗಳ ಬಗೆಗೆ ನಿರ್ಧಾರಗಳನ್ನು ಕೈಕೊಂಡಾಗ ಮಾತ್ರವೇ ನಾವು

ಕೇವಲ ಭೌಗೋಳಿಕ ಅಥವಾ ಭಾಷಿಕ ವರ್ಗಗಳಲ್ಲದ ರಾಷ್ಟ್ರೀಯ ಸಾಹಿತ್ಯಚರಿತ್ರೆಗಳನ್ನು ಬರೆಯಬಲ್ಲವರಾಗುತ್ತೇವೆ; ಪ್ರತಿಯೊಂದು ರಾಷ್ಟ್ರೀಯ ಸಾಹಿತ್ಯವೂ ಯುರೋಪಿಯನ್ ಪರಂಪರೆಗೆ ಪ್ರವೇಶಿಸುವ ಖಚಿತವಾದ ರೀತಿಯನ್ನು ವಿಶ್ಲೇಷಿಸಬಲ್ಲವರಾಗುತ್ತೇವೆ. ಜಾಗತಿಕ ಮತ್ತು ರಾಷ್ಟ್ರೀಯ ಸಾಹಿತ್ಯಗಳು ಪರಸ್ಪರ ತೆಕ್ಕೆ ಹಾಕಿಕೊಂಡಿವೆ. ಪ್ರತಿಯೊಂದು ದೇಶದಲ್ಲೂ ವ್ಯಾಪಕ ಯುರೋಪಿಯನ್ ಸಂಪ್ರದಾಯವೊಂದು ಮಾರ್ಪಾಟುಗೊಳ್ಳುತ್ತದೆ: ಒಂದೊಂದು ದೇಶದಲ್ಲೂ, ವಿಕಿರಣ ಕೇಂದ್ರಗಳೂ ಒಂದು ರಾಷ್ಟ್ರೀಯ ಪರಂಪರೆ ಮತ್ತೊಂದಕ್ಕಿಂತ ಎದ್ದು ಕಾಣುವಂತೆ ಮಾಡುವ ವ್ಯಷ್ಟಿ ಮಹತ್ವವುಳ್ಳ ವ್ಯಕ್ತಿಗಳೂ ಉಂಟು. ಆ ಪರಂಪರೆಗಳಲ್ಲಿ ಒಂದೊಂದರ ಖಚಿತ ಪಾಲನ್ನು ವರ್ಣಿಸುವುದು ಸಾಧ್ಯವಾದರೆ, ಇಡೀ ಸಾಹಿತ್ಯ ಚರಿತ್ರೆಯಲ್ಲಿ ತಿಳಿಯಬೇಕಾದ ಬಹಳಷ್ಟನ್ನು ತಿಳಿದಂತೆಯೇ.

ಸಿ. ಪಿ. ಕೆ.

ಪುಸ್ತಕ ಶರಣ

ಮೂರು ಹೆಜ್ಜೆಯ ಬೇಡಿ ಬಂದ ವಾಮನನಂತೆ
ನೀವು ಬಂದಿರಿ ನನ್ನ ಬಾಳಿಗೆ
(ನೀವು ಬರಲಿಲ್ಲ, ನಾನೇ ಕರೆದೆ).
ಈಗಲೋ ನನಗೇ ಜಾಗವಿಲ್ಲದ ಹಾಗೆ
ನನ್ನ ಸುತ್ತೆಲ್ಲ ನಿಮ್ಮದೇ ಸಾಮ್ರಾಜ್ಯ !
ನನಗಿಲ್ಲ ಕಿಂಚಿತ್ತು ಪಶ್ಚಾತ್ತಾಪ :
ಮುಳುಗಿದ್ದೇನೆ ನಿಮ್ಮ ಹೆಗ್ಗಡಲಿನಲ್ಲಿ,
ಅಂತೆಯೇ ಹಿಗ್ಗಿನಲ್ಲಿ !

ನನಗಿರುವುದೊಂದೇ ಆಸೆ :
ನಿಮ್ಮ ನಡುವೆಯೆ, ನಿಮ್ಮನ್ನು ನೋಡುತ್ತ ನೋಡುತ್ತ,
ಬರಲಿ ನನಗೆ ಅನಾಯಾಸ ಮರಣ—
ನಾನು ಪುಸ್ತಕ ಶರಣ !

ಮನಜ

ಡಾ. ಶಿವರುದ್ರಪ್ಪನವರ ವಿಮರ್ಶನಪ್ರಜ್ಞೆ

ವಿಮರ್ಶೆಯಂಥ ಅತ್ಯಂತ ಕಠಿಣವಾದ ವಿಷಯುವನ್ನು ಕೊನೆಯ ಪಕ್ಷ ಎರಡೂವರೆ ದಶಕಗಳವರೆಗಾದರೂ ಮುನ್ನಡೆಸಿರುವ ಡಾ. ಶಿವರುದ್ರಪ್ಪನವರ ವಿಮರ್ಶನ ಪ್ರಜ್ಞೆ ತುಂಬಾ ವಿಸ್ತಾರವಾಗಿಯೂ, ಅಧ್ಯಯನಕ್ಕೆ ಅತ್ಯಂತ ಗಂಭೀರವಾದ ವಿಷಯ ವಾಗಿಯೂ ಕಂಡಿದೆ. ವಿಮರ್ಶೆಯಂಥ ಒಂದೇ ಒಂದು ವಿಷಯುವನ್ನು ಇಷ್ಟೊಂದು ದೀರ್ಘಕಾಲದವರೆಗೂ ಸಂಶೋಧಿಸಿ, ವಿಶ್ಲೇಷಣಾತ್ಮಕವಾಗಿ ಚರ್ಚಿಸಿರುವ ಜಿಎಸೆಸ್ ರವರ ವಿಮರ್ಶನಪ್ರಜ್ಞೆ ಹಾಗೂ ಚಿಂತನ ದೃಷ್ಟಿ ಮೌಲಿಕವೆನಿಸುವ ಸುಮಾರು ಎರಡು ಸಾವಿರ ಪುಟಗಳಷ್ಟು* ವಿಸ್ತಾರವಾಗಿ ಹರಡಿಕೊಂಡಿರುವುದು ಒಂದು ಮಹತ್ವದ ಸಾಧನೆಯೆನಿಸಿದರೆ, ಆ ವಿಸ್ತಾರವಾದ ವಿಮರ್ಶನವಾಙ್ಮಯ ಕಾಲಕಾಲಕ್ಕೆ ಹಂತ ಹಂತದ ಬೆಳವಣಿಗೆಯನ್ನೂ, ಆ ಬೆಳವಣಿಗೆ ವೈವಿಧ್ಯತೆಯನ್ನೂ ಹೊಂದಿರುವುದು ಇನ್ನೊಂದು ಮಹತ್ವದ ಸಾಧನೆ ಎನಿಸುತ್ತದೆ.[1]

---

* ವಿಮರ್ಶೆಯ ಪೂರ್ವ ಪಶ್ಚಿಮ — 1961. ಸೌಂದರ್ಯ ಸಮೀಕ್ಷೆ — 1965. ಪರಿಶೀಲನ — 1967. ಗತಿಬಿಂಬ — 1969. ಕನ್ನಡ ಸಾಹಿತ್ಯ ಸಮೀಕ್ಷೆ — 1975. ಮಹಾಕಾವ್ಯ ಸ್ವರೂಪ — 1976. ನವೋದಯ — 1976. ಅನುರಣನ — 1978. ಪ್ರತಿಕ್ರಿಯೆ — 1982, ಹಾಗೂ ಕಾವ್ಯಾರ್ಥ ಚಿಂತನ — 1983.

[1] ಪ್ರಸ್ತುತ ಲೇಖನದ ಸಂದರ್ಭದಲ್ಲಿ ಶಿವರುದ್ರಪ್ಪನವರ ಸಾಹಿತ್ಯದಲ್ಲಿ ಕೇವಲ ವಿಮರ್ಶನ ಸಂಕಲನಗಳನ್ನು ಮಾತ್ರ ದೃಷ್ಟಿಯಲ್ಲಿ ಇಟ್ಟುಕೊಳ್ಳಲಾಗಿದೆ. ಇದರರ್ಥ ಅವರ ಅನ್ಯ ಪ್ರಕಾರಗಳಲ್ಲಿ ವಿಮರ್ಶನ ದೃಷ್ಟಿ ಇಲ್ಲವೆಂದೇನೂ ಅಲ್ಲ. ಏಕೆಂದರೆ ವಿಮರ್ಶಕ ಸ್ವತಃ ಕವಿಯೂ ಆಗಿದ್ದಾಗ ಅದೊಂದು ಅಪರೂಪದ ಸಂಘಟನೆಯೇ ಸರಿ. ಅಂಥ ಸಂದರ್ಭದಲ್ಲಿ ಆ ವಿಮರ್ಶಕನ ಪ್ರಜ್ಞೆ ಅತ್ಯಂತ ಅರ್ಥಪೂರ್ಣವಾಗಿ ಅನುಷ್ಠಾನಗೊಳ್ಳುವ ಕ್ರಿಯೆ ಅವನ ಕಾವ್ಯ ನಿರ್ಮಿತಿಯಲ್ಲಿ ನಡೆದಿರುತ್ತದೆ. ಅಂದರೆ ಈ ಕ್ರಿಯೆ ಶಿವರುದ್ರಪ್ಪನವರ ಕಾವ್ಯಾರ್ಥದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಸದ್ಯ ಅಪ್ರಸ್ತುತ. ಈ ಕಾರಣದಿಂದಲೇ ಅವರ ವಿಮರ್ಶನಪ್ರಜ್ಞೆಯನ್ನು ಅವರ ವಿಮರ್ಶನ ಸಂಕಲನಗಳಲ್ಲಿ ಮಾತ್ರ ಕಾಣಿಸಲು ಯತ್ನಿಸಲಾಗಿದೆ. ಅದೂ ಅಲ್ಲದೆ, ವಿಮರ್ಶೆಯನ್ನು ಕುರಿತ ವಿಮರ್ಶೆಗೂ ಸ್ವತಃ ಕಾವ್ಯವನ್ನೇ ಕುರಿತ ವಿಮರ್ಶೆಗೂ ಇರುವ ವ್ಯತ್ಯಾಸವನ್ನು ಅಲ್ಲಗಳೆಯುವಂತಿಲ್ಲ.

ತಮ್ಮ ವಿಮರ್ಶನ ಚಿಂತನೆಯ ವೈವಿಧ್ಯತೆ ಹಾಗೂ ಬೆಳವಣಿಗೆಯ ಬಗ್ಗೆ ಜಿಎಸೆಸ್‌ರವರ ವಿಮರ್ಶನಪ್ರಜ್ಞೆ ನಿರಂತರ ಜಾಗೃತಾವಸ್ಥೆಯಲ್ಲಿ ಬೆಳೆದಿರುವುದನ್ನು ಅವರ ಆರಂಭದ ಸಂಕಲನದಿಂದ ಹಿಡಿದು ಇತ್ತೀಚಿನ ಸಂಕಲನದವರೆಗೂ ಸಾಧಾರವಾಗಿ ಕಾಣಬಹುದಾಗಿದೆ. ಉದಾಹರಣೆಗೆ: 'ವಿಮರ್ಶೆಯ ಪೂರ್ವ ಪಶ್ಚಿಮ'ದಲ್ಲಿ ವಿಮರ್ಶೆಯ ಮೂಲತತ್ತ್ವಗಳಾಗಿ ವ್ಯಕ್ತವಾಗಿರುವ ಅವರ ಎಷ್ಟೋ ವಿಚಾರಗಳು 'ಕಾವ್ಯಾರ್ಥಚಿಂತನ'ದಲ್ಲಿ ಹದವಾಗಿ ಪರಿಪಾಕಗೊಂಡು ಅಭಿವ್ಯಕ್ತ ವಾಗಿರುವುದನ್ನು ಕಾಣಬಹುದಾಗಿದೆ. 'ಕಾವ್ಯಾರ್ಥಚಿಂತನ'ದಲ್ಲಿ ಅವರೇ ಹೇಳುವಂತೆ "ಕಳೆದ ಹದಿನೈದು ವರ್ಷಗಳಿಗೂ ಮೀರಿದ ಕಾಲಮಾನದಲ್ಲಿ ನಾನು ಬರೆದ ಈ ಲೇಖನಗಳನ್ನು ಒಂದು ರೂಪಕ್ಕೆ ಅಳವಡಿಸಿ ಪ್ರಕಟಿಸಲು ಸಾಧ್ಯವಾದದ್ದು ನನಗೆ ಸಮಾಧಾನದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ನನ್ನ ಕೆಲಸ ಪ್ರಾರಂಭವಾದದ್ದು 1961ರಷ್ಟು ಹಿಂದೆಯೇ, 'ವಿಮರ್ಶೆಯ ಪೂರ್ವಪಶ್ಚಿಮ' ಎಂಬ ಕೃತಿಯ ಪ್ರಕಟಣೆಯಿಂದ. ಮುಖ್ಯವಾಗಿ ಅದು ಸಾಹಿತ್ಯ ವಿಮರ್ಶೆಯ ತೌಲನಿಕ ವಿವೇಚನೆ ಯನ್ನು ಕುರಿತದ್ದು. ಆದರೆ ಸಾಹಿತ್ಯ ವಿಮರ್ಶೆಗೆ ಹಿನ್ನೆಲೆಯಾದ ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ತೌಲನಿಕ ವಿವೇಚನೆಯನ್ನು ನಾನು ಮೊದಲು ಮಾಡಿದ್ದು 'ಸ್ಫೂರ್ತಿ' ತತ್ವವನ್ನು ಕುರಿತ ಲೇಖನದಿಂದ.[1]" ಅಂದರೆ 'ಸ್ಫೂರ್ತಿ' ತತ್ವವನ್ನು ಕುರಿತ ಅವರ ಲೇಖನ ಪ್ರಕಟವಾಗಿರುವುದು 1963ರಲ್ಲಿ. ಹಾಗೆಯೇ ಇಲ್ಲಿ ಗಮನಾರ್ಹವೆನಿಸುವ ಇನ್ನೊಂದು ಮುಖ್ಯ ಸಂಗತಿಯೆಂದರೆ, ಭಾರತೀಯ ಹಾಗೂ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಅವರ ತೌಲನಿಕ ವಿವೇಚನೆ ಮೀಮಾಂಸೆಯ ಸೈದ್ಧಾಂತಿಕ ಹಿನ್ನೆಲೆಯನ್ನು ಪಡೆದು ನಿಲ್ಲಬೇಕಾದರೆ ಬಹುಶಃ ಎರಡು ದಶಕಗಳಷ್ಟು ದೀರ್ಘಕಾಲದ ಚಿಂತನೆ ಹಾಗೂ ಅಧ್ಯಯನ ನಡೆದಿರಬೇಕೆಂಬುದು ಗೊತ್ತಾಗುತ್ತದೆ. ಜೊತೆಗೆ ಪುಟ್ಟಪ್ಪನವರ 'ರಸೋವೈಸಃ' ಹಾಗೂ ತೀ. ನಂ. ಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ' ಯಂಥ ಆಚಾರ್ಯ ಕೃತಿಗಳು ಶಿವರುದ್ರಪ್ಪನವರ ತೌಲನಿಕ ವಿವೇಚನೆಗೂ, ವಿಮರ್ಶನ ಪ್ರಜ್ಞೆಯ ನಿರಂತರ ಜಾಗೃತಿಗೂ ಅತ್ಯಂತ ಫಲವತ್ತಾದ ಭೂಮಿಕೆಯನ್ನು ಹಾಕಿಕೊಟ್ಟಿವೆ ಎಂಬುದನ್ನು ಅವರ ಸಂಕಲನಗಳಲ್ಲಿ ಕಾಣಬಹುದಾಗಿದೆ.

ಇನ್ನು ಕಾವ್ಯಮೀಮಾಂಸೆಯ ಅತ್ಯಂತ ಸ್ಪಷ್ಟವಾದ ಹಿನ್ನೆಲೆಯಲ್ಲಿ ಶಿವರುದ್ರಪ್ಪ ನವರು ನಡೆಸಿರುವ ತೌಲನಿಕ ವಿಮರ್ಶೆಯ ಸ್ವರೂಪವನ್ನೂ, ತನ್ಮೂಲಕ ಸಾಧಿತವಾದ ಬೆಳವಣಿಗೆಯನ್ನೂ, ಆ ಬೆಳವಣಿಗೆಯಲ್ಲಿನ ವೈವಿಧ್ಯತೆಯನ್ನೂ ಕೆಲವು ಮಾತುಗಳಲ್ಲಿ ನಿರೂಪಿಸಬಹುದು. ಪ್ರಸ್ತುತ ಕನ್ನಡ ಸಾಹಿತ್ಯ ಹಾಗೂ ವಿಮರ್ಶೆಯ ಮಟ್ಟಿಗೆ ಹೇಳುವುದಾದರೆ ಜಿಎಸೆಸ್‌ರವರು ವಿಮರ್ಶೆಯಲ್ಲಿ ತೊಡಗುವ ಕಾಲಕ್ಕಾಗಲೆ ಕನ್ನಡದಲ್ಲಿ ಹೆಸರಾಂತ ಕವಿಗಳೂ ವಿಮರ್ಶಕರೂ ಆಗಿದ್ದ ಪುಟ್ಟಪ್ಪ, ಬೇಂದ್ರೆ

[1] ಡಾ. ಜಿ. ಎಸ್. ಶಿವರುದ್ರಪ್ಪ, ಕಾವ್ಯಾರ್ಥ ಚಿಂತನ, ಮುನ್ನುಡಿ, ಪು. 1.

ಶೀನಂಶ್ರೀ, ಮಾಸ್ತಿ, ಎಸ್. ವಿ. ರಂಗಣ್ಣ ಹಾಗೂ ಪು.ತಿ.ನ. ಮುಂತಾದವರನ್ನು ಸಮಗ್ರವಾಗಿ ಅಧ್ಯಯನ ಮಾಡಿಕೊಂಡಿರುವುದು ಒಂದು ಕಡೆಗಾದರೆ, ಭಾರತೀಯ ಹಾಗೂ ಪಾಶ್ಚಾತ್ಯ ಕೃತಿಗಳನ್ನು ಕುರಿತ ಈ ನವೋದಯ ತಲೆಮಾರಿನ ವಿಮರ್ಶಕರ ಜಿಜ್ಞಾಸೆಯಲ್ಲಿ ಮೂಡಿಬಂದಿರುವ ರಸವಿಮರ್ಶೆಯ ತತ್ವ ತಾತ್ಪರ್ಯಗಳ ಜಾಡನ್ನು ಹಿಡಿದೇ ಮುನ್ನಡೆದು, ಅವರಿಂದ ವಿಮರ್ಶಿತವಾಗಿರುವ ಕೃತಿಗಳ ವಿಮರ್ಶೆಯಲ್ಲೇ ತೊಡಗಿ,ಅವರಿಗಿಂತ ಭಿನ್ನವೂ ಉತ್ತಮ ಬೆಳವಣಿಗೆಯ ಸಾಧ್ಯತೆಯನ್ನೂ ಜಿಎಸೆಸ್ ಕಂಡುಕೊಂಡಿರುವುದನ್ನು ಇನ್ನೊಂದು ಕಡೆಗೆ ಕಾಣಬಹುದಾಗಿದೆ. ಉದಾ: "ಷೇಕ್ಸ್‌ಪಿಯರ್ ಕವಿಯ 'ಟೆಂಪೆಸ್ಟ್' ನಾಟಕದಲ್ಲಿ ಬರುವ ಮಿರಾಂಡಳ ಪಾತ್ರವನ್ನೂ, 'ಒಥೆಲೊ' ನಾಟಕದ ಡೆಸ್ಡಿಮೋನಳ ಪಾತ್ರವನ್ನೂ 'ಶಾಕುಂತಲ' ನಾಟಕದ ಶಕುಂತಲೆಯ ಪಾತ್ರವನ್ನೂ ಮುಂದಿರಿಸಿಕೊಂಡು ಬಂಕಿಮಚಂದ್ರ ಚಟ್ಟೋಪಾಧ್ಯಾಯರು ಆ ಮೂರು ಪಾತ್ರಗಳ ಸಾಮ್ಯ–ವೈಷಮ್ಯಗಳನ್ನು ಪರಿಶೀಲಿಸಿದ್ದಾರೆ. ಎಸ್. ವಿ. ರಂಗಣ್ಣನವರು 'ಶಾಕುಂತಲ'ದ ಐದನೆಯ ಅಂಕದ ಸನ್ನಿವೇಶವನ್ನು ಷೇಕ್ಸ್‌ಪಿಯರ್‌ನ 'ದಿ ವಿಂಟರ್ಸ್ ಟೇಲ್' (The Winters Tale) ನಲ್ಲಿ ಸತಿ ಹರ್ಮಿಯೋನ ಇಂಥದೇ ಒಂದು ಸನ್ನಿವೇಶದಲ್ಲಿ ತನ್ನ ಗಂಡನಾದ ಲಿಯಾಂಟಿಸ್‌ನೊಂದಿಗೆ ನಡೆದುಕೊಂಡ ರೀತಿಯೊಂದಿಗೆ ಹೋಲಿಸಿ ನೋಡಿದ್ದಾರೆ. ಈ ಎರಡು ಪ್ರಯತ್ನಗಳೂ ಹಿತವಾಗಿಲ್ಲವೆಂದೇ ಹೇಳಬೇಕು. ಏಕೆಂದರೆ ಪಾಶ್ಚಾತ್ಯ ಪೌರ್ವಾತ್ಯ ಕವಿಗಳ ಈ ನಿರ್ಮಿತಿಗಳಲ್ಲಿ, ಕೃತಿಗೆ ಹಿನ್ನೆಲೆಯಾದ ಸನ್ನಿವೇಶ, ಮನೋಧರ್ಮ, ಉದ್ದೇಶ ಇವುಗಳ ವಿಚಾರದಲ್ಲಿ ಪೂರ್ವಪಶ್ಚಿಮದಷ್ಟು ಅಂತರವಿದೆ. ಬಂಕಿಮಚಂದ್ರರು ಶಕುಂತಳಾ ಮಿರಾಂಡ ಇಬ್ಬರನ್ನೂ ಕುರಿತು 'ಇಬ್ಬರೂ ಋಷಿ ಕನ್ಯೆಯರು, ಪ್ರಾಸ್ಪಿರೊ ವಿಶ್ವಾಮಿತ್ರರಿಬ್ಬರೂ ರಾಜರ್ಷಿಗಳು. ಋಷಿಕನ್ಯೆಯರಾದುದರಿಂದ ಇಬ್ಬರಿಗೂ ಅಮಾನುಷಿಕ ಸಹಾಯವಿತ್ತು. ಮಿರಾಂಡಳು ಏರಿಯಲ್‌ನಿಂದ ರಕ್ಷಿತಳಾದವಳು' ಎಂದು ಬರೆಯುತ್ತಾರೆ. ಈ ಹೋಲಿಕೆಯ ಒಂದೊಂದು ಮಾತೂ ವಿವಾದಾಸ್ಪದವಾದುದು. ಶಕುಂತಲೆಗೂ ಮಿರಾಂಡಳಿಗೂ ಕೆಲವು ಗುಣಗಳ ಸಾಮ್ಯವಿರಬಹುದು; ಆದರೆ ಪ್ರಾಸ್ಪಿರೊ ಮತ್ತು ವಿಶ್ವಾಮಿತ್ರ ಇವರಿಬ್ಬರೂ 'ರಾಜರ್ಷಿಗಳು' ಎಂದು ಮಾಡುವ ತುಲನೆ ಸಾಧುವಾದುದಲ್ಲ. ಶಕುಂತಲೆ ಬೆಳೆದ ಆವರಣಕ್ಕೂ ಮಿರಾಂಡ ಬೆಳೆದ ಆವರಣಕ್ಕೂ ವಿಶೇಷವಾದ ವ್ಯತ್ಯಾಸವಿದೆ. ಹಾಗೆಯೇ ದುರಂತ ನಾಯಿಕೆಯಾದ ಡೆಸ್ಡಿಮೋನಳಿಗೂ ಶಕುಂತಲೆಗೂ ಇರುವ ಹೋಲಿಕೆಯನ್ನು ಎಷ್ಟು ದೂರ ಒಯ್ಯಬಹುದು? ರಂಗಣ್ಣನವರ ತೌಲನಿಕ ಕ್ರಮವೂ ಅಷ್ಟೇ. 'ದಿ ವಿಂಟರ್ಸ್ ಟೇಲ್'ನಲ್ಲಿ ಬರುವ ಸಂದರ್ಭವೂ 'ಶಾಕುಂತಲ'ದ ಐದನೆಯ ಅಂಕದಲ್ಲಿ ಬರುವ ಸಂದರ್ಭವೂ ಮೇಲುನೋಟಕ್ಕೆ ಒಂದೇ ಎಂಬಂತೆ ತೋರಿದರೂ ಆ ಸನ್ನಿವೇಶಗಳ ಹಿಂದುಮುಂದುಗಳ ದೃಷ್ಟಿಯಿಂದ ನೋಡಿದರೆ ಈ ಸಂದರ್ಭಗಳನ್ನು ಹೋಲಿಸಿ ಶಕುಂತಲೆಗಿಂತ ಹರ್ಮಿಯೋನಳ ನಡವಳಿಕೆ ಅತ್ಯುತ್ತಮವಾಗಿದೆ ಎಂಬ

ತೀರ್ಮಾನವನ್ನು ಒಪ್ಪಲಾಗುವುದಿಲ್ಲ. ಹೇಗೋ ಎಲ್ಲೋ ಸಾಮ್ಯ ಕಂಡ ಕೂಡಲೇ ಅವುಗಳನ್ನೆಲ್ಲಾ ಪರಸ್ಪರ ಹೋಲಿಸಿ ನೋಡುವ ಪ್ರವೃತ್ತಿಯನ್ನು ತಡೆಹಿಡಿಯುವುದು ವಿಮರ್ಶಕರಿಗೆ ಅಸಾಧ್ಯವಾದರೂ ತಾವು ತುಲನೆಗೆಂದು ಎತ್ತಿಕೊಂಡ ಸಂದರ್ಭಗಳ ಹಿಂದೆ ಇರುವ ಕಾಲ, ದೇಶ, ಸಂಸ್ಕೃತಿಗಳ ಭಿನ್ನತೆಯನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. "[1] ಆದ್ದರಿಂದ ಸಾಹಿತ್ಯ ವಿಮರ್ಶೆಯಲ್ಲಿ ಆಯಾ ಜನಾಂಗದ ಸಾಂಸ್ಕೃತಿಕ ಜೀವನದ ನಂಬಿಕೆ ಹಾಗೂ ಮೌಲ್ಯಗಳ ಸ್ವರೂಪ ಭಿನ್ನತೆಯ* ಬಗ್ಗೆ ಈಗ್ಗೆ ಸುಮಾರು ಎರಡು ದಶಕಗಳಷ್ಟು ಹಿಂದೆಯೇ ಡಾ. ಜಿಎಸೆಸ್‌ರವರು ಸೂಚಿಸಿರುವ ಈ

---

[1] ಡಾ. ಜಿ. ಎಸ್. ಶಿವರುದ್ರಪ್ಪ, ವಿಮರ್ಶೆಯ ಪೂರ್ವಪಶ್ಚಿಮ, ಪು. 53—5.

* ಷೇಕ್ಸ್‌ಪಿಯರನ ಪ್ರಾಸ್ಪಿರೊ, ಮಿರಾಂಡ, ಡೆಸ್ಡಿಮೋನ, ಹರ್ಮಿಯೋನ, ಹಾಗೂ ವೈದಿಕ ಕಾವ್ಯಗಳ ವಿಶ್ವಾಮಿತ್ರ, ಶಕುಂತಲೆ– ಇವರೆಲ್ಲರ ವ್ಯಕ್ತಿ–ಪ್ರಕೃತಿಗಳನ್ನು ಮಾಡಲ್ಪಟ್ಟಿರುವ, ಸಾಂಸ್ಕೃತಿಕ ಮೌಲ್ಯಗಳು ಮೂಲಭೂತವಾಗಿಯೇ ಭಿನ್ನವಾಗಿವೆ ಎಂಬುದನ್ನು ಕಾಣಬಹುದಾಗಿದೆ. ಉದಾಹರಣೆಗೆ : ಪ್ರಾಸ್ಪಿರೊನ ಪಾತ್ರವನ್ನು ನೋಡಬಹುದು :

> " . . . . and for the liberal arts
> Without a parallel ; those being all my study,
> The Government, I cast upon my brother
> And to my state grew stranger, being transported "
>
> The Tempest, Act I. Sc. II. Lines, 74-78.

ಅರ್ಥಾತ್, ಕೇವಲ ಕೆಲವು ವೈಯಕ್ತಿಕ ಆಸಕ್ತಿಗಳಾದ ಕಲೆ, ಸಂಗೀತ ಮತ್ತು ಮಂತ್ರಕಲೆಗಳಲ್ಲಿ ಆಸಕ್ತನಾದ ಷೇಕ್ಸ್‌ಪಿಯರ್‌ನ ಪ್ರಾಸ್ಪಿರೊ, ರಾಜ್ಯಾಡಳಿತವನ್ನೂ, ಪ್ರಜೆಗಳ ಹಿತಚಿಂತನೆಯನ್ನೂ ಕಡೆಗಣಿಸಿದ್ದುದರ ಫಲವಾಗಿ, ತನ್ನ ತಮ್ಮನಾದ ಆಂಟೋನಿಯೊ ಕೈಯಲ್ಲೇ ರಾಜ್ಯಭ್ರಷ್ಟನಾಗಿ ರಾಜ್ಯದಿಂದ ಹೊರದೂಡಲ್ಪಡುತ್ತಾನೆ. ಅಂದರೆ ರಾಜನಾಗಿ ಪ್ರಾಸ್ಪಿರೊ ಸೋತಿದ್ದಾನೆ. ಆದರೆ ವೈದಿಕ ಪುರಾಣದ ವಿಶ್ವಾಮಿತ್ರ ಮೊದಲನೆಯದಾಗಿ, ಒಬ್ಬ ಯಶಸ್ವಿಯಾದ ದೊರೆ. ಎರಡನೆಯದಾಗಿ ಮತ್ತು ಮುಖ್ಯವಾಗಿ ಅತ್ಯಂತ ಘೋರವಾದ ತಪಶ್ಚರ್ಯೆಗಳಿಂದ ಬ್ರಹ್ಮರ್ಷಿ ಸ್ಥಾನವನ್ನು ಪಡೆದ ಒಬ್ಬ ಅರ್ಥಪೂರ್ಣ ರಾಜರ್ಷಿ. ಅಂತೆಯೇ ಈ ಅರ್ಥದಲ್ಲಿ ಷೇಕ್ಸ್‌ಪಿಯರ್‌ನ ಪ್ರಾಸ್ಪಿರೊನನ್ನು ರಾಜರ್ಷಿ ಎನ್ನುವುದಾಗಲಿ ಅಥವಾ ಈ ಎರಡು ಪಾತ್ರಗಳನ್ನು ಹೋಲಿಸಿ ಸಮೀಕರಿಸುವುದಾಗಲಿ ಮೂಲಭೂತವಾಗಿ ತಪ್ಪಾಗುತ್ತದೆ. ಅಂದರೆ, ಈ ಎರಡು ಪಾತ್ರಗಳನ್ನೂ ಈ ಎರಡು ವಿಭಿನ್ನ ಸಾಂಸ್ಕೃತಿಕ ಮೌಲ್ಯಗಳ, ಸ್ಪಷ್ಟವಾದ ಹಿನ್ನೆಲೆ ಹಾಗೂ ಎಚ್ಚರದಿಂದ ಪರಿಶೀಲಿಸಬೇಕಾದುದು ಅನಿವಾರ್ಯವೆನಿಸುತ್ತವೆ. ಹಾಗೆಯೇ ರಾಜ್ಯಭ್ರಷ್ಟ ಪ್ರಾಸ್ಪಿರೊನ ಮಗಳಾದ ಮಿರಾಂಡ ಕೂಡ, ಮೂರು ವರ್ಷದ ಬಾಲ್ಯಾವಸ್ಥೆಯಲ್ಲೇ ರಾಜ್ಯದಿಂದ ಹೊರದೂಡಲ್ಪಟ್ಟು, ಐಲ್ಯಾಂಡ್‌ನಂಥ ಮರಳುಗಾಡನ್ನು ಸೇರಿದ ಮೇಲೆ, ಅವಳು ಪ್ರಾಯಕ್ಕೆ ಬರುವವರೆಗೂ ಅವಳ ತಂದೆ ಮತ್ತು ಏರಿಯೆಲ್‌ನನ್ನು ಬಿಟ್ಟರೆ ಅನ್ಯ ಮಾನವ ಸಂಸರ್ಗವೇ ಇಲ್ಲದೆ, ಆ ಮರಳುಗಾಡನ್ನುಳಿದು ಅನ್ಯ ಪ್ರಪಂಚವೇ ಅವಳಿಗೆ ಗೊತ್ತಿಲ್ಲ. ಅಂತೆಯೇ ಫರ್ಡಿನಂಡನ ಹಡಗು ಬಿರುಗಾಳಿಗೆ ಸಿಲುಕಿ, ತಲ್ಲಣಗೊಂಡಾಗ, ಮೊಟ್ಟಮೊದಲ ಬಾರಿಗೆ ಅಷ್ಟು ಮಂದಿ ಮಾನವಸಮೂಹವನ್ನು ಕಂಡ ಮಿರಾಂಡ.

ಎಚ್ಚರಿಕೆಯಲ್ಲಿ ಸ್ವತಃ ಜಿಎಸೆಸ್‌ರವರ ವಿಮರ್ಶನಪ್ರಜ್ಞೆಯ ಜ್ವಲಂತತೆಯನ್ನೂ, ನಮ್ಮ ವಿಮರ್ಶೆಯ ಮುಂದಿನ ಬೆಳವಣಿಗೆಗೆ, ಅದರಲ್ಲೂ ಮುಖ್ಯವಾಗಿ ತೌಲನಿಕ ವಿಮರ್ಶೆಯ ಬೆಳವಣಿಗೆಗೆ ಅತ್ಯಂತ ಸ್ಪಷ್ಟವಾದ, ದೃಷ್ಟಿ–ಧೋರಣೆಯ ತಳಹದಿಯನ್ನೂ ಹಾಕಿದ್ದಾರೆಂದರೆ, ಬಹುಶಃ ಇದು ಅತಿಶಯದ ಮಾತೆನಿಸಲಾರದು. ಜಿಎಸೆಸ್‌ರವರ ವಿಮರ್ಶೆಯಲ್ಲಿ ಗಮನಿಸಬೇಕಾಗಿರುವ ಅತ್ಯಂತ ಮುಖ್ಯವೆನಿಸುವ ಇನ್ನೊಂದು ಸಂಗತಿಯೆಂದರೆ, ರಸವಿಮರ್ಶೆಯನ್ನೂ ಸಂಶೋಧನಶಾಸ್ತ್ರವನ್ನೂ ಯಶಸ್ವಿಯಾಗಿ ಜೋಡಿಸಿಕೊಂಡು ಮುನ್ನಡೆದಿರುವುದು. ಅಲ್ಲದೆ ತುಂಬಾ ಕಠಿಣವೆನಿಸುವ ಈ ಕ್ರಮ ಜಿಎಸೆಸ್‌ರವರಿಗೆ ಎಷ್ಟೊಂದು ಫಲಪ್ರದವಾಗಿ ಸಿದ್ಧಿಸಿದೆಯೆಂಬುದನ್ನು ಬಹುತೇಕ ಅವರ ಎಲ್ಲ ಸಂಕಲನಗಳಲ್ಲೂ ಕಾಣಬಹುದಾಗಿದೆ.

> " . . . . O wonder ;
> How many goodly creaters are there here
> How beautious mankind is O brave new world,
> That such people in it "
>
> The Tempest, Act. V. Sc. I. Lines, 182—6.

ಅಂದರೆ ಫರ್ಡಿನಂಡ್‌ನ ಆ ಹಡಗಿನ ದುರಂತವನ್ನು ಸ್ವತಃ ನೋಡುವವರೆಗೆ, ಮಿರಾಂಡ ಅಷ್ಟು ಮಂದಿ ಮಾನವ ಸಮೂಹವನ್ನು ಕಂಡದ್ದೇ ಇಲ್ಲ. ಆದರೆ, ಕಾಳಿದಾಸನ ಶಕುಂತಳೆ ಹಾಗಲ್ಲ : ಅವಳು ಬೆಳೆದದ್ದು ಆಶ್ರಮದ ವಾತಾವರಣದಲ್ಲಿ. ಅವಳಿಗೆ ತಂದೆಯ ಸ್ಥಾನದಲ್ಲಿ ಕಣ್ವಮಹರ್ಷಿ ಮಾತ್ರವಲ್ಲದೆ, ತಾಯಿಯ ಸ್ಥಾನದಲ್ಲಿ ಗೌತಮಿ ಇದ್ದಾಳೆ. ಗೆಳತಿಯರಾದ ಅನುಸೂಯೆ ಪ್ರಿಯಂವದೆಯರಿದ್ದಾರೆ. ಶಾರ್ಙ್ಗರವ ಶಾರದ್ವತರೇ ಮೊದಲಾದ ಸೇವಕರಿದ್ದಾರೆ. ನಿಸರ್ಗ ಸೌಂದರ್ಯದೊಡನೆ ತಪೋವನದ ಸಾಕುಪ್ರಾಣಿಗಳಿವೆ. ಅಂದರೆ, ಶಕುಂತಲೆ ಕಾಡಿನ ಆಶ್ರಮದಲ್ಲಿ ಬೆಳೆದವಳಾದರೂ ಅವಳಿಗೊಂದು ಪುಟ್ಟ ಮಾನವ ಪ್ರಪಂಚವೇ ಪ್ರಾಪ್ತವಾದಂತಾಗಿವೆ. ಅಂದರೆ ಮಿರಾಂಡಳ ಬದುಕಿನ ಪ್ರಪಂಚ ಇದಕ್ಕೆ ಸಂಪೂರ್ಣ ವಿರುದ್ಧವಾದುದಾಗಿದೆ.

ಇನ್ನು ಮೂರನೆ ಪಾತ್ರವೆಂದರೆ 'ಒಥೆಲೊ' ನಾಟಕದ ಡೆಸ್ಡಿಮೋನ. 'ಒಥೆಲೊ' ನಾಟಕದ ಮೂಲವಸ್ತುವೇ ಅಂತರ್‌ವರ್ಣೀಯ ಪ್ರೇಮದ ಮದುವೆ ಹಾಗೂ ಮಾನವ ಸ್ವಾರ್ಥದ ಘೋರಕಾರ್ಯಗಳು. ಕರಿಯನಾದ ಒಥೆಲೊ ಹಾಗೂ ಬಿಳಿಯ ಹುಡುಗಿ ಡೆಸ್ಡಿಮೋನರ ಮದುವೆಯನ್ನು "the marriage of eagle and dove" ಎಂದಿದ್ದಾರೆ ವಿಮರ್ಶಕರು. ಆದ್ದರಿಂದ 'ಒಥೆಲೊ' ನಾಟಕದ ದುರಂತ ನಾಯಕಿಯ ಕೊಲೆ, ನಾಯಕನ ಪಶ್ಚಾತ್ತಾಪ ಹಾಗೂ ಆತ್ಮಹತ್ಯೆ—ಈ ಯಾವ ಅಂಶಗಳಲ್ಲೂ, ಡೆಸ್ಡಿಮೋನ ಶಕುಂತಲೆಯರ ಪಾತ್ರಗಳು ಪರಸ್ಪರ ಹೋಲಿಕೆಯಾಗುವುದಿಲ್ಲ.

ಆದ್ದರಿಂದ, ಈ ಮೇಲೆ ತಿಳಿಸಿರುವ ಹಲವಾರು ಕಾರಣಗಳಿಂದಾಗಿ, ಷೇಕ್ಸ್‌ಪಿಯರ್‌ನ ಮಿರಾಂಡ, ಡೆಸ್ಡಿಮೋನರನ್ನು ಕಾಳಿದಾಸನ ಶಕುಂತಲೆಗೂ, ಪ್ರಾಸ್ಪಿರೊನನ್ನು ವಿಶ್ವಾಮಿತ್ರನಿಗೂ ಹೋಲಿಸುವ ಬಂಕಿಮಚಂದ್ರರ ಹೋಲಿಕೆಯಾಗಲೀ, ಅದೇ ಷೇಕ್ಸ್‌ಪಿಯರ್‌ನ, 'ದಿ ವಿಂಟರ್ಸ್ ಟೇಲ್'ನ ಹರ್ಮಿಯೋನಳ ಪಾತ್ರದೊಡನೆ, ಶಕುಂತಲೆಯನ್ನು ಹೋಲಿಸುವ ಪ್ರೊ. ಎಸ್. ವಿ. ರಂಗಣ್ಣನವರ ಹೋಲಿಕೆಯಾಗಲಿ, ಕಲಾತ್ಮಕ ವಿಮರ್ಶೆ ಎನಿಸಲಿಕ್ಕೆ ಸಾಧ್ಯವಿರುವಂತಿಲ್ಲ.

ಎಷ್ಟೋ ಸಂದರ್ಭಗಳಲ್ಲಿ ವಿಮರ್ಶಕರು ಮೂಲಕೃತಿಯಲ್ಲಿಲ್ಲದ್ದನ್ನು ಆರೋಪಿಸಿ ವ್ಯಾಖ್ಯಾನಿಸುತ್ತಾರೆ ಎಂಬುದಕ್ಕೆ ಜಿಎಸೆಸ್ ಒಂದು ಉತ್ತಮ ನಿದರ್ಶನವನ್ನು ಕೊಡುತ್ತಾರೆ. ಇಡೀ ರಾಮಾಯಣವನ್ನು ಒಂದು ಸಂಕೇತವೆಂದು ಕೆಲವು ವಿಮರ್ಶಕರು ವ್ಯಾಖ್ಯಾನಿಸಿದ್ದಾರೆ. ಅವರ ಪ್ರಕಾರ "ಇದರ ಪಾತ್ರಗಳು ಒಂದೊಂದು ತತ್ವವನ್ನು ರೂಪಿಸತಕ್ಕ ಕಲ್ಪನೆಗಳು. ಇದರ ಕಥೆ ಆತ್ಮದ ಚರಿತ್ರೆಯನ್ನು ಹೇಳುವ ಕಟ್ಟುಕಥೆ. ದಶರಥನೆಂದರೆ ಪ್ರಪಂಚದ ಐಶ್ವರ್ಯ; ಸೀತೆ ಜೀವಾತ್ಮ; ರಾವಣನು ಜೀವಾತ್ಮವನ್ನು ಸೆರೆಮಾಡಿಕೊಳ್ಳುವ ಹತ್ತು ಕರಣಗಳ ದೇಹ; ಪರಮಾತ್ಮನು ಈ ಇಂದ್ರಿಯಗಳನ್ನು ನಿಗ್ರಹಮಾಡಿ, ಜೀವಾತ್ಮನನ್ನು ಉಳಿಸಿಕೊಳ್ಳುತ್ತಾನೆ. ಅಯೋಧ್ಯೆ ಉಸಿರು ಯೋಗದಿಂದ ಮುಟ್ಟಬೇಕಾದ ಬ್ರಹ್ಮಸ್ಥಲ; ಲಂಕೆ ದೇಹದ ಕೆಳಭಾಗ ದಲ್ಲಿರುವ ಒಂದು ಸ್ಥಾನ; ರಾಮನೂ ಸೀತೆಯೂ ಅಯೋಧ್ಯೆಯಿಂದ ಕಾಡಿಗೂ ಲಂಕೆಗೂ ಹೋಗುವುದೂ, ಲಂಕೆಯಿಂದ ಹಿಂತಿರುಗಿ ಬರುವುದೂ ಯೋಗಾಭ್ಯಾಸದಲ್ಲಿ ಜೀವ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ಮತ್ತೆ ಸಿದ್ಧಿಯನ್ನು ಪಡೆಯುವ ಕ್ರಮದ ಚಿತ್ರ."[1] ರಾಮಾಯಣವನ್ನು ಕುರಿತ ಈ ವ್ಯಾಖ್ಯಾನದ ಬಗ್ಗೆ ಡಾ. ಶಿವರುದ್ರಪ್ಪನವರ ಪ್ರತಿಕ್ರಿಯೆ ಹೀಗಿದೆ: "ಮಾಸ್ತಿಯವರು ಸಂಗ್ರಹಿಸಿ ತೋರಿಸಿರುವ ಆಧ್ಯಾತ್ಮಿಕ ವಿವರಣೆಯ ಈ ನಿದರ್ಶನವನ್ನು ನೋಡಿದರೆ, ಕತೆಗೆ ಕಾಲಿಲ್ಲ ಅನ್ನುತ್ತಾರೆ; ಹಾಗೆಯೇ ವ್ಯಾಖ್ಯಾನಕ್ಕೂ ಕಾಲಿಲ್ಲ ಎನ್ನುವುದನ್ನು ಕೊಂಚ ಒಪ್ಪಿಕೊಂಡರೂ, ತಲೆಯೂ ಇಲ್ಲದಿದ್ದರೆ ಹೇಗೆ"?[2] ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾಗಿರುವ ಸಂಗತಿಯೆಂದರೆ, ರಾಮಾಯಣವನ್ನು ಕುರಿತ ಮಾಸ್ತಿಯವರ ವ್ಯಾಖ್ಯಾನ, ಅದರಲ್ಲೂ ಮುಖ್ಯವಾಗಿ "ಲಂಕೆ ದೇಹದ ಕೆಳಭಾಗದಲ್ಲಿರುವ ಒಂದು ಸ್ಥಾನ" ಎಂಬಂಥ ಮಾತುಗಳು ಕೇವಲ ಬಾಲಿಶವೆನಿಸಿದರೆ ಪರವಾಗಿರಲಿಲ್ಲ, ಬದಲಾಗಿ ಅದೊಂದು ಅಸಹ್ಯವಾದ ಕಲ್ಪನೆ ಎನಿಸಬಾರದಿತ್ತು ಎಂಬುದು ನಿಜವಿರಬಹುದು; ಆದರೆ ಪ್ರಸ್ತುತ ಗಮನಾರ್ಹವೆನಿಸುವ ಸಂಗತಿಯೆಂದರೆ ತಮಗಿಂತ ಹಿಂದಿನ ಸಾಹಿತ್ಯ ಹಾಗೂ ವಿಮರ್ಶೆಯ ಬಗ್ಗೆ, ಅದರಲ್ಲೂ ರಾಮಾಯಣದಂಥ ಮಹಾಕಾವ್ಯದ ಬಗ್ಗೆ, ಶಿವರುದ್ರಪ್ಪನವರು ತಳೆದಿರುವ ಈ ಎಚ್ಚರದ ನಿಲುವು ತಮ್ಮ ನಂತರದ ಪೀಳಿಗೆಯ ವಿಮರ್ಶನಪ್ರಜ್ಞೆಯ ಬೆಳವಣಿಗೆಗೆ ಉತ್ತಮ ಮಾರ್ಗಸೂಚಿ ಎನಿಸುತ್ತದೆ. ಇದಕ್ಕೆ ಪೂರಕವಾದ ಇನ್ನೊಂದು ನಿದರ್ಶನವನ್ನೂ ಇಲ್ಲಿ ನೋಡಬಹುದು. ಪ್ರಾಚೀನ ಭಾರತೀಯ ಕಾವ್ಯ ಹಾಗೂ ವಿಮರ್ಶೆಯ ಬಗ್ಗೆ ನವೋದಯ ತಲೆಮಾರಿನ ವಿಮರ್ಶಕ ರಾದ ಮಾಸ್ತಿಯವರ ಅಭಿಪ್ರಾಯ ಹೀಗಿದೆ: "ನಮ್ಮಲ್ಲಿ ಹಿಂದೆ ದುಷ್ಟಗ್ರಂಥಗಳು ಪ್ರಚಾರವಾಗುವುದಕ್ಕೆ ಅವಕಾಶವಿರಲಿಲ್ಲ. ಕವಿಯಾಗಬೇಕೆಂದವನು ತನ್ನ ಶಕ್ತಿಯನ್ನು

---

[1] ಮಾಸ್ತಿ ವೆಂಕಟೇಶ ಅಯ್ಯಂಗಾರ್, ಆದಿಕವಿ ವಾಲ್ಮೀಕಿ, ಪು. 226.

[2] ಡಾ. ಜಿ. ಎಸ್. ಶಿವರುದ್ರಪ್ಪ, ವಿಮರ್ಶೆಯ ಪೂರ್ವಪಶ್ಚಿಮ, ಪು. 45.

ಈ ಉಲ್ಲೇಖ ಭಾಗದ ಕೊನೆಯಲ್ಲಿರುವ ಪ್ರಶ್ನೆ ಚಿಹ್ನೆ ನನ್ನದು.

ಸಭೆಗಳ ಮುಂದೆ ಸ್ಥಾಪಿಸಬೇಕಿತ್ತು. ತಿಳಿದವರ ಸಭೆಗಳು, ಅದರಲ್ಲೂ ಇತರ ಕವಿಗಳು ಇರುತ್ತಿದ್ದಂಥವು ; ಇಂಥ ಸಭೆಗಳ ಮುಂದೆ ಬಹಳ ಒಳ್ಳೆಯ ಕಾವ್ಯವಲ್ಲದೆ ಯಾವುದೂ ಉಳಿಯುತ್ತಿರಲಿಲ್ಲ. ಇದಾದ ಮೇಲೆ ಇದು ಒಳ್ಳೆಯ ಗ್ರಂಥ, ಇದು ಅಲ್ಲ ಎಂದು ಹೇಳಬೇಕಾಗಿರಲಿಲ್ಲ......ಒಳ್ಳೆಯದಲ್ಲದ ಗ್ರಂಥಕ್ಕೆ ಉಳಿವೇ ಇಲ್ಲ......ಹೀಗೆ ಸಭೆಗಳ ನಿರ್ದಾಕ್ಷಿಣ್ಯ ತಿರಸ್ಕಾರದಿಂದಲೂ, ಪ್ರತಿಗಳನ್ನು ಮಾಡುವುದರಲ್ಲಿದ್ದ ಕಷ್ಟಗಳಿಂದಲೂ ಒಳ್ಳೆಯ ಗ್ರಂಥಗಳು ಮಾತ್ರ ಪ್ರಾಚುರ್ಯಕ್ಕೆ ಬಂದು, ಜನರಲ್ಲಿ ಒಳ್ಳೆಯ ಗ್ರಂಥಗಳ ಸ್ವಾರಸ್ಯವನ್ನು ತಿಳಿಯುವ ಶಕ್ತಿ ಹಬ್ಬಿದ್ದರಿಂದ ಅಸಾಧು ಪ್ರವೃತ್ತಿಗಳನ್ನು ತಿದ್ದುವುದಕ್ಕಾಗಿ ವಿಮರ್ಶೆ ಬೇಕಾಗಿರಲಿಲ್ಲ. ಈ ಕಾರಣಗಳಿಂದ ಹಿಂದೆ ನಮ್ಮ ಸಾಹಿತ್ಯದಲ್ಲಿ ಕವಿಗೆ ಬೇಕಾದ ಲಕ್ಷಣ ಗ್ರಂಥಗಳ ವಿನಾ ಇತರ ರೀತಿಯ ಸಾಹಿತ್ಯ ವಿಮರ್ಶೆಯ ಗ್ರಂಥಗಳು ನಿರ್ಮಾಣವಾಗಲಿಲ್ಲ."[1] ಮಾಸ್ತಿಯವರ ಈ ಅಭಿಪ್ರಾಯವನ್ನು ಡಾ. ಶಿವರುದ್ರಪ್ಪನವರು ಈ ರೀತಿ ಪ್ರತಿಕ್ರಿಯಿಸುತ್ತಾರೆ: "ಈ ಹೇಳಿಕೆಯಲ್ಲಿ ಗಮನಾರ್ಹವಾದ ಕೆಲವು ಅಂಶಗಳಿವೆ. ಮೊದಲನೆಯದಾಗಿ ಕಂಠವನ್ನು ಹಿಡಿದು ಓಲೆಗರಿಯ ಮೇಲೆ ಬರೆಯುವುದೇ ದುಸ್ತರವಾದ ಕೆಲಸ; ಇದರಿಂದ ಕೃತಿರಚನೆಗೆ ಒಂದು ಬಗೆಯ ಮಿತಿ ಉಂಟಾಗುತ್ತಿತ್ತು. ಎರಡನೆಯದಾಗಿ ಪಂಡಿತರ ಸಭೆಗಳಲ್ಲಿ ಅವುಗಳನ್ನೋದಿ ಅಲ್ಲಿ ಸಿಫಾರಸು ಪಡೆದು ಜನತೆಯ ಮುಂದೆ ಬರುವಲ್ಲಿ ಸಾಕಷ್ಟು ಜರಡಿ ಹಿಡಿಯುವ ಕೆಲಸ ನಡೆಯುತ್ತಿತ್ತು. ಆದರೆ 'ಇಂಥ ಸಭೆಗಳ ಮುಂದೆ ಬಂದ ಒಳ್ಳೆಯ ಕಾವ್ಯವಲ್ಲದೆ ಯಾವುದೂ ಉಳಿಯುತ್ತಿರಲಿಲ್ಲ' ಎನ್ನುವ ಮಾತೂ 'ಜನಕ್ಕೆ ಇದು ಒಳ್ಳೆಯ ಗ್ರಂಥ, ಇದು ಅಲ್ಲ ಎಂದು ಹೇಳಬೇಕಾಗಿರಲಿಲ್ಲ' ಎನ್ನುವ ಮಾತೂ ಚರ್ಚಾಸ್ಪದವಾದುವು. ಪಂಡಿತ ಮಂಡಲಿಯ ಮುಂದೆ ಕಾವ್ಯಗಳು ಅವರ ಅಂಗೀಕಾರದ ಮುದ್ರೆಯನ್ನು ಪಡೆಯಬೇಕಾಗಿದ್ದುದು ನಿಜ; ಆದರೆ ಪಂಡಿತ ಮಂಡಲಿಯ ಮೂಲಕ ಬಂದ ಕಾವ್ಯಗಳೆಲ್ಲವೂ ಒಳ್ಳೆಯ ಕಾವ್ಯವೇ ಎಂದೂ, ಒಳ್ಳೆಯದಲ್ಲದ ಕಾವ್ಯ ಯಾವುದೂ ಉಳಿಯುತ್ತಲೇ ಇರಲಿಲ್ಲವಾದ ಕಾರಣ ಉಳಿದಿರುವುದೆಲ್ಲಾ ಒಳ್ಳೆಯ ಕಾವ್ಯವೇ ಎಂದೂ ಹೇಳುವ ಧೈರ್ಯ ನಮಗಿಲ್ಲ. ಸಂಪ್ರದಾಯನಿಷ್ಠವಲ್ಲದ ರೀತಿಯಲ್ಲಿ ಬರೆಯಬಲ್ಲಂಥ ಸ್ವತಂತ್ರ ಕವಿಗಳೇನಾದರೂ ಇದ್ದಿದ್ದ ಪಕ್ಷದಲ್ಲಿ ಅಂಥವರ ಎಷ್ಟೋ ಒಳ್ಳೆಯ ಕೃತಿಗೂ ಈ ಸಭೆಗಳ ನಿರ್ಣಯದಿಂದ ಉಳಿಗಾಲವಿಲ್ಲದೆ ಹೋಗಿರುವ ಸಂಭವವೂ ಇದ್ದಿರಬಹುದು. ಸಾವಿರ ವರ್ಷಗಳ ಹಳಗನ್ನಡ ಗ್ರಂಥ ಸಮುದಾಯವನ್ನು ನೋಡಿದರೆ 'ಒಳ್ಳೆಯದಲ್ಲದ ಕಾವ್ಯ ಯಾವುದೂ ಉಳಿಯುತ್ತಲೇ ಇರಲಿಲ್ಲ' ಎನ್ನುವ ಮಾತನ್ನು ನುಂಗುವುದು ಕಷ್ಟವಾಗುತ್ತದೆ."[2] ಅಂತೆಯೇ, ಈಗಾಗಲೇ ಸೂಚಿಸಿರುವಂತೆ ಜಿಎಸೆಸ್‌ರವರ ಈ ಪ್ರತಿಕ್ರಿಯೆಯಲ್ಲಿ ಗಮನಿಸಬೇಕಾದ ಸಂಗತಿಗಳೆಂದರೆ, ಮೊದಲನೆಯದಾಗಿ,

---

[1] ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿಮರ್ಶೆ—1, ಪು. 2—3.

[2] ಡಾ. ಜಿ. ಎಸ್. ಶಿವರುದ್ರಪ್ಪ. ವಿಮರ್ಶೆಯ ಪೂರ್ವಪಶ್ಚಿಮ, ಪು. 33—4.

ಡಾ.ಜಿಎಸೆಸ್‌ರವರ ವಿಮರ್ಶನ ಪ್ರಜ್ಞೆ,ಮಾಸ್ತಿಯವರ ಕಾಲದವರೆಗೂ ಬೆಳೆದುಬಂದಿದ್ದ ಕಾವ್ಯ ಸಂಪ್ರದಾಯ ಹಾಗೂ ವಿಮರ್ಶನ ಧೋರಣೆಯನ್ನು ಮೀರಿ ಮುನ್ನಡೆದಿರುವ ಸ್ಪಷ್ಟ ಸೂಚನೆಯಿದೆ. ಎರಡನೆಯದಾಗಿ, ಕಾವ್ಯಸೃಷ್ಟಿಯೂ ವಿಮರ್ಶನಪ್ರಜ್ಞೆಯೂ ಪಂಡಿತ ಮಂಡಲಿಗಳ ಮುಂದೆ ಪೆರೇಡ್ ಮಾಡುವುದರಿಂದಲ್ಲದೆ, ಕವಿಚೇತನವೆಂಬುದು ಸ್ವತಂತ್ರ ಪರಿಸರದಲ್ಲಿ ವಿಕಸನಗೊಳ್ಳುವುದರಿಂದ ಮಾತ್ರ ಒಂದು ಯಶಸ್ವಿಯಾದ ಕಲಾತ್ಮಕ ಕೃತಿನಿರ್ಮಾಣ ಸಾಧ್ಯವೆಂಬ ಸ್ಪಷ್ಟ ಧ್ವನಿ ಜಿಎಸೆಸ್‌ರವರ ಪ್ರತಿಕ್ರಿಯೆಯಲ್ಲಿದೆ. ಮೂರನೆಯ ಅಂಶವೆಂದರೆ, ಸುಮಾರು 1961ರ ಅವಧಿಯಲ್ಲಿ ಈ ನಿಲುವು ತಳೆದ ಶಿವರುದ್ರಪ್ಪನವರ ವಿಮರ್ಶನ ಪ್ರಜ್ಞೆ ಪ್ರಾಚೀನ ಹಾಗೂ ಆಧುನಿಕ ಕಾವ್ಯ ಸಂಪ್ರದಾಯಗಳು, ಮೀಮಾಂಸೆ, ಅಲಂಕಾರವೇ ಮೊದಲಾಗಿ ಹಲವು ಹತ್ತು ಮುಖಗಳಲ್ಲಿ ಜಿಜ್ಞಾಸೆಯಾಗಿ ಹರಿದಿರುವುದನ್ನು ಅವರ ಇತ್ತೀಚಿನ ವಿಮರ್ಶೆಯ ಪುಟಗಳಲ್ಲಿ ಕಾಣಬಹುದಾಗಿದೆ.

ಹೀಗೆ, ನವೋದಯ ಕಾವ್ಯಸಮಸ್ತದ ಅಭಿವ್ಯಕ್ತಿಯನ್ನು ಪರಿಶೀಲಿಸಿರುವ ಡಾ. ಜಿ. ಎಸ್. ಶಿವರುದ್ರಪ್ಪನವರು, 1965ರ ತಮ್ಮ ಮಹಾಪ್ರಬಂಧದಲ್ಲಿ, ನವೋದಯ ಕಾವ್ಯಾಭಿವ್ಯಕ್ತಿಯಲ್ಲಿನ ಸೌಂದರ್ಯಾನುಭವವನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ.[1] ಅಂದರೆ ಈ ಹಂತದಲ್ಲಿ ಕೇವಲ ಸೌಂದರ್ಯಾನುಭವದ ಜಿಜ್ಞಾಸೆಗೆ ಮಾತ್ರ ಒಳಗಾಗಿರುವ ನವೋದಯ ಕಾವ್ಯ, 1976ರ ವೇಳೆಗೆ ಅದರ ಐತಿಹಾಸಿಕತೆ, ಅದು ಪಡೆದುಕೊಂಡ ಮೂಲ ಪ್ರೇರಣೆಗಳು ಹಾಗೂ ಅದರ ಸಾಹಿತ್ಯಿಕ ಮೌಲ್ಯದ ಸ್ವರೂಪ ಮುಂತಾದವನ್ನು ಸೈದ್ಧಾಂತಿಕವಾಗಿ ಪರಿಶೀಲಿಸಿರುವುದನ್ನು ಕಾಣಬಹುದಾಗಿದೆ. ಅದರಲ್ಲೂ ಮುಖ್ಯವಾಗಿ ಕುವೆಂಪು ಮತ್ತು ಬೇಂದ್ರೆಯವರ ಕಾವ್ಯ ಸಾಧನೆಯ ಏಳುಬೀಳುಗಳನ್ನು ತುಂಬಾ ಸ್ಪಷ್ಟವಾದ ಮಾತುಗಳಲ್ಲಿ ವಿಶ್ಲೇಷಿಸಿರುವುದನ್ನು ಅವರ 'ನವೋದಯ' ಸಂಕಲನದಲ್ಲಿ ಕಾಣಬಹುದಾಗಿದೆ. ಕುವೆಂಪುರವರ ಕವಿತೆಗಳ ವಸ್ತು ಹಾಗೂ ಅಭಿವ್ಯಕ್ತಿ ಕೌಶಲವನ್ನು ಕುರಿತು ಡಾ. ಜಿಎಸೆಸ್ ಹೀಗೆನ್ನುತ್ತಾರೆ: "ಇವರ ಕವಿತೆಗಳಲ್ಲಿ ಅನುಭವವನ್ನು ಹರಳುಗೊಳಿಸುವ ಕ್ರಿಯೆಗಿಂತ ಒಮ್ಮೊಮ್ಮೆ ವಾಚ್ಯ ವಿವರಣೆಯಾಗುವ ಕವಿತೆಯ ಒಡಲಲ್ಲೆ ಒಂದೊ ಎರಡೊ ಮೂರೊ ತೀರಾ ಸೊಗಸಾದ ಪಂಕ್ತಿಗಳಿದ್ದು, ಅವುಗಳಿಗಾಗಿ ಇಡೀ ಕವಿತೆಯನ್ನು ಜೋಪಾನವಾಗಿಡಬೇಕಾಗುತ್ತದೆ—ಹತ್ತಿಯ ಸೀರೆಯಲ್ಲಿರುವ ಜರತಾರಿ ಅಂಚಿನಿಂದಲೋ, ಚಿತ್ರದಿಂದಲೋ ಅದನ್ನು ಒಪ್ಪಿಕೊಳ್ಳುವಂತೆ. ಕುವೆಂಪು ಅವರ ಶೈಲಿ ಮೂಲತಃ ಕಥನ ಕಾವ್ಯಕ್ಕೆ ಹೇಳಿ ಮಾಡಿಸಿದ್ದೇ ಹೊರತು ಭಾವಗೀತೆಗಳಿಗಲ್ಲ....ನಮಗೆ ತೋರುವಮಟ್ಟಿಗೆ ಅವರ ಭಾವಗೀತೆಗಳೆಲ್ಲಾ ಅವರ ಮಹಾಕಾವ್ಯರಚನೆಗೆ ನಡೆದ ಪೂರ್ವಸಿದ್ಧತೆಗಳಂತೆ ತೋರುತ್ತವೆ."[2] ಹಾಗೆಯೇ ತನ್ನ ಪಾಡನ್ನು ಹಾಡನ್ನಾಗಿ

[1] ಡಾ. ಜಿ. ಎಸ್. ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ಪು. 275—366.

[2] ಡಾ. ಜಿ. ಎಸ್. ಶಿವರುದ್ರಪ್ಪ. ನವೋದಯ, ಪು. 163—4.

ನೀಡಿದ ಬೇಂದ್ರೆಯವರ ಕಾವ್ಯದ ಮೂಲದ್ರವ್ಯವನ್ನೂ, ಕನ್ನಡದಲ್ಲಿ ಆಧುನಿಕ ವಿಮರ್ಶೆಯನ್ನು ಆರಂಭಿಸಿದ ಮಾಸ್ತಿಯವರ ವಿಮರ್ಶೆಯ ಐತಿಹಾಸಿಕ ಮಹತ್ವವನ್ನೂ ವಿಮರ್ಶಕರಾಗಿ ಡಾ. ಶಿವರುದ್ರಪ್ಪನವರು ತುಂಬಾ ಎಚ್ಚರದಿಂದ ದಾಖಲು ಮಾಡಿದ್ದಾರೆ.[1] ಅಂದರೆ, ಪ್ರಾಚೀನ ಮೀಮಾಂಸೆಯ ಹಿನ್ನೆಲೆ ಹಾಗೂ ಆಧುನಿಕ ವಿಮರ್ಶೆಯ ತಿಳುವಳಿಕೆಯಿಂದ ನವೋದಯ ಕವಿಗಳ ಸಾಹಿತ್ಯ ಸಮಸ್ತದ ಬಗೆಗೆ ತಾತ್ವಿಕ ಜಿಜ್ಞಾಸೆಯನ್ನು ಆರಂಭಿಸಿದ ಇಂದಿಗೆ ಹಿರಿಯ ತಲೆಮಾರಿನವರಾದ ವಿಮರ್ಶಕರಲ್ಲಿ ಬಹಶಃ ಡಾ. ಜಿಎಸೆಸ್ ಮುಖ್ಯರಾದವರೆಂದು ತೋರುತ್ತದೆ. ನವೋದಯದ ಆರಂಭಪುರುಷರಾದ ಬಿ. ಎಂ. ಶ್ರೀ. ಯವರ 'ಇಂಗ್ಲಿಷ್ ಗೀತೆಗಳ' ಬಗ್ಗೆ ಡಾ. ಶಿವರುದ್ರಪ್ಪನವರು ದಾಖಲೆ ಮಾಡಿರುವ ಕೆಲವು ಐತಿಹಾಸಿಕ ಮಹತ್ವವುಳ್ಳ ಮಾತುಗಳನ್ನು ಇಲ್ಲಿ ನಮೂದಿಸಲೇಬೇಕೆಂದು ತೋರುತ್ತದೆ. "ಶ್ರೀಯವರು ಮಾಡಿದ್ದೆಲ್ಲ ಅನುವಾದವೆಂದೂ, ಅವರು ಅನುವಾದಕ್ಕೆ ಸರಿಯಾದ ಕವಿತೆಗಳನ್ನಾರಿಸಿಕೊಳ್ಳದೆ, ಎಂಥೆಂಥವನ್ನೋ ಆರಿಸಿಕೊಂಡು, ತಮಗೆ ಒಳ್ಳೆಯ ಅಭಿರುಚಿ ಇಲ್ಲವೆಂಬುದನ್ನು ಪ್ರಕಟಿಸಿದ್ದಾರೆ ಎಂದೂ ಇತ್ತೀಚೆಗೆ ಒಬ್ಬರು ಕೊಂಕು ಮಾತನಾಡಿದ್ದಾರೆ. ಆದರೆ ನಮ್ಮ ಅಭಿಪ್ರಾಯದಲ್ಲಿ ಶ್ರೀಯವರು ಮೂಲತಃ ಅನುವಾದಕರಲ್ಲ. ಇಂಗ್ಲಿಷಿನ ಕವಿತೆಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕೆಂಬ ಉದ್ದೇಶದಿಂದ ಹೊರಟವರಲ್ಲ. ಅವರ ಇಂಗ್ಲಿಷ್ ಕವನಗಳೆಲ್ಲಾ ಬಹುಮಟ್ಟಿಗೆ ಅನುವಾದಗಳೇ ಅಲ್ಲ. ಆದ್ದರಿಂದ ಅನುವಾದಕ್ಕೆ ಆರಿಸಿಕೊಂಡ ಪದ್ಯಗಳ ಮೇಲಿಂದ ಅವರ ಅಭಿರುಚಿಯನ್ನು ಕುರಿತು ತೀರ್ಪು ಕೊಡುವುದು ಸರಿಯಾದುದಲ್ಲ. ಅವರ ಉದ್ದೇಶ ನಮಗೆ ತೋರುವಮಟ್ಟಿಗೆ, ಇಂಗ್ಲೀಷ್ ಕಾವ್ಯದ ಕೆಲವು ಕವಿಗಳ ಪದ್ಯಗಳನ್ನು–ನಾಳೆ ನಮ್ಮ ಅಭಿರುಚಿಯನ್ನು ಪ್ರಶ್ನಿಸಿಬಿಟ್ಟಾರು ಎಂಬ ಭಯವಿಲ್ಲದೆ–ತಾವು ಹೊಸಗನ್ನಡದಲ್ಲಿ ಹೊಸರೂಪಗಳನ್ನು ಸಿದ್ಧಪಡಿಸುವ ಸಲುವಾಗಿ, ರೂಪಾಂತರಕ್ಕೆ ಒಗ್ಗುವಂಥ ಪದ್ಯಗಳನ್ನು ಆರಿಸಿಕೊಂಡರೇ ಹೊರತಾಗಿ, ತಾವು ಅತ್ಯುತ್ತಮವಾದ ಪದ್ಯಗಳನ್ನು ಇಂಗ್ಲಿಷ್‌ನಿಂದ ಆರಿಸಿಕೊಂಡು, ಅತ್ಯುತ್ತಮ ರೀತಿಯಲ್ಲಿ ಅನುವಾದ ಮಾಡಿ, ತಮ್ಮ ಅತ್ಯುತ್ತಮವಾದ ಅಭಿರುಚಿಯನ್ನು ಪ್ರದರ್ಶಿಸುವ ಸಲುವಾಗಿ ಈ ಕಾರ್ಯವನ್ನು ಕೈಗೊಳ್ಳಲಿಲ್ಲ. ಅವರಿಗೆ ಅಂದು ಇದ್ದ ಸಮಸ್ಯೆ ಮುಖ್ಯವಾಗಿ ಕನ್ನಡದಲ್ಲಿ ಹೊಸ ರೂಪಗಳನ್ನು ಆವಿಷ್ಕಾರ ಮಾಡುವುದೇ ಹೊರತು, ಅತ್ಯುತ್ತಮ ಅನುವಾದ ಮಾಡುವುದಲ್ಲ."[2] ಅಂದರೆ ಶ್ರೀಯವರ 'ಇಂಗ್ಲಿಷ್ ಗೀತೆಗಳು' ಸಂಕಲನವನ್ನು ಕುರಿತು ಈವರೆಗೆ ಹಲವಾರು ವಿದ್ವಾಂಸರು ಹಲವಾರು ಸಂದರ್ಭಗಳಲ್ಲಿ ಹಲವು

---

[1] ಅದೇ. 'ಕಾವ್ಯಸೃಷ್ಟಿ — ಬೇಂದ್ರೆಯವರ ದೃಷ್ಟಿ,' ಪು. 116—26 ಮತ್ತು 'ಮಾಸ್ತಿಯವರ ವಿಮರ್ಶೆ,' ಪು. 127—40.

[2] ಡಾ. ಜಿ. ಎಸ್. ಶಿವರುದ್ರಪ್ಪ, ನವೋದಯ, ಪು. 44—5.

ಬಗೆಯಾಗಿ ಪ್ರತಿಕ್ರಿಯಿಸಿರುವುದನ್ನು ಕಾಣಬಹುದಾದರೂ ಅದರಲ್ಲಿ ಪ್ರಯೋಗಿಸಲಾದ ಹೊಸಗನ್ನಡ ಛಂದೋರೂಪದ ಆವಿಷ್ಕಾರವನ್ನೂ, ಆ ಸಂಕಲನದ ಐತಿಹಾಸಿಕ ಮಹತ್ವವನ್ನೂ ಕುರಿತು ಬಹುಶಃ ಶಿವರುದ್ರಪ್ಪನವರಷ್ಟು ಮನವೊಪ್ಪುವಂತೆ ಅಭಿಪ್ರಾಯಿಸಿರುವುದು ಕಂಡುಬರುವುದಿಲ್ಲ. ಹಾಗೆಯೇ ಇದೇ ಸಂದರ್ಭದಲ್ಲಿ ನಮೂದಿಸಬಹುದಾದ ಇನ್ನೊಂದು ಮುಖ್ಯ ಸಂಗತಿಯೆಂದರೆ, ನವೋದಯದ ಗಣ್ಯರೆನಿಸಿದ ಪುಟ್ಟಪ್ಪ, ಬೇಂದ್ರೆಯವರನ್ನು ಮಾತ್ರವಲ್ಲದೆ, ಬಿ. ಎಂ. ಶ್ರೀ., ಗೋವಿಂದಪೈಗಳಿಂದ ಹಿಡಿದು ‘ಉಪ್ಪುಗಡಲು’ ‘ಇಂದ್ರಚಾಪ’ಗಳ ಎಸ್. ವಿ. ಪರಮೇಶ್ವರ ಭಟ್ಟರವರೆಗೂ ಅವರು ಆಡಿರುವ ಅತ್ಯಂತ ಎಚ್ಚರದ ಮಾತುಗಳನ್ನು ನೋಡಿದರೆ, ಶಿವರುದ್ರಪ್ಪನವರ ಐತಿಹಾಸಿಕ ದೃಷ್ಟಿಯ ಸಮತೋಲನ ಹಾಗೂ ವಿಮರ್ಶನ ಪ್ರಜ್ಞೆಯ ನಿಷ್ಪಕ್ಷಪಾತ ಧೋರಣೆಯ ಅರಿವಾಗುತ್ತದೆ.

ಜಿಎಸೆಸ್‌ರವರ ವಿಮರ್ಶನಪ್ರಜ್ಞೆ ಕಾಲಕಾಲಕ್ಕೆ ಹಂತಹಂತದ ಬೆಳವಣಿಗೆಯನ್ನೂ ಆ ಬೆಳವಣಿಗೆಯಲ್ಲಿ ವೈವಿಧ್ಯತೆಯನ್ನೂ ಹೊಂದುತ್ತ ನಡೆದಿದೆ ಎಂಬ ಮಾತನ್ನು ಆರಂಭದಲ್ಲೇ ಸೂಚಿಸಲಾಗಿದೆ. ಅದಕ್ಕೊಂದು ನಿದರ್ಶನವನ್ನು ಇಲ್ಲಿ ನಿರೂಪಿಸಬಹುದು. ಕೃತಿಯ ಬಗೆಗಿನ ವಿಮರ್ಶಕನ ತೀರ್ಪನ್ನು ಕುರಿತು ಡಾ. ಜಿಎಸೆಸ್ “ವಿಮರ್ಶೆ ಎಷ್ಟಾದರೂ ವೈಯಕ್ತಿಕವೂ ಕೊಂಚಮಟ್ಟಿಗೆ ಭಾವನಿಷ್ಠವೂ ಆಗದೆ ಇರಲು ಸಾಧ್ಯವಿಲ್ಲ. ಇದರ ಮೇಲೆ ವಿಮರ್ಶಕನೂ ಒಬ್ಬ ಮನುಷ್ಯ; ಆತ ಯಂತ್ರವಲ್ಲ. ಆದಕಾರಣ ಅಲ್ಪಸ್ವಲ್ಪ ದೋಷಗಳೂ ಆಗುವುದುಂಟು. ಅಷ್ಟೇ ಅಲ್ಲ, ಎಲ್ಲ ಕಾಲಗಳಲ್ಲಿಯೂ ವಿಮರ್ಶಕರ ತೀರ್ಪು ಸಮರ್ಪಕವಾಗಿಯೇ ಇರುತ್ತದೆಂದು ಹೇಳಲಾಗುವುದಿಲ್ಲ. ಎಂಥಾ ಶ್ರೇಷ್ಠ ವಿಮರ್ಶಕರೂ ಸದಾ ಸಮರ್ಪಕವಾದ ತೀರ್ಪನ್ನು ಕೊಡುವಂಥ ‘ವರ’ವನ್ನೇನೂ ಪಡೆದುಕೊಂಡು ಬಂದಿರುವುದಿಲ್ಲ. ಒಮ್ಮೊಮ್ಮೆ ಅವರ ತೀರ್ಪು ತಪ್ಪಾಗಿದ್ದರೆ ಅವರ ಮಹತ್ತೇನೂ ಸೂರೆಹೋಗುವುದಿಲ್ಲ.”[1] “ಅಲ್ಲದೆ ಪ್ರತಿಯೊಬ್ಬ ವಿಮರ್ಶಕನಿಗೂ ತನ್ನ ಮಾತನ್ನು ಎತ್ತಿಹೇಳುವ ಹಕ್ಕಿದೆ. ಒಂದು ವೇಳೆ ಅವನ ವಿಮರ್ಶೆಯಲ್ಲೇನಾದರೂ ತಪ್ಪಿದ್ದರೆ ಕಾಲಕ್ರಮದಲ್ಲಿ ಅವರೇ ತಿದ್ದಿಕೊಳ್ಳಬಹುದು”[2] ಎಂದು ಬರೆಯುತ್ತಾರೆ. ಈ ಉಲ್ಲೇಖದಲ್ಲಿ ಪ್ರಾಯಶಃ ಬಹುಮುಖ್ಯವೆನಿಸುವ ಎರಡು ಸಂಗತಿಗಳಿರುವಂತೆ ತೋರುತ್ತದೆ. ಮೊದಲನೆಯದಾಗಿ, ವಿಮರ್ಶಕನಿಗಿರಬೇಕಾದ ನಿರಂತರ ಅಧ್ಯಯನಶೀಲ ಪ್ರವೃತ್ತಿ ಹಾಗೂ ಕೃತಿ ಪರಿಶೀಲನೆಯಲ್ಲಿರಬೇಕಾದ ಸಹಾನುಭೂತಿ. ಎರಡನೆಯದಾಗಿ “ಒಂದು ವೇಳೆ ಅವನ ವಿಮರ್ಶೆಯಲ್ಲೇನಾದರೂ ತಪ್ಪಿದ್ದರೆ ಕಾಲಕ್ರಮದಲ್ಲಿ ಅವನೇ ತಿದ್ದಿಕೊಳ್ಳಬಹುದು” ಎಂಬ ಅವರ ಮಾತು ಒಂದು ಉತ್ತಮ ಧೋರಣೆಯಾಗಿ

---

[1] *Cassel's Encylopaedia of Literature*, p. 137.

[2] ಡಾ. ಜಿ. ಎಸ್. ಶಿವರುದ್ರಪ್ಪ, ವಿಮರ್ಶೆಯ ಪೂರ್ವಪಶ್ಚಿಮ, ಪು.144.

ಡಾ. ಶಿವರುದ್ರಪ್ಪನವರನ್ನು ಅದು ಬಹಳ ಕಾಲ ತುಂಬಾ ಅರ್ಥಪೂರ್ಣವಾಗಿ ಮುನ್ನಡೆಸಿರಬೇಕೆಂಬುದನ್ನು ಅವರ ವಿಮರ್ಶೆಯ ಬೆಳವಣಿಗೆಯಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ, ರಾಘವಾಂಕನ 'ಹರಿಶ್ಚಂದ್ರ ಕಾವ್ಯ ಸಂಗ್ರಹ'ವನ್ನು ಕುರಿತು, 1967ರಲ್ಲಿ ತಾವು ಬರೆದ ಎಷ್ಟೋ ಅಭಿಪ್ರಾಯಗಳನ್ನು,[1] 1976ರಲ್ಲಿ ಅದೇ ಕಾವ್ಯವನ್ನು ಸಮಗ್ರವಾಗಿ ವಿಶ್ಲೇಷಿಸುವಾಗ, ತಿದ್ದಿಕೊಂಡಿರುವುದನ್ನು ಕಾಣಬಹುದಾಗಿದೆ.[2] ಈ ಬಗೆಯ ಇನ್ನೊಂದು ನಿದರ್ಶನವೆಂದರೆ, ಈಗಾಗಲೇ ಸೂಚಿಸಿರುವಂತೆ ಪ್ರಾಚೀನ ಭಾರತೀಯ ಕಾವ್ಯ ಹಾಗೂ ವಿಮರ್ಶೆಯ ಬಗೆಗಿನ ಮಾಸ್ತಿಯವರ[3] ಅಭಿಪ್ರಾಯವನ್ನು ಕುರಿತು 1961ರಲ್ಲಿ[4] ಡಾ. ಜಿಎಸೆಸ್ ರೂಪಿಸಿಕೊಂಡಿಸಿರುವ ತಮ್ಮ ಪ್ರತಿಕ್ರಿಯೆಯನ್ನು 1976ರ ವರೆಗೂ[5] ನಿರಂತರವಾಗಿ ಮುನ್ನಡೆಸಿರುವುದು ಕೂಡ ಒಂದು ಅರ್ಥಪೂರ್ಣವಾದ ಬೆಳವಣಿಗೆಯೇ ಎನಿಸುತ್ತದೆ.

ಬಹುಶಃ ಇದುವರೆಗೆ ಡಾ. ಶಿವರುದ್ರಪ್ಪನವರ ವಿಮರ್ಶನಪ್ರಜ್ಞೆಯ ಬೆಳವಣಿಗೆಯಲ್ಲಿ ಕೇವಲ ಮೆಚ್ಚಿಕೆಯಾದ ಕೆಲವು ಅಭಿಪ್ರಾಯಗಳನ್ನು ಮಾತ್ರ ಚರ್ಚಿಸಿದಂತಾಗಿದೆ. ಅಂದರೆ ಅಷ್ಟಾಗಿ ನಮಗೆ ಒಪ್ಪಲಿಕ್ಕೆ ಸಾಧ್ಯವಾಗದಂಥ ಅಭಿಪ್ರಾಯಗಳು ಕೂಡ ಅವರ ವಿಮರ್ಶೆಯಲ್ಲಿ ಇವೆಯೆಂಬುದನ್ನು, ಇಲ್ಲಿ ಸೂಚಿಸುವುದಕ್ಕೆ ಎರಡು ಕಾರಣಗಳು. ಕೃತಿ ವಿಮರ್ಶೆಯಲ್ಲಿ ಅವರು ತಳೆದ ನಿಲುವನ್ನು ಒಪ್ಪಲಿಕ್ಕೆ ಸಾಧ್ಯವಾಗದೇ ಹೋಗುವುದಕ್ಕೆ, ಆ ಕೃತಿಯೊಳಗೇ ಕಾರಣಗಳನ್ನು ಕಂಡುಕೊಳ್ಳುವುದು ಒಂದಾದರೆ, ಈ ಬಗೆಯ ಚರ್ಚೆಗೆ ಆಸ್ಪದವಿರುವ ಅವರ ನಿಲುವು ಅವರ ವಿಮರ್ಶನ ಪ್ರಜ್ಞೆಯ ಬೆಳವಣಿಗೆಯಲ್ಲಿನ ವೈವಿಧ್ಯತೆಗೂ ಕಾರಣವಾಗಿದೆ ಎಂಬುದು ಇನ್ನೊಂದು. ಅಂತೆಯೇ ಆ ಬಗೆಯ ಎರಡು ನಿದರ್ಶನಗಳನ್ನು ಇಲ್ಲಿ ಪ್ರಸ್ತುತ ಪಡಿಸಬಹುದು. ಕವಿಕೃತಿಯ ಪರಿಶೀಲನೆಯಲ್ಲಿ ತೊಡಗುವ ವಿಮರ್ಶಕನ ಧೋರಣೆಯನ್ನು ಕುರಿತು "ಕವಿ ಹಾಗೆ ಬರೆಯಬೇಕಾಗಿತ್ತು, ಹೀಗೆ ಬರೆಯಬೇಕಾಗಿತ್ತು ಎಂಬ ಆಕ್ಷೇಪಣೆಗಳನ್ನು ಹಾಕುವುದು ಇಲ್ಲಿ ಅನುಚಿತ. ಏಕೆಂದರೆ ಕೃತಿ ಆಗಲೇ ರಚಿತವಾಗಿ ಮುಗಿದಿದೆ. ಅವನ್ನು ತನ್ನ ಮುಂದಿಟ್ಟುಕೊಂಡು ವಿಮರ್ಶಿಸುವಾಗ 'ನಾನು ಅದೇ ಕೃತಿಯನ್ನು ಬರೆಯುತ್ತಿದ್ದರೆ ಹೇಗೆ ಬರೆಯುತ್ತಿದ್ದೆನೋ ಹಾಗೆ ಈ ಕವಿ ಬರೆದಿಲ್ಲ'ವೆಂದು ಕೃತಿಯನ್ನು ಆಕ್ಷೇಪಿಸುವುದು ಸರಿಯಲ್ಲ, ಸಾಧುವೂ ಅಲ್ಲ"[6] ಎನ್ನುತ್ತಾರೆ.

---

1 ಡಾ. ಜಿ. ಎಸ್. ಶಿವರುದ್ರಪ್ಪ, ಪರಿಶೀಲನ, ಪು. 22—77, 1967.

2 ಡಾ. ಜಿ. ಎಸ್. ಶಿವರುದ್ರಪ್ಪ, ಅನುರಣನ, ಪು. 118, 49, 1982.

3 ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿಮರ್ಶೆ—1, ಪು. 2—3 (ಎರಡನೆಯ ಮುದ್ರಣ).

4 ಡಾ. ಜಿ. ಎಸ್. ಶಿವರುದ್ರಪ್ಪ, ವಿಮರ್ಶೆಯ ಪೂರ್ವಪಶ್ಚಿಮ, ಪು. 33—4, 1961.

5 ಡಾ. ಜಿ. ಎಸ್. ಶಿವರುದ್ರಪ್ಪ, ನವೋದಯ, ಪು. 127-40, 1976.

6 ವಿಮರ್ಶೆಯ ಪೂರ್ವಪಶ್ಚಿಮ, ಪು. 36.

ಜಿಎಸೆಸ್‌ರವರ ಈ ಅಭಿಪ್ರಾಯ ಹೊರನೋಟಕ್ಕೆ ನ್ಯಾಯಸಮ್ಮತವಾಗಿರುವಂತೆಯೇ ತೋರಿದರೂ, ಕೆಲವು ನಿರ್ದಿಷ್ಟ ಕಾರಣಗಳಿಗಾಗಿ ಇದನ್ನು ಒಪ್ಪಿಕೊಳ್ಳುವುದು ಸೂಕ್ತವೆನಿಸುವಂತಿಲ್ಲ. ಕಾರಣ, ಕೃತಿಯ ಕಲಾತ್ಮಕ ಯಶಸ್ಸಿನ ಸೋಲು ಗೆಲುವಿನ ದೃಷ್ಟಿಯಲ್ಲಿ, ಅದರಲ್ಲೂ ಮುಖ್ಯವಾಗಿ ಐತಿಹಾಸಿಕ ವಸ್ತುಗಳನ್ನು ಆಧರಿಸಿ ರಚಿತವಾಗುವ ಕೃತಿಗಳ ವಿಚಾರದಲ್ಲಂತೂ, ಜಿಎಸೆಸ್‌ರವರ ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪುವುದು ಕಷ್ಟವಾಗುತ್ತದೆ. ಏಕೆಂದರೆ, ವಾಸ್ತವ ಚರಿತ್ರೆಯನ್ನು ತಿರುಚಿ ವಿಕಾರಗೊಳಿಸಿಯೂ ಕೃತಿಯಲ್ಲೊಂದು ಕಲಾತ್ಮಕ ಯಶಸ್ಸನ್ನು ಸಾಧಿಸ ಲಾಗದೆ ಹೋದಾಗ, ಕೃತಿಕಾರನ ಆ ಸೋಲನ್ನು ಸಾಬೀತುಪಡಿಸುವುದು ಸಾಧ್ಯವಾದ ಪಕ್ಷದಲ್ಲಿ, ವಿಮರ್ಶಕನ ಆ ಯತ್ನವನ್ನು ಅಲ್ಲಗಳೆಯುವುದಾಗಲಿ, ಅಥವಾ ವಿಮರ್ಶಕ ತನ್ನದನ್ನು ಕೃತಿಯ ಮೇಲೆ ಆರೋಪಿಸಿದ್ದಾನೆ ಎಂದಾಗಲಿ ಭಾವಿಸಲಿಕ್ಕೆ ಬರುವಂತಿಲ್ಲ.

ಇನ್ನು ಎರಡನೆಯ ನಿದರ್ಶನವೆಂದರೆ, ದಲಿತ ಸಾಹಿತ್ಯದ ಬಗೆಗಿನ ಅತ್ಯಂತ ಮುಖ್ಯವಾದ ಎರಡು ಪ್ರಶ್ನೆಗಳಿಗೆ ಶಿವರುದ್ರಪ್ಪನವರು ಕಂಡುಕೊಂಡಿರುವ ಉತ್ತರ ತುಂಬಾ ಅರ್ಥಪೂರ್ಣವಾದವು ಮಾತ್ರವಲ್ಲದೆ, ಚಾರಿತ್ರಿಕ ಮಹತ್ವವುಳ್ಳ ಮಾತು ಗಳೆಂತಲೂ ಅನಿಸುತ್ತವೆ. ಆ ಎರಡು ಪ್ರಶ್ನೆಗಳೆಂದರೆ (1) ಸಾಹಿತ್ಯವೆಂಬುದು ಸಾಹಿತಿಯಾದವನ ಮನಸ್ಸಿನ ಸೃಷ್ಟಿ. ಸಾಹಿತಿ ಎಂಬ ಈ ವ್ಯಕ್ತಿ ಯಾರೆಲ್ಲರ ಅನುಭವಗಳನ್ನು ತನ್ನ ವಿಶಿಷ್ಟ ಪ್ರತಿಭಾಶಕ್ತಿಯ ಮೂಲಕ ಗ್ರಹಿಸಿ ಅಭಿವ್ಯಕ್ತಪಡಿಸ ಬಲ್ಲ. ಹೀಗಿರುವಾಗ 'ದಲಿತರು' ಬರೆದದ್ದೇ 'ದಲಿತ ಸಾಹಿತ್ಯ' ವೆಂಬ ಮಾತಿಗೆ ಆಧಾರವಿಲ್ಲ. (2) ಯಾವುದನ್ನು 'ದಲಿತ ಸಾಹಿತ್ಯ'ವೆಂದು ಕರೆಯುತ್ತೀರೋ ಅದರಲ್ಲಿ ಕೇವಲ ಆಕ್ರೋಶವಿದೆ: ಸಾಹಿತ್ಯವಾಗುವುದಕ್ಕೆ ಬೇಕಾದ ಕಲೆಗಾರಿಕೆ ಇಲ್ಲ. ಇನ್ನು ಈ ಎರಡು ಪ್ರಶ್ನೆಗಳಿಗೆ ಜಿಎಸೆಸ್ ಕಂಡುಕೊಂಡಿರುವ ಉತ್ತರ ಹೀಗಿದೆ: ಈ ಪ್ರಶ್ನೆಗಳಲ್ಲಿ ''ಮೊದಲನೆಯದಂತೂ ತೀರಾ ಭ್ರಮಾತ್ಮಕವಾದ ನಿಲುವಾಗಿದೆ. ಸಾಹಿತ್ಯವೆಂಬುದು ಮೂಲಭೂತವಾಗಿ ಸಾಹಿತಿ ಎಂಬ ವ್ಯಕ್ತಿಯೊಬ್ಬನ ಮನಸ್ಸಿನ ನಿರ್ಮಿತಿ ನಿಜ. ಆದರೆ ಆ ವ್ಯಕ್ತಿ ಈ ದೇಶದ ಶ್ರೇಣೀಕರಣಗೊಂಡ ಯಾವ ಸ್ತರಕ್ಕೆ ಸಂಬಂಧಪಟ್ಟವನು, ಮತ್ತು ಆ ಸ್ತರದ ಚಾರಿತ್ರಿಕ ನೆನಪುಗಳಿಂದ ಆತ ಹೇಗೆ ಬದ್ಧನಾಗಿದ್ದಾನೆ ಎಂಬುದನ್ನು ನಿರ್ಲಕ್ಷಿಸಿ ಮಾತನಾಡುವುದು ಸಾಹಿತ್ಯ ನಿರ್ಮಿತಿ ಯನ್ನು ತೀರಾ ಸರಳೀಕರಣಗೊಳಿಸಿದ ನಿಲುವಾಗುತ್ತದೆ. ಒಂದು ಕಾಲಕ್ಕೆ ಅಕ್ಷರಜ್ಞಾನದ ಸವಲತ್ತುಗಳು ಮೀಸಲಾದ, ಒಂದು ವರ್ಗದ ಜನ, ತಾವೇ ಉಳಿದೆಲ್ಲರ ಪರವಾಗಿ ಬರೆಯುತ್ತಿದ್ದೇವೆ, ತಾವು ಬರೆದದ್ದೇ ಎಲ್ಲರ ಅನುಭವ ಎಂಬ ಭ್ರಮೆ ಯಲ್ಲಿದ್ದರು. ಆದರೆ, ಇಂದು ವಿವಿಧ ಸ್ತರಗಳವರು, ತಮ್ಮ ತಮ್ಮ ವಿಶಿಷ್ಟಾನುಭವ ಗಳನ್ನು ಹೇಳಿಕೊಳ್ಳಲು ಸಾಧ್ಯವಾಗಿರುವ ಸಂದರ್ಭದಲ್ಲಿ ಹಿಂದಿನಂತೆಯೇ, ಯಾವುದೇ ಸಾಹಿತಿ, ಯಾರೆಲ್ಲರ ಅನುಭವಗಳನ್ನೂ ತಾನೇ ಹೇಳುತ್ತಿದ್ದೇನೆಂದು ತಿಳಿಯುವುದು

ಸರಿಯುಲ್ಲ.......ಎರಡನೆಯದಾಗಿ ಈ 'ದಲಿತ ಸಾಹಿತ್ಯ'ದಲ್ಲಿ ಆಕ್ರೋಶವಿದೆ, ಕಲೆಗಾರಿಕೆಯಿಲ್ಲ ಎಂಬ ಮಾತನ್ನು ನೋಡೋಣ. ಮೊದಲನೆಯ ಮಾತೆಂದರೆ ಇದರಲ್ಲಿ ಆಕ್ರೋಶವಿದೆ, ನಿಜ. ಆದರೆ, ಅದು ತೀರಾ ಸಹಜವಾಗಿದೆ, ಮತ್ತು ಚಾರಿತ್ರಿಕವಾಗಿಯೂ ಸಮರ್ಥನೀಯವಾಗಿದೆ. ಶತಶತಮಾನಗಳ ಕಾಲ, ಅಮಾನವೀಯ ಹಿಂಸೆ, ಅತ್ಯಾಚಾರ ಹಾಗೂ ಶೋಷಣೆಗೆ ಒಳಗಾದವನು, ಮೊಟ್ಟ ಮೊದಲಿಗ ಬಾಯಿ ಪಡೆದಾಗ, ಅವನ ಅಭಿವ್ಯಕ್ತಿಯಲ್ಲಿ ಯಾತನೆಯ, ಆಕ್ರೋಶದ, ಪ್ರತಿಭಟನೆಯ ದನಿಯಲ್ಲದೆ, ಕೇವಲ 'ಸೌಂದರ್ಯ'ವನ್ನು ನಿರೀಕ್ಷಿಸಬಹುದೆ ? ಅವನ ದನಿ ಹಾಗಿರುವುದಕ್ಕೆ ಅವನು ತೇಲಿಬಂದ ಚರಿತ್ರೆಯೇ ಕಾರಣ; ಅವನ ಅನುಭವಗಳೇ ಕಾರಣ."[1] 'ದಲಿತ ಸಾಹಿತ್ಯ'ವನ್ನು ಕುರಿತ ಸಮಸ್ಯೆಗಳ ಬಗ್ಗೆ ಡಾ. ಶಿವರುದ್ರಪ್ಪನವರು ರೂಪಿಸಿಕೊಂಡಿರುವ, ಸೂತ್ರಪ್ರಾಯವಾದ ಈ ಉತ್ತರವನ್ನು ತೀವ್ರ ಪರಿಶೀಲನೆಗೆ ಒಳಪಡಿಸುವುದರಿಂದ, ಬಹುಶಃ ಎರಡು ಮುಖ್ಯಾಂಶಗಳು ಹೊರಡುವಂತೆ ತೋರುತ್ತದೆ. ಮೊದಲನೆಯದಾಗಿ, ಪಂಪನಿಂದ ಹಿಡಿದು ಕುವೆಂಪು ವರೆಗಿನ ಸಾವಿರ ವರ್ಷಗಳ ಸಾಹಿತ್ಯ ವಿಸ್ತಾರದಲ್ಲಿ ಮಾತ್ರವಲ್ಲದೆ ಅನಂತರದ ಪ್ರಗತಿಶೀಲ, ನವ್ಯ ಹಾಗೂ ದಲಿತ ಸಾಹಿತ್ಯದವರೆಗೂ ಶಿವರುದ್ರಪ್ಪನವರ ವಿಮರ್ಶನ ಪ್ರಜ್ಞೆ, ನಿರಂತರ ಕ್ರಿಯಾಶೀಲವಾಗಿ ನಡೆದಿರುವುದು ಗೊತ್ತಾಗುತ್ತದೆ. ಎರಡನೆಯ ದಾಗಿ, ಸೃಜನಶೀಲ ಲೇಖಕನ ಅನುಭವದ ನೈಜತೆ ಹಾಗೂ ಅಭಿವ್ಯಕ್ತಿಯ ಜೀವಂತಿಕೆಯ ಮಟ್ಟಿಗೆ ದಲಿತ ಸಾಹಿತ್ಯವನ್ನು ಕುರಿತ ಅವರ ಅಭಿಪ್ರಾಯ ಸೂಕ್ತವೆನಿಸಬಹುದಾದರೂ, ಅವರು ಹಲವಾರು ಸಂದರ್ಭಗಳಲ್ಲಿ ವ್ಯಕ್ತಪಡಿಸಿರುವಂತೆ, ಕೃತಿವಿಮರ್ಶೆಯಲ್ಲಿ ಸಹಾನುಭೂತಿ ಇರಬೇಕೆಂಬ ಅವರ ಧೋರಣೆಯನ್ನು ಎಲ್ಲ ಸಂದರ್ಭಗಳಲ್ಲೂ ಸೂಕ್ತವೆಂದು ಒಪ್ಪಿಕೊಳ್ಳುವುದು ಬಹುಶಃ ಕಷ್ಟವಾಗುತ್ತದೆ. ಅಂತೆಯೇ ದಲಿತ ಸಾಹಿತ್ಯದ ಬಗ್ಗೆ ಕೂಡ ಅವರು ತಳೆದಿರುವ ಸಹಾನುಭೂತಿ, ಅವರ ಮನೋಧರ್ಮಕ್ಕೆ ಸಹಜವಾಗಿಯೇ ಇದ್ದರೂ, ಆ ಸಹಾನುಭೂತಿ ದಲಿತ ಸಾಹಿತ್ಯ ನಿರ್ಮಿತಿಗೊಂದು ಗಂಭೀರ ಸವಾಲಾಗುವ ಬದಲು, ರಿಯಾಯಿತಿ ಆಗುತ್ತಿರಬೇಕೆಂಬ ಅನಿಸಿಕೆಯನ್ನು ಹತ್ತಿಕ್ಕಿಕೊಳ್ಳಲು ಏಕೋ ಸಾಧ್ಯವಿರುವಂತಿಲ್ಲ.

ಹೀಗೆ, ಡಾ. ಜಿ. ಎಸ್. ಶಿವರುದ್ರಪ್ಪನವರ ವಿಮರ್ಶನ ಚಿಂತನೆ, ಆರಂಭಗೊಳ್ಳುವ ಮೊದಲೇ, ಕನ್ನಡದ ಪ್ರಾಚೀನ ಕವಿಗಳು, ಲಾಕ್ಷಣಿಕರು, ಕಾವ್ಯ ಸಂಪ್ರದಾಯಗಳು, ಅವುಗಳಲ್ಲಿನ ಪ್ರಭೇದಗಳಾದ ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಕಾವ್ಯ ಸಂಪ್ರದಾಯಗಳಲ್ಲಿ ಆಗಾಗ ಸಂಭವಿಸಿರುವ ಕ್ರಾಂತಿಕಾರಕ ಬದಲಾವಣೆಗಳು, ಪ್ರಸಿದ್ಧ ಪಾಶ್ಚಾತ್ಯ ಕವಿಗಳಾದ ಷೇಕ್ಸ್‌ಪಿಯರ್, ಶೆಲ್ಲಿ, ಮಿಲ್ಟನ್, ಡಾಂಟೆ, ವಿಮರ್ಶಕರಾದ ರಿಚರ್ಡ್ಸ್, ಎಲಿಯಟ್, ಆಡನ್, ಹಡ್ಸನ್. ಬ್ರಾಡ್ಲೆ,

[1] ಡಾ. ಜಿ. ಎಸ್. ಶಿವರುದ್ರಪ್ಪ, ಪ್ರತಿಕ್ರಿಯೆ, ಪು. 31—2.

ಮನೋವಿಜ್ಞಾನಿಗಳಾದ ಸಿ. ಜೆ. ಯೂಂಗ್ ಮತ್ತು ಸಿಗ್‌ಮಂಡ್ ಫ್ರಾಯ್ಡ್— ಇವರನ್ನೆಲ್ಲಾ ಸಾದ್ಯಂತವಾಗಿ ಆರಂಭದಲ್ಲೇ ಅಧ್ಯಯನ ಮಾಡಿಕೊಂಡುದರ ಫಲವಾಗಿಯೇ[1], ಬಹುಶಃ 'ಕಾವ್ಯಾರ್ಥ ಚಿಂತನ'ದ ವೇಳೆಗೆ, ಡಾ. ಜಿ. ಎಸ್. ಶಿವರುದ್ರಪ್ಪನವರು ತಮ್ಮ ತಲೆಮಾರಿನಲ್ಲಿ ಗಮನಾರ್ಹ ವಿಮರ್ಶಕರೆನಿಸಿಕೊಳ್ಳಲು ಸಾಧ್ಯವಾಯಿತೆಂದರೆ ತಪ್ಪಾಗಲಾರದು. ಅಷ್ಟೇ ಅಲ್ಲದೆ, ವಿಮರ್ಶೆಯ ಆಂತರಿಕ ವಿಭಾಗಗಳಾದ ಸಂಶೋಧನಾತ್ಮಕ, ವರ್ಣನಾತ್ಮಕ ಹಾಗೂ ದರ್ಶನಾತ್ಮಕವೇ ಮುಂತಾದ, ವಿಮರ್ಶೆಯ ವಿಶೇಷ ಪರಿಕಲ್ಪನೆಗಳ ಸೂಕ್ಷ್ಮ ಪರಿಜ್ಞಾನ ಕೂಡ, ಜಿಎಸೆಸ್‌ರವರ ವಿಮರ್ಶನಪ್ರಜ್ಞೆಯ ಸರ್ವಾಂಗಸುಂದರವಾದ ಬೆಳವಣಿಗೆಗೆ ಪೂರಕವೂ ಕಾಣಿಕೆಯೂ ಆಗಿ ಪರಿಣಮಿಸಿರುವಂತೆನಿಸುತ್ತದೆ. ಜೊತೆಗೆ ಅವರ ವಿಮರ್ಶನ ಧೋರಣೆಯಲ್ಲಿನ ಅತ್ಯಂತ ಸ್ಪಷ್ಟವಾದ ತಾತ್ವಿಕ ನಿಲುವು ಹಾಗೂ ತರ್ಕಬದ್ಧವಾದ ವಾದಸರಣಿಗಳಿಂದಾಗಿ ಅವರ ಗದ್ಯಶೈಲಿಗೆ ಅನಿರ್ಬಂಧ ನಿರರ್ಗಳತೆ ಮಾತ್ರವಲ್ಲದೆ, ಒಂದು ವಿಶೇಷ ತೇಜಸ್ಸು ಕೂಡ ಪ್ರಾಪ್ತವಾಗಿರುವಂತೆ ತೋರುತ್ತದೆ. ಅವರ ಗದ್ಯಶೈಲಿಯ ವಾಕ್ಯಗಳನ್ನು ವಾಕ್ಯರಚನಾ ವಿಶ್ಲೇಷಣೆಗೆ (Syntactic Analysis) ಒಳಪಡಿಸುವುದರಿಂದ ತಿಳಿದು ಬರುವ ಒಂದು ಗಮನಾರ್ಹ ಸಂಗತಿ ಯೆಂದರೆ, ಅವರು ಮಾಡಿಕೊಳ್ಳುವ ಅತ್ಯಂತ ಕಡಿಮೆ ಅಕ್ಷರಗಳ ಸಮಾಸಗಳಿಂದ ಕೂಡಿದ, ಸರಳವಾದ ಚಿಕ್ಕಚಿಕ್ಕ ವಾಕ್ಯಗಳಿಂದಾಗಿ ಅಭಿವ್ಯಕ್ತಿಯಲ್ಲಿ ಸ್ಪಷ್ಟತೆ, ವಿಮರ್ಶೆಯಲ್ಲಿ ಅತ್ಯಂತ ಸಣ್ಣ ವಿಷಯವನ್ನೂ ತುಂಬಾ ಸ್ಫುಟವಾಗಿ ವ್ಯಕ್ತಪಡಿಸಲು ಸಾಧ್ಯವಾಗಿರುವಂತೆ ತೋರುತ್ತದೆ. ವಾಸ್ತವವಾಗಿ ವಿಮರ್ಶೆಯಂಥ ಕಠಿಣವಾದ ವಿಷಯವನ್ನು ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಸಮರ್ಪಕವಾಗಿ ಪ್ರಸ್ತುತ ಪಡಿಸುವುದು ತುಂಬಾ ದುಸ್ತರವಾದ ಕೆಲಸವೇ; ಆದರೆ, ಆ ವಿಷಯದಲ್ಲಿ ಶಿವರುದ್ರಪ್ಪನವರು ಸಾಧಿಸಿರುವ ಸಿದ್ಧಿ ಅನುಪಮವಾದದ್ದು, ಹಾಗೂ ಯಾರನ್ನಾದರೂ ಬೆರಗುಗೊಳಿಸುವಂಥಾದ್ದು. ಬಹುಶಃ ಈಗಾಗಲೇ ಸೂಚಿಸಿರುವಂತೆ, ಶಿವರುದ್ರಪ್ಪನವರ ಈ ಶಕ್ತಿಯುತವಾದ ಗದ್ಯ ಸಾಮರ್ಥ್ಯಕ್ಕೆ ಒಂದು ಬಹು ಮುಖ್ಯವಾದ ಸಂಗತಿ ಕಾರಣವೆಂದು ತೋರುತ್ತದೆ: ಅದೆಂದರೆ, ಸೌಂದರ್ಯಪ್ರಜ್ಞೆಯನ್ನೂ (Aesthetic sense) ತರ್ಕದ ಶಿಸ್ತನ್ನೂ (Logical discipline) ಎಡೆಬಿಡದೆ ಜೊತೆಜೊತೆಯಲ್ಲೇ ನಡೆಸುವುದರಿಂದ ಶಿವರುದ್ರಪ್ಪನವರ ವಿಮರ್ಶೆಯ ಭಾಷೆ ಇಷ್ಟೊಂದು ದಾರ್ಢ್ಯತೆಯನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಾಗಿರಬೇಕೆಂದು ತೋರುತ್ತದೆ.

---

[1] ಡಾ. ಜಿ. ಎಸ್. ಶಿವರುದ್ರಪ್ಪ, ಪ್ರತಿಕ್ರಿಯೆ, ಪು. 31—2.

ಡಾ. ಎಂ. ವಿ. ಜಂಬುನಾಥನ್

ತಮಿಳುನಾಡಿನ ನಾಟ್ಯಶಾಸ್ತ್ರ ಮತ್ತು ನಾಟ್ಯಕಲೆ

ಪೀಠಿಕೆ

ಸುಮಾರು ಎರಡು ಸಾವಿರ ವರ್ಷಗಳ ಹಿಂದಿನ ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ, ಗೀತ, ನೃತ್ಯ, ನಾಟ್ಯ, ಶಿಲ್ಪ ಮೊದಲಾದ ಕಲೆಗಳಿಗೆ ಮಹತ್ವದ ಸ್ಥಾನವಿತ್ತು. ಇದರ ಪ್ರಭಾವದಿಂದಲೇ ತಮಿಳು ಭಾಷೆಯ ಮೂರು ರೂಪಗಳ ಅಥವಾ ಪ್ರಭೇದಗಳ ಸೃಷ್ಟಿ ಆಯಿತು. ಆ ಪ್ರಭೇದಗಳು ಯಾವುವೆಂದರೆ: ಇಯಟ್ರ ಮಿಳ್, ಅಂದರೆ ಸಾಹಿತ್ಯಿಕ ತಮಿಳು; ಇಶೈತ್ತಮಿಳ್, ಅಂದರೆ ಗೀತ ತಮಿಳು, ಮತ್ತು ನಾಟಕತ್ತಮಿಳ್, ಅಂದರೆ ನಾಟಕ, ನೃತ್ಯ ಇವುಗಳಿಗೆ ಮೀಸಲಾದ ತಮಿಳು.

ಸಂಗೀತವೆಂದರೆ ಗೀತ, ವಾದ್ಯ ಮತ್ತು ನೃತ್ಯ—ಇವು ಮೂರನ್ನೂ ಒಳಗೊಂಡಿರುವುದು ಎಂಬುದಾಗಿ ಹಿಂದಿನವರು ವ್ಯಾಖ್ಯೆ ಮಾಡುತ್ತಿದ್ದರು.

> गीतं वाद्यं च....त्रयं संगीतमुच्यते।
> ಗೀತಂ ವಾದ್ಯಂ ಚ....ತ್ರಯಂ ಸಂಗೀತಮುಚ್ಯತೇ ।

ಎಂದು ತಜ್ಞರು ಹೇಳುತ್ತಿದ್ದರು.

ತಮಿಳುನಾಡಿನ ಹಲವಾರು ದೇವಸ್ಥಾನಗಳಲ್ಲಿ ಸಂಗೀತ ಮತ್ತು ನೃತ್ಯಕ್ಕೆ ಸಂಬಂಧಿಸಿದ ವಿಗ್ರಹಗಳೂ ತತ್ಸಂಬಂಧವಾದ ಶಿಲಾಶಾಸನಗಳೂ ದೊರೆಯುತ್ತವೆ. ಕುಡಿಮಿಯಾಮಲೈ ಮತ್ತು ತಿರುಮಯಂ ದೇವಸ್ಥಾನಗಳಲ್ಲಿ ಸಂಗೀತದ ಬಗ್ಗೆ ವಿಶಿಷ್ಟ ಶಿಲಾಲೇಖಗಳಿವೆ. ಮದುರೈ, ಅಳಗರ್ ಕೋವಿಲ್, ತಿರುನೆಲ್ವೇಲಿ, ಕಳಕ್ಕಾಡು, ಸುಚೀಂದ್ರಂ ಮೊದಲಾದ ದೇವಸ್ಥಾನಗಳಲ್ಲಿನ ಸಂಗೀತ ಶಿಲಾಸ್ತಂಭಗಳು ಸಾಕ್ಷಿಯಾಗಿ ನಿಂತಿವೆ. ಆಳ್ವಾರ್ ತಿರುನಗರಿಯಲ್ಲಿ ಕಲ್ಲಿನಲ್ಲಿ ಕೆತ್ತಿರುವ ನಾಗಸ್ವರ ವಾದ್ಯ ಬಹಳ ಪ್ರಶಸ್ತವಾದುದು. ತಾಂಡವಮೂರ್ತಿಯಾದ ನಟರಾಜನನ್ನು ತಮಿಳುನಾಡಿನ ಚಿದಂಬರ ಕ್ಷೇತ್ರದಲ್ಲಿ ಪ್ರತಿಷ್ಠೆ ಮಾಡಿರುವುದಲ್ಲದೆ, ಆ ದೇವಸ್ಥಾನದ ಪೂರ್ವ ಗೋಪುರದಲ್ಲಿ ನೃತ್ಯದ ವಿವಿಧ ಭಂಗಿಗಳನ್ನು ಪ್ರದರ್ಶಿಸುವ ಶಿಲಾ ವಿಗ್ರಹಗಳನ್ನು ಕೆತ್ತನೆ ಮಾಡಿ ಅವುಗಳ ಅಡಿಯಲ್ಲಿ ವಿಶದ ವಿವರಣೆಯ ಶ್ಲೋಕಗಳೂ ಬರೆಯಲ್ಪಟ್ಟಿವೆ.

ಹಲವು ದೇವಸ್ಥಾನಗಳಲ್ಲಿ ನಿತ್ಯನೈಮಿತ್ತಿಕ ಪೂಜೆ ಆರಾಧನೆಗಳಲ್ಲಿ ತೇವಾರಂ, ದಿವ್ಯ ಪ್ರಬಂಧಂ, ತಿರುಪ್ಪುಗಳ್, ಅರುಟ್ಪಾ ಮೊದಲಾದ ಭಕ್ತಿಗೀತೆಗಳನ್ನು ಗಾಯನ ಮಾಡುವ ಪದ್ಧತಿ ನಡೆದುಬಂದಿರುವುದು. ಈ ಸೇವೆಗಳಿಗೆ ಸ್ಥಾನೀಕರು (ಅಂದರೆ ವಂಶಪಾರಂಪರ್ಯವಾದ ಹಕ್ಕುದಾರರು) ನಿಯತರಾಗಿರುವರು. ಕೆಲವು ದೇವಸ್ಥಾನಗಳಲ್ಲಿ ಉತ್ಸವ ಕಾಲದೊಳು ದೇವರಿಗೆ ಸೇವೆಯ ರೂಪದಲ್ಲಿ ನೃತ್ಯ ಮತ್ತು ನಾಟ್ಯ ಪ್ರದರ್ಶನಗಳು ನಡೆಯುತ್ತವೆ. ತಿರುವಾರೂರು, ತಿರುತ್ತುರೈಪ್ಪೂಂಡಿ ಮೊದಲಾದ ದೇವಸ್ಥಾನಗಳಲ್ಲಿ ದೇವರಿಗೆ ಪಂಚಮುಖ ವಾದ್ಯಸೇವೆ ಸಲ್ಲಿಸುವ ಸಂಪ್ರದಾಯ ಈಗಲೂ ಜಾರಿಯಲ್ಲಿರುವುದು. ಚಿದಂಬರ ಕ್ಷೇತ್ರದಲ್ಲಿ ಗರ್ಭಗುಡಿಗೆ ಎದುರು ಇರುವ ಶಿಲಾರಥದಲ್ಲಿ ಪಂಚಮುಖ ವಾದ್ಯವನ್ನು ಬಾರಿಸುತ್ತಿರುವ ಒಬ್ಬ ವ್ಯಕ್ತಿಯ ವಿಗ್ರಹವನ್ನು ಕೆತ್ತಲಾಗಿದೆ. ತಿರುಪ್ಪುನ್‌ಕೂರಿನ ದೇವಸ್ಥಾನದಲ್ಲಿರುವ ಕಂಚಿನ ನಟರಾಜ ವಿಗ್ರಹಕ್ಕೆ ಸೇರಿದಂತೆ ಪಂಚಮುಖವಾದ್ಯದ ಕೆತ್ತನೆ ಕಾಣಸಿಗುತ್ತದೆ.

ಸಂಗೀತ, ನೃತ್ಯ ಕಲೆಗಳಲ್ಲಿ ದಕ್ಷಿಣ ಭಾರತವು ಪ್ರಖ್ಯಾತವಾಗಿತ್ತು ಎಂಬುದಕ್ಕೆ ಸಾಕಷ್ಟು ಪ್ರಮಾಣಗಳಿವೆ. ನಾಟ್ಯಶಾಸ್ತ್ರ ಎಂಬ ತಮ್ಮ ಗ್ರಂಥದಲ್ಲಿ ಭರತ ಮುನಿ ಇದನ್ನು ಹೀಗೆ ಕೊಂಡಾಡಿ ವರ್ಣಿಸಿರುವರು.

तत्र दाक्षिणात्यास्तावत् बहु नृत्त
गीतवाद्या कैशिकी प्रायाः चतुर
मधुर ललितांगाभिनयाश्च—
—दक्षिणस्य समुद्रस्य
तथा विंध्यस्य चांतरे ॥

ತತ್ರ ದಾಕ್ಷಿಣಾತ್ಯಾಸ್ತಾವತ್ ಬಹು ನೃತ್ತ
ಗೀತವಾದ್ಯಾ ಕೈಶಿಕೀ ಪ್ರಾಯಾಃ ಚತುರ
ಮಧುರ ಲಲಿತಾಂಗಾಭಿನಯಾಶ್ಚ——
—ದಕ್ಷಿಣಸ್ಯ ಸಮುದ್ರಸ್ಯ ತಥಾ ವಿಂಧ್ಯಸ್ಯ ಚಾಂತರೇ ॥

ಅಂದರೆ, ದಕ್ಷಿಣ ದೇಶದವರು ಹಲವು ಬಗೆಯ ನೃತ್ಯ, ಗೀತ, ವಾದ್ಯಗಳಲ್ಲಿ ಆಸಕ್ತರಾಗಿ ನಲಿದಾಡುತ್ತಿರುವರು. ಅದು ಬಹಳ ಲಲಿತವಾಗಿ, ಇಂಪಾಗಿರುವುದು. ಅವರ ಅಭಿನಯ ವಿಚಕ್ಷಣವಾಗಿ ಸುಂದರವಾಗಿ ಮನೋಹರವಾಗಿರುವುದು. ಈ ನಾಡು ದಕ್ಷಿಣ ಸಮುದ್ರಕ್ಕೂ ಮತ್ತು ವಿಂಧ್ಯ ಪರ್ವತಕ್ಕೂ ನಡುವೆ ಇರುವುದು. ಹೀಗೆ ಪುರೋಭಿವೃದ್ಧಿ ಹೊಂದಿ ಉನ್ನತ ಸ್ಥಾನಕ್ಕೇರಿದ ಸಂಗೀತ ನೃತ್ಯ ಮೊದಲಾದವುಗಳ ಬಗ್ಗೆ ಕೆಲವು ತಮಿಳು ಸಾಹಿತ್ಯ ಗ್ರಂಥಗಳಿಂದ ತಿಳಿಯಬರುವ ಕೆಲವು ಸಂಗತಿಗಳನ್ನು ಇಲ್ಲಿ ಉಲ್ಲೇಖಿಸುತ್ತೇವೆ.

ನೃತ್ಯದ ಶಾಖೋಪಶಾಖೆಗಳು

ನೃತ್ಯಕ್ಕೆ ತಮಿಳು ಭಾಷೆಯಲ್ಲಿ ಕೂತ್ತು ಎನ್ನುವರು. ನೃತ್ಯದಲ್ಲಿ ಅಹಕ್ಕೂತ್ತು ಮತ್ತು ಪುರಕ್ಕೂತ್ತು ಎಂಬ ಎರಡು ಪರಿಪಾಟಿಗಳಿವೆ. ಅಹಕ್ಕೂತ್ತು ಅಥವಾ ವೇತ್ತಿಯಲ್ ಎನ್ನುವುದು ಅರಸನ ಒಡ್ಡೋಲಗದಲ್ಲಿ ಪ್ರದರ್ಶಿಸಲಾಗುವ ನೃತ್ಯ. ಮತ್ತೊಂದು ಪುರಕ್ಕೂತ್ತು ಅಥವಾ ಪೊದುವಿಯಲ್, ಎಂದರೆ ಜನಸಾಮಾನ್ಯರ ಮುಂದೆ ಪ್ರದರ್ಶಿಸಲಾಗುವ ನೃತ್ಯದ ಪರಿ. ವಿಶಿಷ್ಟಗುಣಗಳಿಗೆ ಅನುಸಾರವಾಗಿ ಇವುಗಳ ಹಲವು ಪ್ರಕಾರಗಳು ಉಂಟು.

ಮೊದಲನೆಯದಾಗಿ, ಶಾಂತಿಕ್ಕೂತ್ತು: ಇದನ್ನು ಶಾಂತಿನೃತ್ಯ ಎನ್ನಬಹುದು. ನಾಯಕನ ಸುಖ-ಸಂತೋಷ, ನಲಿವು–ನಲ್ಮೆ ಇವುಗಳನ್ನು ಆಧರಿಸಿ ಆಡುವ ನೃತ್ಯಕ್ಕೆ ಶಾಂತಿಕ್ಕೂತ್ತು ಎಂದು ಹೆಸರು. ಇದು ನಾಲ್ಕು ಬಗೆಗಳನ್ನು ಒಳಗೊಂಡಿದೆ. ಅವು ಯಾವುವೆಂದರೆ: ಚೊಕ್ಕಂ, ಮೆಯ್‌ತ್ತೊಟ್ಟಿಲ್ ಕೂತ್ತು, ಅಭಿನಯ, ಮತ್ತು ನಾಟಕ. ಮೊದಲನೆಯದು ಚೊಕ್ಕಂ ಎನ್ನುವುದು ಶುದ್ಧ ನೃತ್ಯ; ಇದು ತಾಳ, ಲಯಗಳನ್ನು ಆಧಾರವಾಗುಳ್ಳದ್ದು. ಎರಡನೆಯದು ಮೆಯ್‌ತ್ತೊಟ್ಟಿಲ್ ಕೂತ್ತು, ಅಂದರೆ ಭಾವಭಂಗಿ; ಇದು ಭಾವಪ್ರಧಾನವಾದ ನೃತ್ಯ. ಇದರಲ್ಲಿ ದೇಶಿ, ವಡುಕು (ಅಥವಾ ಮಾರ್ಗ) ಮತ್ತು ಶಿಂಗಳಂ ಎಂಬ ಮೂರು ಸಂಪ್ರದಾಯಗಳು ಉಂಟು. ಇದು ಹೃದ್ಗತವಾದ ಭಾವವನ್ನು ಆಧರಿಸಿರುವುದು. ಮೂರನೆಯದು ಅಭಿನಯ ನೃತ್ಯ. ಇದು ಯಾವ ವಿಧವಾದ ಕತೆಯನ್ನೂ ಆಧರಿಸದೆ ಹಾಡಿನ ಅರ್ಥಕ್ಕೆ ಅನುಗುಣವಾಗಿ ಕೈಕರಣ ಅಥವಾ ಅಂಗಚಲನೆ ಮಾಡುವಂತಹ ನೃತ್ಯ. ನಾಲ್ಕನೆಯ ಬಗೆಯಾದ ನಾಟಕ ಎಂಬುದು ಒಂದು ಕತೆಯನ್ನು ಆಧಾರವಾಗಿಟ್ಟುಕೊಂಡು ಅದರಲ್ಲಿನ ಘಟನೆಗಳಿಗೆ ಅನುಸಾರವಾಗಿ ಮಾಡುವ ನೃತ್ಯ. ಇವುಗಳಲ್ಲಿ ಕೊನೆಯದಾದ ನಾಟಕ ಎಂಬ ವಿಧಾನವೇ ಶ್ರೇಷ್ಠವೆಂದು ಭಾವಿಸಲಾಗುತ್ತೆ.

ಎರಡನೆಯ ಪ್ರಕಾರದ್ದು ವಿನೋದಕ್ಕೂತ್ತು, ಅಂದರೆ ವಿನೋದದ ನೃತ್ಯ. ಇದರಲ್ಲಿ ಕುರವೈ, ಕಲಿನಟಂ, ಕುಡಕ್ಕೂತ್ತು, ಕರಣಂ, ನೋಕ್ಕು, ತೋಪ್ಪಾವೈ ಎಂಬ ಆರು ಪ್ರಭೇದಗಳುಂಟು. ಕುರವೈ ಎಂಬುದು ವಿಜಯ ಮತ್ತು ಕಾಮ—ಈ ಭಾವನೆಗಳನ್ನೊಳಗೊಂಡ ಗೀತೆಗಳನ್ನು ಹಾಡುತ್ತ ಏಳು ಅಥವಾ ಒಂಬತ್ತು ಜನ ಪರಸ್ಪರ ಕೈ ಹೆಣೆದುಕೊಂಡು ಆಡುವ ನೃತ್ಯ. ಕಲಿನಟಂ ಎಂಬುದು ಬಿದಿರಿನ ಗಣೆಯನ್ನು ಹಿಡಿದುಕೊಂಡು ಆಡುವ ನೃತ್ಯ. ಕುಡಕ್ಕೂತ್ತು ಎಂಬುದು ಕೊಡ ಅಥವಾ ಬಿಂದಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಆಡುವ ಆಟ. ಕರಣಂ ಎಂದರೆ ಅಡ್ಡಾಗಿ ಅಥವಾ ಬಗ್ಗಿ ಮಾಡುವ ನೃತ್ಯ. ನೋಕ್ಕು ಎಂದರೆ ನೋಟ ನೃತ್ಯ; ಭಾರ, ಸೂಕ್ಷ್ಮ ಮತ್ತು ಮಾಯೆ ಇವುಗಳನ್ನೊಳಗೊಂಡದ್ದು. ಕಡೆಯದಾಗಿ ತೋಪ್ಪಾವೈ ಎಂದರೆ ಸೂತ್ರದಿಂದ ಆಡಿಸುವ ಬೊಂಬೆಯಾಟ. ನೃತ್ಯದ ವೃತ್ತಿ

ಅಥವಾ ಸ್ವಭಾವ ನಾಲ್ಕು ಬಗೆಯಾಗಿರುವುದೆಂದು ಹೇಳುವರು. ಅವು ಯಾವುವೆಂದರೆ ಶಾತ್ತುವತಿ, ಆರಭಟಿ, ಕೈ ಶಿಕಿ ಮತ್ತು ಭಾರತೀ.

ಅಭಿನಯದ ಪ್ರಭೇದಗಳು

ಅಭಿನಯವನ್ನು ವಿಶ್ಲೇಷಣೆ ಮಾಡುವಲ್ಲಿ ಅದರ ಇಪ್ಪತ್ತನಾಲ್ಕು ಬಗೆಗಳನ್ನು ತಮಿಳು ನಾಟ್ಯಶಾಸ್ತ್ರಜ್ಞರು ವರ್ಣಿಸಿರುವರು. ಮುಖಭಾವ, ದೃಷ್ಟಿ, ಅಂಗಚಲನೆ ಮೊದಲಾದವು ಒಂದೊಂದು ಬಗೆಯ ಅಭಿನಯಕ್ಕೂ ಹೇಗೆ ಹೇಗೆ ಇರಬೇಕು ಎಂಬುದರ ವಿವರಗಳು ವಿಶದವಾಗಿ ನಿರೂಪಿತವಾಗಿರುವುವು. ಉದಾಹರಣೆಗೆ, ವೀರ ರಸದ ಅಭಿನಯ ಇಂತಿರಬೇಕು ಎಂದು ಸೂಚಿಸಿರುವರು: ಕೊಂಕಿದ ಹುಬ್ಬು, ಕೆಂಚನೆಯ ಕಣ್ಣು, ಬಾಳು ಹಿಡಿದ ಕೈ, ಕಚ್ಚಿದ ಹಲ್ಲುಗಳು, ಮಡಚಿದ ತುಟಿ, ಸುಕ್ಕುಗಟ್ಟಿದ ನೊಸಲು--ಇವುಗಳನ್ನು ಪ್ರದರ್ಶಿಸಬೇಕು. ಹೀಗೆಯೇ, ಭಯಾನಕ ರಸವನ್ನು ಅಭಿನಯಿಸುವಲ್ಲಿ ಉಡುಗಿದ ಒಡಲು, ನಡುಗುವ ನಿಲುವು, ಹೊರ ಳಾಡುತ್ತಿರುವ ಕಂಗಳು, ಕದಡಿದ ಮನಸ್ಸು, ಮಡಚಿದ ಕೈಗಳು, ಇತರರ ಕಣ್ಣಿಗೆ ಬೀಳದೆ ಅವಿತುಕೊಳ್ಳುವಂತಹ ಭಂಗಿ ಇರತಕ್ಕದ್ದು.

ನೃತ್ಯಾಂಗಗಳು

ಆಡಲ್, ಪಾಡಲ್, ಪಾಣಿ, ತೂಕ್ಕು ಎಂಬಿವು ನೃತ್ಯದ ನಾಲ್ಕು ಮುಖ್ಯವಾದ ಅಂಗಗಳು ಎಂದು ಪರಿಗಣಿಸಲಾಗಿದೆ. ಇವುಗಳನ್ನು ನೃತ್ಯ, ಗೀತ, ರಾಗ (ಅಥವಾ ಮಟ್ಟು), ತಾಳ ಎಂದು ಭಾಷಾಂತರಿಸಬಹುದು. ತೂಕ್ಕು ಎನ್ನುವುದು ಎರಡು ಮಾತ್ರೆಯ ಕಾಲವನ್ನು ಸೂಚಿಸುತ್ತದೆ. ಒಂದು ಮಾತ್ರೆಯ ತಾಳಕ್ಕೆ ಏಕತಾಳ ಎಂತಲೂ, ಹನ್ನೊಂದು ಮಾತ್ರೆಯ ತಾಳಕ್ಕೆ ಪಾರ್ವತೀಲೋಚನ ಎನ್ನುವರು ಎಂಬುದನ್ನೂ ನೆನಪಿಗೆ ತಂದುಕೊಳ್ಳಬಹುದು.

ಅಭಿನಯದಲ್ಲಿ ಎಟಿಕ್ಕೈ ಮತ್ತು ತೊಟಿಕ್ಕೈ ಎಂಬ ಎರಡು ವಿಧಗಳುಂಟು. ಎಟಿಕ್ಕೈ ಎಂಬುದು ಸೊಬಗಿನ ಭಂಗಿ ಅಥವಾ ಮೋಹನ ಭಂಗಿ (pose) ಎಂದಾ ಗುವುದು. ತೊಟಿಕ್ಕೈ ಎಂದರೆ ಕ್ರಿಯೆಯನ್ನು ತೋರ್ಪಡಿಸುವ ಭಂಗಿ. ತೊಜಿ ಕ್ಕೈಯ ಎರಡು ಪ್ರಭೇದಗಳು ಉಂಟು: ಪಿಂಡಿ ಮತ್ತು ಪಿಣ್ಯೆಯಲ್. ಪಿಂಡಿ ಅಥವಾ ಒಟ್ರೈಕ್ಕೆ ಎಂದರೆ ಒಂದು ಕೈಯನ್ನು ಮಾತ್ರ ಆಡಿಸುತ್ತ ಮಾಡುವ ನೃತ್ಯ. ಪಿಣ್ಯೆಯಲ್ ಅಥವಾ ಇಣೈಕ್ಕೈಯಾಟ ಎಂದರೆ ಎರಡು ಕೈಗಳಿಂದಲೂ ಪ್ರದರ್ಶಿಸುವ ಆಟ. ಒಕ್ಕೈಯಾಟದ ಮೂವತ್ತಮೂರು ಬಗೆಗಳುಂಟು ಎಂದು ತಜ್ಞರು ಹೇಳುವರು. ಉದಾಹರಣೆಗೆ, ಕಟಕಂ ಅಥವಾ ಕರ್ಕಟಕಕ್ಕೈ ಎಂದರೆ ಉಂಗುರದ ಬೆರಳು ಮತ್ತು ನಡುಬೆರಳು ಇವೆರಡನ್ನೂ ಉಗುರುಗಳು ಅಂಗೈಯನ್ನು ಒತ್ತುವಂತೆ ಮಡಚಿ ಉಳಿದ ಬೆರಳುಗಳನ್ನು ನಿಮಿರಿಸುವ ಪರಿಜು; ಪಿಣ್ಯೆಯಲ್ ಅಥವಾ

ಎಣೆಕೈಯಾಟದಲ್ಲಿ ಹದಿನೈದು ಬಗೆಗಳುಂಟು. ಇವುಗಳ ಪೈಕಿ ಅಂಜಲಿ, ಪುಷ್ಪಾಂಜಲಿ, ಪದ್ಮಾಂಜಲಿ, ಕಪೋತಂ, ಕರ್ಕಟಕಂ ಮುಖ್ಯವಾದವು.

ನೃತ್ಯದ ಶಿಕ್ಷಣಕ್ರಮ

ಕ್ರಿಸ್ತಶಕ ಎರಡನೆಯ ಶತಾಬ್ದಿಯಲ್ಲಿದ್ದ ಇಳಂಗೋ ಅಡಿಗಳ್ ಎಂಬ ಕವಿ ವಿರಚಿತ ಶಿಲಪ್ಪದಿಕಾರಂ ಎಂಬ ತಮಿಳು ಗ್ರಂಥದಲ್ಲಿ ನೃತ್ಯಕ್ಕೆ ಸಂಬಂಧಿಸಿದ ಕೆಲವು ಮಹತ್ವಪೂರ್ಣ ಮಾಹಿತಿಗಳ ವಿವರಣೆ ದೊರೆಯುತ್ತದೆ. ಮಾದವಿ ಎಂಬ ನಾಟ್ಯಗಾತಿ ಹೇಗೆ ಶಿಕ್ಷಣ ಪಡೆದು ಆಳರಸನಾದ ಚೋಳನ ಒಡ್ಡೋಲಗದಲ್ಲಿ ನಾಟ್ಯ ಪ್ರದರ್ಶನ ಮಾಡಿದಳು ಎನ್ನುವುದು ವಿಸ್ತಾರವಾಗಿ ಉಕ್ತವಾಗಿದೆ.

ನಾಟ್ಯವನ್ನು ಕಲಿಸಲು ಮಾದವಿಗೆ ಐದು ವರ್ಷ ವಯಸ್ಸು ತುಂಬಿದ ಕೂಡಲೆ ಕೈಯಲ್ಲಿ ಹಿಡಿಯಲು ಗಣೆ ಅಥವಾ ದಂಡವನ್ನು ಕೊಟ್ಟು ಶಿಕ್ಷಣವನ್ನು ಪ್ರಾರಂಭಿಸಿ ನಿರಂತರವಾಗಿ ಏಳುವರ್ಷಕಾಲ ನಾಟ್ಯ, ಸಂಗೀತ ಮತ್ತು ಶೃಂಗಾರಕಲೆ ಈ ಮೂರರಲ್ಲೂ ಶಿಕ್ಷಣ ಕೊಡಲಾಯಿತು. ನಾಟ್ಯ ಕಲಿಯುವಲ್ಲಿ ದಂಡವನ್ನು ಕೈಯಲ್ಲಿ ಹಿಡಿದು ಶಿಕ್ಷಣ ಪಡೆಯಬೇಕು ಎನ್ನುವುದಕ್ಕೆ ಒಂದು ಪುರಾಣಕತೆಯನ್ನು ಆಧಾರವಾಗಿ ಹೇಳುತ್ತಾರೆ.

ಊರ್ವಶಿ ಪಡೆದ ಶಾಪ

ಒಮ್ಮೆ ಅಗಸ್ತ್ಯಮುನಿ ಅಮರಾವತೀ ನಗರಕ್ಕೆ ಹೋಗಿದ್ದಾಗ ಅವರ ಗೌರವಾರ್ಥ ಇಂದ್ರನು ಊರ್ವಶಿಯ ನೃತ್ಯಪ್ರದರ್ಶನಕ್ಕೆ ಏರ್ಪಾಟು ಮಾಡಿದ್ದನು. ನಾರದನು ವೀಣೆ ಬಾರಿಸುತ್ತಿರಲು ಪಳಗಿದ ಬರ್ದುವೆಂಡಿರು ವಾರಂ ಹಾಡುತ್ತಿರಲು ಊರ್ವಶಿ ನಾಟ್ಯವಾಡುತ್ತಿದ್ದಳು. ಆ ಸಭೆಯಲ್ಲಿದ್ದ ಇಂದ್ರನ ಮಗ ಜಯಂತನೂ ಊರ್ವಶಿಯೂ ಆಗ ಒಬ್ಬರನ್ನೊಬ್ಬರು ಕಾಮ ದೃಷ್ಟಿಯಿಂದ ನೋಡುತ್ತಿರಲು, ಅವಳ ನಾಟ್ಯ ವಿಚಲಿತವಾಯಿತು. ಇದನ್ನು ಇತರರಿಗೆ ತಿಳಿಯಪಡಿಸುವ ಸಲುವಾಗಿ ನಾರದನು ವೀಣೆಯ ಹಗೆತಂತಿಯನ್ನು ಮೀಟಿದನು. ಇದನ್ನೆಲ್ಲ ಕಂಡ ಅಗಸ್ತ್ಯರು ಕೋಪಗೊಂಡು ನಾರದನ ವೀಣೆ ಮಂಗಲವನ್ನು ಕಳೆದುಕೊಳ್ಳಲೆಂದೂ, ಜಯಂತನು ಬಿದಿರಿನ ಮೆಳೆಯಾಗಿ ಹುಟ್ಟಲೆಂದೂ ಮತ್ತು ಊರ್ವಶಿ ಭೂಲೋಕದಲ್ಲಿ ನಾಟ್ಯ ಗಣಿಕೆಯಾಗಿ ಹುಟ್ಟಲೆಂದೂ ಶಾಪವನ್ನಿತ್ತರು. ಅದರ ಮೇರೆಗೆ ಊರ್ವಶಿ ನಾಟ್ಯ ಗಣಿಕೆಯಾಗಿ ಹುಟ್ಟಿದಳು. ಈ ಹಿನ್ನೆಲೆಯಲ್ಲಿ ನೃತ್ಯ ಕಲಿಯುವವರು ಗಳವನ್ನು ಹಿಡಿದು ಅದನ್ನೇ ಜಯಂತನೆಂದು ಭಾವಿಸಿ ಅದಕ್ಕೆ ಪೂಜೆಗೈದು ಅನಂತರ ಪಾಠವನ್ನು ಪ್ರಾರಂಭಿಸುವುದು ರೂಢಿಯಾಯಿತು.

ನಾಟ್ಯಾಚಾರ್ಯನ ಲಕ್ಷಣ

ಮಾಧವಿಗೆ ನಾಟ್ಯಶಿಕ್ಷಣವನ್ನಿತ್ತ ನಾಟ್ಯಾಚಾರ್ಯನು ಅಹಕ್ಕೂತ್ತು, ಪುರಕ್ಕೂತ್ತು ಎಂಬ ಎರಡು ಬಗೆಯ ಕುಣಿತದ ಲಕ್ಷಣಗಳನ್ನು ಚೆನ್ನಾಗಿ ಅರಿತು ನುರಿತು, ಅವುಗಳ ಪ್ರಭೇದಗಳನ್ನೆಲ್ಲ ಸಮಂಜಸವಾಗಿ ಮೇಳೈಸಿ, "ಅಲ್ಲಿಯಂ" ಮೊದಲುಗೊಂಡು "ಕೊಡುಕೊಟ್ಟಿ" ಕಡೆಯಾದ* ಹನ್ನೊಂದು ವಿಧದ ನೃತ್ಯಗಳನ್ನೂ, ಅವುಗಳಿಗೆ ಹೊಂದಿಕೆಯಾಗುವ ಹಾಡುಗಳನ್ನೂ, ಆ ಕುಣಿತಗಳ ವಿಕಲ್ಪಗಳಲ್ಲಿ ಹಾಳಿತವಾದ ವಾಕ್ಯಗಳ ಪ್ರಕರಣಗಳನ್ನೂ ಪ್ರಮಾಣಗ್ರಂಥಗಳಿಂದ ಚೆನ್ನಾಗಿ ಅರಿತು ಮನಗಂಡು, ನೃತ್ಯ, ಗೀತ, ಪಾಣಿ ಮತ್ತು ತೂಕ್ಕು ಇವುಗಳು ವಿಧಿವತ್ತಾಗಿ ಸಾಗುತ್ತಿರಲು, ಪಿಂಡಿ(ಒಕ್ಕೈಯಾಟ), ಪಿಣೈಯಲ್ (ಇಕ್ಕೈಯಾಟ), ಅಭಿನಯ, ಮತ್ತು ನಾಟ್ಯ ಇವುಗಳ ವಿಂಗಡಣೆಯನ್ನೂ ಖಚಿತವಾಗಿ ತಿಳಿದು, ನೃತ್ಯದಲ್ಲಿ ಒಕ್ಕೈಯಾಟವಾಡುವಾಗ ಜೋಡುಕೈಯಾಟವನ್ನು ವರ್ಜಿಸಿ, ಜೋಡುಕೈಯಾಟವಾಡುವಾಗ ಒಕ್ಕೈಯಾಟವನ್ನು ವರ್ಜಿಸಿ, ಅಭಿನಯ ಹಿಡಿಯುವಾಗ ನರ್ತನ ಬೆರೆಯದೆ, ನರ್ತನವಾಡುವಾಗ ಅಭಿನಯ ಬೆರೆಯದೆ, "ಕುರವೈ" ಕುಣಿತ ಮತ್ತು "ವರಿ" ಕುಣಿತಗಳು ಬೆರೆಯದಂತೆ ಬೇರೆಬೇರೆಯಾಗಿ ಪ್ರದರ್ಶಿಸುವ ಪರಿಯಲ್ಲಿ ತಾನು ಸ್ವತಃ ಆಡಬಲ್ಲವನೂ, ಆಡಿಸಬಲ್ಲವನೂ ಆಗಿದ್ದನು.

ಗಾಯನಾಚಾರ್ಯನ ಲಕ್ಷಣ

ಅವಳ ಗಾಯನಾಚಾರ್ಯನು ಯಾಳ್ ಎಂಬ ಒಂದು ಬಗೆಯ ವೀಣೆಯನ್ನೂ ಕೊಳಲನ್ನೂ ನುಡಿಸಬಲ್ಲವನಾಗಿಯೂ, ಒಳ್ಳೆಯ ಕಂಠಶ್ರೀಯಿಂದ ಸ್ವತಃ ಇಂಪಾಗಿ ಹಾಡಬಲ್ಲವನಾಗಿಯೂ, ತಾಳಲಯಗಳನ್ನು ಚೆನ್ನಾಗಿ ಅರಿತವನಾಗಿಯೂ, ಈ ವಾದ್ಯಗಳಲ್ಲದೆ ಮಂದಸ್ವರದ ಮದ್ದಲೆ, ಮೃದಂಗಗಳ ಬಗ್ಗೆಯೂ ಕುಣಿತದ ಬಗ್ಗೆಯೂ ಒಳ್ಳೆಯ ಪರಿಜ್ಞಾನವುಳ್ಳವನಾಗಿಯೂ, ಸರಿಯಾಗಿ ಹೊಂದಿಕೆಯಾಗುವಂತೆ ಹಾಡುಗಳನ್ನು ರಸವತ್ತಾಗಿ ಅಳವಡಿಸಬಲ್ಲವನಾಗಿಯೂ, ನೃತ್ಯಕ್ಕೆ ತಕ್ಕಂತೆ ಗಾನದ ನಾಲ್ಕು ಬಗೆಯ ಗತಿಗಳನ್ನೂ ಸಮಂಜಸವಾಗಿ ಮೇಳೈಸಬಲ್ಲವನಾಗಿಯೂ, ತಮಿಳುನುಡಿಯಲ್ಲದೆ ದೇಸಿಕವನ್ನೂ (ಹೊರನಾಡಿನ ಭಾಷೆಯನ್ನು ಅಂದರೆ, ಸಂಸ್ಕೃತ, ತದ್ಭವ, ದೇಶಾಂತರದ ಭಾಷೆ ಮತ್ತು ಎರವಲು ಪದಗಳು ಎಂಬಿವುಗಳನ್ನೂ) ಆಯಾ ಧ್ವನಿಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಗಾಯನಕ್ಕೆ ಅಳವಡಿಸುವ ಕ್ರಮವನ್ನು ತಿಳಿದವನಾಗಿಯೂ, ನೃತ್ಯ ಮತ್ತು ಗೀತೆಗಳನ್ನು ವಾಗ್ಗೇಯಕಾರನ ಭಾವ ಮತ್ತು ಕಲ್ಪನೆ ಸ್ವಲ್ಪವೂ ಕೆಡದಂತೆ ವಿಂಗಡಿಸಿ, ಪ್ರಮಾಣ ಗ್ರಂಥಗಳಲ್ಲಿ ನಿರೂಪಿಸಿರುವಂತೆ ಆಲಾಪನೆ ಮಾಡಬಲ್ಲವನಾಗಿಯೂ, ದಣಿಯದ ಸ್ವಭಾವದವನಾಗಿಯೂ ಇದ್ದನು.

---

* ಅಲ್ಲಿಯಂ, ಕೊಡುಕೊಟ್ಟಿ ಮೊದಲಾದ ನೃತ್ಯಗಳನ್ನು ಮುಂದೆ ವರ್ಣಿಸಲಾಗಿದೆ.

ವಾಗ್ಗೇಯಕಾರನ ಲಕ್ಷಣ

ಹಾಡುಗಳನ್ನು ಕಟ್ಟುವ ವಾಗ್ಗೇಯಕಾರನ ಯೋಗ್ಯತಾಂಶಗಳು ಹೀಗಿದ್ದವು. ಮೂರು ಕಡೆಯಲ್ಲೂ ಮೊರೆವ ಕಡಲಿನಿಂದ ಆವೃತವಾದ ತಮಿಳುನಾಡಿನ ಆದ್ಯಂತ ಪ್ರಖ್ಯಾತನಾಗಿದ್ದು, ಸಾಹಿತ್ಯಕ ತಮಿಳು, ಗೀತ ತಮಿಳು, ನಾಟಕ ತಮಿಳು ಎಂಬ ಮೂರು ಪ್ರಭೇದಗಳನ್ನೊಳಗೊಂಡ ಮುತ್ತಮಿಳನ್ನು ಚೆನ್ನಾಗಿ ಅಧ್ಯಯನ ಮಾಡಿ ಪಾರಂಗತನಾಗಿಯೂ, ಉತ್ತಮ ನಾಟ್ಯಶಾಸ್ತ್ರ ಗ್ರಂಥಗಳಲ್ಲಿ ನಿರೂಪಿಸಿರುವಂತೆ ರಾಜನ ಒಡ್ಡೋಲಗದಲ್ಲಿ ಪ್ರದರ್ಶಿಸತಕ್ಕ "ವೇತ್ತಿಯಲ್" ಮತ್ತು ಜನಸಾಮಾನ್ಯರ ಮುಂದೆ ಪ್ರದರ್ಶಿಸಲಾಗುವ "ಪೊದುವಿಯಲ್" ಎಂಬ ನಾಟ್ಯದ ಎರಡು ಪರಿಪಾಟಿಗಳನ್ನು ಚೆನ್ನಾಗಿ ಅರಿತವನಾಗಿಯೂ, ಗಾಯನಾಚಾರ್ಯನು ಬಯಸಿದಂಥ ವರ್ಣ, ಆಲಾಪನೆ ಮೊದಲಾದವುಗಳ ಲಕ್ಷಣಗಳನ್ನು ತಿಳಿದು, ತಾಳ, ಲಯಗಳಿಗೆ ನೈನವಾಗಿ ಭಾವಗಳು ಮೂಡಿ ಬರುವಂತೆ ಹಾಡು ಕಟ್ಟಬಲ್ಲವನಾಗಿಯೂ, ಛಿದ್ರಾನ್ವೇಷಣೆ ಮಾಡುವವರ ಕಟು ಟೀಕೆಗಳನ್ನು ಅರಿತು ದೋಷರಹಿತವಾದ ನಾಟ್ಯಸಾಹಿತ್ಯ ರಚನೆ ಮಾಡಲು ಸಾಮರ್ಥ್ಯವುಳ್ಳವನಾಗಿಯೂ, ನಿರ್ದುಷ್ಟ ನಾಲಗೆಯುವನಾಗಿಯೂ, ವರಕವಿಯೂಗಿಯೂ ಇದ್ದನು.

ಮದ್ದಲೆಗಾರನ ಲಕ್ಷಣ

ಮದ್ದಲೆಗಾರನು ಮುತ್ತಮಿಳಿನ (ಮೂರು ವಿಧದ ತಮಿಳು ಭಾಷೆಯ) ರೂಪವನ್ನೂ, ಕುಣಿತ, ಹಾಡು, ರಾಗ, ತಾನ, ವರ್ಣ, ತಾಳ, ಲಯ ಇವುಗಳ ಗುಣ ದೋಷಗಳನ್ನೂ ಚೆನ್ನಾಗಿ ತಿಳಿದು, ಅಚ್ಚ ತಮಿಳುಪದಗಳು, ಸಂಸ್ಕೃತ ಪದಗಳು, ತದ್ಭವಗಳು, ಹೊರನಾಡುಗಳಿಂದ ಬಂದು ಬಳಕೆಯಲ್ಲಿರುವ ಎರವಲು ಪದಗಳು ಎಂಬ ಈ ನಾಲ್ಕು ಬಗೆಯ ಪದಗಳ ಬಗ್ಗೆ ಆಳವಾಗಿ ಅಭ್ಯಾಸಮಾಡಿ, ಒಂದು ಗೀತವನ್ನು ಸಂಗತಿ, ಆವರ್ತನ ಮಾಡುವಾಗ ಸಡಿಲು ಬಿಡದೆ ನೆರವಲ್ ಮಾಡುತ್ತಲೂ, ಇಮ್ಮಡಿಸುವಾಗ ವೀಣೆಯಲ್ಲೂ, ಕೊಳಲಿನಲ್ಲೂ, ಕಂಠದಲ್ಲೂ ನುಡಿಸುವ ಸಂಗತಿಗಳು ಶ್ರೋತೃಗಳ ಕಿವಿಗಳಿಗೆ ಸ್ಪಷ್ಟವಾಗಿ ಕೇಳಿಸುವಂತೆ ಬೆರಳುಗಳಿಂದ ಚಮತ್ಕಾರವಾಗಿ ಮೃದಂಗವನ್ನು ಬಾರಿಸುವ ಜಾಣ್ಮೆಯುಳ್ಳವನಾಗಿದ್ದನು. ಅಲ್ಲದೆ, ಇತರ ವಾದ್ಯಗಳ ಲೋಪಗಳನ್ನು ತುಂಬುವಲ್ಲೂ, ಅವುಗಳ ಹೆಚ್ಚಳವನ್ನು ತಗ್ಗಿಸುವಲ್ಲೂ, ರಾಗದಲ್ಲಿ ತೆರಪು ತೋರದಂತೆ ನುಡಿಸುವ ಚತುರತೆಯುಳ್ಳವನಾಗಿಯೂ ಮತ್ತು ಅಂದಗೆಡದೆ ಕೈಚಳಕಗಳನ್ನೆಲ್ಲಾ ಮಾಡಬಲ್ಲವನಾಗಿಯೂ ಇದ್ದನು.

ಕೊಳಲೋಜನ ಲಕ್ಷಣ

ಕೊಳಲೋಜನು ಗಾಯನಶಾಸ್ತ್ರದ ಪೂರ್ಣಪಂಡಿತನಾಗಿದ್ದನಲ್ಲದೆ ಚಿತ್ರ ಸಂಯೋಗ ಮತ್ತು ವಂಚನಾ ಸಂಯೋಗಗಳಲ್ಲಿ ನುರಿತ ಕೈಯಾಗಿದ್ದನು. [ಒಂದು

ಪದವನ್ನು ಹಾಡುವಾಗ ಅದರಲ್ಲಿ ರಾಗಕ್ಕೆ ಹೊಂದಿಕೆಯಾದ ಅಕ್ಷರದ ಮೇಲೆ ಪರುಷ ಒತ್ತಕ್ಷರ ಬಂದಲ್ಲಿ ಅದನ್ನು ಮೃದುವರ್ಣದ ಒತ್ತಿನಂತೆ ನುಡಿಸುವುದಕ್ಕೆ ಚಿತ್ರ ಸಂಯೋಗ ಎಂದು ಹೆಸರು. ರಾಗಕ್ಕೆ ಹೊಂದದೆ ಇರುವ ಅಕ್ಷರದ ಮೇಲೆ ಪರುಷ ಒತ್ತಕ್ಷರ ಬಂದಲ್ಲಿ ಅದನ್ನು ಮೃದುವರ್ಣದ ಒತ್ತಿನಂತೆ ನುಡಿಸುವುದಕ್ಕೆ ವಂಚನಾ ಸಂಯೋಗ ಎಂದು ಹೆಸರು.]

ಆರೋಹಣ ಅವರೋಹಣಗಳಲ್ಲಿ ಯಥಾಕ್ರಮ ಬೆರಳುಗಳನ್ನು ಬಿಟ್ಟು ಹಿಡಿಯುವ ನಾಲ್ಕು ಬಗೆಯ ವರ್ತನೆಗಳಲ್ಲಿ ಲಯ ತಪ್ಪದೆ 'ಅರುಂಪಾಲೈ,' 'ಶೆಂಪಾಲೈ' ಮುಂತಾದ ಪ್ರಭೇದಗಳಿಗೆ ಅನುಗುಣವಾಗಿ ನುಡಿಸಬಲ್ಲವನೂ, ಮೃದಂಗ, ಮದ್ದಳೆ ಮತ್ತು ಡೋಲುಗಳೊಡನೆ ತಾಳ, ಲಯ ತಪ್ಪದೆ ಹೊಂದಿಕೆಯಾಗುವಂತೆ ಉಪಯುಕ್ತ ಗತಿಯಲ್ಲಿ ನುಡಿಸಿ, ವೀಣೆಯ ಶ್ರುತಿಯನ್ನು ಆಧಾರವಾಗಿಟ್ಟು ಅದಕ್ಕನುಗುಣವಾಗಿಯೂ ಸಂಗೀತಗಾರನು ಹಾಡುವ ರಾಗಕ್ಕೆ ಸ್ವರ ವ್ಯತ್ಯಾಸ ಬಾರದಂತೆ ನೆರೆಯ ವರ್ಣವು ಅದರೊಡನೆ ಬೆರೆಯದಂತೆ ಲಕ್ಷ್ಯವಿಟ್ಟು ಲಯಕ್ಕೆ ಲೋಪವಿಲ್ಲದಂತೆ ನುಡಿಸಬಲ್ಲವನಾಗಿಯೂ ಇದ್ದನು. ಅಲ್ಲದೆ ಸ್ವರಗಳ ಮೇಲೆ ಪೂರ್ಣ ಹತೋಟಿಯುಳ್ಳವನಾಗಿ ರಾಗತಾನಗಳಲ್ಲಿ ಯಾವ ಬಗೆಯ ಕುಂದು ಇಲ್ಲದಂತೆ ಸ್ವರಗಳನ್ನು ಒಂದೊಂದಾಗಿ ಬಿಡಿಸಿ ಬಿಡಿಸಿ ನುಡಿಸಿ ತೋರಿಸಬಲ್ಲ ದಕ್ಷತೆಯುಳ್ಳವನಾಗಿಯೂ ಇದ್ದನು.

ಯಾಳಾಚಾರ್ಯನ ಲಕ್ಷಣ

ಇವರುಗಳಲ್ಲದೆ ಯಾಳನ್ನು ಬಾರಿಸುವ ಯಾಳಾಚಾರ್ಯನಿದ್ದನು. [ಯಾಳ್ ಎಂಬುದು ಹಿಂದಿನ ಕಾಲದ ವೀಣೆಯಂತಹ ಒಂದು ವಾದ್ಯ. ಇದಕ್ಕೆ ಸಾಧಾರಣವಾಗಿ ಹದಿನಾಲ್ಕು ತಂತಿಗಳು ಇರುತ್ತಿದ್ದವು] ಸಪ್ತಸ್ವರಗಳಿಗೆ ತಮಿಳು ಭಾಷೆಯಲ್ಲಿ ಕುರಲ್, ತುತ್ತಂ, ಕೈಕ್ಕಿಳೈ, ಉಳೈ, ಇಳಿ, ವಿಳರಿ, ತಾರಂ ಎಂದು ಹೆಸರು. ಸಂಸ್ಕೃತದಲ್ಲಿ ಸಪ್ತಸ್ವರಗಳನ್ನು ಷಡ್ಜ, ರಿಷಭ, ಗಾಂಧಾರ, ಮಧ್ಯಮ, ಪಂಚಮ, ದೈವತ, ನಿಷಾಧ ಎನ್ನುವರು. ಕುರಲ್ ಎಂಬುದು ಮಧ್ಯಮಕ್ಕೆ ಸಾಟಿಯಾದದ್ದು ಎಂದು ಕೆಲವರು ತಜ್ಞರ ಅಭಿಪ್ರಾಯ.

ಒಂದು ರಾಗವನ್ನು ಉತ್ಪಾದಿಸಲು ಮೊದಲು ಮಾಡುವ ಸ್ವರಕ್ಕೆ ಕುರಲ್ ಎನ್ನುವರು. ಇದನ್ನು ಆಧಾರಶ್ರುತಿ ಎನ್ನಬಹುದು. ಯಾವ ಸ್ವರವನ್ನಾದರೂ ಆಧಾರಶ್ರುತಿಯಾಗಿಟ್ಟುಕೊಂಡು ಹಾಡಬಹುದು. ಒಂದು ತಂತಿಯಿಂದ ಅದರ ಐದನೆಯ ತಂತಿಗೆ ಅದರ ಕೆಳೆ (=ಜ್ಞಾತಿ) ಎಂದು ಹೆಸರು. ನಾಲ್ಕನೆಯ ತಂತಿಗೆ ನಟ್ಪು (=ಮೈತ್ರಿ) ಎಂದು ಹೆಸರು; ಮೂರನೆಯ ಮತ್ತು ಆರನೆಯ ತಂತಿಗಳಿಗೆ ಪಗೈ (=ಹಗೆ, ವಿರೋಧಿ) ಎಂದು ಹೆಸರು. ಹಾಗೂ ಎರಡನೆಯ ಮತ್ತು ಏಳನೆಯ ತಂತಿಗಳಿಗೆ ಇಣೆ (=ಜೊತೆ) ಎಂದು ಹೆಸರು.

ಕುರಲನ್ನೇ ಕುರಲಾಗಿ (ಶ್ರುತಿಯಾಗಿ) ಇಟ್ಟುಕೊಂಡು ಹಾಡುವ ಗೀತಕ್ಕೆ 'ಅರುಂಪಾಲೈ' ಎಂತಲೂ, ತುತ್ತಂ, ಕೈಕ್ಕಿಳೈ, ಉಳೈ, ಇಳಿ, ವಿಳರಿ, ತಾರಂ ಇವುಗಳನ್ನು ಆಧಾರವಾಗಿಟ್ಟುಕೊಂಡು ಹಾಡುವ ಗೀತೆಗಳಿಗೆ ಕ್ರಮವಾಗಿ ಶೆವ್ವಳಿಪ್ಪಾಲೈ, ಪಡುಮಲೈಪ್ಪಾಲೈ, ಶೆಂಪಾಲೈ, ಮೇರ್ಚೆಂಪಾಲೈ, ವಿಳರಿಪ್ಪಾಲೈ, ಕೋಡಿಪ್ಪಾಲೈ ಎಂದೂ ಹೆಸರು. ಯಾಳಿನ ಏಳು ತಂತಿಗಳಿಂದ ಏಳು ಪಾಲೈಗೀತಗಳನ್ನು ನುಡಿಸಬಹುದು.

ಶೆಂಪಾಲೈಯ ಕಡೆಯಲ್ಲಿನ ಪರುಷವಾದ ಗಾಂಧಾರದ ಎರಡು ಶ್ರುತಿಗಳಲ್ಲಿ ಒಂದನ್ನು ಮಧ್ಯಮದ ಮೊದಲಿನ ಮೃದುವರ್ಣದ ನಾಲ್ಕು ಶ್ರುತಿಗಳಲ್ಲಿ ಎರಡನ್ನು ತಕ್ಕ ತಂತಿಯಲ್ಲಿ ಕೈಕ್ಕಿಳೆಯಾಗಿ ನಿಲ್ಲಿಸಲು ತಾರವೇ ಕೈಕ್ಕಿಳೆಯಾಗಿ ಪರಿಣಮಿಸುವುದು. ತಾರ ತಂತಿಯು ಉಳಿದ ಒಂದು ಶ್ರುತಿಯನ್ನು ವಿಳರಿಗೆ ಈಯಲು ಅದು ತುತ್ತವಾಗುವುದು.

ಉಳೈ ಮೊದಲಾದ ಉಳಿದ ತಂತಿಗಳು ತಮತಮಗೆ ಕೆಳೆಯಾದ ತಂತಿಗಳೊಡನೆ ಸೇರಲು ಹದಿನಾರು ಸರಣಿಗಳಾಗುವುವು. ಉಳೈ ಮೊದಲುಗೊಂಡು ಕೈಕ್ಕಿಳೈ ಕೊನೆಯಾಗಿ ಮೃದುವರ್ಣ ನಾಲ್ಕು, ಸಮವರ್ಣ ಏಳು, ಪರುಷವರ್ಣ ಮೂರು ಸೇರಿ ಉಳೆಯನ್ನು ಕುರಲಾಗಿ ನೂತನ ರೀತಿಯಲ್ಲಿ ಶೆಂಪಾಲೈಯಾಗುವುದು. ಒಂದು ಕ್ರಮವಾಗಿ ಕೈಕ್ಕಿಳೈಯಿಂದ ಪಡುಮಲೈಪ್ಪಾಲೈ, ತುತ್ತದಿಂದ ಶೆವ್ವಳಿಪ್ಪಾಲೈ, ಕುರಲಿನಿಂದ ಅರುಂಪಾಲೈ, ಇಳಿಯಿಂದ ಮೇರ್ಚೆಂಪಾಲೈ, ವಿಳರಿಯಿಂದ ವಿಳರಿಪ್ಪಾಲೈ, ತಾರದಿಂದ ಕೋಡಿಪ್ಪಾಲೈ—ಹೀಗೆ ಎಲ್ಲಾ ವಿಧವಾದ ಗೀತಗಳನ್ನು ನುಡಿಸಬಲ್ಲವನಾಗಿದ್ದನು ಆ ಯಾಳಾಚಾರ್ಯನು.

ನಾಟ್ಯರಂಗದ ರಚನೆ

ನೃತ್ಯಕ್ಕೆ ತಕ್ಕಂತಹ ನಾಟ್ಯರಂಗವನ್ನು ಶಿಲ್ಪಶಾಸ್ತ್ರೋಕ್ತ ರೀತಿಯಲ್ಲಿ ರಚಿಸಲಾಗಿತ್ತು. ಅದಕ್ಕೆ ತಕ್ಕ ನೆಲವನ್ನು ಗೊತ್ತುಪಡಿಸಲು ಒಂದು ವಿಧಾನವಿತ್ತು. ನೆಲವನ್ನು ಅಗೆದು, ಮತ್ತೆ ಆ ಮಣ್ಣಿನಿಂದ ಕುಳಿಯನ್ನು ತುಂಬಿದಾಗ ಮಣ್ಣು ಮಿಕ್ಕರೆ, ಅದು ಗಟ್ಟಿ ನೆಲ; ಹಾಗೆ ತುಂಬಿದಾಗ ಮಣ್ಣು ಸಾಲದೆ ಬಂದರೆ ಅದು ಮೆದು ನೆಲ; ಸರಿಯಾಗಿ ಕುಳಿ ತುಂಬಿದರೆ ಅದು ಎಡತರ ನೆಲ. ರಂಗಮಂಟಪವನ್ನು ರಚಿಸಲು ಎಡತರ ನೆಲವೇ ಪ್ರಶಸ್ತವಾದುದು.

ನಾಟ್ಯಶಾಸ್ತ್ರದ ಪ್ರಕಾರ ರಂಗಮಂಚದ ಉದ್ದ-ಅಗಲ ಮೊದಲಾದವುಗಳ ಅಳತೆಯು ನಿಗದಿಯಾಗಿತ್ತು. ಉದ್ದಳತೆಗೆ ಒಂದು ಮಾನದಂಡ ಬೇಕಲ್ಲವೇ? ಪ್ರಮಾಣಗ್ರಂಥಗಳಲ್ಲಿ ಹೇಳಿರುವಂತೆ ಪೊದಿಯಮಲೆಯಂತಹ ದಿವ್ಯ ಬೆಟ್ಟಗಳಲ್ಲಿ ಬೆಳೆದ, ಮತ್ತು ಕಣ್ಣುಗಳ ನಡುವೆ ಒಂದು ಗೇಣು ಅಂತರವುಳ್ಳ ಬಿದಿರಿನ ಕೋಲನ್ನು ಉತ್ತಮ ಮನುಷ್ಯನ ಹೆಬ್ಬೆಟ್ಟಿನ ಅಗಲದ ಇಪ್ಪತ್ತನಾಲ್ಕರಷ್ಟು ಉದ್ದವುಳ್ಳದ್ದಾಗಿ

ಕತ್ತರಿಸಿ ಅದನ್ನು ಅಳತೆಗೋಲಾಗಿ ಬಳಸುತ್ತಿದ್ದರು. ಇಂತಹ ಕೋಲಿನಿಂದ ಎಂಟು ಕೋಲಿನಷ್ಟು ಉದ್ದವೂ, ಏಳು ಕೋಲಿನಷ್ಟು ಅಗಲವೂ ಮತ್ತು ಒಂದು ಕೋಲಿನಷ್ಟು ಎತ್ತರವೂ ಉಳ್ಳ ವೇದಿಕೆಯನ್ನು ಕಟ್ಟಿಸಿ, ಅದರ ಮೇಲೆ ಹಲಗೆಗಳನ್ನು ಹಾಸಿ, ನಾಲ್ಕು ಕೋಲಿನಷ್ಟು ಎತ್ತರಕ್ಕೆ ಮೇಲ್ಛಾವಣಿಯನ್ನು ಕಟ್ಟಿದ್ದರು. ಇದಕ್ಕೆ ತಕ್ಕಂತೆ ಎರಡು ಕಡೆಯೂ ಎರಡು ಬಾಗಿಲುಗಳನ್ನು ಇಡಿಸಿದ್ದರು. ವಜ್ರದೇಹ, ವಜ್ರದಂತ, ವರುಣ, ಮತ್ತು ರಕ್ತಕೇಶ್ವರ ಎಂಬ ನಾಲ್ಕು ವರ್ಣ ಭೂತಗಳ ಚಿತ್ರಗಳನ್ನು ಬರೆಯಿಸಿ, ಎಲ್ಲರೂ ನೋಡಿ, ನುತಿಸಿ ಎರಗುವಂತೆ ನಾಟ್ಯರಂಗದ ಮೇಲೆ ತೂಗು ಹಾಕಿದ್ದರು. ರಂಗಮಂಟಪದ ಮೇಲೆ ಕಂಬಗಳ ನೆರಳು ಎಲ್ಲೂ ಬೀಳದಂತೆ ದೀಪರಾಜಿಗಳನ್ನು ಅಳವಡಿಸಿ ರಂಗಮಂಚದ ಎಡಗಡೆ 'ಒರುಮುಖ' ಯವನಿಕೆಯನ್ನೂ, ಬಲಗಡೆ 'ಪೊರುಮುಖ' ಯವನಿಕೆಯನ್ನೂ, ಕೋಲವನ್ನು ಮರೆಯಿಸಿ ಬರುವೆಡೆ ಮೇಲುಗಡೆಯಿಂದ ಇಳಿಬಿಟ್ಟಿರುವ 'ಕರಂದುವರಲ್' ಯವನಿಕೆಯನ್ನೂ ವೈಸವಾಗಿ ಕಟ್ಟಿದ್ದರು. ಇದಲ್ಲದೆ ಚಿತ್ರವಿಚಿತ್ರವಾದ ವಿತಾನವನ್ನು ಕಟ್ಟಿಸಿ ಮುತ್ತಿನ ತೋರಣವನ್ನೂ ಜಾಲರಿಗಳನ್ನೂ ತೊಂಗಲುಗಳನ್ನೂ ನೇತು ಹಾಕಿದ್ದರು. ಇಂತು ರಂಗಮಂಟಪವನ್ನು ನವೀನವಾಗಿಯೂ ಮನೋಹರವಾಗಿಯೂ ಸಿದ್ಧಪಡಿಸಿದ್ದರು.

ತಲೈಕ್ಕೋಲ್ ಪೂಜಾವಿಧಿ

ಕಾಳಗದಲ್ಲಿ ಸೋತುಹೋದ ರಾಜನಿಂದ ಕಿತ್ತುಕೊಂಡ ಬೆಳ್ಗೊಡೆಯ ಹಿಡಿಯನ್ನು ತಂದು ಗಿಣ್ಣುಗಳಿಗೆ ನವಮಣಿಗಳ ಕೆತ್ತನೆ ಕೆಲಸ ಮಾಡಿಸಿ ನಡುವಣ ಎಡೆಯಲ್ಲಿ ಜಾಂಬುನದವೆಂಬ ಚೊಕ್ಕ ಬಂಗಾರದ ತಗಡನ್ನು ಗಿಣ್ಣುಗಳ ನಡುವೆ ಹೊದ್ದಿಸಿ ಅಳವಡಿಸಿದ ನಾಟ್ಯ ದಂಡಕ್ಕೆ "ತಲೈಕ್ಕೋಲ್" ಎಂದು ಹೆಸರು. ಅಂತಹ ತಲೈಕ್ಕೋಲನ್ನು ಇಂದ್ರಕುಮಾರನಾದ ಜಯಂತನೆಂದು ಭಾವಿಸಿ ಪೊಡವಿಯನ್ನಾಳುವ ಶ್ವೇತಚ್ಛತ್ರದ ರಾಜನ ಅರಮನೆಯಲ್ಲಿ ಒಂದೆಡೆ ಪ್ರತಿಷ್ಠೆ ಮಾಡಿಸಿ ಪೂಜೆಗೈಯ್ಯುತ್ತಿದ್ದರು. ಒಂದು ಶುಭದಿನದಲ್ಲಿ ಪುಣ್ಯನದಿಗಳಿಂದ ಹೊಂಗಲಸಗಳಲ್ಲಿ ತಂದ ತೀರ್ಥಗಳಿಂದ ಅದಕ್ಕೆ ಮಜ್ಜನ ಮಾಡಿಸಿ, ಹೂಮಾಲೆಗಳನ್ನು ಮುಡಿಸುತ್ತಿದ್ದರು. ಹೊಂದೊಡಿಗೆಗಳಿಂದಲೂ ನೊಸಲುಪಟ್ಟಿಯಿಂದಲೂ ಅಲಂಕೃತವಾದ ಪಟ್ಟದಾನೆಯ ಕೈಯಲ್ಲಿ ತಲೈಕ್ಕೋಲನ್ನು ಹರಸಿಕೊಟ್ಟು, ಡೋಲು, ಢಕ್ಕೆ, ನಗಾರಿ, ಭೇರಿಗಳು ಮೊಳಗುತ್ತಿರಲು, ವಾದ್ಯ ಸಮೂಹ ಬಾಜಿಸುತ್ತಿರಲು, ಮಂತ್ರಿಗಳು, ಪುರೋಹಿತರು, ದಂಡನಾಯಕರು, ದೂತರು, ಚಾರಣರು ಎಂಬ ಐದು ಪಿರಿಯ ಗಣಗಳಾದ ತನ್ನ ಪರಿವಾರ ಜನರೆಲ್ಲರೂ ಒಡವೆರಸಿ ಬರಲು, ಅರಸನು ಪಟ್ಟವರ್ಧನದೊಡನೆ ಬೀದಿಯಲ್ಲಿರುತ್ತಿದ್ದ ತೇರಿನ ಬಳಿ ಸಾರ್ದು, ಅದನ್ನು ಬಲವಂದು ತೇರಿನ ಮೇಲೆ ಇರುತ್ತಿದ್ದ ಕವಿಯ ಕೈಗೆ ತಲೈಕ್ಕೋಲನ್ನು ಕೊಡುತ್ತಿದ್ದರು. ಬಳಿಕ

ತೇರಿನೊಂದಿಗೆ ಪುರಪ್ರದಕ್ಷಿಣೆ ಮಾಡಿ ರಂಗಮಂಟಪವನ್ನೈದಿ ಎದುರುಮುಖವಾಗಿ ತಲೈಕ್ಕೋಲನ್ನು ಇಡುತ್ತಿದ್ದರು. ಅನಂತರ ಅರಸ, ಮಂತ್ರಿ, ದಂಡನಾಯಕ ಮೊದಲಾದ ಆಸ್ಥಾನಿಕರು ತಮತಮಗೆ ತಕ್ಕ ಆಸನಗಳಲ್ಲಿ ಮಂಡಿಸಿದ ಮೇಲೆ ವಾದ್ಯಗಾರರು ಕ್ರಮವರಿತು ನಿಲ್ಲುತ್ತಿದ್ದರು.

ರಂಗಪ್ರವೇಶ

ಮೊತ್ತಮೊದಲು ರಂಗವನ್ನೇರುವ ನರ್ತಕಿ ಬಲಗಾಲನ್ನಿಟ್ಟು ರಂಗವನ್ನು ಪ್ರವೇಶಿಸಬೇಕೆಂಬ ಪೂರ್ವಸಂಪ್ರದಾಯಕ್ಕೆ ಅನುಸಾರವಾಗಿ ಮಾದವಿ ಬಲಗಾಲನ್ನು ಮುಂದಿಟ್ಟು ನಾಟ್ಯರಂಗವನ್ನು ಹತ್ತಿ ಯಥಾವಿಧಿ ಬಲಗಡೆಯ ಕಂಬದ ಬಳಿಯಿದ್ದ ಪೊರುಮುಖ ಜವನಿಕೆಯನ್ನು ಸೇರಿದಳು. ಹಿಂದೆ ನಾಟ್ಯವಾಡಿ ಪೆಸರ್ವೆತ್ತ ಬದುರ್ವೆಂಡಿರು ಒರುಮುಖ ಜವನಿಕೆಗೆ ನೆಲೆಯಾದ ಎಡಗಡೆಯ ಕಂಬಗಳ ಬಳಿ ಪದ ಹಾಡಲು ಸಾಲಾಗಿ ನಿಂತಿದ್ದರು. ನಲ್ಮೆ ಮಿಗಲೆಂದೂ, ಅನಿಷ್ಟ ನೀಗಲೆಂದೂ ನುತಿಗೈದು ‘ ಓರೊತ್ತುವಾರಂ ’ ಮತ್ತು ‘ ಈರೊತ್ತುವಾರಂ ’ ಎಂಬ ಮಂಗಳಾಚರಣೆಯನ್ನೂ ಎಲ್ಲರೂ ಒಕ್ಕೊರಲಿನಿಂದ ಪಾಡಿದರು. ಮಂಗಳಾಚರಣೆ ಮುಗಿಯುವಲ್ಲಿ ಎಲ್ಲ ವಾದ್ಯಗಳೂ ಒಮ್ಮೆಗೆ ಬಾಜಿಸಿದವು. ಬಳಿಕ ಕೊಳಲಿನ ಜಾಡು ಹಿಡಿದು ಯಾಳ್ ನಿಂತಿತು; ಯಾಳಿನ ಸ್ವರವನ್ನು ಅನುಸರಿಸಿ ಮೃದಂಗ ಕಳೆಕಟ್ಟಿ ನಿಂತಿತು; ಮೃದಂಗವನ್ನು ಹಿಂಬಾಲಿಸಿ ಢಕ್ಕೆಯ ಮೊಳಗು ನಿಂತಿತು; ಢಕ್ಕೆಯ ಧ್ವನಿಗೆ ಅನುಸರಣೆಯಾಗಿ ಆಮಂತ್ರಿಕೆ ಎಂಬ ವಾದ್ಯದ ಮೊರೆತ ನಿಂತಿತು. ಗರುಡನೂ ಅದರ ನೆರಳೂ ಹೊಂದಿಕೊಂಡಿರುವಂತೆ ಇತರ ವಾದ್ಯಗಳ ದನಿಗಳೊಡನೆ ಆಮಂತ್ರಿಕೆಯ ದನಿ ಅಭಿನ್ನವಾಗಿ ಹೊಂದಿ ಒಂದೇ ಲಯದಲ್ಲಿತ್ತು. ತಾಳದ ಎರಡು ಪೆಟ್ಟುಗಳಿಗೆ ಒಂದು ಮಂಡಿಲದಂತೆ ಹತ್ತು ಮಂಡಿಲಗಳನ್ನು ಆಡಿ, ಆದರ ಮಕುಟಮಣಿಯಂತೆ ತೀರ್ಕಣೆಯಾಗಿ ಹನ್ನೊಂದನೆಯ ಮಂಡಿಲದಿಂದ ದೇಸಿ ಕುಣಿತವನ್ನು ಯಥಾವಿಧಿ ಆಡಿ ಮುಗಿಸಲು “ ಅಂದರಕ್ಕೊಟ್ಟು ” ಅಥವಾ “ ಮುಖ ” ಎನ್ನುವ ನೃತ್ಯ ಪೂರ್ತಿಯಾಯಿತು. ಈ ನೃತ್ಯವನ್ನು ಮಾದವಿ ನೇಪಥ್ಯದಲ್ಲೇ ಆಡಿ ಮುಗಿಸಿದಳು. ಏಕೆಂದರೆ “ಅಂದರಕ್ಕೊಟ್ಟು” ಆದ ಮೇಲೆಯೇ ನಾಟ್ಯಗಾತಿ ನಡುರಂಗಕ್ಕೆ ಬಂದು ಮುಖ ತೋರಿಸತಕ್ಕದ್ದು ಎಂಬ ನಿಯಮವುಂಟು. ಈಗ ಮಾದವಿಯು “ ಕರಂದುವರಲ್ ” ಜವನಿಕೆಯ ಪಕ್ಕದಿಂದಲೇ ನಾಟ್ಯರಂಗವನ್ನು ಪ್ರವೇಶಿಸಿ “ ಪಾಲೈಪ್ಪಣ್ ” ಎಂಬ ಹಾಡನ್ನು ರಾಗಾಲಾಪನೆಯೊಡನೆ ಮನೋಜ್ಞವಾಗಿ ಹಾಡಿದಳು. ಉಗ್ರ, ತುರುವೈ, ಆಭೋಗ ಮತ್ತು ಪ್ರಕಲೆ ಎಂಬ ನಾಲ್ಕು ಅಂಶಗಳನ್ನು ಕುಂದಿಲ್ಲದೆ ಅಳವಡಿಸಿಕೊಂಡು ಗೀತ, ವಾದ್ಯ, ನೃತ್ಯ ಎಂಬ ಮೂರು ಅಂಗಗಳನ್ನೂ ಒಪ್ಪುವಂತೆ ನೆಗಳ್ಚಿ, ತ್ರಿಪುಟತಾಳದಲ್ಲಿ ಮೊದಲುಮಾಡಿ ಏಕತಾಳದಲ್ಲಿ ಮುಗಿಸುತ್ತ, ಐದು ಮಂಡಿಲದಿಂದ ದೇಸಿ ಕುಣಿತ ಎಲ್ಲವನ್ನೂ ಸೊಗಸಾಗಿ ಆಡಿ

ತೋರಿಸಿದಳು. ತರುವಾಯ ಅವಳು ವಡುಕು (ಮಾರ್ಗ) ಕುಣಿತವನ್ನು ಬಲು ರಮ್ಯವಾಗಿ ಆಡಿ ತೋರಿಸಿದಳು. ಪಂಚತಾಳ ಪ್ರಬಂಧವಾಗಿ ರಚಿತವಾದ ವಡುಕು ಕುಣಿತದ ಒತ್ತುಗಳನ್ನು ಇಮ್ಮಡಿಗಿಮ್ಮಡಿಯಾಗಿ ಆಡಿ, ಮೊದಲಿನಂತೆಯೇ ಮೂರು ಮಂಡಿಲದಲ್ಲಿ ಮೊದಲುಮಾಡಿ ಏಕತಾಳದಲ್ಲಿ ಮುಗಿಸುತ್ತ ವೈಶಾಖ ನೆಲೆಯಲ್ಲಿ ಹೊನ್ನ ಲತೆಯಂತಿದ್ದ ಗಾಡಿಕಾರ್ತಿ ಮಾದವಿ ನೃತ್ಯವನ್ನು ಆಡಿ ಮುಗಿಸಿದಳು.

ಹನ್ನೊಂದು ಮಾನಕ ನೃತ್ಯಗಳು

ನೃತ್ಯ ಶ್ರೇಣಿಯಲ್ಲಿ ಮುಖ್ಯವಾಗಿ ಮೇಲ್ಪಂಕ್ತಿಯಂತಿರುವ ಹನ್ನೊಂದು ನೃತ್ಯಗಳು ಇರುವುವು. ಇವುಗಳನ್ನು ಮಾದರಿಯ ನೃತ್ಯಗಳು ಅಥವಾ ಮಾನಕ ನೃತ್ಯಗಳು ಎಂದು ಭಾವಿಸಬಹುದು. ಈ ಹನ್ನೊಂದು ನೃತ್ಯಗಳ ವಿವರಣೆಯೂ ಸಹ ತಮಿಳು ಭಾಷೆಯ ಶಿಲಪ್ಪದಿಕಾರಂ ಗ್ರಂಥದಲ್ಲಿ ದೊರೆಯುತ್ತವೆ. ದೇವತೆಗಳು ಒಬ್ಬೊಬ್ಬರು ಒಂದೊಂದು ಸಂದರ್ಭದಲ್ಲಿ ಆಡಿದ ನಾಟ್ಯಗಳೇ ಈ ಹನ್ನೊಂದು ಮಾನಕ ನೃತ್ಯಗಳು. ಅವು ಯಾವುವೆಂದರೆ;

೧. ತ್ರಿಪುರವನ್ನು ಸುಟ್ಟು ಬೂದಿ ಮಾಡಬೇಕೆಂದು ದೇವರೆಲ್ಲರೂ ಬೇಡುತ್ತಿರಲು, ತುದಿಯಲ್ಲಿ ವಡವಾಗ್ನಿಯನ್ನುಳ್ಳ ಪೇರಂಬು ಅಪ್ಪಣೆಯನ್ನು ಕೋರುತ್ತಿರಲು, ಉಮಾದೇವಿ ಒಕ್ಕೆಲದಲ್ಲಿರಲು, ಹಿಂದೊಮ್ಮೆ ಭೈರವಿ ನಾಟ್ಯವಾಡಿದ ಸುಡುಗಾಡಿನಲ್ಲಿ ಉತ್ತುಂಗನಾದ ಮಾದೇವನು ಆಡಿದ ಕೊಡುಕೊಟ್ಟಿ ಅಥವಾ ಕೊಟ್ಟಿಚ್ಚೇದಂ ಎಂಬ ನಾಟ್ಯ. (ಇದರ ಶಬ್ದ ಚಿತ್ರ ಮುಂದೆ ಕೊಡಲಾಗಿದೆ.)

೨. ತೇರಿನ ಮುಂಬದಿಯಲ್ಲಿದ್ದ ಚತುರ್ಮುಖ ಬ್ರಹ್ಮನು ನೋಡುತ್ತಿರಲು, ಭೈರವಿಯ ರೂಪವನ್ನು ತಾಳಿ, ಬಿಳಿಯ ಭಸ್ಮವನ್ನು ಧರಿಸಿಕೊಂಡು ಮಾದೇವನು ಆಡಿದ ಪೆರ್ಮವೆತ್ತ ಪಾಂಡರಂಗಂ ಎಂಬ ನೃತ್ಯ.

೩. ಕಂಸನ ವಂಚನೆಯನ್ನು ಗೆಲ್ಲಲು ಘನಶ್ಯಾಮನು (ಕೃಷ್ಣನು) ಆಡಿದ ಆಟದೊಳು ಕಂಸನು ಕಳುಹಿಸಿದ ಆನೆಯ ಕೋಡನ್ನು ಮುರಿಯಲು ಆಡಿದ ಅಲ್ಲಿಯಂ ಎಂಬ ನಾಟ್ಯ.

೪. ಬಾಣಾಸುರನನ್ನು ಕೊಲ್ಲುವಲ್ಲಿ ಮಾಯಿಕನಾದ ಮಹಾವಿಷ್ಣು ಮಲ್ಲನಂತೆ ಆಡಿದ ಮಲ್ಲಿನಾಟ.

೫. ಕಡಲೊಳು ಅವಿತುಕೊಂಡಿದ್ದ ಶೂರಪದ್ಮನನ್ನು ಎದುರಿಸಿ ಅವನನ್ನು ಸಂಹಾರ ಮಾಡಿದ ಬಳಿಕ ಕಡಲ ತೆರೆಯನ್ನೇ ನಾಟ್ಯರಂಗವಾಗಿಸಿ ಅದರ ಮೇಲೆ ನಿಂತು ಮುರುಗನು (ಕುಮಾರಸ್ವಾಮಿ) ಆಡಿದ ದುಡಿಯಾಟ ಅಥವಾ ಡಕ್ಕೆ ನಾಟ್ಯ.

೬. ಕಾಳಗದಲ್ಲಿ ಸೋತು ಅಸುರರು ತಮ್ಮ ಕೈದುಗಳನ್ನು ಬಿಸುಟು ಖಿನ್ನರಾಗಿದ್ದಾಗ ಷಣ್ಮುಖನು ಕೊಡೆಯನ್ನು ಹಿಡಿದು ಅದನ್ನು ಮುಂದಕ್ಕೆ ಚಾಚಿ ಅದನ್ನೇ "ಒರುಮುಖವೆಳಿನಿ" ಪರದೆಯನ್ನಾಗಿ ಮಾಡಿಕೊಂಡು ಆಡಿದ ಕೊಡೆ ಕುಣಿತ.

೭. ಬಾಣಾಸುರನ ಹಿರಿಯ ನಗರವಾದ ಚೋ ನಗರದ ಬೀದಿಯೊಳು ಹೊಕ್ಕು ಇಡೀ ಪ್ರಪಂಚವನ್ನೇ ತನ್ನ ಪಾದಗಳಿಂದ ಅಳೆದ ಮಹಾವಿಷ್ಣುವು ಬಿಂದಿಗೆ ಕೊಡಗಳನ್ನು ಪಿಡಿದು ಆಡಿದ ಕೊಡಕ್ಕೂತ್ತು ಅಥವಾ ಕೊಡಗಳ ಕುಣಿತ.

೮. ತನ್ನ ಮಗನಾದ ಅನಿರುದ್ಧನನ್ನು ಸೆರೆ ಹಿಡಿದಿಟ್ಟದ್ದ ಬಾಣಾಸುರನ ಶೋಣಿತಪುರವೆಂಬ ಚೋ ನಗರನ್ನು ತಲುಪಿ, ತನ್ನ ಮಗನನ್ನು ಸೆರೆ ಬಿಡಿಸಿ, ಬಳಿಕ ತನ್ನ ಗಂಡಸುತನವನ್ನು ಕಳೆದುಕೊಂಡು ಪೆಣ್ಪರಿಜಾಗಿ ಮಾರ್ಪಟ್ಟು ಕಾಮನು ಆಡಿದ ಪೇಡಿಯಾಟವೆಂಬ ಪೆಣ್ಪರಿಜಿನ ನಾಟ್ಯ.

೯. ಕಡುಕೋಪಗೊಂಡ ಅಸುರರು ಮೋಸದಿಂದ ಮಾಡಿದ ಅಪ ಕೃತ್ಯಗಳನ್ನು ಸಹಿಸಲಾರದೆ ಮರದ ಕಾಲುಗಳನ್ನು ಅಳವಡಿಸಿಕೊಂಡು ದುರ್ಗೆಯು ಆಡಿದ ಮರಕ್ಕಾಲ್ ಕುಣಿತ.

೧೦. ಅಸುರರು ಕಾದುವುದನ್ನು ಬಿಟ್ಟು ಮೋಹಗೊಂಡು ಬೀಳುವಂತೆ ಕೆಂಪನೆಯ ಸಿರಿವೆಣ್ಣು ಮೋಹನಾಂಗಿಯ ರೂಪ ಧರಿಸಿ ಆಡಿದ ಪಾವೈಕ್ಕೂತ್ತು.

೧೧. ಬಾಣಾಸುರನ ಚೋ ನಗರದ ಬಡಗಣ ಬಾಗಿಲ ಬಳಿಯ ಹೊಲದಲ್ಲಿ ನಿಂದು ಇಂದ್ರಾಣಿಯು ಕಡೇ ವರ್ಣದ ಹೆಂಗಸಿನ ರೂಪ ತಾಳಿ ಆಡಿದ ಕಡೆಯಂ ಎಂಬ ಕುಣಿತ.

ಈ ಹನ್ನೊಂದು ನಾಟ್ಯದೊಳು ಕೊಟ್ಟಿಚ್ಚೇದಂ, ಪಾಂಡರಂಗಂ, ಅಲ್ಲಿಯಂ, ಮಲ್ಲಿನಾಟ, ಕೊಡೆ ಕುಣಿತ ಮತ್ತು ಕೊಡಗಳ ಕುಣಿತ—ಈ ಆರು ನಾಟ್ಯಗಳನ್ನು ನಿಂತುಕೊಂಡು ಆಡತಕ್ಕದ್ದು. ಹಾಗೂ ಢಕ್ಕೆ ನಾಟ್ಯ, ಪೇಡಿಯಾಟ, ಮರಕ್ಕಾಲ್ ಕುಣಿತ, ಪಾವೈಕ್ಕೂತ್ತು, ಕಡೆಯಂ ಎಂಬ ಈ ಐದು ನೃತ್ಯಗಳನ್ನು ಅಡ್ಡಾಗಿ ಅಥವಾ ಬಗ್ಗಿ ಮಾಡತಕ್ಕದ್ದು.

ಕೊಟ್ಟಿಚ್ಚೇದಂ ಎಂಬ ಅರ್ಧನಾರೀಶ್ವರನ ನಾಟ್ಯವನ್ನು ಹೀಗೆ ವರ್ಣಿಸಲಾಗಿದೆ. ತ್ರಿಪುರಸಂಹಾರ ಕಾಲದಲ್ಲಿ ಮಾದೇವನು ಅರ್ಧನಾರೀಶ್ವರನ ರೂಪವನ್ನು ತಾಳಿ ಉಮೆಯ ಪಾಲಾದ ತನ್ನ ದೇಹದ ಎಡಬದಿಯು ಸ್ವಲ್ಪವೂ ಅಲುಗಾಡದಿರಲು, ಬಲ ಬದಿಯಿಂದಲೇ ಚರಾಚರಗಳು ನಡುಗುವಂತೆ ಬಿರುಸಾಗಿ ಅದ್ಭುತ ನಾಟ್ಯವಾಡಿದ. ಅದರ ವರ್ಣನೆ ಮೂಲ ತಮಿಳಿನಲ್ಲಿ ಹೀಗಿರುವುದು.

ತಿರುನಿಲೈ ಚ್ಚೇವಡಿ ಶಿಲಂಬುವಾಯ್ ಪುಲಂಬವುಂ
ಪರಿತರು ಶೆಂಗೈಯಿರ್ ಪಡುಪಜೈ ಆರ್ಪವುಂ
ಶೆಂಗಣ್ ಆಯಿರಂ ತಿರುಕ್ಕುಱಿಪ್ಪರುಳವುಂ
ಶೆಂಜಡೈ ಶೆನ್ರು ತಿಶೈ ಮುಹಂ ಅಲಂಬವುಂ

ಪಾಡಹಂ ಪದೈಯಾದು ಶೂಡಹಂ ತುಳಂಗಾದು
ಮೇಕಲೈ ಒಲಿಯಾದು ಮೆನ್ಮುಲೈ ಅಶೈಯಾದು

ವಾರ್ಕಟ್ಟೈ ಆಡಾದು ಮಣಿಕ್ಕುಟಿಲ್ ಅವಿಟಾದು
ಉಮೈಯವಳ್ ಒರುತಿರನಾಹ ಒಂಗಿಯ
ಇವೈಯವನ್ ಆಡಿಯ ಕೊಟ್ಟಿಚ್ಚೇದಂ.

ಇದರ ಕನ್ನಡ ಅನುವಾದ ಇಂತಿರುವುದು :

ಮೃಡನ ಭಾಗದ ವರ್ಣನೆ

ಕೆಂಪಡರ್ದ ನಿಲುವಡಿಯು ನೇವುರಂ ಗಣಗಣಿಸುತುವಿರೆ
ಕೆಂಗೈಯಲ್ಲಿನ ಪರಿಕರಂ ಮೊಳಗುತ್ತುವಿರೆ
ಕೆಂಗಣ್ಗಳ್ ಸಾಸಿರಂ ತಂಬಗೆಯಂ ಒಗೆಯಿತುವಿರೆ
ಕೆಂಜಡೆ ಪರೆದು ದಿಕ್ತಟಂಗಳೊಳಲಯುತ್ತುವಿರೆ

ಉಮೆಯ ಭಾಗದ ವರ್ಣನೆ

ಪಾಡಗವಲುಗದೆ ಸೂಡಗವಾಡದೆ
ಮೇಖಲೆಯುಲಿಯದೆ ಮೆಲುಮೊಲೆ ಮಿಸುಕದೆ
ನೀಳ್ಗುಂಡಲವುಳಿರದೆ ಮಣಿಹೆರಳುರ್ಚದೆ
ಉಮೆಯುವಳೊಕ್ಕಲನಾಗಿರೆ ಘನತೆವೆತ್ತ
ಹಿಮಗಿರಿ ಒಡೆಯನಾಡಿದಂ ಕೊಟ್ಟಿಚ್ಚೇದಂ.

ಹಿಂದೆ ವರ್ಣಿಸಿರುವ ರೀತಿಯಲ್ಲಿ ಮಾದವಿ ಎಂಬ ನಾಟ್ಯಗಾತಿಯು ತಾಂಡವ, ನೃತ್ಯ, ನಾಟ್ಯ ಎಂಬ ಮೂರು ಪ್ರಭೇಧಗಳನ್ನೂ ನಾಟ್ಯಶಾಸ್ತ್ರದಲ್ಲಿ ಉಕ್ತವಾದ ಲಕ್ಷಣಗಳಲ್ಲಿ ಯಾವುದೂ ತಪ್ಪದೆ ಸಂಪ್ರದಾಯಶುದ್ಧವಾಗಿ ಆಡಿತೋರಿಸಿದಳು. ಅಲೌಕಿಕವಾದ ಅವಳ ನರ್ತನ, ನಾಟ್ಯ ಮತ್ತು ಅಭಿನಯಗಳನ್ನು ಕಂಡು ಅರಸನೂ ಆಸ್ಥಾನಿಕರೂ ಮುಗ್ಧರಾದರು. ಅವಳ ಜಾಣ್ಮೆಯನ್ನೂ, ಕಲಾಕುಶಲತೆಯನ್ನೂ ಚೋಳರಾಜನು ಬಹಳವಾಗಿ ಕೊಂಡಾಡಿ ಪೂರ್ವಸಂಪ್ರದಾಯದ ಮೇರೆಗೆ ಮಾದವಿಗೆ ಬಹುಮಾನವಾಗಿ ಮರಕತ ಮಾಲೆಯನ್ನೂ ೧೦೦೮ ಕಳಂಜು ಹೊನ್ನನ್ನೂ ಕೊಟ್ಟು ಗೌರವಿಸಿದನು. ಹಾಗೂ ಅವಳಿಗೆ “ ತಲೈಕ್ಕೋಲಿ ” ಎಂಬ ಬಿರುದನ್ನೂ ಕೊಟ್ಟು ಸನ್ಮಾನಿಸಿದನು.

ಪ್ರಾಚೀನ ತಮಿಳು ಸಾಹಿತ್ಯಗ್ರಂಥಗಳಿಂದ ಆಯ್ದು ತೆಗೆದ ಈ ಮಾಹಿತಿಗಳ ಬೀಸು ಮತ್ತು ಆಳ—ಇವನ್ನು ಗಮನಿಸಿದರೆ, ಆಗಿನ ಕಾಲದಲ್ಲಿ ಸಂಗೀತ, ನೃತ್ಯ, ನಾಟಕ ಮುಂತಾದ ಲಲಿತ ಕಲೆಗಳು ಎಷ್ಟು ಮುಂದುವರಿದಿದ್ದವು, ಸಮಾಜದಲ್ಲಿ ಇವಕ್ಕೆ ಎಂತಹ ಗೌರವಸ್ಥಾನವಿತ್ತು, ಮತ್ತು ಆಗಿನ ರಾಜರು ಮಹಾರಾಜರುಗಳಿಂದ ಎಷ್ಟು ಭವ್ಯವಾದ ಮತ್ತು ಘನತರವಾದ ಪ್ರೋತ್ಸಾಹ ಕಲಾವಿದರಿಗೆ ದೊರೆಯುತ್ತಿತ್ತು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಮೊಗಳ್ಳಿ ಗಣೇಶ್

ಇತಿಹಾಸದಲ್ಲಿ ನಾನು

ಮಣ್ಣಿಗೆ ನನ್ನ ಮೈ ಹಾಸಿ
ಬೆಳಕಿಲ್ಲದ ಬಂಧಿ ಕೋಣೆ ತುಂಬ
ಹಸಿವಿನುಸಿರಾಡಿದಾಗ ನನ್ನವ್ವನ
ಎದೆ ಹಾಲಿನ ನೆನಪು

ತುಂಬೆ ಹೂಗಿಡದಿಂದ
ಅವ್ವನ ನಗು ವಗೂs ಎಂದುಸಿರಿದ ಕನಸು
ಇರುಳು ಬಾನು ಸುತ್ತುವ ಒಂಟಿ ಹಕ್ಕಿಯ ಕೊರಗು.

ಭ್ರಮೆ
ಬದುಕು
ಕಂಪಿಸುವ ಸೊರಗಿದ ನರ
ಹಳ್ಳಿಯ ನೆನಪಿನ ನದಿ
ಆಳದ ಮಡುವಿಗೆ ಜಿಗಿದ ಅವ್ವ-
ನ ದುವ್ವೆಯ ತಬ್ಬುತ್ತೇನೆ

ಹೂವಮ್ಮನ ಬಚ್ಚಲು ಗೊಂತಲ್ಲಿ
ಆಕಾಶ ತಾರೆಗಳ ತೋರುವ
ಅಸ್ತಿಪಂಜರದಂತ
ಕಣ್ಣಿರದ ಮನೆ ಮಂದಿ ಮುಪ್ಪು ಹತ್ತಿದ ಬದುಕು

ನೋವಿಂದ ನೋವಿಗೆ
ಸಾವಿಂದ ಸಾವಿಗೆ ಸಾಗುತ್ತ
ನನ್ನವ್ವ ಸತ್ತುಹೋದಳು

ಹಡು–ದ ಕತ್ತಲು ಬಸಿರ ನೋವಲ್ಲಿ
ಆವಳ ಕುಡಿ ಕರುಳ ಹೊಕ್ಕುಳು
ಕುಳಿಯಾಗಿ ನನ್ನಲ್ಲಿ ಬೇರು ಬಿಟ್ಟಿತು.

ಕರಿ ಕೂಸಾಗಿ ಹಾಲಿಲ್ಲದೆದೆಯ
ಚೀಪಲಾರದಾಗಿ
ತುಟಿ ಮುತ್ತಿ ಮುಟ್ಟಿಸಿಕೊಳ್ಳದಾಗಿ
ಬೆಳಕಿಲ್ಲದೆ ಮುಲುಗಿದೆ

ಮನುಷ್ಯ–
ಕೋಟಿ ಕೋಣೆ ಸೋತ ಸೈನಿಕ
ನಾನು

ಜೂಜಗಾರಿಕೆಯ ವರ್ಣದಾಳದಲಿ
ಪೆಟ್ಟು ಬಡಿದು ಇತಿಹಾಸದ
ಕಲ್ಲು ಕಂಬಗಳಿಗೆ ನೂರಾರು ತಲೆ–
ಮಾರುಗಳಂತೆ ಬೆಳೆದೆ

ಗಿಡ್ಡಗೆ ಕಪ್ಪಗೆ ನನ್ನ ಅವ್ವನ
ಪೀಳಿಗೆ ಕತ್ತಲ ಲೋಕಕ್ಕೆ ಹಾರುವ
ಬಾವಲಿಗಳ ಹಾಗೆ ಹಾರಿ ಹಾರಿ ಎಲ್ಲೆಲ್ಲು
ನೇಣುಗಂಬಕ್ಕೆ ಕತ್ತು ಕೊಟ್ಟಂತೆ
ಹುಟ್ಟಿದವು ಅತ್ತವು ಸತ್ತವು....

ಮತ್ತೆ ಎಲ್ಲ ದುಃಖದ ಚಿತ್ರಕಥೆ
ಇರುಳು ಒಂಟಿ ಹಕ್ಕಿಯ ವಲಸೆ.

ಡಾ. ಬಸವರಾಜ ಸಬರದ

ಕನ್ನಡದಲ್ಲಿ ಬಂಡಾಯ ಸಾಹಿತ್ಯ

ಬಂಡಾಯ ಚಳುವಳಿ

'ಬಂಡಾಯ' ಎಂಬ ಹೆಸರು ಕೇಳಿದಾಕ್ಷಣವೇ ಕೆಲವರು ವಿಚಿತ್ರವಾದ ಪ್ರತಿಕ್ರಿಯೆ ತೋರಿಸುತ್ತಾರೆ. ಮತ್ತೆ ಕೆಲವರಿಗೆ ಆ ಶಬ್ದವೇ ವಾಕರಿಕೆ; ಇನ್ನು ಕೆಲವರು ಬಂಡಾಯ–ಡಂಬಾಯ–ಸಮುದಾಯ; ದಲಿತ–ಬಲಿತ–ಕಲಿತ ಮುಂತಾದ ಪ್ರಾಸಬದ್ಧ ಮಾತುಗಳನ್ನು ಪೋಣಿಸುತ್ತ ತಮ್ಮ ಭ್ರಮಾಲೋಕದಲ್ಲೇ ಖುಷಿ ಪಡುತ್ತಾರೆ. ಇವರಲ್ಲಿ, ಬಂಡಾಯ ಸಾಹಿತ್ಯದ ಬಗೆಗೆ ಸ್ಪಷ್ಟ ತಿಳುವಳಿಕೆಯಿಲ್ಲದವರು ಕೆಲವರಾದರೆ, ವ್ಯವಸ್ಥೆಯ ಬೇರುಗಳನ್ನು ಗಟ್ಟಿಗೊಳಿಸಲೆತ್ನಿಸುವ ಪಟ್ಟಭದ್ರ ಹಿತಾಸಕ್ತಿಗಳು ಇನ್ನುಳಿದವರು. ಯಾವುದೇ ಕ್ಷೇತ್ರದಲ್ಲಿ ಹೊಸದು ಪ್ರವೇಶಿಸಿದಾಗ ಹೀಗೆ ಆಗುವದು ಸಹಜವೆಂಬಂತೆ ನಮ್ಮ ಚರಿತ್ರೆಯಲ್ಲಿ ಉದಾಹರಣೆಗಳಿವೆ. ಬಂಡಾಯ ಸಾಹಿತ್ಯ ಚಳುವಳಿ ಬಗೆಗೂ ಹೀಗೆ ಆಡಿಕೊಂಡರೆ ಅದು ಅವರ ಮಿತಿಗಳನ್ನು ಸೂಚಿಸುತ್ತದೆಯೇ ವಿನಾ ಸಂಘಟನೆಯ ವೈವಿಧ್ಯತೆಯನ್ನಲ್ಲ.

ಬಂಡಾಯ ಸಾಹಿತ್ಯ ಚಳುವಳಿ ದಿಢೀರನೆ ಒಮ್ಮೆಲೇ ಹುಟ್ಟಿಕೊಂಡದ್ದಲ್ಲ. ಸಮಾಜದ ಅನಿವಾರ್ಯತೆಯಿಂದ ಈ ನೆಲದಲ್ಲೇ ಮೊಳಕೆಯೊಡೆದು ಹೊರಬಂದ ಪ್ರಗತಿಪರ ವಿಚಾರ ಸಾಂಸ್ಕೃತಿಕ ಸಂಘಟನೆಯೇ ಈ ಚಳುವಳಿ. ಕನ್ನಡ ಸಾಹಿತ್ಯ ಪರಿಷತ್ತಿನ ವಿರೋಧಕ್ಕಾಗಿಯೇ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿಕೊಂಡಿಲ್ಲ. ಕನ್ನಡ ಸಾಹಿತ್ಯದ ಪ್ರಮುಖ ಕಾಳಜಿಯಾಗಿರುವ ಪ್ರತಿಭಟನೆಯ ಸತ್ವ ಬಂಡಾಯ ಸಾಹಿತ್ಯದಲ್ಲಿ ಪಲ್ಲವಿಸಿದೆ. ಬಂಡಾಯದವರು ಸಂಪ್ರದಾಯ ವಿರೋಧಿಗಳೇ ಹೊರತು ಪರಂಪರೆಯನ್ನು ಅಲ್ಲಗಳೆಯುವವರಲ್ಲ. ಸಾಹಿತ್ಯ ಪರಿಷತ್ತು ಇಂತಹ ಒಂದು ಸಾಂಪ್ರದಾಯಿಕ ಸಂಸ್ಥೆಯಾದ್ದರಿಂದ ಬಂಡಾಯ ಸಂಘಟನೆಯ ವಿರೋಧಕ್ಕೆ ಗುರಿಯಾದದ್ದು ತೀರಾ ಸಹಜ. ಒಂದು ವೇಳೆ ಸಾಹಿತ್ಯ ಪರಿಷತ್ತಿನ ಸ್ವರೂಪದಲ್ಲಿ ಬದಲಾವಣೆಗಳಾದರೆ, ಬಂಡಾಯದವರ ನಿಲುವೂ ಪರಿಷತ್ತಿನ ಬಗೆಗೆ ಬದಲಾಗಬಹುದು. ಅದೇ ರೀತಿ ಬಂಡಾಯದವರು ಕೇವಲ ಬ್ರಾಹ್ಮಣ ಜಾತಿ ವಿರೋಧಿಗಳಲ್ಲ; ಇಡೀ ಜಾತಿ ವ್ಯವಸ್ಥೆಯ ವಿರೋಧಿಗಳು. ಜಾತಿರಹಿತ–ವರ್ಗರಹಿತವಾದ ಮಾನವೀಯತೆ ಮಿಡಿಯುವ ಹೊಸ ಸಮಾಜದ ನಿರ್ಮಾಣವೇ ಬಂಡಾಯ ಸಾಹಿತಿಯ ಗುರಿ.

1979ರ ಮಾರ್ಚ್ 10 ಹಾಗೂ 11 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನ ನಡೆದು, ಕನ್ನಡ ಸಾಹಿತ್ಯದ ಸಮಕಾಲೀನ ಕಾಳಜಿಗೆ ಭದ್ರನೆಲೆಯೊದಗಿಸುವದರ ಮೂಲಕ ಹೊಸದಿಕ್ಕುಗಳನ್ನು ಸೂಚಿಸಿತು. ಅಂದಿನಿಂದ ಇಂದಿನವರೆಗೆ ಬೆಂಗಳೂರ-ಬಿಜಾಪುರ-ರಾಯಚೂರ-ಕೋಲಾರಗಳಲ್ಲಿ ರಾಜ್ಯಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನಗಳು ನಡೆದು ಸಂಘಟನೆಯ ಅನಿವಾರ್ಯತೆಯನ್ನು ಬಂಡಾಯ ಸಾಹಿತ್ಯದ ಅವಶ್ಯಕತೆಯನ್ನು ಸಾಬೀತುಪಡಿಸಿವೆ.

ಬಂಡಾಯ ಸಾಹಿತ್ಯ ಚಳುವಳಿ ಗುಂಪುಗಾರಿಕೆಯಿಂದ ಹುಟ್ಟಿಕೊಂಡದ್ದಲ್ಲ; ಸ್ವಪ್ರತಿಷ್ಠೆ-ಸ್ವಾಭಿಮಾನ ಮೆರೆಯಲು ಮಾಡಿಕೊಂಡ ವೇದಿಕೆಯಲ್ಲ. ಎಲ್ಲ ಜನಪರ ನಿಲುವಿನ ಬರಹಗಾರರು ಲಿಂಗ-ಜಾತಿ-ವರ್ಗ-ಪ್ರಾದೇಶಿಕತೆಯ ಭೇದಗಳನ್ನು ಹರಿದೊಗೆದು ಒಂದೇ ವೇದಿಕೆಯ ಮೇಲೆ ಬಂದು ಸಂಘಟಿತರಾಗಿ 'ಬಂಡಾಯ'ದ ಹೆಸರಿನಲ್ಲಿ ಪ್ರಗತಿಪರ ವಿಚಾರಗಳನ್ನು ಪ್ರತಿಪಾದಿಸುತ್ತ, ಬದುಕು ಬರಹಗಳನ್ನು ಒಂದಾಗಿಸುತ್ತ; ಕನ್ನಡ ಸಾಹಿತ್ಯದಲ್ಲಿ ಹಿಂದೆಂದೂ ಕಾಣದಂತಹ ರಾಜಕೀಯ ಪ್ರಜ್ಞೆಯನ್ನು ಪ್ರಕಟಿಸುತ್ತ, ಎಡ ಪಂಥೀಯ ಧೋರಣೆಗಳಿಗೆ ಬದ್ಧರಾಗಿ ಬರೆಯುತ್ತಿದ್ದಾರೆ, ವ್ಯವಸ್ಥೆಯ ವಿರುದ್ಧ ಬದುಕುತ್ತಿದ್ದಾರೆ.

ಎಪ್ಪತ್ತರ ದಶಕ 'ಬಂಡಾಯ' ಹದಗೊಳ್ಳುತ್ತಿದ್ದ ಕಾಲ. ನವ್ಯದಿಂದ ಬೇಸತ್ತ ಕನ್ನಡಿಗರು ಹೊಸ ಸಾಹಿತ್ಯಕ್ಕಾಗಿ ತಡಕಾಡುತ್ತಿದ್ದ ಸಮಯ. ಹೊಸ ಚಳುವಳಿಯೊಂದು ಉದಯವಾಗಲು ಹಾತೊರೆಯುತಿದ್ದ ಸಂಕ್ರಮಣಾವಸ್ಥೆ. ನವ್ಯದ ಹುಟ್ಟಿಗೆ ನವೋದಯದ ಮಿತಿಗಳು ಕಾರಣವಾದರೆ, ನವೋದಯ-ನವ್ಯ ಎರಡೂ ಸಾಹಿತ್ಯ ಪಂಥಗಳು ತುಂಬಿಕೊಡಲಾರದ ಹೊಸ ಅಂಶಗಳೇ ಬಂಡಾಯ ಸಾಹಿತ್ಯ ಚಳುವಳಿಯ ಪ್ರೇರಣೆಗಳೆನ್ನಬಹುದು.

ನವೋದಯ ಕಾವ್ಯ ಪಾಶ್ಚಾತ್ಯರ ರಮ್ಯ ಸಂಪ್ರದಾಯದಿಂದ ಪ್ರಭಾವಗೊಂಡು ಬೆಳೆದು ತನ್ನ ಗೇಯತೆ-ಪ್ರಾಸಬದ್ಧತೆ ಮುಖಾಂತರ ಸಮಕಾಲೀನ ಆಶೋತ್ತರಗಳಿಗೆ ರೆಕ್ಕೆ ಹಚ್ಚಿ ಕುಣಿದಾಡಿತು. ನಾಡು-ನುಡಿ-ನಿಸರ್ಗ-ಅಧ್ಯಾತ್ಮ-ಸಾಮಾಜಿಕತೆ-ಪ್ರೇಮ-ಕಾಮ ಈ ಮೊದಲಾದ ವಿಷಯ ವೈವಿಧ್ಯತೆಯಿಂದ ನವೋದಯ ಗರಿಗೆದರಿತಾದರೂ, ಸುಧಾರಣೆಯಲ್ಲೇ ತೃಪ್ತಿ ಪಟ್ಟುಕೊಂಡದ್ದು, ಹೊಸ ಸಮಾಜದ ಹುಟ್ಟನ್ನು ಗರ್ಭೀಕರಿಸಿಕೊಳ್ಳುವ ಬದಲು ಇದ್ದ ವ್ಯವಸ್ಥೆಯನ್ನೇ ರಿಪೇರಿ ಮಾಡಲು ಹೊರಟದ್ದು ಈ ಕಾವ್ಯದ ಮಿತಿಗಳೆನ್ನಬಹುದು. ಇದರಿಂದ ಬೇಸತ್ತ ನವ್ಯದವರು ಜಿಡ್ಡುಗಟ್ಟಿದ ಮಡಿವಂತಿಕೆಯಿಂದ ಕೊಡವಿಕೊಂಡು, ಅದರ ಯಾಂತ್ರಿಕ ಬಂಧನದಿಂದ ಬಿಡಿಸಿಕೊಂಡು ಕನ್ನಡಕ್ಕೆ ಹೊಸನುಡಿಗಟ್ಟು ಜೋಡಿಸಿ, ಭಾಷೆಗೆ ಕಸುವು ಮೂಡಿಸಿ ಮುಕ್ತಛಂದಸ್ಸು ತಂದದ್ದು, ಆತ್ಮಶೋಧನೆ ಮಾಡಿಕೊಂಡದ್ದು ನಿರ್ಭಿಡೆಯಾಗಿ ಬರೆದದ್ದು ನವ್ಯದವರ ಸಾಧನೆಯೆನ್ನಬಹುದು. ಆದರೆ ನವ್ಯರು ಸಾಹಿತ್ಯದಲ್ಲಿ ರತಿ ಸುಖವನ್ನು ಸ್ಖಲಿಸುವದರಲ್ಲೇ ತನ್ಮಯರಾಗಿ, ದ್ವಂದ್ವದಲ್ಲಿ ಬಿದ್ದು

ಗೊಂದಲಪುರದಿಂದ ಹೊರಬರದೆ ಮಣ್ಣಿನ ವಾಸನೆಗಾಗಿ ಪರಿತಪಿಸಿದ್ದು ನವ್ಯರ ದುರಂತವೆನ್ನಬಹುದು. ಸರ್ವೋದಯ–ನವ್ಯದವರಿಬ್ಬರಲ್ಲೂ ಸಾಮಾಜಿಕ–ರಾಜಕೀಯ ಕಾಳಜಿಗಳಿಗೆ ಪ್ರಾಶಸ್ತ್ಯ ಸಿಗಲಿಲ್ಲ. ಅದು ಅಲ್ಲಲ್ಲಿ ಆಂಶಿಕವಾಗಿ ಬಂದರೂ ಬದ್ಧ ಸಾಹಿತ್ಯವಾಗಿ ಮೂಡಿಬರಲಿಲ್ಲ.

ಇಂದು ನಮ್ಮ ಕಣ್ಣೆದುರು ಕಾಣುವ ಶೋಷಣೆ, ಬದುಕಿನ ಭೀಕರತೆ, ಪಟ್ಟಭದ್ರರ ಕ್ರೌರ್ಯ, ಹಸಿವು, ಅಮಾನವೀಯತೆ, ಕೊಲೆ–ಸುಲಿಗೆಗಳು ನಮ್ಮ ಬದುಕನ್ನೇ ಅಲ್ಲಾಡಿಸಹತ್ತಿವೆ. ಬಂಡಾಯ ಸಾಹಿತಿ ಇದೆಲ್ಲವನ್ನೂ ತೆರೆದಕಣ್ಣಿನಿಂದ ಕಾಣುತ್ತಾನೆ. ಮುಕ್ತಮನಸ್ಸಿನಿಂದ ನೋಡುತ್ತಾನೆ. ನೊಂದವರ–ಶೋಷಿತರ ಧ್ವನಿಯಾಗಿ ನಿಲ್ಲುತ್ತಾನೆ.

'ನವ್ಯ' ಅವಸಾನವಾಗುತ್ತಿರುವ ಸಂದರ್ಭದಲ್ಲಿ ಬಂದ 'ದ್ಯಾವನೂರು,' 'ಹೊಲೆಮಾದಿಗರ ಹಾಡು,' 'ಒಂದು ಊರಿನ ಕಥೆ,' 'ಮುಸ್ಸಂಜೆಯ ಕಥಾ ಪ್ರಸಂಗ,' 'ಅಬಚೂರಿನ ಪೋಸ್ಟಾಫೀಸು,' 'ಒಂದು ಹುಡುಗನಿಗೆ ಬಿದ್ದ ಕನಸು,' 'ಕರಿತೆಲಿ ಮಾನವನ ಜೀಪದ'—ಈ ಮೊದಲಾದ ಕೃತಿಗಳಲ್ಲಿ ಹೊಸತಿರುವೊಂದರ ಸ್ಪಷ್ಟ ಸೂಚನೆಯಿದೆ. ಸಾಹಿತ್ಯ ಕ್ಷೇತ್ರದಲ್ಲಿ ದಲಿತರು–ಶೋಷಿತರು–ಕೆಳವರ್ಗದವರೆಂದು ವಂಚಿಸಲ್ಪಟ್ಟವರು ಸಾಹಿತ್ಯವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡು ಗುಡುಗಿದ್ದು, ಸಿಡಿದೆದ್ದದ್ದು ಇದೇ ಸಂದರ್ಭದಲ್ಲಿ. ಇದು ಕನ್ನಡ ಸಾಂಸ್ಕೃತಿಕ ಕ್ಷೇತ್ರದ ಹೊಸತಿರುವು ಮತ್ತು ಸಾಹಿತ್ಯದಲ್ಲಿ ಅತ್ಯಂತ ಮಹತ್ವಪೂರ್ಣವಾದ ಪ್ರಸಂಗ. ಇದೇ ಬಂಡಾಯ ಸಾಹಿತ್ಯ ಚಳುವಳಿಗೆ ಮೂಲಬೀಜ. ಕ್ರೂರ ವ್ಯವಸ್ಥೆಯ ವಿರುದ್ಧ, ಯಜಮಾನ ಸಂಸ್ಕೃತಿಯ ಎಲ್ಲಾ ಸಂಚುಗಳ ವಿರುದ್ಧ ಬಂಡೆದ್ದ ಪ್ರಗತಿಪರ ಮನೋಧರ್ಮವೇ ಬಂಡಾಯ ಸಾಹಿತ್ಯ ಚಳುವಳಿಯ ಮೂಲಸತ್ವವಾಯಿತು.

ಪರಂಪರೆ

ಈ ಮೊದಲೇ ತಿಳಿಸಿದಂತೆ ಬಂಡಾಯ ಸಾಹಿತಿಗಳಿಗೊಂದು ಪರಂಪರೆ ಇದೆ. ಆದರೆ ಬಂಡಾಯದವರು ಸಂಪ್ರದಾಯ ವಿರೋಧಿಗಳೆಂಬುದನ್ನು ಮರೆಯಬಾರದು. ಸಂಪ್ರದಾಯ ನಿಂತ ನೀರಾದರೆ, ಪರಂಪರೆ ಹರಿವ ಹೊಳೆ. ಸಮಕಾಲೀನ ಮೌಲ್ಯಗಳು ಆಯಾಕಾಲಕ್ಕೇ ಸ್ಥಗಿತಗೊಂಡರೆ ಅದು ಸಂಪ್ರದಾಯ. ಸಮಕಾಲೀನ ಮೌಲ್ಯಗಳು ಸಾರ್ವಕಾಲಿಕ ಮಹತ್ವವನ್ನು ಪಡೆದರೆ ಅದು ಪರಂಪರೆ. ಜಿಡ್ಡುಗಟ್ಟಿದ ಸಾವು ಸಂಪ್ರದಾಯದಲ್ಲಿದ್ದರೆ, ಹರಿವ ಉತ್ಸಾಹ ಪರಂಪರೆಯಲ್ಲಿದೆ. ಪ್ರಸಿದ್ಧ ನಾಟಕಕಾರ ಬರ್ಟೊಲ್ಟ್ ಬ್ರೆಕ್ಟ್ ಹೇಳಿದಂತೆ 'ಪರಂಪರೆಯ ಜೊತೆಗೆ ಸಂಬಂಧ ಮತ್ತು ಮುಂದುವರಿಕೆ' ಬಂಡಾಯದವರ ಸ್ಪಷ್ಟನಿಲುವು. (ವಿವರಕ್ಕಾಗಿ ನೋಡಿ: ಬರಗೂರು ರಾಮಚಂದ್ರಪ್ಪನವರ 'ಬಂಡಾಯ ಸಾಹಿತ್ಯ ಚಳುವಳಿ' ಮತ್ತು ಬೆಂಗಳೂರು

ವಿಶ್ವವಿದ್ಯಾಲಯದ 1983 ಜನೇವರಿ–ಮಾರ್ಚ್‌ನ 'ಸಾಧನೆ' ಯಲ್ಲಿ ಪ್ರಕಟವಾದ ನನ್ನ ಲೇಖನ 'ಅಂಬಿಗರ ಚೌಡಯ್ಯನ ವಚನಗಳಲ್ಲಿ ಪರಂಪರೆ.')

'ಬಂಡಾಯ' ಎಂಬ ಹೆಸರಿನಿಂದ ಸಂಘಟಿತರಾಗಿ ಹಿಂದಿನವರು ಬರೆಯದಿದ್ದರೂ ಅವರ ಬರಹದಲ್ಲಿ ಆಂಶಿಕವಾಗಿ ಬಂಡಾಯ ಮನೋಧರ್ಮ ಪ್ರಕಟವಾಗಿದೆ. ಈ ಬಂಡಾಯ ಮನೋಧರ್ಮ ಅಂದಂದಿನ ಚಾರಿತ್ರಿಕ ಒತ್ತಡಗಳನ್ನು ಅವಲಂಬಿಸಿ ರುವದರಿಂದ ಹಿಂದಿನ ಸಾಹಿತಿಗಳ ಮಿತಿಗಳೊಂದಿಗೆ ಅಲ್ಲಿರುವ ಬಂಡಾಯ ಮನೋಧರ್ಮವನ್ನು ಗುರುತಿಸುವ ಇಂದಿನ ಬಂಡಾಯ ಸಾಹಿತಿ ಅಂತಹ ಸಾಹಿತ್ಯವನ್ನು ತನ್ನ ಪರಂಪರೆಯೆಂದು ಪರಿಗಣಿಸುತ್ತಾನೆ.

ಪಂಪ ಕನ್ನಡದ ಆದಿಕವಿ ಮತ್ತು ಅಗ್ರಕವಿಯೆಂದು ಹೆಸರಾದವನು. ರಾಜಾಶ್ರಯದಲ್ಲಿದ್ದುಕೊಂಡು ಆಶ್ರಯದಾತ ಅರಿಕೇಸರಿಯನ್ನೇ (ಹೆಸರಿಗೆ ಅರ್ಜುನ) ಕಥಾನಾಯಕನನ್ನಾಗಿ ಮಾಡಿಕೊಂಡಿದ್ದರೂ 'ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ ಕರ್ಣ ರಸಾಯನಮಲ್ತೆ ಭಾರತಂ' ಎಂದು ತನ್ನ ಪಂಪಭಾರತದಲ್ಲಿ ಕರ್ಣನ ನನ್ನಿ, ಪ್ರಾಮಾಣಿಕತೆ, ತ್ಯಾಗ, ಪರಾಕ್ರಮ, ವಿಶಾಲಮನೋಭಾವವನ್ನು ವರ್ಣಿಸುತ್ತಾ ಕಥಾನಾಯಕನಿಗಿಂತ ಕರ್ಣನಲ್ಲಿ ಕವಿ ಒಲವು ತೋರಿಸಿರುವದನ್ನು ನೋಡಿದರೆ ಪಂಪನ ಈ ಧೋರಣೆ ಅಂದಿನ ಸಂದರ್ಭದಲ್ಲಿ ಪ್ರಗತಿಪರವೆಂದೇ ಹೇಳಬೇಕಾಗುತ್ತದೆ. ಮತ್ತೊಂದು ಸನ್ನಿವೇಶದಲ್ಲಿ ಮಹಾಭಾರತದ ಎಲ್ಲಾ ಪ್ರಮುಖ ಪಾತ್ರಗಳ ಗುಣ ವಿಶೇಷತೆಯನ್ನು ಪ್ರಕಟಿಸುತ್ತಾ ಧರ್ಮದೊಳ್–ಯಮಸೂನು, ನನ್ನಿಯೊಳ್–ಇನತನಯ, ಗಂಡಿನೊಳ್–ಭೀಮಸೇನ, ಛಲದೊಳ್–ದುರ್ಯೋಧನ ಎಂದು ವಿವರಿಸುತ್ತಾ, ಮಹಾಭಾರತದಲ್ಲಿ ದೇವರೆಂದೇ ಮೆರೆಯಲ್ಪಟ್ಟ ಕಪಟನಾಟಕ ಸೂತ್ರಧಾರಿ ಕೃಷ್ಣನನ್ನೇ ಕೈಬಿಟ್ಟಿರುವದು ಪಂಪನ ಸ್ವತಂತ್ರ ಮನೋಭಾವಕ್ಕೆ ಸಾಕ್ಷಿ. ಆದಿಪುರಾಣದ ಭೋಗಲೋಕ ವರ್ಣನೆಯಲ್ಲೂ ಕವಿಯ ಸ್ವತಂತ್ರ ಮನೋಭಾವವನ್ನು ಕಾಣಬಹುದು. ಮಾತೆತ್ತಿದರೆ ಕುಲವನ್ನು ಮುಂದುಮಾಡುವ ಅಂದಿನ ಸಂದರ್ಭದಲ್ಲಿ ಕವಿ ಪಂಪ ಕರ್ಣನ ಮುಖಾಂತರ ಅಭಿವ್ಯಕ್ತಿಸುವ 'ಕುಲಂ ಕುಲಮಲ್ತು, ಗುಣಂ ಕುಲಂ, ಅಭಿಮಾನವೊಂದೆ ಕುಲಂ' ಎನ್ನುವ ಮಾತು ಪಂಪನ ವಿಶಾಲಮನೋಭಾವಕ್ಕೆ ಸಾಕ್ಷಿಯಾಗಿದೆ. ಪಂಪನ ಸಮಕಾಲೀನನಾದ ರನ್ನನ ದುರ್ಯೋಧನ ಖಳನಾಯಕನಲ್ಲ; ಪ್ರತಿನಾಯಕ. ಈ ಬದುಕಿನಲ್ಲಿ ಹುಟ್ಟಿನಿಂದಾರೂ ನಾಯಕ–ಖಳನಾಯಕ–ರಾಗಿರುವುದಿಲ್ಲ. ಅವರು ಬದುಕಿರುವ ಸಮಾಜವ್ಯವಸ್ಥೆ–ಸಂದರ್ಭ ಅವರನ್ನು ಹಾಗೆ ನಿರ್ಮಿಸುತ್ತವೆ ಎನ್ನುವ ದಟ್ಟಸತ್ಯವನ್ನು ಸಾರುವ ರನ್ನನ ಗದಾಯುದ್ಧ ನಿಜಕ್ಕೂ ಗಮನಾರ್ಹವಾದ ಕೃತಿ. 'ನೆಲಕಿರಿವೆನೆಂದು ಬಗೆವಿರೆ ಛಲಕಿರಿವೆಂ' ಎನ್ನುವ ರನ್ನನ ದುರ್ಯೋಧನನಿಗೆ ಈ ನೆಲ ಕರ್ಣನನ್ನು ಕೊಲ್ಲಿಸಿದ ಹಾಳುನೆಲವಾಗಿ ಕಾಣುತ್ತದೆ. ದುರ್ಯೋಧನನ ಮಾನವೀಯತೆ, ಛಲ,

ಅಭಿಮಾನಗಳನ್ನು ಪ್ರಕಟಿಸುವ ರನ್ನನ ಗದಾಯುದ್ಧದಲ್ಲಿ ಹೊಸ ದೃಷ್ಟಿಕೋನವಿದೆ. ಮುಂದೆ ಬಂದ 'ಪಂಚತಂತ್ರ'ದ ಕತೆಗಳಲ್ಲೂ ಬಂಡಾಯದ ಅಂಶಗಳು ಸಾಕಷ್ಟಿವೆ. ಮೊದಲ್ನೋಟಕ್ಕೆ ಪ್ರಾಣಿಕತೆಗಳೆಂದೆನಿಸಿದರೂ ಅಂದಿನ ಮಾನವ ಸಮಾಜದ ಸಂಘರ್ಷವನ್ನು ದುರ್ಗಸಿಂಹನ 'ಪಂಚತಂತ್ರ' ದಾಖಲಿಸುತ್ತದೆ. ರಾಜ್ಯ ಶಾಹಿಯಲ್ಲಿದ್ದುಕೊಂಡೇ ರಾಜಪ್ರಭುತ್ವವನ್ನು ವಿರೋಧಿಸುವ ಕೆಚ್ಚು 'ಪಂಚ ತಂತ್ರ'ದಲ್ಲಿದೆ.

ಮುಂದೆ ಬಂದ ವಚನ ಚಳುವಳಿ ಇಂದಿನ ಬಂಡಾಯ ಚಳುವಳಿಗೆ ಪ್ರಮುಖ ಪ್ರೇರಣೆ. ಜಾತಿ-ಮತ-ಪಂಥ-ಪ್ರದೇಶ-ಭಾಷೆ-ವರ್ಗ-ಲಿಂಗ ಇವೆಲ್ಲಾ ಭೇದಗಳನ್ನು ಹರಿದೊಗೆದು ಒಂದೇ ವೇದಿಕೆಯ ಮೇಲೆ ಬಂದು ಎಲ್ಲಾ ಕ್ಷೇತ್ರದಲ್ಲೂ ಬದಲಾವಣೆ ತಂದ ಹನ್ನೆರಡನೇ ಶತಮಾನದ ವಚನಕಾರರಲ್ಲಿ ನಿಜವಾದ ಬಂಡಾಯ ಮನೋ ಧರ್ಮವಿದೆ. ಧಾರ್ಮಿಕರಂಗದಿಂದಲೇ ಪ್ರಾರಂಭವಾದ ವಚನಕಾರರ ಹೋರಾಟ ಇನ್ನಿತರ ಅಂಶಗಳನ್ನು ಗೌಣಗೊಳಿಸಿದರೂ ಉಳಿದ ರಂಗಗಳಲ್ಲೂ ಸಾಕಷ್ಟು ಹೊಸದನ್ನು ತಂದಿದೆ. ವೇದಕ್ಕೆ ಒರೆಯುಕಟ್ಟಿ, ಶಾಸ್ತ್ರಕ್ಕೆ ಇಗಳವನ್ನಿಕ್ಕಿ, ಆಗಮದ ಮೂಗಕೊಯ್ದು ವಚನಕಾರರು, ವೇದಸಾರುವ ಯಜಮಾನ ಸಂಸ್ಕೃತಿಯನ್ನು ಧಿಕ್ಕರಿಸಿ, ಸಮಾನತೆತಂದದ್ದು, ಏಕದೇವೋಪಾಸನೆಯ ತಳಹದಿಯಲ್ಲಿ ಜಾತಿಪದ್ಧತಿ ವಿರೋಧಿಸಿದ್ದು, ಸ್ತ್ರೀಗೆ ಸಮಾನತೆ ಕಲ್ಪಿಸಿಕೊಟ್ಟದ್ದು, ಅಂತ್ಯಜರೆಂದು ಶತಮಾನ ಗಳಿಂದ ಕಡೆಗಣಿಲ್ಪಟ್ಟವರ ದನಿಯಾಗಿ ಮಾತನಾಡಿದ್ದು ಚರಿತ್ರೆಯಲ್ಲಿ ಎಂದಿಗೂ ಮರೆಯಲಾರದ ಅಂಶ. ಪಂಡಿತರ ಸೊತ್ತಾಗಿದ್ದ ಹಳಸು ಚಂಪೂಶೈಲಿಯನ್ನು ಕೈಬಿಟ್ಟು ಜನಸಾಮಾನ್ಯರ ಆಡುನುಡಿಯನ್ನೇ ಸಾಹಿತ್ಯದಲ್ಲಿ ತಂದು 'ವಚನ'ದ ಮುಖಾಂತರ ತಮ್ಮ ಪ್ರಾಮಾಣಿಕ ಅನ್ನಿಸಿಕೆ-ಅನುಭವಗಳನ್ನು ನಿರ್ಭಿಡೆಯಿಂದ ಅಭಿವ್ಯಕ್ತಿಸಿದ್ದು ವಚನಕಾರರ ಸಾಹಿತ್ಯಕ ಸಾಧನೆ. ಈ ಚಳುವಳಿಯ ಬೆನ್ನೆಲುಬಾಗಿ ದಲಿತರು-ಅಸ್ಪೃಶ್ಯರು-ದುಡಿಯುವ ವರ್ಗದವರೇ ಇದ್ದದ್ದು ಈ ಚಳುವಳಿಯ ಮಹತ್ವವನ್ನು ಸಾರುತ್ತದೆ. ಶರಣರ ಇತಿ-ಮಿತಿಗಳೇನೇ ಇದ್ದರೂ ಇದು ಕರ್ನಾಟಕದ ಮೊದಲ ಮಹತ್ವಪೂರ್ಣ ಚಳುವಳಿ ಎನ್ನುವುದರಲ್ಲಿ ಸಂಶಯವಿಲ್ಲ. ಆದ್ದರಿಂದಲೇ ವಚನ ಚಳುವಳಿಯ ಸಂದರ್ಭ ಧಾರ್ಮಿಕ-ಸಾಮಾಜಿಕ-ಸಾಹಿತ್ಯಕ ಕ್ಷೇತ್ರದಲ್ಲಿ ಹೊಸ ವ್ಯಾಖ್ಯಾನ ಬರೆದ ಕಾಲ.

ವಚನಕಾರರ ನಂತರ ಬಂದ ದಾಸರೂ ಕೂಡ ಗಮನಾರ್ಹರು. ದಾಸ ಸಾಹಿತ್ಯ ದಲ್ಲಿ ಕಂಡುಬರುವ ಸಾಮಾಜಿಕ ವಿಡಂಬನೆ, ಮಡಿವಂತಿಕೆ ಬಗೆಗಿರುವ ಕಟುವ್ಯಂಗ್ಯ, ಆಡುನುಡಿಯ ಸೊಗಸು ಇವೆಲ್ಲಾ ಮಹತ್ವದ ಅಂಶಗಳು. ರಾಜಶಾಹಿ ಇದ್ದಾಗ್ಯೂ ರಾಜಾಶ್ರಯದಿಂದ ದೂರವಿದ್ದು ಬೀದಿ-ಬೀದಿಗೆ ದನಿಕೊಟ್ಟು ಸಂಗೀತದ ಮುಖಾಂತರ ಸಾಹಿತ್ಯವನ್ನು ಅಭಿವ್ಯಕ್ತಿಸಿದ್ದು ದಾಸರ ಪ್ರಮುಖ ಕೊಡುಗೆ. ಹರಿಯ ಬಗೆಗೆ ಅವರ ಭಕ್ತಿ ಎಂತಹದೇ ಇದ್ದರೂ, ದೊರೆದಾಸರಾಗದೆ-ಹರಿದಾಸರಾದದ್ದು ಗಮನಿಸ

ಬೇಕಾದ ಅಂಶ. ಅದರಲ್ಲೂ ಕನಕದಾಸರನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಕೆಳವರ್ಗದಿಂದ ಬಂದ ಕನಕದಾಸರು ವೈದಿಕರು ಸಾಧಿಸದ್ದನ್ನು ಅದೇ ಧಾರ್ಮಿಕರಂಗದ ಮುಖಾಂತರ ಸಾಧಿಸಿತೋರಿಸಿದರು. ಅವರ 'ರಾಮಧಾನ್ಯ ಚರಿತ್ರೆ' ಈ ನಿಟ್ಟಿನಲ್ಲಿ ಉಲ್ಲೇಖಾರ್ಹವಾದದ್ದು. ರಾಗಿ–ಅಕ್ಕಿಗಳ ಮುಖಾಂತರ ಮೇಲ್ವರ್ಗ–ಕೆಳವರ್ಗಗಳ ಸಂಘರ್ಷವನ್ನು ಬಿಚ್ಚಿತೋರಿಸುವ ಜನಪರ ಆಶಯಗಳನ್ನೊಳಗೊಂಡ ಪ್ರಮುಖ ಕೃತಿ.

ರಾಜಕಾರಣದ ಅಮೂಲ್ಯವಾದ ಆಯಾಮಗಳನ್ನು ತೆರೆದು ತೋರಿಸುವ ಕುಮಾರವ್ಯಾಸನ 'ಭಾರತ ಕಥಾಮಂಜರಿ'ಯಲ್ಲೂ ಮಾನವೀಯ ಸಂಬಂಧಗಳಿವೆ. ಮುಂದೆ ಬಂದ ಸರ್ವಜ್ಞ ಕವಿಯಲ್ಲಿ ಕಾಣುವ ಪ್ರತಿಭಟನೆ ಬಹಳ ಮಹತ್ವದ್ದು. ಸರ್ವಜ್ಞ ಒಬ್ಬ ಸಮಾಜ ಸುಧಾರಣಾವಾದಿ. ಆತನ ವಚನಗಳಲ್ಲಿ ಕಾಣುವ ವಾಸ್ತವತೆ, ಸಾಮಾಜಿಕ ಪ್ರಜ್ಞೆ, ಆಡುನುಡಿ, ನಿರ್ಭಿಡೆ, ವ್ಯಂಗ್ಯ, ವಿಡಂಬನೆ ಇವೆಲ್ಲಾ ಗಮನಿಸಬೇಕಾದ ಅಂಶಗಳು. ಸಮಾಜದ ಮೂಢನಂಬಿಕೆ–ಅನಿಷ್ಟಗಳನ್ನು ಕಟುವಾಗಿ, ಖಾರವಾಗಿ ಟೀಕಿಸುವ ಸರ್ವಜ್ಞ ಬಂಡಾಯ ಪರಂಪರೆಯ ವಿಶಿಷ್ಟ ದನಿ.

ಇನ್ನು ಆಧುನಿಕ ಸಾಹಿತ್ಯದಲ್ಲಿ ಬರುವ ನವೋದಯ–ನವ್ಯ–ಪ್ರಗತಿಶೀಲ ಸಾಹಿತಿಗಳಲ್ಲಿ ಕೆಲವರು ಬಂಡಾಯ ಮನೋಧರ್ಮವನ್ನು ಪ್ರಕಟಿಸಿದ್ದಾರೆ. ಆದರೆ ಇದು ಅವರಲ್ಲಿ ಆಂಶಿಕವಾಗಿ ಮಾತ್ರ ಪ್ರಕಟವಾಗಿದೆ. ಅಧ್ಯಾತ್ಮ–ನಿಸರ್ಗದಲ್ಲೇ ನವೋದಯದವರು ತನ್ಮಯರಾದರೂ ಕೂಡ, 'ಪುಟ್ಟವಿಧವೆ,' 'ಕುರುಡು ಕಾಂಚಾಣ' ದಂತಹ ಸಾಮಾಜಿಕ ಪ್ರಜ್ಞೆಯಿಂದ ಉರಿಯುತ್ತಿರುವ ಕವಿತೆಗಳನ್ನು ಬೇಂದ್ರೆ ಕೊಟ್ಟಿದ್ದಾರೆ. ದಲಿತರ–ಶೋಷಿತರ ನೋವು–ನಲಿವುಗಳನ್ನು ಕುವೆಂಪು ಅವರ ಎರಡೂ ಕಾದಂಬರಿಗಳು ಸಮರ್ಥವಾಗಿ ಹಿಡಿದಿಟ್ಟಿವೆ. ಪ್ರಗತಿಶೀಲರಲ್ಲಿ ನಿರಂಜನ–ಬಸವರಾಜ ಕಟ್ಟೀಮನಿ ಉಲ್ಲೇಖಾರ್ಹರು. ಸಮಾಜದ ಸೋಗಲಾಡಿತನವನ್ನಿವರು ತಮ್ಮ ಕಾದಂಬರಿಗಳಲ್ಲಿ ಬಿಚ್ಚಿ ತೋರಿಸಿದ್ದಾರೆ.

ಗದ್ಯಕ್ಕೆ ಹೊಸ ಕಸುವು ತಂದುಕೊಡುವದರ ಮೂಲಕ ಸಾಮಾಜಿಕ ಪ್ರಜ್ಞೆಯಿಂದ ಬರೆದ ನವ್ಯದ ಪಿ. ಲಂಕೇಶ್, ಹರಿತವಾದ ಮೊನಚಿನ ಭಾಷೆಯೊಂದಿಗೆ ವಿಡಂಬಿಸುವ ಚಂಪಾ ಅವರ ಕಾವ್ಯ ನವ್ಯದ ಹಿನ್ನೆಲೆಯಿಂದ ಬಂದಿದ್ದರೂ ಬಂಡಾಯ ಪರಂಪರೆಯ ಭಾಗವಾಗಿವೆ ಅದೇ ರೀತಿ ಕೆಲವು ವರ್ಷಗಳ ಹಿಂದೆ ಹುಟ್ಟಿಕೊಂಡ ಬರಹಗಾರರ ಒಕ್ಕೂಟ–ಪ್ರಗತಿಪಂಥ–ನವ್ಯೋತ್ತರ ಪ್ರಗತಿಪರ ಸಾಹಿತ್ಯ ಇವೆಲ್ಲವನ್ನೂ ಬಂಡಾಯ ಸಾಹಿತ್ಯದ ಪರಂಪರೆಯ ಭಾಗವಾಗಿ ಗಮನಿಸಬೇಕಾಗಿದೆ.

ಈ ಮೇಲೆ ಉಲ್ಲೇಖಿಸಿದ ಉದಾಹರಣೆಗಳೆಲ್ಲಾ ಕನ್ನಡ ಸಾಹಿತ್ಯದಲ್ಲಿ ಬೆಳೆದು ಬಂದ ಪ್ರಗತಿಪರ ವಿಚಾರಗಳು. ಹೀಗೆಂದಕೂಡಲೇ ಇಲ್ಲಿ ಉಲ್ಲೇಖಿಸಿದವರೆಲ್ಲಾ ಬಂಡಾಯ ಸಾಹಿತಿಗಳಲ್ಲದಿರಬಹುದು. ಸಂಪ್ರದಾಯವನ್ನು ಮೀರಿ ತಮ್ಮ ಮಿತಿಗಳಲ್ಲೇ ಇವರು ಪ್ರಗತಿಪರ ಮನೋಭಾವಕ್ಕೆ ಸ್ಪಂದಿಸಿದವರು. ಕನ್ನಡ ಸಾಹಿತ್ಯದಲ್ಲಿ

ಇಂತಹದೊಂದು ಪರಂಪರೆಯಿದೆಯೆಂಬುದು ಬಂಡಾಯ ಸಾಹಿತಿಗೆ ಅಭಿಮಾನದ ಸಂಗತಿಯೇ ವಿನಾ ಪರಂಪರೆಯ ಪ್ರವಚನ ಮಾಡುವದೇ ಆತನ ಗುರಿಯಲ್ಲ. ಹೊಸ ಸಾಂಸ್ಕೃತಿಕ ಪರಂಪರೆಯ ನಿರ್ಮಾಣ ಹಾಗೂ ಎಲ್ಲಂದದ ಸಮಾನತೆಯನ್ನು ಹೊಂದಿದ ಸಮಾಜ ಕಟ್ಟುವದು ಆತನ ಮುಖ್ಯ ಉದ್ದೇಶ.

ಬಂಡಾಯ ಸಾಹಿತ್ಯ : ನವೋದಯ–ನವ್ಯ ಪಂಥಗಳು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಹುಟ್ಟಿಕೊಂಡಿದ್ದರೆ, ಬಂಡಾಯ ಸಾಹಿತ್ಯ ಈ ನೆಲದ ಅನಿವಾರ್ಯತೆಯಿಂದ ಮೂಡಿಬಂದದ್ದು. ಆದ್ದರಿಂದ ಬಂಡಾಯ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟತೆಯಿದೆ. ಕನ್ನಡ ಸಾಹಿತ್ಯದ ಶಿಷ್ಟವಿಮರ್ಶೆಯ ಕನ್ನಡಕದಲ್ಲೇ ಬಂಡಾಯ ಸಾಹಿತ್ಯವನ್ನು ನೋಡಬಾರದು. ದಲಿತರು–ಕೆಳವರ್ಗದವರು–ಕೂಲಿ ಕಾರ್ಮಿಕ ರೈತರ ಮಕ್ಕಳು ಮೊಟ್ಟಮೊದಲ ಬಾರಿಗೆ ಒಂದೇ ವೇದಿಕೆಯಲ್ಲಿ ಸಂಘಟಿತರಾಗಿ ನೊಂದ ಜನತೆಯ ದನಿಯಾಗಿ–ಮಾತಾಗಿ–ಹಾಡಾಗಿ ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ತಾನು ಸೃಷ್ಟಿಸುವ ಸಾಹಿತ್ಯದಿಂದಲೇ ಸಮಾಜದಲ್ಲಿ ಕ್ರಾಂತಿಯಾಗುತ್ತದೆಂಬ ಹುಚ್ಚು ಭ್ರಮೆ ಬಂಡಾಯ ಸಾಹಿತಿಗಿಲ್ಲ. ಆದರೆ ಬಂಡಾಯ ಸಾಹಿತಿಯಿಂದ ಸೃಷ್ಟಿಯಾದ ಸಾಹಿತ್ಯದಲ್ಲಿ ಸಾಂಸ್ಕೃತಿಕ ಬದಲಾವಣೆ ತರುವ ದೊಡ್ಡ ಪ್ರಯತ್ನವಿದೆ. ಜಿಡ್ಡುಗಟ್ಟಿರುವ ಸಾಂಸ್ಕೃತಿಕ ಕ್ಷೇತ್ರವನ್ನು ಹೊಸ ದಿಕ್ಕುಗಳಲ್ಲಿ ಬದಲಾಯಿಸುವುದೇ ನಿಜವಾದ ಕ್ರಾಂತಿಗೆ ಪೂರ್ವಸಿದ್ಧತೆಯಾಗಿ ಮಾಡಬೇಕಾದ ಮೊದಲ ಕಾರ್ಯ. ಈ ಕಾರ್ಯವನ್ನು ತನ್ನ ಸಾಹಿತ್ಯ ಮಾಡುತ್ತದೆಂಬ ಆಶಾಭಾವನೆಯನ್ನು ಬಂಡಾಯ ಸಾಹಿತಿ ಹೊಂದಿದ್ದಾನೆ.

ಬಂಡಾಯ ಸಾಹಿತಿಗಳು ಮಾನವತಾವಾದಿಗಳು. ಬಂಡಾಯ ಸಾಹಿತಿಯ ಮಾನವೀಯತೆ, ಶೋಷಣಾರಹಿತ ಸಮಾಜಕ್ಕೆ ತುಡಿಯುವ ಮಾನವೀಯತೆ. ಅವರ ಮುಖ್ಯ ಕಾಳಜಿಯಿರುವುದು ಮುಖವಿಲ್ಲದ—ಶತಮಾನಗಳಿಂದ ವಂಚಿತನಾದ ಜನ ಸಾಮಾನ್ಯನ ಕಡೆ. ಬಂಡಾಯ ಸಾಹಿತಿಯ ಮಾನವೀಯತೆ ಮುಗಿಲು ಮುಟ್ಟುವ ಮಹಡಿಗಳ ಕಡೆಗಿರದೆ, ಮುರುಕು ಗುಡಿಸಲುಗಳ ಕಡೆಗಿದೆ.

ಬಂಡಾಯ ಸಾಹಿತ್ಯದಲ್ಲಿ ಬರೀ ಪ್ರತಿಭಟನೆ—ರೊಚ್ಚು—ಆವೇಶ ಇರಬೇಕೆಂದೇನೂ ಅಲ್ಲ. ವ್ಯವಸ್ಥೆ ಬದಲಾವಣೆಗಾಗಿ ಹಾತೊರೆಯುವ ಯಾವುದೇ ತಣ್ಣನೆಯ ವಿಚಾರ ಕೂಡಾ ಬಂಡಾಯ ಸಾಹಿತ್ಯವಾಗಬಲ್ಲದು. ಹಾಗೆಂದಾಕ್ಷಣ ಬಂಡಾಯ ಸಾಹಿತ್ಯ ಕಲಾತ್ಮಕತೆಯನ್ನು ಕಳಚಿಕೊಂಡ ಶುಷ್ಕ ಒಣ ವರದಿಯಲ್ಲ. ಕಲಾತ್ಮಕತೆಯನ್ನು ಗರ್ಭೀಕರಿಸಿಕೊಂಡೇ ಬಂಡಾಯ ಸಾಹಿತ್ಯ ಹುಟ್ಟುತ್ತದೆ. ಆದರೆ ಕಲೆಗಾಗಿ ಕಲೆ ಎಂಬ ಸಿದ್ಧ ಶೈಲಿಯೇ ಬಂಡಾಯ ಸಾಹಿತಿಯ ಚೌಕಟ್ಟಲ್ಲ.

ಬಂಡಾಯ ಸಾಹಿತ್ಯವೆಂದರೆ ಪ್ರತಿ ಕೃತಿಯೂ ಪ್ರತಿಭಟನೆಯೊಂದಿಗೆ ಮುಕ್ತಾಯವಾಗಬೇಕೆಂದೇನೂ ಅಲ್ಲ. ಒಂದು ಕೃತಿಯಲ್ಲಿ ವ್ಯಂಗ್ಯ ಮೊನಚಾಗಿರ

ಬಹುದು, ಮತ್ತೊಂದರಲ್ಲಿ ಧ್ವನಿ ಆ ಕೆಲಸ ಮಾಡಿರಬಹುದು, ಇನ್ನೊಂದರಲ್ಲಿ ಕ್ರೂರ ವ್ಯವಸ್ಥೆಯ ಕರಾಳ ಮುಖಗಳನ್ನು ತಣ್ಣನೆಯ ಭಾವದಲ್ಲಿ ದಾಖಲಿಸಿರಬಹುದು.

ಇಲ್ಲಿಯವರೆಗೆ ಹೆಣ್ಣನ್ನು ದೇವತೆಯನ್ನಾಗಿ ಇಲ್ಲವೆ ರಾಕ್ಷಸಿಯನ್ನಾಗಿ ಕಂಡಿದ್ದಾರೆಯೇ ವಿನಾ ಹೆಣ್ಣನ್ನು ಹೆಣ್ಣಾಗಿ ಕಾಣುವದರ ಮುಖಾಂತರ ಹೆಣ್ಣಿನ ನೈಜ ಆಶೆ-ಆಕಾಂಕ್ಷೆಗಳನ್ನು ಅವಳ ಬದುಕಿನಲ್ಲಿ ಪಲ್ಲವಿಸಿದವರು ಬಹಳ ಕಡಿಮೆ. ಬಂಡಾಯ ಸಾಹಿತಿ ಹೆಣ್ಣನ್ನು 'ತ್ಯಾಗ' ಎಂಬ ಹೆಸರಿನಿಂದ ವಂಚಿಸದೆ, ಹೆಣ್ಣನ್ನು ಹೆಣ್ಣನ್ನಾಗಿ ಕಾಣುತ್ತಾ ಅವಳ ಸಹಜ ಆಶೆ-ಆಕಾಂಕ್ಷೆಗಳಿಗೆ, ಶತಮಾನಗಳಿಂದ ವಂಚಿತಳಾದ ಆಕೆಯ ನೋವು-ನಲಿವಿನ ಬದುಕಿಗೆ ಜೀವ ತುಂಬುತ್ತಾನೆ, ತನ್ನಂತೆ ಸಮಾನತೆಯಿಂದ ಕಾಣುತ್ತಾನೆ.

ಬಂಡಾಯ ಸಾಹಿತಿಗಳಿಗೆ ಸೌಂದರ್ಯಪ್ರಜ್ಞೆಯೇ ಇಲ್ಲವೆನ್ನುವ ಮಾತುಗಳಲ್ಲಿ ಹುರುಳಿಲ್ಲ. ಬಂಡಾಯ ಸಾಹಿತಿ ಕಾಣುವ ಸೌಂದರ್ಯ ಕೇವಲ ಮೇಲುನೋಟದ ಥಳಕು-ಬೆಳಕಲ್ಲ ; ಮಾನವೀಯತೆಯನ್ನು ಸ್ಫುರಿಸುವ ಅಂತರಂಗದ್ದು. ಬಂಡಾಯ ಕವಿಗೆ ನಿಸರ್ಗದ ಮೇಲೆ ಕೋಪವಿಲ್ಲ. ಆದರೆ ಆತ ಅದನ್ನೇ ಆರಾಧ್ಯದೈವವೆಂದು ನಂಬಿ ಕೈಕಟ್ಟಿಕೂಡುವದಿಲ್ಲ. ಪ್ರಕೃತಿಯ ಬಗೆಗೆ ಬಂಡಾಯ ಸಾಹಿತಿಗಿರುವಷ್ಟು ಕಾಳಜಿ, ಆತ ಪ್ರಕೃತಿಯನ್ನು ನೋಡುವ ಹೊಸ ದೃಷ್ಟಿಕೋನ ಇನ್ನುಳಿದ ಸಾಹಿತಿಗಳಲ್ಲಿ ಕಾಣದು.

ಹೂವು-ಹೆಣ್ಣು-ತಾರೆಯ ಬಗೆಗೆ ಹಿರಿಯ ಬಂಡಾಯ ಕವಿ ಪ್ರೊ. ಚಂದ್ರಶೇಖರ ಪಾಟೀಲರ ಕವನದ ಈ ಕೆಳಗಿನ ಸಾಲುಗಳು ಪ್ರಕೃತಿಯ ಬಗೆಗೆ ಬಂಡಾಯ ಕವಿಗಿರುವ ನಿಲುವನ್ನು ಸ್ಪಷ್ಟಪಡಿಸುತ್ತವೆ.

'ನೆಲದ ಬಸಿರಿನ ಬಿಸಿಗೆ
ಬಿರಿತು ಒಡಲನೆ ಸೀಳಿ
ಹೊರಬಂದ ಜೀವರಸ
ಟೊಂಗೆ-ಟೊಂಗೆಯ ತುದಿಗೆ
ಕಾರಂಜಿಯಾಗಿ ಅರಳುವ ಹೂವು.

ಕಾಯಾಗಿ ಹಣ್ಣಾಗಿ ಮತ್ತೆ ಬೀಜವಾಗಿ
ನೂರು ಹೂವಿಗೆ ಉಸಿರುಕೊಡುವ ಹೂವು
ಒಡಲನೆತ್ತರವನ್ನು ಕಣ್ಣಲ್ಲಿ ಚಿಮುಕಿಸಿ.
ಹೀಗೆ ಬದುಕಬೇಕು ನಾವು-ನೀವು'

'ಹೂವು ಹೆಣ್ಣು ತಾರೆ'-ಸಂಕಲನದಿಂದ

ಎನ್ನುತ್ತಾ ಹೂವು ಹೆಣ್ಣು ತಾರೆಯ ಬಗೆಗೆ ಹಾಡುವದು ಬೇಡವೆಂದು ಹೇಳುವದು ಬೇಡ ಗೆಳೆಯ ಎನ್ನುತ್ತಾರೆ. ಇದೇ ಹೂವಿನ ಮೂಲಕ ಈ ನೆಲದ ಬದುಕನ್ನು

ನೆನಪಿಸುತ್ತಿರುವ ಕುಂ. ವೀರಭದ್ರಪ್ಪನವರ ಈ ಕೆಳಗಿನ ಕವಿತೆಯ ಸಾಲುಗಳು ಗಮನಾರ್ಹವಾಗಿವೆ.

‘ ಮುಡಿಯಿರಿ ಒಂದು ಹಿಡಿ ಹೂವ
ಮರೆಯಿರಿ ಒಂದು ಮಣ ನೋವ
ಕಾಡುಕಣಿಗೆಲೆ ಮಾತು ಹಾಡು ಗುನುಗುವ ಮೊದಲೆ
ಕಿವಿಗೊಡಿರಿ ಈ ನೆಲದ ಹೃದಯ ಸ್ಪಂದನಕೆ
ಹಕ್ಕಿಕಂಠದಿ ಅಡಗಿ ಉಕ್ಕೊ ಕಲರವದಲ್ಲಿ
ಮೈಮರೆಯದಿರಿ ಸ್ವಾಮಿ ನೋಡಿ ಎಡಕೆಬಲಕೆ ’

‘ ಅನಿವಾರ್ಯ ’ ಕವಿತೆಯಿಂದ

ಶೋಷಿತ ಜನರ ನೋವನ್ನು ವಿವರಿಸಲು ಅಕ್ಷರಗಳೇ ಸಾಲವು ಎಂಬ ಡಾ. ಚೆನ್ನಣ್ಣ ವಾಲೀಕಾರರ ಈ ಕೆಳಗಿನ ಕವಿತೆಯ ಸಾಲುಗಳು ತಣ್ಣನೆಯ ಭಾವದಲ್ಲೇ ಧಿಮಿಗುಡುತ್ತ ದಟ್ಟಸತ್ಯವನ್ನು ಸಾರುತ್ತವೆ.

‘ ಯಾವ ಅಕ್ಷರದಿಂದ ಬರೆದು ಹೇಳಲಿ ನಾನು
ನಮ್ಮ ಜನರಿಗಾದ ಎದೆಯ ಬ್ಯಾನಿ
ಕಾಲ ಕಾಲದಿಂದ ದುಡ್ಡು ಅಧಿಕಾರದಿಂದ
ಅವರೇ ಲೀಡರ್ ಆಗಿ ಮೆರೆಯುತ್ತಿರಲು .... ’

‘ ಪ್ಯಾಂಥರ್ ಪದ್ಯಗಳು ’ ಸಂಕಲನದಿಂದ

ನಮ್ಮ ದೇಶಕ್ಕೆ ಬಂದಿರುವ ಸ್ವಾತಂತ್ರ್ಯ ಯಾರಿಗೆ ಬಂತು ? ಎಂದು ಕೇಳುವ ಸಿದ್ದಲಿಂಗಯ್ಯನವರ ನುಡಿಗಳಲ್ಲಿ ನೇರ ವಿಡಂಬನೆಯಿದೆ, ದಟ್ಟ ಸತ್ಯವಿದೆ, ಕಲಾತ್ಮಕತೆಯನ್ನು ಮೀರಿ ಉರಿವ ಶತಮಾನಗಳ ನೋವಿನ ಕೆಂಡವಿದೆ.

‘ ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾಬಿರ್ಲಾರ ಜೇಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ.

ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ ’

‘ ಕಪ್ಪುಕಾಡಿನ ಹಾಡು ’ ಸಂಕಲನದಿಂದ

ಭಗವದ್ಗೀತೆಯ ಬಗೆಗೆ ಅಲ್ಲಮಪ್ರಭು ಬೆಟ್ಟದೂರ ಅವರಿಗೆ ಇರುವ ಪ್ರೀತಿಯೆಂತಹ ದೆಂಬುದನ್ನು ಅವರ ಕವಿತೆಯ ಈ ಕೆಳಗಿನ ಸಾಲುಗಳು ಸಾಬೀತುಪಡಿಸುತ್ತವೆ.

‘ಗೀತೆ ಈ ನೆಲದ ತುಂಬಾ ಹೇತೆ
ಆಧ್ಯಾತ್ಮದ ಸೋಗಲಾಡಿತನ.
ಕಾರಿಕೊಂಡೆ; ಅಪಕ್ವಪೂರ್ವಾಪರ ವಿರುದ್ಧ ವಿಚಾರಗಳನ್ನ
ಈ ಬದುಕನ್ನಪ್ಪದೆ, ಇದೇ ಜನ್ಮವನ್ನಪ್ಪದೆ,
ಮುಂದಿನ ಜನ್ಮದ ಆಶಾ ತೋರಿಸಿ ಕುತಿಗಿಕೊಯ್ಯುತಿದ್ಯಾ ಗೀತೆ-
ದುಡಿದದ್ದಕ್ಕೆ ಪ್ರತಿಫಲವನ್ನೇ ಕೇಳಬಾರದೆನ್ನುತ್ತೀಯಾ ಗೀತೆ–’

‘ಇದು ನನ್ನ ಭಾರತ’ ಸಂಕಲನದಿಂದ

ಪೆಟ್ರೋಮ್ಯಾಕ್ಸ್ ಹೊತ್ತ ಕೂರವರು ಉಳ್ಳವರ ಸಂಭ್ರಮಗಳಿಗೆ ಬೆಳಕು ಕೊಡುತ್ತಾ ತಾವು ಕತ್ತಲೆಯಲ್ಲಿ ಹೂತು ಹೋಗುತ್ತಿದ್ದಾರೆ. ಈ ದಾರುಣ ಚಿತ್ರವನ್ನು ಜಂಬಣ್ಣ ಅಮರಚಿಂತರು ಹೀಗೆ ನೋಡಿದ್ದಾರೆ.

‘ಇದ್ದವರು ಕದ್ದವರು
ಚುನಾವಣೆ ಗೆದ್ದವರು
ಇವರು ಹೊತ್ತ ಬೆಳಕಿನಲ್ಲಿ
ಲಕ–ಲಕ ಹೊಳೆದರು !
ಯಾರಯ್ಯಾ ; ಯಾರಿವರು ?
ಕಣ್ಣಿಗಂತೂ ಕಾಣರು
ಪೆಟ್ರೋಮ್ಯಾಕ್ಸ್ ಹೊತ್ತವರು........’

‘ಪೆಟ್ರೋಮಾಕ್ಸ್ ಹೊತ್ತವರು’ ಕವಿತೆ

ಇಂಡಿಯಾದಲ್ಲಿ ಎಲ್ಲದಕ್ಕೂ ಬರ ಬರಬಹುದು; ಆದರೆ ಸ್ವಾಮಿ ಸಂತ—ಬಾಬಾರಿಗೆ ಎಂದಿಗೂ ಬರ ಬರಲಾರದು. ವಿವಿಧ ಭಂಗಿಗಳಲ್ಲಿ ಕುಣಿಯುವ ಈ ಕ್ಯಾವಿ ಮಹಾಶಯರನ್ನು ಬಿ. ಟಿ. ಲಲಿತಾನಾಯಕರು ತಮ್ಮ ಕವಿತೆಯೊಂದರಲ್ಲಿ ಹೀಗೆ ಕಂಡಿದ್ದಾರೆ.

‘ಎತ್ತನೋಡಿದರತ್ತ ಸಾಧು ಸಂತ ಸ್ವಾಮಿ ಬಾಬ
ಹರಿಹರ ಅಲ್ಲಾ ಏಸು
ಏಸೋ ಭಾವ ಭಂಗಿಯ ಮಂದಸ್ಮಿತ ಮೋರೆಗಳು
ಚಾಚಿರುವ ಅಭಯ ಹಸ್ತಗಳು. . . . .
ಎತ್ತನೋಡಿದರತ್ತ
ಮುಖವಾಡಗಳೇ ಮುಖವಾಡಗಳು’

‘ಏಸೋ ಭಾವಭಂಗಿಯ ಮೋರೆಗಳು’ ಕವಿತೆ

'ಇಹ'ದ ಬದುಕನ್ನು ಅಲ್ಲಗಳೆದು 'ಪರ'ದ ಹೆಸರಿನಲ್ಲಿ ಮೋಸಮಾಡುತ್ತ ಮೆರೆಯುವ ಇದೇ ಸ್ವಾಮಿ—ರಾಮರನ್ನು ಕುರಿತ ಡಾ. ಬಸವರಾಜ ಸಬರದರ ಒಂದು ಕವನ ಹೀಗಿದೆ.

'ಬೂದಿ ಭಸ್ಮವ ಕೊಟ್ಟು, ನಮ್ಮ ಜನತೆಯ ಸುಟ್ಟು
ಜಪತಪವ ಮಾಡಿಸುತ, ಮಂತ್ರಗಳ ಪಠಿಸುತ
ಸಂಪ್ರದಾಯದ ಸ್ಮಶಾನದಿ, ಗೋರಿ ಮಾಡಿದಿರಿ ಬದುಕ
ಸಾಕಿನ್ನು ಸಾಕಿನ್ನು ಪಲ್ಲಕ್ಕಿ ಗುರುಗಳೆ!
ಸಾಕು ಸಾಕಯ್ಯಾ ಪಂಚಪೀಠಾಧಿಪರೆ!
ಇನ್ನಾದರೂ ನೋಡಿ ಕಾಸಿನಾ ಸ್ವಾಮಿಗಳೆ!
ಬೆಳಗಾಗಿದೆದ್ದೇಳಿ ಗುರುವಾರದ ರಾಯರೆ!
ಏನು ಮಾಡುವಿರಯ್ಯಾ ಸಂಸಾರವ ಬಿಟ್ಟು
ಏಕೆ ಹಾರುವಿರಯ್ಯಾ ಕ್ಯಾವಿಯಾ ತೊಟ್ಟು'

'ಮೂಡಲಕ ಕೆಂಪ ಮೂಡ್ಯಾವ' ಸಂಕಲನದಿಂದ

ಹೀಗೆ ಸಮಾಜ–ನಿಸರ್ಗ–ಪ್ರಸ್ತುತ ಬದುಕನ್ನು ಕುರಿತ ಬಂಡಾಯ ಕವಿಗಳ ಮನೋಧರ್ಮವನ್ನು ಅವರ ಆಯ್ದ ಕವಿತೆಗಳ ಸಾಲುಗಳ ಮುಖಾಂತರ ಸಂಕ್ಷಿಪ್ತವಾಗಿ ವಿವರಿಸಿದೆ. ಇವರಷ್ಟೇ ಅಲ್ಲದೆ ಕಾಳೇಗೌಡ ನಾಗವಾರ, ರಾಮಜೇವರಾಕೆ, ಮುನಿವೆಂಕಟಪ್ಪ, ಸುಕನ್ಯಾಮಾರುತಿ, ಎಸ್. ಎಸ್. ಹಿರೇಮಠ, ಡಿ. ವಿಜಯ, ಜಿ. ಎಚ್. ರಾಘವೇಂದ್ರ, ಚಂದ್ರಶೇಖರತಾಳ್ಯ, ಇಂದೂಧರ ಹೊನ್ನಾಪುರ, ಮಂಗಳೂರು ವಿಜಯ, ವಿಜಯ ಪಾಟೀಲ, ಕೆ. ರಾಮಯ್ಯ, ಕೆ. ಶರೀಫಾ, ರವಿ ಬೆಳಗೆರೆ, ಸತೀಶ ಕುಲಕರ್ಣಿ, ಗವಿಸಿದ್ಧ ಬಳ್ಳಾರಿ, ಆರ್. ಜಿ. ಹಳ್ಳಿನಾಗರಾಜ, ಗೋವಿಂದಯ್ಯ—ಈ ಮೊದಲಾದವರೆಲ್ಲಾ ಈಗಾಗಲೆ ಬಂಡಾಯ ಕಾವ್ಯದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಕಥೆ – ಕಾದಂಬರಿ – ವಿಮರ್ಶಾಕ್ಷೇತ್ರದಲ್ಲಿ ಬರಗೂರು ರಾಮಚಂದ್ರಪ್ಪ, ದೇವನೂರ ಮಹದೇವ, ಡಾ. ಅರ್ಕೆ ಮಣಿಪಾಲ, ಡಾ. ಬೆಸಗರಹಳ್ಳಿ ರಾಮಣ್ಣ, ಡಾ. ಬಿ. ಕೃಷ್ಣಮೂರ್ತಿ, ಎಸ್. ಗಣೇಶನ್, ಕೆ. ಎಸ್. ಭಗವಾನ್, ಶಿವರಾಮು ಕಾಡನಕುಪ್ಪೆ ಈ ಮುಂತಾದವರು ಗಟ್ಟಿಯಾಗಿ ನೆಲೆಯೂರಿದ್ದಾರೆ. ಈ ಸಂದರ್ಭದಲ್ಲಿ ನೆನಪಿಸಲೇಬೇಕಾದ ಬಂಡಾಯದ ಇನ್ನೊಂದು ಪ್ರಮುಖ ಹೆಸರು ದಿವಂಗತ ದೇವಯ್ಯ ಹರವೆ ಅವರದು. ಕಥೆ–ಕಾದಂಬರಿಗಳಲ್ಲಿ ವಿಶಿಷ್ಟದನಿ ಮೂಡಿಸಿ, ವಿಮರ್ಶಾಕ್ಷೇತ್ರದಲ್ಲಿ ಹೊಸ ಆಯಾಮಗಳನ್ನು ಕಲ್ಪಿಸಿದ್ದಾರೆ. ಬಂಡಾಯ ಸಂಘಟನೆಯಲ್ಲಿರದೆ ಬಂಡಾಯ ಮನೋಧರ್ಮವನ್ನು ಪ್ರಕಟಿಸಿರುವ ಹಲವಾರು ಯುವ ಲೇಖಕ–ಲೇಖಕಿಯರಿದ್ದಾರೆ.

ಸ್ಥಗಿತಗೊಳ್ಳುತ್ತಿದ್ದ ಕನ್ನಡ ಸಾಹಿತ್ಯದಲ್ಲಿ ಹೊಸ ತಿರುವು ಮೂಡಿಸಿದ

ಬಂಡಾಯ ಸಾಹಿತ್ಯ ಈ ಸಂದರ್ಭದ ಜರೂರಿಯಿಂದ ಹುಟ್ಟಿದುದೆಂಬುದನ್ನು ಈಗಾಗಲೇ ಚರಿತ್ರೆಯಲ್ಲಿ ದಾಖಲುಗೊಳಿಸಿದೆ. ಕೆಲ ಪ್ರಮುಖ ನವೋದಯ—ನವ್ಯ ಸಾಹಿತಿಗಳು ತಮಗೆ ತಿಳಿಯದಂತೆಯೇ ಈಗ ಬಂಡಾಯದ ಕಡೆ ವಾಲುತ್ತಿದ್ದಾರೆ. ರಚನಾತ್ಮಕ ಟೀಕೆಗಳಿಗೆ ಬಂಡಾಯ ಸಾಹಿತಿಗಳಲ್ಲಿ ಸದಾ ಸ್ವಾಗತವಿದೆ. ಮುಕ್ತ ಚರ್ಚೆಯೊಂದಿಗೆ ತೊಡಗುವದೇ ಬಂಡಾಯ ಸಾಹಿತ್ಯದ ಗುಣ.

ಕೆ. ಎಸ್. ಕೃಷ್ಣಮೂರ್ತಿ

ಷೋಡಶಿ

ಕಲ್ಕತ್ತದಲ್ಲಿ ಬಹುತೇಕ ಶ್ರೀಮಂತರ ಭವ್ಯಬಂಗಲೆಗಳಿರುವ ಭಾಗ ಅದು. ಮುಖ್ಯರಸ್ತೆಯಲ್ಲಿ ಭವ್ಯಬಂಗಲೆಗಳ ಸಾಲಿನಲ್ಲಿ ಒಂದು ಹಳೆಯ ಕಟ್ಟಡ. ಬಹಳ ದೊಡ್ಡ ಆವರಣದ ನಡುವೆ ನಿಂತಿದೆ ಈ ಮಹಲು. ಸುತ್ತ ಎತ್ತರವಾದ ಕಾಂಪೌಂಡು. ಮುಂದುಗಡೆಯಿಂದ ನೋಡಲು ಈ ಮಹಲು ವೃತ್ತಾಕಾರವಾಗಿ ಕಾಣಿಸುತ್ತದೆ. ಇದೊಂದು ಮಹಡಿಯ ಮನೆ. ಮನೆಯ ಮುಂದುಗಡೆಯ ಗೋಡೆಯನ್ನು ಗಾರೆಯಲ್ಲಿ ಬಿಡಿಸಿದ ಕೆಲವು ಚಿತ್ರಗಳು ಅಲಂಕರಿಸಿದ್ದವು. ಗಂಧರ್ವರು, ಕಿನ್ನರರು, ಹಾಡುವ ನರ್ತಿಸುವ ಸುಂದರಿಯರು, ಬೇಲುಗಳ–ಉಬ್ಬು ಚಿತ್ರಗಳು ಆ ಮಹಲಿನ ಲಕ್ಷಣವನ್ನು ಎತ್ತಿತೋರಿಸುವಂತೆ ಇದ್ದವು. ಒಂದು ಕಾಲದಲ್ಲಿ ಈ ಚಿತ್ರಗಳನ್ನು ಬಣ್ಣಗಳಿಂದ ಅಲಂಕರಿಸಲಾಗಿತ್ತೆಂಬುದನ್ನು ಇನ್ನೂ ಅಲ್ಲಲ್ಲಿ ಉಳಿದಿದ್ದ ಮಾಸಲು ವರ್ಣಗಳಿಂದ ಊಹಿಸಬಹುದಾಗಿತ್ತು. ಅಲ್ಲಲ್ಲಿ ಮಳೆಯ ನೀರು ಹರಿದು ಕಲೆಗಳಾಗಿದ್ದವು. ಮಹಲು ಮಾತ್ರ ಇನ್ನೂ ಸುಸ್ಥಿತಿಯಲ್ಲಿದ್ದಿತು. ದೂರದಿಂದ ನೋಡಿದರೆ ಇದು ಹಿಂದೆ ಭಾರಿಯಾಗಿ ಬದುಕಿದ ಜಮೀನುದಾರನ ಮನೆ ಎಂಬ ಭಾವನೆ ಮೂಡುತ್ತಿತ್ತು. ಸಾಮಾನ್ಯರಿಗೆ ಭಯಮಿಶ್ರಿತ ಗೌರವವನ್ನು ಉಂಟು ಮಾಡುತ್ತಿತ್ತು. ಇದಕ್ಕೆ ಕಾರಣವಿಲ್ಲದೆ ಇರಲಿಲ್ಲ.

ಈ ಮಹಲು ಹೀಗೆ ತನ್ನ ಹಳೆಯ ವೈಭವವನ್ನು ಕಳೆದುಕೊಂಡು ಪುರಾತನ ಸ್ಮಾರಕದಂತೆ ಉಳಿದಿರುವುದರ ಹಿಂದೆ ಏನೋ ಒಂದು ರಹಸ್ಯವಿದೆ ಎನ್ನಿಸುತ್ತಿತ್ತು. ಜನರೂ ಈ ಮನೆಯ ಬಗ್ಗೆ ವಿವಿಧವಾಗಿ ಮಾತಾಡಿಕೊಳ್ಳುತ್ತಿದ್ದರು. ಆ ಮನೆಯಲ್ಲಿ ಬಹುಕಾಲ ಯಾರೂ ವಾಸಿಸುತ್ತಿರಲಿಲ್ಲವಂತೆ. ಆಗಾಗ್ಗೆ ಮನೆಯ ಬಾಗಿಲನ್ನು ತೆರೆದು ನೌಕರರು ಕಸಗುಡಿಸಿ ಧೂಳು ಹೊಡೆದು ನೇರ್ಪುಗೊಳಿಸುತ್ತಿದ್ದರು. ಈ ಭವ್ಯಮಹಲಿನ ಹಿಂದುಗಡೆಯಲ್ಲಿ ಕಾವಲುಗಾರನ ಒಂದು ಸಣ್ಣ ಮನೆಯಿದ್ದಿತು. ಮೋತಿರಾಮ ಬಹುಕಾಲ ಆ ಮನೆಯಲ್ಲಿರುತ್ತಿದ್ದನು. ಅವನಿಗೆ ತುಂಬ ವಯಸ್ಸಾದಾಗಲೂ ಅಲ್ಲೇ ವಾಸಿಸುತ್ತಿದ್ದ. ತಲೆ ಅಲುಗಿಸುತ್ತ ಕೋಲೂರಿಕೊಂಡು ಹೋಗುತ್ತಿದ್ದುದನ್ನು ನೋಡಿದ ಹಲವರು ಈಗಲೂ ಇದ್ದಾರೆ. ಅವನು ಅದು ಹೇಗೆ

ಅಲ್ಲಿ ಒಬ್ಬನೇ ಜೀವಿಸುತ್ತಿದ್ದನೋ ದೇವರೇ ಬಲ್ಲ. ಮೋತಿರಾಮುನ ಮಕ್ಕಳು ದೊಡ್ಡವರಾದ ಮೇಲೆ ನೌಕರಿ ಮಾಡಿಕೊಂಡು ಬೇರೆ ಕಡೆಗಳಲ್ಲಿ ವಾಸಿಸುತ್ತಿದ್ದಾರೆ. ಈ ಮನೆಯಲ್ಲಿ ಅವರಾರೂ ಇರಬಯಸಲಿಲ್ಲ. ಮೋತಿರಾಮನನ್ನು ಕೂಡ ಆ ಮನೆ ಬಿಟ್ಟು ಬಂದು ತಮ್ಮ ಜತೆ ಇರುವಂತೆ ಮಕ್ಕಳು ಎಷ್ಟೇ ಹೇಳಿದರೂ ಇವನು ಹೋಗಲಿಲ್ಲ. ಬೀದಿಯ ಹುಡುಗರು ಯಾರಾದರೂ ಮಹಲಿನ ಬಳಿಗೆ ಬಂದರೆ ಮೋತಿರಾಮು ಅವರನ್ನು ಗದರಿಸಿ ಓಡಿಸಿಬಿಡುತ್ತಿದ್ದ. ಆಕಸ್ಮಾತ್ ಅವನ ಕಣ್ಣು ತಪ್ಪಿಸಿ ಯಾವುದಾದರೂ ಜಾಲಂದರ ಮೂಲಕವೋ ಅಥವಾ ಮರೆತು ತೆರೆದುಬಿಟ್ಟ ಕಿಟಕಿಯಿಂದಲೋ ಇಣಿಕಿ ನೋಡಿದರೆ ವಿಶಾಲವಾದ ಹಜಾರದಲ್ಲಿ ತಾರಸಿಯಿಂದ ಇಳಿಬಿಟ್ಟ ಗುಳೋವುಗಳು, ಕಂದೀಲುಗಳು ಹೊಳೆಯುವುದನ್ನೂ ಮಸಕುಮಸಕಾಗಿ ಗೋಡೆಯ ಮೇಲೆ ಬಣ್ಣದ ಚಿತ್ರವಿರುವುದನ್ನೂ ಕಾಣಬಹುದಾಗಿತ್ತಂತೆ. ಆ ಚಿತ್ರವನ್ನು ನೋಡುತ್ತಿದ್ದರೆ ಅನುಪಮ ರೂಪವೊಂದು ಕಣ್ಣ ಮುಂದೆ ತೇಲಿ ಹೋದಂತೆ ಭಾಸ ವಾಗುವುದು. ರಾತ್ರಿಯ ಹೊತ್ತು ಮನೆಯ ಎದುರಿಗೆ ಯಾರೂ ಹೋಗುತ್ತಿರಲಿಲ್ಲ. ರಾತ್ರಿ ಹನ್ನೆರಡು ಗಂಟೆಯ ಅನಂತರ ಯಾರಾದರೂ ಕಾಂಪೌಂಡಿಗೆ ಒರಗಿ ನಿಂತು ಕೊಂಡು ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದರೆ ಕಿಟಕಿಗಳ ಮೂಲಕ ಯಾವುದೋ ಬೆಳಕು ಮಿಂಚಿದಂತೆ ಆಗುವುದು, ಗೆಜ್ಜೆಯ ಸುನಾದ, ನರ್ತನದ ಹೆಜ್ಜೆಯಾಟ, ಯಾವುದೋ ಮಧುರ ಗಾನದ ಗುನುಗು ಕೇಳಿಸಿದಂತೆ, ಕಂಡಂತೆ ಅನುಭವವಾಗುವುದು. ಯಾವನೋ ಒಬ್ಬ ಧೈರ್ಯ ತಂದುಕೊಂಡು ಒಂದು ದಿನ ರಾತ್ರಿ ಒಂದು ಗಂಟೆಯ ಸಮಯದಲ್ಲಿ ಆ ಮಹಲಿನ ಬಳಿಗೆ ಹೋದನಂತೆ. ಭೂತದಂಥ ಕರಿಯ ನಾಯಿ ಅಟ್ಟಿಸಿಕೊಂಡು ಬಂದಂತಾಗಿ ಅವನು ಹಿಂದಿರುಗಿ ನೋಡದೆ ಬಿದ್ದಾಬೀಳಾ ಓಡಿ ಹೋದನಂತೆ. ಜನಗಳು ಇಂಥ ಹಲವು ಕಥೆಗಳನ್ನು ಹೇಳುತ್ತಾರೆ.

ಪರಿಚಿತರಾದ ಒಬ್ಬಿಬ್ಬರು ಮೋತಿರಾಮುನನ್ನು ಕುರಿತು, 'ನೀನು ಯಾಕೆ ಈ ಮನೆಯನ್ನು ಕಾಯುತ್ತ ಇನ್ನೂ ಇಲ್ಲಿಯೇ ಇದ್ದೀಯೆ ? ಈ ಮಹಲು ಯಾರದು ? ಯಾತಕ್ಕೆ ಇಲ್ಲಿ ಯಾರೂ ವಾಸಿಸುತ್ತಿಲ್ಲ ?' ಎಂದು ಕೇಳಿದರೆ ದೂರದಲ್ಲಿ ಏನೋ ಕನಸು ಕಾಣುವವನಂತೆ ಒಂದು ನಿಮಿಷ ಮೌನವಾಗಿ ನಿಂತು 'ಆ ಕಥೆಯನ್ನು ಏನು ಕೇಳೀಯೆ. ಏನು ವೈಭವ, ಏನು ಸಂಪತ್ತು, ಏನು ಗಾನ, ಏನು ನಾಚ್, ಎಂಥ ಸುಂದರಿ !' ಎಂದು ಉದ್ಗಾರ ತೆಗೆಯುತ್ತಿದ್ದನಂತೆ. 'ಈಗ ಅವನ್ನೆಲ್ಲ ಹೇಳಿದರೆ ಯಾರು ನಂಬುತ್ತಾರೆ ? ಕಾಲ ಬದಲಾಗಿ ಹೋಯಿತು!' ಎಂದು ನಿಟ್ಟುಸಿರು ಬಿಡುತ್ತ ಹೊರಟುಹೋಗುತ್ತಿದ್ದನಂತೆ. ಒಂದು ಸಲ ಒಬ್ಬ ಧೈರ್ಯ ಮಾಡಿ 'ನೀನು ಯಾಕೆ ಈ ಪಾಳು ಮನೆಯಲ್ಲೀ ಇದ್ದು ಸಾಯುತ್ತೀಯೆ ? ಮಕ್ಕಳ ಜತೆ ಸುಖವಾಗಿರಬಾರದೆ ?' ಎಂದು ಕೇಳಿದ್ದಕ್ಕೆ 'ಏನು ಮಾಡಲಿ, ನಮಕ್‌ಹರಾಮ್ ಆಗಲೆ ? ಈ ಮಹಲನ್ನು ನಮ್ಮ ಮಹಾರಾಜ್ ಯಾರಿಗೆ ಒಪ್ಪಿಸಬೇಕೆಂದು ಅಪ್ಪಣೆ ಮಾಡಿಹೋಗಿದ್ದಾರೋ ಆ ಕೆಲಸ ಮಾಡಿದ ಮೇಲೆ ಈ ಮುದುಕನಿಗೆ ಮುಕ್ತಿ' ಎಂದನಂತೆ.

ಇದೆಲ್ಲ ಕಳೆದು ಹತ್ತಿಪ್ಪತ್ತು ವರ್ಷಗಳಾಗಿ ಹೋಗಿದೆ. ಆ ಮಹಲಿನಲ್ಲಿ ಜನ ಈಗ ವಾಸಿಸುತ್ತಿದ್ದಾರೆ. ಮಹಲಿನ ಸುತ್ತ ಹೂವಿನ ತೋಟ ಕಂಗೊಳಿಸುತ್ತಿದೆ. ಮಕ್ಕಳು ಕಾಂಪೌಂಡಿನಲ್ಲಿ ಆಟವಾಡುತ್ತಾರೆ. ಅಲ್ಲೇ ನಿರ್ಮಿಸಿರುವ ಝೂಲಾದಲ್ಲಿ ಉಯ್ಯಾಲೆ ಆಡುತ್ತಾರೆ. ಜನರ ಕಿಲಕಿಲಮಾತು, ನಗು ಎಲ್ಲ ಕೇಳಿಸುತ್ತದೆ. ಈ ಮಹಲಿನ ಒಳಗಡೆಯಲ್ಲಿ ಅತ್ತೆಯರ ಮಾತು, ಸೊಸೆಯರ ನಮ್ರ ಉತ್ತರ, ಗಂಡ ಹೆಂಡತಿಯರ ಸಲ್ಲಾಪ, ಸಡಗರ ಯಾವುದಕ್ಕೂ ಕೊರತೆಯಿಲ್ಲ. ಮಹಲಿನ ಕಿಟಕಿಗಳು ತೆರೆದಿವೆ, ವಿಶಾಲವಾದ ಬಾಗಿಲುಗಳ ಮೂಲಕ ಜನರು ಓಡಾಡುತ್ತಾರೆ. ಮನೆಯ ಸುತ್ತ ತೋಟದ ಕೆಲಸದಲ್ಲಿ ಮಗ್ನನಾದ ಮಾಲಿ ಕಾಣಿಸುತ್ತಾನೆ. ಈ ಬದಲಾವಣೆ ಹೇಗಾಯಿತು ಎಂಬ ಬಗ್ಗೆ ನನ್ನಲ್ಲಿ ಕುತೂಹಲ ಮೂಡಿತು. ಮಾಲಿಯನ್ನು ವಿಚಾರಿಸಿದಾಗ ಈಗ ಬಂದಿರುವವರ ಅಜ್ಜನೋ ಮುತ್ತಜ್ಜನೋ ಒಬ್ಬ ದೊಡ್ಡ ಜಹಗೀರುದಾರರಾಗಿದ್ದರೆಂದೂ ಈ ಮಹಲಿನಲ್ಲಿ ಅವರೇ ಇದ್ದವರೆಂದೂ ಉಳಿದ ವಿಷಯ ತನಗೆ ತಿಳಿಯದೆಂದೂ ಅವನಿಂದ ತಿಳಿದುಬಂದಿತು. ಜಹಗೀರುದಾರರ ಮಕ್ಕಳು ಯಾರೂ ಈ ಮನೆಗೆ ಬರಲು ಬಯಸಲಿಲ್ಲ. ಆದರೆ ಈಗ ಈ ಮನೆಯಲ್ಲಿರುವವರು ಸೈನ್ಯದಲ್ಲಿ ದೊಡ್ಡ ಪದವಿಯಲ್ಲಿದ್ದು ಈಗ ನಿವೃತ್ತರಾದ ಮೇಲೆ ತಮ್ಮ ಪೂರ್ವಜರ ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳೊಡನೆ ಬಂದು ವಾಸಿಸುತ್ತಿದ್ದಾರೆಂದು ತಿಳಿಯಿತು.

ಇಲ್ಲಿಯ ರಹಸ್ಯವನ್ನು ಹೇಗೆ ತಿಳಿದುಕೊಳ್ಳಬಹುದು ಎಂದು ಆಲೋಚಿಸತೊಡಗಿದೆ. ಬೇರೆ ಯಾರಿಂದಲೂ ಪೂರ್ಣ ಮಾಹಿತಿ ದೊರೆಯುವುದಿಲ್ಲವೆಂಬುದು ಖಚಿತವಾಯಿತು. ಈ ಮನೆಯಲ್ಲಿರುವ ಹಿರಿಯನಾದ ನಿವೃತ್ತ ಸೈನ್ಯಾಧಿಕಾರಿಯನ್ನೇ ವಿಚಾರಿಸಬೇಕೆಂದು ತೀರ್ಮಾನಿಸಿದೆ. ಪೂರ್ಣವಾಗಿ ಅಪರಿಚಿತನಾದ ಆತನನ್ನು ನೇರವಾಗಿ ಹೋಗಿ ಕೇಳುವುದರಿಂದ ಪ್ರಯೋಜನವಿಲ್ಲವೆಂದೂಹಿಸಿದೆ. ನಿವೃತ್ತ ಸೈನ್ಯಾಧಿಕಾರಿಯ ಚಲನವಲನಗಳನ್ನು ನಿರೀಕ್ಷಿಸಿದಾಗ ಆತ ಬೆಳಗ್ಗೆ ಆರು ಗಂಟೆಗೆ ಮೊದಲೇ ವಾಯುಸೇವನೆಗಾಗಿ ಹೊರಡುವುದನ್ನು ಕಂಡೆ. ಅವನ ಸಮಯಕ್ಕೆ ನಾನೂ ವಾಕಿಂಗ್ ಹೋಗಲಾರಂಭಿಸಿದೆ. ದಿನವೂ ಆತನನ್ನು ಸಂಧಿಸಲಾರಂಭಿಸಿದೆ. ಹೀಗೆಯೇ ಕೆಲವು ಸಮಯ ಕಳೆಯಿತು. ದಿನವೂ ಆತನು ನನ್ನನ್ನು ನೋಡುವುದು, ನಾನು ಆತನನ್ನು ನೋಡುವುದು ನಡೆಯಿತು. ಪರಿಚಯದ ದೃಷ್ಟಿಸಂಗಮವಾಗತೊಡಗಿತು. ಕ್ರಮೇಣ ಮುಗುಳುನಗೆಯ ಸ್ವಾಗತ ಆರಂಭವಾದುದು ನಮಸ್ಕಾರಕ್ಕೆ ಇಳಿಯಿತು. ಇದೇ ರೀತಿ ನಾಲ್ಕಾರು ತಿಂಗಳು ಅಭ್ಯಾಸವಾದ ಮೇಲೆ ಆತ ನನ್ನನ್ನು ಜತೆಗೆ ವಾಕಿಂಗ್ ಬರುವಂತೆ ಕರೆದ. ಪ್ರತಿದಿನ ಬೆಳಗ್ಗೆ ನಾನು ಆತನನ್ನು ಆ ಮಹಲಿನ ಬಾಗಿಲಿನಲ್ಲಿ ಕೂಡಿಕೊಂಡ. ಮುಂದೆ ಜತೆ ಜತೆಯಾಗಿ ವಾಕಿಂಗ್ ಹೋಗಲಾರಂಭಿಸಿದೆ. ದಿನಗಳು ಕಳೆದಂತೆ ಮಾತು ಆತ್ಮೀಯತೆಯ ಮಟ್ಟಕ್ಕೆ ಏರಿತು. ಆತ ನನ್ನನ್ನು ಬಂಧುವಿನಂತೆ ಕಾಣತೊಡಗಿದ.

ನಾನೂ ಆತನನ್ನು ಪರಮಮಿತ್ರನಂತೆ ಭಾವಿಸಿದೆ. ಮೊದಮೊದಲು ಹವಾಮಾನ, ಪ್ರಕೃತಿ ಸೌಂದರ್ಯ, ಸಾಹಿತ್ಯ ಲೋಕ, ರಾಜಕೀಯ ವಿಷಯುಗಳ ಬಗೆಗೆ ನಮ್ಮ ಮಾತುಕಥೆ ಸೀಮಿತವಾಗಿತ್ತು. ಮುಂದೆ ನಮ್ಮಿಬ್ಬರ ವೈಯಕ್ತಿಕ ವಿಚಾರಗಳೂ ನಮ್ಮ ಮಾತಿನ ವಿಷಯುಗಳಾಗಲಾರಂಭಿಸಿದವು. ನಾನೂ ನನ್ನ ಸ್ವಂತ ವಿಚಾರಗಳನ್ನೂ ಕುಟುಂಬದ ವಿಚಾರಗಳನ್ನೂ ಹೇಳುತ್ತಿದ್ದೆ. ಆತನೂ ತನ್ನ ಮಕ್ಕಳ ಮೊಮ್ಮಕ್ಕಳ ಸ್ವಭಾವಗಳನ್ನು ಹೇಳಲಾರಂಭಿಸಿದ. ' ಆ ಹಿರಿಯ ಮಗ ಇದಾನಲ್ಲ, ನಮ್ಮ ತಾತನ ಸ್ವಭಾವದವನೇ. ಅದೇ ಜರ್ಬು, ಅದೇ ಠೀವಿ, ಅದೇ ಧಿಮಾಕು, ಅದೇ ದಂದರ ಹಾಳಿತನ ' ಎಂದರು. ನನಗೆ ಎಳೆ ಸಿಕ್ಕಂತಾಯಿತು. ವಿಷಯ ಮುಂದುವರೆಸಲು ' ನಿಮ್ಮ ತಾತನವರು ಬಹಳ ದೊಡ್ಡ ಜಮೀನುದಾರರೆಂದು ಕೇಳಿದ್ದೇನೆ ' ಎಂದೆ. ' ಅಲ್ಲದೇ ಏನು, ಭಾರಿ ಜಮೀನುದಾರರೇ ಅವರು. ಅವರ ಆಸ್ತಿ ಇವತ್ತು ಇದ್ದಿದ್ದರೆ ನಾವು ಕರೋಡಪತಿಗಳಾಗಿರುತ್ತಿದ್ದೆವು. ಆದರೆ ಇದೆಯಲ್ಲ ಅವರ ರಸಿಕತೆ, ಅವರ ದಿವಾನಿಕೆಯ ಮೋಜು. ಅದರಲ್ಲಿ ಎಲ್ಲವನ್ನೂ ಕಳೆದು ಹಾಕಿದರು. ಇದೊಂದು ಮನೆ ಉಳಿದದ್ದು ವಿಶೇಷ ' ಎಂದರು. ಒಂದೇ ದಿವಸಕ್ಕೆ ಕೆಣಕ ಬಾರದು, ನಿಧಾನವಾಗಿ ಎಲ್ಲವೂ ಹೊರಬರುತ್ತದೆ ಎಂದು ಅಂದಿಗೆ ಸುಮ್ಮನಾದೆ.

ಇನ್ನೊಂದು ದಿವಸ, ' ನಿಮ್ಮ ತಾತನವರು ಭಾರೀ ರಸಿಕರಾಗಿದ್ದರು. ಅವರ ಮನೆಯಲ್ಲಿ ಸಂಗೀತ, ನಾಟ್ಯ ಗೋಷ್ಠಿಗಳು ನಡೆಯುತ್ತಿದ್ದವು ಎಂದು ಕೇಳಿದ್ದೇನೆ ' ಎಂದೆ. ' ಅದೇನು ಕೇಳುತ್ತೀರಾ, ಈ ಮನೆಯ ದಿವಾನಖಾನೆ ಇದೆಯಲ್ಲ, ಅದನ್ನು ನೋಡುವಿರಂತೆ, ತೋರಿಸುತ್ತೇನೆ. ಅಲ್ಲಿಯೇ ಸಂಗೀತಸಭೆಗಳು, ನಾಟ್ಯ ಗೋಷ್ಠಿಗಳು ನಡೆಯುತ್ತಿದ್ದದ್ದು, ಅರಮನೆಯ ದರ್ಬಾರಿನಂತೆ ಇರುತ್ತಿತ್ತು 'ಎಂದು ಹೇಳಿದರು. ವಾಕಿಂಗ್ ಮುಗಿದ ಮೇಲೆ, 'ಬನ್ನಿ ಮನೆ ಒಳಕ್ಕೆ, ಚಾ ಕುಡಿದು ಹೋಗುವಿರಂತೆ, ನಮ್ಮ ತಾತನ ದರ್ಬಾರದ ಒಂದು ಇಣುಕು ನೋಟ ನಿಮಗೆ ದೊರಕುತ್ತದೆ' ಎಂದರು. ' ಸರಿ 'ಎಂದು ಅವರೊಡನೆ ಮನೆಯ ಒಳಹೊಕ್ಕೆ. ಮೊಮ್ಮಕ್ಕಳು, 'ತಾತ ಬಂದರು, ತಾತ ಬಂದರು' ಎಂದು ಕೂಗುತ್ತ ಹತ್ತಿರಕ್ಕೆ ಓಡಿ ಬರಲಾರಂಭಿಸಿದರು. ನನ್ನನ್ನು ನೋಡಿ ನಾಚಿ ಹಿಂದಕ್ಕೆ ನಿಂತರು. ತಾತನ ಜತೆ ಅಪರಿಚಿತರನ್ನು ಕಂಡ ಅಭ್ಯಾಸವಿಲ್ಲದುದರಿಂದ ಅವರು ಹಾಗೆ ನಿಂತರು. ಅಷ್ಟು ಹೊತ್ತಿಗೆ ಸೊಸೆ ತಲೆಯ ಮೇಲೆ ಸೆರಗು ಎಳೆದುಕೊಳ್ಳುತ್ತ ಬಂದಳು. ನನ್ನನ್ನು ಕಂಡು ಹಾಗೇ ಹಿಂದಕ್ಕೆ ನಿಂತಳು. 'ಬಹೂ, ಇಬ್ಬರಿಗೆ ಚಾ ತೆಗೆದುಕೊಂಡು ಬಾ. ಇವರು ನನ್ನ ಸ್ನೇಹಿತರು, ವಾಕಿಂಗ್ ದೋಸ್ತ್' ಎಂದು ಹೇಳಿದರು. 'ದಿವಾನ ಖಾನೆಗೇ ಚಾ ಕಳಿಸಿಬಿಡು' ಎಂದರು. ದಿವಾನಖಾನೆಗೆ ಹೋದೆವು. ಅದರ ವಿಸ್ತಾರ, ಅಂದಚಂದ ನೋಡಿದಾಗ ಹಿಂದೆ ಅದು ವೈಭವದಿಂದ ಮೆರೆದ ಜಾಗ ಎನ್ನಿಸಿತು. ಹಳೆಯಕಾಲದ ಗುಳೋಪುಗಳು, ಕಂದೀಲುಗಳು ಸೂರಿನಿಂದ ಇಳಿಬಿದ್ದಿದ್ದವು. ನಾಲ್ಕೂ ಮೂಲೆಗಳಲ್ಲಿ ಬಣ್ಣ ಬಣ್ಣದ ರಸಬುರುಡೆಗಳನ್ನು ನೇತುಬಿಟ್ಟಿತ್ತು.

ಹಜಾರದಲ್ಲಿ ಮೇಲುಗಡೆ ಮೂರು ಕಡೆ ಕೊಂಡಿಗಳಿದ್ದು ಎರಡು ಖಾಲಿ ಇದ್ದುವು. ಒಂದರಲ್ಲಿ ಮಾತ್ರ ಹಳೆಯ ಕಾಲದ ಚಾಂದಲೇರಿ ಇಳಬಿದ್ದಿತ್ತು. 'ನೋಡಿ, ಇಲ್ಲಿ ಈಗ ಹಿಂದಿನ ಯಾವ ಅಲಂಕಾರವೂ ಇಲ್ಲ. ನಮ್ಮ ತಂದೆ ಅದನ್ನೆಲ್ಲ ಕಂಡಿದ್ದರಂತೆ. ಆಗಾಗ್ಗೆ ನನಗೆ ಇಲ್ಲಿಯ ಗತ ವೈಭವದ ಕಥೆಗಳನ್ನು ಹೇಳುತ್ತಿದ್ದರು. ಈ ಖಾಲಿ ಕೊಂಡಿಗಳಿವೆಯಲ್ಲ ಅದಕ್ಕೆ ಎರಡು ಸುಂದರವಾದ ಚಾಂದಲೇರಿಗಳನ್ನು ನೇತುಹಾಕಿದ್ದರಂತೆ. ಅವು ಪ್ಯಾರಿಸ್ಸಿನಿಂದ ತರಿಸಿದವುಗಳಾಗಿದ್ದು ರಾತ್ರಿಯ ಹೊತ್ತು ದೀಪಗಳನ್ನು ಹಚ್ಚಿದಾಗ ವಿವಿಧ ಆಕಾರದ ಗಾಜುಗಳಲ್ಲಿ ವಿವಿಧ ಪ್ರಭೆಗಳು ಪ್ರತಿಫಲಿಸುತ್ತಿದ್ದುವಂತೆ. ನೆಲಕ್ಕೆ ಪರ್ಷಿಯಾ ಕಾರ್ಪೆಟ್ಟುಗಳನ್ನು ಹಾಸಲಾಗಿತ್ತು. ಗೋಡೆಬದಿಗೆ ಕಿನಕಾಪಿನ ಲೋಡುಗಳನ್ನೂ ದಿವಾನುಗಳನ್ನೂ ಇಡಲಾಗಿತ್ತು. ಅಲ್ಲಿ ನೆಲದ ಮೇಲೆ ಚಕ್ರದ ರೂಪದಲ್ಲಿ ಅಲಂಕಾರವಿದೆಯಲ್ಲ, ಅದೇ ನಾಚ್ ನಡೆಯುತ್ತಿದ್ದ ಸ್ಥಳ. ಆ ಬಲಗಡೆಯಲ್ಲಿ ವಾದ್ಯದವರು ಎಂದರೆ ಸಾರಂಗಿಯವರು, ತಬಲದವರು ಕೂರುತ್ತಿದ್ದರು. ಅಂದಿನ ಕಲ್ಕತ್ತದ ಪ್ರತಿಷ್ಠಿತ ನರ್ತಕಿಯರು ಇಲ್ಲಿ ನರ್ತಿಸಲು ಸ್ಪರ್ಧಿಸುತ್ತಿದ್ದರಂತೆ. ಅಷ್ಟು ದೊಡ್ಡ ಹೆಸರಿತ್ತು, ಸಮ್ಮಾನವಿತ್ತು ಇಲ್ಲಿ ನರ್ತಿಸಿದವರಿಗೆ. ಸಂಗೀತ ಕಛೇರಿಗಳಂತೂ ಬೇಕಾದಷ್ಟು ನಡೆಯುತ್ತಿದ್ದುವಂತೆ. ನೋಡಿ, ಇದೊಂದು ದಿವಾನು ಇನ್ನೂ ಇದೆ. ಅದರ ಮೇಲೆ ಯಾರೂ ಕೂರುವುದಿಲ್ಲ. ಅದಕ್ಕೆ ಯಾವಾಗಲೂ ಗೌಸು ಹಾಕಿರುತ್ತೇವೆ. ಈ ಆಸನಗಳನ್ನು ಈಚೆಗೆ ನಮ್ಮ ಉಪಯೋಗಕ್ಕೆ ಹಾಕಿಕೊಂಡಿದ್ದೇವೆ. ಇಲ್ಲಿಯ ಅನೇಕ ಅಲಂಕಾರ ವಸ್ತುಗಳು, ತೈಲಚಿತ್ರಗಳು, ಚಾಂದಲೇರಿಗಳು, ಕಾರ್ಪೆಟ್‌ಗಳು ಎಲ್ಲ ಕೊನೆಯಲ್ಲಿ ಸಾಲಕ್ಕೆ ಹರಾಜಾಗಿ ಹೋದುವಂತೆ, ಇಲ್ಲವೆ ನಂಬಿಸಿದವರು ಹೊತ್ತುಕೊಂಡು ಹೋದರಂತೆ. ಇಲ್ಲಿ ಯಾರದೋ ಒಂದಿಬ್ಬರ ಮನೆಯಲ್ಲಿ ಈಗಲೂ ಒಂದೆರಡು ವಸ್ತುಗಳು ಇವೆ ಎಂದು ಹೇಳುತ್ತಾರೆ. ನಾವು ಹುಡುಕಿಕೊಂಡು ಹೋಗಿ ನೋಡಿಲ್ಲ, ನೋಡುವ ಪ್ರಯತ್ನವನ್ನೂ ಮಾಡಿಲ್ಲ. ನಮ್ಮ ತಂದೆ ಒಂದು ಸಲ ಹುಡುಕಿಕೊಂಡು ಹೋಗಿದ್ದಾಗ ಒಬ್ಬರು, 'ಓಹೋ! ಆ ಸೂಳೆಯರ . . . . ಮಗನೋ ನೀನು, ಹೋಗಪ್ಪ ಹೋಗು. ಆ ಹಿಂದಿನ ಗೊಡವೆ ನಿನಗೆ ಬೇಡ' ಎಂದು ಮುಖಕ್ಕೆ ಹೊಡೆದಂತೆ ಅಂದುಬಿಟ್ಟರಂತೆ. ಆಗ ನಮ್ಮ ತಂದೆ ತಲೆತಗ್ಗಿಸಿ ನಾಚಿಕೊಂಡು ಬಂದುಬಿಟ್ಟರಂತೆ. ಈ ವಿಷಯವನ್ನು ಒಂದು ದಿವಸ ನಮ್ಮ ಅಪ್ಪ ಹೇಳುತ್ತ, 'ತಪ್ಪಿಯಾದರೂ ಅದಾವುದನ್ನೂ ಹುಡುಕಿಕೊಂಡು ಹೋಗಬೇಡಿ' ಎಂದಿದ್ದರು. ನಾವು ಕೂಡ ಆ ಬಗ್ಗೆ ಇದುವರೆಗೆ ಕುತೂಹಲವಿದ್ದರೂ ಯಾವ ಪ್ರಯತ್ನಕ್ಕೂ ಕೈಹಾಕಿಲ್ಲ' ಎಂದರು.

ಅಷ್ಟು ಹೊತ್ತಿಗೆ ಚಾ ಬಂದಿತು. 'ನೋಡಿ. ಇವಳೇ ನನ್ನ ಹಿರಿಯ ಸೊಸೆ' ಎಂದು ಪರಿಚಯಿಸಿದರು. ಆಕೆ ಟೀ ಬಟ್ಟಲುಗಳನ್ನು ಟೀಪಾಯಿಯ ಮೇಲೆ ಇಟ್ಟು ಮುಗುಳುನಗುತ್ತ ಒಳಗೆ ಹೋದಳು. ಚಾ ಕುಡಿದು ಮೇಲೇಳುತ್ತಿದ್ದಾಗ ಗೋಡೆಯ

ಮೇಲೆ ಒಂದು ಚಿತ್ರ ಕಣ್ಣಿಗೆ ಬಿದ್ದಿತು. ಸೊಗಸಾದ ತೈಲಚಿತ್ರ ಅದು. ಸುಂದರಿಯೊಬ್ಬಳ ನರ್ತನದ ಭಂಗಿ. ಹಂಸ ಪಕ್ಷಿಗಳು ಕೊಳದಲ್ಲಿ ಆಟವಾಡುತ್ತಿವೆ. ಈ ಕಡೆ ನವಿಲು ಗರಿಗೆದರಿ ನಾಟ್ಯವಾಡುತ್ತಿದೆ. ಹೂಬಿಟ್ಟ ಮರದ ಕೊಂಬೆಯೊಂದು ನರ್ತಕಿಯ ತಲೆಯ ಮೇಲುಗಡೆ ಬಾಗಿ ನಿಂತು ತನ್ನಲ್ಲಿಯ ಶುದ್ಧ ಸ್ಫಟಿಕದಂಥ ಹೂವನ್ನು ಎರಚುವಂತೆ ತೋರುತ್ತಿದೆ. ನವಿಲಿನ ಜಾಗರದ ನೋಡಿಯನ್ನು ತದೇಕ ದೃಷ್ಟಿಯಿಂದ ವೀಕ್ಷಿಸುತ್ತ ಆ ಭಾವದಲ್ಲಿ ನರ್ತಕಿ ಮಗ್ನಳಾಗಿ ಹೋಗಿದ್ದಾಳೆ. ಆ ಚಿತ್ರವನ್ನು ನೋಡುತ್ತ ಮೈಮರೆತು ನಿಂತ ನನ್ನ ಹತ್ತಿರ ನನ್ನ ಮಿತ್ರರು ಬಂದು 'ಏನು ? ಚಿತ್ರ ಸುಂದರಿಯ ಸೌಂದರ್ಯದಲ್ಲಿ ಮುಳುಗಿಹೋಗಿದ್ದೀರಿ' ಎನ್ನುತ್ತ ಮೃದುವಾಗಿ ನನ್ನ ಭುಜದ ಮೇಲೆ ಕೈಯಿಟ್ಟರು. 'ಏನೂ ಇಲ್ಲ, ಈ ಸೌಂದರ್ಯರಾಶಿಯನ್ನು ಯಾರು ನೋಡಿದರೂ ಮೈಮರೆಯುತ್ತಾರೆ. ಈ ಚಿತ್ರ ಕಲ್ಪನೆಯದೋ, ಇಲ್ಲ ನಿಜವಾಗಿ ಇಂಥ ಸುಂದರಿ ಇದ್ದಳೋ ಎಂದು ಯೋಚನೆಯಲ್ಲಿ ಮುಳುಗಿದ್ದೆ' ಎಂದೆ. 'ಹೇಳಿದರೆ ನೀವು ಸುಳ್ಳು ಎನ್ನಬಾರದು. ನಿಜವಾಗಿ ಬದುಕಿದ್ದ ಲಾವಣ್ಯವತಿ ಇವಳು. ಅವಳ ಸೌಂದರ್ಯವನ್ನು ಸವಿಯಲು, ಅವಳ ನಾಟ್ಯವನ್ನು ನೋಡಲು ಅತ್ಯಂತ ಪ್ರತಿಷ್ಠಿತರು, ಭಾರಿ ಸಾಹುಕಾರರು, ರಾಜರು ಹಾಗೂ ಜಮೀನುದಾರರು ತಹತಹಪಡುತ್ತಿದ್ದರಂತೆ. ಅವಳು ಮಾತ್ರ ಸಾಮಾನ್ಯವಾಗಿ ನರ್ತನ ಕಚೇರಿಗೆ ಒಪ್ಪುತ್ತಿರಲಿಲ್ಲವಂತೆ, ಯಾರ ಮುಂದೂ ನಾಟ್ಯವಾಡುತ್ತಿರಲಿಲ್ಲವಂತೆ. ಆದರೆ ನಮ್ಮ ತಾತನ ಬಗ್ಗೆ ಅವಳಿಗೆ ತುಂಬ ಗೌರವ, ಪ್ರೀತಿ, ಆತ್ಮೀಯತೆಗಳು ಇದ್ದುವಂತೆ. ಇದಕ್ಕೆ ಒಂದು ಬಲವಾದ ಕಾರಣವಿತ್ತು ಎಂದು ನಮ್ಮಪ್ಪ ಹೇಳಿದ್ದರು.

'ಅವಳು ಇನ್ನೂ ಷೋಡಶಿಯಾಗಿದ್ದಾಗ ಅವಳೂ ಅವಳ ತಾಯಿಯೂ ಒಂದು ದಿನ ಕಲ್ಕತ್ತದ ಬಜಾರಿಗೆ ಬಂದು ಅಲ್ಲಿಂದ ಮನೆಗೆ ಮೇನೆಯಲ್ಲಿ ಹಿಂದಿರುಗುತ್ತಿದ್ದರಂತೆ. ಒಬ್ಬ ಪಾಳೆಯಗಾರನ ಕಣ್ಣು ಈ ಷೋಡಶಿಯ ಮೇಲೆ ಬಿದ್ದಿತ್ತು. ಅವಳನ್ನು ತನಗೆ ಒಪ್ಪಿಸಬೇಕೆಂದು ಮೊದಲು ಅವಳ ತಾಯಿಯನ್ನು ನಯವಿನಯಗಳಿಂದ ಕೇಳಿಕೊಂಡಿದ್ದ. ಅದು ಸಫಲವಾಗದಾಗ ಹೆದರಿಸಿ ನೋಡಿದ. ಪಾಳೆಯಗಾರನ ದುಷ್ಟತನವನ್ನು ಅರಿತಿದ್ದ ತಾಯಿ ಅದಕ್ಕೆ ಒಪ್ಪಿರಲಿಲ್ಲ. ಅವನ ಬೆದರಿಕೆಗೂ ಜಗ್ಗಿರಲಿಲ್ಲ. ಇವರಿಗೆ ಬುದ್ಧಿ ಕಲಿಸಿ ಷೋಡಶಿಯನ್ನು ಹಾರಿಸಿಕೊಂಡು ಹೋಗಬೇಕೆಂದು ಸಂಚು ಹೂಡಿ ಸಮಯ ಕಾಯುತ್ತಿದ್ದ ಆ ಪಾಳೆಯಗಾರ. ಈ ದಿನ ಅವರು ಬಜಾರಿಗೆ ಹೋದುದನ್ನು ತಿಳಿದು ದಾರಿಯಲ್ಲಿ ಮರೆಯಾಗಿ ಕುಳಿತಿದ್ದು ಮೇನೆಯಿಂದ ಷೋಡಶಿಯನ್ನು ಹಾರಿಸಿಕೊಂಡು ಬರಬೇಕೆಂದು ಆಳುಗಳನ್ನು ಕಳುಹಿಸಿದ. ಆಳುಗಳು ದಾರಿಯಲ್ಲಿ ಮರೆಯಾಗಿ ಮೇನೆ ಬರುವುದನ್ನು ಕಾಯುತ್ತ ಕುಳಿತಿದ್ದರು. ಮೇನೆಯು ಹತ್ತಿರ ಬರುತ್ತಿದ್ದಂತೆ ಆಳುಗಳು ಮರೆಯಿಂದ ಹೊರಗೆ ಬಂದು ಪಾಳೆಯಗಾರನ ಮನೆಯ ಕಡೆಗೆ ಮೇನೆಯನ್ನು ತಿರುಗಿಸುವಂತೆ ಬೆದರಿಸಿದರು. ಮೇನೆಯನ್ನು ಹೊತ್ತ ಬೋಯಿಗಳು ಗಾಬರಿಯಿಂದ ಮೇನೆಯನ್ನು ಕೆಳಗೆ ಇಟ್ಟು ದಿಕ್ಕಾಪಾಲಾಗಿ ಓಡಿ

ಬಿಟ್ಟರು. ಇನ್ನೇನು ಪಾಳೆಯಗಾರನ ಕಡೆಯ ಆಳುಗಳು ಮೇನೆಯನ್ನು ಹೊತ್ತು ಕೊಂಡು ಹೊರಡಬೇಕು. ಅಷ್ಟು ಹೊತ್ತಿಗೆ ಆ ಕಡೆ ಬರುತ್ತಿದ್ದ ಜಮೀನುದಾರರು ಕೂಗಿಕೊಂಡು ಓಡಿಹೋಗುತ್ತಿರುವ ಬೋಯಿಗಳನ್ನೂ, ದೊಣ್ಣೆ ಮೊದಲಾದುವು ಗಳನ್ನು ಹಿಡಿದ ದಾಂಡಿಗ ಆಳುಗಳನ್ನೂ, ಅವರಲ್ಲಿ ಕೆಲವರು ಮೇನೆಯನ್ನು ಎತ್ತುತ್ತಿರುವುದನ್ನೂ ಕಂಡರು. ಏನೋ ಅನಾಹುತ ಆಗುತ್ತಿರಬಹುದೆಂದು ಊಹಿಸಿ ಮೇನೆಯ ಹತ್ತಿರಕ್ಕೆ ಬಂದರು. ಒಳಗಡೆ ಇಬ್ಬರು ಸುಂದರಿಯರು ಭಯದಿಂದ ನಡುಗುತ್ತಿರುವುದು ಅವರಿಗೆ ಗೊತ್ತಾಯಿತು. ಆಗ ಅಲ್ಲಿದ್ದ ಆಳುಗಳನ್ನು ಕುರಿತು, 'ನೀವು ಯಾರು? ಏತಕ್ಕೆ ಮೇನೆಯನ್ನು ಎತ್ತುತ್ತಿದ್ದೀರಿ? ಆ ಬೋಯಿಗಳು ಏತಕ್ಕೆ ಕಿರಿಚಿಕೊಂಡು ಓಡಿಹೋದರು?' ಎಂದು ಕೇಳಿದರು. 'ನಮ್ಮ ಪಾಳೆಯಗಾರರ ಆಜ್ಞೆಯಾಗಿದೆ. ಅವರ ಮನೆಗೆ ಮೇನೆಯನ್ನು ಒಯ್ಯುತ್ತಿದ್ದೇವೆ' ಎಂದು ದರ್ಪದಿಂದ ಆಳುಗಳು ನುಡಿದರು. ವಿಷಯ ಏನಾಗಿರಬಹುದೆಂದು ನಮ್ಮ ತಾತನಿಗೆ ಹೊಳೆದುಹೋಯಿತು. ಅವರು ಆಳುಗಳನ್ನು ಗದರಿಸುತ್ತ, 'ಮೇನೆಯನ್ನು ಅಲ್ಲಿ ಬಿಟ್ಟು ಸುಮ್ಮನೆ ಹೊರಟುಹೋಗಿ. ನಾನು ಯಾರು ಗೊತ್ತೋ? ಒಂದು ಹೆಜ್ಜೆ ಮುಂದಿಟ್ಟರೆ ನಿಮ್ಮನ್ನು ಇಲ್ಲ ಎನ್ನಿಸಿ ಬಿಡುತ್ತೇನೆ' ಎಂದರು ತಮ್ಮ ಕೈಯಲ್ಲಿದ್ದ ಕೋಲನ್ನು ತಿರುಗಿಸುತ್ತ. ಆಳುಗಳು 'ಸುಮ್ಮನೆ ನಿಮ್ಮ ಪಾಡಿಗೆ ಹೋಗ್ರೀ, ನೀವು ಯಾರೋ, ನಮ್ಮನ್ನು ಹೆದರಿಸಲು ಬರುತ್ತೀರಾ? ಆ ದೊಣ್ಣೆ ಹಿಡಿದವರನ್ನು ನೋಡಿ. ಹೆಚ್ಚು ಮಾತಾಡಿದರೆ ಅವರು ನಿಮ್ಮ ಮೂಳೆ ಪುಡಿಪುಡಿಮಾಡಿಬಿಡುತ್ತಾರೆ' ಎಂದರು. ಅಷ್ಟು ಹೊತ್ತಿಗೆ 5-6 ಜನ ಲಟ್ಠ ಹಿಡಿದ ದಾಂಡಿಗರು ನಮ್ಮ ತಾತನ ಎದುರಿಗೆ ಬಂದು ನಿಂತರು. ಆಗ ನಮ್ಮ ತಾತ ತಮ್ಮ ಆಪ್ತ ಬಂಟನನ್ನು ಕರೆದು,'ನೋಡಿದೆಯಾ ಇವರ ಪೊಗರನ್ನು. ನನ್ನ ಮೂಳೆ ಪುಡಿಪುಡಿ ಮಾಡುತ್ತಾರಂತೆ' ಎಂದರು. ಆಗ ಅವರ ಆಪ್ತ ಬಂಟನು ಮುಂದೆ ಬಂದು ಮೀಸೆಯ ಮೇಲೆ ಕೈಯಾಡಿಸುತ್ತ, 'ಏಯ್, ಯಾರ್ರೋ ಅವರು ನಮ್ಮ ಜಮೀನುದಾರರಿಗೆ ಎದುರು ಮಾತಾಡುವವರು? ಸುಮ್ಮನೆ ಹೊರಟು ಹೋಗಿ' ಎಂದು ಜಬರಿಸಿದ. ದಾಂಡಿಗರು ನಮ್ಮ ತಾತನ ಬಂಟನ ಮೇಲೆ ಬಿದ್ದರು. ಬಂಟನು ದೊಣ್ಣೆ ತಿರುಗಿಸಲಾರಂಭಿಸಿದ. ದಾಂಡಿಗರ ಏಟೆಲ್ಲ ಬಂಟನ ದೊಣ್ಣೆಗೆ ತಗುಲುತ್ತಿತ್ತೇ ಹೊರತು ಬಂಟನ ಮೈಗೆ ಒಂದೂ ತಗುಲಲಿಲ್ಲ. ಜತೆಗೆ ದಾಂಡಿಗರ ಮೈಕೈ ಕಾಲು ತಲೆಗಳಿಗೆ ಚೆನ್ನಾಗಿ ಏಟು ಬಿತ್ತು. 'ಅಯ್ಯಯ್ಯಪ್ಪೋ' ಎಂದು ಕೂಗುತ್ತ ಒಬ್ಬೊಬ್ಬರಾಗಿ ದಾಂಡಿಗರು ಓಡಿಹೋದರು. ಈ ನಡುವಿನಲ್ಲಿ ಮೇನೆಯನ್ನು ಎತ್ತುತ್ತಿದ್ದ ಆಳುಗಳು ಮೇನೆಯನ್ನು ಹೊತ್ತುಕೊಂಡು ಓಡಲಾರಂಭಿಸಿದರು. ಆಗ ನಮ್ಮ ತಾತ ಓಡಿ ಹೋಗಿ ತಮ್ಮ ಕೈಯ ಕೋಲಿನಿಂದ ಆಳುಗಳ ಕಾಲಿಗೆ ಬಾರಿಸಿದರು. ಕೋಪಗೊಂಡ ಆಳುಗಳು ಮೇನೆಯನ್ನು ಕೆಳಕ್ಕೆ ಇಟ್ಟು ನಮ್ಮ ತಾತನವರ ಮೇಲೆ ಬಿದ್ದರು. ಇತ್ತ ನಮ್ಮ ತಾತ, ಅತ್ತ ಅವರ ಬಂಟ ಇಬ್ಬರೂ ಆಳುಗಳನ್ನು ಥಳಿಸಿದರು. ಏಟನ್ನು ತಾಳಲಾರದೆ ಅವರೆಲ್ಲ ಓಡಿಹೋದರು.

ಮೇನೆಯಲ್ಲಿದ್ದ ಷೋಡಶಿಯ ತಾಯಿ ಜಮೀನುದಾರರಿಗೆ ಕೃತಜ್ಞತೆ ಹೇಳಿ ದೂರದಲ್ಲಿ ನೋಡುತ್ತಿದ್ದ ತನ್ನ ಬೋಯಿಗಳನ್ನು ಕರೆದು ಮೇನಾ ಹೊರೆಸಿಕೊಂಡು ಹೋದಳು. ಷೋಡಶಿಯ ತಾಯಿ ನೀಲಿಮಾಳು ಕಲ್ಕತ್ತದ ಪ್ರಸಿದ್ಧ ನೃತ್ಯಕಲಾವಿದಳಾಗಿದ್ದಳು. ಷೋಡಶಿಯನ್ನು ಕೂಡ ಅವಳು ನಾಟ್ಯದಲ್ಲಿ ಪ್ರವೀಣಳನ್ನಾಗಿ ಮಾಡಿದ್ದಳು. ಷೋಡಶಿಯು ಅನುಪಮ ಸುಂದರಿಯೆಂದೂ, ಲಾವಣ್ಯವತಿಯೆಂದೂ, ಸ್ವರ್ಗಸುಂದರಿ ಎಂದೂ ಪ್ರಸಿದ್ಧಳಾಗಿದ್ದಳು. ಅವಳ ನರ್ತನ ನೋಡಲು, ಅವಳ ರೂಪವನ್ನು ಸವಿಯಲು, ಅವಳ ಸಾನ್ನಿಧ್ಯವನ್ನು ಪಡೆಯಲು ಕಾತುರರಾಗಿದ್ದರು. ಕಾತುರರೇನು ಹುಚ್ಚರೇ ಆಗಿದ್ದ ಮಹಾಮಹಾ ಶ್ರೀಮಂತರೂ, ಪಾಳೆಯಗಾರರೂ, ರಾಜರೂ, ಜಮೀನುದಾರರೂ ತಮ್ಮತಮ್ಮಲ್ಲೇ ಅಂತರಂಗದಲ್ಲಿ ಸ್ಪರ್ಧಿಸುತ್ತಿದ್ದರು. ಆದರೆ ನೀಲಿಮಾ ಮಾತ್ರ ಯಾವುದಕ್ಕೂ ಅವಕಾಶ ಕೊಡದೆ ತನ್ನ ಮಗಳನ್ನು ಕಣ್ಣಲ್ಲಿ ಕಣ್ಣಿಟ್ಟು ರಕ್ಷಿಸಿ ಪೋಷಿಸಿ ಬೆಳೆಸುತ್ತಿದ್ದಳು.

ನೀಲಿಮಾಳು ತನ್ನ ಬೋಯಿಗಳಿಂದ ನಮ್ಮ ತಾತನ ವಿವರಗಳನ್ನು ಸಂಗ್ರಹಿಸಿದಳು. ಅವರ ಕಲಾಪ್ರಿಯತೆಯನ್ನೂ, ರಸಿಕತೆಯನ್ನೂ, ವೈಭವವನ್ನೂ ಬೋಯಿಗಳು ಬಾಯಿ ತುಂಬ ಹೊಗಳಿದ್ದನ್ನು ಕೇಳಿ ಅವಳಿಗೆ ಕುತೂಹಲ ಉಂಟಾಯಿತು. ಕೃತಜ್ಞತೆಯನ್ನು ಸಲ್ಲಿಸುವ ನೆವದಲ್ಲಿ ಅವರನ್ನು ಭೇಟಿಯಾಗುವ ಆಸೆಯನ್ನು ವ್ಯಕ್ತಪಡಿಸಿ ಆಳುಗಳನ್ನು ಕಳುಹಿಸಿದಳು. ಒಂದು ದಿವಸ ಮಗಳೊಡನೆ ಮೇನಾದಲ್ಲಿ ನಮ್ಮ ತಾತನವರ ಮನೆಗೆ ಬಂದಿಳಿದಳು. ನಮ್ಮ ತಾತನ ಠೀವಿ, ಅವರ ವ್ಯಕ್ತಿತ್ವ, ಮಾತಿನ ಶೈಲಿ, ಅವರ ಹೃದಯ ವೈಶಾಲ್ಯತೆ, ಕಲಾಪ್ರಿಯತೆ ಮೊದಲಾದ ಗುಣಗಳನ್ನು ನೋಡಿ ಅವಳಿಗೆ ಸಂತೋಷವಾಯಿತು. ಷೋಡಶಿಗಂತೂ ಅವರನ್ನು ಕಂಡು ರೋಮಾಂಚವಾಯಿತು. ಅವರ ವ್ಯಕ್ತಿತ್ವಕ್ಕೆ ಷೋಡಶಿ ಪೂರ್ಣವಾಗಿ ಮಾರುಹೋದಳು. ಕುಶಲ ಪ್ರಶ್ನೆಗಳು, ಕೃತಜ್ಞತಾ ಸಮರ್ಪಣೆ, ಉಪಚಾರ ಮೊದಲಾದ ಪ್ರಾಸ್ತಾವಿಕ ಮಾತುಗಳು ನಡೆದನಂತರ ನಮ್ಮ ತಾತನವರು ಷೋಡಶಿಯ ನರ್ತನ ಪ್ರಾವೀಣ್ಯವನ್ನು ಕುರಿತು ವಿಚಾರಿಸಿದರು. ತಮ್ಮ ಮನೆಯ ದಿವಾನಖಾನೆಯಲ್ಲಿ ನರ್ತನಗೋಷ್ಠಿ ನಡೆಸಿಕೊಡುವಂತೆ ನಮ್ಮ ತಾತ ಕೇಳಿಕೊಂಡರು. ಇದರಿಂದ ಆ ತಾಯಿ ಮಗಳಿಗೆ ಅಮಿತಾನಂದವಾಯಿತು. ನಗರದ ಕೀರ್ತಿಶಾಲಿಗಳಾದ ನರ್ತಕಿಯರು ನಾಚುಮಾಡಿದ ಆ ಪವಿತ್ರ ಸ್ಥಳದಲ್ಲಿ ತನ್ನ ಮಗಳ ನಾಟ್ಯ ಕಾರ್ಯಕ್ರಮ ನಡೆಯುವುದೆಂದರೆ ನೀಲಿಮಾಳಿಗೆ ಒಂದು ಹೆಮ್ಮೆಯೇ ಸರಿ. ಒಂದು ಪ್ರಶಸ್ತ ದಿನ ನಡೆದ ಷೋಡಶಿಯ ನಾಟ್ಯ ಕಾರ್ಯಕ್ರಮವು ಇತೋಪ್ಯತಿಶಯವೆನ್ನಿಸಿ ಕೊಂಡುಬಿಟ್ಟಿತು. ಷೋಡಶಿಯ ಕೀರ್ತಿ ದಾಂಗುಡಿಯಿಟ್ಟಿತು. ಹೀಗೆಯೇ ಇನ್ನೂ ಕೆಲವು ಕಾರ್ಯಕ್ರಮಗಳು ಈ ಮಹಲಿನ ಈ ದಿವಾನಖಾನೆಯಲ್ಲಿ ನಡೆದವು. ಕ್ರಮೇಣ ಷೋಡಶಿಯೂ ನಮ್ಮ ತಾತನವರೂ ಪರಸ್ಪರ ಆಕರ್ಷಿತರಾದರು. ಅದು ಕ್ರಮೇಣ ಪ್ರೀತಿಯಾಗಿ ಬೆಳೆಯಿತು. ಅವಳ ನರ್ತನಗಳು, ಅವಳ ಸಾನ್ನಿಧ್ಯ

ಸಾಮೀಪ್ಯಗಳು ನಮ್ಮ ತಾತನವರಿಗೆ ಸ್ವರ್ಗವನ್ನೇ ಸೃಷ್ಟಿಸಿದವು. ಕೆಲವು ವರ್ಷಗಳು ಹೀಗೆಯೇ ನಡೆಯುತ್ತ ಬಂದಿತು. ನಮ್ಮ ತಾತನವರ ಮಿತಿಮೀರಿದ ಔದಾರ್ಯ ಅವರ ಕೈಬರಿದಾಗುವಂತೆ ಮಾಡಿತು. ಅವರ ಮನಸ್ಸಿನ ಕಷ್ಟವನ್ನು ಕಂಡ ಷೋಡಶಿ ಅವರನ್ನು ಕೈಬಿಡಲಿಲ್ಲ, ಬದಲಿಗೆ ಅವಳ ಅನುರಾಗವು ಮತ್ತಷ್ಟು ವೃದ್ಧಿಯಾಯಿತು. ಅವರ ಶ್ರೇಯಸ್ಸಿಗಾಗಿ ಷೋಡಶಿ ದೇವರಲ್ಲಿ ಪ್ರಾರ್ಥಿಸುತ್ತ ಹಲವು ವ್ರತಗಳನ್ನು ಕೂಡ ಆಚರಿಸಿದಳು. ಈ ನಡುವೆ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಅವಳು ತನ್ನ ಪ್ರಿಯನೂ ದೂರವಾಗುವನೇನೋ ಎಂದು ಹೆದರಿದಳು. ಇದರ ಜತೆಗೆ ನಮ್ಮ ತಾತನವರ ಪ್ರತಿಸ್ಪರ್ಧಿಗಳು ಷೋಡಶಿಯನ್ನು ಹೇಗಾದರೂ ತಮ್ಮ ಬಲೆಗೆ ಬೀಳಿಸಿಕೊಳ್ಳಬೇಕೆಂದು ಅವಳ ಮೇಲೆ ಒತ್ತಡವನ್ನು ತರಲಾರಂಭಿಸಿದರು. ಒಂದು ಕೃಷ್ಣಜಯಂತಿಯ ಸಂದರ್ಭ. ನಮ್ಮ ತಾತನವರ ಮನೆಯ ದಿವಾನಖಾನೆಯಲ್ಲಿ ಭಾರಿ ನರ್ತನ ಕಾರ್ಯಕ್ರಮವೇರ್ಪಟ್ಟಿತ್ತು. ಬಹಳ ದೊಡ್ಡದೊಡ್ಡ ವಿದ್ವಾಂಸರು, ಜಮೀನುದಾರರು, ಶ್ರೀಮಂತರು ನರ್ತನಕ್ಕಾಗಿ ಕಾದು ಕುಳಿತಿದ್ದರು. ಮನಸ್ಸಿನ ಚಿಂತೆ, ಜೀರೆಯುವರ ಕಿರುಕುಳ ಮೊದಲಾದ ವೇದನೆಯನ್ನು ಹೊತ್ತಿದ್ದರೂ ನಗು ನಗುತ್ತ ನರ್ತನ ಆರಂಭಿಸಿದಳು. ಕೃಷ್ಣಜಯಂತಿಯ ವ್ರತವನ್ನು ಹಿಡಿದು ಉಪವಾಸ ಮಾಡಿದ್ದಳು. ಆದರೂ ಭಕ್ತಿ ಉತ್ಸಾಹಗಳಿಂದ ಚೈತನ್ಯಪೂರ್ಣವಾಗಿ ಹೆಜ್ಜೆಗಳನ್ನು ಹಾಕುತ್ತ ಅಮೋಘ ನರ್ತನ ಮಾಡುತ್ತಿದ್ದಳು. ಅವಳ ಮುಖದಲ್ಲಿ ಒಂದು ದೈವೀ ತೇಜಸ್ಸು ಮೂಡಿತ್ತು. ರಾಧೆಯ ಪಾತ್ರದಲ್ಲಿ ಸಾಕ್ಷಾತ್ ಕೃಷ್ಣನಿಗೆ ತನ್ನನ್ನೇ ಅರ್ಪಿಸಿಕೊಂಡ ತನ್ಮಯ ಭಾವದಲ್ಲಿ ಮುಳುಗಿಹೋಗಿದ್ದಳು. ಹೀಗೆ ನರ್ತಿಸು ತ್ತಿದ್ದಾಗಲೆ ಬವಳಿ ಬಂದಂತಾಗಿ ಬಿದ್ದುಬಿಟ್ಟಳು. ಅನಾಕ್ಕಾಗಿ ನೆಟ್ಟ ನೋಟದಿಂದ ನರ್ತನವನ್ನು ನೋಡುತ್ತಿದ್ದವರು 'ಹಾಹಾ' ಎಂದು ಚೀತ್ಕಾರ ಮಾಡಿದರು. ಅವಳನ್ನು ಯಾವ ಉಪಚಾರವೂ, ಔಷಧಿಯೂ ಎಚ್ಚರಗೊಳಿಸಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಅವಳ ಪ್ರಾಣಪಕ್ಷಿಯು ಹಾರಿಹೋಯಿತು. ನಮ್ಮ ತಾತ ಅವಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಅಳಲಾರಂಭಿಸಿದರು. ಅವರನ್ನು ಅವಳ ದೇಹದಿಂದ ಬೇರ್ಪಡಿಸುವುದು ಬಹು ಕಷ್ಟದ ಕೆಲಸವಾಯಿತು. ಷೋಡಶಿಯ ಸಾವಿನಿಂದ ಕುಸಿದುಹೋದ ತಾತನವರು ಪುನಃ ಚೇತರಿಸಿಕೊಳ್ಳಲೇ ಇಲ್ಲ. ಹೇಗೋ ಸ್ವಲ್ಪ ಕಾಲ ಜೀವಿಸಿದ್ದು ಅಸು ನೀಗಿದರು.' ಈ ಕಥೆಯನ್ನು ಹೇಳುತ್ತ ಹೇಳುತ್ತ ಅವರ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿಯಲಾರಂಭಿಸಿತು. ನನ್ನ ಕಣ್ಣಲ್ಲೂ ನೀರು ತುಂಬಿಕೊಂಡಿತು. ಎಂಥ ಪುಣ್ಯಜೀವಿಗಳು ಎಂದುಕೊಂಡು ಈ ಕಥೆಯನ್ನೇ ಮೆಲುಕುಹಾಕುತ್ತ ಮನೆಗೆ ಕಾಲೆಳೆದುಕೊಂಡು ಬಂದೆ.

ಅಂದಿನಿಂದ ಜಹಗೀರುದಾರರ ಮೊಮ್ಮಗನೂ ನಾನೂ ತುಂಬ ನಿಕಟವರ್ತಿ ಬಂಧುಗಳಂತಾದೆವು. ದಿನವೂ ಅವರೊಡನೆ ವಾಕಿಂಗ್, ಅವರೊಡನೆ ಮಾತು, ಅವರ ಮನೆಯಲ್ಲಿ ಚಾ ಕುಡಿಯುವುದು ಸರ್ವೇಸಾಮಾನ್ಯವಾಯಿತು. ಒಂದು

ದಿವಸ ಹೀಗೆಯೇ ಚಾ ಕುಡಿಯುತ್ತ ಮಾತನಾಡುತ್ತ ದಿವಾನಖಾನೆಯಲ್ಲಿ ಕುಳಿತಿದ್ದೆವು. ಅವರ ಮೊಮ್ಮಗಳು ಓಡಿ ಬರುತ್ತ, 'ಅಜ್ಜ, ಅಜ್ಜ! ಇಂದು ಬೆಳಗಿನ ಜಾವ ಈ ಪಾಯಲ್ (ಗೆಜ್ಜೆ) ಸಿಕ್ಕಿತು ನೋಡಿ!' ಎಂದು ತಂದುಕೊಟ್ಟಳು. ಅದನ್ನು ನೋಡಿದ್ದೇ ಅವರ ಕಣ್ಣುಗಳಲ್ಲಿ ನೀರು ತೊಟ್ಟಿಕ್ಕಿತು. ಒಮ್ಮೆ ಗೆಜ್ಜೆಯನ್ನು ನೋಡಿ ಆಶ್ಚರ್ಯದಿಂದ ಚಿತ್ರದಲ್ಲಿನ ಸ್ವರ್ಗಸುಂದರಿಯ ಕಾಲಿನಲ್ಲಿದ್ದ ಗೆಜ್ಜೆಯನ್ನು ನೋಡಲಾರಂಭಿಸಿದೆ. ಈ ಗೆಜ್ಜೆಗೂ ಚಿತ್ರದಲ್ಲಿದ್ದ ಸುಂದರಿಯ ಕಾಲಿನ ಗೆಜ್ಜೆಗಳಿಗೂ ಅಪೂರ್ವ ಸಮಾನತೆ ಕಂಡುಬಂದಿತು. ಆಶ್ಚರ್ಯದಿಂದ ಗೆಳೆಯರ ಮುಖವನ್ನು ನೋಡಿದೆ. ಆಗ ಅವರು, 'ನೋಡಿ, ಈ ಸ್ವರ್ಗಸುಂದರಿಯು ಎಂದರೆ ಷೋಡಶಿಯು ಪ್ರಾಣ ಹೋದರೂ ಅವಳ ಆತ್ಮ ಇಲ್ಲಿಯೇ ತೇಲಾಡುತ್ತಿದೆ. ಪ್ರತಿದಿನ ರಾತ್ರಿ ಹನ್ನೆರಡು ಗಂಟೆಯಾದ ಮೇಲೆ ಸ್ವಲ್ಪ ಹೊತ್ತು ಹೆಜ್ಜೆ ಸಪ್ಪಳ, ಗೆಜ್ಜೆಯ ನಾದ ಈ ದಿವಾನಖಾನೆಯಿಂದ ಕೇಳಿಸುತ್ತಿರುತ್ತದೆ. ನಮ್ಮ ಈ ಮಹಲಿನ ಒಳ ಅಂಗಳದಲ್ಲಿ ವೃತ್ತಾಕಾರವಾದ ಮೆಟ್ಟಿಲುಗಳಿವೆ ನೋಡಿ, ಅಲ್ಲಿಂದ ನಡೆದುಕೊಂಡು ಬಂದಂತೆ ಆಗುವುದು. ಅನಂತರ ಈ ದಿವಾನಖಾನೆಯಲ್ಲಿ ವೃತ್ತಾಕಾರದ ಚಿತ್ರವುಳ್ಳ ಆ ರಂಗಸ್ಥಲವಿದೆಯಲ್ಲ, ಅಲ್ಲಿ ನೃತ್ಯ ನಡೆದಂತೆ ಭಾಸವಾಗುತ್ತದೆ. ಸ್ವಲ್ಪ ಹೊತ್ತಿನ ಅನಂತರ ಮೊದಲಿನಂತೆ ಮೌನವಾವರಿಸುತ್ತದೆ. ಇದೊಂದು ಆಶ್ಚರ್ಯ ನೋಡಿ. ಯಾವಾಗಲಾದರೂ ಒಮ್ಮೆ ಹೀಗೆ ಅವಳದಾಗಿದ್ದ ಒಂದು ವಸ್ತು ದೊರಕುತ್ತದೆ. ಒಂದು ಸಲ ಒಂದು ಬಳೆ ಸಿಕ್ಕಿತು. ಇಂದು ಈ ಗೆಜ್ಜೆ ಸಿಕ್ಕಿದೆ. ನರ್ತಿಸುವಾಗ ಕಾಲಿನಿಂದ ಬಿದ್ದು ಹೋಗಿರಬಹುದು. ಅದನ್ನು ರಂಗಸ್ಥಲದಲ್ಲಿಯೇ ಇಡೋಣ' ಎಂದರು. 'ಹಾಗಾದರೆ ನಿಮಗೆ ಅವಳಿಂದ ಯಾವ ಭಯವೂ ಇಲ್ಲವೇ? ಹೆಂಗಸರು ಮಕ್ಕಳು ಯಾರಿಗೂ ಹೆದರಿಕೆಯಾಗುವುದಿಲ್ಲವೇ?' ಎಂದು ಕೇಳಿದೆ. 'ನಮಗೆಲ್ಲ ಅಭ್ಯಾಸವಾಗಿ ಹೋಗಿದೆ. ಹೆಂಗಸರು, ಮಕ್ಕಳು ಯಾರೂ ಆ ಶಬ್ದವನ್ನು ಕೇಳಿ ಭಯಪಡುವುದಿಲ್ಲ. ಒಂದು ರೀತಿಯ ಆನಂದ ಎಲ್ಲರ ಮನಸ್ಸಿನಲ್ಲಿಯೂ ಪುಟಿದು ಬರುವುದು. ಯಾವುದೋ ಒಂದು ಅವ್ಯಕ್ತ ಲೋಕದಲ್ಲಿರುವಂತೆ ಭಾಸವಾಗುವುದು. ಹಾಗೆಯೇ ನಿದ್ದೆ ಆವರಿಸಿಬಿಡುವುದು. ನಾವು ಯಾರೂ ಆ ಶಬ್ದವನ್ನು ಪರೀಕ್ಷಿಸುವ ಗೊಡವೆಗೆ ಹೋಗಿಲ್ಲ. ಷೋಡಶಿ ಯಾರಿಗೂ ತೊಂದರೆ ಮಾಡುವುದಿಲ್ಲ' ಎಂದರು. ಈ ಮಾತು ಕೇಳಿ ಸೋಜಿಗವಾಯಿತು. ಆ ಗೆಜ್ಜೆಯನ್ನು ನೋಡುತ್ತ, ಗೆಜ್ಜೆಯನ್ನು ಕಾಲಿನಲ್ಲಿ ಧರಿಸಿ ನರ್ತನಮಾಡುವ ಸ್ವರ್ಗಸುಂದರಿಯ ಆ ದೃಶ್ಯವನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಳ್ಳುತ್ತ ಮನೆಗೆ ಬಂದೆ. ಮಾನವನು ಪ್ರೇತಾತ್ಮದ ಗೆಳತನದೊಂದಿಗೆ ಬದುಕುವ ಈ ಅಪೂರ್ವ ಸಂಗತಿ ನನ್ನನ್ನು ದಿಙ್ಮೂಢನನ್ನಾಗಿ ಮಾಡಿತು.

ಬಿ. ಜಿ. ಕನಕೇಶಮೂರ್ತಿ

ಹೂಗಳಿಗೆ

ಮಧುರ ಮೋಹಕ ಭಾವ ದೀಪಕ
ಮದನ ರೂಪದ ಹೂಗಳೇ !
ಇನಿತು ಮುಂಜೆಯೆ ನಡೆದಿರೇತಕೆ
ಇಂಥ ಕಾತುರ ತಕ್ಕುದೇ ?

ಇನ್ನು ತುಸು ಹೊತ್ತಿರಲೆಬೇಕಿತ್ತಿಲ್ಲಿಯೇ
ನೀವಿರಲೆಬೇಕಿತ್ತಿಲ್ಲಿಯೆ.

ಒಡಲ ಮಧುವಿನ ಮದನ ನಗುವಿನ
ಚೆಲ್ಲುಗುಲ್ಲನು ಮರೆತಿರಾ ?
ರಾತ್ರಿ ರಭಸದಿ ಸುರಿವ ಮಂಜಿಗೆ
ತಡೆಯಲಾರದೆ ಅಳಿದಿರಾ ?

ದಿನಪ ಬರುವನು ಕಿರಣ ತರುವನು
ಎನುವುದನು ನೀವು ಮರೆತಿರಾ ?
ಬೆಳಕ ಕಿರಣಗಳುದಿಸೊ ಮುನ್ನವೆ
ಹೂಗಳೇ ನೀವು ಮುಗಿವುದೇ ?

ಹಗಲಿನ ಸಂದೇಶ ಕೇಳುವ
ಪುಣ್ಯವನು ತೊರೆದಳಿವುದೇ ?
ತೊರೆದಿರಾ ಈ ಜಗವ ಇರುಳಲೆ
ಬೆಳಕ ಹಾರದ ಮಣಿಗಳೇ !

ಬೆಳಕಿನೊಡವೆಯು ವಜ್ರಕೆಂಪಿನ
ತೊಳೆ ತೊಳೆವ ಬಣ್ಣದ ಹೂಗಳೇ

ನಾನು ಬರುವೆನು ನಿಮ್ಮ ಜೊತೆಯಲಿ
ನಿಲ್ಲಿ ಹೂಗಳೇ ನಿಲ್ಲಿರಿ.

ಮನುಜ ಬಾಳೂ ಚಣದ ಬಾಳೆ
ನಿಮ್ಮ ತೆರದೊಳೆ ಕ್ಷಣಿಕವು.
ನಿಲುವ ಈ ಕೆಲ ದಿನವ ಸುಖಮಯ-
ವಾಗಿಸುವುದೇ ಸ್ವರ್ಗವು.

ನಿಲ್ಲಿ ಹೂಗಳೇ ನಿಲ್ಲಿ ಹೂಗಳೇ
ನಿಲ್ಲಿ ಹೂಗಳೇ ನಿಲ್ಲಿರಿ
ಈ ಜಗದ ಸೊಗವನು ಉಂಡು ಹೋಗಿರಿ
ನಿಲ್ಲಿ ಹೂಗಳೇ ನಿಲ್ಲಿರಿ.

Robert Herrick ನ 'To Daffodils' ಮತ್ತು 'To Blossoms' ಕವನಗಳನ್ನು ಆಧರಿಸಿ.

ತಾಳ್ತಜೆ ವಸಂತಕುಮಾರ

ತಾಪ

ಸೂತ್ರಧಾರ : ಸಹೃದಯ ಸಾಮಾಜಿಕರೆಲ್ಲರಿಗೆ ನಮಸ್ಕಾರ. ಇದೀಗ ಈ ಶುಭ ಸಂದರ್ಭದಲ್ಲಿ ಒಂದು ಪೌರಾಣಿಕ ರೂಪಕವನ್ನು ನಿಮ್ಮ ಮುಂದೆ ಸಾದರ ಪಡಿಸುತ್ತೇವೆ. (ಹಿನ್ನೆಲೆ ಸಂಗೀತ)

ಅದೋ .... ಅದೋ .... ಹಿಂದೆ, ಬಹು ಹಿಂದೆ .... ಸಾವಿರಾರು ವರ್ಷಗಳಾಚೆಗೆ ಕಾಲಕೋಶದ ಪಕಳೆ ಬಿಚ್ಚುತ್ತ ಬನ್ನಿ; ನನ್ನೊಡನೆ ಬನ್ನಿ. ಇದೊಂದು ನಮ್ಮ ದೇಶದಲ್ಲಿ ನಡೆದ ಕಥೆ. ಕಥೆಯಾದ ಸತ್ಯ. ಕಾವ್ಯವಾದ ಸತ್ಯ. ಪುರಾಣವಾದ ಸತ್ಯ. ನಮ್ಮ—ನಿಮ್ಮ ಎಲ್ಲರ ಒಳಹೊರಗಿನ ಶೋಧನೆಯ ಸತ್ಯ. (ಹಿನ್ನೆಲೆ ಸಂಗೀತ)

ಶಂತನು ಚಕ್ರವರ್ತಿಯ ಮಗ, ಗಂಗಾಸುತ ದೇವವ್ರತ ಬ್ರಹ್ಮಚಾರಿಯಾಗಿಯೇ ಉಳಿಯಲು ನಿರ್ಧರಿಸಿ ಭೀಷ್ಮನೆಂಬ ಅನ್ವರ್ಥನಾಮ ಪಡೆಯುತ್ತಾನೆ. ತಂದೆಯ ಅಭಿಲಾಷೆಯ ಪೂರ್ತಿಗಾಗಿ ತನ್ನ ಬದುಕನ್ನು ತ್ಯಾಗದ ಗೌರೀಶಂಕರಕ್ಕೇರಿಸುತ್ತಾನೆ. ಅಲ್ಲಿಂದಾಚೆಗೆ ಭೀಷ್ಮನ ಧ್ಯೇಯ ಒಂದೇ. ಸಿಂಹಾಸನದ ಹಿತ ಮಾತ್ರ ಆತನ ಲಕ್ಷ್ಯ. (ಹಿನ್ನೆಲೆ ಸಂಗೀತ)

ಶಂತನು ಮೋಹಿಸಿ ಮದುವೆಯಾದ ಸತ್ಯವತಿಯ ಮಕ್ಕಳಾದ ಚಿತ್ರಾಂಗದ ವಿಚಿತ್ರವೀರ್ಯರಲ್ಲಿ ಹಿರಿಯಾತ ಅಕಾಲ ಮರಣವನ್ನಪ್ಪಿದಾಗ, ಉಳಿದ ತಮ್ಮನಿಗೆ ಮದುವೆ ಮಾಡಿಸಿ ಸಿಂಹಾಸನದ ಉತ್ತರಾಧಿಕಾರಿಯ ಯೋಜನೆ ಯೋಜಿಸುತ್ತಾನೆ ಭೀಷ್ಮ... ಆಗ.... (ಮತ್ತೆ ಹಿನ್ನೆಲೆ ಸಂಗೀತ)
(ಒಮ್ಮೆ ರಂಗದಲ್ಲಿ ಕತ್ತಲು; ಅನಂತರ ಬೆಳಕು. ಆಗ ಭೀಷ್ಮನ ಪ್ರವೇಶ)

ಭೀಷ್ಮ : ಓ! ಎಷ್ಟೊಂದು ವಿಶಾಲ ಈ ಭರತಭೂಮಿ. ಎಷ್ಟೊಂದು ವೈವಿಧ್ಯ ಈ ವಸುಂಧರೆಯಲ್ಲಿ! ದೂರದ ಹಸ್ತಿನಾವತಿಯಿಂದ ಹೊರಟು ಗಂಗೆಯ ದಡದುದ್ದಕ್ಕೂ ಸಾಗಿ ಬಂದೆ. ಪವಿತ್ರ ಭಾಗೀರಥಿ ಹರಿವ ಈ ನದಿ ಎಷ್ಟು ನಿರ್ಮಲ! ನಮ್ಮ ಬದುಕೂ ಹೀಗೇ ಇರಬೇಡವೇ? ನಿರಂತರ ಪ್ರವಾಹ. ಜೀವನವೂ ಪ್ರವಾಹ. ಹಸ್ತಿನಾವತಿಯ ಶೋಭಾಕರ ಮಂಗಳಮಯ ರಾಜ

ವೀಥಿಗಳ, ರಮ್ಯ ಉದ್ಯಾನಗಳ, ಸುಂದರ ಸಾಲವೃಕ್ಷಗಳ ಆ ಸಾಲುಗಳ, ಭವ್ಯ ಭವನಗಳ ಪ್ರಪಂಚವನ್ನು ದಾಟಿ ಈಚೆಗೆ ಬಂದರೆ ಉದ್ದಕ್ಕೂ ಚಾಚಿದ ಹೊಲಗಳು. ಅಲ್ಲಲ್ಲಿ ದುರ್ಗಮವಾದ ಕಾಡುಗಳು. ಸಾರ್ಥವಾಹರ ಈ ದಾರಿ ಹೊರತುಪಡಿಸಿದರೆ ಎಲ್ಲೆಲ್ಲೂ ಕಾಡುಗಳು. ಏನಿದ್ದರೂ ಇವೆಲ್ಲ ರಾಜಸ್ವದ ಸೊತ್ತುಗಳು. ಪ್ರಭುತ್ವದ ಆದಾಯ ಕ್ಷೇತ್ರಗಳು. ಜಲಕಣ ಏನಿದ್ದರೂ ನದಿಯ ಪ್ರವಾಹದಲ್ಲಿ ಸೇರಬೇಡವೇ? ಅದಕ್ಕೇಕೆ ಪ್ರತ್ಯೇಕತೆ? ಅದಕ್ಕೇಕೆ ಸ್ವಂತದ ಸುದ್ದಿ? ರಾಜರ ಹಿತದಲ್ಲೇ ಸಮಷ್ಟಿಯ ಸುಖ, ಸಮಷ್ಟಿಯ ಹಿತ ಅಡಕವಾಗಿದೆ. ಹೂಂ...ಕಾಶೀರಾಜನ ಮಕ್ಕಳ ಸ್ವಯಂವರ ಮಂಟಪದ ಬಳಿ ಸೇರಲು ಇನ್ನೂ ದೂರ ಸಾಗಬೇಕಾಗಿದೆ. ಒಮ್ಮೆ ಅಲ್ಲಿ ಸೇರಿ ನನ್ನ ಭುಜಬಲದ, ಸಾಹಸದ ಬೆಂಬಲದಿಂದ ನೆರೆದ ಮಹೀಪತಿಗಳನ್ನು ಗೆದ್ದು, ಆ ಹುಡುಗಿಯರನ್ನು ತಂದು ತಮ್ಮನ ಮದುವೆ ನೆರವೇರಿಸಿದೆನಾದರೆ ನಿಶ್ಚಿಂತೆ. (ತೆರಳುವನು)

(ಒಮ್ಮೆ ರಂಗದಲ್ಲಿ ಕತ್ತಲು. ಬೆಳಕಾದಾಗ ಸೂತ್ರಧಾರ)

ಸೂತ್ರಧಾರ: ತಮ್ಮನಿಗೆ ಮದುವೆ ಮಾಡಿಸಲು ಹೊರಟ ಈ ಅಣ್ಣ. ಇವನ ಪರಾಕ್ರಮ ಎದುರಿಲ್ಲದ್ದು. ಗೆಲ್ಲುವ ಛಲ–ಅದಟು ಇವನಿಗಿವೆ. ಇವನ ತಮ್ಮ ದೂರದ ಹಸ್ತಿನಾವತಿಯಲ್ಲಿ ಉಳಿದಿದ್ದಾನೆ. ಇವನು ಪಣಗೆದ್ದು ತಮ್ಮನಿಗೆ ಮದುವೆ ಮಾಡಿಸುತ್ತಾನಂತೆ....ನೋಡೋಣ. (ಸ್ವಲ್ಪ ತಡೆದು)....ಈಗ ಅಲ್ಲಿ....ದೂರದ ಕಾಶೀರಾಜನ ರಮ್ಯೋದ್ಯಾನದಲ್ಲಿ....(ಕತ್ತಲು. ಬೆಳಕಾದಾಗ ಅಂಬೆ ತನ್ನ ಸಹೋದರಿಯರೊಂದಿಗೆ ಪ್ರವೇಶ)

ಅಂಬಿಕೆ: ಅಕ್ಕಾ, ಅಕ್ಕಾ, ಇಲ್ಲಿ ನೋಡು. ಈ ಮಲ್ಲಿಗೆ ಬಳ್ಳಿ ಎಷ್ಟು ಹಸನಾಗಿ ಹಬ್ಬಿದೆ! ಓ....ಓ....ಅದೋ ಅಲ್ಲಿ ಆ ಸೇವಂತಿಗೆಯ ಸೊಗಸು. (ಅಂಬೆ ನಿರ್ಲಿಪ್ತಳಾಗಿ ಅದೇನೋ ಕನಸು ಕಾಣುತ್ತಿದ್ದಾಳೆ,

ಅಂಬಾಲಿಕೆ: ಅಕ್ಕಾ, ಅಕ್ಕಾ, ಇದೇನು ಹೀಗೆ? ಎಂದು ನೋಡಿದರೂ ಉತ್ಸಾಹದ ಚಿಲುಮೆಯೇ ಆಗಿರುವ ನಿನಗೆ ಏನಾಗಿದೆ? ಏನು ಕನಸು?

ಅಂಬಿಕೆ: ಹೇಳಕ್ಕಾ ಹೇಳು. ನಮಗಿಲ್ಲದ ಯೋಚನೆ ನಿನಗೇನೇ?

ಅಂಬೆ: (ನಿಧಾನವಾಗಿ ನಿಟ್ಟುಸಿರು ಬಿಡುತ್ತಾ ಕನಸಿನಾಳದಿಂದಲೋ ಎಂಬಂತೆ ಮಾತು) ಹೂಂ....ನಿಮಗೆ ಯೋಚನೆ ಎಂದಿತ್ತು ಹೇಳಿ?! ....

ಅಂಬಿಕೆ: ಅಂ–ಏನು?

ಅಂಬೆ: ಛೇ. ಛೇ. ಏನಿಲ್ಲ ಬಿಡು. ಏನೋ ಯೋಚಿಸಿ ಏನೋ ಹೇಳಿದೆ.

ಅಂಬಾಲಿಕೆ: ಏನಕ್ಕಾ, ಏನು ಯೋಚನೆ ಹೇಳು. ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ನೀನೇಕೋ ಸರಿಯಾಗಿಲ್ಲ. ಯಾವ ಸುಮಧುರ ಯಾತನೆ... ಅಕ್ಕಾ....ಹೂಂ. (ನಸುನಗುವಳು)

ಅಂಬೆ : ಅಲ್ಲ, ಅದೊಂದೂ ಅಲ್ಲ. ನೋಡಿ ಅಂಬಿಕಾ, ಅಂಬಾಲಿಕಾ, ನಮಗೆ ಈ ರಾಜಬಂಧನದಿಂದ ಬಿಡುಗಡೆ ಎಂದು ? ಈ ವ್ಯವಸ್ಥೆಯೇ ಎಷ್ಟು ಕಠೋರ ! ಎಷ್ಟು ಕ್ರೂರ ! ನಾವು ಬರಿಯ ವಸ್ತುಗಳು. ಈ ಪುರುಷರ ಪೌರುಷದ ಕಡಿವಾಣಗಳಾಗಬೇಕಲ್ಲವೇ ? ಬರಿಯ ಕಡಿವಾಣಗಳು. ಕಡಿವಾಣಕ್ಕೆ ಕೂಡಾ ಹೊಳಿತ ಇರುತ್ತದೆ, ನಮಗದೂ ಇಲ್ಲ.

ಅಂಬಿಕೆ : ಏನಕ್ಕಾ, ಸುಮ್ಮನೆ ಏಕೆ ಈ ಚಿಂತೆ ?

ಅಂಬೆ : ಸುಮ್ಮನೆ ಅಲ್ಲ ಅಂಬಿಕಾ ಸುಮ್ಮನಲ್ಲ. ನಮ್ಮನ್ನು ಕಿತ್ತು ತಿನ್ನುವ ಈ ರಣಹದ್ದುಗಳು. ನಾವೇನಿದ್ದರೂ ಬರಿಯ ಭೋಗದ ಉಪಕರಣಗಳು. ನಮ್ಮಲ್ಲಿ ವ್ಯಕ್ತಿತ್ವವನ್ನು, ಗೌರವವನ್ನು ಕಾಣುವ, ಕಾಣಿಸುವ ಪುಣ್ಯಾತ್ಮರು ಯಾರಿದ್ದಾರೆ ? ಹೂಂ....(ನಿಟ್ಟುಸಿರು)........ಯಾರಿದ್ದಾರೆ ?

ಅಂಬಾಲಿಕೆ : ಅಕ್ಕಾ, ನಾನೂ ಯೋಚಿಸಿದ್ದೇನೆ. ನನಗೆ ನನ್ನ ಸುತ್ತಣ ವ್ಯವಸ್ಥೆಯಲ್ಲಿ ಸೇರಿಹೋಗುವುದೇ ಇಷ್ಟ. ಏತಕ್ಕೆ ಹೋರಾಟ ?

ಅಂಬಿಕೆ : ಇಷ್ಟಕ್ಕೂ ನಮ್ಮ ಬದುಕು ಸುರಕ್ಷಿತವೇ ಅಲ್ಲವೇ ?

ಅಂಬೆ : ಛೀ. ಹಾಗಲ್ಲ. ಹಾಗಲ್ಲ. ಅರಳುತ್ತಿರುವ ಹೂವನ್ನು ಬಯಸಿ ಬರುವ ಆ ಮಧುಕರ. ಆ ತುಂಬಿಯನ್ನು ಬಯಸಿ ಸ್ವಾಗತಿಸುವ ಹೂವು. ಇದು ಪ್ರಕೃತಿ ಧರ್ಮ. ಆದರೆ ಇಲ್ಲಿ ಈ ಕ್ರೂರ ವ್ಯವಸ್ಥೆಯಲ್ಲಿ, ಯಾರೋ ಒಬ್ಬ ತಲೆನೆರೆತ ಜರಡನೂ ನಮ್ಮ ಕೈ ಹಿಡಿಯಬಹುದು. ನಾವು ನಗುತ್ತ ನಗುತ್ತ ನಮ್ಮ ಸುರಕ್ಷೆಯ ಬಗೆಗೇ ಬೀಗುತ್ತ ಇರಬೇಕು ಅಲ್ಲವೇ ?

ಅಂಬಾಲಿಕೆ : ಅಕ್ಕಾ. ಹೋಗಲಿ ಈ ಮಾತು. ಈಗೇಕೆ ಸುಮ್ಮನೇ ಚರ್ಚೆ. ಹೋಗೋಣ. ಇಲ್ಲೇ ಒಂದು ಸುತ್ತು ಬಳಸಿ ಬರೋಣ ಬಾ. (ತೆರಳುವರು. ರಂಗದಲ್ಲಿ ಕತ್ತಲೆ. ಬೆಳಕಾದಾಗ ಸೂತ್ರಧಾರ)

ಸೂತ್ರಧಾರ : ಆಕೆ, ಅಂಬೆ ಕಾಶೀರಾಜನ ಹಿರಿಯ ಮಗಳು. ಅವಳ ಸ್ವಭಾವವೇ ಹಾಗೆ. ಎಲ್ಲವನ್ನೂ ಪ್ರಶ್ನಿಸುವ ಸ್ವಭಾವ. ಕೆದಕಿ ಬೆದಕಿ ಒರೆಹಚ್ಚುವ ತೀಕ್ಷ್ಣ ಬುದ್ಧಿ. ಅವಳ ತಂಗೆಯರಾದರೋ ಪ್ರವಾಹದ ವಿರುದ್ಧ ಈಸುವವರಲ್ಲ. ಹೂಂ......ಏನು ಪ್ರವಾಹವೋ. ಏನು ವಿರುದ್ಧ ಈಸಾಟವೋ. ಕೊನೆಗೆ ಎಲ್ಲಿಗೆ ಸಾಗಾಟವೋ........(ಸ್ವಲ್ಪ ತಡೆದು)........ಅದೋ, ಅದೋ, ಸಾಲ್ವರಾಜನೂ ಇತ್ತಲೇ ಬರುತ್ತಿದ್ದಾನೆ. ಸ್ವಯಂವರದ ಸಂದರ್ಭಕ್ಕಾಗಿ ಬರುತ್ತಿದ್ದಾನೆ. (ಕತ್ತಲು. ಬೆಳಕಾದಾಗ ಸಾಲ್ವನ ಪ್ರವೇಶ) (ಹಿನ್ನೆಲೆ ಪರದೆ ಉದ್ಯಾನವನದ್ದು)

ಸಾಲ್ವ : ನಾಳೆಯಂತೆ ಸ್ವಯಂವರ. ಮಸೆದ ಖಡ್ಗಗಳ, ನಿಶಿತ ಬಾಣಗಳ ಸತ್ವ ಪರೀಕ್ಷಾ ಸಂದರ್ಭ. ಆಗಲಿ. ಆಗಲಿ. ಗುರುಗಳ ಆಶೀರ್ವಾದವಿದೆ. ಭುಜದಲ್ಲಿ ಬಲವಿದೆ ನೋಡಿಯೇ ಬಿಡುತ್ತೇನೆ .... ಅಂ ... ಎಲ್ಲಿಗೆ ಬಂದುಬಿಟ್ಟೆ ?

ಕಾಶಿಯ ಹೊರವಲಯದ ಅಂಚೂ ಕಳೆದು ಇದು....ಓ ಇದು ಉದ್ಯಾನವನ. (ಅತ್ತಿತ್ತ ನೋಡುತ್ತ ಇರುವಂತೆ, ರಂಗದ ಇನ್ನೊಂದು ಬದಿಯಿಂದ ಅಂಬೆಯ ಪ್ರವೇಶ. ಅವಳೂ ದೂರದ ತನ್ನ ತಂಗಿಯರನ್ನು ಉದ್ದೇಶಿಸಿ ಮಾತಾಡುತ್ತಾ ಅನ್ಯಮನಸ್ಕಳಾಗಿ ಬರುತ್ತಿದ್ದಾಳೆ)

ಅಂಬೆ : ಬೇಗ ಬನ್ನಿ. ತಡಮಾಡಬೇಡಿ. ನಾನು ಇಲ್ಲೇ ಈ ಕಾರಂಜಿಯ ಪಕ್ಕದ ಚಂದ್ರಶಿಲೆಯಾಚೆಗೆ ಇದ್ದೇನೆ...ತಡಮಾಡಬೇಡಿ. (ತಾನು ರಂಗಕ್ಕೆ ಪ್ರವೇಶ ಮಾಡಿದ ಕಡೆಗೇ ನೋಡುತ್ತ ಬರುತ್ತಾಳೆ. ಈ ಬದಿಯಿಂದ ಸಾಲ್ವ ಬೆರಗಾಗಿ ಆಕೆಯನ್ನೇ ನೋಡುತ್ತಾನೆ. ಹಿಂದೆ ಹಿಂದೆ ಸರಿಯುತ್ತ ಬಂದ ಅಂಬೆ ಪಕ್ಕನೆ ಸಾಲ್ವನನ್ನು ಕಾಣುತ್ತಾಳೆ)

ಅಂಬೆ : ಆಂ ...ನೀ...ನೀ....ನೀವು ? ಯಾರು ? (ನಾಚಿಕೆ)

ಸಾಲ್ವ : ನ್....ನ್....ನಾನು....ನಾನು (ನಾಚಿಕೆ)

ಅಂಬೆ : ಇದು ರಮ್ಯೋದ್ಯಾನ. ಯಾರು ನೀವು ?

ಸಾಲ್ವ : ಇದು ರಮ್ಯೋದ್ಯಾನ ಎಂಬುದು ಅರ್ಥವಾಯಿತು. ನೀವು ಯಾರು ? ನಾನಿದೋ ಸಾಲ್ವರಾಜ. ಸ್ವಯಂವರ ನಿಮಿತ್ತ ಇತ್ತ ಬಂದೆ. ನೀವು ಯಾರು ?

ಅಂಬೆ : ಆಂ. (ತನ್ನಲ್ಲಿ) ಸಾಲ್ವರಾಜ ! ನನ್ನ ಬಗೆಗೆ ಈ ಬಹುವಚನ ? ಏನು ಔದಾರ್ಯ ! (ಪ್ರಕಟವಾಗಿ) ನಾನು ಈ ಊರ ದೊರೆಯ ಮಗಳು, ಹಿರಿಯಾಕೆ. ಹೆಸರು ಅಂಬೆ.

ಸಾಲ್ವ : (ತನ್ನಲ್ಲೆ) ಓ ! ರಾಜಕುಮಾರಿ ಅಂಬೆ. ಏನಿದು ಈ ಅನಿಮಿತ್ತ ಸ್ನೇಹ ! (ಪ್ರಕಟ) ರಾಜಕುಮಾರಿ, ಕ್ಷಮಿಸಿ. ನೇರವಾಗಿ ನನ್ನೂರಿನಿಂದ ಬರುತ್ತಿದ್ದೇನೆ. ಇಲ್ಲಿಯ ದೇಶಾಚಾರ ತಿಳಿಯೆ. ಇಲ್ಲಿ ಬಂದುದು ಅಪಚಾರವೇ ?

ಅಂಬೆ : ಹಾಗೇನೂ ಇಲ್ಲ. ಸೂರ್ಯನನ್ನೆ ನೋಡದ ಇಲ್ಲಿಯ ಹೆಣ್ಣುಗಳಿಗೆ ಇದೊಂದು ಸೆರೆಮನೆ.

ಸಾಲ್ವ : ಏನೆಂದಿರಿ ? ಸೆರೆಮನೆ ! ರಾಜಧಾನಿಯ ಮೊದಲ ಮಣೆಯ ಗೌರವಾನ್ವಿತ ಹೆಣ್ಣು ಹೀಗೆ ಹೇಳಬಹುದೇ ?

ಅಂಬೆ : ಹಾಗಲ್ಲ....(ಮಾತಾಡುತ್ತಿದ್ದಂತೆಯೇ ಕತ್ತಲು ಆವರಿಸುವುದು. ಬೆಳಕಾದಾಗ ಸೂತ್ರಧಾರನ ಪ್ರವೇಶ)

ಸೂತ್ರಧಾರ : ಹೀಗೆಯೇ ....ಹೀಗೆಯೇ....ಮಾತು. ಮಾತು ಮೀರಿದ ಮೌನ. ಅಂಬೆಯ ವ್ಯಕ್ತಿತ್ವವನ್ನು ಗೌರವಿಸಿದ ಸಾಲ್ವ. ಸಾಲ್ವನಲ್ಲಿ ಅನುರಕ್ತೆ ಅಂಬೆ. ಪರಸ್ಪರ ಮೆಚ್ಚಿದ್ದಾರೆ, ಪ್ರೀತಿಸಿದ್ದಾರೆ. ಕ್ಷಣದ ಈ ಅದ್ಭುತ ಸೆಳೆತ...ಒಲವು ಸಾಧಿಸಿದ ಪವಾಡ...ರೋಮಾಂಚಕ.

ಆನರೆ....ಆದರೆ ಮರುದಿನದ ಸ್ವಯಂವರ ಮಂಟಪದಲ್ಲಿ ನಡೆದ ಕಥೆಯೇ ಬೇರೆ. ನೆರೆದ ಸುಭಟರಲ್ಲಿ ತನ್ನನ್ನು ಎದುರಿಸುವವರು ಯಾರು ಎಂದು ಎದ್ದು

ನಿಂತವನು ಭೀಷ್ಮ. ಅವನನ್ನು ಎದುರಿಸಲು ಸನ್ನದ್ಧನಾದವನು ಸಾಲ್ವ. ಆದರೆ ಯುದ್ಧದಲ್ಲಿ ಸಾಲ್ವ ಸೋತ. ಗೆದ್ದ ಭೀಷ್ಮ ಮೂವರು ರಾಜಕುಮಾರಿಯರನ್ನೂ ಹಸ್ತಿನಾವತಿಗೆ ಒಯ್ಯಲೆಳಸಿದ್ದಾನೆ.

(ಕತ್ತಲು....ಬೆಳಕಾದಾಗ ಭೀಷ್ಮ, ಅಂಬೆ, ಅಂಬಿಕೆ, ಅಂಬಾಲಿಕೆಯರು)

ಅಂಬೆ : ರಾಜಪುತ್ರ, ಒಂದು ಸಂದೇಹ.

ಭೀಷ್ಮ : ಹೇಳು, ರಾಜಕುಮಾರಿ, ಹೇಳು.

ಅಂಬೆ : ಪಣವನ್ನು ಗೆದ್ದ ನಿಮಗೆ ನಾವು ಸಲ್ಲತಕ್ಕವರು. ಅಲ್ಲವೆ? (ನಸುನಗುತ್ತ ವ್ಯಂಗ್ಯವಾಗಿ)

ಭೀಷ್ಮ : ನನಗೆ ಸಲ್ಲುವುದಲ್ಲ....ಛೀ....ನಾನು ಬ್ರಹ್ಮಚಾರಿ. ನೈಷ್ಠಿಕ ಬ್ರಹ್ಮಚರ್ಯ ನನ್ನ ನಿಯಮ. ನಿಮ್ಮನ್ನು ನನ್ನ ತಮ್ಮನಿಗೆ ಮದುವೆ ಮಾಡಿಸಲು ಕರೆದೊಯ್ಯುತ್ತಿದ್ದೇನೆ.

ಅಂಬೆ : ಎಂದರೆ ? ಅವರು ಆ ನಿಮ್ಮ ತಮ್ಮ ಅಂಗವಿಕಲರೇ ?

ಭೀಷ್ಮ : ಅಂ ? ಛೀ. ಹಾಗಲ್ಲ. ನಾನು ಪಣ ಗೆದ್ದೆ. ನನ್ನ ತಮ್ಮನಿಗಾಗಿ ; ತಮ್ಮನ ಸಿಂಹಾಸನಕ್ಕಾಗಿ.

ಅಂಬೆ : ಸಿಂಹಾಸನಕ್ಕಾಗಿ ?! ಈ ಪಣಗೆದ್ದು ನಮ್ಮನ್ನು, ಈ ಮೂವರು ಬಾಲಿಕೆಯರನ್ನು ಸಿಂಹಾಸನಕ್ಕೆ ನೈವೇದ್ಯ ಸಲ್ಲಿಸುತ್ತೀರಾ ?

ಭೀಷ್ಮ : ಹಸ್ತಿನಾವತಿಯ ಸಕಲ ಭಾಗ್ಯ ನಿಮ್ಮದೇ.

ಅಂಬೆ : ಆ ಭಾಗ್ಯದ ಸಮಾಧಿಯ ಕಲ್ಲುಕಟ್ಟೆಗೆ ನಾವು ಅಡಿಗಲ್ಲುಗಳು. ಎಷ್ಟೊಂದು ನಯವಂಚನೆ ? ನೋಡಿ. ಹಿಂದಿರುಗಿ ಸರಿಯಾಗಿ ನೋಡಿ. ನಮ್ಮ ದೈವೀ ದುರ್ವಿಪಾಕವನ್ನು ಮನದಣಿಯ ನೋಡಿ. (ಕ್ಷಣ ತಡೆದು)....ಇಲ್ಲ. ನಾನು ನಿಮ್ಮೊಂದಿಗೆ ಬರಲಾರೆ.

ಭೀಷ್ಮ : ನಿನ್ನ ತಂದೆಯೇ ನಿಶ್ಚೈಸಿದ ಸ್ವಯಂವರ. ಅಲ್ಲಿ ಒಡ್ಡಿದ ಪಣವನ್ನು ನಾನು ಗೆದ್ದಿದ್ದೇನೆ. ನೀನೇಕೆ ಬರಲಾರೆ ?

ಅಂಬೆ : (ತಂಗಿಯರತ್ತ ಹೊರಳಿ) ಅಂಬಿಕಾ, ಅಂಬಾಲಿಕಾ....ಅದೋ, ಅದೋ ಕೇಳಿದಿರಾ ? ನೀನೇಕೆ ಬರಲಾರೆ ? ಅದರ ಹಿಂದಿನ ಧ್ವನಿ ಏನು ಬಲ್ಲಿರಾ ? ನೀನು ಬರದೆಲ್ಲಿ ಹೋಗುವೆ ? ಸಾಮಾನ್ಯ ಪಶುಗಳಂತೆ ತೆರಳುವುದೇ, ಛೀ.

ಭೀಷ್ಮ : ರಾಜಕುಮಾರಿ, ಸಂಯಮದಿಂದ ಮಾತಾಡು. ಹಸ್ತಿನಾವತಿಯ ಹೆಣ್ಣುಗಳ ನಾಲಿಗೆ ಇಷ್ಟು ಉದ್ದವಾಗಿಲ್ಲ.

ಅಂಬೆ : ಅದಕ್ಕೇ ನಾನು ಹಸ್ತಿನಾವತಿಯ ಹೆಣ್ಣಾಗಬಯಸಿಲ್ಲ.

ಭೀಷ್ಮ : ಏನು ನಿನ್ನ ಮಾತು ?

ಅಂಬೆ : ಈ ನನ್ನ ತಂಗಿಯರು ನಿಮ್ಮೊಡನೆ ಬರುತ್ತಾರೆ. ನಿಮ್ಮ ತಮ್ಮನಿಗೋ ಅಥವಾ ಯಾರಿಗೆ ಬೇಕಾದರೂ ಇವರನ್ನು ಮದುವೆ ಮಾಡಿಸಿ, ಒಪ್ಪಿಕೊಳ್ಳುತ್ತಾರೆ. ....ಆದರೆ....ಆದರೆ....ನಾನು ಬರಲಾರೆ....ನಾನು ಬರಲಾರೆ.

ಭೀಷ್ಮ : ಏನೀ ವಿಪರೀತ? ಹಾಗಾದರೆ ಎಲ್ಲಿ ಹೋಗುವೆ?

ಅಂಬೆ : ಎಲ್ಲಾದರೂ ಹೊಳೆಗೆ ಹಾರುತ್ತೇನೆ. ನಿಮಗೇಕೆ?

ಭೀಷ್ಮ : ಕಾಲ ಕೂಡಿ ಬರದಿದ್ದರೆ ಹೊಳೆಗೆ ಹಾರಿದರೂ, ದಡಕ್ಕೆ ತರುತ್ತದೆ, ರಾಜಕುಮಾರಿ, ದಡಕ್ಕೆ ತರುತ್ತದೆ.

ಅಂಬೆ : ನಿಮ್ಮ ರಾಜಸ್ವ, ಅದರ ಕಠೋರ ನಿಯಮಗಳು. ಇವುಗಳಾಚೆಯು ಪ್ರಪಂಚವೂ ಇದೆ. ಅಲ್ಲಿ ತಿಳಿನಗೆಯಿದೆ, ಅಲ್ಲಿ ಅಲುಗುವ ತುಟಿಗಳಿವೆ. ಅಲ್ಲಿ ಅರಳುವ ಕಣ್ಣುಗಳಿವೆ. ಅಲ್ಲಿ ಕಂಪಿಸುವ ಹೃದಯವಿದೆ. ಅಲ್ಲಿ ರೋಮಾಂಚನಗೊಳ್ಳುವ ತ್ವಚೆಯಿದೆ. ನನ್ನನ್ನು ಹೋಗಬಿಡಿ....ನನ್ನನ್ನು ಹೋಗಬಿಡಿ.

ಭೀಷ್ಮ : ಈ ಇಬ್ಬರು ನಿನ್ನ ತಂಗೆಯರು? ಅವರೂ ಆ ನಿನ್ನ ಕನಸಿನ ಹೊಳೆಗೆ ಹಾಯಿ ಬಿಚ್ಚುವರೇ?

ಅಂಬಿಕೆ, ಅಂಬಾಲಿಕೆ : (ಜೊತೆಯಾಗಿ) ನಾವೆಲ್ಲೂ ಹೋಗುವುದಿಲ್ಲ.

ಭೀಷ್ಮ : ಅಂಬೆ, ಹಾಗಿದ್ದರೆ ನೀನು ನಿನ್ನಿಷ್ಟ ಬಂದತ್ತ ತೆರಳು. ನಮ್ಮನ್ನೂ ಹೋಗಗೊಡು.

ಅಂಬೆ : ಹಾಗೇ ಆಗಲಿ. ನನಗನುಜ್ಞೆ ಕೊಡು. ನಿನಗೆ ಪುಣ್ಯ ಬರಲಿ.
(ಕತ್ತಲು. ಬೆಳಕಾದಾಗ ಮತ್ತೆ ಸೂತ್ರಧಾರ)

ಸೂತ್ರಧಾರ : ಅಂಬೆ ಹೆಣ್ಣು. ಹೆಣ್ಣಿನ ಹೃದಯು ಒಮ್ಮೆ ಒಲಿದ ಬಳಿಕ ಹಿಮ್ಮೆಟ್ಟದು. ಅವಳ ಗಮನ ಈಗ ಸಾಲ್ವನೆಡೆಗೆ. ಸ್ವಯಂವರಕ್ಕೆ ಮೊದಲು ಒಲಿದ ಹೃದಯ, ಈಗ ಒಲಿದತ್ತ ಸಾಗುತ್ತಿದೆ. ಆತ, ಆ ಸಾಲ್ವ ದೊರೆಯಾದರೋ....
(ಕತ್ತಲು. ಬೆಳಕಾದಾಗ ಸಾಲ್ವ ಉಚಿತಾಸನದಲ್ಲಿ ಕುಳಿತಿದ್ದಾನೆ)

ಸಾಲ್ವ : ಸೋತೆ, ಸೋತು ಸಿಗ್ಗಾಗಿ ಹೋದೆ. ತುಂಬಿದ ರಾಜಸಭೆಯಲ್ಲಿ ನೆರೆದ ರಾಜಕುಮಾರರನ್ನೆಲ್ಲ ನೋಡಿದಾಗ ಹುಮ್ಮಸ್ಸು ಹುಚ್ಚೆದ್ದಿತ್ತು. ಹೊರಗಣ ಕಳದಲ್ಲಿ, ಹೋರಾಟದ ಥಲದಲ್ಲಿ, ಭುಜಾರ್ಗಳದ ಬಲ್ಪು ಹಿನ್ನೆಲೆಗಿತ್ತು. ಆದರೆ . . . ಆದರೆ . . . ಇವೆಲ್ಲಕ್ಕೂ ಮೀರಿದ ಕಾಂತಶಕ್ತಿ, ಆ ಸಾದುಗಪ್ಪಿನ ಬೊಗಸೆ ಕಂಗಳ ಕಡೆಗಣ್ಣೋಟ. ಛೇ. ಒಮ್ಮೆ ನೋಡಿದ್ದೆ, ಹಾಗೇ ನೋಡಿದ್ದೆ. ಬೆಚ್ಚಿ ಬಿದ್ದಿದ್ದೆ. (ಮತ್ತೆ ಸಾವರಿಸಿಕೊಂಡು)...ಇಲ್ಲ ..ಇಲ್ಲ...ಆ ನೆನಪೇ ಗ್ರಹಣ ಹಿಡಿಸುತ್ತದೆ. ರಣಾಂಗಣದಲ್ಲಿ, ತುಮುಲ ಯುದ್ಧದಲ್ಲಿ ಎಲ್ಲರನ್ನೂ ಸೋಲಿಸಿದಾಗ, ವಕ್ರಿಸಿದ ಆ ಶನಿ ದೇವವ್ರತ. ಭೀಷ್ಮನಂತೆ, ಭೀಷ್ಮ. ಆತನನ್ನು ಹಿಡಿದೆತ್ತಿ ಬುಗುರಿಯಂತೆ ಸುತ್ತಿ ಕೆಳಕ್ಕೆಸೆದು ಬಿಡುತ್ತಿದ್ದೆ. ಆದರೆ ಕೇವಲ ಒಂದೇ ಒಂದು ಕ್ಷಣ, ವಿಜಯದ ಗರ್ವದಿಂದ ತಲೆ ಎತ್ತಿ ಸುತ್ತ ನೋಡಿದಾಗ

……ಮತ್ತೆ ಅದೇ ಕಣ್ಣುಗಳು……ನನ್ನಲ್ಲಿ ಕೀಲಿಸಿದಂತೆ…… ನನ್ನೊಳ ಹೊಕ್ಕು ಮೃದುವಾಗಿ ಸವರಿದಂತೆ ……ಆಗ……ಆಗ……ವಿಚಲಿತನಾಗಿದ್ದ ಆ ಹೊತ್ತಿನಲ್ಲಿ ನನ್ನನ್ನು ಎತ್ತಿ ಎಸೆದ ದೇವವ್ರತ. ಸೋಲು………… ಸೋಲು……ತಲೆ ಎತ್ತಲಾರದೆ ಆ ಕಣ್ಣುಗಳ ಪಾಲಿಗೆ ನಾನು ಸತ್ತ ಹಾಗೆ ಎಂದುಕೊಂಡು ಇತ್ತ ಬಂದೆ……ಹೂಂ……(ಅಂಬೆಯ ಪ್ರವೇಶ) ಆಂ? ಯಾರು? …. ಯಾರದು? ……ಆಂ……ನೀನು … ಓಹ್. (ತನ್ನಲ್ಲೇ) ಆ ಅದೇ ಕಣ್ಣುಗಳು ……ನನಗೇನಾಗುತ್ತಿದೆ? ನಿಧಾನವಾಗಿ ಕರಗಿದ ಅನುಭವ……ಇಲ್ಲ……ಇಲ್ಲ……ನಾನೀಗ ಅಯೋಗ್ಯ. ಕ್ಷಾತ್ರ ತೇಜಸ್ಸಿಗೇ ಅಪವಾದ……ಅಯ್ಯೋ ವಿಧಿಯೇ! (ಪ್ರಕಟ)……… ರಾಜಕುಮಾರಿ, ಏನಿತ್ತ ಬಂದೆ? ಏನೀ ನಿನ್ನ ದುರವಸ್ಥೆ? ಏಕೆ ಮೌನ?

ಅಂಬೆ: ನನಗೀಗ ಮೌನವೇ ಮಹಾನವಮಿ. ಏನೆಂದು ಮಾತಾಡಲಿ? ಆದರೂ…. ಆದರೂ … ನಾನು ನಿನ್ನಲ್ಲಿ ನಿಜವಾಗುತ್ತೇನೆ ಎನಿಸುತ್ತದೆ. ಸೌಂದರ್ಯ ಅರಸುವುದು ಪೌರುಷವನ್ನು. ಸೌಂದರ್ಯದ ವಿಶ್ರಾಂತಿ ಪೌರುಷದಲ್ಲಿ. ನನ್ನ ಹರಿಗಡಿದ ಬಾಳನ್ನು ನೆಲೆಗೆ ತರುವೆಯಾ?

ಸಾಲ್ವ: ಎಂದರೆ?….ನೀನು….ಕಾಶೀರಾಜಕುಮಾರಿ, ಅಲ್ಲಿ ಆ ಸ್ವಯಂವರ ಮಂಟಪದಲ್ಲಿ ಸಹೋದರಿಯರೊಂದಿಗೆ ನಿಂತಿದ್ದ ಚೆಲುವೆ….ನಿಮ್ಮನ್ನು ಗೆದ್ದ ದೇವವ್ರತನೊಡನೆ ರಥವೇರಿದ್ದಿರಲ್ಲವೇ? ಈಗ ಏನಾಯ್ತು? ರಥದ ಗಾಲಿಗಳು ಮುಗ್ಗರಿಸಿದುವೆ? ಕುದುರೆಗಳು ಎಳೆಯದಾದುವೆ? ಏಕಿತ್ತ ಬಂದೆ?

ಅಂಬೆ: ಕಟಕಿಯಾಡದಿರು, ರಾಜ! ನಾನಿನ್ನ ಬಯಸಿದ್ದೆ. ಮನಸಾ ವರಿಸಿದ್ದೆ. ಆದರೆ ಇಲ್ಲಿಯ ವ್ಯವಸ್ಥೆಯಲ್ಲಿ ಹೆಣ್ಣಿಗೆಲ್ಲಿದೆ ಸ್ವಾತಂತ್ರ್ಯ? ತನ್ನ ಮನದಾಳದ ನೋವನ್ನು ಆಕೆ ಎಲ್ಲಿ ಹೇಳ್ಯಾಳು? ಹೋಗಲಿ….ನಾನು ಸಿಡಿದಿದ್ದೆ ರಾಜಾ…. ನಿನಗಾಗಿ! ನಿನ್ನನ್ನು ಬಯಸಿ ಬಂದೆ. ದೇವವ್ರತನೊಯ್ದುದು ನಮ್ಮನ್ನು ತನ್ನ ತಮ್ಮನಿಗೆ ಮದುವೆ ಮಾಡಿಕೊಡಲೆಂದಂತೆ! ನನಗೆ ಸಹಿಸಲಾಗಲಿಲ್ಲ. ಆತ ಗೆದ್ದುದು ನಿಜ. ಆದರೆ ಈ ಶರೀರದೊಳಗಣ ಅಂತಃಕರಣದಲ್ಲಿ ಸಾಲ್ವನ ಸ್ಥಾಪನೆಯಾಗಿದೆ. ಈ ಅಂತಸ್ಸಾಕ್ಷಿಯ ಕರೆಗೆ ಓಗೊಟ್ಟು ಬಂದೆ.

ಸಾಲ್ವ: ಅಂತಃಕರಣ, ಅಂತಸ್ಸಾಕ್ಷಿ ಇವೆಲ್ಲ ಈಗ. ಅಲ್ಲವೆ ರಾಜಕುಮಾರಿ. ಇನ್ನೇನು ಫಲ? ದೇವವ್ರತ ನಿಮ್ಮನ್ನು ತನ್ನ ತಮ್ಮನಿಗಾಗಿ ಒಯ್ಯುವುದು ಸರಿಯಲ್ಲ. ಅಲ್ಲವೆ? ಒಂದು ವೇಳೆ ಅವನೇ ಮದುವೆಯಾಗುತ್ತಿದ್ದರೆ….? ಆಗ ಸರಿಯಾಗಿರುತ್ತಿತ್ತು. ಅಲ್ಲವೆ?

ಅಂಬೆ: ಮತ್ತೆ ಅದೇ ಕ್ರೂರ ವ್ಯಂಗ್ಯ. ಇಲ್ಲಿಯ ಸಂದರ್ಭದಲ್ಲಿ ಹೆಣ್ಣಿಗೆ ಮಾತಾಡಲು ಯಾರು ಬಾಯಿ ಕೊಟ್ಟಿದ್ದಾರೆ? ಅವಳ ನೋವಿಗೆ ಯಾರು ಸ್ವರ ಕೊಟ್ಟಿದ್ದಾರೆ? ಅವಳ ಅಂತರಂಗಕ್ಕೆ ಯಾರು ಬಾಯಿ ಕೊಟ್ಟಿದ್ದಾರೆ? ಎಲ್ಲ

ಬರಿಯ ಬೂಟಾಟಿಕೆ. ಬರಿಯ ಮೋಸ. (ತಡೆದು) ರಾಜಾ....ರಾಜಾ.... ನಾನು ನಿನ್ನಲ್ಲಿ ವ್ಯಕ್ತಿತ್ವವನ್ನು ಕಂಡೆ. ನಾನು ಕನಸು ಕಾಣುತ್ತಿದ್ದ ಮನುಷ್ಯತ್ವವನ್ನು ಕಂಡೆ. ಅದಕ್ಕಾಗಿಯೇ ಓಡೋಡಿ ಬಂದೆ.

ಸಾಲ್ವ : ಆಂ ! ಅಬ್ಬ ! ಹೀಗೇನು ವಿಚಾರ ? ಆದರಿದು ಸಲ್ಲದ ಆಚಾರ. ಭಾರತೀಯ ನಾರಿಗೆ ಒಗ್ಗದ ಸಮಾಚಾರ.

ಅಂಬೆ : ಭಾರತೀಯ ನಾರಿ ! ಭಾರತೀಯ ನಾರಿ ! ನನಗೆ ಕೇಳಿಕೇಳಿಯೇ ಸಾಕಾಗಿದೆ. ಸುಡು ಆ ಸಮಾಚಾರವನ್ನು. ಹೃದಯದ ಕರೆಗೆ ಎಲ್ಲಿದೆ ಜಾಗ?

ಸಾಲ್ವ : ರಾಜಕುಮಾರಿ, ಅದಲ್ಲ ವಿಚಾರ. ನಿನ್ನ ನಡತೆಯ ಯುಕ್ತಾಯುಕ್ತತೆಯ ವಿಮರ್ಶೆಗಿಂತಲೂ ನನ್ನ ಪಾತ್ರತೆಯೇ ಈಗ ಮುಖ್ಯವಾಗಿದೆ. ನಾನು ಸೋತವನು. ಸೋತು ತಲೆಬಾಗಿ ಹೊರನಡೆದ ನಾನಾದರೋ ಈಗ ಹೆಣ್ಣೇ ಆದೆನಲ್ಲ! ನಿನ್ನ ಅಂತರಂಗ ನಾ ಬಲ್ಲೆ. ಆದರೆ ನಾನು ಅಸಮರ್ಥ. ಯುದ್ಧದಲ್ಲಿ ಆ ಸರಿತ್ಸುತ ನನ್ನನ್ನೋಡಿಸಿದನಲ್ಲ ! ಹೆಣ್ಣಾದ ನಾನು ಹೆಣ್ಣನ್ನು ಹೇಗೆ ಪರಿಗ್ರಹಿಸಲಿ ಹೇಳು ?

ಅಂಬೆ : ನೀನು ಹೆಣ್ಣೇ ? ಓಹ್....ಇದೆಂಥ ವಿಚಾರ ! ಹೀಗೆನ್ನದಿರು ರಾಜಾ ! ರೂಢಿಯ ಮಾತು ಅಂತಿರಲಿ. ನಿನ್ನ ಅಂತರಂಗವನ್ನು ಕೇಳು. ಅಲ್ಲಿ.... ಕಾಶಿಯ ರಮ್ಯ ಉದ್ಯಾನದಲ್ಲಿ, ಸ್ವಯಂವರದ ಮುನ್ನಾದಿನ ನನ್ನೀ ಕೈಗಳನ್ನು ಹಿಡಿದು ನೀನಿತ್ತ ಭಾಷೆಯನ್ನು ಕೇಳು. ಹೊರಲೋಕಕ್ಕೆ ನಿನ್ನ ವ್ಯಕ್ತಿತ್ವ ಹೇಗೇ ಇರಲಿ. ನನ್ನ ಪಾಲಿಗೆ ನೀನೇ ಪೌರುಷದ ಸಾಕಾರ ಮೂರ್ತಿ. ನೀನು ಹೋರಾಡಿದ್ದು ನನಗಾಗಿ. ನಾಬಲ್ಲೆ. ಆತ, ಆ ದೇವವ್ರತನಾದರೋ ತನ್ನ ತಮ್ಮನಿಗಾಗಿ. .... ಉದ್ದೇಶದ ಹಿನ್ನೆಲೆ ನನಗೆ ಅರಿವಾಗದೇ ರಾಜಾ ?

ಸಾಲ್ವ : ಇಲ್ಲ ರಾಜಕುಮಾರಿ, ಸರ್ವಥಾ ಸಾಧ್ಯವಿಲ್ಲ. ನಾವಿನ್ನು ಕಲೆಯುವುದು ಈ ಜನ್ಮದಲ್ಲಿ ಸಾಧ್ಯವಿಲ್ಲ. ಈ ಸಾಲ್ವ ಕಟ್ಟುಕಟ್ಟಳೆಗಳನ್ನು ಮುರಿದೊಗೆದು ಹೊರಬರಲಾರದ ಹೇಡಿ ಎಂದು ಬೇಕಾದರೆ ಹೇಳು. ಆದರೆ....ನಾನಿನ್ನ ವರಿಸಲಾರೆ. ನನ್ನ ಹೃದಯದ ಕರೆಯನ್ನು ಸಮಾಧಿ ಮಾಡಿ ಬದುಕುತ್ತೇನೆ. ನನ್ನ ಎಲ್ಲ ಕನಸುಗಳ ಗೋರಿಯಾಗಲಿ. ನೀನು ತೆರಳು ಹೆಣ್ಣೇ, ನಿನಗಿಲ್ಲಿ ಜಾಗವಿಲ್ಲ. ಇದೇ ಕೊನೆಯ ಮಾತು !

ಅಂಬೆ : ನನಗಿಲ್ಲಿ ಜಾಗವಿಲ್ಲ.....ನನಗಿಲ್ಲಿ ಜಾಗವಿಲ್ಲ. ಒಲಿದು ಬಂದ ನನಗೆ ಇಲ್ಲಿ ಜಾಗವಿಲ್ಲ. ಅಯ್ಯೋ ವಿಧಿಯೇ, ಬದುಕು ಛಿದ್ರವಾಯಿತಲ್ಲ. (ಯೋಚಿಸುವಳು) ಇನ್ನೆಲ್ಲಿ ಹೋಗಲಿ ? ಅಲ್ಲಿಗೇ ಹೋಗುವೆ. ಆತ ಆ ದೇವವ್ರತನಲ್ಲಿಗೇ ಹೋಗುವೆ. ನನ್ನ ಬಾಳಿಗೆ ಕಿಚ್ಚಿಟ್ಟ ಪ್ರತಿಜ್ಞಾಬದ್ಧ ! ಅವನ ಪ್ರತಿಜ್ಞೆಯ ಯೂಪಸ್ತಂಭಕ್ಕೆ ನನ್ನ ಬದುಕಿನ ಬಲಿ ! ಕೇಳುವೆ, ಆತನನ್ನೇ ಈ ಬಗ್ಗೆ ಕೇಳುವೆ. (ತೆರಳುವಳು)

ಸಾಲ್ವ : (ಅವಳು ಹೋದ ಕಡೆಗೇ ನೋಡುತ್ತ) ಅಂ, ಹೊರಟೇಹೋದಳು. ನನ್ನ ಬಗೆಗೂ ಸಿಗ್ಗಾಗಿ ಹೊರಟೇಹೋದಳು. ಹೂಂ...ನಾನೇನು ಮಾಡಲಿ?.... ಏನು ಮಾಡಲಿ ? ನನ್ನಂತರಂಗ ಉರಿಯುತ್ತಿದೆ. ಒಲಿದ ಹೆಣ್ಣಿಗೆ ಕೈ ನೀಡಲಾರದ ಹೆಣ್ಣಿಗನಾದೆನೇ ? ಅಯ್ಯೋ ವಿಧಿಯೇ. ಒಂದೊಮ್ಮೆ ನನ್ನ ಈ ರಾಜವೇಷ, ರಾಜಪದವಿ,ಇಲ್ಲದಿರುತ್ತಿದ್ದರೆ........ಓಹ್. ಆ ನನ್ನ ಸಾಮಾನ್ಯ ಪ್ರಜೆಗೆ ಇರುವ ಸ್ವಾತಂತ್ರ್ಯವೂ ನನಗಿಲ್ಲ.... ನನಗಿಲ್ಲ ಬಿಡುಗಡೆ........ ನನಗಿಲ್ಲ ಬಿಡುಗಡೆ.

(ಕತ್ತಲು, ಬೆಳಕಾದಾಗ ಸೂತ್ರಧಾರ)

ಸೂತ್ರಧಾರ : ಸಾಲ್ವನ ಬಳಿಯಿಂದ ಹೊರಟ ಅಂಬೆ ಭೀಷ್ಮನ ಬಳಿಗೆ ಬರುತ್ತಾಳೆ. ಭೀಷ್ಮ ಅಷ್ಟರಲ್ಲಿ ದಾರಿ ಸಾಗಿ ಹಸ್ತಿನಾವತಿಯ ಸಮೀಪಕ್ಕೆ ಬಂದಿದ್ದಾನೆ.

(ಕತ್ತಲು. ಬೆಳಕಾದಾಗ ಭೀಷ್ಮನ ಪ್ರವೇಶ)

ಭೀಷ್ಮ : ಇಬ್ಬರು ರಾಜಕುಮಾರಿಯರನ್ನು ರಾಜಧಾನಿಗೆ ಪ್ರತ್ಯೇಕವಾಗಿ ಕಳುಹಿಸಿದ್ದೇನೆ. ಶುಭ ಮುಹೂರ್ತ ಇಟ್ಟುಕೊಂಡು ಮದುವೆ ಮುಗಿಸಿದರೆ ಎಲ್ಲ ನೇರವಾಯಿತು.

(ರಂಗದ ಬದಿಯಿಂದ ಅಂಬೆಯ ಪ್ರವೇಶ. ಕೆದರಿದ ತಲೆ. ಅಸ್ತವ್ಯಸ್ತ ಉಡುಪು)

ಭೀಷ್ಮ : ಅಂ ! ನೀನು ಮತ್ತೆ ಬಂದೆಯಾ ? ಏಕೀ ಪುನರಾಗಮನ ?

ಅಂಬೆ : ನಿಲ್ಲು, ನೀನಲ್ಲೆ. ತೆರಳದಿರು. ನನ್ನ ತಂಗೆಯರು ನಿನ್ನ ಆದರ್ಶಕ್ಕೆ ಒಪ್ಪಿ ಬಂದರು. ನಾನಾದರೋ ಪ್ರತಿವಾದ ಹೂಡಿ ತೆರಳಿದೆ. ದೇವವ್ರತಾ, ನನ್ನ ಬದುಕಿಗೆ ದಾರಿತೋರು.

ಭೀಷ್ಮ : ಏನು ನಿನ್ನ ವಿಚಾರ ?

ಅಂಬೆ : ಸಾಲ್ವ ರಾಜನ ಬಳಿಗೆ ಹೋದೆ. ನಿನಗೆ ಯುದ್ಧದಲ್ಲಿ ಸೋತ ಆತ ಈ ಅಪಮಾನದಿಂದಾಗಿ ನನ್ನನ್ನು ಸ್ವೀಕರಿಸಲಾರ. ಇದೋ, ಈಗಲಾದರೂ ತಿಳಿ ಹೇಳು. ಸರಿಪಡಿಸು ಈ ಅವ್ಯವಸ್ಥೆಯನ್ನು. ನಿಮ್ಮ ರಾಜಸ್ವ, ಅದರೊಡನೆಯ ಯುದ್ಧ ಪ್ರಸಕ್ತಿಗಳು. ಈ ಎಲ್ಲ ಹಮ್ಮು–ಬಿಮ್ಮುಗಳಲ್ಲಿ ಮಾನವತೆಯನ್ನು ಮರೆತು ಹೆಣ್ಣನ್ನು ಭೋಗಸಾಧನವಾಗಿ ನೋಡುತ್ತೀರಿ. ಹೆಚ್ಚೆಂದರೆ ಆಕೆ ಮುಂದೆ ಸಿಂಹಾಸನ ಬರಿದಾಗದಂತೆ ಮಕ್ಕಳನ್ನು ಹೆತ್ತುಕೊಡುವ ಯಂತ್ರ ನಿಮಗೆ ? ಛೀ. ಏನನ್ಯಾಯವಿದು ?

ಭೀಷ್ಮ : ಅಂಬಾ, ನಿನಗೆ ನಿನ್ನದೇ ವಿಚಾರ. ನಾನಾದರೋ ವ್ಯಷ್ಟಿಗಿಂತ ಸಮಷ್ಟಿಯ ಬಗೆಗೆ ಚಿಂತಿತನಾಗಿದ್ದೇನೆ. ನನಗೆ ಒಬ್ಬ ಅಂಬೆಯ ಹಿತಾಹಿತಕ್ಕಿಂತ ಭರತ ಖಂಡದ ಹಿತಾಹಿತ ಮುಖ್ಯ. ನೀನು ನನ್ನನ್ನು ಏನು ಬೇಕಾದರೂ ಹೇಳು. ವ್ಯಕ್ತಿಧರ್ಮ ಈ ಭೀಷ್ಮನಿಗೆ ಸಮಾಜಧರ್ಮದ ಅಡಿಯಾಳು, ಅಂಬಾ ಅಡಿಯಾಳು.

ಅಂಬೆ : ಸುಡು ನಿನ್ನ ಸಮಾಜಧರ್ಮವನ್ನು. ವ್ಯಕ್ತಿಯ ಹಿತದ ಒಕ್ಕೂಟವಾಗದ ಸಮಷ್ಟಿಯ ಅರ್ಥವೆಲ್ಲಿ ? ಸುಡುವ ನನ್ನ ಬದುಕು ಸುಟ್ಟು ಕರಕಾದಾಗ, ಆ ಮಸಿಯನ್ನೇ ಲಾಂಛನವಾಗಿಸಿ ಹಾರಿಸು ನಿನ್ನ ಸಮಾಜ ಧ್ವಜವನ್ನು. ಸಾವಿರ ಸಾವಿರ ಅಂಬೆಯರ ಬಾಳ ಕಗ್ಗೊಲೆಯಿಂದ ದೇವವ್ರತನ ಭೀಷ್ಮ ದೀಕ್ಷೆ ಸಂಪನ್ನವಾಗಲಿ. ದೇವವ್ರತಾ, ಒಂದು ಮಾತು ಮಾತ್ರ ನೆನಪಿಡು. ಇಹದಲ್ಲಿ ಇಲ್ಲ ಅಲ್ಲವಾದರೆ ಮತ್ತೆಲ್ಲೆಲ್ಲೂ ನಿನಗೆ ನೆನಪಾಗಿ ಕಾಡುತ್ತೇನೆ. ಈ ಅಂಬೆಯ ಸ್ಮರಣಾನುಭವ ! ಸಾಗರದ ಹೆದ್ದೆರೆಗಳಲ್ಲಿ, ಆಗಸದ ಸಿಡಿಮಿಂಚಿನಲ್ಲಿ, ರಣರಂಗದಲ್ಲಿ, ಖಡ್ಗಗಳ ಝಣತ್ಕಾರಗಳಲ್ಲಿ, ಕುದುರೆಗಳ ಹೇಷಾರವದಲ್ಲಿ, ಆನೆಗಳ ಬೃಂಹಿತದಲ್ಲಿ, ರಥ ಚಕ್ರಗಳ ಚೀತ್ಕಾರದಲ್ಲಿ, ಮತ್ತೆ ಮತ್ತೆ ಅನುರಣಿಸುತ್ತದೆ, ಭೀಷ್ಮಾ,...... ಮತ್ತೆ ಮತ್ತೆ ಅನುರಣಿಸುತ್ತದೆ. ಅದೋ ....ಅದೋ, ಮೇಲೆ ಉರಿವ ಸೂರ್ಯ, ಆ ಎತ್ತರದ ಪರ್ವತ ಪಂಕ್ತಿ, ಅದರೆಡೆಯಿಂದ ಧುಮುಕುವ ಜಲಪಾತ, ಆಕಾಶ, ನೆಲ ಇವೆಲ್ಲ ಸಾಕ್ಷಿಗಳಾಗಿ ಉಸುರುತ್ತ ಉಸುರುತ್ತ ಉಸಿರಡಗಿಸುತ್ತೇನೆ. ನೆನಪಿಡು......ನೆನಪಿಡು. ನಿಂತಲ್ಲಿ, ಕುಳಿತಲ್ಲಿ, ನಡೆವಲ್ಲಿ, ಕಾದುವಲ್ಲಿ, ಎಲ್ಲೆಂದರಲ್ಲಿ ನಿನ್ನನ್ನು ಭಯಾನಕವಾಗಿ ಕಾಡುವ ಕನಸಾಗಿ, ಕಂತುವ ಮುಳ್ಳಾಗಿ, ನಡೆವ ನೆರಳಾಗಿ ಅಂಬೆಯ ನಿಟ್ಟುಸಿರು ಹರಡಿರುತ್ತದೆ. (ಕತ್ತಲೆ. ಬೆಳಕಾದಾಗ ಸೂತ್ರಧಾರ)

ಸೂತ್ರಧಾರ : ಹೀಗೆ ಹೇಳುತ್ತ ಮರೆಯಾದ ಅಂಬೆಯ ಬಾಳು ಘೋರ ದುರಂತವಾಗುತ್ತದೆ. ಒಲಿದ ಜೀವ ಮುನಿದ ಜೀವವಾಗಿ, ಶಪಿತ ಜೀವವಾಗಿ, ಭೀಷ್ಮನ ಪಾಲಿನ ಸಾವಿನ ನೆರಳಾಗಿ ಹಿಂಬಾಲಿಸುತ್ತದೆ. ಬೆಳಕಿನಿಂದ ಕತ್ತಲೆಗೆ, ಕತ್ತಲೆಯಿಂದ ಬೆಳಕಿಗೆ ಬದುಕು ತೊನೆದಾಡುತ್ತಿರುತ್ತದೆ. ಅಂದು, ಇಂದು, ಎಂದೆಂದೂ.

(ನಿಧಾನಕ್ಕೆ ಕತ್ತಲೆ ಆವರಿಸುತ್ತದೆ)

ಎಂ. ಆರ್. ಶ್ರೀನಿವಾಸಮೂರ್ತಿ

ಸಂಗ್ರಹ : ನಗುವನಹಳ್ಳಿ ಪಿ. ರತ್ನ

ಅದೃಶ್ಯ ಕವಿ

ಇವನು ಪ್ರೌಢರಾಯನ ಕಾವ್ಯವನ್ನು ಬರೆದಿದ್ದಾನೆ. ಕಾವ್ಯಕ್ಕೆ ಇಟ್ಟಿರುವ ಹೆಸರು ಅಪನಾಮವೆಂದು ಹೇಳಬೇಕಾಗಿದೆ. ಇದರಲ್ಲಿ ಪ್ರೌಢರಾಯನ ಜೀವನ ಚರಿತ್ರೆ ಏನೂ ಇಲ್ಲ. ಕಡೆಗೆ ಚೆನ್ನಬಸವ ಪುರಾಣದಲ್ಲಿ ಬಿಜ್ಜಳನ ಆಸ್ಥಾನ ವರ್ಣನೆಗಳು, ಅವನ ಚಂದ್ರಿಕಾವಿಹಾರ ಮೊದಲಾದುವನ್ನು ತಿಳಿಸಿರುವಂತೆ ಈ ಕಾವ್ಯದಲ್ಲಿ ಪ್ರೌಢರಾಯನ ಆಸ್ಥಾನ ವರ್ಣನೆ ಕೂಡ ಇಲ್ಲ. ಪ್ರೌಢದೇವರಾಯನು ದೇವೇಂದ್ರನ ಅವತಾರವೆಂದೂ ದೊಡ್ಡ ಶಿವಭಕ್ತನೆಂದೂ ವೀರಶೈವರ ಕಾವ್ಯಗಳಲ್ಲಿಯೇ ತಿಳಿದು ಬರುವುದರಿಂದ ಅಂಥವನ ಜೀವನ ಚರಿತ್ರೆಯನ್ನು ವೈಭವವನ್ನು ಭಕ್ತಿಯನ್ನು ಪರಾಕ್ರಮವನ್ನು ಕವಿ ತಿಳಿಸಿರಬೇಕಾಗಿತ್ತೆಂದು ನಾವು ಅಭಿಪ್ರಾಯ ಪಡುತ್ತೇವೆ. ಕಡೆಗೆ ಅವನಿಗೆ ಕಥೆಗಳನ್ನು ತಿಳಿಸಿದನೆಂದು ಹೇಳುವ ಜಕ್ಕಣಾರ್ಯನ ವಿಚಾರವನ್ನು ಕೂಡ ಸರಿಯಾಗಿ ತಿಳಿಸಿಲ್ಲ. ಲಕ್ಕಣ್ಣ ಮತ್ತು ಜಕ್ಕಣ್ಣ ಇವರಿಬ್ಬರೂ ಪ್ರೌಢದೇವರಾಯನಲ್ಲಿದ್ದ ಪ್ರಸಿದ್ಧ ಮಂತ್ರಿಗಳು ಮತ್ತು ದಂಡನಾಯಕರು.

ಅದೃಶ್ಯ ಕವಿ ಪ್ರಾರಂಭದಲ್ಲಿ ಸುಮ್ಮನೆ ಶಿವಸ್ತೋತ್ರವನ್ನು ಮಾಡಿದ್ದಾನೆ; ಯಾವೊಂದು ಲಿಂಗದ ಹೆಸರನ್ನೂ ಹೇಳಿಲ್ಲ. ಗೌರಿ, ಗಂಗೆ, ವಿನಾಯಕ, ಸ್ಕಂದ, ವೀರಭದ್ರರನ್ನೂ ಅಲ್ಲಮ ಮತ್ತು ಬಸವಾದಿಗಳನ್ನೂ ಸ್ತುತಿಸಿದ್ದಾನೆ. ಅಲ್ಲದೆ

ಬಸವರಾಜಂಗೊಲಿದು ಮುಗ್ಧ ಸಂಗಯ್ಯನೆಂ-
ದೆಸೆವ ನಾಮವ ತಾಳ್ದು ಅಲ್ಲಿಂದ ಪೊರಮಟ್ಟು
ಋಷಿರೂಪದಿಂದಿಂಗಳೇಶ್ವರದ ಬಿಲದೊಳಗೆ ಏಳ್ನೂರು ಬರಿಸವಿದ್ದು
ವಸುಧೆಯೊಳು ನಿತ್ಯ ಅಗಣಿತ ಪವಾಡವ ಮೆರೆದು
ಹಸನಾದ ಉಪ್ಪರಾಗಿರಿಯೆಂಬ ಪುರದಿ ರಾ-
ಜಿಸುವ ಸಂಗಮನಾಥ ಸಲಹು ಸಂಪದವಿತ್ತು ಸಂತತಂ ಬಿಡದೆಮ್ಮನು

“ಇಂದುಶೇಖರ ಸಂಗಮೇಶ್ವರ ಪರಬ್ರಹ್ಮ ಬಂದೆನ್ನ ಹೃತ್ಕಮಲ ಕರ್ಣಿಕದಿ ನೆಲೆಗೊಂಡು” ಸೂತ್ರಧಾರಿಯಂತೆ ನನ್ನನ್ನು ನಡೆಸು. ಇಂದು ನಿನ್ನಯ ಸೂತ್ರ

ಬಲದಿ ಮುಂದಿನ ಬೊಂಬೆಯಂದದಿಂದೀ ಕೃತಿಯ ನಾಂ ಪೇಳುವೆನು ಎಳ್ಳನಿತು ಕುಂದು ಕೊರತೆಯು ನಿನ್ನದೈಸೆ ನಿಮ್ಮಂಘ್ರಿ ದಯದಿಂದ ಮುಂದುಸುರ್ವೆನಿದನು." "ಪರಬೊಮ್ಮ ಸಂಗಮೇಶ್ವರ ದೇವ ಈ ಕೃತಿಯ ನಡೆಸುವದು ಎಡರಿಲ್ಲದೆ." ಕೊನೆಯಲ್ಲಿ "ಸಂಗಮೇಶ್ವರ ಪೇಳಿಸಿದ"—ಎಂದು ಸಂಗಮನಾಥ ಎಂಬ ಪವಾಡ ಪುರುಷನನ್ನು ಹಲವು ಬಾರಿ ಹೊಗಳಿ ಅವನೇ ಸೂತ್ರಧಾರಿ, ತಾನು ಬೊಂಬೆ ಎನ್ನುವುದರಿಂದ, ಈ ಸಂಗಮನಾಥನು ಕವಿಯ ಗುರುವಾಗಿದ್ದಿರಬಹುದೆಂದು ತೋರುತ್ತದೆ ಮತ್ತು ಮುಂದೆ ಶಾರದೆಯ ಸ್ತೋತ್ರದಲ್ಲಿಯೂ "ಗುರುವಂಘ್ರಿ ಬಲದಿಂದುಸುರ್ವೆನು."

ಶಾರದೆಯೆ ನಿನ್ನ ಕರುಣಾರಸವ ಜಿಹ್ವೆಯೊಳು
ಪೂರೈಸಿ ಶರಣರುನ್ನತಿ ಕಾವ್ಯ ಕಥೆಗೂಣೆ
ಬಾರದೊಲು ಮಾಡುವದು ಬಡಮತಿಗೆ ವರವಿತ್ತು ಬ್ರಹ್ಮನಾ ರಾಣಿವಾಣಿ
ಭೂರಮಣ ಪ್ರೌಢಂಗೆ ಜಕ್ಕಣಾರ್ಯರು ಕಥಾ
ಸಾರಮಂ ಪೇಳ್ದುದಾ ವಾರ್ಧಿಕ ಷಟ್ಪದಿಯ
ದಾರದಿಂ ದಿವ್ಯಮಣಿಯನು ಪೋಣಿಪಂತೆ ಗುರುವಂಘ್ರಿ ಬಲದಿಂದು
ಸುರ್ವೆನು

ಎಂದು ಹೇಳಿದ್ದಾನೆ. ಈ ಕಾವ್ಯದಲ್ಲಿ ಸಮುದ್ರದ ವರ್ಣನೆ ಎರಡು ಪದ್ಯಗಳಲ್ಲಿ ಮುಗಿದಿದೆ.

ಕುಂಭಜನ ತುತ್ತಿಗೊಳಗಾದೆನು ಪರಶುರಾಮ
ನಂಬಿಂಗೆ ಗುರಿಯಾದೆ ಭಂಗವಾಯಿತ್ತೆಂದು
ಅಂಬುನಿಧಿಯಳುವಂತೆ ಸಿಡಿವ ಹನಿ ಕಂಬನಿಯು ನಡೆವ ತೆರೆ ಒಡಲ
ದುಃಖ
ಅಂಬುಜಾಂಬಕನಳಿಯನಂಬುಜಜ ಮೊಮ್ಮಗನು
ಅಂಬುಜಾರಿಯುಮಣುಗನೆಂಬ ಉಲ್ಲಾಸ ತೆರೆ
ಮುಂಬರಿಯೆ ಹರ್ಷರಸದಿಂದ ನಗುವಂತೆ ತಾನಿರ್ವಗೆ
ಯೊಳೊಪ್ಪುತಿಹುದು

ಕೈಲಾಸದ ವರ್ಣನೆ ಇದೆ. ಆದರೆ ಈಶ್ವರಾಸ್ಥಾನ, ನಾರದನು ಬರುವುದು ಮೊದಲಾದ ಪ್ರಕರಣಗಳಿಲ್ಲ. ಭರತಖಂಡ—ಅದರಲ್ಲಿ ಐವತ್ತಾರು ದೇಶಗಳು, ಅವುಗಳಲ್ಲಿ ಕುಂತಳ ದೇಶ, ಈ ದೇಶದ ವರ್ಣನೆ ನಾಲ್ಕು ಪದ್ಯಗಳಲ್ಲಿ ಮುಗಿದಿದೆ. ಆ ಮೇಲೆ ವಿದ್ಯಾನಗರ ....ವಿದ್ಯಾನಗರವಾಳುವಂ ಪ್ರೌಢ ಭೂವರ ಚಂದ್ರನು ಕಪ್ಪುಗೊರಳನ ಭಕ್ತ ಜಕ್ಕಣಾಚಾರ್ಯ ಜನದೊಪ್ಪಿನಲಿ ಮಂತ್ರಿತನವಂ ನಡೆಸುತಿರಲುಮಲ್ಲಿಪ್ಪರಾ

ಕಂದಾಳ ಪೆದ್ದಯಾಚಾರ್ಯರೆಂತೆಂಬ ವೈಷ್ಣವ ಗುರುಗಳು" ಎಂದು ಹೇಳಿದ್ದಾನೆ. ರಾಜನ ಒಡ್ಡೋಲಗದ ವರ್ಣನೆಯೇನೂ ಇಲ್ಲ. ಈ ಕಂದಾಳ ಪೆದ್ದಿಗೆ ಮುಕುಂದಪೆದ್ದಿ ಎಂಬ ನಾಮಾಂತರವುಂಟು. ಆ ವೈಷ್ಣವ ಗುರು ಒಂಬತ್ತು ತಿಂಗಳ ಕಾಲ ರಾಜನಿಗೆ ಭಾರತವನ್ನು ಪಾರಾಯಣ ಹೇಳಿ ಮೆರವಣಿಗೆಯನ್ನು ಮಾಡಿಸಿ ಸುಖವಾಗಿದ್ದನು. ಇದನ್ನು ಜಕ್ಕಣಾರ್ಯನು ನೋಡಿ ಭಾರತಕ್ಕೆ ಮರ್ಯಾದೆಯಾಯಿತಲ್ಲಾ ಎಂದು ನೊಂದುಕೊಂಡು ತನ್ನ ಗುರುವಾದ ಕುಮಾರ ಬಂಕನಾಥನ ಸಹಾಯದಿಂದ "ಪ್ರಮಥ ಗಣ ಪ್ರಭುದೇವ ಪೇಳ್ದ ವಚನಂಗಳಿಗೆ ಕ್ರಮದಿಯೇಕೋತ್ತರ ಶತಸ್ಥಲ ಸೂತ್ರಗಳ ರಮಣೀಯಮಾಗಿ ವರ್ಣಕ ವಸ್ತುಕಗಳಿಂದೆ ವ್ಯಾಖ್ಯಾನಗಳ ಮಾಡುತ" ಆ ಗ್ರಂಥವನ್ನು "ಹರರೂಪವಾದ ನೂರೊಂದು ಸುವಿರಕ್ತರುಂ ಕರತಳದ ನಾಗಯ್ಯ ಕಲ್ಮಠದ ಪ್ರಭುದೇವವರ ವೀರಣ್ಣೊಡೆಯ, ಚಾಮರಸರಾರಾಧ್ಯರುಂ ನೆರೆದರಾ ಭಕ್ತರೆಲ್ಲರ್" ಸೇರಲು ರಾತ್ರಿಯಲ್ಲಿ ಅಟ್ಟಹಾಸದಿಂದ ಮೆರವಣಿಗೆ ಮಾಡಿಸಿದನು. ಕಂದಾಳ ಪೆದ್ದಿ ಆ ಮೆರವಣಿಗೆಯನ್ನು ತನ್ನ ಉಪ್ಪರಿಗೆಯಿಂದ ನೋಡಿ ಮಾರನೆಯ ದಿನ ಆಸ್ಥಾನದಲ್ಲಿ ಎಲ್ಲರೂ ಸೇರಿದ್ದಾಗ—ಏನು ಜಕ್ಕಣಾಚಾರ್ಯ "ರಾತ್ರಿಯಲಿ ಸತ್ತವರ ಮೊಸಗೆಯೋ ಹೆತ್ತ ಸೌರಂಭವೊ ಮತ್ತೆ ಗಡಿಬಿಡಿಯದೇನು?" ಎಂದು ಕಟಕಿ ಮಾತನ್ನಾಡಿದನು.

ಸತ್ತವರ ಒಸಗೆ ನೀವು ಮೆರೆಯಿಸಿದ ಭಾರತವು
ಮತ್ತೆ ಕೇಳುವದೆಮ್ಮ ಶರಣತತ್ಯುತ್ಸವದೊ
ಉತ್ತಮದ ವೇಳೆಯೊಳು ಮುಕ್ತಿಯಂದೆಂಬ ಶಿಶುವಂ ಭಕ್ತ್ಯಂಗನೆಯು ಪೆತ್ತಳು

ಚಿತ್ತಜಾರಿಯು ಭಕ್ತ ಜಕ್ಕಣಾಚಾರ್ಯ ಸರ
ವೆತ್ತಿ ಗರ್ಜಿಸಲೊಡನೆ ಕಂದಾಳ ಪೆದ್ದಿ ತಲೆ
ಗುತ್ತಿ ನಿಮ್ಮಯ ಶರಣರೊಚನದೊಳಗೊಂದ ಮುದದಿಂ ಪಾಡಿರೆಂದ

ಹೀಗೆ ಜಕ್ಕಣಾಚಾರ್ಯನು ಕಂದಾಳ ಪೆದ್ದಿಯ ಬಾಯಿ ಮುಚ್ಚಿಸಿ ಅವನ ವಚನವನ್ನು ಹಾಡೆಂದು ಹೇಳಲು, ನನಗೆ ಗೊತ್ತಿಲ್ಲ ಎಂದನು. ಆಗ ನಿಮ್ಮ ಶರಣರ ವಚನಗಳನ್ನೆಲ್ಲಾ ಸೂಳೆಯರು ಸಹ ಹಾಡುತ್ತಾರೆ, ನಿನಗೆ ಗೊತ್ತಿಲ್ಲವೆ? ಆಶ್ಚರ್ಯ ಎಂದು ಜರೆದದ್ದಲ್ಲದೆ ಆಸ್ಥಾನದಲ್ಲಿದ್ದ ಮೇಳದ ಮಾಳದೇವಿ, ಸೀತಾದೇವಿ ಎಂಬುವರ ಬಾಯಿಂದ "ಒಂದು ಕೋಣನ ಕೊಂಬಿನ ಮೇಲೆ ಏಳನೂರಿಪ್ಪತ್ತು ಬಗರಿಗೆ...." ಎಂಬ ವಚನವನ್ನು ಹೇಳಿಸಿದನು. ಅದಕ್ಕೆ ಅರ್ಥವನ್ನು ಹೇಳಿರೆಂದು ಮುಕುಂದ ಪೆದ್ದಿ ಹಾಸ್ಯಮಾಡೆ, ಜಕ್ಕಣಾರ್ಯನು ಸುಮ್ಮನಿರಲು "ಬನವಸೆಯ ಪುರವನಾಳ್ವ ಮಮುಕಾರರಾಯನೋಲಗದಿ ಮುದ್ದಳೆಯ ಅಲ್ಲಮನೆಂಬವಂ ಕಾಮಲತೆಯೆಂಬ ನೃತ್ಯದಾ ರಮಣೆಗದ ಸೋತಿರಲ್ಕೆ ಅವಳಳಿಯೆ ಭ್ರಾಂತಿಯಲಿ ಪೇಳಿದ ಒಗಟುಪದ್ಯ"

ಎಂದು ವ್ಯಾಖ್ಯಾನಮಾಡಿದನು. ಜಕ್ಕಣಾರ್ಯನು ಶಿವಶಿವಾ ಪರಬೊಮ್ಮ ಮಾಯೆಗೊಳಗಹುದೆ ಎಂದು ಹೇಳಿ ಆ ವಚನದ ಸರಿಯಾದ ಅರ್ಥವನ್ನು ಹದಿನೆಂಟು ಮತದವರು ಮೆಚ್ಚುವಂತೆ ವಿವರಿಸಿದನು. ಆಗ ದೊರೆ ಮೆಚ್ಚಿ ಜಕ್ಕಣಾರ್ಯನಿಗೆ ತ್ರಿಸಕದ ಪದಕವನ್ನೂ ರುದ್ರಕಂಕಣವನ್ನೂ ಮರ್ಯಾದೆಯಾಗಿ ಕೊಡಹೋಗಲು ಮುಕುಂದ ಪೆದ್ದಿ ದೊರೆಯನ್ನು ತಡೆದನು. "ಶರಣರು ಮಾಯೆ ಮೋಹಕ್ಕೆ ಬೆರಸಿದರೋ ಇಲ್ಲವೋ ತಿಳಿಪದನು ಬಳಿಕ ಮನ್ನಿಸುವುದನಿತಕೆ ತಡೆಯೆನೆ" ಆಗ ದೊರೆ ಜಕ್ಕಣಾರ್ಯನ ಮುಖವನ್ನು ನೋಡಲು ಅದರ ಇಂಗಿತವನ್ನು ತಿಳಿದು ಚಾಮರಸ ಆ ಪ್ರಶ್ನೆಗೆ ಹದಿನೈದು ದಿನಗಳಲ್ಲಿ ಉತ್ತರ ತರುತ್ತೇನೆಂದು ಹೇಳಿ ತನ್ನ ಗೃಹಕ್ಕೆ ಬಂದನು. ಚಾಮರಸನು ಪ್ರಭುಲಿಂಗಲೀಲೆ ಬರೆಯತೊಡಗುತ್ತಾನೆ. ಅವನು ಅದನ್ನು ಮುಗಿಸಿ ತರುವವರೆಗೂ ಕಾಲ ತಳ್ಳಲು ಪ್ರೌಢರಾಯನು ಶರಣರ ಕಥೆಗಳನ್ನು ಹೇಳುತ್ತಿರು ಎಂದು ಜಕ್ಕಣಾರ್ಯನನ್ನು ಕೇಳಲು ಹಾಗೆಯೇ ಆಗಲೆಂದು ಜಕ್ಕಣಾರ್ಯನು ಹೇಳಲು ಪ್ರಾರಂಭಿಸುತ್ತಾನೆ. ಈ ಗ್ರಂಥದಲ್ಲಿ ಮೊದಲ[illegible] ಸಂಧಿಯಲ್ಲಿ ಬರುವ ಮೇಲಿನ ಕಥೆಯನ್ನು ಕೊಟ್ಟಿದ್ದೇವಷ್ಟೆ. ಉಳಿದ ಇ[illegible] ಸಂಧಿಗಳ ಪೂರ್ತಿಯಾಗಿ ಶರಣರ ಕಥೆಗಳು ಬರುತ್ತವೆ. ಅವು ವ[illegible] ಅಷ್ಟಾವರಣಗಳ ಮಾಹಾತ್ಮ್ಯೆಯನ್ನು ಲೋಕಕ್ಕೆ ಪ್ರಕಟಪಡಿಸಿದ ಆಯಾ ಶಿವಶರಣರ ಕಥೆಗಳಾಗಿವೆ. ಈ ಕಥೆಗಳನ್ನು ಹೇಳಿ ಮುಗಿಸುವ ಹೊತ್ತಿಗೆ ಚಾಮರಸನು ತನ್ನ ಗ್ರಂಥವನ್ನು ಗಡುವಿನೊಳಗೆ ತರುತ್ತಾನೆ. ದಿನವೊಂದಕ್ಕೆ* ನೂರಹನ್ನೊಂದು ಪದ್ಯಗಳಂತೆ ಹನ್ನೊಂದು ದಿನಗಳು ಬರೆದು ಗ್ರಂಥವನ್ನು ಮುಕ್ತಾಯಮಾಡಿ ಪ್ರತಿಜ್ಞೆಯನ್ನು ಉಳಿಸಿಕೊಂಡನು ಚಾಮರಸನು. "ಭೂಪ ಬೇಗಾಗಿ ವಂದಿಸುತ ತನ್ನ ಸಭೆಯಲ್ಲಿರ್ದ ಕವಿಗಳಿಗೆ ವೊಂದಳಿಯದರ್ಥವನು ಪೇಳೆಂದು ನಿಯಮಿಸಲು ಬಾರದೆಲ್ಲರು ನಾಚಲು—

> ಹರಶರಣ ಜಕ್ಕಣಾರ್ಯರಿಗೆ ಪ್ರಹುಡಭೂ—
> ವರ ತನ್ನ ಕರಯುಗವ ಮುಗಿದು ಪೇಳೆನಲು ಶಂ—
> ಕರನ ಕೃಪೆಯಿಂದ ಪ್ರಭುಲಿಂಗಲೀಲಾಮೃತದಭಿಪ್ರಾಯವೊಂದುಳಿಯದೆ

---

* ಪ್ರೌಢದೇವರಾಯನ ಸಭೆಯಲ್ಲಿ ವೀರಶೈವರೂ, ವೈಷ್ಣವರೂ ಮರ್ಯಾದೆ ಪಡೆಯುತ್ತಿದ್ದ ರೆಂಬುದನ್ನು ಮುಕುಂದ ಪೆದ್ದಿ ಒಂಬತ್ತು ತಿಂಗಳ ಕಾಲ ದೊರೆಗೆ ಭಾರತವನ್ನು ಹೇಳಿದ್ದು, ಆಮೇಲೆ ಆ ಗ್ರಂಥವನ್ನು ಮೆರೆಯಿಸಿದ್ದು—ಇವುಗಳಿಂದಲೂ. ಚಾಮರಸನ ಪ್ರಭುಲಿಂಗಲೀಲೆಯ ಸಂಬಂಧದಲ್ಲಿ ಆ ದೊರೆ ಮರ್ಯಾದೆ ಮಾಡಿದ್ದು—ಇವುಗಳಿಂದಲೂ ತಿಳಿಯಬಹುದಾಗಿದೆಯಷ್ಟೆ. ತೆರಕಣಾಂಬಿ ಬೊಮ್ಮರಸನ ಪ್ರಪಿತಾಮಹನಾದ ನೇಮಿಚಂದ್ರನು ಪ್ರೌಢರಾಯನ ಸಭೆಯಲ್ಲಿ ವಾದಿಗಳನ್ನು ಜಯಿಸಿ ಜಯಪತ್ರವನ್ನು ಪಡೆದ ಸಂಗತಿಯೂ ಸಹ ಮುಖ್ಯವಾಗಿದೆ. ಇದರಿಂದ ಎಲ್ಲ ಮತದವರಿಗೂ ಸಮಾನವಾದ ಆಶ್ರಯ ಮತ್ತು ಪ್ರೋತ್ಸಾಹ ದೊರೆಯುತ್ತಿದ್ದುವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಹರುಷದಿಂದೊರೆಯೆ ತಲೆದೂಗಿ ಕೊಂಡಾಡುತ್ತ
ಅರಸನಚ್ಚರಿವಟ್ಟು ವಾದಿಗಳನೆಲ್ಲರ–
ಲ್ಲಿರದಂತೆ ಪುರದಿಂದ ಪೊರಯಿಕ್ಕೆ ಹಾಕಿ ಚಾಮರಸನು ಮಿಗೆ ಪೊಗಳುತ"

ಜಕ್ಕಣಾರ್ಯನಿಗೂ ಚಾಮರಸನಿಗೂ ಮರ್ಯಾದೆ ಮಾಡಿದನು. ಕಡೆಗೆ ಜಕ್ಕಣಾರ್ಯನು ತನ್ನ ಮಂತ್ರಿಪದವಿಯನ್ನು ಚಾಮರಸನಿಗೆ ಕೊಡಿಸಿ ತಾನು ಸ್ವಗ್ರಾಮದಲ್ಲಿ ಶಿವಯೋಗ ಭಾವದಲ್ಲಿದ್ದು "ಶವವಿಲ್ಲದೋಲ್ ಬಯಲಾಗಿ ಮುಕ್ತಿ ಪಡೆದಂ."

ಈ ಗ್ರಂಥದಲ್ಲಿ ಚಾಮರಸನ ಪ್ರಭುಲಿಂಗಲೀಲೆ ರಚನೆಯಾಗುವುದಕ್ಕೆ ಕಾರಣವನ್ನೂ ಚಾಮರಸನ ವಿಷಯವನ್ನೂ ಹೇಳಿರುವುದರಿಂದ ನಮಗೆ ಇದು ಮುಖ್ಯವಾಗಿದೆ. ಕಾವ್ಯಗುಣ ಹೆಚ್ಚಾಗಿಲ್ಲ. ಮುಂದೆ ಜಕ್ಕಣಾರ್ಯನು ಹೇಳಿದ ಕಥೆಗಳಲ್ಲಿ ಒಂದರ ಸಂಗ್ರಹವನ್ನು ಕೊಟ್ಟಿದೆ (ಮಾಹಿತಿ ದೊರೆತಿಲ್ಲ.)

ಎಸ್. ಅನಂತನಾರಾಯಣ

ಬರುವನೆಂದು ?

ಮುಂದೊಂದು ದಿನ ಬಾನು ತುಂಬ ತುಂಬಿದ ಮುಗಿಲು
ಜೀವವೆರೆಯುವ ಧಾರೆ ಸುರಿಸಲೂಬಹುದು
ಮುಂದೊಂದು ದಿನ ನೆಲವು ಹಚ್ಚಹಸುರನು ಮೆರೆಸಿ
ರಸದ ಒರತೆಯ ಸೊಗವ ಪಸರಿಸಲುಬಹುದು

ಮುಂದೊಂದು ದಿನ ಮನದ ಭಾವ ಭಾಷೆಯ ತಳೆದು
ಸತ್ತ ಬದುಕಿಗೆ ಜೀವ ಎರೆಯಲೂಬಹುದು
ಆಸೆ ಹೃದಯದಿ ತಂಗಿ ನಾಲ್ಕು ದಿನಗಳ ಕಾಲ
ಕನಸ ಮೋಡಿಯ ಹರಡಿ ನೆಲಸಲೂಬಹುದು

ಮುಂದೊಂದು ದಿನ ಜಗದ ಜನರ ಹೃದಯದ ಒಲವು
ಸೋದರತೆಯಲಿ ಮಿಂದು ಕಳಕಳಿಸಬಹುದು
ಸುತ್ತಲೂ ಮುತ್ತಿರುವ ಕತ್ತಲೆಯ ಕಿತ್ತೊಗೆದು
ಮಾನವನ ಬಾಂದಳವ ಬೆಳಗಲೂಬಹುದು

ಎಂದು ಕಾದಿಹೆ ನಾನು ಕಾತರದಿ ನಿಡುಬೆಂದು
ಬರುವುದೇ ಆ ದಿನವು ಎಂದಿಗೋ ಎಂದು
ಜಗದ ಕೊಳಲಿಗೆ ಒಲವ ಉಸಿರ ಊಡಿಸುವವನು
ಮಾನವತೆ ಗಾನವನು ಹರಿಸಿ ಬಹನೆಂದು ?

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಎಂ. ಎಲ್. ಶ್ರೀಕಂಠೇಶಗೌಡರ ಜಾನಪದ ಪ್ರಜ್ಞೆ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೆಯ ಶತಮಾನದ ಪ್ರಥಮ ಪಾದದಲ್ಲಿ ಕನ್ನಡ ಸಾಹಿತ್ಯಾಕಾಶದಲ್ಲಿ ಪ್ರಜ್ವಲಿಸಿದ ಅತಿ ಪ್ರಮುಖವಾದ ಮತ್ತು ಚಿರಸ್ಥಾಯಿಯಾಗಿ ನಿಂತಿರುವ ಹೆಸರು ಶ್ರೀ ಎಂ. ಎಲ್. ಶ್ರೀಕಂಠೇಶಗೌಡರದು. ವಾಸ್ತವವಾಗಿ ಅವರು ಸಾಹಿತ್ಯದಲ್ಲಿ ಹೊಸ ಪ್ರಯತ್ನಗಳಾದ 'ಪ್ರತಾಪರುದ್ರದೇವ' ಮತ್ತು 'ಪ್ರಮೀಳಾರ್ಜುನೀಯ' ಎಂಬ ಶೇಕ್ಸ್‌ಪಿಯರ್ ನಾಟಕಗಳ ಭಾಷಾಂತರಗಳನ್ನು 1895-96ರಲ್ಲಿ ಪ್ರಕಟಿಸಿದರು. 'ಕಿಂಗ್‌ಲಿಯರ್' ನಾಟಕವನ್ನು 'ಲೋಹಿತಾಕ್ಷರಾಯನ ಕಥೆ' ಎಂಬ ಹೆಸರಿನಿಂದ ಪ್ರಕಟಿಸಿದರು. 'ಭವಾಸಿಬಾಳು' ಎಂಬ ಕಾವ್ಯವನ್ನು 1926 ರಲ್ಲಿ ಹೊರತಂದರು. ಅದೇ ವರುಷದ ಕೊನೆಯಲ್ಲಿ ಅವರು ವಿಧಿವಶರಾದರು. ಈ ಮಧ್ಯದಲ್ಲಿ ಅವರು ಶೇಕ್ಸ್‌ಪಿಯರ್‌ನ ಮೇಲೆ ಹೇಳಿದ ಎರಡು ನಾಟಕಗಳಲ್ಲದೆ 'ಸೀತಾಸ್ವಯಂವರ'ವೆಂಬ ಮತ್ತೊಂದು ನಾಟಕವನ್ನೂ ಮೂರು ಕಾದಂಬರಿಗಳನ್ನೂ ಮೂರು ಕವನಗುಚ್ಛಗಳನ್ನೂ ಕೆಲವು ಜಾನಪದ ಕಥೆಗಳನ್ನೂ ಅನೇಕ ಬಿಡಿಬರಹಗಳನ್ನೂ ರಚಿಸಿದರು. ಅವರ ಎಲ್ಲ ಬರಹಗಳಲ್ಲಿಯೂ ವಿದ್ವತ್ ಪ್ರಭೆಯೂ ಗಾಂಭೀರ್ಯವೂ ಅಚ್ಚುಕಟ್ಟುತನವೂ ಕವಿಯ ಅಸಾಧಾರಣ ಅನುಭವ ವ್ಯವಹಾರಜ್ಞಾನವೂ ಲೋಕಕಲ್ಯಾಣ ಪ್ರೇರಣೆಯೂ ವ್ಯಕ್ತವಾಗುತ್ತವೆ. ಕವಿ, ತಾನು ಹೇಳಬೇಕಾದುದನ್ನು ಹೃದಯಂಗಮವಾಗಿ ಸೊಗಸಾದ ಸತ್ವಪೂರ್ಣವಾದ ಭಾಷೆಯಲ್ಲಿ ರಚಿಸಿ, ಸಹೃದಯರ ಮನವನ್ನು ಸೂರೆಗೊಳ್ಳುವುದರಲ್ಲಿ ಜಯಶಾಲಿಯಾಗುತ್ತಾನೆ. ಶ್ರೀಕಂಠೇಶಗೌಡರು ರಚಿಸಿದ ಒಂದು ಬರಹವಾಗಲೀ (ಕಾವ್ಯವಾಗಲೀ, ಗದ್ಯವಾಗಲೀ) ಸಂದರ್ಭೋಚಿತವಲ್ಲದುದಾಗಲೀ ಜನಮನವನ್ನು ಉನ್ನತ ಆದರ್ಶಗಳಿಗೆ ಪ್ರೇರಿಸದುದಾಗಲೀ ಇಲ್ಲ. ಅವುಗಳನ್ನು ವಾಚಿಸಿದರೆ ಇಂದಿನ ನಮ್ಮ ಸಮಸ್ಯೆಗಳಿಗೆ ಸಹ ಅವುಗಳಲ್ಲಿ ಪರಿಹಾರ ದೊರೆಯುತ್ತದೆ. ಇದರಿಂದ ಅವರ ದೂರದರ್ಶಿತ್ವ ವ್ಯಕ್ತವಾಗುತ್ತದೆ. ಇಂದೂ ನಾವು ಅವುಗಳನ್ನು ಓದಿ ಲಾಭವನ್ನು ಪಡೆಯಬಹುದು.

ಶ್ರೀಕಂಠೇಶಗೌಡರು ಪದವೀಧರರಾಗಿ ವಕೀಲಿವೃತ್ತಿಯನ್ನು ಪ್ರಾರಂಭಿಸಿ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗುವ ಕಾಲದಲ್ಲಿ, ಮೈಸೂರಿನ ವಾತಾವರಣದಲ್ಲಿ

ಕನ್ನಡಕ್ಕೆ ಪ್ರೋತ್ಸಾಹವಿರಲಿಲ್ಲ. ಅದು, ರಾಜ್ಯವು ರಾಜಮಹಾರಾಜರ ಕೈ ತಪ್ಪಿ ರೆಸಿಡೆಂಟರ ಕೈಗೆ ಹೋಗಿದ್ದ ಸಮಯ. ಆಂಗ್ಲೇಯರ ಪ್ರತ್ಯಕ್ಷ ಆಳ್ವಿಕೆ ಇದ್ದುದರಿಂದ, ಸ್ವಾಭಾವಿಕವಾಗಿಯೇ ದೇಶಭಾಷೆಗಳು ಔದಾಸೀನ್ಯಕ್ಕೆ ಒಳಗಾಗಿದ್ದವು. ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಶಕ್ತಿಯಿದ್ದಷ್ಟು ಕನ್ನಡ ಸಂಸ್ಕೃತಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ಆದರೆ ಆಳ್ವಿಕೆಯಲ್ಲಿ ಇಂಗ್ಲಿಷಿಗೇ ಪ್ರಾಧಾನ್ಯವಿತ್ತು. ಶ್ರೀಕಂಠೇಶ ಗೌಡರು ವಕೀಲಿ ಪ್ರಾರಂಭಿಸುವ ಕಾಲಕ್ಕೆ ರೆಸಿಡೆಂಟರ ಆಳ್ವಿಕೆ ಕೊನೆಗೊಂಡಿತ್ತು.

ಶ್ರೀಕಂಠೇಶಗೌಡರಲ್ಲಿ ಕನ್ನಡಪ್ರೇಮ, ಕನ್ನಡ ಜನರಿಗೆ ಸೇವೆ ಮಾಡುವ, ಆಕಾಂಕ್ಷೆ, ಕನ್ನಡ ಭಾಷೆಯ ಭವಿಷ್ಯದಲ್ಲಿ ನಿಜವಾದ ಆಶಾಭಾವನೆ, ಭರವಸೆ— ಇವು ಬಹು ತೀವ್ರವಾಗಿದ್ದಿರಬೇಕು. ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ತಿರುವು, ಹೊಸ ಜ್ಞಾನ ಇಷ್ಟಗಳನ್ನು ನೀಡಿ ಈ ಸಾಹಿತ್ಯಕ್ಕೆ ಕಸಿ ಮಾಡಬೇಕೆಂದು ಅವರು ಬಯಸಿದರು. ಅಂದು ಇಂಗ್ಲಿಷ್ ಭಾಷೆಯ ಪ್ರಭಾವ ಪ್ರಾಬಲ್ಯ ಜಗತ್ತಿನ ಕಣ್ಣು ಕೋರೈಸುವಂತಾಗಿದ್ದಿತು. ಅದು ಇನ್ನೂ ಬ್ರಿಟಿಷ್ ಸಾಮ್ರಾಜ್ಯ ಸೂರ್ಯ ಮುಳುಗದಿರುವ ಚಕ್ರಾಧಿಪತ್ಯದ ಕಾಲವಾಗಿತ್ತು. ಜ್ಞಾನ ವಿಜ್ಞಾನಗಳು—ಅವು ಎಲ್ಲಿ ಬೆಳೆಯಲಿ—ಕೂಡಲೇ ಇಂಗ್ಲಿಷ್ ಭಾಷೆಯ ನಾಲಿಗೆಯ ಮೂಲಕ, ಇಂಗ್ಲಿಷ್ ಬಲ್ಲವರಿಗೆ ದೊರಕುತ್ತಿದ್ದವು. ಇಂಗ್ಲಿಷ್ ಭಾಷೆಯ ಲಾಭವನ್ನು ಕನ್ನಡಿಗರಿಗೆ ಒದಗಿಸಿಕೊಡಬೇಕೆಂದು ಶ್ರೀಕಂಠೇಶಗೌಡರು ಆಶಿಸಿದರು. ಇಂಗ್ಲಿಷ್ ಭಾಷೆಯೆಂದರೆ ಶೇಕ್ಸ್‌ಪಿಯರ್. ಶೇಕ್ಸ್‌ಪಿಯರ್ ಬ್ರಿಟಿಷ್ ಚಕ್ರಾಧಿಪತ್ಯಕ್ಕಿಂತ ಹೆಚ್ಚು. ಚಕ್ರಾಧಿಪತ್ಯ ಹೋದರೆ ಹೋಗಲಿ, ಶೇಕ್ಸ್‌ಪಿಯರ್ ಇರಲಿ ಎಂದು ಬ್ರಿಟಿಷರೇ ಹೇಳುತ್ತಾರೆ. ಸ್ವತಃ ಕವಿಗಳೂ ನಾಟಕಕಾರರೂ ಆದ ಗೌಡರಿಗೆ ಶೇಕ್ಸ್‌ಪಿಯರ್‌ನ ನಾಟಕಗಳ ಮೇಲೆ ಮನಸ್ಸಾದುದು ಸ್ವಾಭಾವಿಕ. ಕನ್ನಡ ಸಾಹಿತ್ಯದಲ್ಲಿ ಅದು ಬಹು ಮಟ್ಟಿಗೆ ಮೊದಲನೆಯದಾದ ಧೈರ್ಯದ ಮತ್ತು ಸಾಹಸದ ಪ್ರಯತ್ನ. ಅಲ್ಲಿಯವರೆಗೆ ಶೇಕ್ಸ್‌ಪಿಯರ್‌ನ ನಾಟಕ ಕಥೆಗಳು ಪ್ರಕಟವಾಗಿದ್ದಿರಬಹುದಾದರೂ, ನಾಟಕವನ್ನು ಮೂಲದ ಆಶಯಗಳಿಗೆ ಅನುಗುಣವಾಗಿ—ಅದರಲ್ಲಿರುವಂತೆ ಕಾವ್ಯಭಾಗ ಮತ್ತು ಗದ್ಯಭಾಗಗಳನ್ನು ಅನುವಾದ ಮಾಡಿದವರು ಇರಲಿಲ್ಲ. ಈ ದೃಷ್ಟಿಯಿಂದ ಕನ್ನಡ ಜನತೆಗೆ ಶೇಕ್ಸ್‌ಪಿಯರ್ ನಾಟಕಗಳನ್ನು ಮೊದಲು ನೀಡಿದವರು—ಮತ್ತೂ ವಿಶೇಷ ತಾವೇ ಆಡಿ ಸಹ ಅಭಿನಯಿಸಿದವರು—ಶ್ರೀಕಂಠೇಶಗೌಡರು. ಗೌಡರಿಗೆ ಸ್ವತಃ ನಾಟಕಗಳ ಮೇಲೆ ಅಷ್ಟೊಂದು “ಖಯಾಲಿ” ಇದ್ದುದರಿಂದಲೇ ಅವರು ‘ಮ್ಯಾಕ್ಬೆತ್’ ‘ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್’ ಇವುಗಳನ್ನು ಕನ್ನಡಿಸಿದರೆಂದು ಊಹಿಸಲೂ ಅವಕಾಶವಿದೆ.

ಶೇಕ್ಸ್‌ಪಿಯರ್‌ನ ನಾಟಕಗಳು ನಮ್ಮ ಜನತೆಗೆ ಚೆನ್ನಾಗಿ ಅರ್ಥವಾಗ ಬೇಕಾದರೆ ಆ ದೇಶದವರ ನಡೆನುಡಿ ವೇಷಭೂಷಣ ಹೆಸರು ಇವೆಲ್ಲ ನಮಗೆ ಅಪರಿಚಿತ ವಾಗಿರುವುದರಿಂದ, ನಮ್ಮ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ನಾಟಕವನ್ನು

ಬದಲಾಯಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತು. 'ಪ್ರತಾಪರುದ್ರದೇವ'ನ ಪೀಠಿಕೆಯಲ್ಲಿ ಅವರು ತಮ್ಮ ಸಮಸ್ಯೆಗಳನ್ನೆಲ್ಲ ಎತ್ತಿ ಅವುಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. "ನಾಟಕದಲ್ಲಿ ಸಂಗೀತವನ್ನು ಸೇರಿಸುವುದು ಸರಾಗವೆಂದು-ಕಪಿಗಳೇ ಅಬ್ಬರಿಸಲಿ, ರಾಕ್ಷಸರೇ ಶಂಖವಾದ್ಯ ಮಾಡುತ್ತಿರಲಿ, ಸೀತೆಯೇ ಅಳುತ್ತಿರಲಿ, ರಾವಣನ ತಲೆಗಳೇ ಉರುಳುತ್ತಿರಲಿ—ಅಷ್ಟುಮಂದಿರಿಗೆ ಆಚಾರ್ಯರು ಯಥಾಪ್ರಕಾರವೇ ಪುರಾಣ ಹೇಳುತ್ತಿರುವಂತೆ ಪದ್ಯಗಳನ್ನು ಹೇಳಲು ಉಪಕ್ರಮಿಸಬಾರದ." ಎನ್ನುತ್ತಾರೆ. ಇಂಗ್ಲಿಷಿನಿಂದ ಶೇಕ್ಸ್‌ಪಿಯರ್ ನಾಟಕಗಳನ್ನು ಅವರ ರೀತಿಯಲ್ಲಿ ಅನುಸರಿಸಿದ ಮೊದಲಿಗರು ಅವರೇ ಆದರೂ ಆ ಪ್ರಯೋಗಗಳನ್ನೆಲ್ಲ ಸಾಧಿಸಲು ಅವರಿಗೆ ಶಕ್ತಿಯೂ ಪಾಶ್ಚಾತ್ಯ ಮತ್ತು ಪೌರ ರಂಗಭೂಮಿಗಳ ಅನುಭವವೂ ಇದ್ದಿರಬಹುದೆಂಬುದು ಗೊತ್ತಾಗುತ್ತದೆ. ಅವರು ಸ್ವತಃ ಉಚ್ಚದರ್ಜೆಯ ಕನ್ನಡಕವಿ. ಸಂಗೀತಜ್ಞರೂ ಸಹ. ಕಂದ ವೃತ್ತ ರಗಳೆ ಎಲ್ಲವುಗಳಲ್ಲಿಯೂ ಸರಳವಾಗಿ ಕಾವ್ಯಕಟ್ಟುವ ಶಕ್ತಿಯುಳ್ಳವರು. ವೃತ್ತಕಂದಗಳ ಜೊತೆಯಲ್ಲಿ ಅವುಗಳನ್ನು ರಂಗದಮೇಲೆ ಹಾಡಲು ಅರ್ಹವಾದ ಹಾಡುಗಳನ್ನು ರಚಿಸಿ ರಾಗಗಳನ್ನೂ ಅವುಗಳಿಗೆ ಜೋಡಿಸಿದ್ದಾರೆ. ಅವರು ಸಂಸ್ಕೃತವನ್ನು ಕ್ರಮವಾಗಿ ಅಭ್ಯಾಸ ಮಾಡಿದ್ದರೋ ಇಲ್ಲವೊ ತಿಳಿಯದು. ಆದರೆ ಅವರ ಕೃತಿಗಳನ್ನು ನೋಡಿದರೆ ದೀರ್ಘವಾದ ಕನ್ನಡ ಸಾಹಿತ್ಯದ ವ್ಯಾಸಂಗದ ಅನುಭವದಿಂದ ಅವರು ಸಂಸ್ಕೃತವನ್ನೂ ಬಹುಮಟ್ಟಿಗೆ ಕರತಲಾಮಲಕ ಮಾಡಿಕೊಂಡಿದ್ದರೆಂದು ಹೇಳಬಹುದು. ಸಂಸ್ಕೃತ ನಾಟಕಗಳನ್ನು ಅವರು ನೋಡಿದ್ದರೆಂಬುದು ಅವರ ಕೃತಿಗಳಿಂದ ವ್ಯಕ್ತವಾಗುತ್ತದೆ. "ನಿಷ್ಕ್ರಾಂತಾಃ ಸರ್ವೇ" ಮುಂತಾದ ಸೂಚನೆಗಳನ್ನೂ ಅವರು ಕೊಡುತ್ತಾರೆ. ಸಂಸ್ಕೃತ ಮಾತುಗಳನ್ನು ತಪ್ಪಿಲ್ಲದೆ ಉಪಯೋಗಿಸುತ್ತಾರೆ.

ಶ್ರೀಕಂಠೇಶಗೌಡರು ಇಂಗ್ಲಿಷಿನಲ್ಲಿಯೂ ಬಹುಶ್ರುತರು. ಪ್ರತಿಯೊಂದು ಸಂದರ್ಭವನ್ನೂ ಸಂಗತಿಯನ್ನೂ ತೂಗಿನೋಡಿ ಅದು ನಮ್ಮ ಜನಕ್ಕೆ ಹಿಡಿಸುತ್ತದೆಯೆ? ಈ ನೆಲದಲ್ಲಿ ಅಂತಹ ಸಂಭವಗಳು ಅಸಂಭವನೀಯವಾಗಿ ತೋರುವುದಿಲ್ಲವೆ? ಎಂದೆಲ್ಲ ಪರಿಗಣಿಸಿ ಪಾತ್ರಗಳ ಹೆಸರುಗಳಲ್ಲಿ ಮಾತ್ರವಲ್ಲದೆ, ಇತರ ಆವಶ್ಯಕ ಬದಲಾವಣೆಗಳನ್ನು ಪದೇಪದೇ ಮಾಡಿರಬೇಕು. ಮೈಸೂರು ವರದಾಚಾರ್ಯರ ರತ್ನಾವಳಿ ನಾಟಕ ಮಂದಿರದಲ್ಲಿ ಈ ನಾಟಕವನ್ನು ಅನೇಕ ಸಲ ಪ್ರದರ್ಶಿಸಿದರೆಂಬ ದಾಖಲೆ ಇದೆ. ವರದಾಚಾರ್ಯರ ಕಂಪನಿಯವರು 'ರಾಮವರ್ಮ ಲೀಲಾವತಿ' ನಾಟಕವನ್ನೂ ಆಡುತ್ತಿದ್ದರು. ರಂಗಸ್ಥಳದ ಆ ಪ್ರಯೋಗಗಳ ಅವಲೋಕನ–ಪ್ರೇಕ್ಷಕರ ಪ್ರತಿಕ್ರಿಯೆಯ ಅವಲೋಕನ ಸಹ–ಶ್ರೀಕಂಠೇಶಗೌಡರಿಗೆ ತಮ್ಮ ನಾಟಕಗಳನ್ನು ಪ್ರೇಕ್ಷಕರ ಮೆಚ್ಚುಗೆಯ ಒರೆಗಲ್ಲಿಗೆ ಒಡ್ಡಿ ಆ ಸೂಕ್ತ ಬದಲಾವಣೆಗಳನ್ನು ಮಾಡುವ ಅವಕಾಶವನ್ನು ಒದಗಿಸಿದವು.

ಶ್ರೀಕಂಠೇಶಗೌಡರು 'ಪ್ರತಾಪರುದ್ರದೇವ' ನಾಟಕದ ರಚನೆಯಲ್ಲಿ ತಮಗೆ

ಒದಗಿದ ತೊಡಕುಗಳನ್ನೆಲ್ಲ ಮುನ್ನುಡಿಯಲ್ಲಿ ಹೇಳಿದ್ದಾರೆ. ಇಂಗ್ಲಿಷಿನ ನಾಗಾಲೋಟದ ಛಂದಸ್ಸಿನಲ್ಲಿ–ಆಗ ಕನ್ನಡದಲ್ಲಿ ಇನ್ನೂ ಮಹಾಛಂದಸ್ಸು ಸರಳರಗಳೆ ಮುಂತಾದವುಗಳ ಬಳಕೆ ಆಗಿರಲಿಲ್ಲ. ಇಂಗ್ಲಿಷಿನ ಛಂದಸ್ಸನ್ನಂತೂ ಕನ್ನಡಕ್ಕೆ ಅಳವಡಿಸುವುದು ಕಷ್ಟವೇ ಆಗಿತ್ತು. ಆ ಕಷ್ಟವನ್ನು ಅವರು "ಕನ್ನಡ ಕುಂಟುಕತ್ತಿಯು ಬೆನ್ನಿನ ಮೇಲೆ ಕರ್ನಾಟಕದಲ್ಲಿರುವ ಈಚಲ ಚಿಬ್ಬೆಗಳನ್ನೆಲ್ಲ ಮುರಿದರೆ ತಾನೇ ಸಾಗುವುದೆ?" ಎಂದು ಕೇಳುತ್ತಾರೆ. ಗೌಡರು ತಾವು ಶೇಕ್ಸ್‌ಪಿಯರ್ ನಾಟಕದಲ್ಲಿ ಮಾಡಿರುವ ಅನೇಕ ಬದಲಾವಣೆಗಳಿಗೆಲ್ಲ ಸಮಾಧಾನವನ್ನು ಕೊಟ್ಟಿದ್ದಾರೆ. ಅವರು ಮಾಡಿರುವ ಬದಲಾವಣೆಗಳಲ್ಲಿ ಬಹುಭಾಗ "ಕಥೆ ಭಾರತೀಯತ್ವಕ್ಕೆ ಹೊಂದಿಕೊಂಡಂತೆ ಇರಬೇಕು. ಭಾರತೀಯರಿಗೆ ಇದು ಅಸಂಭವವಾಗಿಯೂ ಅಸಂಬದ್ಧವಾಗಿಯೂ ಕಾಣಬಾರದು" ಎಂಬ ಗುರಿಯಿಂದ 'ಪ್ರತಾಪರುದ್ರದೇವ' ನಾಟಕದ ವಿಷಯಕ್ಕೆ ಅವರೇ ಒಂದು ಕಡೆ ಹೀಗೆ ಹೇಳುತ್ತಾರೆ: "ಪ್ರಥಮಾಂಕದಲ್ಲಿ, ಪಟ್ಟಣವನ್ನು ಕುರಿತು ಬರುತ್ತಿರುವ ಓಡ್ರ ಮಹಾರಾಜನಾದ ವಿಜಯಧ್ವಜನನ್ನು ವೀರಸೇನನು ಎದುರುಗೊಳ್ಳುವುದಕ್ಕೆ ಬದಲು ಅವನ ಅರಸಿಯು ಆ ಕೆಲಸವನ್ನು ಮಾಡುವಳು. ಮೂಲದಲ್ಲಿಯೂ ಅದೇ ರೀತಿ ಇರುವುದು ಇಂಗ್ಲಿಷ್ ಜನರ ನಡವಳಿಕೆಗೆ ಸರಿಯಾಗಿರಬಹುದು. ಕನ್ನಡ ನಾಟಕದಲ್ಲಿಯೂ ಅದೇ ರೀತಿ ಇರುವುದು ಆಕ್ಷೇಪಣೆಗೆ ಕಾರಣವಾಗಿರುವುದು. ನಮ್ಮ ದೇಶದಲ್ಲಿ ಅಂತಹ ಸ್ತ್ರೀಯರು ಅಂತಃಪುರವನ್ನು ಬಿಟ್ಟು ಹೊರಕ್ಕೆ ಬರುವುದಿಲ್ಲ. ಅವಳು ಆ ರೀತಿ ಬಂದುದು ಸ್ತ್ರೀಸ್ವಭಾವಕ್ಕೆ ವಿರುದ್ಧವಾದ ಗಂಡುಬೀರಿತನದಂತೆ ಕಾಣುವುದೆಂದು ಕೆಲವರು ಆಕ್ಷೇಪಿಸಬಹುದು. ಆದರೆ ಸ್ಥಳ ಸಂಕೋಚವಾದುದರಿಂದ ಇದಕ್ಕೆ ಸಮಾಧಾನವನ್ನು ಹೇಳಲು ನಮ್ಮ ಬಾಲಿಕಾ ಪಾಠಶಾಲೆಯ ಸರಸ್ವತಿಯರಿಗೆ ಬಿಟ್ಟಿರುತ್ತೇನೆ."

ಮತ್ತೊಂದು ಸಂಭವವನ್ನು ಕುರಿತು ಕವಿ ಹೀಗೆ ಹೇಳುತ್ತಾರೆ: "ಮೂರನೆಯ ಅಂಕದಲ್ಲಿ ರಾಜಮಂಡಲಿಯ ಔತಣವನ್ನು ಪ್ರತ್ಯಕ್ಷ ಹೇಳಿದೆ. ಆದರೆ ಅದನ್ನು ತೋರಿಸುವಾಗ ಜನರೆದುರಿಗೆ ಅರ್ಧನೈ ಬಿಟ್ಟುಕೊಂಡು ಅಂಗಕ್ಕೆಲ್ಲ ಉಂಡಿಗೆ ಅಥವ ಪಟ್ಟೆಗಳನ್ನು ಹಾಕಿಕೊಂಡು ಪದ್ಮಾಸನದಲ್ಲಿ ಎಲೆಮುಂದೆ ರಾಜರುಗಳು ಕುಳಿತುಕೊಳ್ಳಬೇಕೆ ? ಅಲ್ಲದೆ ಶರಾಯಿ ಮೋಜು ಹಾಕಿಕೊಂಡು ಠೀವಿಯಾಗಿ ಮೇಜಿನ ಸುತ್ತ ಕುಳಿತುಕೊಳ್ಳಬೇಕೆ ? ಹೇಳಿಲ್ಲ. ಆದರೂ ಚಿಂತೆಯಿಲ್ಲ. ಇನ್ನೊಂದಾವರ್ತಿ ಪಾನವಾಗಲಿ ಎಂದು ಎತ್ತಿಕೊಳ್ಳುತ್ತ ಸುರಾಪಾನವನ್ನು ಹೇಳಿದೆ. ಚಂಡಾಲ ಮುಂತಾದ ಜನಗಳಲ್ಲಿ ಅಥವಾ 'ಶೂರಸೇನ' ನಾಟಕದಲ್ಲಿ ಹೇಳಿರುವಂತೆ ಸಿಪಾಯಿ ಮುಂತಾದ ಜನಗಳಲ್ಲಿ ಇವನ್ನು ಹೇಳಿದ್ದರೆ ಒಂದು ವೇಳೆ ಚಿಂತೆಯಲ್ಲ. ಆದರೆ ಅದನ್ನು ಇಂತಾ ಉತ್ತಮಪಾತ್ರಗಳಲ್ಲಿ ಹೇಳಿರುವುದು ಹಿಂದೂ ನಡವಳಿಕೆಗೆ ವಿರುದ್ಧವೆಂದು ಕೆಲವು ಆಚಾರಶೀಲರು ಆಕ್ಷೇಪಿಸಬಹುದು. ಆದರೆ ಅದನ್ನು ಹೇಳಿರುವುದು ರಾತ್ರಿಕಾಲದಲ್ಲಿ; ಮತ್ತೆ ಅದು

ನಡೆಯುವುದು ರಾತ್ರಿಕಾಲದಲ್ಲಿ. ಸುರಾಪಾನವನ್ನು ರಾತ್ರಿ ಕಾಲದಲ್ಲಿ ಹೇಳಿದರೆ ನಮ್ಮ ಆಚಾರಶೀಲರಲ್ಲಿಯೂ ಅನೇಕರು ಆಕ್ಷೇಪಿಸುವಂತೆ ಕಾಣುವ [ನಮ್ಮ ಜನತೆ ಇಂದು ನಡೆಯುತ್ತಿರುವ ವೇಗವನ್ನು ನೋಡಿದರೆ ಅರ್ಧನ್ನೈ ಬಟ್ಟುಕೊಂಡು ಮೇಜಿನ ಮೇಲೆ ಕುಳಿತುಕೊಂಡು ಇವಾವುದೂ ಒಂದು ಸಮಸ್ಯೆಯೇ ಅಲ್ಲ. ಅನುಕರಣಪ್ರವೀಣರಾದ ನಮ್ಮ ಜನ, ಇಂದು ಏನನ್ನು ಬೇಕಾದರೂ ಮಾಡುತ್ತಾರೆ, ಹೇಗೆ ಬೇಕಾದರೂ ಬಟ್ಟೆಹಾಕಿಕೊಳ್ಳುತ್ತಾರೆ ಅಥವಾ ಹಾಕಿಕೊಳ್ಳುವುದಿಲ್ಲ. ಜಗತ್ತಿನಲ್ಲಿರುವ ಎಲ್ಲ ರಾಷ್ಟ್ರೀಯರ ವೇಷಭೂಷಣಗಳನ್ನೂ ಭಾರತೀಯರು ಅನುಕರಿಸುತ್ತಾರೆ. ಅದನ್ನು ನಾವು ಕ್ರಾಂತಿ, ಬದಲಾವಣೆ ಎಂದು ಕರೆಯುತ್ತೇವೆ"]. ಆದರೆ ಶ್ರೀಕಂಠೇಶಗೌಡರು ನಾಟಕ ಬರೆದು ಆಡಿದುದು ಎಪ್ಪತ್ತೈದು ವರುಷಗಳಿಗೂ ಹಿಂದೆ. ನಮ್ಮ ಜನಾಂಗಕ್ಕೆ, ಆಗ ನಾಟಕಗಳನ್ನು ರಚಿಸುವ ಶಕ್ತಿ ಪ್ರೇಕ್ಷಕರಿಗೆ ಈಗಿನವರಿಗಿರುವುದಕ್ಕಿಂತ ಹೆಚ್ಚು ಸುಸಂಸ್ಕೃತವೂ ಶುಚಿಯೂ ಆಗಿದ್ದಿತೆಂದು ಭಾವಿಸಬಹುದು. ಶೇಕ್ಸ್‌ಪಿಯರ್‌ಗೂ ಅನ್ಯಾಯವಾಗಬಾರದು ; ಪ್ರೇಕ್ಷಕರಿಗೂ ತೃಪ್ತಿಯಾಗಬೇಕು. ಈ ಕಠಿಣಕಾರ್ಯವನ್ನು ಕವಿ ಸಾಧಿಸಬೇಕಾಗಿದ್ದಿತು.

ಶ್ರೀಕಂಠೇಶಗೌಡರು ಮೂಲನಾಟಕಕ್ಕೆ ಭಂಗ ಬರದಂತೆ, ಅಂದಿನ ಭಾರತೀಯ ರಂಗಭೂಮಿಯಲ್ಲಿ ಆಭಾಸವಾಗಿ ಕಾಣದಂತೆ, ಮಾತುಗಳು, ಸನ್ನಿವೇಶಗಳು, ಉದಾಹರಣೆಗಳು, ಗಾದೆ ಮಾತುಗಳು, ಸಾಮ್ಯಗಳು, ಇಂಗ್ಲಿಷರ ಪೌರಾಣಿಕ ವೀರರಿಗೆ ಅನುಗುಣವಾಗಿ ನಮ್ಮ ವೀರರು ಅವರ ಶಕುನ ಮೂಢನಂಬಿಕೆ ದೇವರು ದೆಯ್ಯಗಳಿಗೆ ಪ್ರತಿಯಾಗಿ ನಮ್ಮ ಜನರಿಗೆ ಗೊತ್ತಾಗುವ ನಮ್ಮ ಪ್ರಮೇಯಗಳು—ಇವೆಲ್ಲವೂ ತಿಳಿದುದರ ಮೂಲಕ ತಿಳಿಯದುದನ್ನು ಕನ್ನಡ, ಕನ್ನಡದ ಮೂಲಕ ಶೇಕ್ಸ್‌ಪಿಯರ್‌ನ ಸ್ವಾರಸ್ಯ, ಅದ್ಭುತ ನಾಟಕೀಯ ಪ್ರಜ್ಞೆ—ಇವುಗಳನ್ನು ಪ್ರದರ್ಶಿಸಬೇಕಾಗಿದ್ದಿತು. ಅವರು ಭಾರತೀಯತ್ವವನ್ನು ಚೆನ್ನಾಗಿ ಅರಿತಿದ್ದುದರಿಂದಲೂ ಕನ್ನಡನಾಡಿನ ಜನಪದ ಮತ್ತು ಜನಜೀವನವನ್ನು ಚೆನ್ನಾಗಿ ಅಭ್ಯಸಿಸಿದುದರಿಂದಲೂ ಮತ್ತು ಕನ್ನಡದ ಜೀವಾಳ ಅವರಿಗೆ ವಶವಾಗಿದ್ದುದರಿಂದಲೂ, ಈ ಕಾರ್ಯ ಅವರಿಗೆ ಸಾಧ್ಯವಾಯಿತು. "ಶೇಕ್ಸ್‌ಪಿಯರ್ ನಾಟಕಕ್ಕೆ ಉಪಯೋಗಿಸಬೇಕಾದ ಕನ್ನಡ ಭಾಷೆಯನ್ನು ಕುರಿತು ನಾನು ಯೋಚಿಸಿದ್ದೇನೆ" ಎಂದು ಅವರು ಹೇಳಿದ್ದಾರೆ. ಮಾತಿಗೆ ಪ್ರತಿಯಾಗಿ ಮಾತನ್ನು ಭಾಷಾಂತರಿಸಿ "ಇನ್ನು ನಿಮ್ಮ ಹಣೆಪಾಡು" ಎಂದು ಸುಮ್ಮನಾಗುವುದಿಲ್ಲ. ಶೇಕ್ಸ್‌ಪಿಯರ್‌ನ ಯಾವ ಮಾತೂ ಯಾವ ಸಂದರ್ಭವೂ ಎಷ್ಟೇ ನಮಗೆ ಅಪರಿಚಿತವಾಗಿದ್ದರೂ — ನಮ್ಮ ಪರಿಚಯದ ಸಂಗತಿ ಅಥವಾ ಮಾತುಗಳಿಂದ—ನಮಗೆ ಬೆಳ್ಳಂಬೆಳಕಾಗಿ ಸ್ಪಷ್ಟವಾಗುವವರೆಗೆ ಅವರು ಬಿಡುವುದಿಲ್ಲ. ಶ್ರೀಕಂಠೇಶಗೌಡರ ಭಾಷಾಂತರ ಬರಿಶಬ್ದಗಳ ಮಗ್ಗವನ್ನು ಹಾಕಿ ಪದಗಳನ್ನು ನೇಯುತ್ತ ಶಬ್ದಾಟೋಪ ಮಾಡುವುದಲ್ಲ. ಅನುವಾದದಲ್ಲಿ ನಾವು ನಿಜವಾದ ಭಾರತೀಯತ್ವ ಮತ್ತು ಜಾನಪದ ಮೌಲ್ಯಗಳನ್ನು ಕಾಣುತ್ತೇವೆ.

ಶ್ರೀಕಂಠೇಶಗೌಡರ ವ್ಯಕ್ತಿತ್ವದಲ್ಲಿ ಒಂದು ಅಪೂರ್ವ ಸಮರಸ ವಿಲಸಿಸಿದೆ. ಅವರು ಜನಿಸಿದುದು ಹಳ್ಳಿಗರ ಒಕ್ಕಲಿಗರ ಕುಟುಂಬದಲ್ಲಿ. ಮಣ್ಣಿನ ಪ್ರೇಮ, ನಾಡಿನ ಪ್ರೇಮ, ವ್ಯವಸಾಯ ಶ್ರಮ ಪ್ರೇಮ, ಜಾನಪದ ಸ್ವಭಾವ ಪರಂಪರೆ–ಇವೆಲ್ಲ ಅವರ ಬೆಳವಣಿಗೆಯ ಭಾಗವೇ ಆಗಿತ್ತು. ಈಗ ನೂರವತ್ತೈದು ವರುಷಗಳ ಕೆಳಗೆ ಜನಿಸಿ ಆ ವಾತಾವರಣದಲ್ಲಿ ಬೆಳೆದು ಬುದ್ಧಿವಂತರಾದ ಅವರು, ಅಂದಿನ ಸಂಸ್ಕೃತಿ ಸಂಸ್ಕೃತ ಭಾಷೆ ಅದರ ಸಾಹಿತ್ಯಗಳನ್ನು ರಕ್ತಗತ ಮಾಡಿಕೊಂಡರು. ಇಂಗ್ಲಿಷಂತೂ ಸರಿಯೇ ಸರಿ, ಶೇಕ್ಸ್‌ಪಿಯರ್‌ನನ್ನೆ ಲೀಲಾಜಾಲವಾಗಿ ರಸವತ್ತಾಗಿ—ಕಂದ ವೃತ್ತ ಹಾಡು ಎಲ್ಲದರಲ್ಲಿಯೂ ಅವರು ಎತ್ತಿದ ಕೈ–ಅನುವಾದಿಸಿದರು. ಅವರು ವಕೀಲರಾಗಿ ನ್ಯಾಯಾಧೀಶರಾಗಿ ಕೆಲಸ ಮಾಡಿದುದರಿಂದ ಮನುಷ್ಯ ಸ್ವಭಾವದ ವೈವಿಧ್ಯ ಜಾನಪದ ಶಕ್ತಿ ಭಕ್ತಿ ಆಶೆ ಕೆಚ್ಚು ಮೂಢನಂಬಿಕೆ ಕಷ್ಟಸಹಿಷ್ಣುತೆ ಇವುಗಳನ್ನೆಲ್ಲ—ನಾಟಕ ಶೇಕ್ಸ್‌ಪಿಯರ್‌ನದೇ ಆದರೂ—ಅದರ ಮೂಲಕವೂ ಇತರ ಕೃತಿಗಳ ಮೂಲಕವೂ ಚಿತ್ರಿಸಿದರು. ಜಾನಪದದೊಂದಿಗೆ ಹೀಗೆ ಪ್ರತ್ಯಕ್ಷ ಮತ್ತು ನಿಕಟ ಸಂಬಂಧವನ್ನು ಹೊಂದಿದ್ದುದರಿಂದ ಅವರ ಕೃತಿಯಲ್ಲಿ ಜನಜೀವನದ ಅಪರೂಪ ಪ್ರಯೋಗಗಳು ಹೆಜ್ಜೆಹೆಜ್ಜೆಗೂ ದೊರಕುತ್ತವೆ.

‘ಪ್ರತಾಪರುದ್ರದೇವ’ ನಾಟಕದ ಪ್ರಾರಂಭದ ಮಾಟಗಾತಿಯರ ಹೆಸರೇ ಗ್ರೇಮಾಲ್ಕಿನ್, ಪ್ಯಾಡಾಕ್ ಎಂಬುವು ; ಅಪಶಕುನದ ಗುರುತಾದ ಮಾರ್ಜಾಲ ಮತ್ತು ಮಾಳಬೆಕ್ಕು ಎಂದು ಆಗಿದೆ. ಗ್ರೇಮಾಲ್ಕಿನ್‌ಗೆ ಬೂದುಬಣ್ಣದ ಮಾರ್ಜಾಲ ಎನ್ನಬಹುದು. ಶೇಕ್ಸ್‌ಪಿಯರ್ ಉಪಯೋಗಿಸಿರುವ ಅರ್ಥದಲ್ಲಿ ನಮಗೆ ಅವು ತಿಳಿಯುವಂತೆ ಮಾಡಲು ಗೌಡರು ನಮಗೆ ಪರಿಚಿತವಾದ ಮಾತುಗಳನ್ನು ಬಳಸುತ್ತಾರೆ. ಬೆಲ್ಲಾಂಡ್ಸ್ ಬ್ರೈಡ್‌ಗ್ರೂಂ (Bellownd's Bridegroom) ಎಂಬ ಮಾತಿನಲ್ಲಿ ಪರಾಕ್ರಮವೂ ಸೇರಿದೆ. ಅದೇ ಕವಿ “ನಮ್ಮ ಹಿಡಿಂಬೆಯರಸ” ಎಂಬ ಪದವನ್ನೂ ಉಪಯೋಗಿಸಿದ್ದಾನೆ. ಅದೇ ರೀತಿ, ಒಬ್ಬ ನಾವಿಕನ ಹೆಂಡತಿಯ ಮೇಲೆ ಒಬ್ಬ ಮಾಟಗಾತಿಗೆ ತುಂಬ ಕೋಪವುಂಟಾದಾಗ ಅವಳು ಇತರ ಮಾಟಗಾತಿಯರೊಂದಿಗೆ “ಆ ನಾವಿಕನ–ಮ್ಯಾಕ್ಬೆತ್–ಹೆಂಡತಿಗೆ ಏನು ಮಾಡುತ್ತೇನೆ ನೋಡಿ, ಐ ವಿಲ್ ಡು, ಐ ವಿಲ್ ಡು, ಐ ವಿಲ್ ಡು” ಎಂದು ಮೂರು ಬಾರಿ ಹೇಳಿ ಕೋಪವನ್ನು ತಣಿಸಿಕೊಳ್ಳುತ್ತಾಳೆ. ಅದರ ಅನುವಾದ ಮಾಡುವುದರಲ್ಲಿ ಕವಿ, ‘‘ಕಿವಿಮೂಳಿಯಂ ಮುಂಡೆಯ ಮಾಡಿವಳಂ’’ ಎಂದು ಹೇಳುತ್ತಾನೆ. ನಮ್ಮ ಸಂಸ್ಕೃತಿಗನುಸಾರವಾಗಿ “ಮುಂಡೆ” ಎಂಬುದಕ್ಕಿಂತ ದೊಡ್ಡ ಬೈಗಳ ಇಲ್ಲ. ಐ ವಿಲ್ ಡು, ಐ ವಿಲ್ ಡು, ಐ ವಿಲ್ ಡು ಎಂದು ಮೂರು ಸಲ ಹೇಳಿದರೂ ಸಹ “ಮುಂಡೆಯ ಮಾಡಿವಳಂ” ಎಂಬ ಅರ್ಥಬರುವುದಿಲ್ಲ. ಒಂದು ಕಡೆ ಸೇವಕನು “ರಾತ್ರಿಯೆಲ್ಲ ಕುಡಿಯುತ್ತಿದ್ದೆವು” ಎಂದು ಹೇಳಿದುದನ್ನು ಕನ್ನಡಕವಿ “ಕಡೇ ಕೋಳಿ ಕೂಗೋ ಗಂಟೆ ನಮ್ಮ ಅರವಟ್ಟಿಗೆ ಮುಚ್ಚಲಿಲ್ಲ” ಎಂದು ಅನುವಾದಿಸಿದ್ದಾನೆ. ಮ್ಯಾಕ್ಬೆತ್‌ನು “Whole

as the marble and founded as the rock" ಎಂಬುದನ್ನು ಗೌಡರು "ನಿರ್ಬಾಧಿತವಾಗಿ ಅರೆಬಂಡೆಯಂತೆ ಗಟ್ಟಿಯಾಗಿಯೂ ಜಗದ್ವ್ಯಾಪಕನಾದ ಮಾರುತನಂತೆ ನಿರ್ಬಂಧವಿಲ್ಲದೆಯೂ ಇರುತ್ತಿದ್ದೆ" ಎಂದು ಅನುವಾದಿಸಿದ್ದಾರೆ. ಪ್ರೇತವನ್ನು ನೋಡಿ ಮ್ಯಾಕ್ಬೆತ್‌ನು "See there, see there, Behold, look, Lo! How say you if charnel bones and our graces must throw them that bury back" ಎನ್ನುತ್ತಾನೆ. ಶೂರಸೇನನು ಕಾಲಭೈರವಾಕೃತಿ ಎನ್ನುತ್ತಾನೆ. "Infected be the air where on they ride" ಎನ್ನುವುದನ್ನು "ಅವರ ವಾಸಸ್ಥಾನ ನರಕವಾಗಲಿ, ಅವರಲ್ಲಿ ನಂಬಿಕೆಯಿಡುವವರೆಲ್ಲರೂ ನರಕವಾಸಿಗಳಾಗಲಿ" ಎಂದು ಅನುವಾದಿಸಿದ್ದಾರೆ. ಇಂಗ್ಲಿಷ್ ನಾಟಕದಲ್ಲಿ ಮಾಟಗಾತಿಯರು, ತಮ್ಮ ತಂತ್ರಗಳಿಗೆ ಅನುಕೂಲವಾಗುವಂತೆ ಕಷಾಯವನ್ನು ಬಾನಿಯಲ್ಲಿ (Cauldren) ಕುದಿಸುವರೆಂಬ ಅಂಶವಿದೆ. ಶೇಕ್ಸ್‌ಪಿಯರ್ ಬಾನಿಯಲ್ಲಿ ಮಾಟಗಾತಿಯರು ಯಾವುಯಾವುಗಳನ್ನು ಹಾಕಿ ಕುದಿಸುವರೆಂಬುದನ್ನು ಹೇಳಿದ್ದಾನೆ. ಕನ್ನಡ ಕವಿ ಅದನ್ನು ಹೀಗೆ ಅನುವಾದಿಸಿದ್ದಾರೆ:

"ಕತ್ತೆಯ ಕರುಳಂ ಕೊತ್ತಿಯ ಕರುಳಂ
ಮೊಳ್ಳೆಯ ಮೀನಂ ಸೊಳ್ಳೆಯ ತಂಡವ
ಕಳ್ಳಿಯ ಪಾಲೊಳೆ ಕುದಿಸಿರಿ, ಭರದೊಳ
ತೋಳದ ಮೊಳ್ಳೆಯ ನಳ್ಳಿಯ ಮೂಳೆಯ
ಸೀಳಿದ ಸರ್ಪದ ನಾಲಿಗೆ ತುಪ್ಪದಿ
ಕರಿಯುವ ನಾವುಂ ಗರಿಗರಿಯೆನುವೋಲ್
ಸದೆಯುವ ಹಿಡಿಯುವ ಮದಗಜ ದಂಡಂ
ನರಿತಿಹ ಕೂದಲ ನರಿಮರಿಯಿಂದೀ
ಗಾನೆಯ ಕುದಿಸುವ ಬಾನೆಯೊಳಾನಿಸಿ

* * *

ಲಂಗವ ಬೀಬಿಯ ಭಂಗಿಯ ಸಾಬಿಯ
ಕೊಂಗರ ದಂಡನು ಮಂಗನ ಹಿಂಡನು
ಅಂಗಡಿ ಬೀದಿಯ ಕೋಮಟಿ ಶೆಟ್ಟಿಯ
ಸಿಂಗರದಿಂದಿಹ ಗಂಧದ ರಾಯನ
ಹಂದಿಯ ಮುಸುಡಿಯ ವಂಚನೆ ಮಂತ್ರಿಯ
ಸಂದಿಸಿ ಕೊಲ್ಲುತ ಬಾಗಿಲ ಸಂದಿಲಿ
ಗಂದಿಗೆಯಂಗಡಿ ಸರಕಿನ ಸಂಗಡ
ಬೌದ್ಧನ ಬುರುಡೆಯ ಜೈನನ ಜಿಹ್ವೆಯ
ಹಸುವಿನ ಕೆಚ್ಚಲೊಳಗಸನ ಹೊಕ್ಕಳು

ಬಸುರಿಯ ಪೆಣವನು ಪಾವಿನ ಪೆಡೆಯನು
ಎಕ್ಕದ ಕುಸುಮದ ಲಕ್ಕಿಯ ಬೇರಿನ
ರಸವನು ಬಾನೆಗೆ ಬಸಿಯುತ ಕುದಿಸುವ ”

ಶೇಕ್ಸ್‌ಪಿಯರ್‌ನ ಮಾಟಗಾತಿಯರು ಕುದಿಸಿದ ಕಷಾಯಕ್ಕಿಂತ ಈ ಕಷಾಯ ನಮಗೆ ಹೆಚ್ಚು ಸುಲಭವಾಗಿ ಅರ್ಥವಾಗುತ್ತದೆ. ಯಾಕೆಂದರೆ ನಮಗೆ ಒಂದು ಪಕ್ಷ ಮಾಂತ್ರಿಕರು ಅಂತಹ ಕಷಾಯವನ್ನು ಕುದಿಸಬೇಕಾದರೆ ಯಾವ ಯಾವ ವಸ್ತುಗಳನ್ನು ಉಪಯೋಗಿಸಬಹುದು ಎಂದು ಜನರು ನಂಬುತ್ತಾರೆಯೋ ಅವುಗಳನ್ನೇ ಕವಿ ಹೇಳಿದ್ದಾನೆ. ಸೇವಕನೊಬ್ಬನು ಬಂದು ಭಯಂಕರವಾದ ಸಮಾಚಾರವನ್ನು ಹೇಳಲು ಹೆದರಿ ನಿಂತಾಗ, ಯಜಮಾನ “Where gettest thow that geese look, thow lilly livered boy ?” ಎಂದಿರುವುದರಿಂದ ಸೇವಕನ ಮುಖ ಬಾಡಿ ಬೆಳ್ಳಗಾಗಿದೆ. ಅದನ್ನು ಕನ್ನಡ ಕವಿ “ಎಲೊ ಗೂಬೆ, ಬಾಣಂತಿಯಂತೆ ಬೆಳ್ಳಗೇತಕ್ಕಿರುವೆ? ಈ ಕಾಮಾಲೆ ನಿನಗೆ ಯಾವಾಗ ಸಂಘಟಿಸಿತು?” ಎಂದು ಅನುವಾದಿಸಿದ್ದಾನೆ. ಬೇರೆ ಯಾವ ರೀತಿಯಲ್ಲಿ ಹೇಳಿದರೂ ಮೂಲದ ಅಭಿಪ್ರಾಯ ಅಷ್ಟು ಚೆನ್ನಾಗಿ ಅರ್ಥವಾಗುವುದಿಲ್ಲ. “He paid a soldier’s debt. But like a man he died and brought off the field.” ಇದನ್ನು “ಕುಮಾರನು ಕ್ಷತ್ರಿಯ ಜನ್ಮವನ್ನು ಸಾರ್ಥಕಮಾಡಿಕೊಂಡನು. ತನ್ನ ಶೌರ್ಯವನ್ನು ಸ್ಥಾಪಿಸಿ ಯುದ್ಧಮಾಡುತ್ತಿದ್ದ ಸ್ಥಳದಿಂದ ಹಿಮ್ಮೆಟ್ಟದೆ, ಶತಸಹಸ್ರಹತಿಗಳಿಂದ ವೀರಸ್ವರ್ಗವನ್ನೈದಿದನು. ಜಯಲಕ್ಷ್ಮಿಯ ಸೆರಗನ್ನು ಹಿಡಿದೆಳೆದು ಸ್ವರ್ಗಪಥದಲ್ಲಿ ಐದಿದನು. ನನ್ನ ಮಗನಿಗೆ ಗಾಯಗಳು ಯಾವ ಕಡೆ ಆದುವು” ಎಂದು ಕೇಳುತ್ತಾನೆ. ಸೇವಕನು “ಮುಂದುಗಡೆ” ಎಂದು ಹೇಳುತ್ತಾನೆ. (ಅಂದರೆ ಅವನು ಯುದ್ಧಮಾಡುತ್ತ ಸತ್ತನೆಂದು ಅರ್ಥ) ಅದನ್ನು ಕೇಳಿ “Why then god’s soldier, the god be with him” “ಹಾಗಾದರೆ ಅವನು ವೀರಲಕ್ಷ್ಮಿಯ ಮಗ. ಕೃತಾರ್ಥನಾದ.” “Had I as many sons as I have hairs, I would not wish them to a fairer death.” “ನನ್ನ ಅಂಗದಲ್ಲಿ ರೋಮಗಳಿರುವಷ್ಟು ಜನ ಮಕ್ಕಳು ನನಗೆ ಇದ್ದರೂ, ಇದೇ ಸಾವನ್ನು ಅವರಿಗೆಲ್ಲ ಬಯಸುವೆನು” ಎನ್ನುತ್ತಾನೆ. ಮೇಲಿನ ಅನುವಾದಗಳೆಲ್ಲ ಶೇಕ್ಸ್‌ಪಿಯರ್‌ನ ಅಭಿಪ್ರಾಯ ನಮಗೆ ಚೆನ್ನಾಗಿ ಅರ್ಥವಾಗಲು, ಶ್ರೀಕಂಠೇಶಗೌಡರು ತಮ್ಮ ಜಾನಪದ ಪ್ರಜ್ಞೆಯನ್ನು ಪ್ರಯೋಗಿಸಿ ಮಾಡಿರುವ ಪ್ರಯತ್ನಗಳು.

ಶ್ರೀಕಂಠೇಶಗೌಡರ ಈ ಜಾನಪದಪ್ರಜ್ಞೆ ಮತ್ತು ಸ್ವಯಂ ನಾಟಕೀಯ ಪ್ರತಿಭೆ ಇನ್ನೂ ಹೆಚ್ಚಾಗಿ ಮತ್ತು ಚೆನ್ನಾಗಿ ಅವರು ಅನುವಾದಿಸಿರುವ ‘ನಡುಬೇಸಿಗೆಯ ಒಂದು ರಾತ್ರಿ ಕನಸು’—ಇದರಲ್ಲಿ ಕಾಣುತ್ತದೆ. ಗೌಡರು ಈ ನಾಟಕದ ಹೆಸರನ್ನೇ ಪೂರ್ಣವಾಗಿ ಭಾರತೀಯವಾಗಿ ಮಾಡಿಬಿಟ್ಟರು. ಪ್ರಮೀಳಾರ್ಜುನೀಯ, ಅರ್ಜುನ ಮತ್ತು ಪ್ರಮೀಳ, ಈ ಎರಡು ಹೆಸರುಗಳನ್ನು ಕೇಳದ ಭಾರತೀಯರೇ ಇಲ್ಲ; ಅರ್ಜುನ ಪರಾಕ್ರಮಕ್ಕೆ, ಪ್ರಮೀಳ ಸ್ತ್ರೀತ್ವ ಮತ್ತು ಸ್ತ್ರೀ ಸಾಹಸ ಪರಾಕ್ರಮಕ್ಕೆ ಸಂಕೇತ. ತನಗೆ ಇಷ್ಟವಿಲ್ಲದ ಗಂಡನ್ನು ವಿವಾಹ

ವಾಗುವಂತೆ ಒಂದು ಹೆಣ್ಣನ್ನು ಬಲಾತ್ಕರಿಸುವುದು ; ತನಗೆ ಇಷ್ಟವಿಲ್ಲದ ಹೆಣ್ಣನ್ನು ಮದುವೆಯಾಗುವಂತೆ ಗಂಡನ್ನು ಬಲಾತ್ಕರಿಸುವುದು ; ಪೋಷಕರ ಈ ಬಲಾತ್ಕಾರಕ್ಕೆ ಒಪ್ಪದೆ ಗಂಡು ಹೆಣ್ಣುಗಳು ತಮಗೆ ಬೇಕಾದ ಪ್ರಿಯೆ ಮತ್ತು ಪ್ರಿಯನನ್ನು ಹೊಂದುವುದೇ—ಒಂದು ರಾತ್ರಿಯ ಭ್ರಾಂತಿವಿಲಾಸದ ನಂತರ–ಶೇಕ್ಸ್‌ಪಿಯರ್‌ನ ನಾಟಕದ ವಸ್ತು. ಇದನ್ನು ಅನುವಾದ ಮಾಡುವ ಸಂದರ್ಭದಲ್ಲಿ ಗೌಡರಿಗೆ ಅರ್ಜುನ ಪ್ರಮೀಳೆಯರ ಸಂಗತಿ ಹೊಳೆದುದು ಒಂದು ಸ್ಫೂರ್ತಿಯೇ ಎನ್ನಬೇಕು. ಆ ಸ್ಫೂರ್ತಿಯಿಂದ ಕಥೆಗೆ ಒಂದು ಹೊಸಕಳೆಯೇ ಬಂದಿತು. ಇದರ ನಾಂದಿ ಒಂದನೆ ಸ್ಥಾನ ಇವು ಪೂರ್ಣವಾಗಿ ಗೌಡರ ಸ್ವಕಲ್ಪಿತ. ಇದಕ್ಕೂ ಶೇಕ್ಸ್‌ಪಿಯರ್‌ನ ಮೂಲ ನಾಟಕಕ್ಕೂ ಸಂಬಂಧವೇ ಇಲ್ಲ. ಈ ಭಾಗವನ್ನು ನೋಡುವಾಗ ಗೌಡರು ತಾವೇ ಒಂದು ಸ್ವತಂತ್ರ ನಾಟಕವನ್ನು ಬರೆದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಶ್ರೀಮಾನ್ ಮಾಸ್ತಿಯವರು "ಕವಿ ತುಂಬ ಜಾಣರು. ನಮ್ಮ ಜನಜೀವನವನ್ನು ಚೆನ್ನಾಗಿಯೇ ನೋಡಿದವರು. ಕನ್ನಡದಲ್ಲಿ ಚೆನ್ನಾಗಿ ಬರೆಯಬಲ್ಲರು ......ಇವರು ಸ್ವತಂತ್ರ ನಾಟಕಗಳನ್ನು ಬರೆದಿದ್ದರೆ ಇವರ ಶಕ್ತಿ ಇದಕ್ಕಿಂತ ಹೆಚ್ಚು ಸಾರ್ಥಕವಾಗಿ ವಿನಿಯೋಗವಾಗುತ್ತಿತ್ತು" ಎನ್ನುವುದು.

ನಾಟಕದ ಪ್ರಾರಂಭದಲ್ಲಿಯೇ ಇದರ ಆಕರ್ಷಣೆ ಗೊತ್ತಾಗುತ್ತದೆ. ಅರ್ಜುನನು ಯುಧಿಷ್ಠಿರನ ಯಾಗ ಕುದುರೆಯನ್ನು ಕಾಯುತ್ತ ಹಿಂದೆ ಬರುತ್ತಿರುವಾಗ, ಮಲೆಯಾಳದಲ್ಲಿ ಪ್ರಮೀಳಾದೇವಿ ಕುದುರೆಯನ್ನು ಹಿಡಿದು ಕಟ್ಟಹಾಕಿಬಿಡುತ್ತಾಳೆ. ನಟಿಯು ಸೂತ್ರಧಾರನನ್ನು "ನೀನೇನು ಸಹಜ ಯತಿಯೋ ಸತಿಯಿಲ್ಲದೆ ಯತಿಯೊ" ಎಂದು ಪ್ರಶ್ನಿಸುತ್ತಾಳೆ. ಸೂತ್ರಧಾರನು "ಎಲೌ ನಟಿ, ಮೊದಲೇ ಮಲೆಯಾಳ. ಮಲೆಯಾಳದಲ್ಲಿ ಮಾಕಂದ ಪಲ್ಲವ, ಮಾಕಂದ ಪಲ್ಲವದಲ್ಲಿ ಮಲ್ಲಿಗೆಮೊಗ್ಗು, ಮಲ್ಲಿಗೆ ಮೊಗ್ಗಿನಲ್ಲಿ ಮದಾಳಿಕುಳ, ಮದಾಳಿಕುಲದಲ್ಲಿ ಮೆಲ್ನಡೆ, ಮೆಲ್ನಡೆಯಲ್ಲಿ ಮಂದ ಮಾರುತ, ಮಂದಮಾರುತನ ಮೇಲೆ ಮನ್ಮಥನೂ ಆದರೆ ಮುಂದೇನು ಗತಿ" ಎನ್ನುತ್ತಾನೆ. ನಟಿಯು "ಮಲೆಯಾಳದಲ್ಲಿಯೂ ನೀನು ಮನ್ಮಥಾವಸ್ಥೆಯಲ್ಲಿ ಪೇಚಾಡ ಬೇಕೆ ?" ಎಂದು ಕೇಳುತ್ತಾಳೆ. ಸೂತ್ರಧಾರನು "ಅಯ್ಯೋ, ಅಯ್ಯೋ, ಆಡಳಿತವೇ ಸ್ತ್ರೀಯರದಾಗುತ್ತಿರುವಲ್ಲಿ (ಇದನ್ನು ಬರೆದುದು 90 ವರುಷಗಳ ಹಿಂದೆ ಈಗ ಕೆಲವೇ ವರ್ಷಗಳ ಕೆಳಗೆ ನಾವು ಅಂತರರಾಷ್ಟ್ರೀಯ ಮಹಿಳಾ ವರ್ಷವನ್ನು ಆಚರಿಸಿದೆವು) ಇನ್ನು ಸತಿಯರನ್ನು ಕೆಣಕಿ ಪತಿಗಳು ಪೂರೈಸುವುದುಂಟೆ ? ತನ್ನ ಪಾಡಿಗೆ ತನ್ನ ದಾರಿಯಲ್ಲಿ ತನ್ನ ಕುದುರೆಯ ಹಿಂದೆ ಹೋಗುತ್ತಿದ್ದ ಲೋಕೈಕವೀರನಾದ ಅರ್ಜುನನನ್ನೇ ನಿಮ್ಮ ಪ್ರಮೀಳಾದೇವಿ ಅಡ್ಡಗಟ್ಟಿ—ಎಲ್ಲಿ ? ಸವ್ಯಸಾಚಿಯೆಂದು ಹೊಗಳಿಸಿಕೊಳ್ಳುತ್ತೀಯಲ್ಲ ? ನಿನ್ನ ಬಿಲ್ಲಾಳುತನವನ್ನು ನಮ್ಮೆದುರಿಗೆ ತೋರಿಸೆಂದು ಧನುರ್ಧಾರಿಯಾಗಿ ನಿಂತಿರುವುದನ್ನು ನೋಡಿದರೆ ಆ ಯುಧಿಷ್ಠಿರನ ಅಶ್ವಮೇಧ ಯಾಗವು ಕೊನೆಮುಟ್ಟುವಂತೆ ಕಾಣುವುದಿಲ್ಲ" ಎನ್ನುತ್ತಾನೆ ; ಅದಕ್ಕೆ ನಟಿಯು "ಅರ್ಜುನನು ಜೀವಂತನಾಗಿರುವಲ್ಲಿ ಯುಧಿಷ್ಠಿರನ ಯಾಗಕ್ಕೆ ಕುಂದುಂಟೆ ?"

ಎನ್ನುತ್ತಾಳೆ. ಸೂತ್ರಧಾರನು "ಜೀವಂತನಾಗಿದ್ದರೆ ಪ್ರಯೋಜನವೇನು? ಈ ಪ್ರಮೀಳಾದೇವಿಯಿಂದ ಬೇರೆ ಅವನು ಕುದುರೆಯನ್ನು ಬಿಡಿಸಲಾರ. ಮೊದಲೊಂದಾವರ್ತಿ ಊರ್ವಶಿಯು ಇವನಲ್ಲಿ ಮನ್ಮಥಾವಸ್ಥೆಯನ್ನು ತೋರಿ ತಾನಾಗಿ ಬಂದು ಸೆರಗು ಹಿಡಿದೆಳೆದು ಸೋಟಿಯ ಮೇಲೆ ಹೆಟ್ಟಿದರೆ ಈ ಪುಣ್ಯಾತ್ಮ ರಟ್ಟೆಗಾತ್ರ ಮೀಸೆಗಳನ್ನಿಟ್ಟುಕೊಂಡು ತಲೆಯೆತ್ತಿ ನೋಡಲಿಲ್ಲ. ಕೋಪಗೊಂಡು ಅವಳು ಶಾಪವನ್ನು ಕೊಟ್ಟುಬಿಟ್ಟಳು. ಮತ್ತಾ ಊರ್ವಶಿಯು ಪ್ರಮೀಳೆಯ ಹೆಸರಿನಿಂದ ಸೆರಗುಹಿಡಿದು ನಿಲ್ಲಿಸಿರುವಳು. ಇನ್ನು ಆ ಪುಣ್ಯಾತ್ಗಿತ್ತಿ ಯಾರ್ಯಾರ ಮನೆಯಲ್ಲಿ ಎಷ್ಟೆಷ್ಟು ದಿನ ಮದ್ದಳೆ ಬಡಿಯುವುದಕ್ಕೆ ಕಳುಹಿಸುತ್ತಾಳೊ?"

ಪ್ರಮೀಳೆಯು ತನಗೂ ಅರ್ಜುನನಿಗೂ ಗಾಂಧರ್ವ ವಿವಾಹವನ್ನು ವಿರೋಧಿಸಿ "ಅಗ್ನಿಸಾಕ್ಷಿಯಾಗಿ ವಿವಾಹವಾಗಲಿ" ಎಂದಾಗ ಅರ್ಜುನನು "ಗಾಂಧರ್ವ ವಿವಾಹವು ಪುರಾಣಪ್ರಸಿದ್ಧವಾದುದು. ಪರರ ಗಂಟು ಕರಗಿಸುವುದಕ್ಕಾಗಿ ಅಗ್ನಿಸಾಕ್ಷಿ ವಿವಾಹ ಎನ್ನುವುದು ಪುರೋಹಿತರ ಚಾಪಲ್ಯವೆನ್ನಬೇಕು" ಎನ್ನುತ್ತಾನೆ. ಅದಕ್ಕೆ ಪ್ರಮೀಳೆಯು "ಗಾಂಧರ್ವವಿವಾಹವೆನ್ನುವುದು ಅಂಗನೆಯರನ್ನು ವಂಚಿಸಲು ಪುರುಷರ ಚಾಪಲ್ಯದಿಂದುಂಟಾದುದೆಂದು ನನಗೆ ತೋರುವುದು" ಎನ್ನುತ್ತಾಳೆ. ಮತ್ತು "ಪುರಾಣಪ್ರಸಿದ್ಧವಾಗಿರುವುದು ಗಾಂಧರ್ವವಿವಾಹ ಮಾತ್ರವೇ ಅಲ್ಲ, ಗಾಂಧರ್ವ ವಿವಾಹದಿಂದ ಕಾಮಿನಿಯರು ಪುರುಷಚಾಪಲ್ಯಕ್ಕೆ ಸಿಕ್ಕಿ ಮೋಸಹೋಗಿರುವುದೂ ಪುರಾಣಪ್ರಸಿದ್ಧವಾಗಿದೆ" ಎನ್ನುತ್ತಾಳೆ. ಅರ್ಜುನನು "ಆಹಾ, ನಿನ್ನ ಅನುಮಾನ ಗೊತ್ತಾಯಿತು. ಆ ದುಷ್ಯಂತನೊಬ್ಬನು ಆ ಶಕುಂತಳೆಯನ್ನು ಕೆಲಸವಾದ ಮೇಲೆ ಕೈ ಬಿಟ್ಟು, ಕಾಣುವುದಕ್ಕೆ ಬಂದಿದ್ದವಳನ್ನು ಕಂಡಿದ್ದವರಾರೆಂದು ಮೋಸಮಾಡಿದರೆ, ಗಾಂಧರ್ವವಿವಾಹವೇ ಮೋಸಗಾರಿಕೆಯೇ?" ಎಂದು ಉತ್ತರಿಸುತ್ತಾನೆ. ಅದಕ್ಕೆ ಪ್ರಮೀಳೆಯು "ಭರತ ವರುಷದಲ್ಲಿ ಯಾರಿಗೆ ಯಾರು ಕಡಿಮೆ? ವಲ್ಲಭಾಭಿಮಾನದಲ್ಲಿ ಪಾಂಡುಪುತ್ರರ ಪ್ರಸಿದ್ಧಿಯನ್ನು ಲೋಕವೇ ಬಲ್ಲದು. ಒಬ್ಬ ಗಂಡನನ್ನು ವರಿಸಿದ ಆ ಕಣ್ವನ ಮಗಳು, ಗಂಡನೆದುರಿಗಲ್ಲದಿದ್ದರೂ ಮಾನದಿಂದಲಾದರೂ ಬಾಳಿದಳು. ಐದು ಜನ ಗಂಡಂದಿರನ್ನು ಕಟ್ಟಿಕೊಂಡೂ ಆ ಗರತಿಯು ಗಂಡಂದಿರೆದುರಿಗೇ ಮಾನಗೇಡಿಯಾಗುತ್ತಿರಲು, ಆ ತುಂಡಾಂಡಿಗಳಾದ ಐದು ಜನ ಗಂಡಂದಿರೂ ಮಂಡೆಯನ್ನೆತ್ತದೆ ಇದ್ದರಲ್ಲವೆ?" ಎನ್ನುತ್ತಾಳೆ. ಅರ್ಜುನನು "ಐದು ಜನರ ಮದ್ದಳೆಕದ ಮತ್ತೆ ಒಡವೆ ಮತ್ತೆ ಹ್ಯಾಗಿದ್ದೀತು. ಒಂದು ತಲೆಗೆ ಒಂದು ತುರುಬು ಚೆಂದ" ಎನ್ನುತ್ತಾನೆ. ಪ್ರಮೀಳೆಯು "ಐದು ಜನರನ್ನು ವರಿಸಿದಳೇತಕ್ಕೆ? ಒಬ್ಬನನ್ನೇ ವರಿಸಿದ ಆ ಚಿತ್ರಾಂಗದೆಯು ವರಿಸಿದಾರಭ್ಯ ಗಂಡನ ಹಾದಿಯನ್ನೇ ಕಾಯುತ್ತಿರುವಳಲ್ಲವೆ?" ಎನ್ನುತ್ತಾಳೆ. ಅರ್ಜುನನು "ಈಗ ವಿವಾಹ ಮಹೋತ್ಸವಗಳಲ್ಲಿ ಕಾಲಕಳೆಯುವುದಕ್ಕೆ ಅವಕಾಶವಿಲ್ಲ. ಈಗ ಹೋಗಿ ಅಣ್ಣನಾದ ಧರ್ಮಜನ ಯಾಗವನ್ನು ಪೂರೈಸಿ ಮತ್ತೆ ಬಂದು ವರಿಸುವೆನು" ಎನ್ನುತ್ತಾನೆ. ಪ್ರಮೀಳೆಯು

"ಪ್ರಾಣೇಶನೆ, ಅಣ್ಣನಿಗಾಗಿ ಹೆಣ್ಣನಾಳದೆ ಹೋಗಲಿಚ್ಛಿಸುವೆಯಾ ? ತಂದ ಹೆಣ್ಣನ್ನು ಕಣ್ಣಿನ ಮುಂದೆ ಬಣ್ಣಗೆಡಿಸುತ್ತಿರಲು ಅಣ್ಣನಿಗಾಗಿ ಕಣ್ಣುಮುಚ್ಚಿ ನಿಂತಿದ್ದು ಸಾಲದೆ? ಮತ್ತೆ ಹಣ್ಣಾಗಿರುವ ಹೆಣ್ಣು ಕೈಗೆ ಸಿಕ್ಕಿದರೆ ಅದನುಣ್ಣದೆ ಮಣ್ಣುಪಾಲು ಮಾಡ ಬೇಕೆನ್ನುವಿಯಾ ?" ಎಂದು ಕೇಳುತ್ತಾಳೆ.

ಹೀಗೆ ಈ ಸಂಭಾಷಣೆ ಅವಿಚ್ಛಿನ್ನವಾಗಿ ನಡೆಯುತ್ತಲೇ ಹೋಗಬಾರದೆ ಎಂದು ವಾಚಕನು ಬಯುಸುತ್ತಾನೆ. ಇದು ಗದ್ಯಕಾವ್ಯ. ಪ್ರಾಸ, ಗಾದೆಮಾತು, ಹೋಲಿಕೆ ಗಳು, ಗ್ರಾಮೀಣ ಸತ್ವಯುಕ್ತ ಭಾಷೆ. ಶ್ರೀಕಂಠೇಶಗೌಡರಂತೆ ಗ್ರಾಮಸಂಸ್ಕೃತಿಯ ಆಳವಾದ ಮತ್ತು ಯಥಾರ್ಥವಾದ ಅನುಭವಜ್ಞಾನವಿರುವವರಿಂದ ಮಾತ್ರ ಸಾಧ್ಯ. ಇದಕ್ಕೂ ಶೇಕ್ಸ್‌ಪಿಯರ್‌ನ 'ಅರ್ಧರಾತ್ರಿಯ ಕನಸು' ಎಂಬುದಕ್ಕೂ ಏನೇನೂ ಸಂಬಂಧವಿಲ್ಲ. ಆದರೆ ಆ ಸ್ವಾರಸ್ಯ ಸಂಭಾಷಣೆಯಿಂದ ಕವಿ ನಾಟಕವನ್ನು ಆಕರ್ಷಣೀಯವಾಗಿ ಮಾಡಿ ನಮ್ಮನ್ನು ಕರೆಯುತ್ತಾನೆ. ದ್ರೌಪದಿಯನ್ನು ಐದು ಜನರ ಮದ್ದುಕದ ಒಡನೇ ಎಂದು ವರ್ಣಿಸಿರುವ ಜಾನಪದ ಅನುಭವ ಗೌಡರ ಅಪೂರ್ವ ಪ್ರತಿಭೆಯನ್ನು ತೋರಿಸುತ್ತದೆ. "ನಾವು ಬರೆಯುತ್ತಿರುವುದು ಇಂಗ್ಲಿಷ್ ನಾಟಕದ ಅರ್ಥ ಸ್ವಾರಸ್ಯ ಸರಿಯಾಗಿ ನಮ್ಮ ಜನಕ್ಕೆ ತಿಳಿಯಬೇಕು. ವೇಷಭೂಷಣ ಭಾಷೆ ರಂಗಸ್ಥಳದ ಸನ್ನಿವೇಶ–ಕೊನೆಗೆ ನಾಟಕದ ಹೆಸರು ಸಹ–ಇದಾವುದರಿಂದಲೂ ಜನರಿಗೆ ಇದು ಎಲ್ಲಿಯೋ ನಡೆದ ಕಥೆ ಎಂಬಂತೆ ಕಾಣಬಾರದು. ಎಲ್ಲಿಯೋ ನಡೆದದ್ದಾದರೂ ಮನುಷ್ಯ ಸ್ವಭಾವವನ್ನು ವರ್ಣಿಸುವುದಾದುದರಿಂದ ಇಲ್ಲಿ ಬೇಕಾದರೂ ನಡೆದಿರಬಹುದು ಎಂಬ ನಂಬಿಕೆಯುಂಟಾಗಬೇಕು." ಇದಕ್ಕಾಗಿ ಕವಿ ಅಲ್ಪಸ್ವಲ್ಪ ಬದಲಾವಣೆ ರೂಪಾಂತರ ಗಾದೆಯ ಮಾತು ಪಡಿನುಡಿ ನಾಣ್ಣುಡಿಗಳು, ನಮ್ಮಲ್ಲಿರುವ ಸಮಾನ ಶಬ್ದಪುಂಜಗಳು ಇವನ್ನು ಉಪಯೋಗಿಸಿದ್ದಾನೆ. ಶೇಕ್ಸ್‌ಪಿಯರನನ್ನು ಇದ್ದಕ್ಕಿದ್ದಂತೆ ಮಾತಿಗೆ ಭಾಷಾಂತರಿಸಿ ತೇರ್ಗಡೆಯಾಗುವ ಪರೀಕ್ಷೆಗೆ ಅವನು ಕೂರಲಿಲ್ಲ. ಆದರೆ ಶೇಕ್ಸ್‌ಪಿಯರ್‌ನ ನಾಟಕಗಳನ್ನು ನೋಡಿ ಇಂಗ್ಲೆಂಡಿನ ಜನರಲ್ಲಿ ಯಾವ ಪರಿಣಾಮವುಂಟಾಗಬಹುದೋ ಅದೇ ಪರಿಣಾಮ, ಆ ನಾಟಕದ ಕನ್ನಡ ರೂಪಾಂತರವನ್ನು ನೋಡಿ ಆಗಬೇಕೆಂಬುದು ಅವನ ಆಸೆ. ಈ ಕಾರ್ಯದಲ್ಲಿ ಅವನು ಬಹುಮಟ್ಟಿಗೆ ಯಶಸ್ವಿಯಾಗಿದ್ದಾನೆ.

'ಮ್ಯಾಕ್ಬೆತ್'ನ ಪ್ರಾರಂಭದಲ್ಲಿ ಮಾಟಗಾತಿಯರು ಕಡೆಯಲ್ಲಿ "Fair is foul and foul is fair" ಎಂಬುದನ್ನು ಪದಶಃ ಭಾಷಾಂತರಿಸುವುದಕ್ಕಿಂತ ತೆರೆಯಲ್ಲಿ

ಬಿಟ್ಟದ್ದು ಬಿಟ್ಟಂತೆ ತೊಟ್ಟದ್ದು ತೊಟ್ಟಂತೆ
ಒಟ್ಟಾಗಿ ಸೇರುತ್ತ ಚಟ್ಟವನೇರುತ್ತ
ಪಟ್ಟಾದ ಗಾಳಿಯಲಿ ಮುಟ್ಟುವೆವು ಮುಗಿಲನ್ನು

ಎಂದು ಆಟ, ಪ್ರಾರಂಭವಾದರೆ ಪ್ರೇಕ್ಷಕರ ಮೇಲೆ ಪರಿಣಾಮ ಚೆನ್ನಾಗಿ ಆಗಿ ಅವರು ಒಂದು ಗಂಭೀರ ನಾಟಕವನ್ನು ನೋಡಿ ಆನಂದಿಸಲು ತಮ್ಮನ್ನು ಸಿದ್ಧಗೊಳಿಸಿ

ಕೊಳ್ಳುವರು ಎಂಬುದು ಗೌಡರ ಅನುಭವ ಮತ್ತು ನಾಟಕೀಯ ಪ್ರಜ್ಞೆಯ ಪರಿಶ್ರಮಜನ್ಯ ವಿವೇಕವಾಗಿತ್ತು.

ಕೈರವೆಯನ್ನು ತನಗೆ ಪ್ರಿಯನಲ್ಲದವನನ್ನು ಅವಳು ಮದುವೆಯಾಗಬೇಕೆಂದು ಅವಳ ತಂದೆ ಬಲಾತ್ಕರಿಸಿದಾಗ, ಕೈರವೆ "ನಾನು ಇದಕ್ಕೆ ಒಪ್ಪದಿದ್ದರೆ ನನಗೆ ದಂಡನೆ ಯೇನು?" ಎನ್ನುತ್ತಾಳೆ. ಪ್ರಮೀಳೆ "ನೀನು ಪುರುಷರ ಸಂಗವನ್ನು ತ್ಯಜಿಸಿ ಯೋಗಿನಿಯಾಗಬೇಕು. ಅದು ಅಸಾಧ್ಯವಾದರೆ ದೇಹವನ್ನು ಬಿಡಬೇಕು. ಕೇಶೋಚ್ಚಾಟನೆ ಮಾಡಿಸಿಕೊಂಡು ಕಾವಿ ಬಟ್ಟೆಯನ್ನುಟ್ಟು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಅಂಧಕಾರದಲ್ಲಿ ಕುಳಿತು ನಿನ್ನ ಜೀವನವನ್ನು ಕಳೆಯಬೇಕು. ಈ ತ್ರಾಣ ನಿನ್ನಲ್ಲಿದೆಯೆ?" ಎನ್ನುತ್ತಾಳೆ. ಇದಕ್ಕೆ ಶೇಕ್ಸ್‌ಪಿಯರ್‌ನ ಮೂಲದಲ್ಲಿ ಕ್ರಿಸ್ತ ಸನ್ಯಾಸಿನಿಯ (nun) ವರ್ಣನೆ ಇದೆ. ಅದು ನಮ್ಮ ಜನರಿಗೆ ಸರಿಯಾಗಿ ತಿಳಿಯುವುದಕ್ಕಾಗಿ ಕನ್ನಡ ಕವಿ ನಮ್ಮ ಸನ್ಯಾಸಿಗಳ ವರ್ಣನೆಯನ್ನು ಮಾಡಿದ್ದಾನೆ.

ಶೇಕ್ಸ್‌ಪಿಯರನ ಈ ನಾಟಕದಲ್ಲಿ ಒಂದು ಒಳನಾಟಕ ಬರುತ್ತದೆ. ಅದನ್ನು ರಾಜನ ಪ್ರಜೆಗಳು ತಮ್ಮ ಧಣಿಗಳ ಸಂತೋಷಕ್ಕಾಗಿ ಆಡುತ್ತಾರೆ. ಆಡುವವರು ವೃತ್ತಿ ನಾಟಕಕಾರರೂ ಅಲ್ಲ, ಹವ್ಯಾಸಿ ನಾಟಕಕಾರರೂ ಅಲ್ಲ, ನಿತ್ಯಜೀವನದ ಸಾಮಾನ್ಯ ಜನರು. ಅವರಲ್ಲಿ ಆಚಾರಿ, ನೆಯ್ಗೆಯವ, ದರ್ಜಿ ಮುಂತಾದವರೆಲ್ಲ ಇದ್ದಾರೆ. ನಮ್ಮಲ್ಲಿ ಹಳ್ಳಿಗಳಲ್ಲಿ ಇಂದೂ ಆಚಾರಿ, ಅಕ್ಕಸಾಲೆ, ಬಡಗಿ, ಅಗಸ, ಕುಂಬಾರರಲ್ಲಿ, ಹರಿಜನರಲ್ಲಿ ಕಲೆ ಜೀವಂತವಾಗಿರುವುದು ಕಾಣುತ್ತದೆ. ಗೌಡರಿಗೆ ಗ್ರಾಮಗಳ ನಾಟಕಕಾರರ ಗುಂಪಿನ ಪರಿಚಯ ಚೆನ್ನಾಗಿದ್ದಿರಬೇಕು. ಈ ನಾಟಕದ ಸಿದ್ಧತೆಯನ್ನೇ ಗೌಡರು ಒಂದು ಹಾಸ್ಯದ ಹೊನಲಾಗಿಸಿದರು. ಮಯಾಚಾರಿ, ಮಡಿವಾಳ ಮಾಚಯ್ಯ, ಕುಂಬಾರ ಕುಂಟಶೆಟ್ಟಿ, ನೆನೆಬಾರದ (ನೆನೆಬಾರದ ಎಂಬುದು ಒಂದು ಹಳ್ಳಿಯಿರಬೇಕು) ನಾಗಪ್ಪ, ದರ್ಜಿ ಸೇತುರಾಮ, ವಿಠೋಬ ಇವರೇ ನಾಟಕದ ನಟನಟಿಯರು. ನಾಟಕವನ್ನು ರಚಿಸಿರುವವನು ಮಯಾಚಾರಿ. ಅದರ ಹೆಸರು "ಅತ್ಯಂತ ಶೋಕಪ್ರದ ಹರ್ಷಕ." ಇದನ್ನು ಕನ್ನಡ ಕವಿ "ಸಮಾಧಿ ಪರಿಣಯ" ಎಂದು ಕರೆದಿದ್ದಾನೆ. ಕೃತಿ ರಚನಾಕಾರನಾದ ಮಯಾಚಾರಿ "ಈ ಮಹಾನಾಟಕದ ಸಾರವನ್ನೆಲ್ಲ ಭಟ್ಟಿಯಿಳಿಸಿ ನವರಸಭರಿತವಾಗಿ ಪುಟ್ಟ ನಾಟಕ ಮಾಡಿದ್ದಾನೆ. ಹೇಗಿದೆಯೊ! ಎದೆ ಬಿಚ್ಚಿ ಹೋಗುವುದು. ಆಡಲಿ, ಡಂಗ್ ಆಗಿ ಬಿಟ್ಟಾರು" ಎನ್ನುತ್ತಾನೆ. ಅದಕ್ಕೆ ನಾಗಪ್ಪ "ಮಾಡೋದು ಮಾಡ್ತಾ ನವರಸಭರಿತವಾಗಿ ಮಾತ್ರ ಮಾಡಿ ಇನ್ನು ಮೂರು ರಸಗಳನ್ನು ಏಕೆ ಬಿಟ್ಟುಬಿಟ್ಟಿರಿ?. ಅವು ಸೇರಿದ್ದರೆ ಡಜನ್ ಭರ್ತಿಯಾಗಿ ಸರಿ ಹೋಗುತ್ತಿತ್ತಲ್ಲ" ಎನ್ನುತ್ತಾನೆ. ಮಯಾಚಾರಿಯು "ಆ ಮೂರು ರಸಗಳಾವುವು?" ಎನ್ನುತ್ತಾನೆ. ನಾಗಪ್ಪನು "ಗೊತ್ತಿಲ್ಲವೇ, ಗೊತ್ತಿಲ್ಲವೇ, ರಾಮರಸ, ಪಾದರಸ, ಸಜ್ಜರಸ" ಎನ್ನುತ್ತಾನೆ. ಈ ನಾಟಕದಲ್ಲಿ ಮಡಿವಾಳ ಮಾಚಯ್ಯನದೂ ಒಂದು ಪಾತ್ರ. ನಾಟಕದಲ್ಲಿ ಅಂತಹ ಒಂದು ಪಾತ್ರ ಇರಲೇಬೇಕು. ಯಾಕೆಂದರೆ

ಮಯಾಚಾರಿ ಹೇಳುವಂತೆ " ನೀನು ಬಟ್ಟೆಗಳಿಗೆ ತಡಕಬೇಕಾದುದಿಲ್ಲ. ಅವರಿವರ ಬಟ್ಟೆಗಳಿಂದ ಒಳ್ಳೆ ಸಿಸ್ತುಗಾರನಾಗಿ ಬಾ " ಎನ್ನುತ್ತಾನೆ. ಕುಲಾಲ ಕುಂಟಶೆಟ್ಟಿಗೆ " ನೀನು ರಾಣಿ ಪಾರ್ಟು ಮಾಡು " ಎಂದು ಮಯಾಚಾರಿ ಹೇಳಿದಾಗ ಅವನು "ಅಯ್ಯಯ್ಯೊ, ನನ್ನನ್ನು ಹೆಣ್ಣಿಗನ್ನ ಮಾಡ್ತೀರ" ಎನ್ನುತ್ತಾನೆ. "ನನಗಾಗಲೇ ಗಡ್ಡ ಮೀಸೆ ಹುಟ್ಟಿಬಂದಿವೆಯಲ್ಲ" ಎನ್ನುತ್ತಾನೆ. ಇಂಗ್ಲಿಷ್ ಮೂಲದಲ್ಲಿರುವ "I cannot play a woman, I have a beard coming" ಎಂಬುದನ್ನು ಕನ್ನಡ ಕವಿ "ನನ್ನನ್ನು ಹೆಣ್ಣಿಗನ್ನ ಮಾಡ್ತೀರಾ" ಎಂದು ತರ್ಜುಮೆ ಮಾಡಿದ್ದಾನೆ. ಇದು ನಿಜವಾಗಿ ಹೆಚ್ಚು ಪರಿಣಾಮಕಾರಿಯಾಗಿದೆ. ಮಯಾಚಾರಿಯು " ಗಡ್ಡ ಮೀಸೆ ಬಂದಿದ್ದರೇನು ? ಕತ್ತಿ ಊರಿದರೆ ಕತ್ತರಿ ಆಯಿತು " ಎನ್ನುತ್ತಾನೆ. ಕೊನೆಯಲ್ಲಿ ಹಜಾಮ ನಾಗಪ್ಪ ಕುಂಟಶೆಟ್ಟಿಯ ಗಡ್ಡ ಮೀಸೆ ಬೋಳಿಸಿ ರಾಣಿ ಪಾರ್ಟಿಗೆ ಸಿದ್ಧಮಾಡಬೇಕಾಗುತ್ತದೆ. ಮೂಲದಲ್ಲಿ ಇದನ್ನು "Yow shall play it in a mask" ಎನ್ನುತ್ತಾರೆ. ಹಜಾಮ ನಾಗಪ್ಪ ಕೋಪದಿಂದ " ಎಲೊ ಕುಂಬಾರ, ನಾನು ಬೇರೆ ನೀರು ತರುವುದಿಲ್ಲ. ನೀನೇ ತಲೆಗೆ ಸವರಿಕೊಂಡು ಬಾ" ಎನ್ನುತ್ತಾನೆ. (ಗ್ರಾಮಾಂತರಗಳಲ್ಲಿ ಕ್ಷೌರಿಕನಿಗೆ ಒಬ್ಬನ ಮೇಲೆ ಕೋಪ ಬಂದರೆ "ನಿನ್ನ ತಲೆಗೆ ನೀರು ಸವರಿಕೊಂಡು ಬಾ" ಎಂದೇ ಹೇಳಿ ತಿರಸ್ಕಾರ ಸೂಚಿಸುವುದು. ಸಾಮಾನ್ಯವಾಗಿ ಹಳ್ಳಿಯವರು ಕ್ಷೌರಕ್ಕೆ ತಮ್ಮ ತಲೆಗೆ ನೀರನ್ನು ತಾವೇ ಸವರಿಕೊಂಡು ಕ್ಷೌರಿಕನ ಮುಂದೆ ಕೂರುವುದು ಪದ್ಧತಿ). ಕುಲಾಲ ಶೆಟ್ಟಿ ಕೈಲಿ ಕಠಾರಿ ಕೊಟ್ಟರೆ ಅವನು ಶೋಕ ತೋರಿಸುವ ಭರದಲ್ಲಿ ನಿಜವಾಗಿಯೇ ಎದೆಗೆ ಗುದ್ದಿಕೊಂಡರೆ, "ಮೊದಲೇ ಮಡಕೆ ತಟ್ಟೊ ಕೈ ಕಲಿತ ಚಾಳಿ" ಎಂದು ಕ್ಷೌರಿಕ ನಾಗಪ್ಪ ಹೇಳುತ್ತಾನೆ. ಕುಲಾಲಶೆಟ್ಟಿ "ನಾನು ಮಾತ್ರ ಮಡಕೆ ತಟ್ಟೋನು. ನೀನು ತಲೆ ಕೆರೆಯೋಕೆ ಹೋಗಿ ಕಿವಿ ಮೂಗನ್ನೆಲ್ಲ ಕೆರೆದುಹಾಕಿ ಬಿಡ್ತೀಯಲ್ಲ" ಎನ್ನುತ್ತಾನೆ. (ಹಳ್ಳಿಯ ಕ್ಷೌರಿಕನ ಹತ್ತಿರ ಕ್ಷೌರ ಮಾಡಿಸುವುದು ತುಂಬ ಕಷ್ಟ. ತಲೆ ಮೇಲೆ ಮಾರಿ ಜಾತ್ರೆ ಆಗಿಬಿಡುತ್ತೆ. ಧಾರವಾಡದ ಕಡೆ ಕ್ಷೌರಕ್ಕೆ ಕಷ್ಟವೆಂದೇ ಹೆಸರು.) ರಾಜಾರಾಣಿಯರ ಮದುವೆ ಆಗಬೇಕಾಗಿದ್ದುದು ಪೂರ್ಣಿಮೆಯ ದಿನ. ಕುಂಟಶೆಟ್ಟಿಯು " ಪೂರ್ಣಿಮೆಯ ದಿವಸ ಬೆಳದಿಂಗಳಿದೆಯೆ ?" ಎನ್ನುತ್ತಾನೆ. ನಾಗಪ್ಪ "ಎಲೋ ಕುಂಬಾರ" ಎನ್ನುತ್ತಾನೆ. ಮಾಚಯ್ಯನು " ಅವನು ಕುಂಬಾರ, ನೀನು ಹಜಾಮ. ಪೂರ್ಣಿಮೆಯ ದಿವಸ ಬೆಳದಿಂಗಳಿದೆಯೇನೊ ?" ಎನ್ನುತ್ತಾನೆ. ಮಾಚಯ್ಯನು " ನಿನ್ನ ತಲೆ, ಪೂರ್ಣಿಮೆಯ ದಿವಸ ಬೆಳದಿಂಗಳಿಲ್ಲಿ ಬಂತೊ, ಹುಣ್ಣಿಮೆಯ ದಿವಸ ಅಲ್ಲವೇನೊ ಬೆಳದಿಂಗಳಿರುವುದು ?" ಎಂದಾಗ ಕುಂಟಶೆಟ್ಟಿಯು " ಅದೇಕೆ, ಪಂಚಾಂಗ ನೋಡಿ, ಗೊತ್ತಾಗುವುದು" ಎನ್ನುತ್ತಾನೆ. ಮಯಾಚಾರಿಯು "ಪಂಚಾಂಗ ತಕೋಳಿ, ಪಂಚಾಂಗ ತಕೋಳಿ" ಎನ್ನುತ್ತಾನೆ. ಮಾಚಯ್ಯ "ಇಗೋ ಇಲ್ಲಿ ಸಿಕ್ಕಿತು, ಹುಣ್ಣಿಮೆ ಪೂರ್ಣಿಮೆ" ಅನ್ನುತ್ತ ಪಂಚಾಂಗದ ಹಾಳೆಗಳನ್ನು ತಿರುವಿ ಹಾಕಿ " ಈ ವಿಚಾರದಲ್ಲಿ ಸರಿಯಾಗಿಲ್ಲ. ಇನ್ನೊಂದು ತಕೋಳಿ" ಎನ್ನುತ್ತಾನೆ.

ಮಯಾಚಾರಿ "ಪಂಚಾಂಗವೇನಾಗಿದೆ ?" ಎನ್ನುತ್ತಾನೆ. ಮಾಚಯ್ಯನು "ಇದರಲ್ಲಿಲ್ಲ ಬರಿ ಪೂರ್ಣಿಮೆಗಳಿವೆಯೇ ಹೊರತು ಹುಣ್ಣಿಮೆ ಒಂದೂ ಇಲ್ಲ" ಎನ್ನುತ್ತಾನೆ. "ನಿಮ್ಮಪ್ಪನ ಕಾಲದಿಂದ ನೀನು ಪಂಚಾಂಗ ನೋಡಿದ್ದರಲ್ಲವೆ? ಎಲ್ಲಿ, ಇಲ್ಲಿ ಕೊಡು. ನಾವು ನಾಟಕವಾಡುವ ದಿನ ಬೆಳದಿಂಗಳು ಇದೆಯೇ ಇಲ್ಲವೇ ನೋಡುವೆ" ಎನ್ನುತ್ತಾ ಪಂಚಾಂಗ ತೆಗೆದುಕೊಂಡು ಹುಣ್ಣಿಮೆಯನ್ನು ಹುಡುಕುತ್ತಾನೆ. "ವಾಜರ ರಾಮಾಚಾರ್ರಿ, ನಾವು ಆಡುವುದು ಮದುವೆಯಾಗುವ ದಿವಸವೇ ಅಲ್ಲವೇ ?" ಎನ್ನುತ್ತಾನೆ. ಮಯಾಚಾರಿ "ಹೌದು" ಎಂದು ಉತ್ತರಿಸುತ್ತಾನೆ. ಕುಂಟಶೆಟ್ಟಿಯು "ಬೆಳದಿಂಗಳಿದ್ದರೆ ತಾನೆ ಏನು ? ನಾವು ಮನೆ ಒಳಗೆ ಆಡುತ್ತೇನೆ. ಮನೆಯೊಳಕ್ಕೆ ಬೆಳದಿಂಗಳು ಹೇಗೆ ಬರುತ್ತೆ ?" ಎನ್ನುತ್ತಾನೆ. ಮುಂದೆ ಕಿಟಕಿಯ ಬಾಗಿಲು ತೆರೆದು ಅದರ ಮೂಲಕ ಬೆಳದಿಂಗಳನ್ನು ಒಳಕ್ಕೆ ಬಿಡುವುದು, ಕಮ್ಮಾರ ಕಾಡಯ್ಯನಿಗೆ ಚಂದ್ರನ ವೇಷ ಹಾಕುವುದು, ಚಂದ್ರನ ಕಳಂಕವನ್ನು ತೋರಿಸಲು ಅವನೇ ಸಾಕು ; ಜೊತೆಗೆ ಇದ್ದಲೂ ಇದೆ. ಒಬ್ಬ ಮನುಷ್ಯನಿಗೇ ಕಿಟಕಿ ಗೋಡೆ ವೇಷ ಹಾಕುವುದು—ಇವೆಲ್ಲ ಗೌಡರ ನಾಟಕಾನುಭವ ಪ್ರಾವೀಣ್ಯತೆ ಮತ್ತು ಗ್ರಾಮ ಕಲೆಗಳ ನಿಕಟ ಪರಿಚಯವನ್ನು ಸೂಚಿಸುತ್ತವೆ. ನಾಟಕದ ಓಬರಾನ್ ಮತ್ತು ಟೈಟಾನಿಯಾ ಹೆಸರುಗಳನ್ನು ಕವಿ ರತಿಮನ್ಮಥ ಎಂದು ಬದಲಾಯಿಸಿರುವದೂ ಇದೇ ಕಾರಣಕ್ಕಾಗಿಯೆ.

ನಾಟಕ ಮುಂದುವರಿದಂತೆ ಮನ್ಮಥನ ಸೇವಕನು ವೇಷಧಾರಿಗಳನ್ನು ನೋಡಿ "ಈ ಕಂಬಳಿಯ ಒಡೆಯರು ಯಾರು ?" ಎಂದು ಕೇಳುತ್ತಾನೆ. ಮೂಲದಲ್ಲಿರುವ ಅಥೆನ್ಸ್‌ಗೆ ಕವಿ ಮಲೆಯಾಳ ಎಂಬ ಪದವನ್ನು ಉಪಯೋಗಿಸಿದ್ದಾನೆ. ಮುಂದೆ ಹರ್ಮಿಯ ಮತ್ತು ಲೈಸಾಂಡರನ ಸಂಭಾಷಣೆಯಲ್ಲಿ ಲೈಸಾಂಡರ್ ಹೇಳುವ "Hang off thou cat vile thing let loose" ಎಂಬುದನ್ನು ಎನ್ನುವುದನ್ನು "ಛೀ ಕಪಿ, ಕಾಗೆ, ದೂರದಲ್ಲಿರು, ಛೀ, ಕಗ್ಗಾಳಿ ಕೈಬಿಡು" ಎಂದೂ, "They love; out tawny tamar out out loatusome medicine, hated pation" ಅನ್ನು "ಮಂಗಮುಸುಡಿ ಮಾಲಗಣ್ಣಿ ಮೊಂಡಮೂಗು ಕಪ್ಪರೆ ಬಾಯಿ ಬುಕ್ಕಲು ಬುಕ್ಕಲು ಕೆನ್ನೆ ಎಮ್ಮೆ ತುಟಿ ಹೋತನ ಗಡ್ಡಕ್ಕೆಲ್ಲ ನಾನು ಪ್ರಿಯನೋ ಎಂದೂ ಮಾಡಿದ್ದಾರೆ. ಹೆಲನ್‌ಳು ಹರಮೇನಳನ್ನು "ಪಪ್ಪೆಟ್"—ಗುಜ್ಜಾರಿ ಎಂದು ಕರೆಯುತ್ತಾಳೆ. ಕೈರವೆಯು "ಗುಜ್ಜಾರಿ, ಓಹೊ! ಗುಜ್ಜಾರಿ, ಗೊತ್ತಾಯಿತು. ನಿನ್ನ ಬೇಳಿಕಾಳು (That way goes the game) ನಾನು ಗುಜ್ಜಾರಿ. ನೀನು ಗರುಡಗಂಬ, ಅವಳು ಚಿಕ್ಕವಳು, ನಾನು ದೊಡ್ಡವಳು. ದೊಡ್ಡವರ ಮಗಳು ದೊಡ್ಡ ಮನುಷ್ಯಳಾಗಿದ್ದೀಯೆ" ಎನ್ನುತ್ತಾಳೆ. With her tall personage, her height ಎಂದು ಮೂಲದಲ್ಲಿ ಹೇಳಿದ್ದರೆ "ಎಲೆ ಅದೆಷ್ಟು ದೊಡ್ಡವಳು, ಏಣಿ ಇಲ್ಲದೆ ಅಟ್ಟಹತ್ತುತ್ತೀಯೋ ಬೆಟ್ಟ ಹತ್ತುತ್ತೀಯೋ ನೋಡೋಣ ಬಾ, ನೀನೇನು ಮೇಲುಕೋಟೆ ಗರುಡಗಂಬವೋ ನೋಡುವೆನು" ಎನ್ನುತ್ತಾಳೆ. 'I am so dwarfish and low. But that my

nail can reach into thine eyes.' ಎನ್ನುವುದನ್ನು ನಾನು ಗುಜ್ಜಾರಿಯಾಗಿದ್ದರೂ ನಿನ್ನ ಕಣ್ಣಿಕಿತ್ತು ಕೈಗೆ ಕೊಡುವಷ್ಟು ಎತ್ತರವಾಗಿದ್ದೇನೆ, ಕಣೆ." ಎಂದು ಮಾಡಿದ್ದಾರೆ. ಜಯಂತನು ಕೈರವೆಯನ್ನು "get you gone you dwarf, you minimus of hinder-up, knots gross-made, you bead, you acorn." ಎಂಬುದನ್ನು "ಛೀ ಮೋಟಾರಿ ಹುಣಸೆಹಣ್ಣಿನಂತೆ ಇದ್ದೀಯೆ, ಸೆಣಸಾಡುವುದಕ್ಕೆ ಹೋಗುವೆ. ಬುಡಮೆಕಾಯಿನಂತೆ ಬುಡಬುಡನೆ ಉರುಳಾಡುವೆ. ಮೂರು ಮಾವಿನ ಕಾಯಿನಷ್ಟು ಮೊದಲೇ ಇಲ್ಲ. ಮೊಳಮೊಳದುದ್ದ ನೆಗೆಯುತ್ತ ಬರುತ್ತೀಯೇ" ಎಂದು ಮಾಡಿದ್ದಾರೆ. ರಾಜನು ತನ್ನ ಮಗನನ್ನು ಗಂಧರ್ವ ಬಾಲಕನೆನ್ನುತ್ತಾನೆ. ಆಶುಗನು "ಜಯಂತ ಬರಲಿಲ್ಲ. ಸಾಯಬಡಿಯುವೆನು" ಎನ್ನುತ್ತಾನೆ. ಮಾಚಯ್ಯ "ಯಾರಾದರೂ ಈರುಳ್ಳಿ ಬೆಳ್ಳುಳ್ಳಿ ತಿಂದುಗಿಂದೀರಿ. ಬಾಯಿಬಿಟ್ಟರೆ ಗ್ಂ ಅನ್ನುತ್ತಿರಬೇಕು. ಆಟದ ಜವಾಬಣೆ ಜೊತೆಗೆ ಮಾತು ಗಮಗಮಾಯಿಸುತ್ತಿರಬೇಕು" ಎನ್ನುತ್ತಾನೆ.

ರಾಜಾರಾಣಿಯರ ಮುಂದೆ ನಾಟಕವಾಡುವಾಗ ಯಾವ ಯಾವ ನಾಟಕ ವಾಡಬಹುದೆಂದು ಇಂಗ್ಲಿಷ್ ಮೂಲದಲ್ಲಿ ವಿವರಣೆಯೂ ಅವುಗಳ ಗುಣಾವಗುಣಗಳ ಬಗ್ಗೆ ಚರ್ಚೆಯೂ ಇದೆ. ಕನ್ನಡದಲ್ಲಿ ಕವಿ ಕನ್ನಡ ಜನಜೀವನ ಪರಿಚಿತವಾಗಿರುವ ಹರಿಶ್ಚಂದ್ರ ನಾಟಕ, ಶಾಕುಂತಳ ನಾಟಕ, ದ್ರೌಪದಿ ವಸ್ತ್ರಾಪಹರಣ ಇವುಗಳನ್ನು ಆಡ ಬಹುದೆಂಬ ಸೂಚನೆ ಬಂದಾಗ "ಹರಿಶ್ಚಂದ್ರ ನಾಟಕ ಗೋಳಿನ ನಾಟಕ. ದುಡ್ಡು ಕೊಟ್ಟು ಕಣ್ಣೀರು ಸುರಿಸುವುದೇಕೆ? ಇದು ಏಕಾದಶಿ ಅಮ್ಮಂದಿರಿಗೇ ಸರಿ" ಎನ್ನುತ್ತಾನೆ. ದ್ರೌಪದಿ ವಸ್ತ್ರಾಪಹರಣ ಮಾತು ಬಂದಾಗ "ಏನು? ಸುಭದ್ರಾ ಹರಣವೊ" (ಅರ್ಜುನ ಮಗ್ಗುಲಲ್ಲಿರುವುದರಿಂದ ಅದು ಅವನಿಗೆ ಒಂದು ತಿವಿತ). ಪುನಃ ಪಟ್ಟಿಯನ್ನು ನೋಡಿ "ದ್ರೌಪದಿ ವಸ್ತ್ರಾಪಹರಣವೆ? ಆಹ, ಒಂದು ಸಲ ನೋಡಿದ್ದೇ ಸಾಲದೆ? ದ್ರೌಪದಿಯು ಪತಿಯು ಎದುರಿಗೆ ಪುನಃ ದ್ರೌಪದಿ ವಸ್ತ್ರಾಪಹರಣವಾದರೆ ನೋಡಲು ನನ್ನ ರಮಣನಿಗೆ ಎರಡು ಕಣ್ಣು ಸಾಲದು. ಇದಕ್ಕಿಂತ ದ್ರೌಪದಿ ಸ್ವಯಂವರವನ್ನಾಡಬಾರದಿತ್ತೆ?" ಎನ್ನುತ್ತಾಳೆ. ವಿರಾಟಪರ್ವ! "ಆಹಾ! ಚೆನ್ನಾಯಿತು. ಆ ಕೀಚಕಾಧಮನು ಆ ದ್ರೌಪದಿಯ ಸೆರಗನ್ನು ಹಿಡಿದೆಳೆಯುತ್ತಿದ್ದರೆ, ಅವಳ ಗಂಡನು ಕೈಗೆ ಬಳೆ ತೊಟ್ಟುಕೊಂಡು ಮುದ್ದಳೆಗಳನ್ನು ಬಡಿಯುತ್ತ ನಾಟ್ಯವನ್ನು ಕಲಿಸುತ್ತಿರುವುದು, ನನ್ನ ರಮಣನಿಗೆ ಎಷ್ಟು ಹಿತವಾಗಿರಬಹುದು!" ಫಲ್ಗುಣೋರ್ವಶೀಯ! "ಛೀ ಛೀ, ಇದನ್ನು ಮಾಡಿದ ನೀಚನಾರು? ಅವನನ್ನು ಆನೆ ಬಾಗಿಲಿನೊಳಕ್ಕೆ ಬಿಡಬೇಡ. ಈಗ ಅರ್ಜುನನೊಂದಿಗೆ ಶಯನೋತ್ಸವಕ್ಕೆ ಹೋಗುತ್ತಿರುವ ನನಗೆ ಇದರಿಂದ ಎಷ್ಟು ಉಲ್ಲಾಸವಾಗಬಹುದು!" ಕೊನೆಯಲ್ಲಿ ರಾಮವರ್ಮ ಲೀಲಾವತಿ ನಾಟಕವಾಡುವರು. ಪ್ರಮೀಳೆ ನಾಟಕ ನೋಡಿ "ಇದೆಂಥ ಹಾಳು ನಾಟಕ. ವಿವಾಹದಲ್ಲಿ ವಿನೋದ ಪಡಿಸುವುದಕ್ಕೆ ಬಂದವರು ಒಬ್ಬೊಬ್ಬರಾಗಿ ಪ್ರಾಣಬಿಡುತ್ತಿರುವರು. ಆಟಗಾರರೆಲ್ಲ ಈ ರೀತಿ ಸಾಯುತ್ತಿದ್ದರೆ ಅವರನ್ನು ಹೂಳತಕ್ಕವರು ಯಾರು?" ಎನ್ನುವಳು.

ಆಟಗಾರರ ಪೈಕಿ ಮಡಿವಾಳನಿಗೂ ಹಜಾಮನಿಗೂ ಯಾವಾಗಲೂ ಕಚ್ಚಾಟ. ಒಂದು ಸಲ ಹಜಾಮನು ಮಡಿವಾಳನನ್ನು ಹೀನೈಸಲು "ವೈಲಿಗೆ ಮೂಟೆ ಎಲ್ಲಿ? ಎಂದು ಕೇಳೋ" ಎನ್ನುವನು. ರೇಗಿದ ಮಡಿವಾಳ "ಹಡಪದಲ್ಲಿದೆ ಎಂದು ಹೇಳು" ಎನ್ನುವನು. ನಾಟಕದಲ್ಲಿ ಕೈರವೆ ಪದ್ಮಿನಿಯನ್ನು "ಎಲೌ ಮಂಗಳಾಂಗಿ" ಎಂದು ಕರೆದಾಗ ಪದ್ಮಿನಿಯು "ವಸಂತನು ನಿನ್ನನ್ನು ಮಂಗಳಾಂಗಿ ಎನ್ನುವನು". "ಹಾ ಮಂಗಳಾಂಗವೇ, ಎಲ್ಲಿರುವೆ ಸಖೀ, ನಿನ್ನ ಕಣ್ಣೆ ಕಮಲ, ನಿನ್ನ ಕಟಾಕ್ಷವೆ ತಟಿತ್ ಕುಸುಮಾಗಮ, ನಿನ್ನ ಶ್ವಾಸವೇ ಮಂದಮಾರುತ, ನಿನ್ನ ಮುಗುಳ್ನಗೆಯೆ ಶರಚ್ಚಂದ್ರೋದಯ, ನಿನ್ನ ಚೆಂದುಟಿಯೆ ಮತ್ತೆ ಮಾಕಂದ ಪಲ್ಲವದ ಕೋಕಿಲಾ ಲಾಪ, ನಿನ್ನ ನೀಲಕುಂತಳವೇ ಸ್ಮರ ಸಿಂಜಿನೀ ಭೃಂಗಮಾಲೆ."

ಈ ಮೇಲಿನ ಉದಾಹರಣೆಗಳನ್ನು ನಾನು ಕೊಟ್ಟಿರುವ ಉದ್ದೇಶ, ಗೌಡರು ಶೇಕ್ಸ್‌ಪಿಯರ್‌ನ ನಾಟಕವನ್ನು ಮೂಲಕೃತಿಗೆ ಪ್ರತಿಕೃತಿಯಾಗಿ ಭಾಷಾಂತರಿಸದೆ ಮೂಲವನ್ನು ತಿಳಿದವರಿಗೆ ಉಂಟಾಗುವ ಆನಂದ ಕನ್ನಡ ಅನುವಾದದಿಂದಲೂ ಕನ್ನಡಿಗರಿಗೆ ಆಗಬೇಕೆಂದು ಕನ್ನಡ ವಾತಾವರಣವನ್ನೇ ನಾಟಕದಲ್ಲಿ ಕಲ್ಪಿಸಿರುವ ರೆಂಬುದನ್ನು ತೋರಿಸುವುದಕ್ಕಾಗಿ.

ಶ್ರೀಕಂಠೇಶಗೌಡರು ಜನಜೀವನವನ್ನು ಚೆನ್ನಾಗಿ ಅರಿತು ಅದರಲ್ಲಿ ಹಾಸು ಹೊಕ್ಕಾಗಿ ಬೆರೆತಿದ್ದುದರಿಂದ ಅದರ ವಿಡಂಬನೆಯನ್ನು ಬಹಳ ಸ್ವಾರಸ್ಯವಾಗಿ ಮಾಡುವವರಾಗಿದ್ದರು. 'ಸೀತಾಸ್ವಯಂವರ'ದ ಭೋಜನಾನಂತರದ ತಾಂಬೂಲ ಚರ್ವಣವನ್ನು ಮಾಡುತ್ತ ಶತಪೋಳಿ (ನೂರು ಹೋಳಿಗೆ) ರಾಮಾಚಾರ್ರು, ಸುಸ್ತಿಬಡ್ಡಿ ಶೇಷಯ್ಯಂಗಾರ್ರು, ತೊಗರಿಉಂಡೆ ತಿಮ್ಮಣ್ಣಶಾಸ್ತ್ರಿ, ಗುಮಾನಿ ಗೋಪಾಲಾಚಾರ್ರು—ಇವರು ಸಂಭಾಷಿಸುತ್ತಿದ್ದಾರೆ. ಭೀಮಾಚಾರ್ರು "ಜನಕ ಮಹಾರಾಯನು ವಿವಾಹದಲ್ಲಿ ಗೋಬ್ರಾಹ್ಮಣರನ್ನೆಲ್ಲ ಕದವಿನ ಹಿಂದೆ ಕುಕ್ಕರಬಡಿದು ಗೋಮುಖ ವ್ಯಾಘ್ರಗಳನ್ನೂ ಗೋಭಕ್ಷಕರನ್ನೂ ಗೋಪುರದ ಪಾನಿಸವರನ್ನೂ ವಧೂವರರ ಸಮೀಪದಲ್ಲಿ ಹೋಮಕುಂಡದ ಬಳಿ ಕೂರಿಸಿದ. ಈ ಮದುವೆ ಮಾಡುವುದು ಹ್ಯಾಂಗೆ ಸ್ವಾಮಿ? ವೈಲಿಗೆಯಲ್ಲಿ ಮಂತ್ರ ಹೇಳುವುದು ಹ್ಯಾಂಗೆ ಸ್ವಾಮಿ?" ಎಂದು ಕೇಳುತ್ತಾರೆ. ಗೋಪಾಲಾಚಾರ್ರು "ಆ ಜಾತ್ರೆ ಕಾಲಕ್ಕೆ ತಕ್ಕ ನಡವಳಿಕೆ. ನಾವು ವೈದಿಕರು. ಅವರು ಲೌಕಿಕರು. ಈಗ ವೈದಿಕರು ಮಂತ್ರಿಸಿದರೆ ಮಾವಿನಕಾಯಿ ಬೀಳುವುದಿಲ್ಲ. ಲೌಕಿಕರು ಸ್ವಲ್ಪ ತಂತ್ರಿಸಿದರೆ ಲೋಕವೇ ಅತಂತ್ರ ವಾಗಿ ಹೋಗುವುದು" ಎನ್ನುತ್ತಾರೆ. ಭೀಮಾಚಾರ್ರು "ಈ ವೈದಿಕ ಯಾರಿಗೆ ಬೇಕು? ಈ ಬ್ರಾಹ್ಮಣಾರ್ಥ ಯಾರಿಗೆ ಬೇಕು? ನಾನು ಲೌಕಿಕನಾಗಿ ಬಿಡುವೆನು" ಎನ್ನುತ್ತಾರೆ. ಭೀಮಾಚಾರ್ರು "ಇನ್ನು ಈ ಆಚಾರ ಗೀಚಾರನೆಲ್ಲ ಕಿತ್ತುಒಗದು ಬಿಡುತೇನು. ಮೀಸೆ ಬಿಟ್ಟುಬಿಡುವೆನು. ಈಚೆ ಮೂಲೆಯಿಂದ ಆಚೆ ಮೂಲೆಗೆ 'ಬಿ. ಭೀಮರಾವ್' ಎಂದು ಸೈನು ಜಟಕಾಯಿಸಿಬಿಡುತೇನು" ಎನ್ನುತ್ತಾರೆ.

ಸುಸ್ತಿಬಡ್ತಿ ಶೇಷಯ್ಯಂಗಾರ್ರು ಎಂಬುವರು ಲೇವಾದೇವಿ ಮಾಡುತ್ತಿರುತ್ತಾರೆ. ರಾಮಾಚಾರ್ರು ತಿಮ್ಮಣ್ಣಶಾಸ್ತ್ರಿಗಳನ್ನು "ಶ್ರಿಮತಸ್ಥರಲ್ಲಿ ಅಯ್ಯಂಗಾರ್ರೇನು ವ್ಯಾಪಾರ ಲೇವಾದೇವಿಗಳಿಗೆ ಹೊರಟುಬಿಟ್ಟರು" ಎಂದು ಕೇಳುತ್ತಾರೆ. ತಿಮ್ಮಣ್ಣ ಶಾಸ್ತ್ರಿಗಳು "ಅದು ಅವರಿಗೆ ಅನುಕೂಲ" ಎನ್ನುತ್ತಾರೆ. ರಾಮಾಚಾರ್ರು "ಅದೇನು ಸ್ವಾಮಿ, ಅವರಿಗೆ ಮಾತ್ರ ಅನುಕೂಲ?" ಎಂದು ಕೇಳುತ್ತಾರೆ. ತಿಮ್ಮಣ್ಣ ಶಾಸ್ತ್ರಿಗಳು "ಅದು ಯಾರ ವೃತ್ತಿ ಹೇಳಿ" ಎಂದು ಕೇಳುತ್ತಾರೆ. ರಾಮಾಚಾರ್ರು "ಕೋಮಟಿಗರದು" ಎನ್ನುತ್ತಾರೆ. ತಿಮ್ಮಣ್ಣ ಶಾಸ್ತ್ರಿಗಳು "ಸರಿ ಅವರೂ ನಾಮ ಹಾಕತಕ್ಕವರು. ಇವರೂ ನಾಮ ಹಾಕತಕ್ಕವರು. ಶೆಟ್ಟರು ಚಿಕ್ಕಚಿಕ್ಕದಾಗಿ ಹಾಕುತ್ತಾರೆ, ಅಯ್ಯಂಗಾರ್ರು ದೊಡ್ಡದೊಡ್ಡದಾಗಿ ಹಾಕುತ್ತಾರೆ" ಎನ್ನುತ್ತಾರೆ. ಲಂಕಾಪಟ್ಟಣ ಸುಟ್ಟುಹೋದ ಸುದ್ದಿ ಕೇಳಿದ ಕೇಶವಭಟ್ಟರು "ಲಂಕಾಪಟ್ಟಣ ಒಂದೇ ಅಲ್ಲ ಸ್ವಾಮಿ ಸುಟ್ಟುಹೋದುದು. ಲಂಕಾಪಟ್ಟಣದ ಜೊತೆಗೆ ಅದನ್ನು ಆಳುತ್ತಿದ್ದವರೆಲ್ಲರೂ ಸುಟ್ಟು ಹೋದರು. ಆ ವಿಭೀಷಣನಿಗಂತೂ ಪುರುಸತ್ತೇ ಇಲ್ಲ. ನೀರು ಮುಳುಗಿದ್ದೂ ಮುಳುಗಿದ್ದೆ. ವದ್ದೆಯನ್ನು ಉಟ್ಟದ್ದೂ ಉಟ್ಟದ್ದೆ. ತಿಲೋದಕವನ್ನು ಬಿಟ್ಟದ್ದೂ ಬಿಟ್ಟದ್ದೆ. ಸತ್ತಿದ್ದ ಒಬ್ಬೊಬ್ಬ ದಾನವನಿಗಾಗಿ ಒಂದೊಂದು ರುಪಾಯಿ ದಕ್ಷಿಣೆ ಕೊಟ್ಟರೂ ಸಾಕು, ಕಡೆಗೆ ಒಂದು ಪಾವಲಿ. ಒಂದು ದೊಡ್ಡಾಣೆ. ಒಂದು ಚಿಕ್ಕಾಣಿಯನ್ನು ಕೊಟ್ಟರೂ ನಾವೇ ಒಂದು ಲಂಕಾಪಟ್ಟಣವನ್ನು ಕಟ್ಟಿಸಬಹುದು" ಎನ್ನುತ್ತಾರೆ.

ಶ್ರೀಕಂಠೇಶಗೌಡರು ಅನೇಕ ಹಾಸ್ಯಚಟಾಕಿಗಳಲ್ಲಿ ತಮ್ಮ ಲೋಕಾನುಭವವನ್ನು ಚಿತ್ರಿಸಿದ್ದಾರೆ. ವಿದ್ಯಾವಂತ ಹೆಂಡತಿಯ ಸೌಭಾಗ್ಯ, ಗಂಡ ಆಯಾಸಪಟ್ಟು ಮನೆಗೆ ಬಂದು "ಬೆಳಗಿನಿಂದ ಅಲೆದಲೆದು ಸಾಕಾಯಿತು. ತುಂಬ ಹಸಿವು, ಅಡಿಗೆ ಎಷ್ಟರಮಟ್ಟಿಗೆ ಆಗಿದೆ?" ಎನ್ನುತ್ತಾನೆ. ವಿದ್ಯಾವಂತಳಾದ ಹೆಂಡತಿ "ಗೊತ್ತಿಲ್ಲ. ಆಗಿರುವಂತೆ ಕಾಣೆ, ಅಡಿಗೆ ವಿಚಾರ ವಿಚಾರಿಸಲು ಪುರಸತ್ತಾಗಲಿಲ್ಲ" ಎನ್ನುತ್ತಾಳೆ. ಗಂಡ "ಮಕ್ಕಳುಗಳೆಲ್ಲಿ?" ಎನ್ನುತ್ತಾನೆ. ಹೆಂಡತಿ "ಮಕ್ಕಳುಗಳು ಇಲ್ಲಿಲ್ಲವೆ? ಬೆಳಗ್ಗೆ ಇದ್ದರು, ಸುತ್ತಮುತ್ತ ನೋಡಿದಿರಾ?" ಎಂದು ಅವನನ್ನೇ ಕೇಳುತ್ತಾಳೆ. ಗಂಡನು "ಅಡಿಗೆ ಸಾವಕಾಶವಾದರೆ ಮತ್ತಿನ್ನೇನಾದರೂ ಇಲ್ಲವೆ? ಹಸಿವಾಗುವುದು" ಎನ್ನುತ್ತಾನೆ. ಹೆಂಡತಿ "ಬಂದೆ, ಕೊಂಚ ತಾಳಿ, 'ಗೃಹಿಣೀ ಧರ್ಮಸಾರಬೋಧಿನಿ', 'ಶಿಶುಸಂರಕ್ಷಣ ಸಂಗ್ರಹ'ವನ್ನು ಬರೆಯುತ್ತಿರುವೆನು. ಪೂರೈಸಿಬಿಡುವೆನು. ಸ್ವಾರಸ್ಯವಾದ ಜಾಗ, ಓದುತ್ತೇನೆ, ಕೇಳುತ್ತೀರಾ?" ಎನ್ನುತ್ತಾಳೆ.

ಮನೆಯ ಯಜಮಾಂತಿ ತಲೆನೋವು ಎಂದು ರಾತ್ರಿಯಿಂದ ಮಲಗಿದ್ದಳು. ಯಜಮಾನರು ಮಾತನಾಡಿಸಲು ಸಹ ಧೈರ್ಯ ಮಾಡಲಿಲ್ಲ. ಆ ವಿಷಯವನ್ನು ಆಳು ಬಾಗಿಲಿಸಲ್ಲಿ ಬಂದು ನಿಂತವನಿಗೆ ಹೇಳಿದ. ಅವನು "ಜವಳಿ ಅಂಗಡಿ ಗಿರಿಯಣ್ಣ

ಜನಳಿಗಂಟು ಹೊತ್ತುಕೊಂಡು ಬಂದಿದ್ದಾನೆಂದು ಹೇಳು" ಎಂದ. ಆಳು ಒಳಗೆ ಹೋಗಿ ಬಂದು "ಹೋಗಪ್ಪ, ನಿನ್ನ ಹೆಸರು ಹೇಳಿದ ಕೂಡಲೇ ಕುಳಿತುಕೊಂಡರು" ಎಂದು ಹೇಳಿದ.

ಶ್ರೀಕಂಠೇಶಗೌಡರ ಹಾಸ್ಯದಲ್ಲಿ ಲೋಕಾನುಭವ ಪೂರ್ಣವಾಗಿದೆ. ಒಬ್ಬ ಗರತಿ ನೆರೆಮನೆಯ ಸೊಸೆಯೊಂದಿಗೆ "ಗಂಡಸರಿಗೆ ಮಾತ್ರ ಎರಡು ಮೂರು ಹೆಂಡಿರು ಇರಬಹುದು. ಹೆಂಗಸು ಮಾತ್ರ ಯಾಕೆ ಒಬ್ಬ ಗಂಡನನ್ನೇ ಮಾಡಿಕೊಳ್ಳಬೇಕು?" ಎಂದು ಕೇಳುತ್ತಾಳೆ. ಸೊಸೆಯು ಹೆಂಗಸಿಗೆ "ಒಬ್ಬ ಗಂಡನೇ ಸಾಕಮ್ಮ" ಎಂದು ಉತ್ತರಿಸುತ್ತಾಳೆ. ನೆರೆಮನೆ ಗರತಿ "ಅದೇಕೆ?" ಎನ್ನುತ್ತಾಳೆ. ಸೊಸೆ "ಒಬ್ಬ ಅತ್ತೆ ಕಾಟ ತಡೆಯುವುದಕ್ಕೇ ಆಗದು" ಎನ್ನುತ್ತಾಳೆ. ಎಲ್ಲಿಯೂ ಹೋಗದಿರುವ ಸಮಕಲು ಅರ್ಧಾಣೆಯನ್ನು ಭಾವನವರ ವೈದಿಕದಲ್ಲಿ ಪುರೋಹಿತರಿಗೆ ಅದನ್ನು ದಕ್ಷಿಣೆಯಾಗಿ ಕೊಟ್ಟು ದಾಟಿಸಿದ ಸಂಗತಿ; "ಒಂದೂವರೆ ದಿವಸದಲ್ಲಿ ಒಂದೂವರೆ ಕೋಳಿ ಒಂದೂವರೆ ಮೊಟ್ಟೆ ಇಟ್ಟರೆ, ಒಂದು ಕೋಳಿ ಎಷ್ಟು ಇಡುವುದೆಂದು" ಉಪಾಧ್ಯಾಯರು ಕೇಳಲು ಶಿಷ್ಯ "ಅವರಿಗೆ ಹುಚ್ಚು ಹತ್ತಿದೆ" ಎಂದು ತೀರ್ಮಾನಿಸಿದುದು; ಆಚಾರ್ರು ಹೆಂಡತಿಗೆ "ನೀನು ದುಡ್ಡು ದುಡ್ಡು ಎಂದು ಕಾಡಿಸುತ್ತಿರುವುದರಲ್ಲಿ ನನ್ನ ಪ್ರಾಣ ಬೇರೆ ಉಳಿಯುವುದಿಲ್ಲ" ಎಂದಾಗ ಆಕೆ "ಹಾಗಾದರೆ ಈಗಲೇ ಹತ್ತು ರೂಪಾಯಿ ಹೆಚ್ಚಾಗಿ ಕೊಡಿ, ಅವಲಕ್ಕಿಗೆ ಭತ್ತವನ್ನು ಕೊಂಡು ಇಡುತ್ತೇನೆ. ಅನಂತರ ನಾನೆಲ್ಲಿಂದ ತರಲಿ?" ಎಂದು ಕೇಳುತ್ತಾಳೆ. ಬ್ರಾಹ್ಮಣ ವಿಧವೆಯ ಗತಿಯೇನೆಂಬುದು ಗೌಡರಿಗೆ ಚೆನ್ನಾಗಿ ತಿಳಿದಿತ್ತು. ಅರಮನೆ ದರ್ಬಾರಿಗೆ ಬಹಳ ಪ್ರಾಮುಖ್ಯತೆ ಇದ್ದ ಆ ಕಾಲದಲ್ಲಿ "ವಿಶ್ವಾಮಿತ್ರರ ಪಟ್ಟಿಗೆ ಸೇರಿದವರಿಗೆ ಕೆಂಪುಜೋಡು, ಶತಾನಂದರ ಪಟ್ಟಿಗೆ ಸೇರಿದವರಿಗೆ ಕರಿಜೋಡು, ಅದರಲ್ಲೂ ಮುಖ್ಯಸ್ಥರಾದವರಿಗೆ ಈ ಕಡೆ ಕೆಂಪುಜೋಡು, ಆ ಕಡೆ ಕರೀಜೋಡು, ಅರಮನೆ ಉದ್ಯೋಗಸ್ಥರಿಗಂತೂ ರಥೀದು ಹೇಳತಕ್ಕದ್ದೇ ಇಲ್ಲ. ಹಳೆಜೋಡು ರಾಸಿ ರಾಸಿ" ಎಂದಾಗ ಶೇಷಯ್ಯಂಗಾರ್ರು "ಜೋಡು ಅಲ್ಲ ಸ್ವಾಮಿ ಜೋಡಿ; ಶಾಲುಜೋಡಿ" ಎನ್ನುತ್ತಾರೆ. ಜಗದೇವರಾಯರೂ ಜನಾರ್ದನ ರಾಯರೂ ಮಾತನಾಡುತ್ತ "ಮಹಾರಾಜರ ಉಪನಯನಕ್ಕೆ ಬಂದವರೋ? ನೀವು ಯಾವ ಪಟ್ಟಿಗೆ ಸೇರಿದವರು? ಮಹಾರಾಜರ ಪಟ್ಟಿಗೋ, ದಿವಾನರ ಪಟ್ಟಿಗೋ?" ಎನ್ನುತ್ತಾರೆ. ಜನಾರ್ದನರಾಯರು ತಾವು "ದಿವಾನರ ಪಟ್ಟಿಗೆ" ಎಂದು ಉತ್ತರಿಸುತ್ತಾರೆ. ಜಗದೇವರಾಯರು "ನಾವು ಡಕಲ್ ಪಟ್ಟಿಗೆ ಸೇರಿದವರು" ಎನ್ನುತ್ತಾರೆ. ಜನತೆಯ ಸ್ವಭಾವ ಶ್ರೀಕಂಠೇಶಗೌಡರಿಗೆ ಹೇಗೆ ಚೆನ್ನಾಗಿ ಅರ್ಥವಾಗಿತ್ತು ಎಂಬುದಕ್ಕೆ ಒಂದು ಉದಾಹರಣೆ ಕೊಡಬಹುದು. ಉಪಾಧ್ಯಾಯರು ಹುಡುಗನನ್ನು "ನೀನು ಮಾಡಿದ ತಪ್ಪು ನಿನಗೆ ಗೊತ್ತಾದರೆ ಅದನ್ನು ತಪ್ಪೆಂದು ನೀನೆ ಒಪ್ಪಿಕೊಳ್ಳುತ್ತೀಯೆ ತಾನೆ?" ಎಂದು ಕೇಳುತ್ತಾರೆ. ಹುಡುಗನು "ಹಾಗುಂಟೆ? ಅದು ತಪ್ಪೆಂದು ಇತರರಿಗೆ ಗೊತ್ತಾದರೆ ಅನಂತರ ನಾನು ಒಪ್ಪಿಕೊಳ್ಳುತ್ತೇನೆ" ಎಂದು ಉತ್ತರ ಕೊಡುತ್ತಾನೆ.

ಶ್ರೀಕಂಠೇಶಗೌಡರು ನಮ್ಮ ಜನತೆಯ ಬಾಳನ್ನು ಪೂರ್ಣವಾಗಿ ಅರಿತವರು. ನಮ್ಮ ಜನಜೀವನದ ವೈವಿಧ್ಯ, ಆಳ ಅಗಲ, ನಮ್ಮಲ್ಲಿರುವ ನಾನಾ ಜಾತಿ, ಉಪಜಾತಿ, ಪಂಗಡ, ಒಳಪಂಗಡ, ರಾಜರು ಅರಮನೆಯ ನೌಕರರು ಗುರುಮನೆ ಕೋರ್ಟು ಲಾಯರು ಎಲ್ಲವನ್ನೂ ಅವರು ಕುತೂಹಲದಿಂದಲೇ ಅಧ್ಯಯನ ಮಾಡಿದ್ದರು. ನಮ್ಮ ಜಾನಪದ ಜೀವನವನ್ನೂ ಕುರಿತು ಅವರು ಅನೇಕ ಕಥೆಗಳನ್ನು ಬರೆದಿದ್ದಾರೆ. 'ದ್ವಾದಶಕುಮಾರರು', 'ಪುಷ್ಪಮಂಜರಿಯ ಕಥೆ' ಮುಂತಾದುವನ್ನು ಅವರು ಈಗ್ಗೆ 75 ವರುಷಗಳಿಗೆ ಮುಂಚೆಯೇ ಬರೆದಿರುವುದನ್ನು ನೋಡಿದರೆ, ಜಾನಪದ ಸಾಹಿತ್ಯದ ಪ್ರಾಮುಖ್ಯತೆಯನ್ನು ಅರಿತು ಕೆಲಸ ಮಾಡಿದವರಲ್ಲಿ ಅವರನ್ನು ಪ್ರಥಮರೆಂದು ಪರಿಗಣಿಸಬಹುದು. ಅವರ ಸಾಹಿತ್ಯದ ತುಂಬೆಲ್ಲ ಜನಜೀವನದ ಕಂಪು ಆವರಿಸಿದೆ. 'ಪ್ರಮೀಳಾರ್ಜುನೀಯ'ದಲ್ಲಾಗಲೀ 'ಸೀತಾಸ್ವಯಂವರ'ದಲ್ಲಾಗಲೀ ಜನಕರಾಯನ ಅರಮನೆ ಬಾಗಿಲಿನಲ್ಲಿಯಾಗಲೀ ಗೌಡರ ಕಾಲದ ಜನರು ಸೇರಿ ಚರ್ಚಿಸುತ್ತಿರುವುದೂ ತಮ್ಮ ಬಾಳಿನ ಸುರುಳಿಗಳನ್ನು ಬಿಚ್ಚುತ್ತಿರುವುದೂ ನಮಗೆ ಸರಸ ರಸದೌತಣವನ್ನು ಒದಗಿಸುತ್ತದೆ. ಗೌಡರ ಶೈಲಿಯ ಮಾರ್ಮಿಕತೆಯನ್ನು ಉದಹರಿಸಲು ಅವರು ಬರೆದ 'ಭೂಲೋಕದ ಯಮ' ಎಂಬ ಸಣ್ಣ ಕಥೆಯನ್ನೇ ತೆಗೆದುಕೊಳ್ಳಬಹುದು :

"ಕಳ್ಳತನ—ಪೂರ್ವದಲ್ಲಿ ಮೈಸೂರು ಸಂಸ್ಥಾನವನ್ನು ಆಳುತ್ತಿದ್ದ ಟಿಪ್ಪೂಸುಲ್ತಾನನ ತಂದೆಯಾದ ಹೈದರ್‌ಆಲಿಯನ್ನು (ದೊಡ್ಡ ನವಾಬರನ್ನು) ಕೇಳಬಲ್ಲಿರಷ್ಟೆ. ಅವನ ರಾಜ್ಯಭಾರದಲ್ಲಿ ಪಟ್ಟಣ, ಊರು, ಗ್ರಾಮ, ಊರುದಾರಿ, ಕಾಡುದಾರಿ ಮೊದಲಾದ ಯಾವ ಪ್ರದೇಶದೊಳಗಾದರೂ ಕಳ್ಳತನ, ಚೋರಿ, ದರೋಡೆ, ಕನ್ನಾಚೋರಿ ಮುಂತಾದ ಕಾರ್ಯಗಳು ನಡೆದರೆ, ಆ ಪ್ರದೇಶಕ್ಕೆ ಗೊತ್ತಾದ ಕಾವಲುಗಾರರನ್ನು ಕರೆಸಿ ತಡಮಾಡದೆ ಅವನನ್ನು ಶೂಲಕ್ಕೆ ಹಾಕಿಸುತ್ತಿದ್ದರು.

ಸರಕಾರದ ಹಣವನ್ನು ಸ್ವಂತಕ್ಕೆ ಬಳಸಿಕೊಳ್ಳುವುದು–ಸರಕಾರದ ನೌಕರರಲ್ಲಿ ಯಾವನಾಗಲಿ ಕಂದಾಯದ ಹಣವನ್ನು ಸ್ವಂತಕ್ಕೆ ಬಳಸಿಕೊಂಡರೆ, ದೊಡ್ಡ ನವಾಬನು ಅವನನ್ನು ಬರಮಾಡಿಕೊಂಡು, ವಿಚಾರಣೆ ಮಾಡಿ, ಅವನಿಂದ ಆ ಹಣ ಬಂದರೆ, ಅವನ ಅಪರಾಧವನ್ನು ಕ್ಷಮಿಸುತ್ತಿದ್ದನು. ಅದು ಹೊರ್ತು ಆ ನೌಕರನು ನಿರಾಕರಿಸಿದರೆ ಅದು ಬರುವವರೆಗೂ ಅವನಿಗೆ ಈ ಕೆಳಗಣ ಶಿಕ್ಷೆಯನ್ನು ವಿಧಿಸುತ್ತಿದ್ದನು : ಹೈದರ್‌ಆಲಿಯ ಅಪ್ಪಣೆಯ ಪ್ರಕಾರ ಊಳಿಗದವರು ಅಪರಾಧಿಯನ್ನು ಕುದುರೆಯಂತೆ ಹಿಂದೂ ಮುಂದೂ ಹಗ್ಗಗಳಿಂದ (ಅಗಾಡಿ–ಪಿಚಾಡಿ) ಕಟ್ಟಿ, ಒಂದು ಮರಕ್ಕೆ ಬಿಗಿದು ನಿರ್ವಾಣ ಮಾಡಿ, ಬೆನ್ನಿನ ಮೇಲೂ, ಕೆಳಗಡೆಯೂ ಕೊರಡೆಗಳಿಂದ ಹೊಡೆದು, ಗಾಯಗಳ ಮೇಲೆ ಉಪ್ಪಿನ ಪುಡಿಯನ್ನು ಸುರಿಯುತ್ತಾ ಅವನು ಕೂಗಿದರೆ ಬಾಯಿಮೇಲೆ ಪಾಪಾಸು ಮೆಟ್ಟುಗಳನ್ನು ಹಾಕುತ್ತಾ ಅದರ ಮೇಲೂ ಅಬ್ಬರಿಸಿದರೆ, ಕಣ್ಣುಗಳನ್ನು ಅಗಲಿಸಿ ಖಾರದ ಪುಡಿಯನ್ನು ಸುರಿಯುತ್ತಿದ್ದರು. ಇಷ್ಟು ಸುಲಭವಾದ ಶಿಕ್ಷೆಯಿಂದಲೂ ಹಣವು ಬಾರದೆಹೋದರೆ ಕಮ್ಮಾರರು ಬರಗುಳಗಳನ್ನು ಕೆಂಪಗೆ

ಕಾಯಿಸಿ ಅವುಗಳಿಂದ ಅವನ ಶರೀರದ ಮೇಲೆ ಬರೆಗಳನ್ನು ಎಳೆಯುತ್ತಿದ್ದರು. ಅಷ್ಟರಿಂದಲೇ ಅವನ ಗ್ರಹಚಾರವು ಪರಿಹಾರವಾಗುತ್ತಿರಲಿಲ್ಲ. ಅವನು ಬಂದೀಖಾನೆಯಲ್ಲಿಯೂ ಇದ್ದು, ಭಾರವಾದ ಬೇಡಿಗಳನ್ನು ಹೊತ್ತುಕೊಂಡು ಅರೆಹೊಟ್ಟೆಯ ಭೋಜನವನ್ನು ಮಾಡಬೇಕಾಗಿತ್ತು."

"ಒಬ್ಬ ಲಾಯರು ತನ್ನ ಮರಣಶಾಸನದಲ್ಲಿ ತನಗಿದ್ದ ಆಸ್ತಿಯನ್ನೆಲ್ಲ ಹುಚ್ಚರ ಆಸ್ಪತ್ರೆಗೆ ಧರ್ಮಾರ್ಥವಾಗಿ ಕೊಟ್ಟನು. ಇತರ ವಿಧವಾದ ಅನೇಕ ಧರ್ಮಕೆಲಸಗಳನ್ನು ಬಿಟ್ಟು, ಈ ರೀತಿ ಕೊಟ್ಟುದ್ದರ ಕಾರಣ ಕೇಳಿದುದಕ್ಕೆ 'ಯಾವ ಉದಾರಿಗಳಿಂದ ಅದನ್ನೆಲ್ಲ ಸಂಪಾದನೆ ಮಾಡಿದೆನೋ ಅವರ ಉಪಯೋಗಕ್ಕೇನೆ ಕೊಟ್ಟೆ' ಎಂದನು."

ಬಂಜಗೆರೆ ಜಯಪ್ರಕಾಶ

ಹೀಗೊಂದು ಪ್ರಸಂಗ

ಅದು ದಿನದ ಪ್ರಸವದ ಸಮಯ
ತಾರಸಿಯಿತ್ತು ಮೇಲೆ ಆಕಾಶವಿತ್ತು

ಬೆವರು ಸ್ನಾನದ ನಗರ
ಕತ್ತಲ ತೆಕ್ಕೆಯಲ್ಲಿ ತೂಕಡಿಸುತ್ತಿತ್ತು
ಬೀದಿ ದೀಪಗಳ ಕಾವಲಿಗೆ ಬಿಟ್ಟು

ನಡುವೆ ಸವೆದ ಪದಗಳನ್ನು
ಜಗಿಯುತ್ತಾ ನಾವು ಕೂತಿದ್ದೆವು.

* * *

ಹಾಲಲ್ಲದ್ದಿದ ಹತ್ತಿ ನಿನ್ನ ನಗು
ಕುತೂಹಲಕ್ಕೆ ಅದನ್ನು ಹಿಚುಕಿದೆ
ತೇವದ ಅಸ್ಥಿಪಂಜರ ಹೊರಬಿತ್ತು
ಮಾಮೂಲು.

ಹಗುರ ಶಬ್ದಗಳು ತೂರಿಕೊಂಡವು
ದಿಕ್ಕುಗಳ ಮನೆಯೊಳಗೆ

ಡಿಕ್ಕಿಸಿದಾಗೆಲ್ಲ ಜಾರುತ್ತಿದ್ದ ಕಣ್ಣುಗಳಲ್ಲಿ
ಕನಸು ಡಿಂಬಗಳ ಅಲೆಗಳಂಥ ಹಿಂಡಿತ್ತು

ನಾದಿದ ಮೈದಾಹಿಟ್ಟಿನ ಮೈ
ತಗಲುತ್ತಿತ್ತು
ಮಂಜು ಮನಸಿನ ಶೀತ

* * *

ಮುಗಿದರೆ ಮತ್ತೆ ಹಾಡಲಾಗದ
ರಾಗದ ನೀರಿನಲ್ಲಿ ತೇಲುತ್ತಿದ್ದೇವೆ ನಾವು

ಬಟ್ಟೆ ಮರೆತರೆ ಮಾಂಸ
ಬಿಚ್ಚಿಟ್ಟರೆ, ಭೇದಗಳ ಕಪ್ಪು
ಕಲಸಿಹೋಗುತ್ತೆ ಅಪರಿಚಿತ
ಪ್ರವಾಹದಲ್ಲಿ

ಹೀಗೆಂದುಕೊಂಡಾಗ ಮಾತ್ರ
ನಾನು ನೀನು ಮರೆತುಹೋಗುತ್ತೆ.

* * *

ಕ್ಷಮಿಸು—

ಕವನವಾಗಬೇಕೆಂಬ ನನ್ನ ಗೆಳತಿ
ಚಂದ್ರಮುಖಿಯೆನಲಾರೆ ನಿನ್ನ
ಹೂ, ಲತೆ, ತಾರೆ ಕೂಡ ;
ಕವಿ ಸಮಯಗಳ ಗರ್ಭಪಾತವಾಗಿದೆ.

ಸಹಿಸಿಕೋ—

ರಾತ್ರಿಯ ದಪ್ಪ ಪದರಿನಲ್ಲಿ ನಿನ್ನ
ಹೊಂಗೂದಲು ಹೊಳೆಯದಿರಬಹುದು

ಕ್ಲೀಷೆಗಳ ಹುದುಲುಮರಳಲ್ಲಿನ
ಕವನಗಳು ನಿನ್ನ
ಹುತಾತ್ಮಳನ್ನಾಗಿಸದಿರಬಹುದು.

ಎಸ್. ಎನ್. ಶ್ರೀನಾಥ್

ಕೆಲವು ಕಿರುಗವನಗಳು

ಹಿತ

ಜಗತ್ತೆಲ್ಲ ಉರಿಬಿಸಿಲಿನ ಕಾವಿನಲ್ಲಿ
ಸುಡುತ್ತಿದ್ದರೂ, ನನಗೆ ಮಾತ್ರ
ತಂಪೆಂಬ ಭಾವನೆ ಮೂಡುತಿದೆ
ನೀನೊಲಿದು ಸನಿಹದಲಿ ನಿಂತಿರಲು

ತೆರೆದ ಹೃದಯ

ಹೃದಯದ ಬಾಗಿಲನು ತೆರೆದಿರುವೆ ನಿನಗಾಗಿ
ಬಂದು ಸೇರು ಅದರೊಳಗೆ ಪ್ರೇಮಿಯಾಗಿ
ಬೇಡ ದೂರದಲ್ಲಿರುವಂತೆ ಭೂಮಿ ಬಾನು
ಒಂದಾಗಿರುವ ಬೆರೆತಂತೆ ಹಾಲು ಜೇನು

ಭಯ

ಕದ್ದು ಮುಚ್ಚಿ ಪಾರ್ಕಿನಲ್ಲಿ
ಸಂಧಿಸುವ ಯುವ ಪ್ರೇಮಿಗಳಿಗೆ
ತಂದೆತಾಯಿಗಳಿಗಿಂತ ಕಾಡುವ
ಪುಂಡ ಹುಡುಗರದೆ ಭಯ !

ಆಸೆ

ಚಕೋರಕೆ ಚಂದ್ರನ ಆಸೆ
ಕಮಲಕೆ ಸೂರ್ಯನ ಆಸೆ
ಹೂವಿಗೆ ದುಂಬಿಯ ಆಸೆ
ಆದರೆ ನನಗೆ ಸದಾ ನಿನ್ನೆದೆಗೆ
ಒರಗಿರುವ ಪುಸ್ತಕವಾಗುವ ಆಸೆ !

ಅರಳಿದ ಮನ

ಬರಡಾಗಿತ್ತು ನನ್ನ ಮನ
ನಿನ್ನ ಆಗಮನದ ಮುನ್ನ
ಈಗದು ಹೂವಾಗಿ ಅರಳಿ
ಬೀರುತಿದೆ ಪ್ರೇಮದ ಕಂಪನ್ನ

ಬಯಕೆಯ ಬಯಲು

ನನ್ನ ಹೃದಯ ಚಿಕ್ಕದು
ಆದ್ದರಿಂದ ನಿನಗೊಬ್ಬಳಿಗೆ ಸ್ಥಾನ ;
ನನ್ನ ಮನಸ್ಸು ವಿಶಾಲವಾದದ್ದು
ನೂರಾರು ಬಯಕೆಗಳಿಗೆ ತಂಗುದಾಣ !

ಕೇಸಿ. ವಿಶ್ವೇಶ್ವರಯ್ಯ

ಗಡಿನಾಡ ಕನ್ನಡ ತಾಯಿ

ಗಡಿನಾಡ ಕನ್ನಡ ತಾಯಿ ಜಯದೇವಿತಾಯಿ ಲಿಗಾಡೆ ಅವರು ಮರಾಠಿಗರ ಪ್ರಾಬಲ್ಯವಿರುವ ಸೊಲ್ಲಾಪುರದಂತಹ ಅಚ್ಚಗನ್ನಡ ಪ್ರದೇಶದಲ್ಲಿ ಕನ್ನಡವನ್ನು ಬೆಳಸಿ ನೀರೆರೆದು ಪೋಷಿಸಿದವರು. ಲಿಗಾಡೆ ಅವರು ಕಳೆದ ನಾಲ್ಕು ದಶಕಗಳಿಂದಲೂ ಕನ್ನಡನಾಡನ್ನು ಕಟ್ಟುವ ಕನಸನ್ನು ತಮ್ಮ ಜೀವನದ ಸಾಧನೆಯಾಗಿ ಮಾಡಿ ನಿಷ್ಠೆಯಿಂದ ಸೇವೆ ಮಾಡಿ ಕೀರ್ತಿ ಪಡೆದವರು. ಕನ್ನಡನಾಡಿನ ಕವಿಗಳಿಂದ ಒಂದು ರೂಪರೇಷೆ ಪಡೆದು ಸತ್ವವನ್ನು ಕಾಯ್ದುಕೊಂಡು ಬಂದ ಈ ನಾಡಿನ ಗಡಿರಕ್ಷಣೆ ಮಾಡಲು ಹಗಲಿರುಳು ಎನ್ನದೆ ಕಂಕಣ ಕಟ್ಟನಿಂತ ವೀರವನಿತೆ. ಗಡಿನಾಡೇ ಆಗಲಿ, ನಡುನಾಡೇ ಆಗಲಿ, ಎಲ್ಲೆಲ್ಲಿ ಕನ್ನಡದ ಹಿತಕ್ಕೆ ಧಕ್ಕೆ ಒದಗಿಬರುತ್ತೋ ಅಲ್ಲಲ್ಲಿ ಅವರು ಕಾಳಿಯಾಗಿ ಗರ್ಜಿಸಿ, ಮಾತೆಯಾಗಿ ರಕ್ಷಿಸುವ ಪಣತೊಟ್ಟವರಾಗಿದ್ದರು. ಅವರ ಈ ಪಣ ಕೇವಲ ಆಡಳಿತಾತ್ಮಕ ರಾಜಕೀಯಕ್ಕೆ ಸೀಮಿತವಾಗಲಿಲ್ಲ. ಒಳ್ಳೆಯ ಸಂಸ್ಕೃತಿಯ ಸ್ತರಗಳನ್ನು ಸೃಜಿಸುವಲ್ಲಿಯೂ ಸಫಲವಾಯಿತು. ಈ ಹೋರಾಟವು ನಾಡಿನ ಸಾಂಸ್ಕೃತಿಕ ಭವ್ಯ ಪರಂಪರೆಯ ಅಂತರಂಗ ಬಹಿರಂಗಗಳ ಸಮನ್ವಯಾಭಿವ್ಯಕ್ತಿ ಸ್ವರೂಪವನ್ನು ಪಡೆಯಿತು.

ಇಂತಹ ಪುಣ್ಯಜೀವಿ, ಸಿದ್ಧರಾಮನ ಮನೆಯ ಮಗಳು, 1912 ಜೂನ್ 23 ರಂದು ಶರಣ ಚನ್ನಬಸಪ್ಪ ಮಡಕಿ ಮತ್ತು ಶರಣೆ ಸಂಗವ್ವಬಾಯಿ ಮಡಕಿ ಅವರ ಪುಣ್ಯಗರ್ಭದಲ್ಲಿ ಜನಿಸಿದರು. ಜಯದೇವಿಯವರ ಮನೆತನ ಸೊಲ್ಲಾಪುರದ ಪ್ರಾಂತ್ಯದಲ್ಲೇ ಶ್ರೀಮಂತವಾದದ್ದು. ಸೊಲ್ಲಾಪುರದ ಮರಾಠಿ ಶಾಲೆಯಲ್ಲಿ ಬಾಲ್ಯ ಶಿಕ್ಷಣವನ್ನು ಪಡೆದು, ಮೆಟ್ರಿಕ್ ಪರೀಕ್ಷೆಯವರೆಗೆ ಮಾತ್ರ ಕಲಿತರು. ಕಲಿತಿದ್ದು ಕಡಿಮೆ ಎನಿಸಿದರೂ ಗಳಿಸಿದ್ದು ಅಪಾರವಾದದ್ದು. ಅವರ ಹದಿನಾಲ್ಕನೆಯ ವಯಸ್ಸಿನಲ್ಲಿ ಮದುವೆ ಆಯಿತು. ಮನುಷ್ಯ ಮನಸ್ಸುಮಾಡಿ ಶ್ರಮಿಸಿದರೆ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ತಾಯಿಯವರ ಜೀವನ ಸಾಕ್ಷಿಯಾಗಿದೆ. ಮೆಟ್ರಿಕ್‌ವರೆಗೆ ಅಭ್ಯಾಸಮಾಡಿದರೂ ಅವರು ಬದುಕಿನಲ್ಲಿ ಕಲಿತಿದ್ದು ಹೆಚ್ಚು. ವಿಶ್ವವಿದ್ಯಾನಿಲಯದ ಉನ್ನತ ಗೌರವವಾದ ಡಾಕ್ಟರೇಟ್ ಪದವಿಯನ್ನು ಪಡೆದರು.

ತಮ್ಮ ಜೀವನದಲ್ಲಿ ಮಂಜೇಶ್ವರ ಕನ್ನಡನಾಡಿಗೆ ಸೇರುತ್ತದೆ. ನನ್ನ ಭಾಷೆಯ ಜನರೊಡನೆ ನಾನು ಒಂದಾಗಿ ಬಾಳುವ ದಿನ ದೂರವಿಲ್ಲ ಎಂದು ಕನಸು ಕಂಡವರು ದಿವಂಗತ ಗೋವಿಂದ ಪೈಗಳು. ಅವರು ತಮ್ಮ ಅಂಚೆ ವಿಳಾಸವನ್ನು ಮಂಜೇಶ್ವರ ದಕ್ಷಿಣ ಕನ್ನಡ ಎಂದೇ ಬರೆಯುತ್ತಿದ್ದರು. ಆದರೆ ತಮ್ಮ ಕೊನೆ ಉಸಿರನ್ನು ಕಾಸರಗೋಡು ಪ್ರಾಂತ್ಯದಲ್ಲಿಯೇ ಬಿಡುವ ಪ್ರಸಂಗ ಬಂದಿತು. ಇದೇ ರೀತಿ ಉತ್ತರದ ಗಡಿನಾಡಿನಲ್ಲಿದ್ದುಕೊಂಡು ಕನ್ನಡನಾಡಿನ ಏಕೀಕರಣದ ಕನಸುಕಂಡವರು ಜಯದೇವಿತಾಯಿ. ಕನ್ನಡನಾಡ ಬಂಧುಗಳೊಡನೆ ಒಂದಾಗಿ ಬದುಕುವ ಆಸೆ ಯಿಂದಲೇ ಕೊನೆಯುಸಿರೆಳೆದರು. ಕರ್ಣಾಟಕದಲ್ಲಿ ಏಕೀಕರಣ ಚಳುವಳಿ ಆರಂಭ ಗೊಂಡಾಗ ಗಡಿನಾಡಿನಲ್ಲಿ ಏಕೀಕರಣ ಚಳುವಳಿಗೆ ತೊಡಗಿಸಿಕೊಂಡು ಗ್ರಾಮ ಗ್ರಾಮಗಳನ್ನು ಸುತ್ತಿ ಜನರನ್ನು ಸಂಘಟಿಸಿದವರು ಲಿಗಾಡೆಯವರು. ಸೊಲ್ಲಾಪುರ ಮತ್ತು ಅಲ್ಲಿನ ಆಡಳಿತ ನಡೆಸುವವರ ಪ್ರಬಲ ವಿರೋಧದಲ್ಲಿಯೂ ಕನ್ನಡತನವನ್ನು ಜನತೆಯ ಮನಸ್ಸಿಗೆ ತುಂಬಿದ ಕೀರ್ತಿ ಜಯದೇವಿತಾಯಿ ಅವರಿಗೆ ಸೇರುತ್ತದೆ.

ಹಾಸನ ಜಿಲ್ಲೆಯ ಬೇಲೂರಿನಲ್ಲಿ 1952ರಲ್ಲಿ ಮೂವತ್ತ ಐದನೆಯ ಸಾಹಿತ್ಯ ಸಮ್ಮೇಳನದ ಬಹಿರಂಗ ಅಧಿವೇಶನ ನಡೆಯಿತು. ಅಲ್ಲಿ ಅಖಂಡ ಕರ್ನಾಟಕ ರಚನೆ ಯಾಗಬೇಕೆಂದು ಗೊತ್ತುವಳಿಯ ಮಂಡನೆಯಾಯಿತು. ಆಗ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಎಂದು ಬರಿದೆ ಹಾಡುವಿರೇಕೆ ? ಅಧಿಕಾರಲಾಲಸೆ ಬಿಟ್ಟು ಕರ್ನಾಟಕಕ್ಕೆ ಹೋರಾಡುವಿರಾ ? ನಡುನಾಡಿನಲ್ಲಿರುವ ಕನ್ನಡಿಗರು ನೀವು, ಗಡಿನಾಡಿನಲ್ಲಿರುವ ಕನ್ನಡಿತಿ ನಾನು, ನಮ್ಮ ಕಷ್ಟ ನಮ್ಮ ತುಳಿತ ನಿಮಗೆಂತು ಗೊತ್ತಾದೀತು ಅಣ್ಣಂದಿರೇ, ಸೊಲ್ಲಾಪುರದ ಗೊಡವೆ ಏಕೆ ಎನ್ನುವಿರಾ ? ಇಂದು ಸೊಲ್ಲಾಪುರಕ್ಕೆ ಒದಗಿದ ಗತಿಯೇ ನಾಳೆ ಬೇಲೂರಿಗೂ ಬರಬಹುದು ಎಂದು ಭಾವಪರವಶರಾಗಿ ನುಡಿದ ತಾಯಿ ಏಕೀಕರಣಕ್ಕಾಗಿ ನಾನಂತೂ ನನ್ನ ಪ್ರಾಣ ಕೊಡಲು ಸಿದ್ಧಳಿರುವೆ ಎಂದು ಕಂಬನಿತುಂಬಿ ವ್ಯಥೆಯಿಂದ ನುಡಿದರು. ಅಧಿ ವೇಶನದಲ್ಲಿ ಯಾರೂ ಮರುಮಾತನಾಡದೆ ಏಕೀಕರಣವನ್ನು ಬೆಂಬಲಿಸುವ ನಿರ್ಣಯ ಮಾಡಿದರು. ಸಾಹಿತ್ಯ ಸಮ್ಮೇಳನ ಒಂದರಲ್ಲಿ ಇಂತಹ ನಿರ್ಣಯವನ್ನು ಅಂಗೀಕರಿಸು ವಂತೆ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. ಈ ಸಾಧನೆಯ ಹಿಂದೆ ತಾಯಿ ಯವರ ವ್ಯಕ್ತಿತ್ವ ಅಡಗಿದೆ.

ಅವರು ಮರಾಠಿಯನ್ನು ಶಾಲೆಯಲ್ಲಿ ಕಲಿತರು. ನಂತರ ಕನ್ನಡವನ್ನು ಸ್ವಂತ ಆಸಕ್ತಿಯಿಂದ ಕಲಿತರು. ಸಾಹಿತ್ಯವನ್ನು ಅಭ್ಯಾಸಮಾಡಿದರು. ಗಡಿನಾಡಿನಲ್ಲಿ ಕನ್ನಡ ಶಾಲೆಗಳಿಲ್ಲದೆ ಎಲ್ಲಾ ಮಕ್ಕಳು ಅನಿವಾರ್ಯವಾಗಿ ಮರಾಠಿ ಶಾಲೆಗಳಿಗೆ ಹೋಗುತ್ತಿದ್ದರು. ಕನ್ನಡ ಮಕ್ಕಳ ಬವಣೆಯ ನಿವಾರಣೆಗಾಗಿ ಕನ್ನಡ ಶಾಲೆಗಳನ್ನು ಹುಟ್ಟುಹಾಕಿದರು. ಹುಟ್ಟನಿಂದಲೇ ಶ್ರೀಮಂತರಾದ ಇವರು ಬದುಕಿನಲ್ಲಿ ಸಮೃದ್ಧ ರಾಗಿದ್ದರು. ಇತ್ತ ಕೈಯಲ್ಲದೆ, ಬೇಡಿದ ಕೈಯಲ್ಲ. ಅನೇಕ ಮಠಮಾನ್ಯಗಳಿಗೆ

ಸಂಘಸಂಸ್ಥೆಗಳಿಗೆ ಉದಾರವಾಗಿ ಸಹಾಯ ಮಾಡಿದ್ದಾರೆ. ಕರ್ಮಯೋಗಿ ಸಿದ್ಧರಾಮನ ಬೀಡು ಸೊಲ್ಲಾಪುರದಲ್ಲಿದ್ದ ತಾಯಿಯವರ ಮೇಲೆ ಸಿದ್ಧರಾಮನ ಜೀವನತತ್ವ ಸಹಜವಾಗಿ ಪ್ರಭಾವ ಬೀರಿದವು.

ಜಯದೇವಿತಾಯಿಯವರು ಕನ್ನಡದ ಪ್ರಚಾರ ಮತ್ತಿತರ ಸಾಮಾಜಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳ್ಳದೆ, ಸಾಹಿತ್ಯ ಸೇವೆಯನ್ನೂ ಮಾಡಿದರು. ಈ ಶತಮಾನದ ಅಗ್ರಗಣ್ಯ ಕವಯಿತ್ರಿಯಾಗಿ ಹೆಸರು ಗಳಿಸಿದರು. ಪ್ರಥಮವಾಗಿ 1952ರಲ್ಲಿ 'ಜಯಗೀತ' ಎಂಬ ಕವನ ಸಂಕಲನ ಪ್ರಕಟವಾಯಿತು. 'ಜಯಗೀತ' ಅವರ ಅಂತರಂಗದ ಹೋರಾಟ ಮತ್ತು ಮಾನಸಿಕ ತುಮುಲಗಳನ್ನು ಸಮರ್ಥವಾಗಿ ಪ್ರಕಟಗೊಳಿಸಿರುವ ಮೊದಲ ಸಂಕಲನವಾಗಿದೆ. 1956ರಲ್ಲಿ 'ತಾಯಿಯ ಪದಗಳು' ಎಂಬ ಸಾಂಗತ್ಯ ರೂಪದಲ್ಲಿರುವ ಕವನ ಸಂಗ್ರಹ ಪ್ರಕಟವಾಯಿತು. ಧರ್ಮ, ನೀತಿ, ದೇಶಭಕ್ತಿ, ರಾಜಕಾರಣ ಮುಂತಾದ ವಿಭಿನ್ನ ಸಂಗತಿಗಳ ಮತ್ತು ಬದುಕಿನ ಸಹಜ ವಿಷಯಗಳ ಸ್ಪಂದನವೇ ಈ ಕೃತಿ.

1965ರಲ್ಲಿ ಪ್ರಕಟವಾದ 'ಸಿದ್ಧರಾಮೇಶ್ವರ ಪುರಾಣ' ಕನ್ನಡದ ಮೇರು ಕೃತಿ. ತ್ರಿಪದಿಯಲ್ಲಿ ಬರೆದವರು ಬಹಳ ಕಡಿಮೆ. ಜಯದೇವಿತಾಯಿಯವರಷ್ಟು ತ್ರಿಪದಿಗಳನ್ನು ಸರ್ವಜ್ಞನೂ ಬರೆದಂತೆ ಕಾಣುವುದಿಲ್ಲ. ತ್ರಿಪದಿಯಲ್ಲಿಯೇ ಒಂದು ಮಹಾಕಾವ್ಯವನ್ನು ರಚಿಸಿದ ಕೀರ್ತಿ ತಾಯಿಯವರದು. ಹನ್ನೆರಡನೆಯ ಶತಮಾನದ ವಚನಕಾರ ಸಿದ್ಧರಾಮನ ಜೀವನ ಸಾಧನೆಗಳನ್ನು, ಸಿದ್ಧಿಗಳನ್ನು ಸಮಗ್ರವಾಗಿ ಚಿತ್ರಿಸಿರುವ ತ್ರಿಪದಿಕಾವ್ಯವಾಗಿದೆ. ಇವರ ಎಷ್ಟೋ ತ್ರಿಪದಿಗಳು ಜಾನಪದದಿಂದ ಬೇರೆ ಮಾಡಲಾರದಷ್ಟು ಸುಂದರವಾಗಿವೆ. ಭಾಷೆಯ ಗಾಂಭೀರ್ಯ ಮತ್ತು ಶರಣತೆಯ ಅನುಭವ ಪ್ರೌಢಿಮೆಗಳ ಸಂಗಮವಾಗಿದೆ. ಸಿದ್ಧರಾಮನನ್ನು ಕುರಿತ ರಾಘವಾಂಕ ಕವಿಯ 'ಸಿದ್ಧರಾಮಚಾರಿತ್ರ್ಯ'ವನ್ನು ಸತತವಾಗಿ ಅಭ್ಯಾಸ ಮಾಡಿ, ಸಿದ್ಧನ ಜೀವನ ಸಾಧನೆಗಳನ್ನು, ವ್ಯಕ್ತಿತ್ವವನ್ನು ತಮ್ಮ ಭಾವನೆಯಲ್ಲಿ ಚಿತ್ರಿಸಿಕೊಂಡು ನಂತರ ಕಾವ್ಯರೂಪದಲ್ಲಿ ತಂದಿದ್ದಾರೆ. ಸೊಲ್ಲಾಪುರದ ಅಂದಿನ ಸನ್ನಿವೇಶ, ಸುಗ್ಗಲಾದೇವಿ ಮುದ್ದುಗೌಡ ಮತ್ತು ಅಂದಿನ ಗ್ರಾಮೀಣ ಚಿತ್ರವನ್ನು ಅಲ್ಲದೆ ಸಿದ್ಧರಾಮನು ಬಾಲ್ಯದಲ್ಲಿ ತೋರಿದ ಒಂದು ರೀತಿಯ ಅಲೌಕಿಕ ಸಂಗತಿಗಳನ್ನು ವಿವರವಾಗಿ ನಿರೂಪಿಸಿದ್ದಾರೆ.

'ಸಿದ್ಧರಾಮ ಪುರಾಣ'ವು ನಲವತ್ತ ಒಂದು ಸಂಧಿಗಳನ್ನು, ನಾಲ್ಕು ಸಾವಿರದ ನೂರಇಪ್ಪತ್ತೊಂಬತ್ತು ತ್ರಿಪದಿಗಳನ್ನು ಒಳಗೊಂಡಿದೆ. ಐದುನೂರ ಅರವತ್ತು ಪುಟಗಳ ಈ ಕೃತಿಯಲ್ಲಿ ಟಿಪ್ಪಣಿ ಅರ್ಥಕೋಶ ಪಾರಿಭಾಷಿಕ ಪದಗಳನ್ನು ಕೊಡಲಾಗಿದೆ. ಪ್ರಥಮ ಮುದ್ರಣವನ್ನು 1965ರ ಜೂನ್‌ನಲ್ಲಿ ಕಂಡು ನಂತರ ಎರಡು ಮುದ್ರಣವನ್ನು ಕಂಡಿದೆ. ತಮ್ಮ ಆರಾಧ್ಯದೈವ ಸೊನ್ನಲಿಗೆಯ ಸಿದ್ಧರಾಮನನ್ನು ಕುರಿತು ಬರೆದ ಈ ಮಹಾಕಾವ್ಯ ಅವರ ಶ್ರೇಷ್ಠ ಕೃತಿ. ಈ ಕೃತಿಯಲ್ಲಿ ಒಂದು ವಿಶಿಷ್ಟವಾದ

ಜೀವನ ದರ್ಶನ ರೂಪುಗೊಂಡಿದೆ. ಡಾ. ಜಿ. ಪಿ. ರಾಜರತ್ನಂ ಅಭಿಪ್ರಾಯದಂತೆ ಇದೊಂದು ಮಹಾಕಾವ್ಯ ಎಂಬುದರಲ್ಲಿ ಸಂದೇಹವಿಲ್ಲ. ಕೃತಿ ಘನವಾದುದು ಎಂದು ಗೋಕಾಕರು ಹೇಳಿದ್ದಾರೆ. ತಾಯಿಯವರು ಜನಪದ ಕಾವ್ಯವನ್ನು ಹೊಸ ಎತ್ತರಕ್ಕೊಯ್ದು ಮುಟ್ಟಿಸಿದ್ದಾರೆಂದು ನಿರಂಜನರು ಅಭಿಪ್ರಾಯಪಡುತ್ತಾರೆ.

'ಸಿದ್ಧರಾಮಪುರಾಣ'ದ ರಚನೆಯ ಕಾಲಕ್ಕೆ ತಾಯಿಯವರ ಆರೋಗ್ಯ ಚೆನ್ನಾಗಿರಲಿಲ್ಲ. ಆಗಲೂ ಅವರು ಅಂಜದೆ ಕೆಲಸ ಮುಂದುವರಿಸಿದರು.

ತಾಳುವೆನು ಯಾತನೆಯ । ಬಾಳುವೆನು ನಿನಗಾಗಿ
ಕಾಳ ಬಂದರು ನಾನು ಹೆದರೇನು- ಸಿದ್ಧರಾಮ
ದಾಳಿ ತಂದಿರುವೆ ಈ ದೇಹಕ್ಕೆ,

ತನು-ಮನ-ಧನಗಳನ್ನು ಅಲ್ಲಾಡಿಸಿದ ಪರಿಸ್ಥಿತಿ; ದಿನನಿತ್ಯ ವೈದ್ಯಕೀಯ ಚಿಕಿತ್ಸೆ. ಆಗಲೂ ಸಿದ್ಧರಾಮನ ಕೃಪೆಗಾಗಿ ನೆನೆದು ತಮ್ಮ ದೃಢತೆಯನ್ನು ಕಾಯ್ದುಕೊಂಡಿದ್ದರು.

ಮೀಸಲಿದ್ದ ಕೈಗೆ। ಏಸೊಂದು ಸೂಜಿಯು
ಸೋಸಿ ನೋಡಲು ತನುವನು ಸಿದ್ಧರಾಮ
ನಸುನಗುತ ನಿನ್ನ ನೆನೆಯುವೆ.

ಈ 'ಸಿದ್ಧರಾಮಪುರಾಣ' ಮಹಾಕಾವ್ಯ ರಚನೆಯ ಕಾಲದಲ್ಲಿಯೇ ತಮ್ಮ ಕೈಯಲ್ಲಿದ್ದ ಚಿನ್ನದ ಬಳೆಗಳನ್ನು ಒಮ್ಮೆ ನೋಡಿದಾಗ ಅವು ಬೇಡವೆನಿಸಿದವು. ಸಿದ್ಧರಾಮನಿಗಾಗಿ ಮೀಸಲಾದ ಕೈಗೆ ಚಿನ್ನದ ಹಂಗು ಏಕೆ ಎಂದೆನಿಸಿ ಅವುಗಳನ್ನು ತೆಗೆದು ಚಿನ್ನದ ಬಳೆಗಳ ಸ್ಥಾನಕ್ಕೆ ರುದ್ರಾಕ್ಷಿ ಕಂಕಣವನ್ನು ಧರಿಸಿದರು.

ತಾವು ಈ ಕಾವ್ಯದಿಂದ ಯಾರನ್ನೂ ಮೆಚ್ಚಿಸಬೇಕಾಗಿಲ್ಲ, ನನ್ನ ಹೃದಯದಲ್ಲಿ ಮೂಡಿದ ನುಡಿಯನ್ನು ಹೇಳುತ್ತಿದ್ದೇನೆ ಎನ್ನುತ್ತಾರೆ :

ಮುಚ್ಚಿಟ್ಟು ಬರೆದಿಲ್ಲ। ಮೆಚ್ಚಿಸಲು ಕೊರಗಿಲ್ಲ
ಬಿಚ್ಚು ಹೃದಯದಿಂದ ಮೂಡಿಹವು ಪದಗಳು
ಬಚ್ಚಿಟ್ಟ ಬಯಕೆಯ ನುಡಿದಿಹವು.

ಎಲ್ಲವೂ ಗೊತ್ತೆಂಬ ಭಾವನೆ ತನಗಿಲ್ಲ, ಬಲ್ಲವರು ಹೇಳಿ ಕಲಿಸಿ ಎಂದು ಹೇಳುವ ಮೂಲಕ ತಮ್ಮ ವಿನಯ ಸೌಜನ್ಯವನ್ನು ನಿರೂಪಿಸಿದ್ದಾರೆ :

ಪಂಡಿತರ ಮೆಚ್ಚಿಸಲು । ಖಂಡಿತ ಬರೆದಿಲ್ಲ
ಮಂಡಿಸಲು ವಾದ ಬಂದಿಲ್ಲ-ಮೂಡಿಹವು
ಚಂಡ ಸಿದ್ದೇಶನ ಬಲವಿದು.

ಸೊನ್ನಲಗೆಯ ಸಿದ್ಧರಾಮ ತಾಯಿಯವರ ಜೀವನ ಸರ್ವಸ್ವವಾಗಿದ್ದ. ತಮ್ಮ ಬದುಕಿನ ಎಲ್ಲ ಸಂಗತಿಗಳೂ ಸಿದ್ಧರಾಮನ ಅನುಗ್ರಹವಿಲ್ಲದೆ ನಡೆಯದೆನ್ನುವ ಅಚಲ ವಿಶ್ವಾಸ ಭಕ್ತಿ ಅವರಿಗಿತ್ತು.

1968ರಲ್ಲಿ 'ತಾರಕ ತಂಬೂರಿ' ಎಂಬ ಅನುಭಾವ ಹಾಡುಗಬ್ಬಗಳ ಸಂಕಲನ ಪ್ರಕಟವಾಯಿತು. ಇದು ಭಕ್ತಿಯ ನಿಚ್ಚಳಿಕೆ ಅನುಭಾವಗಳು ಮೇಳೈಸಿದ ಕೃತಿಯಾಗಿದೆ. ಸಿದ್ಧರಾಮನನ್ನು ಕುರಿತು ಸಣ್ಣ ಗದ್ಯ ಕೃತಿಯನ್ನು ರಚಿಸಿದ್ದಾರೆ. 'ಸಿದ್ಧವಾಣಿ', 'ಬಸವದರ್ಶನ', 'ಮಹಾಯೋಗಿನಿ', 'ಸಮೃದ್ಧ ಕರ್ನಾಟಕಾಂಚಿ ರೂಪರೇಷಾ', 'ಬಸವವಚನಾಮೃತ' ಮುಂತಾದ ಕೃತಿಗಳನ್ನು ಮರಾಠಿಯಲ್ಲಿ ರಚಿಸಿದ್ದಾರೆ. ಇಷ್ಟರಲ್ಲೇ ಮಹಾರಾಷ್ಟ್ರ ಸರ್ಕಾರದಿಂದ ಇವರ 'ಶೂನ್ಯ ಸಂಪಾದನೆ' ಕೃತಿ ಪ್ರಕಟವಾಗಲಿದೆ.

1950ರಲ್ಲಿ ಮುಂಬಯಿನಲ್ಲಿ ಜರುಗಿದ ಮೂವತ್ತಎರಡನೆಯ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯ ಅಧ್ಯಕ್ಷೆಯಾಗಿದ್ದರು. ಹುಬ್ಬಳ್ಳಿ ತುಮಕೂರುಗಳಲ್ಲಿ ನಡೆದ ಅಖಿಲಭಾರತ ವೀರಶೈವ ಮಹಿಳಾ ಪರಿಷತ್ತುಗಳ ಅಧ್ಯಕ್ಷತೆಯನ್ನು ವಹಿಸಿದ್ದರು. ಅಲ್ಲದೆ ಉಡುಪಿಯಲ್ಲಿ ನಡೆದ ವಿಶ್ವಹಿಂದೂ ಪರಿಷತ್ತಿನ ಮಹಿಳಾ ಗೋಷ್ಠಿಯ ಅಧ್ಯಕ್ಷರಾಗಿದ್ದರು. ಕೇಂದ್ರ ಸಾಹಿತ್ಯ ಅಕಾದೆಮಿಯ ಸದಸ್ಯರಾಗಿಯೂ ಸೇವೆ ಮಾಡಿದ್ದಾರೆ. 1974ರಲ್ಲಿ ಮಂಡ್ಯ ನಗರದಲ್ಲಿ ಜರುಗಿದ ನಲವತ್ತಎಂಟನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಸಂದರ್ಭವನ್ನು ಗಮನಿಸಿದರೆ ಪ್ರಥಮವಾಗಿ ಮಹಿಳೆ ಅಖಿಲಭಾರತ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾದದ್ದು ಮೊದಲು ಎಂಬುದನ್ನು ಮರೆಯುವಂತಿಲ್ಲ. ಶಿಕ್ಷಣ, ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ, ಗಡಿನಾಡಿನಲ್ಲಿ ಕನ್ನಡ ಹರಿಕಾರರೆಂದು ಪ್ರಸಿದ್ಧರಾದ ತಾಯಿಯವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿ ಕನ್ನಡಿಗರು ಗೌರವಿಸಿದರು. ಅಧ್ಯಕ್ಷ ಪೀಠದಿಂದ ಅವರು ಹೇಳಿದ ಮಾತುಗಳು ನಿತ್ಯಸತ್ಯವಾದ ಸಂಗತಿಗಳಾಗಿವೆ.

"ನಮಗೆ ಯಾರೊಡನೆಯೂ ದ್ವೇಷವಿಲ್ಲ ಮತ್ತು ಅದು ಈ ಜನಾಂಗದ ಗುಣವೂ ಅಲ್ಲ. ಹತ್ತು ದಿಕ್ಕಿನಿಂದ ಬಂದವರನ್ನು ತೆರೆದ ಹೃದಯದಿಂದ ಬರಮಾಡಿಕೊಂಡಿದ್ದೇವೆ. ಹತ್ತು ಇಪ್ಪತ್ತು ವರ್ಷಗಳಿಂದ ಕನ್ನಡ ನೆಲದಲ್ಲಿ ಬದುಕಿ ನೆಲೆಯೂರಿದ ಇತರ ಪ್ರಾಂತಗಳ ಸೋದರರಿಗೆ ಕನ್ನಡ ನುಡಿ ಬಾರದೆ ಹೋದರೆ, ಅವರು ಕನ್ನಡಿಗರ ಜೊತೆ ಸ್ನೇಹದಿಂದ ಬಾಳುವುದು ಸಾಧ್ಯವಿಲ್ಲದೆ ಹೋದರೆ ನಮ್ಮ ಔದಾರ್ಯಕ್ಕೆ ಅರ್ಥವೇನು?"

"ಪ್ರಾಂತ ರಚನೆಯಿಂದ ಎಲ್ಲಾ ಭಾಷಾ ಪ್ರದೇಶದ ಜನ ಸಮೃದ್ಧಿಯನ್ನು ಪಡೆದು ಅಖಂಡ ಭಾರತಕ್ಕೆ ಭವ್ಯವಾದ ಭವಿಷ್ಯವನ್ನು ಒದಗಿಸಲಿ ಎನ್ನುವ ಹಂಬಲದಿಂದ ರೂಪುಗೊಂಡ ಈ ಭಾಷಾವಾರು ಪ್ರಾಂತ್ಯಗಳು ಇಂಥ ಸ್ಥಿತಿಗೆ ಸಿಲುಕಬೇಕೇ?"

ಭಾಷೆ ಪಟ್ಟಭದ್ರರ ಕೈಗೆ ಸಿಕ್ಕಿ ಮಾರಕ ಅಸ್ತ್ರವಾಗಿ ಪರಿಣಮಿಸುತ್ತದೆ. ಅದೇ ಭಾಷೆ ಸಾಹಿತ್ಯ ಸೃಜನಶೀಲತೆಯಿಂದ ಮಾನವ ಮಾನವರನ್ನು ಒಂದುಗೂಡಿಸುವ ಭಾವಸೇತುವೆಯಾಗುತ್ತದೆ ಎನ್ನುವ ತಾಯಿಯವರು ಭಾಷೆಯನ್ನು ಕುರುಡು ಭಕ್ತಿಯಿಂದ ಎಂದೂ ನೋಡಲಿಲ್ಲ. ನಮ್ಮ ರಾಷ್ಟ್ರದ ಐಕ್ಯತೆ ಮುಖ್ಯ ಎನ್ನುವುದನ್ನು

ಅವರ ಜೀವನದಲ್ಲಿ ತೋರಿಸಿದರು. ಮರಾಠಿ ಭಾಷೆಯಲ್ಲಿಯೂ ಸಾಕಷ್ಟು ಕೃತಿಗಳನ್ನು ತಂದಿದ್ದಾರೆ. ತಾಯಿಯವರ ಮರಾಠಿ ಕೃತಿಗಳನ್ನು ಓದಿನೋಡಿದ ಮರಾಠಿ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ ಜೋಷಿಯವರು ಹೀಗೆಂದಿದ್ದಾರೆ: "ಅವರು ರಸಾತ್ಮಕವಾದ ಸುಮಧುರವಾದ ಒಂದು ಪ್ರತ್ಯೇಕ ಶೈಲಿಯನ್ನು ಮರಾಠಿಯಲ್ಲಿ ತಂದಿದ್ದಾರೆ. ಇದನ್ನು ನೋಡಿದರೆ ಕನ್ನಡದ ಬಗೆಗೆ ಆದರ ಬೆಳೆಸಬೇಕೆನಿಸುತ್ತದೆ. ಇದು ಬಹು ದೊಡ್ಡ ಸಾಧನೆ."

ನಾಡ ಏಕೀಕರಣ ಕಾಲದಲ್ಲಿ ಗಡಿನಾಡ ಜನರಿಗೆ, ಮುಖ್ಯವಾಗಿ ರಜಾಕಾರರ ಹಾವಳಿಗೆ ತುತ್ತಾದವರಿಗೆ, ರಕ್ಷಣೆಕೊಟ್ಟು ಧೈರ್ಯ ನೀಡಿದ ಸಂಗತಿಯನ್ನು ಹೈದರಾಬಾದಿನ ಜನ ಇಂದೂ ಸ್ಮರಿಸುತ್ತಾರೆ.

ಗಡಿಭಾಗವೆಂದರು । ಕಡಿಮಿಲ್ಲ ಕನ್ನಡಕೆ
ಉಡಿಯ ತುಂಬುವೆ ಕನ್ನಡ ತಾಯಿಗೆ
ಒಡವೆಯ ಇಡಿಸುವೆ ಪದಗಳ,

ಹೀಗೆ ಕನ್ನಡದ ಉಡಿಯ ತುಂಬಿದ ಜಯದೇವಿತಾಯಿ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಇತಿಹಾಸದಲ್ಲಿ ಅವಿಸ್ಮರಣೀಯರಾಗಿದ್ದಾರೆ.

" ಇಲಿಚ "—ಒಂದು ಟಿಪ್ಪಣಿ

ಚೆನ್ನಬಸವಣ್ಣನ ವಚನವೊಂದು ಹೀಗಿದೆ—

ಬೇಡವೋ ಇಲಿಚಯ್ಯ !
ಮೊನ್ನೆ ಬಂದು ನಮ್ಮ ಶಿವದಾರವ ಕಡಿದೆ.
ನೆನ್ನೆ ಬಂದು ನಮ್ಮ ಸೆಜ್ಜೆಯ ಕಡಿದೆ.
ಇಂದು ಬಂದು ನಮ್ಮ ವಸ್ತ್ರವ ಕಡಿದೆ.
ಬೇಡವೋ ಇಲಿಚಯ್ಯಾ !
ನಿನಗಂಜರು, ನಿನ್ನ ಗಣಪತಿಗಂಜರು ;
ಕೂಡಲ ಚೆನ್ನಸಂಗನ ಶರಣರು, ಕಂಡಡೆ
ನಿನ್ನ ಹಲ್ಲ ಕಳೆವರು, ದಂತವ ಮುರಿವರು.

ಚೆನ್ನಬಸವಣ್ಣ ಇಲ್ಲಿ ಇಲಿಯನ್ನು ಕುರಿತು ಸಂಬೋಧಿಸಿದ್ದರೂ ಅವನ ದೃಷ್ಟಿಯಲ್ಲಿ ತನಗೋ ಇತರರಿಗೋ ಕಿರಿಕಿರಿ ಉಂಟುಮಾಡಿ ಕಿರುಕುಳ ಕೊಡುತ್ತಿರುವ ಯಾವನೋ ವ್ಯಕ್ತಿ ಇದ್ದಾನೆ ಎಂಬುದು ತೀರ ಸ್ಪಷ್ಟ. ಈ ಮಾರ್ಮಿಕ ವಚನದಲ್ಲಿರುವ ವಿಡಂಬನೆಯು ಅಂತ್ಯದಲ್ಲಿ ಆ ಕಿರುಕುಳ ಕೊಡುತ್ತಿರುವ ವ್ಯಕ್ತಿಗೆ ಎಚ್ಚರಿಕೆಯೂ ಇದೆ. ಈ ಹರಿತ ವಿಡಂಬನೆಯ ವಚನದ ವಿಶ್ಲೇಷಣೆ ಪ್ರಸ್ತುತ ಟಿಪ್ಪಣಿಯ ಉದ್ದೇಶವಲ್ಲ. ಇಲ್ಲಿ ಬರುವ ' ಇಲಿಚಯ್ಯ ' ಪದದ ಸಮಸ್ಯೆಯನ್ನು ಪ್ರಸ್ತಾಪಿಸುವುದು, ಮತ್ತು ಆ ಪದ ಇಂದಿಗೂ ಬೀದರ್ ಜಿಲ್ಲೆಯಲ್ಲಿ ಜೀವಂತವಿರುವುದನ್ನು ಸೂಚಿಸುವುದು ಮುಖ್ಯ ಉದ್ದೇಶ.

' ಇಲಿಚಯ್ಯ ' ಪದವು ಇಲಿಚ + ಅಯ್ಯ ಎಂಬುದೇ ಆಗಿದೆ. ' ಅಯ್ಯ ' ಎಂಬ ವ್ಯಕ್ತಿನಾಮವಾಚಕವನ್ನು ಸೇರಿಸಲು ಚೆನ್ನಬಸವಣ್ಣನ ವಿಡಂಬನೆಗೆ ಗುರಿಯಾಗಿರುವ ವ್ಯಕ್ತಿ ಕಾರಣವೆಂಬುದು ಸ್ಪಷ್ಟವಾಗಿದೆ. ' ಇಲಿಚ ' ಎಂದರೆ ಇಲ್ಲಿ ' ಇಲಿ ' ಎಂದರ್ಥ. ಹಾಗಾದರೆ ಆ ಪದದ ಅಂತ್ಯದಲ್ಲಿರುವ ' -ಚ ' (ಅಥವಾ ' -ಇಚ ') ಪ್ರತ್ಯಯ ಯಾವುದು? ಕನ್ನಡದಲ್ಲಿ '-ಇಚ' ಎಂಬುದು "ಅಲ್ಲಿ ಹುಟ್ಟಿದವನು ಅಥವಾ ಬೆಳೆದವನು, ಅದರಲ್ಲಿ ವರ್ತಿಸುವವನು ಎಂಬ ಅರ್ಥದಲ್ಲಿ ಬರುವ ಒಂದು ತದ್ಧಿತ ಪ್ರತ್ಯಯ" ('ಕನ್ನಡ ನಿಘಂಟು', I, ಪು. 747). ಉದಾಹರಣೆಗೆ, ಪೊಬಲಿಚಂ (= ಪಟ್ಟಣದಲ್ಲಿ ಹುಟ್ಟಿದವನು ಅಥವಾ ವಾಸಿಸುವವನು), ಕಾಲುರಿಚಂ (= ಹಳ್ಳಿಯಲ್ಲಿ ಹುಟ್ಟಿದವನು),

ಅಲರಿಚಂ (=ಹೂವಿನಲ್ಲಿ ಹುಟ್ಟಿದವನು, ಬ್ರಹ್ಮ). 'ಇಲಿಚ'ದಲ್ಲಿ ಇಲ್ + ಇಚ ಎಂಬ ಎರಡು ಭಾಗಗಳಿವೆಯೆಂದೂ, ಅದರ ಅರ್ಥ ಮನೆಯಲ್ಲಿ ವಾಸಿಸುವುದು, ಇಲಿ ಎಂಬ ವಿವರಣೆ ಕೊಡಲು ಮನಸ್ಸಾಗುತ್ತದೆಯಾದರೂ, ದ್ರಾವಿಡ ಭಾಷೆಗಳ 'ಇಲಿ' ಪದದ ಜ್ಞಾತಿಪದಗಳು ಅಂತಹ ವಿವರಣೆಗೆ ಅವಕಾಶ ಕೊಡುವುದಿಲ್ಲ. ಆ ಜ್ಞಾತಿ ಪದಗಳು ಹೀಗಿವೆ—ತಮಿಳು, ಮಲಯಾಳಂ, ಕೊಡಗ 'ಎಲಿ'; ತುಳು 'ಇಲಿ' 'ಎಲಿ'; ತೆಲುಗು 'ಎಲಿಕ' 'ಎಲುಕ'; ಕೊಲಾಮಿ, ನಾಯ್ಕಿ 'ಎಲ್ಕ'; ಪರ್ಜಿ 'ಎಲ್'; ಗೊಂಡಿ 'ಅಲ್ಲೀ'; ಬ್ರಾಹೂಇ 'ಹಲ್'. ಮಧ್ಯ ದ್ರಾವಿಡ ಭಾಷೆಗಳ ಜ್ಞಾತಿಪದಗಳಲ್ಲಿ ಅಂತ್ಯ '-ಕ' ಇದ್ದರೂ ಅದೇ ತಾಲವ್ಯಗೊಂಡು '-ಚ' ಆಯಿತು ಎಂಬ ವಿವರಣೆ ಅವೈಜ್ಞಾನಿಕ. ಏಕೆಂದರೆ, ಪೂರ್ವಸ್ವರಗಳ ಹಿಂದಿನ ಕಕಾರವು ಮಾತ್ರ ತಾಲವ್ಯಗೊಳ್ಳುತ್ತದೆಯೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. (ಅಂತ್ಯ '-ಕ'ವು ದ್ರಾವಿಡ ಅಮಹತ್ ನಾಮಪದಗಳ ಬಹುವಚನ ಪ್ರತ್ಯಯ '-ಕಳ್' ಎಂಬುದರ ಸವೆದ ರೂಪವೆಂಬ ಊಹೆ ಇರುವಂತಿದೆ).*

ಇದರ ಸಾರಾಂಶವೆಂದರೆ, 'ಇಲಿಚ' ಪದದ ಅಂತ್ಯದ '-ಚ' (ಅಥವಾ '-ಇಚ') ಪ್ರತ್ಯಯದ ಸರಿಯಾದ ವಿವರಣೆ ಇನ್ನೂ ಅಜ್ಞಾತವಾಗಿಯೇ ಇದೆ.

ಬೀದರ್ ಜಿಲ್ಲೆಯ ಜಾನಪದ ಕತೆಗಳಲ್ಲಿ 'ಇಲಿ' ಶಬ್ದವು 'ಇಲ್ಚ' ಎಂಬ ರೂಪದಲ್ಲಿ ದೊರೆಯುವುದನ್ನು ಡಾ. ಸಂಗಮೇಶ ಸವದತ್ತಿಮಠ ಅವರು ಗುರುತಿಸಿದ್ದಾರೆ. ('ಜನಪದ ಭಾಷಾಸಮೀಕ್ಷೆ,' 1985, ಕಲಬುರ್ಗಿ, ಪು. 12). ವಚನಕಾರ ಚೆನ್ನಬಸವಣ್ಣ ಅದೇ ಜಿಲ್ಲೆಯ ಬಸವಕಲ್ಯಾಣದವನಾಗಿದ್ದು, ಆ ಪ್ರದೇಶದಲ್ಲಿ ಎಂಟುನೂರು ವರ್ಷಗಳ ಹಿಂದೆ ಬಳಕೆಯಲ್ಲಿದ್ದ, ಮತ್ತು ಇಂದಿಗೂ ಬಳಕೆಯಲ್ಲಿರುವ ಪದವನ್ನು ಪ್ರಯೋಗಿಸಿದ್ದಾನೆ ಎಂಬುದು ಗಮನಾರ್ಹವಾಗಿದೆ. ವಚನಗಳ ಭಾಷೆಯ ಬಗ್ಗೆ ಸಂಶೋಧನೆ ನಡಸುವವರು ಬಸವಕಲ್ಯಾಣ ಮತ್ತು ಪರಿಸರದ ಇಂದಿನ ಕನ್ನಡವನ್ನು ಎಚ್ಚರಿಕೆಯಿಂದ ಅಭ್ಯಸಿಸಿದರೆ ವಚನಕಾರರು ಬಳಸಿರುವ ಹಲವು ಅಪರೂಪದ ಪದಗಳು ಈಗಲೂ ಜೀವಂತವಾಗಿ ಜನರ ನಾಲಗೆಯ ಮೇಲೆ ಬದುಕಿರುವುದನ್ನು ಗುರುತಿಸಲು ಸಾಧ್ಯವಾಗುತ್ತದೆ (ಬೇರೆ ಕೆಲವು ಉದಾಹರಣೆಗಳು ಇದನ್ನು ಸಮರ್ಥಿಸುತ್ತವೆ.)

---

* ನೋಡಿ: S. V. Shanmugam: *Dravidian Nouns,* 1971, p. 138. ಗಿಳಿ, ಆನೆ ಎಂಬರ್ಥದ ತೆಲುಗಿನ 'ಚಿಲುಕ', 'ಏನುಗ' ಪದಗಳಲ್ಲೂ ಅಂತ್ಯದಲ್ಲಿ ಅದೇ '—ಕಳ್' ಪ್ರತ್ಯಯದ ಭಾಗವಿದೆ ಎಂದು ಭಾವಿಸಲಾಗಿದೆ. ಎಲಿ + ಕಳ್ → ಎಲುಕಲು: ಇಲ್ಲಿ 'ಲು' ಎಂಬುದು ಬಹುವಚನ ಪ್ರತ್ಯಯವೆಂದು ತಪ್ಪಾಗಿ ಭಾವಿಸಿದ್ದರಿಂದ 'ಎಲುಕ' ಏಕವಚನ ರೂಪ ಹುಟ್ಟಿಕೊಂಡಿತು. ಅದೇ ರೀತಿ ಏಕವಚನಾರ್ಥದ ಚಿಲುಕ ಏನುಗ ರೂಪಗಳೂ ಹುಟ್ಟಿಕೊಂಡಿವೆ.

'ಇಲಿ' ಎಂಬರ್ಥದಲ್ಲಿ ಕಲಬುರ್ಗಿ ಜಿಲ್ಲೆಯಲ್ಲಿ 'ಇಚಾಬತ್' ಪದ ಬಳಕೆಯಲ್ಲಿರುವುದನ್ನೂ ಡಾ. ಸಂಗಮೇಶ್ವರ ಸವದತ್ತಿಮಠ ದಾಖಲು ಮಾಡಿದ್ದಾರೆ (—ಅದೇ). 'ಇಲಿಚ (ಇಲ್ಚ)' ಪದಕ್ಕೂ 'ಇಚಾಬತ್' ಪದದ ಪೂರ್ವಾರ್ಧಕ್ಕೂ ಏನಾದರೂ ಸಂಬಂಧವಿದೆಯೋ ನೋಡಬೇಕು. ಅಂತ್ಯದ '-ಬತ್' ಭಾಗವು ಅರೇಬಿಕ್/ಪರ್ಷಿಯನ್ ಭಾಷೆಯಿಂದ ಬಂದಿರಬಹುದೇ ಎಂಬ ಸಂದೇಹವನ್ನೂ ಹುಟ್ಟಿಸುತ್ತದೆ. ಈ ಪುಟ್ಟ ಟಿಪ್ಪಣಿ ಎತ್ತುವ ಪ್ರಶ್ನೆಗಳಿಗೆ ಎಂದಾದರೂ ಉತ್ತರ ದೊರಕೀತೆಂದು ಆಶಿಸುತ್ತೇನೆ.

—ಡಾ. ಎಂ. ಚಿದಾನಂದಮೂರ್ತಿ

'ಆದಿಪುರಾಣ'ದ ಒಂದು ಕಂದಪದ್ಯ (೯-೧೦೨)

'ಆದಿಪುರಾಣ'ದ ನವಮಾಶ್ವಾಸದ ೧೦೨ನೆಯ ಪದ್ಯ ಎಸ್. ಜಿ. ನರಸಿಂಹಾಚಾರ್ಯರ ಪರಿಷ್ಕರಣದಲ್ಲಿ ಹೀಗೆ ಕಂಡುಬರುತ್ತದೆ:

ಕಾರಣಮಿಲ್ಲ ಜಗದ್ವ್ಯಾ
ಪಾರಂ ಪರಮಂಗೆ ನಿಮ್ಮ ಕಿತ್ತಮ್ಮಮಿದೇಂ
ದೂರಂ ಯುಕ್ತಾಯುಕ್ತವಿ
ಚಾರಂ ವಿಷಯಾರ್ಥಿಗೆಂಬುದಂ ಮಾಡುವಿರೇ ‖

ಈ ಪದ್ಯಕ್ಕೆ ಪಾಠಾಂತರಗಳೇನನ್ನೂ ಸೂಚಿಸಿಲ್ಲ. ಸಾಂಸಾರಿಕ ಬಂಧನಗಳನ್ನೆಲ್ಲ ಕಳಚಿಕೊಂಡು ತಪೋನಿಯೋಗದಲ್ಲಿದ್ದ ಆದಿನಾಥನಲ್ಲಿ ತಮ್ಮ ಪಾಲನ್ನು ನಮಿವಿನಮಿಗಳು ಬೇಡುವುದು ಉಚಿತವಲ್ಲವೆಂಬುದಾಗಿ ಅವರಿಗೆ ಧರಣೇಂದ್ರನು ತಿಳಿವಳಿಕೆ ಹೇಳುವ ಸಂದರ್ಭದಲ್ಲಿ ಈ ಪದ್ಯ ಕಾಣಿಸಿಕೊಂಡಿದೆ. "ಮಹನೀಯನಾದ ಆದಿನಾಥನಿಗೆ ಜಗದ ಜಂಜಡಕ್ಕೆ ಅವಕಾಶವಿಲ್ಲ. ನಿಮ್ಮ ಕಿತ್ತಮ್ಮ ಇದೇನು? ವಿಷಯಕಾಂಕ್ಷಿಗಳಿಗೆ ಯುಕ್ತಾಯುಕ್ತವಿಚಾರ ಸಾಧ್ಯವಿಲ್ಲವೆನ್ನುವುದನ್ನು ನಿಜ ಮಾಡುತ್ತಿರುವಿರಲ್ಲ" ಎಂಬುದು ಪದ್ಯದ ಸಾಮಾನ್ಯಾರ್ಥ. ಇಲ್ಲಿ ಎರಡನೆಯ ವಾಕ್ಯದಲ್ಲಿಯ 'ಕಿತ್ತಮ್ಮ' ಎಂಬ ಶಬ್ದದ ಅಭಿಪ್ರಾಯವೇನು?

ಕೆ. ಜಿ. ಕುಂದಣಗಾರರ ಪರಿಷ್ಕರಣದಲ್ಲಿ ಪದ್ಯಪಾಠ ಮೇಲಿನಂತೆಯೇ ಇದೆ. "ಕಿತ್ತಮ್ಮಮಿದೇಂ" ಎಂಬ ಮಾತಿಗೆ 'ಕೀರ್ತ್ತನಮಿಂದೇಂ', 'ಕಿತ್ತನೆವಮಿಂದೇಂ' ಎಂಬ ಪಾಠಭೇದಗಳನ್ನು ತೋರಿಸಿ, "ಕೀೞ್ತನದಲ್ಲಿ 'ೞ' ಕಾರಕ್ಕೆ ರೇಫಾದೇಶವಾಗಿ 'ಕೀರ್ತ್ತನ'ವಾದಂತೆ ತೋರುತ್ತದೆ. 'ೞ' ಕಾರಕ್ಕೆ ರೇಫಾದೇಶ ೧೨ನೆಯ ಶತಮಾನದಿಂದ ರೂಢವಾಗಿದೆ. ಉ ನೆಗಲ್ದು ನೆಗರ್ದ" ಎಂಬ ಟಿಪ್ಪಣಿಯೊಂದನ್ನು ಹೆಚ್ಚಿಗೆ ಸೇರಿಸಿದೆ. ಹೀಗೆ ಮಾಡಿರುವುದರಿಂದ, ಕೀಳುತನನೆಂಬ ಅರ್ಥಕೊಡುವ 'ಕೀರ್ತ್ತನ' ಇಲ್ಲಿ ಕವಿಪಾಠವಿದ್ದಿರಬೇಕು ಎಂದು ಅವರು ತಿಳಿದಂತಿದೆ. ಕಠಿನಶಬ್ದಗಳ ಕೋಶದಲ್ಲಿ

'ಕಿತ್ತವ್ಮಂ' ಶಬ್ದವನ್ನೇ ಒಪ್ಪಿ 'ಉಪಸರ್ಗ' ಎಂಬುದಾಗಿ ಸಾಂದರ್ಭಿಕವಾದ ಅರ್ಥವನ್ನು ಅವರು ಬರೆದಿದ್ದಾರೆ.

ಎಲ್. ಬಸವರಾಜು ಅವರ ಪರಿಷ್ಕರಣದಲ್ಲಿ 'ಕಿತ್ತವ್ಮಮಿದೇಂ' ಎಂಬ ಪಾಠವನ್ನು ಒಪ್ಪದೆ, 'ಕಿತ್ತನಿವಮಿದೇಂ' ಎಂಬ ಪ್ರತ್ಯಂತರದ (ಕಅಸಂ. ಕೆ.೭೬೪) ಪಾಠವನ್ನು ಅಂಗೀಕರಿಸಿರುವುದು ಕಾಣುತ್ತದೆ. ಈಗಾಗಲೇ ಗಮನಿಸಿರುವ 'ಕಿತ್ತವ್ಮಮಿದೇಂ' ಎಂಬುದರ ಜೊತೆಗೆ 'ಕಿತ್ತಮಿದಿವಮಿದೇಂ', 'ಕೀರ್ತಮಿದೇಂ' ಎಂಬ ಪಾಠಾಂತರಗಳನ್ನೂ ತೋರಿಸಿದ್ದಾರೆ. ಅಲ್ಲದೆ ಈ ಸಂಬಂಧದಲ್ಲಿ ಒಂದು ವಿಸ್ತಾರವಾದ ಟಿಪ್ಪಣಿಯನ್ನು ಬರೆದಿದ್ದಾರೆ. ಈ ಟಿಪ್ಪಣಿಯ ಕೊನೆಯ ಭಾಗವನ್ನು ಇಲ್ಲಿ ಉದ್ಧರಿಸಬಹುದಾಗಿದೆ. "........ಪಂಪನ ಪ್ರಯೋಗ ಸಂದರ್ಭವನ್ನು ಗಮನಿಸಿದರೆ 'ಕಿತ್ತನಿವಂ' ಎಂಬುದು (ಮೂಲಪಾಠವಾದಲ್ಲಿ) 'ವಿಷಯಲೋಲುಪತೆ' ಎಂಬ ಅರ್ಥವುಳ್ಳುದಾಗಬೇಕು. (ನ) (ದ್ವಿ) (ಕು)ಪ್ರತಿಗಳ 'ಕಿತ್ತವ್ಮಂ' ಎಂಬ ಪಾಠ ಸರಿಯೋ 'ಕಿತ್ತನಿವಂ' ಎಂಬ ಪಾಠ ಸರಿಯೋ ನಿರ್ಣಯಿಸಲಾಗುತ್ತಿಲ್ಲ–ಎರಡರ ಅರ್ಥವೂ ಗೊತ್ತಾಗುತ್ತಿಲ್ಲ. ಬಹಳ ಹಳೆಯದಾದ 'ಹ' ಪ್ರತಿಯ ಪಾಠವು ಪ್ರತಿಕಾರನ ಹಸ್ತಸ್ಖಾಲಿತ್ಯದಿಂದ 'ಕಿತ್ತಮಿದಿವಮಿದೇಂ' ಎಂದಿರುವುದಾದರೂ ಅದರ ಉದ್ದಿಷ್ಟ ಪಾಠ 'ಕಿತ್ತವಮಿದೇಂ' ಎಂದಿರಬಹುದಾದ ಸಾಧ್ಯತೆಯಿದೆ. ವಿಶ್ವಾಸಾರ್ಹವಾದ 'ಚಿ' ಪ್ರತಿಯಲ್ಲಂತೂ 'ಕಿತ್ತನಿವಮಿದೇಂ' ಎಂಬ ಪಾಠವೇ ಸ್ಪಷ್ಟವಾಗಿದೆ. ಸದ್ಯಕ್ಕೆ ಅರ್ಥೈಸಲಾಗದಿದ್ದರೂ ಅದೇ ಪಾಠವನ್ನು ಈ ಸಂಪಾದನೆಯಲ್ಲಿ ಸ್ವೀಕರಿಸಲಾಗಿದೆ."

ಇನ್ನು ಕಡೆಯದಾಗಿ, ಸಾಹಿತ್ಯ ಪರಿಷತ್ತಿನ ಪರಿಷ್ಕರಣದ ಪಾಠ. 'ಕಿತ್ತವ್ಮ್ಮಮಿದೇಂ' ('ವ್ಮ' 'ವ್ಮ್ಮ' ಎಂದಾಗಿರುವುದು ಬಹುಶಃ ಅಚ್ಚಿನ ತಪ್ಪು) ಎಂಬುದು ಸ್ವೀಕೃತವಾಗಿದೆ. 'ಕಿತ್ತನಿವಮಿದೇಂ' ಪಾಠಾಂತರವಾಗಿ ತೋರಿಸಿದೆ. "ಕಿತ್ತನಿಕೆಯೆಂಬುದೇ ಎಂದು ಶುದ್ಧಪಾಠವಿರಬಹುದೆ? ಕಿತ್ತ=ಕೀಳ್ಮಟ್ಟದ ಅನಿಕೆ=ಆಲೋಚನೆ" ಎಂದು ಸೂಚನೆಯನ್ನು ಸೇರಿಸಿದೆ. ಗದ್ಯಾನುವಾದ ಭಾಗದಲ್ಲಿ "ನಿಮ್ಮ ಪೀಡೆ (?) ಏನಿದು ?" ಎಂಬುದಾಗಿ ಅರ್ಥ ಬರೆದಿದೆ.

ಹೀಗೆ ಚರ್ಚೆಗೆ ಗುರಿಯಾಗಿರುವ ಈ ಪಾದಭಾಗದ ಪಾಠವನ್ನು ನಿಶ್ಚಿತಗೊಳಿಸಿ ಅರ್ಥವನ್ನು ಸೂಚಿಸುವುದು ಈ ಲೇಖನದ ಉದ್ದೇಶವಾಗಿದೆ.

'ಕಿತ್ತವ್ಮಂ' ಎಂಬುದು ಕಿಱಿದು+ಅವ್ಮಂ ಎಂಬುದಾಗಿ ವಿಭಾಗವಾಗಬಹುದಾದರೂ, ಅದೊಂದು ನಿರರ್ಥಕ ಪದವೇ ಸರಿ. ನಪ್ ವಾಚಕವಾಗಿ 'ಅವ್ಮಂ' ಎಂಬ ಶಬ್ದವಿಲ್ಲ. 'ಕೀೞ್ತನ' 'ಕೀರ್ತನ'ವಾಗಿರುವುದೆಂದು ಕಲ್ಪಿತರೂಪವೊಂದನ್ನು ಭಾವಿಸಿರುವುದೂ ತ್ಯಜಿಸಬೇಕಾದುದೇ. ಕೊಂಡಾಟ ಎಂಬ ಅರ್ಥವನ್ನು ಕೊಡುವ ಪ್ರಸಿದ್ಧವಾದ 'ಕೀರ್ತನ' ಶಬ್ದದೊಂದಿಗೆ ಐಕ್ಯವಾಗುವ ಇನ್ನೊಂದು 'ಕೀರ್ತನ'ವನ್ನು ಪಂಪ ಕಲ್ಪಿಸಿ, ಅರ್ಥಾಭಾಸಕ್ಕೆ ಎಡೆಮಾಡಿರಲಾರನು.

ಆದ್ದರಿಂದ ಇದೂ ತ್ಯಾಜ್ಯ. ಇನ್ನು 'ಕಿತ್ತನೆವಮಿದೇಂ' ಎಂಬ ಪ್ರಯೋಗವೂ ಶುದ್ಧವಲ್ಲ. ಉಳಿದ ಪಾಠಭೇದಗಳು ಅರ್ಥಛಂದಸ್ಸುಗಳ ದೃಷ್ಟಿಯಿಂದ ದೋಷ ಯುಕ್ತವಾದವು.

ಕ.ಅ.ಸ. ಯ ಕೆ. ೭೬ಳರ ಓಲೆಪ್ರತಿಯಲ್ಲಿದ್ದು, ಎಲ್. ಬಸವರಾಜು ಒಪ್ಪಿರುವ 'ಕಿತ್ತನಿವಮಿದೇಂ' ಎಂಬ ಪಾಠವೇ ದಿಟವಾಗಿ ಕವಿಪಾಠವೆಂದು ತಿಳಿಯ ಬೇಕು. ಅರ್ಥಕೋಶದಲ್ಲಿ ಕಿತ್ತನವ ('ನಿ' 'ನ' ಎಂದಾಗಿರುವುದು ಬಹುಶಃ ಅಚ್ಚಿನ ತಪ್ಪು) ಎಂದು ತೋರಿಸಿದ್ದರೂ, ಟಿಪ್ಪಣಿಯ ಪ್ರಕಾರ ಅವರಿಗೆ ಇದು 'ಸದ್ಯಕ್ಕೆ ಅರ್ಥೈಸಲಾಗದ' ಪಾಠ. ಈಗ ಮುನ್ನಡೆಯೋಣ.

'ಕಿತ್ತನಿವಂ' ಎಂಬ ಪದವನ್ನು ಕಿಱಿದು+ಅನಿವಂ ಎಂಬುದಾಗಿ ವಿಭಜಿಸ ಬೇಕು. ಇಲ್ಲಿ ಉತ್ತರಪದವಾಗಿ ಬಂದಿರುವ 'ಅನಿವಂ' ಶಬ್ದದ ಅರ್ಥವೇನೆಂದು ತಿಳಿದರೆ, ಅನಂತರ ಈ ಕರ್ಮಧಾರಯ ಸಮಾಸಪದದ ಅರ್ಥ ಸುಲಭವಾಗಿ ವಿಶದ ಪಡುತ್ತದೆ. 'ಅನಿವಂ' ಶಬ್ದ ನಿರ್ಬಂಧ, ಒತ್ತಾಯ, ಬಲಾತ್ಕಾರ ಎಂಬ ಮುಖ್ಯವಾದ ಅರ್ಥಚ್ಛಾಯೆಗಳಲ್ಲಿ ಪ್ರಾಚೀನ ಕಾವ್ಯಗಳಲ್ಲಿ ಬಳಕೆಯಾಗಿರುವುದು ಕಂಡುಬಂದಿದೆ. ಈ ಶಬ್ದದ ಪ್ರಯೋಗಗಳನ್ನು 'ಕರ್ಣಾಟಕ ಕಾದಂಬರಿ,' 'ಅರ್ಧ ನೇಮಿ ಪುರಾಣ', 'ವರ್ಧಮಾನ ಪುರಾಣ' (ಆಚಣ್ಣ) ಮೊದಲಾದ ಕಾವ್ಯಗಳಲ್ಲಿ ಕಾಣಬಹುದಾಗಿದೆ (ನೋಡಿ: 'ಕನ್ನಡ ನಿಘಂಟು', ಸಂ. ೧, ಪು. ೨೩೯). 'ಆದಿ ಪುರಾಣ'ದಲ್ಲಿಯೇ "ಅನಿವಂಗೆಯ್ದುಱಿಯೆಂಬ ತಾಯ ನುಡಿಯಂ ಕೈಕೊಂಡನೇ...." ಎಂಬ ಪ್ರಯೋಗವಿರುವುದನ್ನು (೧೨-೧೬) ನೆನೆಯಬಹುದು. ಅಷ್ಟೇಕೆ? 'ಕಿತ್ತನಿವಂ' ಶಬ್ದವಿರುವ ಪದ್ಯವನ್ನು ದಾಟಿ ಸ್ವಲ್ಪ ಮುನ್ನಡೆಯುತ್ತಿರುವಂತೆಯೇ "ಅನುವಿಸುವ ನಿಮ್ಮ ಮುದುಗಣ್ತನದೊಳಿದೇಂ" ಎಂಬ (೯-೧೦೬) ವಾಕ್ಯ ಭಾಗದಲ್ಲಿ ಬರುವ 'ಅನುವಿಸು' ಶಬ್ದ, 'ಅನಿವ' ಶಬ್ದದ ಇಸು ಪ್ರತ್ಯಯ ಹತ್ತಿದ 'ಅನಿವಿಸು'ವಿನ ಇನ್ನೊಂದು ರೂಪವೇ ಆಗಿದೆ. 'ಅನುವಿಸು' ಎಂಬುದರ ಪ್ರಯೋಗಗಳಿಗೂ (ನೋಡಿ: 'ಕನ್ನಡ ನಿಘಂಟು', ಸಂ. ೧, ಪು. ೨೩೯) ಮೇಲೆ ಹೇಳಿದ ಅರ್ಥಚ್ಛಾಯೆಗಳೇ ಇವೆ. 'ಅನಿವಂಗೆಯ್' ಶಬ್ದಕ್ಕೆ ಈ ಅರ್ಥ ಚ್ಛಾಯೆಗಳೇ ಅಲ್ಲದೆ ಆಕ್ಷೇಪಿಸು, ವಿರೋಧವಾಗಿ ನುಡಿ ಎಂಬರ್ಥಗಳೂ ಉಂಟು ('ಜೀವಸಂಬೋಧನೆ', ೧೯೫-೨೭ ವ.).

ಈ ಅಂಶಗಳನ್ನು ಗಮನಿಸಿದಾಗ, 'ಕಿತ್ತನಿವಂ' ಶಬ್ದಕ್ಕೆ ಸಣ್ಣದಾದ, ಕ್ಷುದ್ರವಾದ ನಿರ್ಬಂಧ, ಒತ್ತಾಯ, ಬಲಾತ್ಕಾರ, ಆಕ್ಷೇಪ ಎಂದು ಅಭಿಪ್ರಾಯ ವಾಗುವುದು. ತಾತ್ಪರ್ಯದಿಂದ ಕಿರುಕುಳ, ಕಾಟ, ಪೀಡೆ, ಹಠ ಎಂದು ತಿಳಿಯ ಬಹುದು. ಸಮಾಸಕಾರ್ಯಗಳನ್ನು ಹೇಳುವಾಗ ಕೇಶಿರಾಜ ಕೊಟ್ಟಿರುವ 'ಕಿತ್ತನಿವಂ' ಶಬ್ದ (ಸೂ. ೧೯೨) ಪಂಪನ 'ಆದಿಪುರಾಣ'ದೊಳಗಿನ ಇದೇ ಶಬ್ದ ವಾಗಿರುವುದೇ ಅಲ್ಲದೆ, ಕೇಶಿರಾಜ 'ಆದಿಪುರಾಣ'ದಿಂದಲೇ ಅದನ್ನು ಎತ್ತಿಕೊಂಡಿರು

ವುದು ಬಹುಮಟ್ಟಿಗೆ ಸಂಭಾವ್ಯವಾದ್ದು. "ಕಿಱಿದರ್ಕೆ ಕುಱಿಂಬೆಡೆಯಲ್ಲಿ ತಕಾರಂ" ಎಂದು ಹೇಳಿರುವುದರಿಂದ ಈ ಶಬ್ದವನ್ನು ಕಿಱಿದು+ಅನಿವಂ ಎಂದೇ ವಿಭಜಿಸ ಬೇಕೆನ್ನುವುದೂ ವಿದಿತ. 'ಕಿತ್ತನಿವಂ' ಎಂಬುದಕ್ಕೆ 'ಕಿರಿಯು' ಎಂಬ ಕನ್ನಡ ಟಿಪ್ಪಣಿಯ ಅರ್ಥ ತಪ್ಪು.

ಈ ವಿವೇಚನೆಗೆ ಅನುಸಾರವಾಗಿ ಪದ್ಯ ಪಾಠ ಮತ್ತು ಅರ್ಥ ಹೀಗೆ:

ಕಾರಣಮಿಲ್ಲ ಜಗದ್ವ್ಯಾ
ಪಾರಂ ಪರಮಂಗೆ ನಿಮ್ಮ ಕಿತ್ತನಿವಮಿದೇಂ
ದೂರಂ ಯುಕ್ತಾಯುಕ್ತ ವಿ
ಚಾರಂ ವಿಷಯಾರ್ಥಿಗೆಂಬುದಂ ಮಾಡುವಿರೇ ॥

"ಮಹನೀಯನಾದ ಆದಿನಾಥನಿಗೆ ಜಗದ ಜಂಜಡಕ್ಕೆ ಅವಕಾಶವಿಲ್ಲ. ನಿಮ್ಮ ಕಿರುಕುಳ (ಕಾಟ, ಪೀಡೆ) ಇದೇನು? (ನಿಮ್ಮ ಹಠ ಇದೇನು?) ವಿಷಯಕಾಂಕ್ಷಿಗಳಿಗೆ ಯುಕ್ತಾಯುಕ್ತ ವಿಚಾರ ಸಾಧ್ಯವಿಲ್ಲವೆನ್ನುವುದನ್ನು ನಿಜಮಾಡುತ್ತಿರುವಿರಲ್ಲ."

—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ

ಕೆ.ಸಂ. ೨೭೫೪—ಎಂಯುಪಿಎಂ—೭೨೫ ಪ್ರತಿಗಳು—೨೫-೯-೮೭